# ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವ ವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿ ರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸ ಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗ ಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪ ವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪು ಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀ ಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು

ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆ ಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠವು ತನ್ನ ಸ್ಥಾಪನೆಯ ಆರಂಭದಿಂದಲೂ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳನ್ನು, ಸಾಹಿತ್ಯ, ಆಚಾರ-ವಿಚಾರಗಳನ್ನು ಕುರಿತು ವಿಸ್ತೃತವಾಗಿ ಅಧ್ಯಯನಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ವಾಲ್ಮೀಕಿ ಅಧ್ಯಯನ ಪೀಠದ ಮುಖಾಂತರ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುವುದರ ಮೂಲಕ ವಾಲ್ಮೀಕಿ ಹಾಗೂ ಇನ್ನಿತರ ತಳ ಸಮುದಾಯಗಳ ಅಧ್ಯಯನವನ್ನು ಮಾಡಲಾಗಿದೆ. ಪ್ರಸ್ತುತ ಕೃತಿಯ ಮುಖಾಂತರ ಡಾ. ಮಂಜುನಾಥ ಬೇವಿನಕಟ್ಟಿ ಅವರು ಬೇಡ ಸಮುದಾಯದ ಅನನ್ಯತೆ, ಹೋರಾಟ ಹಾಗೂ ಪ್ರಸ್ತುತ ಸಂದರ್ಭದಲ್ಲಿ ತಳಸಮುದಾಯಗಳ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ೪೭ ಲೇಖನಗಳನ್ನು ಒಳಗೊಂಡಿರುವ ಪ್ರಸ್ತುತ ಗ್ರಂಥ ಹಲಗಲಿ ಬಂಡಾಯ ವನ್ನು ಕುರಿತಂತೆ ಹಾಗೂ ಬಾಗಲಕೋಟೆಯ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿ ಗಳನ್ನು ಕುರಿತಂತೆ ವಿವರವಾಗಿ ತಿಳಿಸಿಕೊಟ್ಟಿದೆ. ಅಲ್ಲದೆ ಬಾಗಲಕೋಟೆ ಪರಿಸರದ ಬೇಡ ಸಮುದಾಯಕ್ಕೆ ಸಂಬಂಧಿಸಿದ ವಿಧಿ-ವಿಧಾನಗಳನ್ನು, ದೈವ ನಂಬಿಕೆಗಳನ್ನು, ಜಾತ್ರೆ ಉತ್ಸವ ಗಳನ್ನು ಪರಿಚಯಿಸಿದೆ. ವಿಶೇಷವಾಗಿ ಬೇಡ ಸಮುದಾಯದ ಪ್ರತೀಕವಾಗಿ ಸಿಂಧೂರ ಲಕ್ಷ್ಮಣನನ್ನು ಕುರಿತ ಸಾಹಿತ್ಯ ಮೂಲವಾದ, ಮೌಖಿಕ ಪರಂಪರೆಯಿಂದ ಬಂದಿರುವ ಹಾಗೂ ಜಾನಪದ ಆಕರಗಳ ಮುಖಾಂತರ ಅವನ ವ್ಯಕ್ತಿತ್ವವನ್ನು ಕಟ್ಟಿಕೊಡುವ ನೆಲೆಯಲ್ಲಿ ಪ್ರಸ್ತುತ ವಿಚಾರಸಂಕಿರಣದಲ್ಲಿ ಮಂಡಿಸಿದ ಲೇಖನಗಳನ್ನು ಇದು ಒಳಗೊಂಡಿದೆ. ಈ ಕೃತಿಯಲ್ಲಿ ಹಲಗಲಿ ಬಂಡಾಯವನ್ನು ಕುರಿತಂತೆ ಮಾಹಿತಿಯನ್ನು ನೀಡಲಾಗಿದೆ. ಸಿಂಧೂರ ಲಕ್ಷ್ಮಣನೇ ಇರಲಿ ಹಲಗಲಿ ಬಂಡಾಯದ ಸದಸ್ಯರೇ ಇರಲಿ ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಅಂದಿನ ಪರಿಸ್ಥಿತಿಗೆ ಪ್ರತಿರೋಧವನ್ನು ಒಡ್ಡಿದವರು. ಆಳರಸರ ಅವಕೃಪೆಗೆ ಪಾತ್ರರಾದವರು. ಹೀಗಾಗಿ ಅವರ ಎಲ್ಲ ಪ್ರತಿರೋಧಕ ಪ್ರಕ್ರಿಯೆಗಳನ್ನು ಆಡಳಿತ ನಕಾರವಾಗಿ ಗಮನಿಸುತ್ತದೆ. ಅಲ್ಲದೆ ಇವರೆಲ್ಲರನ್ನು ಸಮುದಾಯ ಘಾತಕರೆಂದು ಪರಿಗಣಿಸುವುದು ಸಹಜ. ಆದರೆ ದೇಶೀಯತೆಯ ಬಗ್ಗೆ, ದೇಶದ ಸ್ವಾತಂತ್ರ್ಯದ ಬಗ್ಗೆ ಕಾಳಜಿ ಇರುವಾಗ ಈ ಎಲ್ಲ ಕೃತ್ಯಗಳು ಸಕಾರಾತ್ಮಕವಾಗುತ್ತವೆ ಹಾಗೂ ಇವರನ್ನು ಸಮುದಾಯ ಚಿಂತಕರೆಂದು ಪರಿಗಣಿಸಬೇಕಾಗುತ್ತದೆ. ಈ ಸಮ್ಮೇಳನ ಇಂತಹ ವಾಸ್ತವತೆಯನ್ನು ಬಿಚ್ಚಿಡುವಲ್ಲಿ ಅತ್ಯಂತ ಸಹಕಾರಿಯಾಗುತ್ತದೆಂದು ಭಾವಿಸಿದ್ದೇನೆ. ವಾಲ್ಮೀಕಿ ಅಧ್ಯಯನ ಪೀಠ ಮುಂದಿನ ದಿನಗಳಲ್ಲಿ ತಳ ಸಮುದಾಯಗಳ್ನು ಕುರಿತಂತೆ ಇನ್ನಷ್ಟು ಅಧ್ಯಯನವನ್ನು ನಡೆಸುತ್ತದೆ ಎಂಬ ಭರವಸೆಯೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಹಾಗೂ ವಾಲ್ಮೀಕಿ ಪೀಠದ ಸಂಚಾಲಕರೂ ಆಗಿದ್ದ ಡಾ. ಮಂಜುನಾಥ ಬೇವಿನಕಟ್ಟಿ ಅವರು ತುಂಬ ಪರಿಶ್ರಮದಿಂದ ಈ ಲೇಖನಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳು.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಅವರಿಗೆ ಅಭಿನಂದನೆಗಳು.

**ಡಾ. ಎ. ಮುರಿಗೆಪ್ಪ**
ಕುಲಪತಿ

# ಸಮಾರೋಪ ಭಾಷಣ

ಕಪ್ಪರ ಪಡಿಯವ್ವ, ದಿಗಂಬರೇಶ್ವರನ ನೆನೆಯುತ್ತಾ ನಾನು ಈ ಸಮಾರೋಪ ಭಾಷಣವನ್ನು ಮಾಡುತ್ತಿದ್ದೇನೆ. ಇಲ್ಲಿಯವರೆಗೂ ದಿವ್ಯ ಸಾನಿಧ್ಯವನ್ನು ವಹಿಸಿದ್ದ ಪೂಜ್ಯ ಶೇಷಪ್ಪಯ್ಯ ಸ್ವಾಮಿಗಳು ಉತ್ಸವಮೂರ್ತಿಗಳಾಗದೇ ನಮ್ಮೆಗೆಲ್ಲರಿಗೂ ಉತ್ಸಾಹ ಮೂರ್ತಿ ಗಳಾಗಿದ್ದಾರೆ. ಈ ೩ ದಿನಗಳ ಕಾಲ ನಮ್ಮ ಬೆನ್ನಹಿಂದೆ ನಿಂತು ಕಾರ್ಯಕ್ರಮ ನೆರವೇರಲಿಕ್ಕೆ ಸಹಾಯಕರಾಗಿದ್ದಾರೆ. ಅವರನ್ನು ನಾನು ಇಲ್ಲಿ ತುಂಬ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಹಾಗೆ ಈ ಸಮಾರೋಪ ಗೋಷ್ಠಿಯ ಹಿರಿಯ ವಿದ್ವಾಂಸರಾದ ಡಾ.ಶ್ರೀರಾಮ ಇಟ್ಟಣ್ಣವರಿಗೆ ಹಾಗೂ ಇಲ್ಲಿ ನೆರೆದಿರುವ ಸಮಸ್ತ ನಾಗರೀಕರಿಗೆ ನಮಸ್ಕಾರಗಳು.

ನಾನು ಮೊದಲು ಒಂದು ಮಾತು ಹೇಳುವೆ. ಹಲಗಲಿ ಬಂಡಾಯ ಆಗಲಿಕ್ಕೆ ಹೇಗೆ ಪೂಜಾರಿ ಹನುಮ, ಜಡಗ, ಭೀಮ, ರಾಮ ಕಾರಣರೋ ಈ ಬೌದ್ದಿಕ ಬಂಡಾಯ ನಾಗರಾಳದಲ್ಲಿ ಆಗಲಿಕ್ಕೆ ಪೂಜಾರಿ ಹನುಮ ಜಡಗರ ರೂಪದಲ್ಲಿ ಕಂಠಿ ಹನುಮಂತರಾಯ, ವೀರೇಂದ್ರ ಶೀಲವಂತರು, ಶಿವಾನಂದ ಶೆಲ್ಲಿಕೇರಿಯವರು, ರಾಮಭೀಮನ ರೂಪದಲ್ಲಿ  ಸುರೇಂದ್ರನಾಯ್ಕ ಮತ್ತು ಜಾನಮಟ್ಟಿ ಗುರುಗಳು ಬಂದಿದ್ದಾರೆ. ಇದು ಅತಿಶಯೋಕ್ತಿ ಅನಿಸಬಹುದು. ಈ ತರಹ ಬೃಹತ್‌ಕಾರ್ಯಕ್ರಮ ನಡೆಯಬೇಕಾದರೆ ಸುಸಂಸ್ಕೃತ, ಇಚ್ಛಾಶಕ್ತಿ ಯುಳ್ಳತಕ್ಕಂತ ಜನಗಳು ಹಿಂದಿದ್ದಾಗ ಮಾತ್ರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅವರು ನಿನ್ನೆಯಿಂದ ಹೇಳುತ್ತಿದ್ದಾರೆ. ಇಂತ ಒಂದು ಹಳ್ಳಿಯಲ್ಲಿ ನೀವು ಅಷ್ಟುದೂರದಿಂದ ಖರ್ಚು ಮಾಡಿಕೊಂಡು ಬಂದಿದ್ದೀರಿ ನಿಮಗೆ ಎಷ್ಟು ತ್ರಾಸು ಆಯಿತೇನೋ ದಯವಿಟ್ಟು ನಮ್ಮನ್ನು ಕ್ಷಮಿಸಿ ಅಂತ. ಆದರೆ ನಾನು ಹೇಳತೀನಿ ನಿಮ್ಮ ನಿರ್ಮಲವಾದ ಪ್ರೀತೀನೇ ಸಾಕು ಎಂದು. ನಿರೀಕ್ಷೆಗೂ ಮೀರಿ ನೀವು ನಮಗೆ ಪ್ರೀತಿಯನ್ನು ಕೊಟ್ಟಿದ್ದೀರಿ, ಹೀಗಾಗಿ ನನ್ನ ಇಡೀ ವಿಶ್ವ ವಿದ್ಯಾಲಯದ ಕುಟುಂಬದ ಪರವಾಗಿ ನಿಮಗೆ ನನ್ನ ವಂದನೆಗಳು.

ಈ ೩ ದಿನದ ಕಾಲದಲ್ಲಿ ನಡೆದ ಚರ್ಚೆಯನ್ನು ಒಂದು ಸಣ್ಣ ಪ್ರೇಮ್‌ವರ್ಕನಲ್ಲಿ ಹಾಕಲು ಪ್ರಯತ್ನಿಸುತ್ತೇನೆ. ಸಿಂಧೂರ ಲಕ್ಷ್ಮಣನ ಹಿಂದಿರುವ ಹೋರಾಟವೆಂದರೆ ಹಸಿವು ಹಾಗೂ ಅವಮಾನ. ಇವು ಒಬ್ಬ ಮನುಷ್ಯನನ್ನು ಏನೆಲ್ಲಾ ಮಾಡಿಸಬಹುದು. ಹಾಗಾಗಿ ನಾವು ಯಾವುದನ್ನು ಹಲಗಲಿ ಬಂಡಾಯ, ಸಿಂಧೂರ ಲಕ್ಷ್ಮಣನ ಹೋರಾಟವೆಂದು ಕರಿತೇವೋ ಈ ಎರಡೂ ಸಂಗತಿಗಳು ಮೂರು ದಿನಗಳಲ್ಲಿ ಬಹಳ ಗುಣಾತ್ಮಕ ಚರ್ಚೆಗಳಾಗಿ ಈ ವೇದಿಕೆ ಮೇಲೆ ನಡೆದವು. ಈ ಚರ್ಚೆಯಲ್ಲಿ ಇಲ್ಲಿನ ಸುತ್ತಲಿನ ಪ್ರಜ್ಞಾವಂತ ಹಳ್ಳಿ ಜನರು ಭಾಗವಹಿಸಿದರು. ಅಂದರೆ ನಿನ್ನೆ ಪ್ರಬಂಧ ಮಂಡಿಸುತ್ತಿರುವಾಗ ಎಷ್ಟೋ ಜನ ವಿದ್ವಾಂಸರ ತಪ್ಪು  ಕಂಡುಹಿಡಿದರು. ಪ್ರಶ್ನೆ ಕೇಳಿದರು. ಅಂದರೆ ಇಂತಹ ಒಂದು ಹಿಂದುಳಿದ ಹಳ್ಳಿಯಲ್ಲಿಯೂ ಪ್ರಜ್ಞಾವಂತ ಜನ ಇದ್ದಾರೆ ಎಂದು ಗೊತ್ತಾಯಿತು. ನಾವು ಹೇಳಬಹುದು ಅಕ್ಷರಸ್ಥರು ಅನಕ್ಷರಸ್ಥರು ಎಂದು. ಈ ವಿಂಗಡಣೆ ಇದೆಯೆಲ್ಲ ಬಹಳ ಭಯಾನಕವಾದ ವಿಂಗಡಣೆ. ಈ ಮಠದ ಆವರಣದೊಳಗೆ ಇಂದು ಇದ್ದೀವಿ. ಈಮಠದ ಅಧಿಕಾರಿಗಳು ಯಾವುದೇ ವಿಶ್ವವಿದ್ಯಾಲಯದಲ್ಲಿ ಪ್ರಸಸ್ತಿಪಡೆದುಕೊಂಡು ಬಂದವರಲ್ಲ. ನಮ್ಮಲ್ಲಿ ಅನಕ್ಷ ರಸ್ಥರಿದ್ದರು ಆದರೆ ಅಜ್ಞಾನಿಗಳಲ್ಲ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕು. ಒಂದು ವೇಳೆ ಅವರು ಅಜ್ಞಾನಿಗಳಾಗಿದ್ದರೆ ಇವತ್ತು ಯಾವುದನ್ನು ಜನಪದ ಸಾಹಿತ್ಯ, ವಚನ ಸಾಹಿತ್ಯ ಅಂತ ಕರಿತೇವೋ ಅವು ಯಾವುವು ಹುಟ್ಟಿ ಬರಲಿಕ್ಕೆ ಸಾಧ್ಯವಿರುತ್ತಿರಲಿಲ್ಲ. ಹೀಗಾಗಿ ನಾವು ಒಂದು ಚೌಕಟ್ಟಿನೊಳಗೆ ಒಂದು ಸಾಹಿತ್ಯವನ್ನಾಗಲಿ ಒಂದು ಸಮುದಾಯವನ್ನಾಗಲಿ, ಸಂಸ್ಕೃತಿಯನ್ನಾಗಲಿ ನೋಡಿದಾಗ ಅದಕ್ಕೆ ಬಹಳಷ್ಟು ಮಿತಿಗಳು ಪ್ರಾಪ್ತವಾಗುತ್ತವೆ. ನಾವು ಯಾವ ಸಮುದಾಯವನ್ನು ನೋಡಲಿಕ್ಕೆ ಹೋಗುತ್ತೇವೆಯೋ ಅದರ ವಿವಿಧ ಮುಖಗಳನ್ನು ಬಿಟ್ಟುಹೋಗಿ ಅದರ ಪರಿಷ್ಕೃತ ಮುಖ ಪ್ರಾಪ್ತಿಯಾಗುತ್ತದೆ. ಹೀಗಾಗಿ ಕನ್ನಡ ವಿಶ್ವ ವಿದ್ಯಾಲಯದ ಒಂದು ಮುಖ್ಯ ಉದ್ದೇಶವೇನೆಂದರೆ ಅದು ಯಾವುದೇ ಚೌಕಟ್ಟಿನ ಆವರಣ ದಲ್ಲಿ ಕೆಲಸ ಮಾಡದೆ ಜನರ ಜೊತೆ ವಿಭಿನ್ನವಾಗಿ ಬೆರೆಯುತ್ತಾ ಅವರ ಸಮಸ್ಯೆಗಳತ್ತ ಗಮನ ಹರಿಸುತ್ತಾ ಬಂದು ಅವರೊಡನೆ ಪ್ರೀತಿಯಿಂದ ಮಾತನಾಡುತ್ತದೆ. ಹೀಗಾಗಿ ಈ ೩ ದಿನದ ವೇದಿಕೆ ಆ ಕೆಲಸ ಮಾಡಿದೆ ಎಂದು ನಾನು ಪ್ರತ್ಯಕ್ಷ ಸಾಕ್ಷಿಯಾಗಿ ಹೇಳುತ್ತೇನೆ.

ಸಾಮಾನ್ಯವಾಗಿ ೧೯ನೇ ಶತಮಾನದಲ್ಲಿ ಯುರೋಪಿಯನ್ ಅಧ್ಯಯನದ ಮಾದರಿಗಳು ಹುಟ್ಟಿಕೊಂಡ ಮೇಲೆ ಈ ಅಧ್ಯಯನಗಳನ್ನು ನಿರ್ದಿಷ್ಟ ಕೇಂದ್ರಕ್ಕೆ ಅಳವಡಿಸಿದ್ದು ಕಾಣುತ್ತದೆ. ಕೇಂದ್ರೀಯ ಪರಿಧಿಯ ಯಾವುದೋ ಒಂದು ಹಂತಕ್ಕೆ ಅಧ್ಯಯನವನ್ನು ಅಳವಡಿಸು ವಂತದ್ದು. ಉದಾ. ನಾವು ಇತಿಹಾಸವನ್ನು ಪುನರ್‌ಸೃಷ್ಠಿ ಮಾಡಿಕೊಂಡಿದ್ದೀವಿ, ಆದರೆ ಅದು ರಾಜ ರೀತಿಯ ಇತಿಹಾಸ. ಜನ ರೀತಿಯ ಇತಿಹಾಸವಲ್ಲ. ಅಂದರೆ ಹಲಗಲಿ ಬಂಡಾಯ ದೊಳಗೆ ೩೦೦ಜನರು ಸುಟ್ಟರು. ಅಂದರೆ ಈ ಹಳ್ಳಿಯೊಳಗೆ ಇನ್ನೆಷ್ಟು ಜನ ಇದ್ದರು ಎನ್ನುವಂತದ್ದು. ಇಡೀ ಚರಿತ್ರೆ ಏನು ಮಾಡುತ್ತದೆಂದರೆ ಕಾಲ ಮತ್ತು ಸ್ಥಳಕ್ಕೆ ಬಾಳ ಬೆಲೆಕೊಡುತ್ತದೆ. ಅಂದರೆ ನಮ್ಮ ಸಂಸ್ಕೃತಿ, ಕಾಲ ಮತ್ತು ಸ್ಥಳವನ್ನು ಅಖಂಡವಾಗಿ ಗ್ರಹಿಸು ತ್ತದೆ. ಹೀಗಾಗಿ ಒಂದೇ ಮನೆಯಲ್ಲಿ ಭೂತವನ್ನು ಪ್ರತಿನಿಧಿಸುವ ಮುತ್ಯಾ, ಭವಿಷ್ಯವನ್ನು ಪ್ರತಿನಿಧಿಸುವ ತಂದೆ, ವರ್ತಮಾನವನ್ನು ಪ್ರತಿನಿಧಿಸುವ ಮಕ್ಕಳು. ಭೂತ, ಭವಿಷ್ಯ ಮತ್ತು ವರ್ತಮಾನವನ್ನು ಭಾರತೀಯರು ಅಖಂಡವಾಗಿ ಗ್ರಹಿಸಿ ಬದುಕುತ್ತಿರುವಂತ ಸಂಸ್ಕೃತಿ ನಮ್ಮದಾಗಿದೆ. ಬಿಡಿಬಿಡಿಯಾಗಿ ಬದುಕುವಂತ ನೋಡುವಂತ ಸಂಸ್ಕೃತಿ ನಮ್ಮದಲ್ಲ. ನಾವು ಆವರ್ತನ ಶೀಲತೆಯಲ್ಲಿ ಬದುಕನ್ನು ಕಟ್ಟಿಕೊಂಡು ಬಂದಂತವರು. ಬದುಕನ್ನು ಅನುಭವಿಸಿ ದವರು. ನಮಗೆ ಯಾವುದು ಬೇಕು ಯಾವುದು ಬೇಡ ಎನ್ನುವ ವಿವೇಚನೆ ಅಗತ್ಯವಾಗಿದೆ.

ತಳಸಮುದಾಯಗಳು ಮತ್ತು ಆಧುನಿಕತೆ ಎನ್ನುವಲ್ಲಿ ಬಹಳ ಪ್ರಬುದ್ಧಚರ್ಚೆಗಳಾದವು. ನಮ್ಮ ಸ್ಥಳೀಯರು ಇಲ್ಲಿಕೂಡ ಎಂ.ಎ. ಮಾಡಿದವರು ಇದ್ದಾರೆಂದು ಗೊತ್ತಾಗಿದ್ದು ನನಗಂತು ಬಹಳ ಖುಷಿ ಆಯಿತು.ಇಂದು ಬ್ರಿಟೀಷ್ ದಾಖಲೆಗಳಂತ ಏನು ಕರಿತೀವಿ ಅವು ಪ್ರಭುತ್ವದ ಪರವಾಗಿರುತ್ತವೆ. ಯಾಕೆಂದರೆ ಯಾವುದೇ ನೇಮಕಾತಿಗಳು ಪ್ರಭುತ್ವದ ಪರವಾಗಿ ನೇಮಕವಾಗಿರುತ್ತವೆ. ಸಿಂಧೂರ ಲಕ್ಷ್ಮಣ, ಸಂಗೊಳ್ಳಿರಾಯಣ್ಣ, ಹಲಗಲಿ ಬಂಡಾಯದ ಬಗ್ಗೆ ಬಂದಿರುವ ಮಾಹಿತಿಗಳು ಇವೆಲ್ಲ ಬ್ರಿಟೀಷ್ ಚರಿತ್ರೆಯ ಅಂಕಿ ಅಂಶಗಳ ಮೂಲಕ ಚರಿತ್ರೆಯನ್ನು ಕಟ್ಟಿಕೊಡುತ್ತವೆ.

ಸಮುದಾಯಗಳ ಅಧ್ಯಯನದಿಂದ ಹೊಸರೀತಿಯ ಅಧ್ಯಯನ ಸಾಧ್ಯ ಎಂದು ನನ್ನ ಭಾವನೆ. ನಾವೆಲ್ಲ ಗಮನಿಸಬೇಕು. ಹಲಗಲಿ ಬೇಡರ ಬಗ್ಗೆ ಲಕ್ಷ್ಮಣನ ಬಗ್ಗೆ ಬಂದ ಬರಹಗಳೆಲ್ಲ ಏನಿದ್ದಾವೋ ಅವು ಅವರನ್ನು ಸುಳ್ಳರು, ಕಳ್ಳರು, ಕೊಲೆಗಡುಕರು ಎಂದು ಅರ್ಥೈಸುತ್ತವೆ. ನಮ್ಮನ್ನು ನಾವು ಇಂದು ಆತ್ಮವಿಮರ್ಶೆ ಮಾಡಿಕೋಬೇಕು. ಯಾಕೆ ಪ್ರತಿಭಟನೆಗಳು ನಡೆದವು ಯಾತಕ್ಕೋಸ್ಕರ ಬೇಡರು ಇಂಗ್ಲೀಷ್ ಸರಕಾರದ ಮೇಲೆ ಹರಿಬಿದ್ದರು. ಯಾತಕ್ಕೋಸ್ಕರ ಅವರ ರುಂಡಗಳನ್ನು ಚಂಡಾಡಿದರು. ಆರಂಭದಲ್ಲಿ ಹೇಳುತ್ತಿದ್ದೆ, ಮರಾಠ ಸಂಸ್ಥಾನ ಬ್ರಿಟೀಷರ ಪರವಾಗಿತ್ತು. ಹೆಚ್ಚು ಕಡಿಮೆ ದುಡಿವವರ್ಗಗಳು ಯಾವಾಗಲು ಸ್ಥಾನಿಕರಿಗೆ ವಿಶೇಷ ಅಭಿಮಾನ ನೀಡುತ್ತವೆ ಪ್ರಶ್ನೆಬಂದಾಗ ಧಿಡೀರನೇ ಸಿಡಿದೇಳುವ ಪ್ರಸಂಗ ಬರುತ್ತದೆ. ನನ್ನ ಅನ್ನಕ್ಕೋಸ್ಕರ ನಾನು ಸಿಡಿದೇಳುವಂತದು ಬಂಡಾಯ ಎಂದು ವ್ಯಾಖ್ಯಾನಿಸುವುದಾದರೆ ಅಂಥ ಪ್ರತಿಭಟನೆ ಬೇಕು? ಸುನಾಮಿಯಾದಾಗ ನೋಡು ತ್ತೇವೆ. ಅಷ್ಟು ಜನ ಸತ್ತರು ಇಷ್ಟು ಜನ ಸತ್ತರು ಎಂದು. ಅಂದರೆ ಮಾಧ್ಯಮಗಳು ನಮಗೆ ಕೊಡುವ ಮಾಹಿತಿಯನ್ನೆ ನಾವು ನಂಬುತ್ತೇವೆ. ಎಷ್ಟು ಜೀವಿಗಳು ಭೂಗತ ಆಗಿರುತ್ತವೆ ಯಾರಿಗೆ ಗೊತ್ತು. ಬಂಡಾಯ ಅಂದರೆ ಅದು ಸಾತ್ವಿಕವಾಗಿ, ಗುಣಾತ್ಮಕವಾಗಿ, ಪರಿಣಾಮಕಾರಿ ಯಾದಂತ ಒಂದು ಬಂಡಾಯ ಕೂಡ. ಅಂತ ಬಂಡಾಯವನ್ನು ಅಂಕಿ, ಸಂಖ್ಯೆಗಳ ಮೂಲಕ ವ್ಯಾಖ್ಯಾನಿಸುವುದರಿಂದ ಅಥವಾ ಬ್ರಿಟೀಷ್ ಪ್ರಣೀತ ಯೋಚನೆಯ ಮೂಲಕ ವ್ಯಾಖ್ಯಾನಿಸು ವುದರಿಂದ ಸಾಂಸ್ಕೃತಿಕವಾಗಿರುವಂತ, ಸಾಮಾಜಿಕವಾಗಿರತಕ್ಕಂತ ಪ್ರಕ್ರಿಯಾತ್ಮಕ ಅಂಶಗಳನ್ನು ಗುರುತಿಸಿದರೆ ಪರಿಣಾಮಗುತ್ತದೆ. ಹೀಗಾಗಿ ಇತಿಹಾಸವನ್ನು ಚರಿತ್ರೆಯನ್ನು ಸಮುದಾಯ ಮುಖಿಯಾಗಿ, ಸಾಮಾಜಿಕ ಮುಖವಾಗಿ ನೋಡಬೇಕಾಗುತ್ತದೆ. ನಾನು ಆರಂಭದಲ್ಲಿ ಒಂದು ಮಾತು ಹೇಳಿದ್ದೀನಿ. ಯಾವುದೇ ಒಂದು ಪ್ರತಿಭಟನೆಯನ್ನು ಆ ಸಮಾಜದಲ್ಲಿ ಚಲನಶೀಲ ವಾಗಿರತಕ್ಕಂತ ಸಂಗತಿ, ಸಂಕಥನ, ವಿಷಯಗಳ ಮೂಲಕ ಅರ್ಥಮಾಡಿಕೊಳ್ಳಬೇಕಾಗುತ್ತದೆ ವಿನಃ ಯಾವುದೋ ಒಂದು ನಿರ್ದಿಷ್ಟ ಬರಹಗಳ ಮೂಲಕ ಅಧ್ಯಯನ ಮಾಡಲಿಕ್ಕಾಗಲ್ಲ. ಬರಹಗಳು ಚರಿತ್ರೆಯನ್ನು ಅಧ್ಯಯನ ಮಾಡಲಿಕ್ಕೆ ಪೂರಕ ಖರೆ ಆದರೆ ಅವು ನಿಖರವಲ್ಲ ಅಂತಿಮವಲ್ಲ. ಆದ್ದರಿಂದ ನಾವು ಈ ೩ ದಿನಗಳಲ್ಲಿ ಸಿದ್ಧಸಾಮಾಗ್ರಿಗಳನ್ನು ಬಿಟ್ಟುಕೊಟ್ಟು ಸಂವಾದವನ್ನು ನಾವು ಈ ವೇದಿಕೆ ಮೂಲಕ ನಡೆಸಿದ್ದೇವೆ. ಹೇಗೆ ಜನರ ಮನಸ್ಸಿನಲ್ಲಿ ತುಂಬಿಕೊಂಡು

ಈ ವಿಚಾರ ಸಂಕಿರಣ ಅವರಿಗೆ ಮನಮುಟ್ಟುವಂತೆ ಮಾಡಿದೆ ಎಂದರೆ ನಿಜಕ್ಕೂ ಅವರು ಪ್ರತಿಕ್ರಿಯಿಸಿದ್ದನ್ನು ಕಂಡು ಬಹಳ ಸಂತೋಷ ಆಯಿತು.

ಹಿರಿಯರ ಅನುಭವದಂತೆ ಇರುವೆ ಮೇಲೆ ಕಾಲಿಟ್ಟರೆ ಅದು ನಮ್ಮನ್ನು ಕಡಿತದೆ ಎನ್ನುವ ಲೋಕಾನುಭವ ನಮ್ಮಲ್ಲಿದೆ. ಇದನ್ನು ಯಾರೂ ಅರ್ಥಮಾಡಿಕೊಳ್ಳಲ್ಲ. ಕೆಲವರು ಗಲಾಟೆ ಮಾಡಿದರೂ ಬಂಡಾಯ ಎನ್ನುವ ಶೀರ್ಷಿಕೆಯಲ್ಲಿ ಕರಿತೇವೆ. ಹೀಗಾಗಿ ಇಂದು ನಾವು ಪರಿಭಾಷೆಗಳನ್ನು ವಿಮರ್ಶೆಗೊಳಪಡಿಸಬೇಕಾಗಿದೆ. ಬ್ರಿಟೀಷ್ ಚರಿತ್ರೆ ಕಳ್ಳರು, ಕಾಕರು ಅಂತ ಏನು ಹೇಳಿದರೋ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತೆ. ಆದರೆ ಪ್ರಶ್ನೆ ಏನು, ಅದು ಯಾತಕ್ಕೋಸ್ಕರ ಬಂಡಾಯ ಅಂತ ಕರಿತೀವಿ, ಯಾತಕ್ಕೋಸ್ಕರ ಪ್ರತಿಭಟನೆ ಮಾಡಿದಿವಿ ಎನ್ನುವಂತೆ ಆತ್ಮವಿಮರ್ಶೆ ಮಾಡಿಕೊಂಡರೆ ಈ ಪ್ರಬಂಧಗಳಿಗೆ ಹೊಸ ರೀತಿಯ ವ್ಯಾಖ್ಯಾನ ಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಇಲ್ಲಿ ನಿಶ್ಯಸ್ತ್ರೀಕರಣ ಕಾಯ್ದೆಯಲ್ಲಿ ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡರು. ಅದಕ್ಕೋಸ್ಕರ ಬಂಡೆದ್ದರು. ಯಾವಾಗಲು ದುಡಿವವರ್ಗಗಳ ಮೇಲೆ ಅಧಿಕಾರಶಾಹಿ ವರ್ಗಗಳ ಹಿಡಿತಾ ಇರುತ್ತದೆ. ಬಳಸುವ ಸಲಕರಣೆಗಳ ಮೇಲೆ ನಿಷೇಧಗಳನ್ನು ಹೇರತಕ್ಕಂತದ್ದು. ಇಲ್ಲಿಕೂಡ ತಳಸಮುದಾಯಗಳ ಪ್ರತಿಭಟನೆಗೆ ಕಾರಣವಾಗುತ್ತೆ ಎನ್ನು ವಂಥದ್ದು. ಅಂದರೆ ಉತ್ಪಾದನೆಯ ಒಡೆತನವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಕೆಲಸವನ್ನು ಸರ್ಕಾರಗಳು ಮಾಡುತ್ತವೆ. ಬ್ರಿಟೀಷರು ಮಾಡಿದ್ದು ಅದನ್ನೆ ಯಾವುವು ಉತ್ಪಾದನಾ ಸ್ಥಳಗಳಾಗಿದ್ದವೋ ಅಂಥ ಉತ್ಪಾದನಾ ಸ್ಥಳಗಳ ಮೇಲೆ ಕಂಪನಿ ಸರಕಾರಗಳು ನಿಷೇಧ ಹೇರಿದವು. ಅವರ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳುವಂತದ್ದು ಇದಕ್ಕೆ ಉತ್ತಮ ಉದಾಹರಣೆ.

ಒಟ್ಟಿನಲ್ಲಿ ಈ ಮೂರು ದಿನಗಳ ಚರ್ಚೆ ಹಲಗಲಿ ಬಂಡಾಯವನ್ನು ಸಿಂಧೂರ ಲಕ್ಷ್ಮಣನ ಹೋರಾಟಗಳನ್ನು ಒಂದು ಭಿನ್ನ ದೃಷ್ಟಿಕೋನಗಳಿಂದ ಅರಿಯುವ ಪ್ರಯತ್ನವನ್ನು ಮಾಡಿವೆ. ಬರೀ ಭಾರತ ಸ್ವಾತಂತ್ರ್ಯ ಚಳುವಳಿ ಅಥವಾ ಬ್ರಿಟೀಷ್ ವಿರುದ್ಧದ ಚಳುವಳಿ ಎಂದು ಕೈಚೆಲ್ಲಿ ಕೂಡದೆ ಹಲಗಲಿ ಬೇಡ ಸಮುದಾಯದ ಅಂತರ್ಗತ ನೆಲೆಯಿಂದ ನೋಡಿದ್ದು ಹೊಸ ಜಿಗಿತಕ್ಕೆ ಕಾರಣವಾಯಿತು. ಸಮುದಾಯ ಕುರಿತ ಅಧ್ಯಯನಗಳಿಗೆ ಇದೊಂದು ಹೊಸ ದಿಕ್ಸೂಚಿಯಾಯಿತು ಎನ್ನುವುದು ಗಮನಾರ್ಹ ಸಂಗತಿಯಾಗಿದೆ.

* * *

## ಲೇಖಕರ ವಿಳಾಸ

**೧. ಡಾ.ಮಂಜುನಾಥ ಬೇವಿನಕಟ್ಟಿ**
ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**೨. ಡಾ.ಎಲ್.ಲಕ್ಷ್ಮಿದೇವಿ,**
ಹಿರಿಯಶ್ರೇಣಿ ಕನ್ನಡ ಅಧ್ಯಾಪಕರು,
ಎಫ್.ಎಂ.ಕೆ.ಎಂ. ಪ್ರಥಮ ದರ್ಜೆ ಕಾಲೇಜು,
ಮಡಿಕೇರಿ.

**೩. ಡಾ.ವಿರೇಶ ಬಡಿಗೇರ,**
ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ. ವಿದ್ಯಾರಣ್ಯ ೫೮೩ ೨೭೬.
ಹೊಸಪೇಟೆ ತಾ. ಬಳ್ಳಾರಿಜಿ. ದೂ.೯೪೪೮೮೪೫೭೮೯

**೪. ವೀರೇಂದ್ರ ಶೀಲವಂತ,**
ಪ್ರಜಾವಾಣಿ, ಡೆಕ್ಕನ್‌ಹೆರಾಲ್ಡ್, ವರದಿಗಾರರು,
ಶ್ವೇತಾ ಬಸವೇಶ್ವರ ನಗರ, ಬೀಳಗಿ ೫೮೭ ೧೧೬,
ಬಾಗಲಕೋಟೆ ಜಿಲ್ಲೆ.

**೫. ಪ್ರೊ.ಎಚ್.ಬಿ.ಧರ್ಮಣ್ಣವರ,**
ವಿಶ್ರಾಂತ ಪ್ರಾಚಾರ್ಯರು,
ಬೀಳಗಿ.

**೬. ಮುತ್ತು ನಾಯ್ಕರ್,**
ಜಿಲ್ಲಾ ವರದಿಗಾರರು, ವಿಜಯಕರ್ನಾಟಕ ದಿನಪತ್ರಿಕೆ,
ಕಲಾದಗಿ ರೋಡ್, ಬಾಗಲಕೋಟೆ.

**೭. ಡಾ.ಮೀನಾಕ್ಷಿ. ಡಿ.ಪಲ್ಲಾಗಟ್ಟಿ,**
ಸಹಾಯಕ ನಿರ್ದೇಶಕರು, ಮಾಹಿತಿ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೫೮೩ ೨೭೬,
ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ.

**೮. ಡಾ.ಸಂಗಮೇಶ ಕಲ್ಯಾಣಿ,**
ಮುಖ್ಯೋಪಾಧ್ಯಾಯರು, ಜಯವಿಜಯ ಪ್ರೌಢಶಾಲೆ,
ಮುಧೋಳ, ಬಾಗಲಕೋಟೆ ಜಿಲ್ಲೆ, ಮೊ. ೯೪೪೯೨೮೭೬೧೫

**೯. ಪ್ರೊ. ಬಿ.ಆರ್. ಪೋಲೀಸ್ ಪಾಟೀಲ್**
ವಾತ್ಸಲ್ಯ, ಸೋಮವಾರಪೇಟೆ,
ಬನಹಟ್ಟಿ ೫೮೭೩೧೧, ಬಾಗಲಕೋಟೆ ಜಿಲ್ಲೆ.

**೧೦. ಕಂಠಿ ಹನುಮಂತರಾಯ,**
ನಾಗರಹಾಳ, ತಾ.ಬೀಳಗಿ.
ಜಿ.ಬಾಗಲಕೋಟೆ.

**೧೧. ಜಿ.ಕೆ.ತಳವಾರ,**
ಬಸವೇಶ್ವರ ಶಿಕ್ಷಕರ ತರಬೇತಿ ಸಂಸ್ಥೆ,
ಬಾಗಲಕೋಟೆ.

**೧೨. ಉಮೇಶ ತಿಮ್ಮಾಪುರ,**
ಉಪನ್ಯಾಸಕರು, ಸಕ್ರಿ, ಪದವಿ ಪೂರ್ವಕಾಲೇಜ್,
ಬಾಗಲಕೋಟೆ.

**೧೩. ಶಂಕರ ಬೈಚಬಾಳ,**
ಪಶು ಆಸ್ಪತ್ರೆ ಹಿಂದೆ, ತಾ.ಇಂಡಿ,
ಜಿ.ಬಿಜಾಪುರ

**೧೪. ವಿ.ಎಸ್.ಶಿರಹಟ್ಟಿಮಠ,**
ಹಲಗಲಿ, ೫೮೭೧೨೧, ಮುಧೋಳ ತಾಲೂಕು,
ಬಾಗಲಕೋಟೆ ಜಿಲ್ಲೆ.

**೧೫. ಡಾ. ತಾರಾಮತಿ ಬಿ.**
ಉಪನ್ಯಾಸಕಿ, ಸರಕಾರಿ ಪದವಿ ಪೂರ್ವಕಾಲೇಜು,
ಕೊಟ್ಟೂರು, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**೧೬. ಕೆ.ಪ್ರೇಮ,**
ಶಿಕ್ಷಕರು, ಆದರ್ಶ ಜಿಂದಾಲ್ ಶಾಲೆ,
ತೋರಣಗಲ್ಲು, ಬಳ್ಳಾರಿ ಜಿಲ್ಲೆ.

**೧೭. ಡಾ.ಎಸ್.ಎಂ.ಸಾವಿತ್ರಿ,**
ಶಿಕ್ಷಕರು, ವಿನೋಬಾಬಾವೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಚಿತ್ತವಾಡ್ಗಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ.

**೧೮. ಡಾ.ಕೃಷ್ಣವೇಣಿ ಆರ್.**
ಆಶ್ರಯ ಅನ್ನಪೂರ್ಣಮ್ಮ ೯/೨೦ವಾರ್ಡ್,
ಜಾಲಿಓಣಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ.

**೧೯. ಜಗದೀಶಕುಮಾರ ಚ.ನಾಯಕ,**
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩ ೨೭೬.
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ ಮೊ.೯೪೮೦೦೩೯೬೫೫

**೨೦. ಎ.ಡಿ.ಬಸವರಾಜ,**
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೮೩೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ ಮೊಬೈಲ್ ೯೪೮೦೦೩೯೮೦೭

**೨೧. ಡಾ.ಯಮನೂರಪ್ಪ ಅಣ್ಣಿಗೇರಿ,**
ಏಕಲವ್ಯ ಕುಟೀರ, ಸಣ್ಣಕ್ಕಿ ವೀರಭದ್ರ ದೇವಸ್ಥಾನ ರಸ್ತೆ,
ನೆಹರು ಕಾಲೋನಿ, ಹೊಸಪೇಟೆ ತಾಲೂಕು,
ಬಳ್ಳಾರಿ ಜಿಲ್ಲೆ. ಮೊ. ೯೨೪೨೨ ೭೨೮೯೨.

**೨೨. ಹಿರೇಬಿದ್ರಿ ಹೊಳಿಬಸಪ್ಪ,**
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೫೮೩೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ. ಮೊ.೯೮೮೦೩೭೧೧೦.

**೨೩. ಡಾ. ಗುರುಪ್ರಸಾದ್ ಎಸ್.ಹವಲ್ದಾರ.**
ಮರಿಯಮ್ಮನಹಳ್ಳಿ, ಹೊಸಪೇಟೆ ತಾಲೂಕು,
ಬಳ್ಳಾರಿ ಜಿಲ್ಲೆ, ಮೊ.೯೯೬೯೬೯೬೨೫.

**೨೪. ಡಾ. ಸಣ್ಣಪಾಪಯ್ಯ,**
ಸಿಐಐಎಲ್,
ಮೈಸೂರು.

**೨೫. ಹಂದ್ರಾಳ ಗವಿಸಿದ್ದಪ್ಪ,**
ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ೫೮೩೨೭೬.

**೨೬. ಬಾಬು ಬಿ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ಮೊ. ೯೪೪೯೧೩೪೨೩೩.

**೨೭. ಡಾ. ಭೀಮನಗೌಡ ಪಾಟೀಲ,**
ಪ್ರಾಧ್ಯಾಪಕರು, ಭಂಡಾರಿ ಕಲಾಮಹಾ ವಿದ್ಯಾಲಯ,

ಗುಳೇದಗುಡ್ಡ. ತಾ.ಬದಾಮಿ
ಜಿ.ಬಾಗಲಕೋಟೆ.

**೧೮. ರಾಜೇಶ್ವರಿ ವೀ.ಶೀಲವಂತ,**
ಕನ್ನಡ ಉಪನ್ಯಾಸಕಿ, ಸರಕಾರಿ ಡಿಗ್ರಿ ಕಾಲೇಜು,
ಬೀಳಗಿ, ತಾ.ಬಾಗಲಕೋಟೆ.

**೧೯. ಮಲ್ಲಿಕಾರ್ಜುನ ಬನ್ನಿ,**
ಮಾಜಿ ಶಾಸಕರು, ತಾಯಿ ಪ್ರಕಾಶನ, ಪಿ.ಬಿ.ನಂ.೪೭,
ಗುಳೇದಗುಡ್ಡ ೫೮೭ ೧೦೩, ಬಾಗಲಕೋಟ ಜಿಲ್ಲೆ
ದೂ. ೦೮೩೫೯ ೧೫೦೪೫೩

**೨೦. ಡಾ. ಕೇಶವಮೂರ್ತಿ ಕೆ,**
ಹಸ್ತಪ್ರತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ, ೫೮೩ ೧೭೬

**೨೧. ಆರ್.ಎಸ್. ಪಾಟೀಲ,**
ಸರ್ಕಾರಿ ಉರ್ದು ಪ್ರೌಢಶಾಲೆ,
ಬೀಳಗಿ, ಜಿಲ್ಲೆ ಬಾಗಲಕೋಟೆ.

**೨೨. ಮುರಳೀಧರ ದೇಶಪಾಂಡೆ,**
ಯಡಹಳ್ಳಿ, ಗಲಗಲಿ. ತಾ.ಬೀಳಗಿ,
ಜಿ.ಬಾಗಲಕೋಟೆ

**೨೩. ದೊಡ್ಡಣ್ಣ ಗದ್ದನಕೇರಿ,**
ಶರಣಬಸವೇಶ್ವರ ಮಠದಹತ್ತಿರ, ಭಗವತಿಚಾಳ,
ಬಾಗಲಕೋಟೆ ೫೮೭ ೧೦೧ ಮೊ. ೯೪೪೮೯೫೯೯೫೫

**೨೪. ಡಾ. ಪ್ರಕಾಶ ಗ.ಖಾಡೆ,**
ಉದ್ಯಾನವನದ ಎದುರು, ಸೆಕ್ಟರ್ ನಂ. ೩೮,
ನವನಗರ, ಬಾಗಲಕೋಟ, ಮೊ.೯೮೪೫೫೦೦೮೯೦

**೨೫. ಶಿವಾನಂದ ಶೆಲ್ಲಿಕೇರಿ,**
ಗಲಗಲಿ, ಸಾ, ಬೀಳಗಿ ತಾ.
ಬಾಗಲಕೋಟೆ ಜಿ.

**೩೬. ಸೋಮಲಿಂಗ ಬೇಡರ,**
ಆಳೂರ, ಶಿಕ್ಷಕರು, ಧವಳೇಶ್ವರ ೫೮೭ ೧೧೬,
ಬೀಳಗಿ ತಾಲೂಕು, ಬಾಗಲಕೋಟೆ ಜಿಲ್ಲೆ,
ಮೊ. ೯೪೪೯೪೩೮೨೦೨.

**೩೭. ಗೋವಿಂದ ಮಾ. ಕೆಳಗಳಹಟ್ಟಿ,**
ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**೩೮. ವಿಜಯಶ್ರೀ ಇಟ್ಟಣ್ಣವರ,**
ಕನ್ನಡ ಉಪನ್ಯಾಸಕಿ, ಸರಕಾರಿ ಡಿಗ್ರಿಕಾಲೇಜು,
ಬೀಳಗಿ, ಜಿ.ಬಾಗಲಕೋಟೆ.

**೩೯. ನಿಂಗಪ್ಪ ಎಸ್.ಮಾದಣ್ಣವರ** ಎಂ.ಫಿಲ್.,
ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**೪೦. ನವಲಗುಂದ ಗುರುರಾಜ,** ಎಂ.ಫಿಲ್
ಸಂಶೋಧನಾ ವಿದ್ಯಾರ್ಥಿ, ಶಾಸನಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ ೫೮೩ ೨೭೬.
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**೪೧. ಗಂಗಾಧರ ಎಂ.ಬಡಿಗೇರ,**
ಪೋಸ್ಟ್ ಸಿದ್ದಾಪುರ, ತಾ. ಬೀಳಗಿ, ಜಿಲ್ಲೆ.
ಬಾಗಲ ಕೋಟೆ. ೫೮೭೧೧೭, ಜಂಗಮವಾಣಿ. ೯೭೪೩೧೮೯೦೯.

**೪೨. ಮಹಾಂತಗೌಡ,** ಎಂ.ಫಿಲ್.,
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ,
ಹಂಪಿ, ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾ., ಬಳ್ಳಾರಿ ಜಿ.

**೪೩. ಚಿದಾನಂದಪ್ಪ ಕೆ.** ಎಂ.ಫಿಲ್
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬,
ಹೊಸಪೇಟೆ ತಾಲೂಕು ಬಳ್ಳಾರಿ ಜಿಲ್ಲೆ.

* * *

# ಆಶಯ ನುಡಿ

ಸ್ನೇಹಿತರೆ, ವೀರಸಿಂಧೂರ ಲಕ್ಷ್ಮಣ ಸಾಬು ಮತ್ತು ನರಸವ್ವ ದಂಪತಿಗಳ ವೀರ ಪುತ್ರ. ಭೀಮಕಾಯದ ಲಕ್ಷ್ಮಣ ತುಳಸಿಗಿರೀಸನ ವರಪ್ರಸಾದ. ಕಾಡು ಬೆಟ್ಟದ ಮಧ್ಯೆಯೇ ಸುತ್ತಿ ನಿಸರ್ಗದ ಒಡನಾಟದಲ್ಲಿ ಬೆಳೆದದ್ದು ಆತನ ಸಂಸ್ಕೃತಿ. ನಟ್ಟು ಕಡಿಯುವುದರಲ್ಲಿ ಆತನದ್ದು ಎತ್ತಿದ ಕೈ. ಬೀಳೂರು ಶ್ರೀಗಳು ಆತನ ಸಾಹಸಕ್ಕೆ ಹರಸಿದರು. ಬ್ರಿಟೀಷರ ಕೈಗೊಂಬೆಗಳಾಗಿದ್ದ ಜಮೀನ್ದಾರರು ಭೀಕರ ಬರದಲ್ಲಿಯೂ ಬಿರಾಡ ಭೂಕಂದಾಯ ವಸೂಲಿ ಮಾಡುವುದರ ವಿರುದ್ಧ ಸಿಡಿದೆದ್ದ ಲಕ್ಷ್ಮಣ, ಈ ಹೋರಾಟದ ಮೂಲಕವೇ ಬ್ರಿಟೀಷರ ವಿರುದ್ಧ ಹೋರಾಟ ಆರಂಭಿಸಿದ.

ಹಳ್ಳಿಗಳಲ್ಲಿ ಜನರನ್ನು ಸಂಘಟಿಸಿ ದಾಸ್ಯದ ವಿರುದ್ಧ ಧ್ವನಿ ಎತ್ತುವಂತೆ ಮಾಡಿದ. ಇದರಿಂದ ಕಂಗಾಲಾದ ಬ್ರಿಟೀಷರು ಆತನ ಬಂಧನಕ್ಕೆ ಜಾಲ ಬೀಸಿದರು. ಅಳಿಯಂದಿರರಾದ ನರಸ್ಯಾ, ಗೋಪಾಲಿ, ಸಾಬಾರೊಂದಿಗೆ ಹೋರಾಟದ ಗುಂಪು ಕಟ್ಟಿದ. ಬ್ರಿಟೀಷರ ಕಾವಲು ಬೇಧಿಸಿ ಕಾಡು ಸುತ್ತಿದ. ಶ್ರೀಮಂತರಿಗೆ ಸಿಂಹಸ್ವಪ್ನನಾಗಿ, ದುರ್ಬಲರ, ದೀನದಲಿತರಿಗೆ ಆಸರೆಯ ಶಕ್ತಿಯಾಗಿ ನಿರಂತರವಾಗಿ ದುಡಿದ ಲಕ್ಷ್ಮಣನಿಗೆ ಆತನ ಊರು ಸಿಂಧೂರು ಬಿರುದಾಂಕಿತವಾಗಿ ಸೇರ್ಪಡೆಯಾಗಿತ್ತು. ವೀರ ಸಿಂಧೂರ ಲಕ್ಷ್ಮಣ ಕೊನೆಗೆ ದುಷ್ಟರ ಪಿತೂರಿಗೆ ಬಲಿಯಾಗಿ ಬೀಳಗಿಯ ಕಪ್ಪರ ಪಡಿಯವ್ವನ ಗುಡಿಯಲ್ಲಿ ಪ್ರಾಣಬಿಟ್ಟ.

ಇದಿಷ್ಟು ಸಿಂಧೂರ ಲಕ್ಷ್ಮಣನ ಸಂಕ್ಷಿಪ್ತ ಚರಿತ್ರೆ. ಹೀಗಿರುವ ವ್ಯಕ್ತಿಯನ್ನು ಬ್ರಿಟೀಷ್ ಸರಕಾರ ಹಾಗೂ ಅವರ ದಾಸ್ಯದಲ್ಲಿದ್ದ ಸಂಸ್ಥಾನಗಳು, ಶ್ರೀಮಂತರು, ಅಧಿಕಾರಿಗಳು ಆತನನ್ನು ದರೋಡೆಕೋರ, ಕಳ್ಳ ಮುಂತಾದ ರೀತಿಯಲ್ಲಿ ಚಿತ್ರಿಸಿವೆ.

ಆತ ಸ್ವಾಭಿಮಾನಿ, ಹೋರಾಟಗಾರ, ಪರನಾರಿಪುರುಷನಾಗಿದ್ದ. ಒಂದು ಅಧ್ಯಯನದ ದೃಷ್ಠಿಯಿಂದ ಮತ್ತು ಸಂಶೋಧನೆಯ ದೃಷ್ಠಿಯಿಂದ ಜನರ ದೃಷ್ಟಿಯಿಂದ ಒಬ್ಬ ಮಹಾನ್ ಪುರುಷನ ಬಗ್ಗೆ ಎರಡು ರೀತಿಯ ಅಭಿಪ್ರಾಯಗಳನ್ನು ಕಾಣುತ್ತೇವೆ. ಈ ಅಭಿಪ್ರಾಯಗಳನ್ನು ಇಟ್ಟುಕೊಂಡು ನೋಡಿದಾಗ ಒಂದಕ್ಕೊಂದು ಬಹಳ ತದ್ವಿರುದ್ಧವಾದವು. ಒಂದು ಸ್ಪಷ್ಟವಾಗಿ ತಿಳಿಯಬೇಕಾದರೆ, ಈ ಆಳುವ ವರ್ಗ ಏನಿದೆಯೋ ತನಗೆ ಹಿತವಾಗಿರುವ ತನ್ನ ಆಳ್ವಿಕೆಯನ್ನು ನಡೆಸಿಕೊಂಡು ಹೋಗಲಿಕ್ಕೆ ಯಾರು ಸಹಕಾರಿಯಾಗಿರುತ್ತಾರೆ ಮತ್ತು ತಾನು ಮಾಡುವ ಹುನ್ನಾರುಗಳು ಮತ್ತು ತಾನು ಮಾಡುವ ಸಮಾಜ ವಿರೋಧಿ ಕಾರ್ಯ ಚಟುವಟಿಕೆಗಳನ್ನು ಯಾರು ಸ್ವಾಗತಿಸುತ್ತಾ ಬರುತ್ತಾರೋ ಅವನು ಕೆಟ್ಟವನೇ ಆಗಿರಲಿ ಅವನು ಒಳ್ಳೆಯವನೇ ಆಗಿರಲಿ, ಅವನು ತಲೆಹೊಡೆಯುವ ವರ್ಗವೇ ಆಗಿರಲಿ ಅದನ್ನು ಒಳ್ಳೆಯ ರೀತಿಯಲ್ಲಿ ಕಾಣುತ್ತಾ ಇರುತ್ತದೆ.

ಅದನ್ನು ವಿರೋಧಿಸುವಂತವರು ಬದುಕನ್ನು ಸಮಾನವಾಗಿ ಕಾಣುವಂತವರು ಒಳ್ಳೆಯ ರೀತಿಯಲ್ಲಿ ಬದುಕಬೇಕೆಂದವರು ಯಾರಿಗೂ ಕೆಡುಕಾಗಬಾರದು ಎನ್ನುವಂತವರು ಆಳುವ ವರ್ಗದ ವಿರುದ್ಧವಾಗಿ ಮಾತನಾಡಿದರೆ ಅಥವಾ ಒಂದು ಸಣ್ಣ ಪ್ರತಿಕ್ರಿಯೆ ತೋರಿಸಿದರೆ ಅವರು ಕೊಲೆಗಡುಕರು ಅಥವಾ ಸಮಾಜ ಘಾತಕರು ಎಂದು ಚಿತ್ರಿಸುವ ಪರಂಪರೆ ನಮ್ಮಲ್ಲಿ ಬಂದಿದೆ. ಈ ಪರಂಪರೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಈ ಪರಂಪರೆಗೆ ವಿರುದ್ಧವಾಗಿ ನಮ್ಮ ಜನಪದ ಪರಂಪರೆ ನಿಂತಿದೆ. ಅದು ಎಷ್ಟು ಖಚಿತವಾಗಿ ಸ್ಪಷ್ಟ ಚಿತ್ರಣವನ್ನು ಕೊಡುತ್ತಾ ಬರುತ್ತದೆಂದರೆ ನಾನು ಒಂದು ಉದಾಹರಣೆ ಹೇಳುವುದರ ಮೂಲಕ ನನ್ನ ಚರ್ಚೆಯನ್ನು ಪ್ರಾರಂಭಿಸುತ್ತೇನೆ. ವಿಜಯನಗರ ಸಾಮ್ರಾಜ್ಯ ಬಹಳ ಸ್ಪಷ್ಟ ವಾಗಿ ನಮಗೆ ಗೊತ್ತಿದೆ. ಅದು ಇಡೀ ದೇಶದಲ್ಲೇ ಅತ್ಯಂತ ಉನ್ನತವಾದ ಸಾಮ್ರಾಜ್ಯ ಎಂದು. ಅದರ ಬಗ್ಗೆ ದೇಶ ವಿದೇಶದ ಚರಿತ್ರೆಕಾರರು ಬಂದು ಅಧ್ಯಯನ ಮಾಡಿದ್ದಾರೆ. ಇನ್ನು ಕೆಲವು ಮೂಲಭೂತವಾದಿಗಳು ಅದು ಹಿಂದೂ ಧರ್ಮವನ್ನು ಎತ್ತಿ ಹಿಡಿಯಲು ಹುಟ್ಟಿಕೊಂಡ ಸಾಮ್ರಾಜ್ಯ ಎಂದು ಹೇಳಲಾಗಿದೆ.

ಅಂದರೆ ಚರಿತ್ರೆಕಾರರಲ್ಲಿ ಅದರ ಬಗೆಗೆ ನಮಗೆ ಹೇರಳವಾದ ಅದ್ಭುತ ಮಾಹಿತಿಗಳು ಸಿಗುತ್ತವೆ. ಆದರೆ ಜನಪದರಲ್ಲಿ ಕಂಡುಬರುವುದು ಅತಿ ಕಡಿಮೆ. ಅದೇ ಪಕ್ಕದಲ್ಲಿರುವ ಕುಮಾರರಾಮನ ಬಗೆಗೆ ಜನಪದರು ಹಾಡು, ಕಥೆ, ಕಾವ್ಯಗಳನ್ನು ಕಟ್ಟಿರುವುದನ್ನು ಕಾಣಬಹುದು. ಮತ್ತೆ ಶಿಷ್ಟ ಸಾಹಿತಿಗಳು ಕುಮಾರರಾಮನ ಬಗೆಗೆ ಸಾಹಿತ್ಯವನ್ನು ಸೃಷ್ಟಿಮಾಡಿ ರುವುದನ್ನು ಕಾಣಬಹುದು. ಇಂತಹ ಒಂದು ಸಣ್ಣ ಸಾಮ್ರಾಜ್ಯದ ಬಗೆಗೆ ಸಾಹಿತ್ಯವನ್ನು ಸೃಷ್ಟಿ ಮಾಡಿರುವ ಜನಪದರು ವಿಜಯನಗರ ಸಾಮ್ರಾಜ್ಯವನ್ನು ಆಳಿದ ಕೃಷ್ಣದೇವರಾಯನ ಬಗೆಗೆ ಒಂದಿಷ್ಟು ರಚನೆಯಾಗಿರುವುದನ್ನು ಕಾಣಲಾರೆವು. ನಮಗೆ ಇದು ಅಚ್ಚರಿಯ ಸಂಗತಿ. ಇಲ್ಲಿ ತಿಳಿದುಕೊಳ್ಳಬೇಕಾಗಿರುವುದು ಇಷ್ಟೇ. ಯಾಕೆ ಜನಪದರು ಕುಮಾರರಾಮನನ್ನು ಇಷ್ಟಪಡುತ್ತಾರೆ ಅದೇ ಕೃಷ್ಣದೇವರಾಯನನ್ನು ಇಷ್ಟಪಡುವುದಿಲ್ಲ. ಬಹಳ ಸ್ಪಷ್ಟವೆಂದರೆ ಕುಮಾರ ರಾಮನ ಆಳ್ವಿಕೆ ಬಗೆಗೆ ಅವರು ಬಹಳ ಸಂತೋಷಪಡುತ್ತಾರೆ. ಅವರ ಜನಪದ ಕಾರ್ಯಗಳು ಜನರಿಗೆ ಹತ್ತಿರವಾಗುತ್ತವೆ. ಕಂಪಿಲನ ಆಳ್ವಿಕೆಯ ಸಂದರ್ಭದಲ್ಲಿ ವ್ಯವಸಾಯದ ಸಮಾಜ ಸೃಷ್ಟಿಯಾಗುತ್ತಾ ಇತ್ತು. ಅಲೆಮಾರಿಗಳೆಲ್ಲ ಸೇರಿ ವ್ಯವಸಾಯವನ್ನು ಮಾಡುವ ಸಂದರ್ಭವಿತ್ತು. ಕುಮಾರರಾಮನು ತನ್ನ ತಂದೆಯ ಆಳ್ವಿಕೆಯಲ್ಲಿ ಕೆರೆಕಟ್ಟಿಸುವುದರ ಮೂಲಕ, ಭಾವಿಗಳನ್ನು, ಕಾಲುವೆಗಳನ್ನು ತೋಡಿಸುವುದರ ಮೂಲಕ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟ. ಹಾಗೆ ತನ್ನ ಪರನಾರಿ ಸಹೋದರ ಗುಣದಿಂದಾಗಿ ಜನಮಾನಸದಲ್ಲಿ ಈಗಲೂ ಉಳಿದುಕೊಂಡಿದ್ದಾನೆ. ಕುಮಾರರಾಮನ ಬಗೆಗೆ ಕರ್ನಾಟಕದಾದ್ಯಂತ ಗುಡಿಗಳನ್ನು ಈಗಲೂ ನಾವು ಕಾಣುತ್ತೇವೆ. ಕುಮಾರರಾಮನ ಬಗೆಗೆ ಜಾತ್ರೆಗಳನ್ನು ಕಾಣುತ್ತೇವೆ. ಜನಪರ, ಸಮಾಜ ಪರ, ಮಾತೃಹೃದಯವಂತರಾಗಿರುವ ವ್ಯಕ್ತಿ, ಪರನಾರಿ ಸಹೋದರನಾಗಿರುವ ವ್ಯಕ್ತಿ ಈಗಲೂ ಜನಪದರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾನೆ. ಕುಮಾರರಾಮನ ಬಗೆಗೆ ಎಷ್ಟು ಹೇಳುತ್ತೇವೆಯೋ ಅದಕ್ಕೆ ಹತ್ತಿರವಾಗಿರುವಂತಹ ಸಿಂಧೂರ ಲಕ್ಷ್ಮಣ, ಒಂದು ರಾಜ್ಯ ಕಟ್ಟದೇ ಹೋಗಿರಬಹುದು. ಆದರೆ ಜನಪರವಾಗಿರುವ ಕೆಲಸಗಳನ್ನು ಮಾಡುವ ಮುಖಾಂತರ ಹಣವಂತರಿಂದ ದೋಚಿಕೊಂಡು ಅದನ್ನು ಶೋಷಣೆಗೆ ಒಳಗಾಗಿರುವವರಿಗೆ ಕೊಡುವ ಮುಖಾಂತರ ಇಲ್ಲಿ ಸಿಂಧೂರ ಲಕ್ಷ್ಮಣ ನಮಗೆ ಪ್ರಮುಖನಾಗುವನು. ಹಾಗಾಗಿನೇ ಸಿಂಧೂರ ಲಕ್ಷ್ಮಣನ ಬಗೆಗೆ ಲಾವಣಿ ಸಾಹಿತ್ಯ ಹೇರಳವಾಗಿ ಸಿಗುತ್ತದೆ. ನಾಟಕಗಳು, ಬಯಲಾಟಗಳು, ಜನಪದ ಸಾಹಿತ್ಯಗಳು ಸಮಗ್ರವಾಗಿ ದೊರೆಯುತ್ತವೆ. ಈಗಲೂ ಸಹ ಹಳ್ಳಿಗಳಲ್ಲಿ ಸಿಂಧೂರ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಒಂದು ತಿಂಗಳು ಅಥವಾ ಎರಡು ತಿಂಗಳು ಕೆಲಸ ಮಾಡಿದರೆ ಸಾಕು ಸಾವಿರಾರು ಪುಟಗಳಷ್ಟು ಸಾಹಿತ್ಯ ಸಿಗುವಂತಿದೆ.

ದಾಸ್ಯ ಸಂಕೋಲೆಯಲ್ಲಿ ನರಳುತ್ತಿದ್ದ ನಾಡಿಗೆ ಸ್ವಾತಂತ್ರ್ಯ ತಂದುಕೊಡುವುದು, ಜಮೀನ್ದಾರರ ಸರ್ವಾಧಿಕಾರಿ ಪ್ರವೃತ್ತಿ ವಿರುದ್ಧ ಧ್ವನಿ ಎತ್ತಿ ಹೋರಾಟ ಮಾಡಿದ ಬಗೆಗೆ ಮಾಹಿತಿಗಳು ದೊರೆಯುತ್ತವೆ. ಸಿಂಧೂರ ಲಕ್ಷ್ಮಣ ಕಪ್ಪರಪಡಿಯವ್ವನ ದೇವಸ್ಥಾನದಲ್ಲಿ ಊಟಕ್ಕೆ ಹೊರಟಾಗ, ಅಳಿಯಂದಿರು ಹೊರಡುವ ಸಂದರ್ಭದಲ್ಲಾದ ಅಪಶಕುನಗಳನ್ನು ಹೇಳಿದರೂ ಹೊರಡುತ್ತಾನೆ. ಆಗ ಅಳಿಯಂದಿರುಗಳಿಗೆ ಹೇಳುತ್ತಾನೆ. ತಾನು ನಂಬಿದ ತಾಯಿ ಕಪ್ಪರ ಪಡಿಯವ್ವನ ಸನ್ನಿಧಿ, ಆಕೆಯಪ್ರಸಾದ ಹಾಗೂ ಭೂಮಿತಾಯಿ ಈ ತಾಯಂದಿರುಗಳ ಸನ್ನಿಧಿಗೆ ಹೋಗುತ್ತಿರುವಾಗ ಬೇಡ ಅನ್ನಬಾರದು ಎನ್ನುತ್ತಾರೆ. ಆದರೆ ಮೋಸವನ್ನು ಮೂರು ತಾಯಂದಿರು ತಡೆಯಲಾಗಲಿಲ್ಲ. ತಾನು ನಂಬಿದ ದೈವದ ಸ್ಥಾನದಲ್ಲೆ ಅಂತ್ಯ ಕಂಡನು.

* * *

ಹಿಂದೆ ನಾಯಕ ಜನಾಂಗದ ವೀರರು ತೋಪಿನ ಬಾಯಿಗೆ, ಗುಂಡಿನ ಮಳೆಗೆ, ಕತ್ತಿ ಬಲ್ಲೆಗಳ ಹೊಡೆತಕ್ಕೆ ಜಗ್ಗದೆ ಎದೆಕೊಟ್ಟು ಮುಂದೆ ನಿಲ್ಲುತ್ತಿದ್ದುರಿಂದಲೇ ಈ 'ನಾಯಕ' ಎಂಬ ಹೆಸರಿಗೆ ಪಾತ್ರರಾಗಿದ್ದಾರೆ.

**– ಶ್ರೀ ರಾಘವೇಂದ್ರ ಸ್ವಾಮಿಗಳು**

# ೧. ವಿಚಾರ ಸಂಕಿರಣದ ಪ್ರಾಸ್ತಾವಿಕ ಮಾತು

ಈ ವೇದಿಕೆಯ ಮೇಲೆ ಆಸೀನರಾಗಿರುವಂಥ ಸಮುದಾಯದ ನಾಯಕರುಗಳಿಗೆ ಹಾಗೂ ಬೇರೆ ಬೇರೆ ಸಮುದಾಯದ ಹಿರಿಯರುಗಳಿಗೆ ಹಾಗೂ ಶಾಸಕರುಗಳಿಗೆ ಹಾಗೂ ಹಾಲಿ ಮತ್ತು ಮಾಜಿ ಅಧ್ಯಕ್ಷರುಗಳಿಗೆ ನನ್ನ ಸ್ವಾಗತವನ್ನು ಕೋರುತ್ತಾ ನನ್ನ ಒಂದೆರಡು ಮಾತುಗಳನ್ನು ಹೇಳಲು ಇಷ್ಟ ಪಡುತ್ತೇನೆ.

ವಾಲ್ಮೀಕಿ ಸಮುದಾಯ ಅಥವಾ ಬೇಡ ಸಮುದಾಯವು ಮೂಲತಃ ಬೇಟೆಯನ್ನಾಧರಿಸಿ ಕೊಂಡು ಜೀವನ ಸಾಗಿಸುವಂತಹ ಸಮುದಾಯವಾಗಿದೆ. ಈ ಸಮುದಾಯ ಬೇಟೆಯ ನೀತಿಯನ್ನು ಅಂದರೆ ಬೇಟೆಯನ್ನಾಡುವಾಗ ಮಾಡುವ ತಂತ್ರಗಳ ಮುಖಾಂತರವಾಗಿ ಗಮನಿಸಿದಾಗ ಒಂದು ರೀತಿ ಯೋಧರ ಪಡೆಯಾಗಿರುವುದು ನಮ್ಮ ಚರಿತ್ರೆಯಲ್ಲಿ ಕಂಡು ಬರುತ್ತದೆ. ಇವರು ತಮ್ಮ ಚಾಣಾಕ್ಷತನದಿಂದಾಗಿ ಈ ದೇಶದಲ್ಲಿ ಹಲವಾರು ಪಾಳೇಪಟ್ಟು ಗಳನ್ನು ಕಟ್ಟಿದ ಉದಾಹರಣೆಗಳಿವೆ. ಉದಾಹರಣೆಗೆ ಚಿತ್ರದುರ್ಗ, ಕುಮ್ಮಟದುರ್ಗ, ಹರಪನಹಳ್ಳಿ, ಉಚ್ಚಂಗಿದುರ್ಗ ಹೀಗೆ ಮುಂತಾದ ಕಡೆಗೆ ಪಾಳೆಯಪಟ್ಟುಗಳನ್ನು ನಿರ್ಮಿಸಿ ದುದನ್ನು ನಾವು ಕಾಣಬಹುದು. ಹಾಗೆ ಇವರು ಬೇರೆ ಸಮುದಾಯಗಳ ಪಾಳೇಪಟ್ಟುಗಳನ್ನು ಹೂಡುವಾಗ ತಾವು ಯೋಧರಾಗಿ ಕೆಲಸ ಮಾಡಿರುವಂತದ್ದು, ಬೇರೆ ಪಡೆಯ ಅಂಗರಕ್ಷಕರಾಗಿ ಜೀವನ ಮಾಡಿರುವಂತದ್ದನ್ನು ಕಾಣುತ್ತೇವೆ. ಬ್ರಿಟೀಷರು ಈ ದೇಶಕ್ಕೆ ಕಾಲಿಟ್ಟಾಗಿನಿಂದ ಬೇಡರಿಗೆ ಅವನತಿ ಕಾಲ ಶುರುವಾಯಿತೆಂದು ಹೇಳಬಹುದು. ಯಾಕೆಂದರೆ ಬೇಡರ ಕುಲಕಸುಬೇ ಬೇಟೆ. ಬ್ರಿಟೀಷರು ಬಂದದ್ದರಿಂದ ಅವರ ಕಾನೂನುಗಳು ಇವರ ಬೇಟೆಯ ಕ್ರಿಯೆಯನ್ನು ತಡೆಗಟ್ಟಿತು. ಇದರಿಂದ ಬೇಡರ ಆಹಾರದ ಜೊತೆಗೆ ಅವರ ಕೆಲಸವನ್ನು ಕಸಿದುಕೊಂಡದ್ದಲ್ಲದೆ, ಪಾಳೆಪಟ್ಟುಗಳನ್ನು ವಶಕ್ಕೆ ತೆಗೆದುಕೊಂಡು ಒಂದು ರೀತಿಯಲ್ಲಿ ವೀರಯೋಧರಿ ಕೆಲಸವಿಲ್ಲವಾಯಿತು. ಇದರಿಂದ ಬಡತನವನ್ನನುಭವಿಸುವ ಸಂದರ್ಭ ಒದಗಿತು ಎನ್ನಬಹುದು. ಇಷ್ಟೆಲ್ಲಾ ಇದ್ದಾಗಲೂ ಬೇಡನಾಯಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಾಗಿದ್ದರು. ಸಿಂಧೂರಲಕ್ಷ್ಮಣ, ಹಲಗಲಿ ಬೇಡರಂತವರು ಬೇರೆ ಬೇರೆ ಸಂದರ್ಭಗಳಲ್ಲಿ ತಮ್ಮ ಶೂರತ್ವದಿಂದ ಬ್ರಿಟೀಷರನ್ನು ಎದುರಿಸಿದುದನ್ನು ಕಾಣಬಹುದು. ಆದರೆ ನಮ್ಮ ಆ ಪರಂಪರೆಯನ್ನು ನೋಡುತ್ತಾ ಹೋದರೆ ಕೇವಲ ಉತ್ತರ ಭಾರತದಲ್ಲಿ ರುವಂತಹವರನ್ನು ಬ್ರಿಟೀಷ್ ಸಾಮ್ರಾಜ್ಯದ ವಿರುದ್ಧವಾಗಿ ಹೋರಾಟ ಮಾಡಿದವರು ಮಾತ್ರ ಸ್ವತಂತ್ರ ಹೋರಾಟಗಾರರೆಂದು ಗುರುತಿಸಿಕೊಳ್ಳುತ್ತಾ ಬಂದರು. ಆದರೆ ಇಲ್ಲಿಯ ಸಿಂಧೂರ ಲಕ್ಷ್ಮಣನಾಗಿರಬಹುದು, ಹಲಗಲಿ ಬೇಡರಾಗಿರಬಹುದು, ಇಂತಹ ಪರಂಪರೆಯುಳ್ಳ ಸಮುದಾಯದ ಬಗೆಗೆ ಯಾವುದೇ ರೀತಿಯ ಗುರುತಿಸುವಿಕೆ ಹಾಗೂ ಅಧ್ಯಯನಗಳು ನಡೆಯಲಿಲ್ಲ. ಇತ್ತೀಚೆಗೆ ಅಧ್ಯಯನ ನಡೆಯುವಂತಹದ್ದನ್ನು ಕಾಣುತ್ತೇವೆ. ಪ್ರಸ್ತುತ ವಿಚಾರ ಸಂಕಿರಣದಲ್ಲಿ ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದವರ ವಾಸ್ತವ ಗಳೇನು? ಪರಿಸ್ಥಿತಿಗಳೇನು? ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪರಿಸ್ಥಿತಿಯ ವಾಸ್ತವಗಳೇನು? ಇವುಗಳ ಜೊತೆಯಲ್ಲಿ ಪರಂಪರೆಯನ್ನು ಅಧ್ಯಯನ ಮಾಡುವಂತದ್ದು ವಿಶೇಷ. ಅದಕ್ಕೋಸ್ಕರ ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ ಎಂಬ ಶೀರ್ಷಿಕೆಯಲ್ಲಿ ಈ ವಿಚಾರ ಸಂಕಿರಣ. ಇಂತಹ ಸಂದರ್ಭದಲ್ಲಿ ಸಿಂಧೂರಲಕ್ಷ್ಮಣನ ಚಟುವಟಿಕೆಗಳಿಗೆ ಕಾರಣವೇನು? ಎಂಬ ವಿವರ ನೀಡುವುದರ ಜೊತೆಗೆ ಹಲಗಲಿ ಚರಿತ್ರೆಯನ್ನು ಕಟ್ಟಿಕೊಂಡು ವಂತದ್ದು ಪ್ರಮುಖ ಉದ್ದೇಶವಾಗಿದೆ. ಈ ತರಹದ ಪಟ್ಟವನ್ನು ಹೊರುವುದರ ಮೂಲಕ ಇವರು ಜನಪರ ಕಾಳಜಿಗಾಗಿ ಹೋರಾಟ ಮಾಡಿದರು. ಅಥವಾ ಈ ದೇಶಕ್ಕೆ ಸ್ವತಂತ್ರವನ್ನು ತಂದುಕೊಡುವುದರ ಜೊತೆಗೆ, ತಮ್ಮ ಆಯುಧಗಳ ಮೇಲಿನ ಕಾಯಿದೆಗಳನ್ನು ರದ್ದು ಗೊಳಿಸಲು ಹೋರಾಟ ಮಾಡಿರುವಂತದ್ದು ಬಹಳ ಮುಖ್ಯವಾಗುತ್ತದೆ. ತಮ್ಮ ಅನ್ನ ತಮ್ಮ ಸಂಸ್ಕೃತಿಗೋಸ್ಕರ ಹೋರಾಡಿದವರನ್ನು ಕಳ್ಳರು, ಕಾಕರು, ಎಂದು ಪಟ್ಟವನ್ನು ಕಟ್ಟಿರುವಂತದನ್ನು ನಾವು ಕಾಣುವಂತದ್ದು ಇಲ್ಲಿಯೇ. ಈ ತರಹ ಪರಿಸ್ಥಿತಿಗಳು ಯಾಕೆ ನಿರ್ಮಾಣವಾಗುತ್ತವೆ? ಹಲಗಲಿ ಸಮುದಾಯಕ್ಕೆ ಆಗಿರುವ ಅನ್ಯಾಯಗಳೇನು? ಇತ್ಯಾದಿ ವಿವರಗಳು ಅನ್ವೇಷಣೆಗಾಗಿ ಈ ಮೂರು ದಿನದ ಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.

ಜೊತೆಗೆ ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಪರಿಸ್ಥಿತಿಗಳು, ಸಾಂಸ್ಕೃತಿಕ ಸ್ಥಿತಿಗತಿಗಳು, ಜೊತೆಗೆ ಸಿಂಧೂರಲಕ್ಷ್ಮಣ ಒಬ್ಬ ಸಾಂಸ್ಕೃತಿಕ ನಾಯಕ ಮತ್ತು ಈ ದೇಶದ ಸ್ವಾತಂತ್ರ್ಯಕ್ಕೆ ರಣಕಹಳೆಯನ್ನು ನೀಡಿದ ಮೊಟ್ಟಮೊದಲಿನ ವ್ಯಕ್ತಿ. ಇಂತಹ ವ್ಯಕ್ತಿಗಳ ಬಗ್ಗೆ

ಇದುವರೆಗೆ ಅಧ್ಯಯನಗಳು ನಡೆದಿಲ್ಲ. ಹಾಗಾಗಿ ಆ ಕೊರತೆಯನ್ನು ನೀಗಿಸುವುದರ ಜೊತೆಯಲ್ಲಿ ಸಿಂಧೂರ ಲಕ್ಷ್ಮಣ ಮೂಲತಃ ಯಾವ ರೀತಿ ಇದ್ದ, ಆತನ ಉದ್ದೇಶಗಳೇ ನಾಗಿದ್ದವು. ಯಾಕೆಂದರೆ ನಾವು ಸಿಂಧೂರ ಲಕ್ಷ್ಮಣನ ಬಗ್ಗೆ ಅನಾವಶ್ಯಕ ಅಪಾದನೆಗಳನ್ನು ನೀಡುವುದಕ್ಕಾಗಿ ಚರಿತ್ರೆಯಲ್ಲಿ ಆಗಿರುವ ಈ ಮಸಿಯನ್ನು ತೊಳೆಯುವುದಕ್ಕೋಸ್ಕರ ಚರಿತ್ರೆಯ ಪುನರ್ ವಿಮರ್ಶೆಯನ್ನು ಮಾಡುವಂತದ್ದು, ಪುನರ್ ವ್ಯಾಖ್ಯಾನ ಮಾಡುವಂತದ್ದು ಜರೂರು ಆಗಬೇಕಾಗಿದೆ. ಅದನ್ನು ಈಗ ಪ್ರಾರಂಭಿಸಿದ್ದೇವೆ. ಹಾಗೆಯೇ ಆಧುನಿಕತೆ ಸಹ ಈಗ ಹಿಂದಿನ ರೀತಿಯಂತೆಯೇ ನಮ್ಮನ್ನು ದಾರಿದ್ರ್ಯರನ್ನಾಗಿಸುತ್ತಿದೆ. ಬರೀ ವಾಲ್ಮೀಕಿ ಸಮುದಾಯ ವಷ್ಟೆ ಅಲ್ಲ ಅದರ ಜೊತೆಗೆ ತಳಸಮುದಾಯಗಳು ಯಾವ ರೀತಿ ಆಧುನೀಕರಣಕ್ಕೆ ಸಿಲುಕುತ್ತಿವೆ ಎನ್ನುವಂತದ್ದು. ಆಧುನಿಕತೆ ಎನ್ನುವಂತದ್ದು ಎರಡು ರೀತಿಯದಾಗಿದೆ. ಒಂದು ಬ್ರಿಟೀಷರ ಸಂದರ್ಭದಲ್ಲಿ ಬಂದಂತ ವಸಾಹತುಷಾಹಿ. ಇನ್ನೊಂದು ಇವತ್ತಿನ ಜಾಗತೀಕರಣ. ೧೦-೧೫ ವರ್ಷಗಳಿಂದ ಬಂದಂತ ಜಾಗತೀಕರಣ ತಳಸಮುದಾಯಗಳ ಬದುಕನ್ನು ಯಾವ ರೀತಿ ಕಸಿದುಕೊಂಡು ಬಡವರನ್ನಾಗಿಸಿವೆ ಎನ್ನುವಂತದ್ದು.

ಒಟ್ಟಾರೆ ಈ ಮೂರು ದಿನದ ಗೋಷ್ಠಿಯಲ್ಲಿ ನಮ್ಮ ಪರಂಪರೆ, ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯವಲ್ಲದೆ ಕರ್ನಾಟಕದ ತಳಸಮುದಾಯದ ಬಗೆಗಿನ ಅಧ್ಯಯನವಾಗಿದೆ.

ಮಠದ ಸ್ವಾಮಿಗಳು ಹಾಗೂ ಪ್ರತಿಯೊಬ್ಬರು ನಮ್ಮ ಸಮುದಾಯಕ್ಕೆ ಕಾಳಜಿ ತೋರಿಸಿ ದ್ದಾರೆ. ಇಲ್ಲಿ ಈ ವೇದಿಕೆಯ ಮೇಲಿರುವ ಎಲ್ಲರಿಗೂ ನನ್ನ ಕೃತಜ್ಞತೆಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

* * *

**ಆದಿಕವಿ, ವಾಲ್ಮೀಕಿ, ಶಬರಿ, ಮಹಾಭಾರತದ ಧರ್ಮವ್ಯಾಧ ಏಕಲವ್ಯ, ಜೈನ ಆರಾಧಾ ಗ್ರಂಥದಲ್ಲಿ ಬರುವ ಚಿರಾತಪುತ್ರ, ಚಾಲುಕ್ಯದೊರೆ ಪೆರ್ಯಾಡಿ ರಾಯನ ಮಂತ್ರಿ ತೆಲುಗು ಬೊಮ್ಮಯ್ಯ ಮತ್ತು ಪ್ರಸಿದ್ಧ ಶರಣರು ಬೇಡ ಜನಾಂಗದ ಪ್ರತಿನಿಧಿಗಳೇ. ಕ್ರಿ.ಶ. ೧೪೦೭ರ ಸಂಗೂರ ಶಿಲಾಶಾಸನದಿಂದ ಅಸಾಮಾನ್ಯ ಮಂತ್ರಿ ಬೈಚಪ್ಪನೂ ಈ ಜನಾಂಗದವನೆಂದು ಪ್ರಕಟವಾಗುತ್ತದೆ. ಅಂದಿನ ದೇಶೀಯ ಸೈನ್ಯದಲ್ಲಿ ಬಹುಭಾಗ ಬೇಡರೇ ಇದ್ದು, ಬ್ರಿಟೀಷರ ವಿರುದ್ಧ ಹೋರಾಟ ನಡೆಸಿದ್ದರಿಂದ ಬ್ರಿಟೀಷರು, ಸಿಖ್ಖರು, ಗೂರ್ಖಾಗಳನ್ನು ನಂಬಿ ಸೈನ್ಯದಲ್ಲಿ ಸೇರಿಕೊಂಡಂತೆ ಇವರನ್ನು ಸೇರಿಸಲಿಲ್ಲ. ಹೀಗಾಗಿ ಇವರ ಮಹತ್ವ ಕಡಿಮೆಯಾಯಿತು. ಒಟ್ಟಿನಲ್ಲಿ ಬೇಡರು ಬಹುಸಮರ್ಥ ಜನಾಂಗಕ್ಕೆ ಸೇರಿದವರು. ಈಗ ಮಾತ್ರ ತೀರ ಅಸಮರ್ಥರಾಗಿ ಬಾಳಬೇಕಾದ ಸ್ಥಿತಿ ಉಂಟಾಗಿದೆ. ಶೈಕ್ಷಣಿಕವಾಗಿ ಹಿಂದುಳಿದಿರುವುದೇ ಇದಕ್ಕೆ ಮೂಲಭೂತವಾದ ಕಾರಣ.**

**– ಡಾ. ಎಂ.ಬಿ. ನೇಗಿನಾಳ**

# ೧. ಉದ್ಘಾಟನಾ ಭಾಷಣ

ಇಂದಿನ ಈ ಸಮಾರಂಭದ ಅಧ್ಯಕ್ಷರಾಗಿರುವ ಮತ್ತು ನಮ್ಮ ವಿಶ್ವವಿದ್ಯಾಲಯ ದವರೇ ಆಗಿರುವ ಡಾ. ವೀರೇಶ ಬಡಿಗೇರ್ ಅವರೇ, ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಜೆ.ಟಿ. ಪಾಟೀಲ್‌ರವರೇ, ಆರ್.ಎಸ್. ಪಾಟೀಲ್‌ರವರೆ ಮತ್ತು ಪೂಜ್ಯ ಸ್ವಾಮೀಜಿಯವರೇ, ಇದರಲ್ಲಿ ಭಾಗವಹಿಸಿರುವ ಎಲ್ಲ ಪ್ರಬಂಧಕಾರರೇ ಹಾಗೂ ಊರಿನ ಹಿರಿಯರೇ ಸಮೂಹ ಮಾಧ್ಯಮದ ಮಿತ್ರರೆ ಮತ್ತು ಗೆಳೆಯರೆ. ಈ ಕಾರ್ಯಕ್ರಮಕ್ಕೆ ನಮ್ಮ ವಿಶ್ವವಿದ್ಯಾಲಯದ ಎಲ್ಲ ಕುಟುಂಬ ಪಡೆಯನ್ನು ಕರೆದುಕೊಂಡು ಬಂದಿದ್ದೇನೆ. ಬಹಳ ಪ್ರೀತಿಯಿಂದ ನೀವು ನಮ್ಮನ್ನು ಬರಮಾಡಿಕೊಂಡಿದ್ದೀರಾ. ಅದರ ಜೊತೆಗೆ ಅಷ್ಟೇ ಪ್ರೀತಿಯಿಂದ ಸನ್ಮಾನ ಕೂಡ ಮಾಡಿದ್ದೀರಾ. ಇದಕ್ಕಾಗಿ ನಾನು ವೈಯಕ್ತಿಕವಾಗಿ ಹಾಗೂ ವಿಶ್ವವಿದ್ಯಾಲಯದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪ್ರಸ್ತಾವನೆಯ ಸಂದರ್ಭದಲ್ಲಿ ಮಾತನಾಡಿದ ಬೇವಿನಕಟ್ಟಿಯವರು ಹೇಳಿದ ಹಾಗೆ ಇಂತಹ ಸಮಾರಂಭಗಳು ಸಾಕಷ್ಟು ಬೇಕಾಗುತ್ತವೆ ಅಂತ ಅನುಸುತ್ತೆ. ಭಾರತದಂತಹ ವಿಶಾಲ ದೇಶದೊಳಗೆ ನಾವು ವೈವಿಧ್ಯತೆಯನ್ನು ಕಾಣುತ್ತೇವೆ. ಬೇರೆ ಬೇರೆ ಸಮುದಾಯಗಳಿಗೆ ಸೇರಿದ ಜನಾಂಗಗಳ ಜನರನ್ನು ಕಾಣುತ್ತೇವೆ. ಅದರಲ್ಲಿ ಅಭಿವೃದ್ಧಿ ಹೊಂದಿದ ಜನರನ್ನು ಮತ್ತು ತಳಸಮುದಾಯದವರನ್ನು ಕಾಣುತ್ತೇವೆ. ಒಂದು ಕಡೆ ಶಿಷ್ಟ ಸಂಸ್ಕೃತಿ ಇದ್ದರೆ ಇನ್ನೊಂದು ಕಡೆ ತಳಸಮುದಾಯಗಳ ಮುಖಾಮುಖಿ ಎದುರಗುತ್ತದೆ. ಶಿಷ್ಟ ಸಂಸ್ಕೃತಿಗಳ ಜೊತೆಗೆ ತಳಸಂಸ್ಕೃತಿಗಳ ತಲಸ್ಪರ್ಶಿಯ ಅಧ್ಯಯನದ ಅವಶ್ಯಕತೆ ಇದೆ ಎಂಬುದು ನನ್ನ ಭಾವನೆ. ಯಾಕೆಂದರೆ ಶಿಷ್ಟ ಸಂಸ್ಕೃತಿಗಳು ತಮ್ಮದೇ ನಾಗರಿಕ ಮಾರ್ಗವನ್ನು ತುಳಿದುಕೊಂಡು ಹೋಗುತ್ತವೆ. ಆದರೆ ಉಪೇಕ್ಷೆಗೆ ಒಳಪಡುವಂತವು ತಳಸಮುದಾಯಗಳು ಇದರಿಂದ ದೂರ ಉಳಿಯುವ ಸಾಧ್ಯತೆ ಇದೆ. ಈಗಾಗಲೇ ನನ್ನ ಗೆಳೆಯ ಬೇವಿನಕಟ್ಟಿಯವರು ಹೇಳಿದ ಹಾಗೆ ತಳಸಮುದಾಯಗಳನ್ನು ಬೇರೆ ಬೇರೆ ನೆಲೆಯಲ್ಲಿ ಅಧ್ಯಯನ ಮಾಡುವುದು ಅವಶ್ಯಕ. ಒಂದೊಂದು ಸಂಸ್ಕೃತಿಯು ತನ್ನದೇ ಆದ ಜೀವನ ವಿಧಾನವನ್ನು ನಿರ್ಮಿಸಿಕೊಂಡಿರುವಾಗ ಅವುಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಅವಶ್ಯಕತೆ ಕಂಡುಬರುತ್ತದೆ. ಒಂದು ಕಡೆ ವಿವರಣಾತ್ಮಕವಾಗಿ ನೋಡಿದರೆ ಇನ್ನೊಂದು ಕಡೆ ಐತಿಹಾಸಿಕವಾಗಿ ಗಮನಿಸುವುದು ಅಷ್ಟೇ ಅವಶ್ಯಕವಾಗಿರುತ್ತದೆ. ಯಾವುದೇ ಒಂದು ಸಂಸ್ಕೃತಿ ಜಡವಾಗಿ ಇರದೆ ಜಂಗಮವಾಗಿ ಇರುತ್ತದೆ. ಅಂದರೆ ಬದಲಾವಣೆಗೆ ಒಳಪಡುತ್ತಿರುತ್ತದೆ.

ತನ್ನದೇ ಆದ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಪರಿಸರ ಪ್ರತಿ ಸಮುದಾಯಕ್ಕೆ ಇರುತ್ತದೆ. ಹಾಗೇನೆ ಬಾಹ್ಯ ಕಾರಣಗಳಿಂದ ಒತ್ತಾಯ ಪೂರ್ವಕವಾಗಿ ಮಾಡುವ ಬದಲಾವಣೆ, ಮಾನಸಿಕ ಬದಲಾವಣೆಗೆ ಒಳಪಡುವಂತದ್ದು. ಇವುಗಳನ್ನು ನಾವು ಅಧ್ಯಯನಕ್ಕೆ ಒಳಪಡಿಸು ವುದು ಅವಶ್ಯಕ ಅಂತ ಕಾಣುತ್ತದೆ. ಮಾನಸಿಕವಾಗಿ ಒತ್ತಡಗಳು ಬರುವಂತದ್ದು ಒಂದು ರೀತಿಯ ಅನುಕರಣೆಯ ಆಶಯದ ಮೂಲಕ ಬದಲಾವಣೆಗೆ ಒಳಪಡುವಂತದ್ದು ಮತ್ತು ತಾನು ಬದಲಾಗುವಂತದ್ದು.

ಬರಿ ಕೇಂದ್ರಕ್ಕೆ ಸೀಮಿತವಾಗಿರದೆ ಆಯಾ ಪ್ರದೇಶಕ್ಕೆ ಹೋಗಿ ಆಯಾ ಸಮುದಾಯದ ಅಧ್ಯಯನ ಮಾಡುತ್ತಿರುವುದು ಕನ್ನಡ ವಿಶ್ವವಿದ್ಯಾಲಯದ ಗುರಿಯಾಗಿದೆ. ಇದೇ ಒಂದು ಸಮಾರಂಭವನ್ನು ಹಂಪಿಯ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದರೆ ಅದು ಎಷ್ಟರ ಮಟ್ಟಿಗೆ ಸಮುದಾಯಕ್ಕೆ ತಲುಪುತ್ತಿತ್ತು ಅನ್ನುವುದನ್ನು ಕೂಡ ನಾವು ಯೋಚನೆ ಮಾಡಬೇಕಾ ಗುತ್ತದೆ.

ಬದಲಾವಣೆ ಆಗುವುದರ ಜೊತೆಗೆ ತಮ್ಮ ಸಮುದಾಯಗಳು ತಮ್ಮ ಮೂಲ ಸಂಸ್ಕೃತಿ ಯನ್ನು ಎಷ್ಟರಮಟ್ಟಿಗೆ ಉಳಿಸಿಕೊಂಡು ಹೋಗುತ್ತವೆ ಎನ್ನುವಂತದ್ದು ಅಧ್ಯಯನ ಆಸಕ್ತಿಯ ವಿಷಯ. ತಮ್ಮ ಊಟದಲ್ಲಿ, ಉಡುಗೆಯಲ್ಲಿ, ಆಚರಣೆಯಲ್ಲಿ ಬದಲಾವಣೆಯ ಸಂದರ್ಭ ದಲ್ಲಿ ತಮ್ಮ ಮೂಲಸಂಸ್ಕೃತಿಯನ್ನು ಎಲ್ಲಿ ಕಂಡುಕೊಳ್ಳುತ್ತಾರೆ ಎಂಬುದನ್ನು ಗುರುತಿಸಲಿಕ್ಕೆ ಸಾಧ್ಯ. ಇದೇ ವಿಷಯವಾಗಿ ನಮ್ಮ ಬೇವಿನಕಟ್ಟಿಯವರು ಇಲ್ಲಿ ವಿಚಾರ ಸಂಕಿರಣ ಹಮ್ಮಿ ಕೊಂಡಿರುವುದು ತುಂಬಾ ಸಂತೋಷದ ವಿಷಯ ಮತ್ತು ಇದೇ ಸಂದರ್ಭದಲ್ಲಿ ವ್ಯಾಧಚರಿತೆ ಎನ್ನುವ ಪುಸ್ತಕ

ಬಿಡುಗಡೆಯಾಗುತ್ತದೆ, ಅದಕ್ಕೆ ಸಂಬಂಧಪಟ್ಟ ಹತ್ತಾರು ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇದು ಸಮುದಾಯವನ್ನು ತಲುಪಬೇಕಾಗುತ್ತೆ ಓದಿಗೆ ಒಳಪಡ ಬೇಕಾಗುತ್ತದೆ ಆಸಕ್ತರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

ಹಂಪಿ ವಿಶ್ವವಿದ್ಯಾಲಯ ಈ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಸಂತೋಷದ ವಿಷಯ. ಈ ಮೂರು ದಿನದ ಗೋಷ್ಠಿಯಲ್ಲಿ ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಆಚರಣಾತ್ಮಕ ನೆಲೆಗಳ ಬಗ್ಗೆ, ತಳಸಮುದಾಯಗಳು ಮತ್ತು ಆಧುನಿಕ ಜಗತ್ತಿನ ಬಗ್ಗೆ ಮತ್ತು ಸಿಂಧೂರ ಲಕ್ಷ್ಮಣನ ಬಗ್ಗೆ ಮಂಡಿಸುವ ಎಲ್ಲ ಪ್ರಂಬಂಧಗಳು ಚರ್ಚೆಗೆ ಒಳಪಡಲಿ ಮತ್ತು ಪ್ರಬಂಧನಾಕಾರರೂ ಕೂಡ ಕ್ರಿಯಾತ್ಮಕವಾಗಿ ಭಾಗವಹಿಸಬೇಕು ಅಂತ ಹೇಳುವುದರ ಜೊತೆಗೆ ಎಲ್ಲ ಪ್ರಬಂಧಕಾರರನ್ನು ವೈಯಕ್ತಿಕವಾಗಿ ಬರಮಾಡಿಕೊಳ್ಳು ತ್ತೇನೆ. ಪೂಜ್ಯ ಸ್ವಾಮೀಜಿಯವರಿಗೂ ಮತ್ತು ವೇದಿಕೆಯ ಮೇಲಿರುವ ಎಲ್ಲರಿಗೂ ಮತ್ತು ಸಂಶೋಧನಾ ಬಳಗದವರಿಗೂ ಮತ್ತು ಜೆ.ಟಿ. ಪಾಟೀಲ್‌ರವರಿಗೂ, ಅವರ ಅನುಪಸ್ಥಿತಿ ಯಲ್ಲಿ ಜಾರಕಿ ಹೊಳೆಯವರಿಗೂ ನಮಸ್ಕಾರ ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ

* * *

## ೩. ವ್ಯಾಧ ಚರಿತೆ: ಒಂದು ಅವಲೋಕನ

ವ್ಯಾಧ ಚರಿತೆ: ಹೆಸರೇ ಹೇಳುವ ಹಾಗೆ ಇದೊಂದು ವ್ಯಾಧ/ಬೇಡ ಕುಲದ ಚರಿತ್ರೆ ಯನ್ನು ಕಟ್ಟಿಕೊಡುತ್ತಿರುವ ಕೃತಿ. ಚರಿತ್ರೆ ಅಥವಾ ಚರಿತೆ ಹಲವು ಆಯಾಮಗಳಿಂದ ಕೂಡಿದ ಜ್ಞಾನದ ನೆಲೆಗಳನ್ನು ಕಟ್ಟಿಕೊಡುವ ಶಿಸ್ತು, ಅಂದರೆ ಇದೊಂದು ಸಾಗರೋಪಮೆ. ಸಾಗರದ ಮೂಲ ನೆಲವೇ ಅಥವಾ ಜಲವೇ ಎಂಬುದು ಬುದ್ದಿಗೆ ಎಟುಕದ ಉತ್ತರಿಸಲಾಗದ ಉತ್ತರವಾಗುತ್ತದೆ. ಚರಿತ್ರೆಯು ಸಾಗರಕ್ಕೆ ಮೂಲ-ಹಿನ್ನಲೆ ಬೇಟೆಗಾರಿಕೆಯ ನೆಲೆ ಎಂದರೆ ತಪ್ಪಾಗಲಾರದು. ಮನುಷ್ಯ ಸಸ್ಯಾಹಾರದ ಹಂತದಿಂದ ಮಾಂಸಾಹಾರಗಳ ಕಡೆಗೆ ಪಲ್ಲಟ ವಾದಾಗಿನಿಂದ ಚರಿತ್ರೆಯೆಂಬ ಮೊಳಕೆಗೆ ಬೇರುಗಳು ಮೂಡಿದವೆಂದು ಹೇಳಬಹುದು. ಆ ಆರಂಭಿಕ ಹಂತದ ಚರಿತ್ರೆಯ ವಾರಸುದಾರರು ಬೇಡರು. ಇವರ ಸಂಸ್ಕೃತಿಯ ವಿವಿಧ ನೆಲೆಗಳನ್ನು ಶೋಧಿಸುವ ಸಾಹಸವನ್ನು ಪ್ರೊ. ಮಂಜುನಾಥ ಬೇವಿನಕಟ್ಟಿಯವರು "ವ್ಯಾಧ ಚರಿತೆ" ಕೃತಿಯಿಂದ ತೋರಿಸಿಕೊಟ್ಟಿದ್ದಾರೆ.

ವಿವಿಧ ಲೇಖಕರ ಬೇಡ ಸಮುದಾಯ ಕುರಿತ ಲೇಖನಗಳ ಸಂಕಲನ ಇದಾಗಿದೆ. ಬೇಟೆಗಾರಿಕೆ ಮನುಷ್ಯ ಸಂಸ್ಕೃತಿಯ ವಿಕಾಸದ ಎರಡನೆಯ ಹಂತವಾಗಿ ನಿಂತು ಹೋದರೂ ಅದನ್ನೇ ವೃತ್ತಿಯಾಗಿ ತಮ್ಮ ಸಂಸ್ಕೃತಿಯಾಗಿ, ಸಮುದಾಯ ಸೂಚಕವಾಗಿ ಉಳಿಸಿಕೊಂಡವರು ಬೇಡರು ಎಂಬ ಸತ್ಯವನ್ನು ಈ ಕೃತಿಯ ಲೇಖನಗಳು ಅನಾವರಣಗೊಳಿಸುತ್ತವೆ. ಅಲ್ಲದೆ, ಈ ಸಮುದಾಯದ ಉಪಪಂಗಡಗಳ ಅಧ್ಯಯನಗಳ ಕ್ರೋಡೀಕರಣವನ್ನು ಸಂಪಾದಕರಾದ ಡಾ. ಬೇವಿನಕಟ್ಟಿಯವರು ಶಿಸ್ತುಬದ್ಧವಾಗಿ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಇಲ್ಲಿರುವ ಒಟ್ಟಾರೆ ೩೧ ಲೇಖನಗಳಲ್ಲಿ ವ್ಯಾದ ಸಂಸ್ಕೃತಿಯ ಪರಂಪರೆ-ಮೂಲ-ವಿಕಾಸ ಮತ್ತು ವರ್ತಮಾನದ ಸ್ಥಿತಿ-ಗತಿಗಳ ಅವಲೋಕನ ಕಂಡುಬರುತ್ತದೆ. ಅಲ್ಲದೆ ಸಮುದಾಯದ ಅನನ್ಯತೆಯನ್ನು ಪ್ರಾದೇಶಿಕ ಭಿನ್ನತೆಗಳ ಪರಿಚಯ ಈ ಕೃತಿಯಲ್ಲಿ ಕಂಡುಬರುತ್ತದೆ. ಇದರ ಎಲ್ಲ ಲೇಖನಗಳು ಇಂಥ ಹುಡುಕಾಟಗಳಿಗೆ ಆಕರಗಳಾಗಿವೆ.

ಬೇಡರ ಉಪಪಂಗಡಗಳಾದ ವಾಲ್ಮೀಕಿ, ನಾಯಕ, ತಳವಾರ, ಪರಿವಾರ, ಕಂಪಣ, ಮೊಂಡ, ಮ್ಯಾಸಬೇಡ, ಊರುಬೇಡ ಇತ್ಯಾದಿ ಪ್ರಭೇದಗಳಲ್ಲದೆ, ಬೇಡರ ಬೆಡಗುಗಳು ಆಚಾರ ವಿಚಾರಗಳು-ಆರಾಧನೆ-ಆಚರಣೆಗಳು ಮುಂತಾದ ಸಾಂಸ್ಕೃತಿಕ ವಿಶ್ಲೇಷಣೆಗಳ ಅಧ್ಯಯನವನ್ನು ಇಲ್ಲಿನ ಕೆಲವು ಲೇಖನಗಳು ವಿವರಿಸುತ್ತವೆ.

ಬೇಡ ಸಂಸ್ಕೃತಿಯ ವೃತ್ತಿ ಪಲ್ಲಟದ ನೆಲೆಗಳನ್ನು ಯಾವುದೇ ಮುಚ್ಚುಮರೆಗಳಿಲ್ಲದೆ ಆಯಾ ಲೇಖಕರು ಬಿಂಬಿಸಿದ್ದಾರೆ. ಬೇಟೆಗಾರರು ಬೇಟೆಯ ವೃತ್ತಿಯಿಂದ ಪಲ್ಲಟಗೊಂಡು ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಳ್ಳಲು ಯತ್ನಿಸಿದ ಹಂತಗಳು ಮತ್ತು ಅಲ್ಲಿ ಬಂದೊದಗಿದ ಸಂಕಷ್ಟಗಳನ್ನು ಕೃತಿ ಪರಿಚಯಿಸುತ್ತದೆ. ಕಾಡುಮೇಡುಗಳಲ್ಲಿ ಬೇಟೆಯಾಡುತ್ತಾ ಪ್ರಕೃತಿಗೆ ಬದ್ಧರಾದ ಈ ಜನ ಊರಿನ ಸಂಸ್ಕೃತಿಗೆ ಬದಲಾಗಲು ಸಿದ್ಧರಾದಾಗ ಎದುರಿಸಿದ ಸಂಕಷ್ಟ ಗಳನ್ನು ನೆನಪಿಸುವ ದೇವತೆಗಳಾಗಿ ಗಾದೆ-ಒಗಟುಗಳು ಮೂಡಿ ಬಂದುದ್ದನ್ನು ಕೆಲವು ಲೇಖನಗಳು ಹೇಳುತ್ತವೆ. ಹಾಗೆಯೇ ಊರಿನ ನೆಲೆಯ ಸವಲತ್ತುಗಳು ಸಿಗದೆ ಕಾಡಿನ ಆಶ್ರಯವೂ ಇಲ್ಲದೆ ಬಾಳಬೇಕಾದ ಸ್ಥಿತಿಯಲ್ಲಿ ಬೇಡರು ಕಳ್ಳರು, ಕದೀಮರು, ದರೋಡೆ ಕೋರರು ಆಗಿ ಬಾಳಬೇಕಾಗಿ ಬಂದ ಸಾಂಸ್ಕೃತಿಕ ಸನ್ನಿವೇಶವನ್ನು ಹಲವಾರು ಲೇಖನಗಳು ಹೇಳುತ್ತವೆ. ಅಂತೆಯೇ ಇದೇ ಅವರ ವಿಕಾಸದ ಮೆಟ್ಟಿಲುಗಳಾಗಿ ''ವರ''ವಾಗಿ ಪರಿಣಮಿಸಿದ ವಿಚಾರವು ಬಿಂಬಿತವಾಗಿದೆ. ವಿಕಾಸದ ನಾಯಕ, ಪಾಳೆಯಗಾರ, ದೊರೆ, ಪ್ರಭು, ರಾಜ ಇತ್ಯಾದಿ ಚರಿತ್ರೆಯ ಆಡಳಿತಾತ್ಮಕ ಅಧಿಕಾರದ ಹಂತದಿಂದ ಆಳುವ ವರ್ಗವಾಗಿ ನಿಂತ ಸಮುದಾಯದ ಪರಿಶ್ರಮ ಒಂದೆಡೆಯಾದರೆ ದಾರಿದ್ರ್ಯ, ಶೋಷಣೆ, ಅನಾಗರೀಕತೆ, ಬಡತನ, ಅಜ್ಞಾನ ಮತ್ತೊಂದು ಮುಖವಾಗಿ ಸಮುದಾಯವನ್ನು ಕಾಡುತ್ತಿರುವುದನ್ನು ಕೃತಿಯಲ್ಲಿ ಪರೀಶಿಲಿಸಲಾಗಿದೆ.

ಈ ಕೃತಿಯ ಮತ್ತೊಂದು ವಿಶೇಷವೆಂದರೆ ಇಲ್ಲಿನ ಲೇಖನಗಳು ವ್ಯಾಧ ಅಥವಾ ಬೇಡ ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳೇ ಆದರೂ ಅವುಗಳ ಲೇಖಕರು ಹಲವು (ಬೇರೆ-ಬೇರೆ) ಸಮುದಾಯಗಳ ಹಿನ್ನೆಲೆಗಳಿಂದ ಬಂದಂಥವರಾಗಿದ್ದಾರೆ. ಹೀಗೆ ಬೇರೆ ಸಂಸ್ಕೃತಿಗಳ ಹಿನ್ನೆಲೆಗಳುಳ್ಳ ಲೇಖಕರು ಕಟ್ಟಿಕೊಟ್ಟಿರುವ ವಿಚಾರಗಳು ಅಂದಾಭಿಮಾನ-ಅತಿಅಭಿಮಾನ ಎಂಬ ತೆಗಳಿಕೆಗಳಿಂದ ಹೊರತಾದಂಥವುಗಳಾಗಿವೆ. ಕನ್ನಡಿ ಮತ್ತು ಬಿಂಬದ ಸಂಬಂಧ ಇಲ್ಲಿನ ಲೇಖಕ ಮತ್ತು ಲೇಖನಗಳದ್ದಾಗಿದೆ. ಅಂದರೆ ಬೇಡ ಸಂಸ್ಕೃತಿಯನ್ನು ಅನ್ಯ ಸಂಸ್ಕೃತಿಯ ಲೇಖಕರು ತಮ್ಮ ಅನುಭವದ ಆಲೋಚನೆಗಳ ಪರಿಧಿಯ ಆಚೆಗಿನ ಸಂಶೋಧ ನಾತ್ಮಕ ನೆಲೆಯಿಂದ ಅಧ್ಯಯನ ಮಾಡಿ ಚಿಂತನೆಗಳನ್ನು ಬಿಂಬಿಸಿದ್ದಾರೆ. ಇಲ್ಲಿ ಲೇಖಕನೆಂಬ ಕನ್ನಡಿಯಲ್ಲಿ ಬೇಡ/ವ್ಯಾಧ ಸಂಸ್ಕೃತಿಯ ಬಿಂಬ ಮೂಡಿದಂತೆಯೇ ಏಕಕಾಲಕ್ಕೆ ಅಧ್ಯಯನ ಮಾಡುತ್ತಿರುವ ಲೇಖಕನು ಈ ಸಂಸ್ಕೃತಿ ಅಧ್ಯಯನದ ಕನ್ನಡಿಯಲ್ಲಿ ಪ್ರತಿಬಿಂಬವಾಗಿ ಕಂಡುಬರುತ್ತಾನೆ. ಪ್ರೊ. ನೇಗಿನಹಾಳರ ಲೇಖನ ಇರಬಹುದು ಅಥವಾ ಪ್ರೊ. ಕೃಷ್ಣಮೂರ್ತಿ ಹನೂರು, ಪ್ರೊ. ಎಂ.ಜಿ. ಈಶ್ವರಪ್ಪ, ಪ್ರೊ. ಲಕ್ಷ್ಮಣ್ ತೆಲಗಾವಿ, ಎಂ.ಪಿ. ವೀಣಾ, ಬಿ. ತಾರಾಮತಿ ಇವರ ಲೇಖನಗಳನ್ನು ಓದುವಾಗ ಈ ಅನುಭವ ಆಗುತ್ತದೆ ಮತ್ತು ಬೇಡ ಸಮುದಾಯದ ಹಲವು ಲೇಖಕರು ನೀಡಿರುವ ಎಲ್ಲ ಲೇಖನಗಳು ಒಂದಕ್ಕಿಂತ ಒಂದು ವಿಶಿಷ್ಟಪೂರ್ಣವಾಗಿದ್ದು ಸಮುದಾಯದ ಏಕತೆ ಹಾಗೂ ಪ್ರಾದೇಶಿಕ ಭಿನ್ನತೆಗಳನ್ನು ಕಟ್ಟಿ ಕೊಡುವಲ್ಲಿ ಯಶಸ್ವಿಯಾಗಿವೆ.

ಸಂಪಾದಕರಾದ ಬೇವಿನಕಟ್ಟಿಯವರ ಎರಡು-ಮೂರು ಲೇಖನಗಳು ಈ ಕೃತಿಯಲ್ಲಿದ್ದು, ಕರ್ನಾಟಕದ ಬೇಡ ನಾಯಕರ ಅಧ್ಯಯನ ಎಂಬ ಲೇಖನದಲ್ಲಿ ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರದ ಹಿನ್ನೆಲೆಗಳ ಅವಲೋಕನ ಕಂಡುಬರುತ್ತದೆ. ಗ್ರಾಮ ಮತ್ತು ನಗರ ಸಂಸ್ಕೃತಿ, ಕಾಡು ಮತ್ತು ನಾಡಿನ ಸಂಸ್ಕೃತಿ ಭಾರತೀಯ ಜಾತಿ ಪರಂಪರೆ ಹಾಗೂ ಹಿಂದೂ ಜಾತಿ ವ್ಯವಸ್ಥೆ ಇವಿಷ್ಟರ ಹಿನ್ನೆಲೆಗಳಲ್ಲಿ ಲೇಖಕರು ಬೇಡ ಸಮುದಾಯದ ಅನನ್ಯತೆಯನ್ನು ಕಟ್ಟಿ ಕೊಡಲು ಪ್ರಯತ್ನಿಸಿದ್ದಾರೆ. ಅಲ್ಲದೆ ಬಹುಪಾಲು ಅಧ್ಯಯನಗಳನ್ನು ಲೇಖಕರು ಓದಿ ತಮ್ಮ ಬರವಣಿಗೆಗೆ ಸತ್ವ ತುಂಬಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಜನರಿಗೆ ಭವಿಷ್ಯವನ್ನು ಹೇಳುತ್ತಾ ಮಾನಸಿಕ ಸಂಕಷ್ಟಗಳಿಂದ ಬಿಡುಗಡೆಗೊಳಿಸುವ ಕೊಂಡಮಾಮಗಳ ಕುರಿತ ಬೇವಿನಕಟ್ಟಿಯವರ ಲೇಖನ ವಿಸ್ಮಯ ಮೂಡಿಸುವ ಅಧ್ಯಯನವಾಗಿ ಕಂಡುಬರುತ್ತದೆ. ಏಕೆಂದರೆ, ಕೊಂಡಮಾಮ/ಕುರುಮಾಮಗಳು ಮೂಲತಃ ಬೇಡರಾಗಿದ್ದು ಯಾವುದೋ ಒಂದು ಕಾಲಘಟ್ಟದಲ್ಲಿ ಸಮುದಾಯದಿಂದ ಸಿಡಿದುಹೋದವರು ಎಂಬ ಸುಳಿವುಗಳು ಈ ಲೇಖನದಲ್ಲಿವೆ. ಇಂಥದ್ದೇ ಮತ್ತೊಂದು ಲೇಖನ ಚಾಮರಾಜನಗರ ಪರಿಸರದ ಕಂಪಣರು/ಕಂಪಣಬೇಡರನ್ನು ಕುರಿತದ್ದು, ಕಂಪಣರು ಕೂಡ ಬೇಡ ಸಮುದಾಯ ಮೂಲದ ಸಂಬಂಧ ವನ್ನು ಕಟ್ಟಿಕೊಡುವ ನೆನಪುಗಳನ್ನು ಆಚರಣೆಗಳಲ್ಲಿ ಉಳಿಸಿಕೊಂಡಿರುವುದನ್ನು ಲೇಖಕರು ಶೋಧಿಸಿದ್ದಾರೆ.

ಒಟ್ಟಾರೆ ಪ್ರೊ. ವಿವೇಕ ರೈರವರ ಮಾತುಗಳ ಪ್ರಕಾರ ವೇದಪೂರ್ವ ಕಾಲದಿಂದ ಸಮಕಾಲೀನ ಸಂದರ್ಭದವರೆಗೆ ಬೇಡ ಸಮುದಾಯವನ್ನು ಕುರಿತು ವ್ಯಾಪಕ ಕ್ಷೇತ್ರಕಾರ್ಯದ ಮತ್ತು ಅಮೂಲ್ಯ ಮಾಹಿತಿಗಳ ಲೇಖನಗಳು ಇಲ್ಲಿ ಒಟ್ಟು ಸೇರಿವೆ. ಬೇಡ ಸಮುದಾಯದ ಭಿನ್ನ ನೆಲೆಗಳು, ಸಾಂಸ್ಕೃತಿಕ ವೈವಿಧ್ಯಗಳು, ಪ್ರಾದೇಶಿಕ ಭಿನ್ನತೆಗಳು, ಸಾಂಸ್ಕೃತಿಕ ವಿವರಗಳು ಇಲ್ಲಿ ಚರ್ಚಿತವಾಗಿವೆ. ಇಂಥ ಲೇಖನಗಳು ಈ ಸಮುದಾಯದ ಅಭಿವೃದ್ಧಿಯ ರೂಪು-ರೇಷೆಯ ದೃಷ್ಟಿಯಿಂದ ಮುಖ್ಯವಾಗುತ್ತವೆ.

* * *

ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು. ಆದರೆ ಬೇಡರಿಗಿಂತ ಶೂರರು ದೊರೆಯಲಾರರು.

**– ವಿಲಿಯಂ ಸ್ಮಿಥ್**

ಸೀತೆ ಬೇಡರವಳೆಂಬುದಕ್ಕೆ ಹಲವು ಆಧಾರಗಳಿವೆ.

**– ಡಾ. ಜ.ಚ.ನಿ.**

ಬೇಡಬಂಟನಾದ ಸಳನು ಹೊಯ್ಸಳ ರಾಜ್ಯ ಸ್ಥಾಪಿಸಿದನು.

**– ಲಂಕೇಶ ಪತ್ರಿಕೆ**

## ೪. ಅಧ್ಯಕ್ಷೀಯ ಭಾಷಣ

ಈ ಮೂರು ದಿನಗಳ ವಿಚಾರ ಸಂಕಿರಣವನ್ನು ಶ್ರೀ ಶೇಷಪ್ಪಯ್ಯ ಸ್ವಾಮಿಗಳು ತಮ್ಮ ಶ್ರೀಮಠದ ಆವರಣದಲ್ಲಿ ನೆಡೆಸಲು ಸರ್ವಸಹಕಾರವನ್ನು ನೀಡಿದ್ದಾರೆ ಅಂತ ಮಹಾತ್ಮ ರಿಗೆ ನನ್ನ ಮೊದಲ ಶರಣು. ಈವತ್ತಿನ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ನನ್ನಂಥ ಹುಡುಗರ ಮನಸ್ಸಿನಲ್ಲಿ ಬೆಳಕಿನ ಕಿಚ್ಚನ್ನು ಹಚ್ಚಿಸಿದ ನಮ್ಮ ಗುರುಗಳಾದ ಡಾ. ಮುರಿಗೆಪ್ಪ ನವರೇ, ಅನುಪಸ್ಥಿಯಲ್ಲಿರುವ ಚಂದ್ರಶೇಖರ ಕಂಬಾರರವರೇ, ವೇದಿಕೆಯ ಮೇಲೆ ಉಪಸ್ಥಿತ ರಿದ್ದು ಮಾರ್ಗದರ್ಶನದ ಮಾತುಗಳನ್ನಾಡಿದ ಜೆ.ಟಿ. ಪಾಟೀಲರವರೇ, ಆರ್.ಎಸ್. ಪಾಟೀಲ ಸಾಹೇಬರೆ, ಮಂಜುನಾಥ ಬೇವಿನಕಟ್ಟಿಯವರೇ, ಸುರೇಂದ್ರ ನಾಯ್ಕರವರೇ, ಸಿಂಧೂರ ಲಕ್ಷ್ಮಣ ವಂಶಸ್ಥರಾಗಿರುವ ಕುಮಾರ ಕಂಠೀರವರೇ, ಸಮಸ್ತ ನಾಗರೀಕರೆ ಸಂಸ್ಕೃತಿ ಪ್ರೀಯರೇ, ಪತ್ರಿಕಾ ಮಿತ್ರರೆ, ಆರಂಭದಲ್ಲಿ ಕಪ್ಪರಪಡಿಯಮ್ಮನನ್ನು ಕುರಿತಾಗಿ ವಿದ್ಯಾರ್ಥಿಗಳು ಮೈನವಿ ರೇಳುವಂಥ ಪ್ರಾರ್ಥನೆಯನ್ನು ಮಾಡಿಕೊಟ್ಟರು. ಸಾಮಾನ್ಯವಾಗಿ ಏನಾಗುತ್ತದೆಂದರೆ ನಮ್ಮ ಕುಲಪತಿಗಳು ಆ ಮಾತನ್ನು ಬಹಳ ಮಾರ್ಮಿಕವಾಗಿ ಹೇಳಿದರು. ನಾವೆಲ್ಲರು ಸಂಸ್ಕೃತಿ ಸಂಸ್ಕೃತಿ ಅಂತ ಮಾತನಾಡುತ್ತಿರುತ್ತೇವೆ. ಹೇಗೆ ಮಾತಾಡುತ್ತೀವಿ ಅಂದರೆ ನಾವು ಮಾತಾಡುದು ಬಿಟ್ಟರಬಾರದು ಅವರು ಕೇಳೂದು ಬಿಟ್ಟಿರಬಾರದು ಹಾಗೆ ಮಾತಾಡುತ್ತಿರುತ್ತೇವೆ. ನಾಲ್ಕು ಗೋಡೆಗಳ ಎ.ಸಿ. ಛೇಂಬರ್‌ನಲ್ಲಿ ಸಂಸ್ಕೃತಿಯ ಬಗ್ಗೆ ಮಾತಾಡುತ್ತಿರುತ್ತೇವೆ.

ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಎಲ್ಲಿಯವರೆಗೆ ಹಬ್ಬಿದೆ ಎಂದರೆ ಎಲ್ಲಿಯವರೆಗೂ ಕನ್ನಡ ಮಾತನಾಡುವವರು ಇರುವರೋ ಅಲ್ಲಿಯವರೆಗೂ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಹಬ್ಬಿದೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಕನ್ನಡ ವಿಶ್ವವಿದ್ಯಾಲಯವು ಬರೀ ಆವರಣಕ್ಕೆ ಸೀಮಿತವಾಗದೆ ಹೊರಗಡೆ ಬಂದು ಜನರ ಮನಸ್ಸಿನೊಂದಿಗೆ ಬೆರೆಯುವುದೇ ಅವರಿಗೆ ಪರಿಹಾರ ಸೂಚಿಸುವುದೇ ಕನ್ನಡ ವಿಶ್ವವಿದ್ಯಾಲಯದ ಕೆಲಸ. ಸಾಮಾನ್ಯವಾಗಿ ಬೇರೆ ವಿಶ್ವವಿದ್ಯಾಲಯಗಳಿಗೆ ಭೌಗೋಳಿಕ ವ್ಯಾಪ್ತಿ ಇದೆ. ಆದರೆ ಕನ್ನಡ ವಿಶ್ವವಿದ್ಯಾಲಯಕ್ಕೆ ಆ ತರಹ ಇಲ್ಲ. ಇದು ವಿದ್ಯೆಯನ್ನು ಸೃಷ್ಟಿಸುವ ಕೇಂದ್ರ ಇದನ್ನು ಮಾನ್ಯ ಚಂದ್ರಶೇಖರ ಕಂಬಾರರವರು ಹೇಳುತ್ತಾ ಇದ್ದರು. ಇವತ್ತು ಜೆ.ಟಿ. ಪಾಟೀಲರವರು ಹೇಳಿದರು. ಜನಕ್ಕೆ ಎಂತ ವಿದ್ಯಾಬೇಕಾಗಿದೆ ಎಂದು. ತಾಯಿಯ ಉಪಮೆಯನ್ನು ಒಂದು ಮಾರ್ಮಿಕವಾಗಿ ನೀಡಿದರು.

ಆಡಿಬಾ ನನ ಕಂದ ಅಂಗಾಲ ತೊಳೆದೇನು ಅನ್ನುವ ಸಂಸ್ಕೃತಿ ನಮ್ಮದು ಆದರೆ ಇವತ್ತು ಹೆಂಗಾಗಿದೆ ಅಂದರೆ 'ಹೊಡಿ ಮಗ ಹೊಡಿ ಮಗ ಬಿಡಬ್ಯಾಡ ಅವ್ನ' ಅನ್ನು ವಂತಾಗಿದೆ.

ನಮ್ಮದು ಸ್ವಾಭಿಮಾನದ ಸಂಸ್ಕೃತಿ. ಆ ಸಂಸ್ಕೃತಿ ಎಲ್ಲಿರುತ್ತೋ ಅದು ಯಾವಾಗಲೂ ಒತ್ತಡವನ್ನು, ಅವಮಾನವನ್ನು ಸಹಿಸಿಕೊಳ್ಳೋದಿಲ್ಲ. ಆದರೆ ಬ್ರಿಟೀಷರ ಮುಖೇನ ನಮ್ಮ ಸಮುದಾಯದ ಸಂಸ್ಕೃತಿಯನ್ನು ನೋಡಿದ್ದೇವೆ. ಅವರು ಹೇಳಿದ್ದನ್ನು ನಾವು ಯತಾವತ್ತಾಗಿ ಬಾಯಿ ಪಾಠ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಹಲಗಲಿ ಬೇಡರು ಅಂದರೆ ಅವರು ಬಹಳ ಮೊಂಡರು ಜಗಳಗಂಟರು ಎನ್ನುವಂತದ್ದನ್ನು ನಾನು ಬಹಳ ಚಿಕ್ಕವನಿದ್ದಾಗಿನಿಂದಲೂ ಕೇಳಿದ್ದೇನೆ. ಹಲಗಲಿ ಬ್ಯಾಡರು ಅಂದರೆ ಜೀವಕ್ಕೆ ಜೀವ ಕೊಡುತ್ತಾರೆನ್ನುವಂತದ್ದು ಒಂದು ಕಡೆ ಇದೆ. ಸಂಸ್ಕೃತಿಯೊಳಗಡೆ ಒಂದು ಸಮುದಾಯದ ಬಗ್ಗೆ ವ್ಯಾಖ್ಯಾನಗಳಿವು. ಅಂದರೆ ಯಾವುದು ಅವರ ಊಟದ ಮೂಲವಾಗಿತ್ತು ಯಾವುದು ಅವರ ಬದುಕಿನ ಮೂಲವಾಗಿತ್ತು. ಯಾವುದು ಅವರ ಶ್ರಮ ಮತ್ತು ಸಂಸ್ಕೃತಿಯ ಮೂಲವಾಗಿತ್ತೋ ಅದನ್ನು ಬ್ರಿಟಿಷರು ಕಸಿದುಕೊಂಡರು. ೧೮೫೭ರ ದಂಗೆಯಲ್ಲಿ ಬ್ರಿಟೀಷರ ಮೇಲೆ ತಳ ಸಂಸ್ಕೃತಿಗಳು ಬಹಳ ದೊಡ್ಡ ದಾಳಿಯನ್ನು ಮಾಡಿದ್ದವು. ಸುಸಜ್ಜಿತವಾಗಿರುವ ಬ್ರಿಟೀಷ ಸೈನ್ಯಪಡೆಯ ಸಂಸ್ಕೃತಿ ನಮ್ಮ ಹಲಗಲಿ ಸಂಸ್ಕೃತಿ ಮುಂದೆ ಒದ್ದಾಡುತ್ತದೆ. ನಮ್ಮ ಹಲಗಲಿ ಬೇಡರನ್ನು ಬಹಳ ಮೋಸದಿಂದ ವಶಪಡಿಸಿಕೊಳ್ಳುತ್ತಾರೆ.

ಆದರೆ ಯಾವಾಗಲೂ ಶ್ರಮ ಸಂಸ್ಕೃತಿ ಏನುಮಾಡುತ್ತದೆಂದರೆ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳುವ ಇಚ್ಛಾಶಕ್ತಿಯಲ್ಲಿ ಒಂದು ಕಿಚ್ಚನ್ನು ತುಂಬಿರುತ್ತದೆ. ತಳವರ್ಗಗಳು ಯಾವಾಗ ಬೇಕಾದರೂ ಅವಾಗ ಪ್ರತಿಭಟನೆ ಮಾಡಲ್ಲ. ಆ ಪ್ರತಿಭಟನೆಗಳು ಎದ್ದಾಗ ಬಹಳ Force ಆಗಿರುತ್ತವೆ. ಅಂತಹ ಒಂದು ಶಕ್ತಿ ತಳಸಮುದಾಯಗಳಿಗಿದೆ. ಅಂತ ಸಮುದಾಯಗಳನ್ನು ಅಧ್ಯಯನ ಮಾಡಬೇಕಾದರೆ ಸಾಮಾಜಿಕ ಪ್ರಕ್ರಿಯೆ ಮತ್ತು ಸಂಕಥನಗಳ ಮೂಲಕ ಮಾಡಬೇಕಾಗುತ್ತದೆ. ಆ ಸಮುದಾಯದಲ್ಲಿ ಆ ಸಮಾಜದಲ್ಲಿ ಏನೇನು ಚಟುವಟಿಕೆ ಗಳಿವೆ, ಏನೇನು ಸಂಗತಿಗಳಿವೆ ಆ ಮೂಲಕ ನಾವು ಅಧ್ಯಯನ ಮಾಡಬೇಕಾಗುತ್ತದೆ ಹೊರತು ಯಾರೋ ಹಾಕಿಕೊಟ್ಟಂತ ಸಿದ್ಧ ಮಾದರಿಯ ಸಿದ್ಧಾಂತಗಳ ಮೂಲಕ ಅಧ್ಯಯನ ಅಲ್ಲ. ಈಗ ಊರಿಗೆ ಜಾತ್ರೆಗಳಾಗುತ್ತವೆ. ಜಾತ್ರೆಗಳಾಗಬೇಕಾದರೆ ತಳವಾರರು ನಾಯಕರು ಗಳಿಲ್ಲದೆ ಅಥವಾ ಅವರನ್ನು ನೆನೆಯದೆ ಹೋದರೆ ಅದು ಜಾತ್ರೆ ಅನಿಸಿಕೊಳ್ಳಲ್ಲ. ಊರಿನ ಐದು ಮಂದಿ ಪಂಚಾಯಿತಿಯಲ್ಲಿ ಅವರು ಕೂಡ ಒಬ್ಬರಾಗಿದ್ದರು. ಆದರೆ ಶಾನಭೋಗರು ಕುಲಕರ್ಣಿ ಮೂಲಕ ತಳವಾರರನ್ನು ನೋಡುತ್ತೇವೆ ವಿನಃ ತಳವಾರರ ಮೂಲಕ ಶ್ಯಾನಭೋಗ ರನ್ನು ನೋಡಲ್ಲ.

ಇದಕ್ಕೆ ತಳವಾರರು ಊರಿನ ವ್ಯವಸ್ಥೆಯನ್ನು ಕಾಯುವಂತವರಾಗಿದ್ದರು. ಇವರ ಆಯುಧಗಳು ಕೊಡಲಿ ಕುಡುಗೋಲುಗಳಾಗಿದ್ದವು. ಸ್ಥಳೀಯ ಪರಿಕರಗಳೇ ಪ್ರತಿಭಟನೆಯ ಅಸ್ತ್ರಗಳಾಗಿದ್ದವು.
ಇಂತಹ ಸಂಸ್ಕೃತಿಯನ್ನು ನಾವು ಅಧ್ಯಯನ ಮಾಡಬೇಕಾಗಿದೆ. ಕನ್ನಡ ವಿಶ್ವವಿದ್ಯಾಲಯದ ಮುಖ್ಯ ಗುರಿ ಏನೆಂದರೆ, ಅಲಕ್ಷ್ಯವಾಗಿರುವ ಸಮುದಾಯದ ಸಂಸ್ಕೃತಿಯನ್ನು ಒಳನೋಟಗಳ ಮೂಲಕ ನೋಡಿ ಅದರ ಜೊತೆ ಬೆರೆಯಬೇಕಾಗಿದೆ. ಎಲ್ಲೋ ಬಿಳಿ ಆನೆಗಳ ತರಹ ಮೇಲೆ ಕುಳಿತುಕೊಂಡು ಅಧ್ಯಯನ ಮಾಡಿದರೆ ಆಗಲ್ಲ. ಕನ್ನಡ ವಿಶ್ವವಿದ್ಯಾಲಯವು ಜನರ ಹತ್ತಿರ ಹೋಗತಕ್ಕಂತದ್ದು ಜನರ ನಾಡಿ ಮಿಡಿತವನ್ನು ಅಧ್ಯಯನ ಮಾಡುವಂತ ಕೆಲಸವನ್ನು ಮಾಡುತ್ತದೆ. ಬರಿ ಬರಿಯುವುದೊಂದೇ ಕೆಲಸ ಅಲ್ಲ. ಬರೆದಿದ್ದನ್ನು ಓದಿ ಮನವರಿಕೆ ಮಾಡಿಕೊಳ್ಳಬೇಕು. ೧೦-೧೫ ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯ ಈ ಕೆಲಸವನ್ನು ಮಾಡುತ್ತಾ ಬಂದಿದೆ.

ಈ ಆಮಂತ್ರಣ ಪತ್ರಿಕೆಯಲ್ಲಿ ಸ್ಥಳೀಯ ವಿದ್ವತ್ ಪ್ರತಿಭೆಗಳನ್ನು ಜಾಸ್ತಿ ಬಳಸಿ ಕೊಂಡಿದ್ದೇವೆ. ಯಾಕೆಂದರೆ ಅವರಿಗೆ ಈ ವಿಚಾರದ ಆಳ ಅಗಲ ಗೊತ್ತಿರುತ್ತೆ ವಿನಃ ಬೇರೆ ಯಾರೋ ಹೊರಗಿನವರಿಗೆ ಗೊತ್ತಿರಲ್ಲ. ಹೀಗಾಗಿ ನಾವು ಸೇರಿಕೊಂಡಿವಿ ನಮ್ಮೊಂದಿಗೆ ಜನಗಳನ್ನು ಸೇರಿಸಿಕೊಂಡಿದ್ದೇವೆ. ಆದ್ದರಿಂದ ಈ ಮೂರು ದಿನದ ಗೋಷ್ಠಿಯನ್ನು ಸುಖಮಯವಾಗಿ ನೆರವೇರಲು ಅವಕಾಶಮಾಡಿಕೊಟ್ಟ ಸ್ವಾಮಿಗಳಿಗೆ ಊರಿನ ಹಿರಿಯರುಗಳಿಗೆ ನಮಸ್ಕರಿಸುತ್ತಾ ನನಗೆ ಅಧ್ಯಕ್ಷೀಯ ಭಾಷಣ ಮಾಡಲು ಅವಕಾಶ ಒದಗಿಸಿದ ಗೆಳೆಯ ಬೇವಿನಕಟ್ಟಿಗೂ ವಂದನೆಗಳು.

* * *

## ೫. ನಿಶ್ಯಸ್ತ್ರೀಕರಣ ಕಾಯಿದೆ ಮತ್ತು ಹಲಗಲಿ ಬಂಡಾಯ

ಸೂರ್ಯ ಮುಳುಗದ ಸಾಮ್ರಾಜ್ಯ ನಮ್ಮದೆಂಬ ಬ್ರಿಟೀಷರ ಅಹಮ್ಮಿಕೆಯ ಅಭೇದ್ಯ ಕೋಟೆ ಗೋಡೆಯ ಒಂದೆರಡು ಕಲ್ಲುಗಳನ್ನು ಯಾರ ನೆರವಿಲ್ಲದೆ ಸಡಿಲಿಸಿದವರು ಹಲಗಲಿಯ ಬೇಡ ಬಂಟರು. ಅವರು ಕಲಿತವರಲ್ಲ. ಕಾನೂನಿನ ತಿಳುವಳಿಕೆಯೂ ಅವರಿಗಿದ್ದಿದ್ದಿಲ್ಲ. ಯಾವ ಅರಸೊತ್ತಿಗೆಯ, ಪಟೇಲರ, ಸಂಸ್ಥಾನಿಕರ, ದೇಸಾಯಿಗಳ, ದೇಶಪಾಂಡೆಗಳ ನೆರವೂ ಅವರಿಗಿದ್ದಿದ್ದಿಲ್ಲ. ಶಸ್ತ್ರಾಸ್ತ್ರಗಳನ್ನು ಆಂಗ್ಲರಿಗೆ ಒಪ್ಪಿಸುವದೆಂದರೆ ಮಗ್ಗುಲಲ್ಲಿಯ ಹೆಂಡತಿಯನ್ನು ಒಪ್ಪಿಸಿದಂತೆ ಎಂಬುದು ಅವರ ಗಟ್ಟಿಯಾದ ನಿಲುವು. ಒಮ್ಮೆ ಗೆದ್ದು ಮತ್ತೊಂದುಬಾರಿ ಆಂಗ್ಲರ ಪಿತೂರಿಗೆ ಬಲಿಯಾಗಿ, ನೇಣುಗಂಬವೇರಿ ಮಣ್ಣಲ್ಲಿ ಮಣ್ಣಾಗಿ ಹೋದವರು ಇತಿಹಾಸದ ಪುಟಗಳಲ್ಲಿ ತಮ್ಮವೇ ಹೆಜ್ಜೆ ಗುರುತುಗಳನ್ನು ಮೂಡಿಸಿದವರು ಈ ಹಲಗಲಿಯ ಕಲಿಗಳು.

ಒಂದು ಶತಮಾನದ ಅವಧಿಯಲ್ಲಿ ಕಂಪನಿ ಸರಕಾರ ಇಡೀ ಭರತ ಭೂಮಿಯನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು ಸಾಮ್ರಾಜ್ಯ ವಿಸ್ತರಿಸಿದ್ದು ಹಲವು ಕುಟಿಲ ನೀತಿಗಳ ಮೂಲಕ. ರಾಜ ಮನೆತನದಲ್ಲಿ ಗದ್ದುಗೆಗಾಗಿ ಹೋರಾಟ ನಡೆದಾಗ ಮುಂದೊಂದು ದಿನ ತಮಗೆ ಅಪಾಯ ಕಾದಿದೆ ಎಂಬ ಅರಿವೂ ಇರದ ಅರಸರು ಬ್ರಿಟೀಷರಿಂದ ಸೈನಿಕ ಸಹಾಯ ಪಡೆಯುತ್ತಿದ್ದುದು ಕೂಡ ಪ್ರಮುಖ ಅಂಶ. ಸಹಾಯಕ ಸೈನ್ಯ ಪದ್ಧತಿಯ ಮೂಲಕ ನೆರವು ನೀಡಿ, ನೆರವು ಪಡೆದವರ ಖರ್ಚಿನಲ್ಲಿಯೇ ತಮ್ಮ ಸೈನ್ಯದ ಪೋಷಣೆಮಾಡಿ, ಹಲವಾರು ಷರತ್ತುಗಳನ್ನು ವಿಧಿಸಿ, ಷರತ್ತು ಉಲ್ಲಂಘನೆಯಾಯಿತೆಂದು ಕ್ಯಾತೆ ತೆಗೆದು ಆ ರಾಜನನ್ನು ಗದ್ದುಗೆಯಿಂದ ಇಳಿಸುವುದು ಒತ್ತಟ್ಟಿಗಾದರೆ, ಡಾಲ್‌ಹೌಸಿಯ ಸಂದರ್ಭದಲ್ಲಿ ದತ್ತಕ ಪದ್ಧತಿ ರದ್ಧತಿ ಇನ್ನೊಂದು ಬಗೆಯದು. ತಾವು ವಿಧಿಸಿದ ಕಪ್ಪವನ್ನು ನೀಡಲಿಲ್ಲವೆಂದೋ ಅಥವಾ ಹೆಚ್ಚಿಸಲು ಒಪ್ಪಲಿಲ್ಲವೆಂದೋ ಹಲವಾರು ನೆಪವೊಡ್ಡಿ ಸಣ್ಣ ಸಣ್ಣ ರಾಜ್ಯಗಳನ್ನು ಕಂಪನಿ ಸರಕಾರದ ನೇರ ಆಡಳಿತಕ್ಕೆ ಸೇರಿಸಿಕೊಂಡು ಸಾಮ್ರಾಜ್ಯ ವಿಸ್ತರಿಸಿಕೊಳ್ಳಲಾಯಿತು. ಅಂಥ ಸಂದರ್ಭಗಳಲ್ಲೆಲ್ಲಾ ಉಂಬಳಿಗಮಾನ್ಯ, ಪಾಳೆಗಾರಿಕೆ ವ್ಯವಸ್ಥೆಯ ಆ ಕಾಲದಲ್ಲಿ ರಾಜನ, ದಳವಾಯಿಯ ಪ್ರಜೆಗಳು ಸ್ವಾತಂತ್ರ್ಯ ಕಳೆದುಕೊಂಡು ತೀವ್ರ ಅಸಮಾಧಾನಕ್ಕೆ ಒಳಗಾಗಿದ್ದು ಸಹಜವಾಗಿತ್ತು. ಇಲ್ಲಿ ಎಲ್ಲರೂ ಎಲ್ಲರ ವಿರುದ್ಧ ಹೋರಾಟ ಮಾಡುತ್ತಿದ್ದುದರಿಂದ ಬ್ರಿಟೀಷರು ಮಧ್ಯ ಪ್ರವೇಶಿಸಿ, ಮುನ್ನುಗ್ಗಿ ಎಲ್ಲರನ್ನೂ ಸದೆ ಬಡೆಯಲು ಸಾಧ್ಯವಾಯಿತು. ಒಂದು ಬುಡಕಟ್ಟು ಇನ್ನೊಂದು ಬುಡಕಟ್ಟಿನ ವಿರುದ್ಧ, ಒಂದು ಸಮುದಾಯ ಇನ್ನೊಂದು ಸಮುದಾಯದ ವಿರುದ್ಧ ದೇಶದ ವಿವಿಧ ವಿಭಾಗಗಳು ಪರಸ್ಪರ ಪ್ರತ್ಯೇಕತೆ ಹಾಗೂ ದ್ವೇಷಾ ಸೂಯೆ ಹೊಂದಿದ್ದೇ ಅಲ್ಲದೇ, ಅವರು ನಮ್ಮ ದೇಶೀಯ ಸೈನ್ಯವನ್ನೇ ಬಳಸಿ ಹೆದರಿಕೆ, ಬೆದರಿಕೆಯಿಂದ ಆಳಿದರೆಂಬುದು ಇಲ್ಲಿ ಕಟು ಸತ್ಯ.

"ಬ್ರಿಟೀಷರ ಸಾರ್ವಭೌಮತ್ವದ ಅಡಿಪಾಯ ಹಿಂದೂಸ್ಥಾನವೆಂದು ಕರೆಯಲಾಗುವ ಈ ಭೌಗೋಳಿಕ ನೆಲೆಗಟ್ಟಿನೊಳಗೆ ಅಡಕವಾಗಿರುವ ಜನಾಂಗೀಯ, ಬುಡಕಟ್ಟಿನ, ಜಾತಿಯ, ಮತ ಧರ್ಮೀಯ ನಂಬಿಕೆಗಳ ಮತ್ತು ರಾಜ ಮಹಾರಾಜರ ಸ್ವಾಯತ್ತತೆಗಳ ನಡುವಿನ ನಿರಂತರ ವೈವಿಧ್ಯಗಳು ಬ್ರಿಟೀಷ್ ಚಕ್ರಾಧಿಪತ್ಯ ಸ್ಥಾಪನೆಗೆ ನೆರವಾದವು" ಎಂದು ಕಾರ್ಲ್ ಮಾರ್ಕ್ಸ್ ಒತ್ತಟ್ಟಿಗೆ ವಿಶ್ಲೇಷಿಸುತ್ತಾರೆ.

ಈ ದೇಶದ ಸ್ವಾತಂತ್ರ ಹೋರಾಟವು ವಿದ್ರೋಹದ ಹೊಗೆ ಸೂಸುತ್ತಿತ್ತು ಎಂದರೂ ಗಾಂಧೀಜಿ ಮತ್ತು ಕಾಂಗ್ರೆಸ್ ಪಕ್ಷದ ನೇತೃತ್ವದ ಹೋರಾಟಗಳು ಹೇಗೆ ಮುಖ್ಯವೋ ಹಾಗೆಯೇ ೧೮೫೭ ಹಾಗೂ ಅದಕ್ಕಿಂತಲೂ ಮುಂಚೆಯೇ ನಡೆದ ಹೋರಾಟಗಳು ಕೂಡಾ ಅಷ್ಟೇ ಮುಖ್ಯವಾಗುತ್ತವೆ. ೧೮೫೭ ನಮ್ಮ ಪ್ರಥಮ ಸ್ವಾತಂತ್ರ ಸಂಗ್ರಾಮವೆಂದು ನಾವು ಪರಿಗಣಿಸಿದರೂ ಪ್ಲಾಸೀ ಕದನದ ನಂತರ ೧೭೬೯ರಿಂದ ೧೮೫೬ರ ವರೆಗಿನ ಈ ಮಧ್ಯದ ಅವಧಿಯಲ್ಲಿ ಉತ್ತರ ಭಾರತದಲ್ಲಿ ೨೩, ಮುಂಬೈ ಮತ್ತು ಪಶ್ಚಿಮ ಭಾರತದಲ್ಲಿ ೨೩ ಮತ್ತು ದಕ್ಷಿಣ ಭಾಗದಲ್ಲಿ ೧೯ ದಂಗೆಗಳಲ್ಲದೇ ಇನ್ನೂ ಗಣನೆಗೆ ತೆಗೆದುಕೊಳ್ಳುವ ನೂರಾರು ಪ್ರತಿರೋಧಗಳು ನಡೆದು ಹೋಗಿವೆ ಎಂದು ಇತಿಹಾಸಕಾರ ತಿ.ತಾ. ಶರ್ಮಾ ತಮ್ಮ ಪುಸ್ತಕ 'ವಿಕ್ರಾಂತ ಭಾರತ'ದಲ್ಲಿ ಪಟ್ಟಿ ಮಾಡಿ ಹೇಳಿದ್ದಾರೆ. ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ಸುರಪುರದ

ವೆಂಕಟಪ್ಪ, ಸಂತಾಲರು, ಕೊಟ್ಟಾಯಂನ ಕೇರಳವರ್ಮ, ಉತ್ತರ ಆರ್ಕಾಟಿನ ಪಾಳೆಯಗಾರರು, ರಾಯಲ್ ಸೀಮೆಯ ಪಾಳೆಗಾರರು ಇವರೆಲ್ಲ ೧೮೫೭ರ ಪೂರ್ವದ ಪಟ್ಟಿಯಲ್ಲಿ ಸೇರುತ್ತಾರೆ. ಇವೆಲ್ಲವನ್ನು ಕೇವಲ ದೊಂಬಿ, ದಂಗೆ, ಗೆರಿಲ್ಲಾ ಸಮರಗಳೆಂದು ಗುರುತಿಸಿದ್ದರು ಕೂಡಾ ಎಲ್ಲ ದಂಗೆಗಳ ಸ್ವರೂಪ ಒಂದೇ ಬಗೆಯದು. ಅದು ಬಿಳಿಯರಿಗೆ ಆಧೀನರಾಗಿರಲು ಒಲ್ಲದವರು ತಮ್ಮ ಸ್ವಾತಂತ್ರ್ಯ ಉಳಿಸಿಕೊಳ್ಳಲು ನಡೆಸಿದ ಹಣಾಹಣಿ ಹೋರಾಟಗಳು ಎಂಬುದನ್ನು ಮರೆಯಲಾಗದು. ೧೮೫೭ರ ಪ್ರತಿರೋಧ ಇಡೀ ರಾಷ್ಟ್ರವೇ ಎದುರು ಬಿದ್ದ ಪ್ರಮಾಣದ್ದು ಎಂಬುದೇ ಅದರ ವಿಶಿಷ್ಟತೆ. ನಾವು ಹೆಮ್ಮೆ ಯಿಂದ ಹೇಳಿಕೊಳ್ಳುತ್ತಿರುವ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವನ್ನೇ ಸಿಪಾಯಿಗಳ ಬಂಡಾಯ, ದಂಗೆಯಂದು ಮೂದಲಿಸಿದವರು, ಈ ಮೊದಲಿನ ದಂಗೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವದರಲ್ಲಿ ಆಶ್ಚರ್ಯವೇನೂ ಕಾಣದು.

ಮುನ್ನೂರು ಜನರನ್ನು ಹಲಗಲಿ ಬಂಡಾಯದಲ್ಲಿ ಸೆರೆ ಹಿಡಿಯಲಾಯಿತೆಂದು ದಾಖಲಿಸಿ ದರೂ ಕೂಡ ಬೆರಳಣಿಕೆಯಷ್ಟು ಜನರನ್ನು ಗುರುತಿಸಲು ಸಾಧ್ಯವಾಗಿದ್ದು ಮಾತ್ರ ತೀವ್ರ ವಿಷಾದನೀಯ ಸಂಗತಿ. ಬ್ರಿಟೀಷರು ದಂಗೆಗೆ ಸಂಬಂಧಿಸಿದಂತೆ, ಚರಿತ್ರೆಗಳನ್ನು ಬರೆಯಲು ಭಾರತೀಯರಿಗೆ ಕೊನೆಯವರೆಗೂ ಅವಕಾಶವನ್ನು ಕೊಡಲೇ ಇಲ್ಲ. ಐವತ್ತು ವರ್ಷಗಳ ನಂತರ ಸಾವರ್‌ಕರ್ ಅವರು ಕದ್ದು ಮುಚ್ಚಿ ಬರೆದರೆಂದು ಹೇಳಲಾಗುತ್ತಿದೆ. ಆಗ ಚರಿತ್ರೆ ಬರೆದವರೆಲ್ಲಾ ಬ್ರಿಟೀಷರು, ಅವರ ಸೈನ್ಯಾಧಿಕಾರಿಗಳು ಮಾತ್ರ. ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ನಾವು ಅರಿತುಕೊಳ್ಳಬೇಕಾದರೆ ಕೇವಲ ಅವರ ಬರಹಗಳು, ಸರಕಾರಿ ಹಾಗೂ ಮಿಲಿಟರಿ ದಾಖಲೆಗಳ ಮೂಲಕ ಮಾತ್ರ. ಅದು ಜನ ಸಾಮಾನ್ಯರಿಂದ ಸಾಧ್ಯವೇ? ಎಂದು ನಾವು ಕೂಡಾ ಇಲ್ಲಿ ಆಲೋಚಿಸಬೇಕಾಗುತ್ತದೆ. ಅದೇನೇ ಇರಲಿ ಬುಡಕಟ್ಟು ಸಮುದಾಯಗಳಲ್ಲಿ ಪ್ರಬಲ ಸಮುದಾಯವಾಗಿ ಎದ್ದು ಕಾಣುತ್ತಿರುವ ಬೇಡ, ಬೇಡರ, ವಾಲ್ಮೀಕಿ, ನಾಯಕ, ಹೀಗೆ ಹಲವಾರು ಹೆಸರುಗಳಿಂದ ಗುರ್ತಿಸಿಕೊಂಡಿರುವ ಬೇಡ ಸಮುದಾಯದ ಕುರಿತಾಗಿ ಹಾಗೂ ಬ್ರಿಟೀಷರ ನಿಶಸ್ತ್ರೀಕರಣದ ಕಾಯ್ದೆಯ ವಿರುದ್ಧ ನಡೆದ ಹಲಗಲಿ ಬಂಡಾಯದ ಕುರಿತಾಗಿ ನನ್ನೆರಡು ಸಾಲುಗಳು.

೧೮೫೭ರ ಶತಮಾನೋತ್ಸವದ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು (೧೬.೮.೧೯೫೭ರಂದು) ಹೀಗೆ ಹೇಳುತ್ತಾರೆ. **"ನಾವು ನಮ್ಮ ಇತಿಹಾಸದಲ್ಲಿ ಕಲಿಯಬೇಕಾದ ಮುಖ್ಯ ಸಾಧನವೆಂದರೆ ನಮ್ಮನ್ನು ಹೊರಗಿ ನವರು ಯಾರೂ ಜಯಿಸಲಿಲ್ಲ. ನಮ್ಮನ್ನು ಸೋಲಿಗೆ ದೂಡಿದ್ದು ನಮ್ಮ ಆಂತರಿಕ ಶತ್ರುಗಳೇ. ಅಸಾಧಾರಣ ಪೌರುಷ, ಕೆಚ್ಚನ್ನು ಪ್ರದರ್ಶಿಸಿದ, ಎಣಿಕೆಗೆ ಸಿಗದಷ್ಟು ಜನರ (ಎಲ್ಲರ ಕತೆ ಒಂದೇ) ಅಪಾರ ತ್ಯಾಗ ಮತ್ತು ಕಷ್ಟಗಳ ನಿಚ್ಚಳ ಅನುಭವ ೧೮೫೭ರ ಪ್ರಕರಣ ನಮಗೆ ರಾಷ್ಟ್ರೀಯತೆ ಕಲ್ಪನೆಯನ್ನು ನೀಡಿತು ಎಂಬುದು ಅದರ ಮಹತ್ವ, ಬ್ರಿಟೀಷರು ತಾಂತ್ರಿಕವಾಗಿ ನಮಗಿಂತಲೂ ಉತ್ತಮವಾಗಿದ್ದರೆಂದೋ, ಹೆಚ್ಚು ಶಿಸ್ತಿನಿಂದ ಕೂಡಿದ್ದರಿಂದಲೋ ನಾವು ಸೋತವರಲ್ಲ. ಅವರು ನಮ್ಮನ್ನು ತುಳಿಯಲು ಬಳಸಿದ್ದು ನಮ್ಮ ನಾಯಕತ್ವದಲ್ಲಿಯ ಒಡಕು, ಪರಸ್ಪರ ಸಂಚು, ಮತಧರ್ಮಾಧಾರಿತ, ಆರ್ಥಿಕಾಧಾರಿತ, ಜಾತಿ ಆಧಾರಿತ, ಪ್ರಾದೇಶಿಕ ಆಧಾರಿತ ಅಭಿಪ್ರಾಯ ಬೇಧಗಳ ಅತಿರೇಕಗಳ ಮೂಲಕ" ಎಂದು ಬಣ್ಣಿಸುತ್ತಾರೆ.**

ಒಂದು ಮಾತನ್ನಿಲ್ಲಿ ಗಮನಿಸಬೇಕು, ಮಾರ್ಕ್ಸ್‌ವಾದದಲ್ಲಿ ಕ್ರಾಂತಿ ಎಂದರೆ ಅಧಿಕಾರ ವೆನ್ನುವುದು ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಹಸ್ತಾಂತರಗೊಳ್ಳುವುದೇ ಆಗಿದೆ. ೧೮೫೭ರ ಸಂದರ್ಭದಲ್ಲಿ ಊಳಿಗಮಾನ್ಯ ವರ್ಗದಿಂದ ಹೊಸದೊಂದು ವರ್ಗಕ್ಕೆ ಅಧಿಕಾರ ಹಸ್ತಾಂತರವಾಗಬೇಕಾಗಿತ್ತು. ಅದು ಹಸ್ತಾಂತರಗೊಳ್ಳಲು ೧೯೪೭ರವರೆಗೂ ಅಂದರೆ ಒಂದು ಶತಮಾನದಷ್ಟು ಅವಧಿಯನ್ನು ನಾವು ಕಾಯಬೇಕಾಯಿತು. ಯಾವ ಉದ್ದೇಶಕ್ಕಾಗಿ ಗ್ರಾಮೀಣ ಪ್ರದೇಶದ ರೈತರು, ಕೂಲಿಗಳು, ನಿಮ್ನ ವರ್ಗದ, ಅತೀ ಶೋಷಣೆಗೊಳಗಾಗಿದ್ದ ಜನ ೧೮೫೭ರ ಕಾಲಘಟ್ಟದಲ್ಲಿ, ನಂತರ ಗಾಂಧೀಜಿಯ ಕಾಲ ಘಟ್ಟದಲ್ಲಿ ಈ ಸ್ವಾತಂತ್ರ್ಯ ಸಂಗ್ರಾಮದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದರೋ, ಅದು ಸ್ವಾತಂತ್ರ್ಯ ಸಿಕ್ಕು ೬೦ ವರ್ಷಗಳ ನಂತರ, ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನೂರೈವತ್ತು ವರ್ಷಗಳ ನಂತರವಾದರೂ ಅವರ ಉದ್ದೇಶ ಈಡೇರಿದೆಯೇ ಎಂಬುದನ್ನು ಸ್ವಲ್ಪ ಗಂಭೀರವಾಗಿ ಆಲೋಚಿಸಬೇಕಾಗಿದೆ. ಅಭಿವೃದ್ಧಿಯಾದರೂ ಬಡವ ಬಲ್ಲಿದರ ತಾರತಮ್ಯ

ನಿಂತಿಲ್ಲ. ಜಾತಿಯ ಅಟ್ಟಹಾಸ, ಬಡರೈತನ ಆತ್ಮಹತ್ಯೆ, ಕೋಮುಜ್ವಾಲೆ ಹಿಂದಿಗಿಂತಲೂ ಹೆಚ್ಚು ಕಾಣಿಸಿಕೊಳ್ಳುತ್ತಿವೆ ಎಂಬುದು ಸುಳ್ಳೇನಲ್ಲ. ಇಂಥ ವಿಷವರ್ತುಲದಿಂದ ಹೊರಬರಬೇಕು ಎನ್ನುವ ಅವರ ನೂರೈವತ್ತು ವರ್ಷಗಳ ಮಹದಾಶೆ ಇನ್ನೂ ಕೈಕೊಂಡಿಲ್ಲವೆಂಬುವುದು ಬೆಳಕಿಗೆ ಬೆಳಕು ಅಂದಷ್ಟೇ ಸತ್ಯ.

**ಸ್ವಾತಂತ್ರ್ಯ ಸಂಗ್ರಾಮಕ್ಕೆ ಹಲಗಲಿ ಬೇಡರ ಕೊಡುಗೆ**

ರಾಮಾಯಣದ ಮೂಲ ಕರ್ತೃ ಮಹರ್ಷಿ ವಾಲ್ಮೀಕಿಯಿಂದ ಪ್ರಾರಂಭಗೊಳ್ಳುವ ಈ ಸಮುದಾಯದ ಅಧ್ಯಾಯ ರಾಮನ ಬರುವಿಕೆಗಾಗಿ ಬೋರೆ ಹಣ್ಣುಗಳನ್ನಿಟ್ಟುಕೊಂಡು ಕಾಯುತ್ತಿದ್ದ ಶಬರಿ, ಪ್ರತ್ಯಕ್ಷವಾಗಿ ದ್ರೋಣಾಚಾರ್ಯರಿಂದ ಕಲಿಯದಿದ್ದರೂ ಅವರ ಕೃಪೆಯಿಂದಲೇ ಕಲಿತಿದ್ದೇನೆಂಬ ನಂಬಿಕೆಯಿಂದ ಗುರುದಕ್ಷಿಣೆಯಾಗಿ ಹೆಬ್ಬೆರಳನ್ನೇ ಕತ್ತರಿಸಿ ಕೊಟ್ಟ ಮಹಾಭಾರತದ ಏಕಲವ್ಯ, ಶಿವನಿಗಾಗಿ ಭಕ್ತಿಯಿಂದ ಕಣ್ಣನ್ನೇ ಕಿತ್ತುಕೊಟ್ಟ ಶಿವಭಕ್ತ ಬೇಡರ ಕಣ್ಣಪ್ಪ, ಮದ್ದಾನೆಯ ಮದವಡಗಿಸಿದ ಪಾಳೇಗಾರ ಮದಕರಿನಾಯಕ, ಬಿಚ್ಚುಗತ್ತಿ ಭರಮಪ್ಪ ನಾಯಕ, ಸುರಪುರದ ದೊರೆಗಳು, ಆಂಗ್ಲರು ಹೇರಿದ ಶಸ್ತ್ರಾಸ್ತ್ರ ನಿಷೇಧ ಕಾಯ್ದೆಗೆ ಶಸ್ತ್ರ ಚಿಕಿತ್ಸೆ ಮಾಡಿದ ಹಲಗಲಿಯ ಬೇಡರು, ಸಿರಿವಂತಿಕೆ ಕೇವಲ ಜನರ ಕಪಿ ಮುಷ್ಠಿಯಲ್ಲಿ ಕೂಡಿ ಬೀಳದೇ ಅದು ಇಲ್ಲದವರತ್ತ ಹರಿದು ಬರಬೇಕೆನ್ನುವ ಆದರ್ಶ ಹೊತ್ತು ಬಂಡೆದ್ದು, ಪಿತೂರಿಗೆ ಬಲಿಯಾದ ಸಿಂಧೂರ ಲಕ್ಷ್ಮಣ ಇವರೆಲ್ಲ ಈ ಬೇಡ ಸಮುದಾಯದ ನಿರಭ್ರ ನೀಲಾಕಾಶದಲ್ಲಿ ಥಳ ಥಳನೆ ಹೊಳೆಯುವ ನಕ್ಷತ್ರಗಳು. ಹಿಂದುಳಿದ ವರ್ಗಕ್ಕೆ ವರ ನೀಡಿದ 'ಬೈಬಲ್' ಎಂದೇ ಹೆಸರಾದ "ಹಾವನೂರ ವರದಿ"ಯ ಎಲ್.ಜಿ ಹಾವನೂರ, ಬಡ ಮಕ್ಕಳಿಗೆ ಅನ್ನ, ಬಟ್ಟೆ, ವಸತಿಯ ವ್ಯವಸ್ಥೆ ಮಾಡಿ ವಿದ್ಯಾರ್ಜನೆ ಮಾಡಿಸುತ್ತಿರುವ "ನಾಯಕ ಸ್ಟುಡೆಂಟ್ಸ ಫೆಡರೇಶನ್"ನ ರೂವಾರಿಗಳೂ ಹಲವಾರು ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿ ಬೆಳೆಸುತ್ತಿರುವ ಗೋಕಾಕದ ಜಾರಕಿಹೊಳಿ ಸಹೋದರರು ಈ ಸಮುದಾಯದ ಧುರೀಣರೇ ಆಗಿದ್ದಾರೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಸದ್ಯಕ್ಕೆ ಕರ್ನಾಟಕದಿಂದ ಇಬ್ಬರು ಲೋಕಸಭಾ ಸದಸ್ಯರು. ಏಳು ಜನ ವಿಧಾನ ಸಭಾ ಸದಸ್ಯರು (ವಿಸರ್ಜಿತ ವಿಧಾನಸಭೆ), ನಾಲ್ಕು ಜನ ವಿಧಾನ ಪರಿಷತ್ ಸದಸ್ಯರು ಈ ಸಮುದಾಯವನ್ನು ಪ್ರತಿನಿಧಿಸುತ್ತಿದ್ದಾರೆ.

ಬೇಟೆಯಾಡಿಯೇ ಬದುಕು ಸಾಗಿಸುತ್ತಿದ್ದರಿಂದಲೇ ಈ ಸಮುದಾಯಕ್ಕೆ ಬೇಡರೆಂದೂ ವಾಲ್ಮೀಕಿ ಮಹರ್ಷಿ ಇವರ ಮೂಲ ಪುರುಷನಾಗಿದ್ದರಿಂದ ವಾಲ್ಮೀಕಿ ಸಮುದಾಯದವ ರೆಂದೂ, ಊರಿನ ಸಾಮಾಜಿಕ ಆಡಳಿತಾತ್ಮಕ ವ್ಯವಹಾರಗಳಲ್ಲಿ 'ನಾಯಕ'(ಮುಖ್ಯಸ್ಥ)ರಾಗಿ ಪಾಲ್ಗೊಳ್ಳುತ್ತಿದ್ದುದರಿಂದ ನಾಯಕ ಸಮುದಾಯವೆಂದೂ, ಅನೇಕ ಗ್ರಾಮಗಳಲ್ಲಿ ಉಳಿದೆಲ್ಲ ಸಮುದಾಯಗಳು ಅಲ್ಲಿ ಹೊಸದಾಗಿ ಪ್ರವೇಶ ಮಾಡುವ ಮುನ್ನವೇ ಇವರು ಅಲ್ಲಿಯ ಮೂಲ ನಿವಾಸಿಗಳಾದ್ದರಿಂದ ಹೊಸದಾಗಿ ಪ್ರವೇಶ ಮಾಡಿದ ಜನ ಮೊದಲಿದ್ದ ಇವರನ್ನು ಹಳಬರೆಂದು ಕರೆದಿದ್ದರಿಂದ ಒಂದಿಷ್ಟು ಕಡೆ ಇವರನ್ನು ಹಳಬರೆಂದೂ ಗುರ್ತಿಸುತ್ತಾರೆ. ಅಲ್ಲಲ್ಲಿ ಪಾಳೆಯಪಟ್ಟುಗಳನ್ನು ಕಟ್ಟಿಕೊಂಡು ಅದರಲ್ಲಿಯೇ ಪ್ರಬಲರಾಗಿದ್ದವರು ಅಲ್ಲಿಯ ಒಡೆತನವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ಪಾಳೆಯಗಾರರಾಗಿ ಆಡಳಿತ ನಡೆಸಿದವರೂ ಇದೇ ಬೇಡ ಸಮುದಾಯದವರೆಂಬುದನ್ನು ಇತಿಹಾಸದ ಪುಟಗಳಿಂದ ಅರಿಯುತ್ತೇವೆ.

ನಾಯಕ ಸಮುದಾಯವನ್ನು ಅಭ್ಯಾಸಿಸುತ್ತಾ ಹೋದಂತೆ ಗ್ರಾಮನಾಯಕ ಹಾಗೂ ಮ್ಯಾಸನಾಯಕ ಎಂಬ ಎರಡು ಪಂಗಡಗಳು ನಮಗೆ ಎದ್ದು ಕಾಣುತ್ತವೆ. ಗ್ರಾಮನಾಯಕರು ಗ್ರಾಮವನ್ನು ಕಟ್ಟಿಕೊಂಡು, ಕೃಷಿಯನ್ನೇ ಮೂಲ ಉದ್ಯೋಗವನ್ನಾಗಿರಿಸಿಕೊಂಡು, ಬೇಟೆ ಯನ್ನು ಕೇವಲ ಹವ್ಯಾಸವನ್ನಾಗಿ ಇರಿಸಿಕೊಂಡು ಒಂದೆಡೆ ನೆಲೆ ನಿಂತವರಾಗಿರುತ್ತಾರೆ.

ಮ್ಯಾಸ ನಾಯಕರು ಸಂಪೂರ್ಣವಾಗಿ ಅಲೆಮಾರಿಗಳಾಗಿಯೇ ಉಳಿದು, ಬೇಟೆಯನ್ನೇ ಮೂಲ ಉದ್ಯೋಗವನ್ನಾಗಿರಿಸಿಕೊಂಡು, ಎಲ್ಲೋ ಅಷ್ಟಿಷ್ಟು ಕೃಷಿಯನ್ನು ಮಾಡಿಕೊಂಡರೆ ಮಾಡಿಕೊಂಡರು ಇಲ್ಲದಿದ್ದರೆ ಇಲ್ಲ. ಹೀಗಾಗಿ ಮ್ಯಾಸನಾಯಕರು ನಿಂತಲ್ಲಿ ನೆಲೆ ನಿಲ್ಲದ ಅಲೆಮಾರಿಗಳಾಗಿರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

ಈ ಬೇಡ ಸಮುದಾಯದಲ್ಲಿ ಗೋಸಲೇರು, ಗುಜ್ಜಲಾರ, ಮುರಬಲಾರ, ಹೊನ್ನುಂಗುರ, ಹೊನ್ನಛತ್ರ, ಮಲ್ಲಾರ ಹೀಗೆ ಇನ್ನೂ ಹತ್ತು ಹಲವಾರು ಒಳಪಂಗಡಗಳಿದ್ದು ತಮ್ಮದಲ್ಲದ ಪಂಗಡದವರೊಡನೆ ನೆಂಟಸ್ತನ ಮಾಡುತ್ತಾರೆ. ವರದಕ್ಷಿಣೆಯ ಪೆಡಂಭೂತ ಇವರಲ್ಲಿ ಹಣಿಕಿ ಹಾಕಿಲ್ಲ. ಬದಲಿಗೆ ಹೆಣ್ಣಿಗೆ ತೆರವು (ವಧುದಕ್ಷಣೆ) ಕೊಡುತ್ತಾರೆ. (ಇತ್ತೀಚೆಗೆ ನಾಗರಿಕ ಸಮಾಜದ ವರದಕ್ಷಿಣೆಯ ದುರ್ಗಂಧದ ಗಾಳಿ ಈ ಸಮಾಜದ ಮೇಲೂ ಬೀಸಿ ಅವರೂ ಕೂಡ ವರದಕ್ಷಣೆ ಪಡೆಯತೊಡಗಿದ್ದಾರೆಂದು ವಿಷಾದದಿಂದ ಹೇಳುವುದಿಲ್ಲಿ ಅನಿವಾರ್ಯ).

ಮಹಾಭಾರತದಲ್ಲಿ ಅರ್ಜುನನಿಗೆ ಪಾಶುಪತಾಸ್ತ್ರ ನೀಡುವ ಸಂದರ್ಭದಲ್ಲಿ ಸಾಕ್ಷಾತ್ ಶಿವನೇ ಬೇಡನ ರೂಪಧರಿಸಿ ಬಂದಿದ್ದನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಈ ಸಮುದಾಯ ತಮ್ಮ ಭಕ್ತಿಯನ್ನು ಪ್ರಕಟಿಸುವದೂ, ಆರಾಧಿಸುವದೂ ಕೇವಲ ಶಿವನನ್ನಷ್ಟೇ ಅಲ್ಲ, ಶ್ರೀಶೈಲದ ಮಲ್ಲಿಕಾರ್ಜುನನಿಂದ ಹಿಡಿದು ತಿರುಪತಿ ತಿಮ್ಮಪ್ಪ, ಶ್ರೀರಾಮಚಂದ್ರ, ಆಂಜನೇಯ, ದುರ್ಗಾ, ಲಕ್ಷ್ಮಿಯಿಂದ ಹಿಡಿದು ಶಬರಿಮಲೈ ಅಯ್ಯಪ್ಪನವರೆಗೂ ಇವರ ಭಕ್ತಿ ಸಮರ್ಪಣೆ. ಒಂದಿಷ್ಟು ಗ್ರಾಮಗಳಲ್ಲಿ ಹನುಮಂತ ದೇವರ, ದುರ್ಗಾದೇವಿಯ ಅರ್ಚಕರಾಗಿಯೂ ಹಲವಾರು ಕುಟುಂಬಗಳು ಪೂಜೆ ಪುನಸ್ಕಾರ ಮಾಡಿಕೊಂಡು ಹೋಗುತ್ತಿ ರುವುದನ್ನು ನಾವಿಂದು ಕಾಣುತ್ತೇವೆ.

**ಹಲಗಲಿಯ ಬೇಡರು**

ಭಾರತೀಯರು ಹೆಮ್ಮೆಯಿಂದ ಹೇಳಿಕೊಳ್ಳುವ ಸ್ವಾತಂತ್ರ್ಯ ಸಂಗ್ರಾಮಕ್ಕೆ, ಆಂಗ್ಲರು ಮೂದಲಿಸಿದ ಸಿಪಾಯಿಗಳ ಬಂಡಾಯಕ್ಕೆ ತಮ್ಮದೂ ಒಂದಿಷ್ಟು ಕೊಡುಗೆಯನ್ನು, ಕಾಣಿಕೆ ಯನ್ನು ಸಮರ್ಪಿಸಿದ ಹಲಗಲಿಯ ಬೇಡ ಸಮುದಾಯ ಆತ್ಮಾಭಿಮಾನ ಉಳ್ಳವರು. ಆಳ್ತನದಲ್ಲಿ ಗಟ್ಟಿಗರು. ನಿರಂತರ ಬೇಟೆಯಂತಹ ಹೋರಾಟದ ವೃತ್ತಿಯನ್ನೇ ಅವಲಂಬಿಸಿ ಕೊಂಡಿದ್ದ ಅವರು ಬೇಟೆಯಲ್ಲಿ ತಮಗೆ ನೆರವಾಗಲು ಬಗೆ ಬಗೆಯ ಬೇಟೆಯ ನಾಯಿಗಳನ್ನು ಸಾಕಿಕೊಂಡಿದ್ದರು. ಅಂದು ದಟ್ಟವಾಗಿದ್ದ ಕಾಡಿನಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದ ಚಿರತೆಗಳನ್ನು ಕೂಡಾ ಈ ಬೇಡರು ಸಾಕಿದ ನಾಲ್ಕಾರು ಬೇಟೆ ನಾಯಿಗಳು ಸೇರಿಕೊಂಡು ಅಟ್ಟಾಡಿಸಿಕೊಂಡು ಬೇಟೆಯಾಡುತ್ತಿದ್ದವಂತೆ. ದೇಶಾದ್ಯಂತ ಇಂದು ಹೆಸರುವಾಸಿಯಾಗಿರುವ “ಮುಧೋಳ ಬೇಟೆ ನಾಯಿಗಳು” ಎಂದೇ ಕರೆಯಲ್ಪಡುವ ಈ ತಳಿಯ ನಾಯಿಗಳು ಹಲಗಲಿ ಬೇಡರೇ ಸಾಕಿದ ತಳಿಯೇ ಮುಂದುವರೆದುಕೊಂಡು ಬಂದಿದೆ ಎಂಬುದಿಲ್ಲಿ ಗಮನಾರ್ಹ ಅಂಶ. ಬರಬರುತ್ತ ಕಾಡು ಕಡಿಮೆಯಾಗತೊಡಗಿದಂತೆ ಬೇಟೆಯ ವೃತ್ತಿಯನ್ನು ಕೇವಲ ಹವ್ಯಾಸವನ್ನಾ ಗಿರಿಸಿಕೊಂಡು ಈ ಸಮುದಾಯ ಕೃಷಿ ಚಟುವಟಿಕೆಗಳಿಗಿಳಿದಿದ್ದಾಗಿ ತಿಳಿದು ಬರುತ್ತದೆ.

**ಬೇಡರು ಬಳಸುತ್ತಿದ್ದ ಆಯುಧಗಳು**

ಹಲಗಲಿಯ ಬೇಡರು ಬೇಟೆಯಾಡಲು ಬಳಸುತ್ತಿದ್ದ ಆಯುಧಗಳೆಂದರೆ, ಕೈಚೂರಿ, ಕಠಾರಿ, ಬಿಚ್ಚುಗತ್ತಿ, ಬಿಲ್ಲುಬಾಣ, ಚಾಪುಗೊಡಲಿ, ಖಡ್ಗ, ಬಾಕು, ದೂರದಿಂದಲೇ ಕ್ರೂರ ಮೃಗಗಳತ್ತ ಎಸೆಯಲು ಭರ್ಚಿ ಮುಂತಾದವುಗಳು. ಒಂದಿಷ್ಟು ಸ್ಥಿತಿವಂತರು ಕೋವಿಗಳನ್ನು ಇಟ್ಟುಕೊಂಡಿದ್ದರೆಂದು ತಿಳಿದುಬರುತ್ತದೆ. ಕವಣೆಗಲ್ಲು ಬೀಸಿ ಹಾರುವ ಹಕ್ಕಿಯನ್ನೂ, ಓಡುವ ಜಿಂಕೆಯನ್ನೂ ಬೀಳಿಸಿದಂತಹ, ಒಂದು ನೊಗವನ್ನು ಭೂಮಿಗೆ ಲಂಬವಾಗಿ ನಿಲ್ಲಿಸಿ ನೊಗದ ರಂಧ್ರದಲ್ಲಿ ತೂರಿ ಹೋಗುವಂತೆ ಕವಣೆಗಲ್ಲು ಬೀಸುವಂತಹ ನಿಷ್ಣಾತ ಗುರಿಕಾರ ರಾಗಿದ್ದರೆಂದೂ ಗೊತ್ತಾಗುತ್ತದೆ. ಇಂತಹ ಆಯುಧಗಳನ್ನಿಟ್ಟುಕೊಂಡು ಯಾರ ಗೊಡವೆಗೂ ಹೋಗದೇ ತಮ್ಮಷ್ಟಕ್ಕೆ ತಾವು ಬದುಕುತ್ತಿದ್ದ ಬೇಡ ಸಮುದಾಯದ ಸ್ವಾಭಿಮಾನವನ್ನು ೧೮೫೭ರ ಸೆಪ್ಟಂಬರ ೧೧ರಂದು ಬ್ರಿಟೀಷ ಸರಕಾರ ಜಾರಿಗೆ ತಂದ ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ಕೆಣಕಿತಷ್ಟೇ ಅಲ್ಲ, ಸರಕಾರದ ವಿರುದ್ಧ ಬಂಡೇಳುವಂತೆ ಪ್ರಚೋದಿಸಿತು.

**ಬಂಡಾಯದ ಪ್ರಮುಖರು**

ಹಲಗಲಿಯ ಬಂಡಾಯ ಘಟನಾವಳಿಗಳನ್ನು ಅರಿಯುವ ಪೂರ್ವದಲ್ಲಿ ಮುಂಚೂಣಿ ಯಲ್ಲಿ ನಿಂತು ಈ ಬಂಡಾಯವನ್ನು ಮುನ್ನಡೆಸಿ, ಸ್ವಾಭಿಮಾನ ಮೆರೆದ ಈ ಬೇಡ ಸಮುದಾಯದ ಒಂದಿಷ್ಟು ಪ್ರಮುಖರನ್ನು ನೆನಪಿಸಿಕೊಳ್ಳುವುದು ಇಲ್ಲಿ ಹೆಚ್ಚು ಪ್ರಸ್ತುತ ವೆನಿಸುತ್ತದೆ.

೧. **"ಜಡಗಪ್ಪ ಜಡಗನ್ನವರ"** ಹಲಗಲಿಯ ಬಂಡಾಯಕ್ಕೆ ಹಲಗಲಿಯ ಬೇಡರು ಆಂಗ್ಲರ ಶಸ್ತ್ರಾಸ್ತ್ರ ನಿಷೇಧ ಕಾಯ್ದೆಯನ್ನು ಉಲ್ಲಂಘಿಸಲು ಹೊಳವು ಹಾಕಿದವನೇ ಈ ಜಡಗಪ್ಪ. ಬೆಳಗಾವಿ ಜಿಲ್ಲೆಯ ಸತ್ತಿಗೇರಿ ಗ್ರಾಮದಿಂದ ಹಲಗಲಿಗೆ ಈತನ ಪೂರ್ವಜರು ವಲಸೆ ಬಂದಿದ್ದರೆಂದು ಹೇಳಲಾಗುತ್ತಿದೆ. ದೈವಾಂಶ ಸಂಭೂತನಾಗಿದ್ದರಿಂದಲೇ ಸರಕಾರದ ವಿರುದ್ಧ ಬಂಡೇಳುವಂತಹ ಸಾಮರ್ಥ್ಯ ಇವನಿಗೆ ಲಭಿಸಿತ್ತೆಂದು ಹಲಗಲಿಯ ಮುಗ್ದ ಜನರ ನಂಬಿಕೆ. ವಲಸೆ ಬಂದ ಮನೆತನದಲ್ಲಿ ಹುಟ್ಟಿ ಬೆಳೆದ ಜಡಗಪ್ಪ ಹಲಗಲಿಯ ದಟ್ಟ ಅರಣ್ಯ ಪ್ರದೇಶದಲ್ಲಿರುವ ಕಣಿ ಬಸವಣ್ಣನ ದೇವಸ್ಥಾನದ ಪಕ್ಕದಲ್ಲಿ ಒಂದಿಷ್ಟು ಕಾಡನ್ನು ಕಡಿದು, ಕೃಷಿ ಜಮೀನಾಗಿ ಪರಿವರ್ತಿಸಿ, ಉಳುಮೆ ಮಾಡಿಕೊಂಡಿದ್ದನೆಂದೂ, ಬ್ರಿಟೀಷರ ಕಾಟಕ್ಕೆ ಬೇಸತ್ತ ಆತ ಹೊಲದಲ್ಲಿಯೋ, ತೆಗ್ಗಿ ಗ್ರಾಮದ ಸರಹದ್ದಿನಲ್ಲಿರುವ ಗವಿಗಳಲ್ಲಿಯೋ ವಾಸವಾಗಿರುತ್ತಿದ್ದ. ಬ್ರಿಟೀಷರ ವಿರುದ್ಧ ಹೋರಾಟ ನಡೆಸಲು ಅವಕಾಶಕ್ಕಾಗಿ ಕಾಯುತ್ತಿದ್ದ ಈತ ಶಸ್ತ್ರಾಸ್ತ್ರ ನಿಷೇಧ ಕಾಯ್ದೆಯನ್ನೇ ಒಂದು ಪ್ರಬಲ ಅಸ್ತ್ರವನ್ನಾಗಿರಿಸಿಕೊಂಡು ಇಡೀ ಬೇಡ ಸಮುದಾಯವನ್ನು ಸಂಘಟಿಸಿ, ಆಂಗ್ಲರ ವಿರುದ್ಧ ಬಂಡೇಳುವಂತೆ ಪ್ರಚೋದಿಸಿ, ಮೊದಲ ಹಂತದಲ್ಲಿ ಯಶಸ್ವಿಯಾದವ. ಎರಡನೇ ಹಂತದಲ್ಲಿ ಆಂಗ್ಲರಿಗೆ ಸೆರೆಸಿಕ್ಕು ನೇಣಿಗೆ ಕೊರಳೊಡ್ಡಿದವ, ಹಲಗಲಿಯಲ್ಲಿ ಜಡಗಣ್ಣವರ ಎಂಬ ಮನೆತನ ಇಂದಿಗೂ ಇದೆ. ಆ ಕುಟುಂಬದಲ್ಲಿ ಜಡಗಪ್ಪ, ಜಡಗಣ್ಣ ಎಂದು ತಮ್ಮ ಮಕ್ಕಳಿಗೆ ಅತ್ಯಂತ ಪ್ರೀತಿ ಗೌರವದಿಂದ ಹೆಸರಿಡುವುದು ಇಂದಿಗೂ ಕಂಡುಬರುತ್ತದೆ.

೨. **"ಬಾಲಪ್ಪ ಕೊಳ್ಳಣ್ಣವರ"** ಹಲಗಲಿ ಬಂಡಾಯವೆಂದೊಡನೆ ಅಲ್ಲಿ ಕೋಲ್ಮಿಂಚಿನಂತೆ ಕಣ್ಣು ಕೋರೈಸುವ ಮುಖ್ಯವಾದ ಎರಡು ಹೆಸರುಗಳೆಂದರೆ "ಜಡಗಪ್ಪ ಹಾಗೂ ಬಾಲಪ್ಪ". ಈ ಬಾಲಪ್ಪ ಕೊಳ್ಳಣ್ಣವರ ಎಂಬಾತ ಜಡಗಪ್ಪನ ಸೋದರಳಿಯ. ಜಡಗಪ್ಪನ ಸೋದರಿ ರಾಮವ್ವ ಎಂಬಾಕೆಯನ್ನು ಹಲಗಲಿಯ ಪಕ್ಕದ ಗ್ರಾಮ ಅರಕೇರಿಗೆ (ಸದ್ಯಕ್ಕೆ ಬೀಳಗಿ ತಾಲೂಕು) ಮದುವೆ ಮಾಡಿಕೊಡಲಾಗಿತ್ತು. ಆಕೆಯ ಮಗನೇ ಬಾಲಪ್ಪ. ಅರಕೇರಿ ಗ್ರಾಮ ದಲ್ಲಿ ಹಣುಮಂತ ದೇವರ ಪೂಜಾರಿಕೆ ಮಾಡಿಕೊಂಡಿದ್ದ ಮನೆತನ ಇವರದು. ಸೋದರ ಮಾವ ಹಲಗಲಿಯ ಜಡಗಪ್ಪನ ಮನೆಯಲ್ಲಿಯೇ ಬೆಳೆದುಕೊಂಡಿದ್ದ. ಈತ ಸಹಜವಾಗಿಯೇ ಸೋದರ ಮಾವನಂತೆಯೇ ಅಂಗ್ರೇಜಿಯವರ ವಿರುದ್ಧ ಮನದಲ್ಲಿಯೇ ಕ್ರೋಧ ತುಂಬಿ ಕೊಂಡು ಕಿಡಿ ಕಾರುತ್ತಿದ್ದ. ಮಾವ ಬಂಡಾಯದ ಬಾವುಟ ಹಾರಿಸುತ್ತಿದ್ದಂತೆಯೇ ಆತನ ಹೆಗಲಿಗೆ ಹೆಗಲುಕೊಟ್ಟು ನೆರವಾಗಿ ನಿಂತ, ಒಂದರ್ಥದಲ್ಲಿ ಮಾವ ಅಳಿಯ ಲವಕುಶರಂತೆ ಇದ್ದರಂತೆ. ಹೋರಾಟದಲ್ಲಿ ಜೊತೆಜೊತೆಯಾಗಿ ನಿಂತೇ ಶತ್ರುಪಡೆಯ ವಿರುದ್ಧ ಸೆಣಸಿದ ಈ ಜೋಡಿ ನೇಣಿಗೆ ಕೊರಳೊಡ್ಡಿದ್ದು ಕೂಡಾ ಜೊತೆಜೊತೆಯಾಗಿಯೇ ಎಂಬುದು ಸ್ವಾತಂತ್ರ್ಯ ವನ್ನು ಪ್ರೀತಿಸುವವರ ಹೃದಯಾಂತರಾಳದಲ್ಲಿ ನಿರಂತರ ನೆನಪು. ಅರಕೇರಿ ಹಾಗೂ ಹಲಗಲಿ ಗ್ರಾಮಗಳಲ್ಲಿ ಕೊಳ್ಳಣ್ಣವರ ಎಂಬ ಹಲವಾರು ಕುಟುಂಬಗಳು ಇಂದಿಗೂ ಇವೆ. ಸ್ವಾತಂತ್ರ್ಯ ಕ್ಕಾಗಿ ತಮ್ಮ ಹಿರಿಯ ಬಂಧುವನ್ನು ನೆನಪಿಸಿಕೊಳ್ಳುವದೇ ನಮ್ಮ ಸೌಭಾಗ್ಯವೆನ್ನುತ್ತವೆ ಆ ಕುಟುಂಬಗಳು.

೩. **"ಹಣಮಪ್ಪ ಪೂಜೇರ"** ಗೋಕಾಕ ತಾಲ್ಲೂಕಿನ ಕಲ್ಲೊಳ್ಳಿ ಗ್ರಾಮ ಹಣಮಪ್ಪ ಪೂಜೇರನ ಹುಟ್ಟೂರು. ಅಲ್ಲಿ ಈತನದು ಹಣಮಂತ ದೇವರ ಪೂಜಾರಿಕೆ. ಗ್ರಾಮದ ಗೌಡರೊಂದಿಗೆ ಮನಸ್ತಾಪವಾಗಿ ಈತನೂ ಕೂಡಾ ಹಲಗಲಿಗೆ ವಲಸೆ ಬಂದವನೇ. ಅವನ ಪೂರ್ವಾಪರ ಇತಿಹಾಸವನ್ನು ಕೇಳಿಕೊಂಡ ಗ್ರಾಮದ ಪ್ರಮುಖರು ಇಲ್ಲಿಯೂ ಆತನಿಗೆ ಹಣಮಂತ ದೇವರ ಪೂಜಾರಿಕೆಯನ್ನು ಕೊಡಿಸಿದ್ದಲ್ಲದೇ, ಉಪಜೀವನಕ್ಕಾಗಿ ಒಂದಿಷ್ಟು ಜಮೀನನ್ನು ಕೊಟ್ಟಿದ್ದರು. ಜಡಗಣ್ಣವರ ಮನೆತನದ ಹೆಣ್ಣುಮಗಳೊಬ್ಬಳನ್ನು ಆತನಿಗೆ ಮದುವೆ ಮಾಡಿಕೊಟ್ಟಿದ್ದರಿಂದ, ಪೂಜಾರಿಕೆಯು ಲಭಿಸಿದ್ದರಿಂದ ಆತ ಇಲ್ಲಿಯೇ ನೆಲೆನಿಂತ ನಲ್ಲದೇ ಬೀಗರಾದ ಜಡಗಣ್ಣವರ ಬಂಧುಗಳು ಹಾರಿಸಿದ ಬಂಡಾಯದ ಬಾವುಟಕ್ಕೆ ಸೂತ್ರಧಾರನಾಗಿ ತಾನೂ ಕೈ ಜೋಡಿಸಿದ. ಬಂಡಾಯದ ನಂತರ ನಾಲ್ಕನೇ ತಲೆಮಾರಿನ ಪೂಜಾರಿ ಕುಟುಂಬಗಳು ಈಗಲೂ ಹಲಗಲಿಯಲ್ಲಿ ಹಣಮಂತ ದೇವರ ಪೂಜಾರಿಕೆ ವೃತ್ತಿ ಯನ್ನು ಮುಂದುವರಿಸಿಕೊಂಡು ಹೊರಟಿವೆ. ಅಂದು ಪೂಜಾರಿ ಹಣಮಪ್ಪ ಬಳಸುತ್ತಿದ್ದ ಆಯುಧಗಳು ಇದುವರೆಗೂ ಇವರ ಮನೆತನದಲ್ಲಿದ್ದವು. ಇತ್ತೀಚೆಗೆ ಅವುಗಳನ್ನು ಮುರಿಸಿ ಕೃಷಿ ಉಪಕರಣಗಳನ್ನು

ಮಾಡಿಸಿದ್ದಾಗಿಯೂ, ಒಂದನ್ನು ಮಾತ್ರ ಜಗುಲಿಯ ಮೇಲಿಟ್ಟು ಪೂಜಿಸುತ್ತಿರುವುದಾಗಿಯೂ ಈ ಕುಟುಂಬದವರು ಹೇಳುತ್ತಾರೆ. ಈ ದೇಶದ ಸ್ವಾತಂತ್ರ್ಯವೇ ಅವರಿವರ ಕೈಗೆ ಸಿಕ್ಕು, ಹರಿದು ಮುರಿದು, ಮುಕ್ಕಾಗಿ ಹೋಗುತ್ತಿರುವ ಇಂದಿನ ದಿಮಾನ ಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಕೈಗೆತ್ತಿಕೊಂಡ ಆಯುಧಗಳದೇನು ಲೆಕ್ಕಬಿಡಿ ಎಂದು ಹೇಳುವುದಿಲ್ಲಿ ಅನಿವಾರ್ಯ.

**೪. "ಬೇಹುಗಾರ ಭೀಮಪ್ಪ ಚಿಕ್ಕಣ್ಣವರ"** ಜಡಗಪ್ಪ, ಬಾಲಪ್ಪ, ಹಣಮಪ್ಪ, ಇವರ ಜೊತೆಗೇನೆ ಬರುವ ಇನ್ನೊಂದು ಹೆಸರು ಭೀಮಪ್ಪ ಚಿಕ್ಕಣ್ಣವರ ಎಂಬಾತನದು. ಈತ ಊರ ಒಳಹೊರಗೆ ಸುಳಿದಾಡುತ್ತ ಶತ್ರು ಪಕ್ಷದವರ ಚಲನವಲನದ ಮೇಲೆ ನಿಗಾ ಇಟ್ಟು ಹದ್ದಿನ ಕಣ್ಣಿನಿಂದ ಬೇಹುಗಾರಿಕೆ ನಡೆಸುತ್ತಿದ್ದನಂತೆ. ಕೋಟೆಯ ಮೇಲೆ ನಿಂತೇ ಆಂಗ್ಲ ಅಧಿಕಾರಿಯ ಆಗಮನವನ್ನು ಊಹಿಸಿ ಕವಣೆಗಲ್ಲು ಬೀಸಿ ಕುದುರೆಯ ಕಾಲು ಮುರಿದ. ಕುದರೆ ಮುಗ್ಗರಿಸಿದೊಡನೆ ಕೆಳಕ್ಕೆ ಬಿದ್ದ ಅಧಿಕಾರಿಯನ್ನು ಭೀಮಪ್ಪ ಬಂಧಿಸಿದ. ಅಷ್ಟೊತ್ತಿ ಗಾಗಲೇ ಬೇಡರ ಪಡೆಯವರು ಹಲವಾರು ಅಂಗ್ರೇಜಿಯವರ ರುಂಡುಗಳನ್ನುರುಳಿಸಿದ್ದರು. ತನ್ನವರಿಗಾದ ಗತಿಯನ್ನು ಕಂಡು ಆಂಗ್ಲ ಅಧಿಕಾರಿ ಬಾಯಲ್ಲಿ ಹುಲ್ಲುಕಡ್ಡಿ ಕಚ್ಚಿದ. ಹುಲ್ಲು ಕಡ್ಡಿ ಕಚ್ಚಿದನೆಂದರೆ ಶರಣಾಗತನಾಗಿದ್ದಾನೆ ಎಂದರ್ಥ. ಶರಣಾಗತರಾದವರನ್ನು ಕೊಲ್ಲುವಂತಿಲ್ಲ, ಅವರನ್ನು ಕ್ಷಮಿಸಬೇಕೆಂಬುದು ರಣನೀತಿ. ಭೀಮಪ್ಪ ತನ್ನ ರಣನೀತಿ ಪಾಲಿಸಿ ಅವರನ್ನು ಕ್ಷಮಿಸಿದ. ಅಧಿಕಾರಿ ಭೀಮಪ್ಪನನ್ನು ಕೇಳಿದನಂತೆ "ಈ ಊರಿನಲ್ಲಿ ನೀನೇ ಶೂರನೋ? ನಿನಗಿಂತ ಶೂರರಿದ್ದಾರೆಯೋ?" ಎಂಬ ಪ್ರಶ್ನೆಗೆ ಭೀಮಪ್ಪ "ಅಯ್ಯೋ! ನಾನು ಬಾಗ್ಲಾ ಕಾಯುವ ಆಳು, ನಮ್ಮಪ್ಪನಂತಹ ಶೂರರು ಊರೊಳಗಿದ್ದಾರೆ" ಎಂದನಂತೆ. ಪರಿಸ್ಥಿತಿಯ ಗಂಭೀರತೆಯನ್ನು ಅಭ್ಯಾಸಿಸಿದ ಅಧಿಕಾರಿ ಜಿಲ್ಲಾ ಕೇಂದ್ರಕ್ಕೆ ವಾಪಸಾದ. ರಣನೀತಿ ಪಾಲಿಸಿ ಭೀಮಪ್ಪ ಶತ್ರುವಿನ ಜೀವ ಉಳಿಸಿದ. ಹೆಚ್ಚಿನ ಸೈನ್ಯದೊಡನೆ ವಾಪಾಸ್ಸಾದ ಶತ್ರು ಮೋಸದಿಂದ ರಾತ್ರಿಯೇ ಊರಿಗೆ ನುಗ್ಗಿ ಬೆಂಕಿ ಇಟ್ಟು ಹಲವರ ಪ್ರಾಣ ತೆಗೆದು ರಣನೀತಿ ಮುರಿದ. ಆಂಗ್ಲರ ಮೋಸದ ಕೃತ್ಯಕ್ಕೆ ಇದೂ ಒಂದು ಸೇರ್ಪಡೆಯಷ್ಟೇ. ಭೀಮಪ್ಪ ಹಾಗೂ ಆತನ ಅನುಚರರ ಕೈಯಲ್ಲಿ ಹತರಾದ ಆಂಗ್ಲ ಸೈನಿಕರ ಶವಗಳನ್ನು ಜಿಲ್ಲಾ ಕೇಂದ್ರ ಸ್ಥಾನವಾದ ಕಲಾದಗಿಗೆ ಸಾಗಿಸಿ ಅಲ್ಲಿ ಶವ ಸಂಸ್ಕಾರ ಮಾಡಲಾಯಿತು. ಇಂದಿಗೂ ಕಲಾದಗಿ ಯಲ್ಲಿ ಮಡಿದ ಆಂಗ್ಲ ಸೈನಿಕರ ಸಮಾಧಿಗಳು ಹೆಸರಿನೊಂದಿಗೆ ನೋಡಲು ಸಿಕ್ಕುತ್ತವೆ.

**೫. "ರಾಮವ್ವ"** ಜಡಗಪ್ಪನ ಸಹೋದರಿ ರಾಮವ್ವ. ಈಕೆಯನ್ನು ಅರಕೇರಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿದ್ದಾಗಿಯೂ, ಬಂಡಾಯದ ಸಂದರ್ಭದಲ್ಲಿ ವೈರಿಗಳೇ ಮೆಚ್ಚಿ ಅಹುದಹುದೆನ್ನುವಂತೆ ಅಣ್ಣ ಜಡಗಪ್ಪನಿಗೂ, ಮಗ ಬಾಲಪ್ಪನಿಗೂ ಹೆಗಲೆಣೆಯಾಗಿ ನಿಂತು ವೈರಿ ಪಡೆಯನ್ನು ಸದೆ ಬಡೆಯುವಲ್ಲಿ ಅಪ್ರತಿಮ ಸಾಹಸ ಮೆರೆದಳೆಂದು ಹೇಳಲಾಗುತ್ತಿದೆ. ರಾಮವ್ವನ ಜೊತೆಗೆ ಹಣಮವ್ವ, ಲಗಮವ್ವ ಎಂಬ ಮಹಿಳೆಯರು ಕೂಡಾ ಹೋರಾಟದಲ್ಲಿ ಪಾಲ್ಗೊಂಡಿದ್ದಾಗಿ ತಿಳಿದು ಬರುತ್ತದೆ.

**೬. "ಬಾಲಾಜಿ ನಿಂಬಾಳಕರ್"** ಮೂಲತಃ ಹಲಗಲಿಯವನೂ, ಮುಧೋಳ ಸಂಸ್ಥಾನಿಕರ ಕುಲಬಾಂಧವನೂ ಆಗಿದ್ದ ಬಾಲಾಜಿ ನಿಂಬಾಳಕರ್ ಎಂಬಾತ ಮುಧೋಳ ಸಂಸ್ಥಾನದ ದಕ್ಷಿಣ ಭಾಗದ ಕೊನೆಯ ಹಳ್ಳಿ 'ಹೊಸಕೋಟೆ' ಗ್ರಾಮದ ಕಿಲ್ಲೇದಾರನಾಗಿದ್ದ. ಊರ ರಕ್ಷಣೆಗಾಗಿ ಮುಧೋಳ ಸಂಸ್ಥಾನಿಕರು ಕೋಟೆ ಹಾಗೂ ಭವ್ಯವಾದ ಕಿಲ್ಲೆಗಳನ್ನು (ಬತೇರಿ-ಹುಡೆ) ನಿರ್ಮಿಸಿದ್ದರಿಂದ ಈಗಲೂ ಆ ಗ್ರಾಮಕ್ಕೆ ಕಿಲ್ಲಾ ಹೊಸಕೋಟೆ ಎಂದೇ ಕರೆಯ ಲಾಗುತ್ತಿದೆ. ಒಂದಿಷ್ಟು ಸಾಹಸಿಯೂ, ಕಾನೂನು ತಿಳಿದವನೂ ಆಗಿದ್ದ ಈ ಬಾಲಾಜಿ ನಿಂಬಾಳಕರ್ ಈ ಶಸ್ತ್ರಾಸ್ತ್ರ ನಿಷೇಧ ಕಾನೂನು ನಮ್ಮೆಲ್ಲರನ್ನೂ ಕಟ್ಟಿ ಹಾಕುತ್ತದೆಂದು ಅರಿತವ. ಸಂಸ್ಥಾನದಲ್ಲಿ ಒಂದಿಷ್ಟು ಜನ ಈ ಕಾನೂನನ್ನು ಸಹಮತಿಸಿದ್ದರಿಂದ ಒಂದಿಷ್ಟು ಸಿಡಿಮಿಡಿಗೊಂಡವ, ಹೀಗಾಗಿ ಆತನೇ ಖುದ್ದಾಗಿ ಹಲಗಲಿಗೆ ಬಂದು ಬೇಡರನ್ನು ಸಂಘಟಿಸಿ ಕಾನೂನಿನ ಚಿತ್ರಣವನ್ನು ಅವರ ಮುಂದೆ ಇಡುತ್ತಾನೆ. ಅವರನ್ನು ಹುರಿದುಂಬಿಸಿ ಬಂಡಾಯದ ಕಣಕ್ಕಿಳಿಸುತ್ತಾನೆ. ಆದರೆ ಮುಂದೆ ನಡೆದ ಬಂಡಾಯದಲ್ಲಿ ಆತ ಪಾಲ್ಗೊಂಡನೋ, ಇಲ್ಲವೋ ಎಂಬ ಬಗ್ಗೆ ಖಚಿತ ಮಾಹಿತಿ ದೊರಕುತ್ತಿಲ್ಲ.

ಕುತಂತ್ರವೇ ಮೈವೆತ್ತಿ ಇಂಚಿಂಚಾಗಿ ನಮ್ಮನ್ನು ನುಂಗುತ್ತಾ ಬಂದ ಆಂಗ್ಲರು ಶಾಶ್ವತವಾಗಿ ಇಲ್ಲಿ ತಳ ಊರಬೇಕೆನ್ನುವ ಉದ್ದೇಶದಿಂದ ಹೊಸ ಹೊಸ ಕಾನೂನಿನ ಸಂಕೋಲೆಯಿಂದ ನಮ್ಮನ್ನು ಬಿಗಿಯತೊಡಗಿದರು. ಬಿಗಿತವನ್ನು ಸಡಿಲಿಸಿಕೊಳ್ಳಲು ಪ್ರಯತ್ನಿಸಿದ ನಮಗೆ ಆಸೆಯೊಡ್ಡಿದರು, ಹೆದರಿಸಿದರು, ಲಾಠಿಯಿಂದ ಹೊಡೆದರು, ಬೂಟಿನಿಂದ ಒದ್ದರು, ಗುಂಡಿಕ್ಕಿ ಕೊಂದರು, ಗಲ್ಲಿಗೇರಿಸಿ ಅಟ್ಟಹಾಸಗೈದರು.

ಈ ಅಟ್ಟಹಾಸವನ್ನು ಮೆಟ್ಟಿ ನಿಲ್ಲಲು ೧೮೫೭ ಮೇ ೧೦ರಂದು ಉತ್ತರ ಭಾರತದಲ್ಲಿ ಇಂಗ್ಲೀಷರ ವಿರುದ್ಧ ಭಾರತೀಯ ಸೈನಿಕರು ದಂಗೆ ಎದ್ದರು. ಅದುವೇ ನಮ್ಮ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಇತಿಹಾಸದಲ್ಲಿ ನಾವು ದಾಖಲಿಸಿದರೂ ಕೂಡಾ ಅದನ್ನು ತೀರ ಅವಹೇಳನಕಾರಿ ರೀತಿಯಲ್ಲಿ ಆಂಗ್ಲರು "ಅದು ಕೇವಲ ಸಿಪಾಯಿಗಳ ದಂಗೆ" ಎಂದು ಮೂದಲಿಸಿದ್ದು ಕೂಡಾ ಅಷ್ಟೇ ವ್ಯಂಗ್ಯವಾಗಿದೆ. ಈ ದಂಗೆಯನ್ನು ಅವರು ಮೇಲ್ನೋಟದಲ್ಲಿ ಎಷ್ಟೇ ಹಗುರವಾಗಿ ಕಂಡಿದ್ದರೂ ಕೂಡಾ ಕಂಪನಿ ಸರಕಾರ ಆಂತರಿಕವಾಗಿ ಹೆದರಿ ಗಡಗಡ ನಡುಗಿದ್ದು ಕೂಡಾ ಅಷ್ಟೇ ಸತ್ಯ. ಈ ಸಿಪಾಯಿದಂಗೆಯ ಪರಿಣಾಮವೇ ದಕ್ಷಿಣ ಭಾರತದಲ್ಲಿ ಕೂಡಾ ಹೋರಾಟಕ್ಕೆ ರೂಪುಗೊಳ್ಳತೊಡಗಿತು.

ಆದರೆ ಕಂಪನಿ ಸರಕಾರ ತಂದ ಕಾನೂನುಗಳಾದ ದತ್ತಕ ಪದ್ಧತಿ ರದ್ದು, ಸಹಾಯಕ ಸೈನ್ಯ ಪದ್ಧತಿ, ನಿಶಸ್ತ್ರೀಕರಣ ಮುಂತಾವುಗಳ ಬಗ್ಗೆ ತಲೆ ಕೆಡಿಸಿಕೊಳ್ಳದ, ತಮ್ಮಷ್ಟಕ್ಕೆ ತಾವು ಬದುಕುತ್ತಾ ಯಾರ ಗೊಡವೆಗೂ ಹೋಗದ ಜನ, ಶಾಂತಿ ಪ್ರಿಯರಾದ ಹಲಗಲಿಯ ಬೇಡ ಸಮುದಾಯ ಆಂಗ್ಲರ ವಿರುದ್ಧ ಸಮರಕ್ಕಿಳಿದಿದ್ದು ಆತ್ಮಗೌರವ ಎಂಥಾ ಶಾಂತಿ ಪ್ರಿಯರನ್ನೂ ಚುಚ್ಚಿ ಎಬ್ಬಿಸುತ್ತದೆನ್ನುವದಕ್ಕೊಂದು ಉದಾಹರಣೆ.

**ನಿಶ್ಯಸ್ತ್ರೀಕರಣ ಕಾಯ್ದೆ**

೧೮೫೭ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಜಾರಿಗೆ ತಂದ ನಿಶ್ಯಸ್ತ್ರೀಕರಣ ಕಾಯ್ದೆ ಅಥವಾ ಶಸ್ತ್ರಾಸ್ತ್ರ ನಿಯಂತ್ರಣ (Disarnament Act. of 11th Septmber-1857) ಕಾನೂನಿನ ಪ್ರಕಾರ ಇಂಗ್ಲೀಷರಲ್ಲದ, ಭಾರತದಲ್ಲಿ ವಾಸಿಸುವ ಎಲ್ಲರೂ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನು ಕಂಪನಿ ಸರಕಾರಕ್ಕೆ ಒಪ್ಪಿಸಬೇಕು ಅಥವಾ ಹೊಸದಾಗಿ ಶಸ್ತ್ರಾಸ್ತ್ರಗಳನ್ನು ಖರೀದಿಸಬೇಕಾಗಿ ದ್ದಲ್ಲಿ ಕಂಪನಿ ಸರಕಾರದ ಪರವಾನಿಗೆ (ಲೈಸನ್ಸ್) ಪಡೆದುಕೊಳ್ಳಬೇಕು. ಅನುಮತಿ ಇಲ್ಲದೆ ಆಯುಧ ಹೊಂದುವುದು ಮಹಾ ಅಪರಾಧ. ಈ ಕಾನೂನು ಉಲ್ಲಂಘಟನೆಗೆ ಉಗ್ರ ಶಿಕ್ಷೆ ಹಾಗೂ ಭಾರೀ ಮೊತ್ತದ ದಂಡ ಕೂಡಾ. ಇದು ಸ್ವಾಭಿಮಾನಿ ಭಾರತೀಯರನ್ನು ಮಾನಸಿಕ ವಾಗಿ ಕಂಗೆಡಿಸುವಂತಹ ಕರಾಳ ಶಾಸನವಾಗಿತ್ತು.

**"ಹಲಗಲಿಯ ಬಂಡಾಯ"**

೧೮೫೭ ಸೆಪ್ಟೆಂಬರ ೧೧ರಂದು ಜಾರಿಗೊಳಿಸಲ್ಪಟ್ಟ ಈ ಶಸ್ತ್ರಾಸ್ತ್ರ ನಿಷೇಧ ಕಾಯ್ದೆ ಬೆಳಗಾಂವಿ ಮ್ಯಾಜಿಸ್ಟ್ರೇಟ್ ಲೆ.ಕ.ಜೆ.ಬಿ. ಸೆಟನ್‌ಕರನ ಮೂಲಕ ಮುಧೋಳ ಸಂಸ್ಥಾನಕ್ಕೂ ಬಂದು ತಲುಪಿತು. ಸಂಸ್ಥಾನದಲ್ಲಿಯ ಕೆಲ ಸ್ವಾಭಿಮಾನಿ ಸೈನಿಕರು ಮೊದಮೊದಲು ಈ ಕಾನೂನನ್ನು ವಿರೋಧಿಸಿದರು ಕೂಡಾ ಪರಿಸ್ಥಿತಿಯೊಡನೆ ರಾಜಿ ಮಾಡಿಕೊಂಡು ಶಸ್ತ್ರಾಸ್ತ್ರ ಗಳನ್ನು ಒಪ್ಪಿಸಿಬಿಟ್ಟರು. ಇಲ್ಲಿ ಕುಂದರಗಿಯ ಕೃಷ್ಣರಾವ್ ಎಂಬ ಕಾರಭಾರಿ ಅತ್ಯಂತ ಚುರುಕಿನಿಂದ ಈ ರಾಜಿ ಕಾರ್ಯ ನಿಭಾಯಿಸಿದ್ದು ಭಯ, ಅಧಿಕಾರ, ಆಮಿಷಕ್ಕೊಳಗಾದ ಜನ ಆತ್ಮಗೌರವವನ್ನು ಹೇಗೆ ಒತ್ತೆ ಇಡುತ್ತಾರೆನ್ನುವದಿಲ್ಲಿ ಎದ್ದು ಕಾಣುತ್ತದೆ.

ಶಸ್ತ್ರಾಸ್ತ್ರಗಳನ್ನು ಕಂಪನಿ ಸರಕಾರಕ್ಕೆ ಒಪ್ಪಿಸಬೇಕೆನ್ನುವ ಸೂಚನೆ ಹಲಗಲಿಗೂ ಬಂತು. ಶಸ್ತ್ರಾಸ್ತ್ರಗಳಿಂದ ಬೇಟೆಯನ್ನೇ ಮೂಲ ಉದ್ಯೋಗವನ್ನಾಗಿರಿಸಿಕೊಂಡು ಬದುಕುತ್ತಿದ್ದ ಹಲಗಲಿಯ ಬೇಡ ಬಂಟರಿಗೆ ಈ ಸೂಚನೆ ಅಪಥ್ಯವೆನಿಸಿತು. ಸೂಚನೆಯನ್ನು ಮೊದ ಮೊದಲು ನಯವಾಗಿ ತಳ್ಳಿ ಹಾಕಿದರು. ಕೃಷ್ಣರಾವ್ ಹಲವಾರು ಬಾರಿ ಸಂಧಾನಕ್ಕೆ ಯತ್ನಿಸಿದ. ಜಗ್ಗಿದಷ್ಟೂ ಸಂಧಾನದ ಹಗ್ಗ ಕಗ್ಗಂಟಾಗತೊಡಗಿತು. ಕೊನೆಗೂ "ಹತ್ಯಾರ ಕೊಡಲಾಕ ಹೆಂಗಸಾಗಿ ಬಳಿ ಇಟ್ಟಿಲ್ಲ ಕೈಯಾಗ/ಯಾಕ ಬಂದಿರಿ/ಜೀವ ಹೋದರು ಕೊಡುವುದಿಲ್ಲ ಸುಮ್ಮನ್ ಹೋಗರಿ ಈಗ" ಎಂದು ಸಾರಾಸಗಟಾಗಿ ತಿಸ್ಕರಸಿದ ಬೇಡರಪಡೆ ದೇಶ ಪ್ರೇಮಿಗಳ ಎದೆಯನ್ನು ಈ ಕೆಳಗಿನ ಮಾತುಗಳಿಂದ ಚುಚ್ಚುತ್ತದೆ.

"ಮಗ್ಗಲದಾಗಿನ ಹೇಣತಿ ಕೊಟ್ಟಹಂಗ ಹೇಡಿ ಆದೇವ ಅಲ್ಲಾ/ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಅದೀತಲ್ಲಾ" ಎಂದು ಹೇಳುತ್ತಾ ಕೈಯಲ್ಲಿಯ ಆಯುಧಗಳನ್ನು ಕೊಡುವು ದೆಂದರೆ, ಮಗ್ಗುಲಲ್ಲಿದ್ದ ಹೆಂಡತಿಯನ್ನೇ ಕೊಟ್ಟಂತೆಂದು ಪೌರುಷತನದಿಂದ ಆಂಗ್ಲರ ಸವಾಲನ್ನು ಸ್ವೀಕರಿಸುತ್ತಾರೆ.

ಎಲ್ಲೆಲ್ಲಿ ಸಾಹಸ ಕಾರ್ಯಗಳು ಜರುಗುತ್ತಿದ್ದವೋ ಅಲ್ಲೆಲ್ಲಾ ನೆರವು ನೀಡುತ್ತಾ, ಎಲ್ಲರೊಂದಿಗೂ ಬೆಲ್ಲದಂತಿದ್ದ ಹಲಗಲಿಯ ಮುಗ್ಧ ಬೇಡರ ಮನೋಭಾವನೆಯನ್ನು ಆತ್ಮಾಭಿಮಾನವನ್ನು ತಪ್ಪಾಗಿ ಅರ್ಥೈಸಿಕೊಂಡ ಕಂಪನಿ ಸರಕಾರ, ಇವರ ಮನೋಭಾವನೆ ಯನ್ನು ಸರಕಾರಕ್ಕೆ ಸರಿಯಾದ ರೀತಿಯಲ್ಲಿ ವಿವರಿಸಲಾರದ ಮಧ್ಯವರ್ತಿಗಳ ವೈಫಲ್ಯ, ೧೮೫೭ ನವೆಂಬರ್ ೨೯ರಂದು ೬೦೦ ಅಶ್ವದಳ ಸೈನಿಕರೊಂದಿಗೆ ಮಧ್ಯರಾತ್ರಿಯಲ್ಲಿ ಹಲಗಲಿಯ ಮೇಲೆ ನುಗ್ಗಲು ಕಾರಣವಾಯಿತು. ಇವರದಾಳಿಗೆ ಹೆದರದ ಬೇಡರ ಪಡೆ ಆಂಗ್ಲರ ಮೇಲೆ ಮುಗಿಬಿದ್ದು ಪ್ರತಿ ಗುಂಡಿನ ಮಳೆಗರೆದರು. ಭರ್ಚಿ ಎಸೆದರು. ಕವಣೆಗಲ್ಲು ತೂರಿದರು. ಕುದುರೆಗಳ ಕಾಲು ಕಡಿದರು. ಉಭಯ ಬಣಗಳಲ್ಲಿ ಅಪಾರ ಸಾವು ನೋವು ಸಂಭವಿಸಿದರೂ ಬೇಡರ ಪಡೆ ಧೈರ್ಯ ಕಳೆದುಕೊಳ್ಳಲಿಲ್ಲ. ಅಪಾಯವನ್ನರಿತ ಲೆ.ಕ. ಸೆಟನ್‌ಕರ ಹೆಚ್ಚಿನ ಸೈನ್ಯಕ್ಕಾಗಿ ವಿನಂತಿಸಿಕೊಂಡಾಗ ಮರುದಿನವೇ ಲೆ.ಕ. ಮಾಲ್ಕಂ ಹೆಚ್ಚಿನ ಸೈನ್ಯದೊಂದಿಗೆ ನೆರವಿಗೆ ಧಾವಿಸಿದ. ಆಧುನಿಕ ಶಸ್ತ್ರಾಸ್ತ್ರ, ಅಪರಿಮಿತ ಬಲ ತಮ್ಮ ಮೇಲೆ ಬಂದೆರಗುತ್ತಿದ್ದರೂ ಹೆದರದೆ ಪ್ರತಿದಾಳಿ ಮಾಡಿದರು. ಈ ಪ್ರತಿ ದಾಳಿಯಲ್ಲಿ ಫಸ್ಟ್ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟ್ ವಿಲಿಯಂ ಹೆನ್ರಿ ಹೆವಲಾಕ್ (ಜಾನಪದರ ಆಡು ಭಾಷೆಯಲ್ಲಿ ಹೆಬಲಿಕ್) ಗುಂಡೇಟಿನಿಂದ ಅಸುನೀಗಿದ. ಯಾರೂ ಹಿಂದೆ ಸರಿಯದ ಈ ಸಮರದಲ್ಲಿ ಅಸಂಖ್ಯಾತ ಸಾವು ನೋವು ಸಂಭವಿಸಿದವು. ಹೆಣಗಳ ರಾಶಿಯೇ ಬಿದ್ದಿತು. ರಕ್ತ ಕಾಲುವೆಯಾಗಿ ಹರಿಯಿತು. ಪೂಜಾರಿ ಹಣಮಪ್ಪ, ಜಡಗಾ, ಬಾಲಾ, ರಾಮ, ಭೀಮ ಬೇಡರ ಪಡೆಯ ಮುಂಚೂಣಿಯಲ್ಲಿ ನಿಂತು ಹುರುಪು ತುಂಬುತ್ತಾ ಆದೇಶ ನೀಡುತ್ತಿದ್ದರು. ಇವರೆಲ್ಲರಿಂದ ಸೈ ಎನ್ನಿಸಿಕೊಂಡು ಶತ್ರುಗಳಿಗೆ ಮಾರಣಾಂತಿಕ ಪೆಟ್ಟುಕೊಟ್ಟು, ಹಣ್ಣಗಾಯಿ, ನೀರುಗಾಯಿ ಯಾಗಿ ಹೋದವಳು ರಾಮವ್ವ ಎಂಬ ಮಹಿಳೆ, ಜಡಗಪ್ಪನ ಸಹೋದರಿ, ಬಾಲಪ್ಪನ ತಾಯಿ, ಸಮಬಲದ ಈ ಹೋರಾಟದಲ್ಲಿ ಯಾರೂ ಗೆಲ್ಲಲಿಲ್ಲ. ಯಾರೂ ಸೋಲಲಿಲ್ಲ.

ಕುತಂತ್ರಕ್ಕೆ ಇನ್ನೊಂದು ಹೆಸರೇ ಆಗಿರುವ ಆಂಗ್ಲರು ಸರಿ ರಾತ್ರಿಯಲ್ಲಿ ಊರಿಗೆ ಕೊಳ್ಳಿ ಇಟ್ಟರು. ಮದ್ದಿನಮನೆಗೆ ಸೆಗಣಿ ಇಟ್ಟರು, ಊರು ಹೊತ್ತಿ ಉರಿಯತೊಡಗಿತು. ಮಕ್ಕಳ ಚೀತ್ಕಾರ, ದನಕರುಗಳ ಅಂಬಾ ಎಂಬ ಆರ್ತನಾದಕ್ಕೆ ಓ ಗೊಟ್ಟು ಅವುಗಳ ರಕ್ಷಣೆಗೆ ಧಾವಿಸಿದ ಎಲ್ಲರನ್ನೂ ಕ್ರೂರಿ ಆಂಗ್ಲರು ಗುಂಡಿಕ್ಕಿಕೊಂದರು. ಅವರ ಕ್ರೂರತನಕ್ಕೆ ಇನ್ನೊಂದು ನಿದರ್ಶನವೆಂದರೆ ಪ್ರತಿ ದಾಳಿ. ದಾಳಿ ನಡೆಸಲು ಆಂಗ್ಲ ಸೈನಿಕರ ಬರುವಿಕೆಯ ಹಾದಿಕಾಯುತ್ತಾ ಹತ್ತಿಕಟ್ಟಿಗೆಯಲ್ಲಿ ಬಚ್ಚಿಟ್ಟುಕೊಂಡ ಇಪ್ಪತ್ಮೂರು ಜನರು, ಆಂಗ್ಲರು ಹತ್ತಿ ಕಟ್ಟಿಗೆಗೆ ಬೆಂಕಿ ಹಚ್ಚಿದ್ದರಿಂದ ಒಟ್ಟಿಗೆ ಸುಟ್ಟು ಕರಕಲಾದ ದೃಶ್ಯ. ಊರನ್ನೆಲ್ಲ ಲೂಟಿ ಮಾಡಲಾಯಿತು. ಶಸ್ತ್ರ, ಆಭರಣಗಳಷ್ಟೇ ಅಲ್ಲ, ತಿಂಬುಂಬುವ ದಿನಸುಗಳನ್ನು ಸೂರೆಮಾಡಲಾಯಿತು ಎಂದು ಲಾವಣಿಕಾರರು ಹೀಗೆ ವರ್ಣಿಸುತ್ತಾರೆ. "ಕತ್ತಿ ಕುದರಿ ಮುತ್ತು ಮಾಣಿಕಾ ಯಾವುದು ಬಿಡಲಿಲ್ಲಾ/ಬೆಳ್ಳಿ ಬಂಗಾರ ಹರಳಿನ ಉಂಗುರ ಹೊನ್ನ ಉಂಗುರ ಗೋಲಾ, ಕುಬಸಾ, ಸೀರಿ ಹಪ್ಪಳ ಶೆಂಡಿಗೆ, ಕುರ್ಚಿಗಿ, ಕುಡಗೋಲಾ/ಕೊಡಲಿ ಕುಂಟಿ ಕುಡ ಕಬ್ಬಿಣ ಮಸರು ಬೆಣ್ಣೆ ಹಾಲಾ".

ಈ ಸಮರದಲ್ಲಿ ಮೂನ್ನೂರಕ್ಕೂ ಹೆಚ್ಚಿನ ಜನರನ್ನು ಬಂಧಿಸಿ ೧೮೫೭ನೇ ಡಿಸೆಂಬರ್ ೧೧ರಂದು ಮೂಧೋಳದ ಸಂತೆ ಸೇರುವ ಸ್ಥಳದಲ್ಲಿ ೧೯ ಜನರನ್ನೂ, ಡಿಸೆಂಬರ ೧೪ರಂದು ಹಲಗಲಿಯಲ್ಲಿ ೧೩ ಜನರನ್ನೂ ಗಲ್ಲಿಗೇರಿಸಲಾಯಿತು.

ಅಂದು ಆಂಗ್ಲರು ಹಲಗಲಿಯ ಮೇಲೆ ದಾಳಿ ನಡೆಸಲು ಜಿಲ್ಲಾ ಕೇಂದ್ರ ಕಲಾದಗಿಯಿಂದ ದಂಡು (ಸೇನೆ) ತೆಗೆದುಕೊಂಡು ಬಂದ ಹಾದಿಯನ್ನು ಇಂದಿಗೂ ಹಲಗಲಿಯಲ್ಲಿ ದಂಡಿನ ಹಾದಿ ಎಂದೇ ಕರೆಯುತ್ತಾರೆ. ಸಮರ ನಡೆದ ಸ್ಥಳದಲ್ಲಿ ರಕ್ತ ಚಲ್ಲಾಡಿದ ಹೊಲಗಳಿಗೆ ರಗತ (ರಕ್ತ) ಮಾನೆ ಎಂದು ಕರೆಯುತ್ತಾರೆ.

ಯಾವ ಅರಸೊತ್ತಿಗೆಯ, ಸಂಸ್ಥಾನಿಕರ ನೆರವಿಲ್ಲದೇ, ಕೇವಲ ತಮ್ಮ ಆತ್ಮಗೌರವಕ್ಕೆ, ಸ್ವಾಭಿಮಾನಕ್ಕೆ ಕೈಹಚ್ಚಿದ ಆಂಗ್ಲರ ವಿರುದ್ಧ ಸಮರ ಸಾರಿ ಮಣ್ಣಲ್ಲಿ ಮಣ್ಣಾಗಿ ಇಂದಿಗೆ ೧೫೦ ವರ್ಷ ಸಾಗುತ್ತಿದೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಮೂಲ್ಯ ಕೊಡುಗೆ ನೀಡಿ, ಇತಿಹಾಸದ ಪುಟಗಳಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿ ಚಿರಸ್ಮರಣೀಯರಾದ ಇವರನ್ನು ಕಡೆಗಣಿಸದೇ ನೆನಪಿಸಿಕೊಳ್ಳಬೇಕಾದದ್ದು ನಮ್ಮ ಆದ್ಯ ಕರ್ತವ್ಯ ತಾನೇ?

**ಗ್ರಂಥ ಋಣ**


೧. "ಪ್ಲೀಟರು ಸಂಗ್ರಹಿಸಿದ ಲಾವಣಿಗಳು"-ಸಂ.ಕ್ಯಾತನಹಳ್ಳಿ ರಾಮಣ್ಣ

೨. "ಹಲಗಲಿ ಗ್ರಾಮದ ಜಾನಪದ"-ಡಾ. ಶ್ರೀರಾಮ ಇಟ್ಟಣ್ಣವರ,

೩. "Indian Antiquary" XVI volume Page-356 (The Bedas of Halagali)

೪. "ನಿಶ್ಯಸ್ತ್ರೀಕರಣಕ್ಕೆ ಹಲಗಲಿಯಲ್ಲಿ ಶಸ್ತ್ರ ಚಿಕಿತ್ಸೆ"-ಪ್ರಜಾವಾಣಿ ಕರ್ನಾಟಕ ಪುರವಣಿ ೧೦ ಡಿಸೆಂಬರ ೧೯೯೪ ಲೇಖಕ ವೀರೇಂದ್ರ ಶೀಲವಂತ

೫. "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಒಂದು ಚಾರಿತ್ರಿಕ ಹಿನ್ನೋಟ" ಲೇಖಕ ಕೆ.ಎಸ್. ಪಾರ್ಥಸಾರಥಿ.


* * *

## ೬. ಭಾರತದ ರಾಜಕೀಯ ಸ್ವಾತಂತ್ರ್ಯ ಹಾಗೂ ಹಲಗಲಿ ಬಂಡಾಯ

ಭಾರತದ ರಾಜಕೀಯ ಸ್ವಾತಂತ್ರ್ಯದ ಸಂಘರ್ಷ ಹಲವು ದೃಷ್ಟಿಕೋನಗಳಿಂದ ವೈಶಿಷ್ಟ್ಯಮಯವಾದುದು. ಜಗತ್ತಿನಾದ್ಯಂತ ಶತಮಾನಗಳುದ್ದಕ್ಕೂ ಬಹಳಷ್ಟು ಸ್ವಾತಂತ್ರ್ಯ ಆಂದೋಳನಗಳು ನಡೆದಿವೆ. ಇದರಲ್ಲಿಯೂ ಹಲವಷ್ಟು ಸಂಗ್ರಾಮಗಳು ಬೇರೆ ಬೇರೆ ಕಾರಣಗಳಿಗಾಗಿ, ಅಂದರೆ ಸ್ವಾತಂತ್ರ್ಯ, ಸಮಾನತೆಗಳಂತಹ ಮಾನವಹಕ್ಕುಗಳ ಈಡೇರಿಕೆಗೆ ಹೊರತಾಗಿಯೂ ನಡೆದುದ್ದನ್ನು ಚರಿತ್ರೆ ದಾಖಲಿಸುತ್ತದೆ. ಅಂತವು ಯಾವು ಜನಮಾನಸದಲ್ಲಿ ಹಸಿರಾಗಿ ಉಳಿದಿಲ್ಲ. ಈ ರೀತಿಯ ಸ್ವಾತಂತ್ರ್ಯಾಂದೋಳನಗಳಂತೆ ಹತ್ತರಲ್ಲಿ ಹನ್ನೊಂದ ರಂತಲ್ಲ ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಚಾರಿತ್ರಿಕ ಹೋರಾಟ. ಸ್ವಾತಂತ್ರ್ಯ ಪ್ರಾಪ್ತಿಗಾಗಿ ನಾವು ನಡೆಸಿದ ಚಳುವಳಿ ಕೆಲವು ಮಹತ್ವದ ಕಾರಣಗಳಿಂದ ಅನನ್ಯವಾದುದಾಗಿದೆ. ಹತ್ತೊಂಭತ್ತು ಮತ್ತು ಇಪ್ಪತ್ತನೆಯ ಶತಮಾನಗಳ ನಡುವೆ ಹರಡಿಕೊಂಡಿರುವ ಒಂದು ನೂರು ವರ್ಷಗಳವರೆಗಿನ (ಇದರ ವಿವರ ಲೇಖನದ ಮುಂದಿನ ಭಾಗದಲ್ಲಿದೆ) ಸ್ವಾತಂತ್ರ್ಯ ಹೋರಾಟ ವಿಶ್ವದ ಚರಿತ್ರೆಯಲ್ಲಿ ಅಪೂರ್ವವಾದದ್ದು.

ಭಾರತದ ಸ್ವಾತಂತ್ರ್ಯ ಶಿಲ್ಪಿ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರ ಮುಂದಾಳತ್ವದಲ್ಲಿ ನಡೆದ ರಾಜಕೀಯ ಸ್ವಾತಂತ್ರ್ಯದ ಹೋರಾಟ ಹಲವು ಆಯಾಮಗಳನ್ನು ಹೊಂದಿದೆ. ಈ ಹೋರಾಟ ಹುಂಬುತನದ ಹೋರಾಟವಾಗಿರಲಿಲ್ಲ. ರಕ್ತಪಾತದ ಹೋರಾಟವಾಗಿರಲಿಲ್ಲ. ಅದೊಂದು ಅನನ್ಯ ಸಾಂಸ್ಕೃತಿಕ ಹಿನ್ನೆಲೆಯ ಅಡಿಪಾಯದ ಆಧಾರದ ಮೇಲೆ ಹರಳುಗಟ್ಟಿದ ಹೋರಾಟವಾಗಿತ್ತು. ಗಾಂಧೀಜಿಯವರು ಎಷ್ಟು ಅಪ್ರತಿಮ ರಾಷ್ಟ್ರಪ್ರೇಮಿಗಳಾಗಿದ್ದರೋ ಅಷ್ಟೇ ಚಾರಿತ್ರಿಕ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡ ತತ್ವವೇತ್ತರೂ ಆಗಿದ್ದರು. ಇದರರ್ಥ

ಕೇವಲ ಗಾಂಧೀಜಿ ಮಾತ್ರ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು ಎಂದಲ್ಲ. ಅವರು ಸ್ವಾತಂತ್ರ್ಯಾಂದೋಳನದಲ್ಲಿ ದೇಶಪ್ರೇಮದೀಪ್ತಿಯಿಂದ ಪಾಲ್ಗೊಂಡಿದ್ದರು. ಈ ಹತ್ತು ಹಲವು ಸ್ವಾತಂತ್ರ್ಯ ಹೋರಾಟಗಾರರಲ್ಲಿ ಬೇರೆ ಬೇರೆ ದೃಷ್ಟಿಕೋನದ ರಾಷ್ಟ್ರಪ್ರೇಮಿಗಳಿದ್ದಾರೆ.

ಒಂದು ಕಡೆ ಬಿಸಿರಕ್ತದ ಯುವಕಪಡೆ ಇನ್ನೊಂದೆಡೆ ಇಂಗ್ಲೀಷರ ಸಾಮ್ರಾಜ್ಯಶಾಹಿ ಪ್ರಭುತ್ವಕ್ಕೆ ನೇರ ಸವಾಲೆಸೆದ ಸಶಸ್ತ್ರ ಹೋರಾಟ ಮತ್ತೆ ಒಂದು ಕಡೆ ನೇಣುಗಂಬವನ್ನು ಸಂತೋಷವಾಗಿಯೇ ಏರಲು ಸಿದ್ದರಿರುವ ಕ್ರಾಂತಿಕಾರಿಗಳ ಬಲಿದಾನದ ಕಥೆ, ಮತ್ತೊಂದು ಕಡೆ ಸತ್ಯಾಗ್ರಹ. ಅಸಹಕಾರ ತತ್ವಗಳ ಮೂಲಕವೇ ವಿರೋಧಿಗಳ ಮನಗೆಲ್ಲುವ ಶಾಂತಿಪ್ರಿಯರ ಹೋರಾಟ, ಹೋರಾಟದ ಅಂತಿಮಘಟ್ಟದಲ್ಲಿ ದೊಡ್ಡಸೇನೆಯನ್ನೇ ಸಂಘಟಿಸಿ ಇಂಗ್ಲೀಷರ ಸೇನಾಬಲದ ಜಂಘಾಬಲವನ್ನೇ ಅಲುಗಾಡಿಸುವ ಪ್ರಯತ್ನ ಮಗದೊಂದು ಕಡೆ. ರಾಜೀ ಸೂತ್ರದ ಮೂಲಕ ಸ್ವಾತಂತ್ರ್ಯಗಳಿಸುವವರ ಯತ್ನ ಹೀಗೆ ವಿಭಿನ್ನ ಆಯಾಮಗಳನ್ನು ಹೊಂದಿದ್ದ ಭಾರತದ ರಾಜಕೀಯ ಸ್ವಾತಂತ್ರ್ಯದ ಸಂಘರ್ಷ ಜಾಗತೀಕ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ತನ್ನದೇ ಆದ ಅನನ್ಯತೆಯನ್ನು ಹೊಂದಿದೆ. ಮೇಲೆ ವಿವರಿಸಿದ ಹೋರಾಟಗಾರ ವರ್ಗಗಳನ್ನು ಕ್ರೋಢೀಕರಿಸಿ ಮಂದಗಾಮಿಗಳು ಹಾಗೂ ತೀವ್ರ ಗಾಮಿಗಳು ಎಂಬ ಎರಡು ವರ್ಗಗಳಲ್ಲಿ ಸಮೀಕರಿಸಿದೆ. **ಮಹಾತ್ಮಗಾಂಧೀಜಿ, ಗೋಪಾಲಕೃಷ್ಣ ಗೋಖಲೆ, ಜವಾಹರಲಾಲ ನೆಹರು, ರಾಜೇಂದ್ರಪ್ರಸಾದ್, ಸರ್ದಾರವಲ್ಲಭ ಭಾಯಿ ಪಾಟೀಲ, ಮೌಲಾನ ಅಬ್ದುಲ್ ಕಲಾಮ್ ಆಜಾದ್‌ರಂತಹವರು ◌ಂದಗಾಮಿಗಳ ಗುಂಪಿನಲ್ಲಿದ್ದರೆ, ಸುಭಾಷಚಂದ್ರಬೋಸ್, ಚಿತ್ತರಂಜನದಾಸ್, ಲಾಲಾ ಲಜಪತ್‌ರಾಯ್, ಅರವಿಂದೋರಂತ**ಹವರ ನೇತೃತ್ವದ ತೀವ್ರವಾದಿಗಳ ತಂಡ ಇನ್ನೊಂದು ಕಡೆ. ಎರಡೂ ತಂಡಗಳ ಗುರಿ ರಾಜಕೀಯ ಸ್ವಾತಂತ್ರ್ಯವನ್ನು ಭಾರತಕ್ಕೆ ತಂದುಕೊಡುವುದೇ ಆಗಿತ್ತು. ಆದರೆ ಮಾರ್ಗ ಮಾತ್ರ ಬೇರೆಯಾಗಿತ್ತು. ೧೯೨೦ರವರೆಗೆ ಸ್ವಾತಂತ್ರ್ಯಹೋರಾಟದ ಕರ್ಣ ಧಾರತ್ವವನ್ನು ವಹಿಸಿಕೊಂಡಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರು, ಭೌತಿಕ ದೇಹ ದಿಂದ ನೇಪಥ್ಯಕ್ಕೆ ಸರಿದ ನಂತರ ಗಾಂಧೀಜಿಯವರೇ ಸ್ವಾತಂತ್ರ್ಯ ಹೋರಾಟದ ಚಕ್ಕಡಿಯ ನೊಗಕ್ಕೆ ಹೆಗಲುಕೊಟ್ಟರು.

ನೂರು ವರ್ಷಗಳಿಗಿಂತಲೂ ಹೆಚ್ಚಿನ ಭಾರತದ ರಾಜಕೀಯ ಸ್ವಾತಂತ್ರ್ಯದ ಚಳುವಳಿಗೆ ಒಂದು ಖಚಿತ ಸೈದ್ಧಾಂತಿಕ ಆಯಾಮ ದೊರತದ್ದು ಈ ಕಾಲಘಟ್ಟದಿಂದಲೇ. ಈ ತತ್ವಸಿದ್ಧಾಂತದ ನೆಲೆಗಟ್ಟು ದೊರೆತದ್ದು ಗಾಂಧೀಜಿಯವರಿಂದಲೇ. ಇದನ್ನು ಸ್ವತಃ ಅವರೇ, "…. ಸ್ವಾತಂತ್ರ್ಯಕ್ಕೆ ರಾಜಕೀಯ, ಆರ್ಥಿಕ ಮತ್ತು ನೈತಿಕ ಆಯಾಮಗಳು ಇವೆ" ಎಂದು ಹೇಳಿದರು. ಇದರ ಜೊತೆ ಜೊತೆಗೆ ಭಾರತವನ್ನು ದಾಸ್ಯಮುಕ್ತ ಮಾಡುವ ಪ್ರಯಾಣದಲ್ಲಿ ಸಶಸ್ತ್ರ ಸಂಗ್ರಾಮವನ್ನು ನಡೆಸುವ, ಕ್ಷಾತ್ರತೇಜಸ್ಸಿಲ್ಲದೇ ಧರ್ಮ ಊರ್ಜಿತವಾಗುವುದಿಲ್ಲ, ಧರ್ಮರಕ್ಷಣೆಗೆ ಹಿಂಸಾಚರಣೆ ನಿಷಿದ್ಧವಲ್ಲ ಎಂಬ ತೀವ್ರವಾದಿಗಳ ವಾದವೂ ಬೆಳೆದುಬಂತು. ಇದನ್ನು ಮುಂದುಮಾಡಿ ತಿಲಕರು ಸ್ವಾತಂತ್ರ್ಯದ ಆತುರವನ್ನು ಮತ್ತು ತುಡಿತವನ್ನು ಜನಸಾಮಾನ್ಯರ ಮಾನಸದಲ್ಲಿ ಪ್ರಜ್ವಲಿಸಿದರು. ಇಟಲಿಯ **ಮ್ಯಾಝಿನಿ** ಎಂಬ ರಾಷ್ಟ್ರಪ್ರೇಮಿ ಹೇಳಿದ "ಹುತಾತ್ಮರ ರಕ್ತಬಲಿದಾನದಿಂದ ಪೋಷಿತವಾದ ರಾಷ್ಟ್ರಪರ ಭಾವನೆಗಳು ಬೇಗಫಲಕೊಡುತ್ತವೆ" ಎಂಬ ಕ್ಷಾತ್ರ ತೇಜಸ್ಸನ್ನು ಉದ್ದೀಪಿಸುವ ಮಾತಿನಿಂದ ಪ್ರೇರೇಪಿತರಾದ **ಭಗತ್‌ಸಿಂಗ್, ರಾಜಗುರು, ಸುಖದೇವರಂತ** ಯುವಕರು ಕ್ರಾಂತಿಮಾರ್ಗದಿಂದಲೇ ಸ್ವಾತಂತ್ರ್ಯಕ್ಕೆ ಸಮೀಪವಾಗುತ್ತೇವೆಂದು ಹೋರಾಟದ ಹಾದಿಯನ್ನೇ ಹಿಡಿದರು.

೧೯ನೇಯ ಶತಮಾನದ ಮಧ್ಯಭಾಗದಲ್ಲಿ ಬ್ರಿಟೀಷ್ ಅಧಿಪತ್ಯಕ್ಕೆ ಒಳಗಾದನಂತರ ಸಶಸ್ತ್ರ ಕ್ರಾಂತಿಯಿಂದ ಕೂಡಿದ ರಕ್ತರಂಜಿತ ಹೋರಾಟ ನಿರಂತರವಾಗಿ ನಡೆದು, ಬ್ರಿಟೀಷ್ ಆಳರಸರಿಗೆ ನಿರಾತಂಕವಾಗಿ ಆಳಲು ಎಂದೂ ಅವಕಾಶವಾಗಲಿಲ್ಲ. ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅಲ್ಲ, ನಮ್ಮ ದೇಶದ ಸಂಸ್ಕೃತಿಯ ಮೇಲಿನ ಅವರ ಆಕ್ರಮಣಶೀಲತೆಯನ್ನು ತಡೆಗಟ್ಟಲು ಈ ರಕ್ತರಂಜಿತ ಹೋರಾಟ ನಡೆದೇಯಿತ್ತು. ಆದರೆ ಅಹಿಂಸೆಯ ಹರಿಕಾರ ಗಾಂಧೀಜಿಯವರಿಗೆ ಹಿಂಸೆ, ಕೊಲೆ, ರಕ್ತಪಾತದ ಮೂಲಕ ದೊರೆಯುವ ಸ್ವರಾಜ್ಯ ಬೇಕಾಗಿರಲಿಲ್ಲ. 'ಹಿಂಸೆಯಿಂದ ಸ್ವಾತಂತ್ರ್ಯ ದೊರೆಯುತ್ತದೆಂದಾದರೆ ಅಂತಹ ಸ್ವಾತಂತ್ರ್ಯ ಬೇಡವೇಬೇಡ', ಎಂದು ಖಂಡತುಂಡವಾಗಿ ಹೇಳಿದರು. 'ನಾವೆಲ್ಲ ಸ್ವಾತಂತ್ರ್ಯ ಹೋರಾಟ ಗಾರರು ಇಂಗ್ಲೀಷರನ್ನು ಹೊಡೆದು, ಬಡಿದು, ಕೊಂದು, ಸುಟ್ಟು, ಹೊರಹಾಕಿದ ಮೇಲೆ

ಭಾರತದಲ್ಲಿ ಉಳಿಯುವವರು ಯಾರು?' (ಕೇವಲ ಕೊಲ್ಲುವವರೆ) ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು. ಅವರ ಆ ನಿಲುವೇ ಭಾರತದ ರಾಜಕೀಯ ಸ್ವಾತಂತ್ರ್ಯದ ಹೋರಾಟಕ್ಕೆ ಅಹಿಂಸಾತ್ಮಕ ಭೂಮಿಕೆಯನ್ನು ನಿರ್ಮಿಸಿತು. ಮುಖ್ಯವಾಗಿ ನಮ್ಮ ರಾಜಕೀಯ ಹೋರಾಟ ದಲ್ಲಿ ಅಹಿಂಸೆಗೆ ಅಧಿಕೃತ ಮನ್ನಣೆ ದೊರೆತದ್ದು ೧೯೨೦ರ ನಂತರದ ದಿನಗಳಲ್ಲಿ. ಯಾಕೆಂದರೆ ಅಲ್ಲಿಂದ ಮುಂದೆ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿಯವರೇ ಚಾಲಕಶಕ್ತಿಯಾದರು. ಅಂತೆಯೇ ೧೯೨೦-೧೯೪೮ರ ಅವಧಿಯನ್ನು ಗಾಂಧೀಯುಗವೆಂದು ಕರೆಯುಲಾಗುತ್ತದೆ. ಅವರು ಭಾರತದ ರಾಜಕೀಯ ಹೋರಾಟದ ಸೂತ್ರವನ್ನು ತೆಗೆದುಕೊಳ್ಳುವ ಮೊದಲು ದಕ್ಷಿಣ ಆಫ್ರಿಕಾದಲ್ಲಿ ಅಮಾನುಷವಾದ ವರ್ಣಬೇಧ ನೀತಿಯ ವಿರುದ್ಧ ಅಹಿಂಸಾತ್ಮಕ ಸತ್ಯಾಗ್ರಹ ಹೋರಾಟವನ್ನು ಸಂಘಟಿಸಿದರು. ಇಂದಿಗೆ ಅಂದರೆ ೨೦೦೭ರ ಅಕ್ಟೋಬರ್ ಗಾಂಧೀಜಿಯವರ ಸತ್ಯಾಗ್ರಹದ ಶತಮಾನೋತ್ಸವದ ಸರ್ವಕಾಲವೂ ಆಗಿದೆ. ಅಲ್ಲಿ ಪಡೆದ ಯಶಸ್ಸಿನಿಂದ ಪ್ರೇರಣೆ ಪಡೆದು ಇಲ್ಲಿಯೂ ಅದೇ ಅಹಿಂಸಾತ್ಮಕ ಅಸ್ತ್ರ ಯಶಸ್ವಿಯಾದೀತು ಎಂದು ಭಾವಿಸಿದರು. ಹೀಗೆ ತಿಲಕರ ನಿಧನದಿಂದ ಉಂಟಾಗಿದ್ದ ರಾಜಕೀಯ ಶೂನ್ಯವನ್ನು ಗಾಂಧೀಜಿಯವರು ತುಂಬಿದರು.

ಆದರೆ ಗಾಂಧೀಜಿಯವರ ನೇತೃತ್ವದ ಅಹಿಂಸಾತ್ಮಕ ಸತ್ಯಾಗ್ರಹದ ದಿವ್ಯಾಸ್ತ್ರಕ್ಕೆ ಮಣಿದು ಬ್ರಿಟೀಷರು ಭಾರತದಿಂದ ನಿರ್ಗಮಿಸಿದರು ಎಂಬ ಸತ್ಯಸ್ಯಸತ್ಯ ಸಂಗತಿಯನ್ನು ಒಪ್ಪಿಕೊಳ್ಳದ ಒಂದು ಜನವರ್ಗವೂ ನಮ್ಮಲ್ಲಿದೆ. ಕೆಲವರಿಗೆ ಗಾಂಧೀಜಿ ಎಂದರೆ ಅಲರ್ಜಿ. ಸೂರ್ಯ ಮುಳುಗದ ಸಾಮ್ರಾಜ್ಯವಾಗಿದ್ದ ಬ್ರಿಟೀಷರು ಕೇವಲ ಗಾಂಧೀಜಿಯವರ ನಿರಾಯುಧ ಅಸ್ತ್ರ ವಾದ ಸತ್ಯಾಗ್ರಹಕ್ಕೆ ಹೆದರಿ ಸ್ವಾತಂತ್ರ್ಯಕೊಟ್ಟರೆಂಬುದು ಹಾಸ್ಯಸ್ಪದ ಎಂಬುದು ಈ ವರ್ಗದ ಜನರ ಅಂಬೋಣ. ಈಗ್ಗೆ ಕೆಲವು ದಿನಗಳ ಹಿಂದೆಯಷ್ಟೇ ಕರ್ನಾಟಕದ ರಾಷ್ಟ್ರ ನಾಯಕರೊಬ್ಬರು ಭಗತ್‌ಸಿಂಗ್‌ರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಮಾತನಾಡುತ್ತ "ಭಗತ್‌ಸಿಂಗ್ ಅವರಂತಹ ಕ್ರಾಂತಿಕಾರಿಗಳಿಂದ ಬ್ರಿಟೀಷ್‌ರಲ್ಲಿ ನಿಜವಾದ ನಡುಕ ಉಂಟಾಯಿತು. ಇದರ ಹೊರತು ಅಹಿಂಸಾವಾದಿಗಳು ಮೂಗು ಹಿಡಿದು ಉಪವಾಸ ಕುಳಿತು ಕೊಂಡೇ ಇದ್ದಿದ್ದರೆ ದೇಶಕ್ಕೆ ಸ್ವಾತಂತ್ರ್ಯ ಲಭಿಸುತ್ತಿರಲಿಲ್ಲ", ಎಂದು ಅಪ್ಪಣೆ ಕೊಡಿಸಿದರು. ನಮ್ಮಲ್ಲಿ ಕೆಲವರಿದ್ದಾರೆ 'ನಾನು ಗಂಧೀಜಿಯವರ ವಿರುದ್ಧ ಮಾತನಾಡಿದೆ, ನಾನು ಅವರನ್ನು ಟೀಕಿಸಿದೆ' ಎಂಬ ಆತ್ಮರತಿಯುಳ್ಳ ವಿಕಲಮನಸಿಜರು. ಇಂತಹವರಿಗೆ ಒಂದು ಸತ್ಯ ಸಂಗತಿ ಗೊತ್ತಿಲ್ಲ. ಬ್ರಿಟೀಷರು ಗಾಂಧೀಜಿಯವರ ಬಡಕಲು ಶರೀರದ ಒಳಗಿದ್ದ ಪ್ರಚಂಡ ನೈತಿಕಶಕ್ತಿಗೆ ಅವರ ಆಧ್ಯಾತ್ಮಶಕ್ತಿಗೆ ಎಷ್ಟೊಂದು ಗೌರವಕೊಡುತ್ತಿದ್ದರೆಂದು ಪಂಜಾಬದ ಕೇಸರಿ ಎನಿಸಿ ಕೊಂಡಿದ್ದ ಲಾಲಾಲಜಪತ್‌ರಾಯರ ಎದೆಗೆ ಲಾಠಿ ಬೀಸಿ ಅವರು ರಕ್ತಕಾರುವಂತೆ ಮಾಡಿದ, ಅಸಂಖ್ಯಾತ ಕ್ರಾಂತಿಕಾರಿಗಳನ್ನು ನಿರ್ದಯವಾಗಿ ಗಲ್ಲುಗಂಬಕ್ಕೇರಿಸಿದ ಬ್ರಿಟೀಷರು ಗಾಂಧೀಜಿ ಯವರಿಗೆ ಒಂದು ಏಟು ಕೊಡಲಿಲ್ಲ ಸಾಕಲ್ಲವೆ ಇದೊಂದೇ ನಿದರ್ಶನ. ಗಾಂಧೀಜಿಯವರ ದೈತ್ಯಶಕ್ತಿಗೆ ಆಂಗ್ಲರಿಂದ ಸಂದ ದೊಡ್ಡ ಗೌರವ ಅಹಿಂಸಾವಾದಿಗಳು ಮೂಗು ಹಿಡಿದುಕೊಂಡು ಕುಳಿತಿದ್ದರೆ ನಮಗೆ ಇಂದೂ ಸ್ವಾತಂತ್ರ್ಯಲಭಿಸುತ್ತಿರಲಿಲ್ಲ ಎಂದು ಬಾಲಿಷತನದಿಂದ ಹೇಳುವ ಮೂಲಕ ಪರೋಕ್ಷವಾಗಿ ಗಾಂಧೀಜಿಯವರನ್ನು ಮತ್ತು ಅವರ ತತ್ವಗಳನ್ನು ಅವಹೇಳನ ಮಾಡುವ ಇಂತಹ ಡೊಂಕುಬಾಲದ ನಾಯಕರ ಸಾಲಿಗೆ ಸೇರಿದ ಕೆಲವರು ಇತ್ತೀಚೆಗೆ ಹೆಚ್ಚಿಕೊಂಡಿದ್ದಾರೆ. ಸ್ವಾತಂತ್ರ್ಯದೊರೆತ ಆರು ತಿಂಗಳಲ್ಲಿ ಒಬ್ಬ ಹಂತಕನಿಂದ ರಾಷ್ಟ್ರಪಿತನ ಹತ್ಯೆಯಾದಾಗ ಇನ್ನು ಜೀವಿತದಲ್ಲಿದ್ದ ಇಂಗ್ಲೆಂಡದ ಹಿಂದಿನ ಪ್ರಧಾನಿ ಗ್ಲೆವಿನ್ಸ್ಟನ್ ಚರ್ಚಿಲ್ ಹೀಗೆ ಉದ್ಗಾರ ತೆಗೆದರು. "ಇಡೀ ಜಗತ್ತೇ ಗೌರವಿಸುವ ಗಾಂಧೀಜಿಯವರನ್ನು ನಾವು ಇಷ್ಟು ವರ್ಷ ಗೌರವಿಸಿ ರಕ್ಷಿಸಿದೆವು. ಅಂತಹ ಒಬ್ಬ ಮಹಾನ್‌ವ್ಯಕ್ತಿಯನ್ನು ಆರು ತಿಂಗಳಲ್ಲಿ ಕೊಂದು ಹಾಕಿದಿರಿ" ಇದಕ್ಕೆ ನಮ್ಮಲ್ಲಿ ಉತ್ತರವಿದೆಯೇ? ನಾವು ಜಗತ್ತಿನ ಮುಂದೆ ಎಷ್ಟೊಂದು ಕುಬ್ಜರಾಗಿ ಹೋದೆವಲ್ಲ.

ಅಪಾರ ಸೇನಾಬಲ ಹೊಂದಿದ್ದ ಬ್ರಿಟೀಷರೊಡನೆ ನಾವು ನಿರಂತರ ಶಸ್ತ್ರಾಸ್ತ್ರ ಹೋರಾಟ ಕ್ಕಿಳಿದಿದ್ದರೆ ಇಂದಿನ ತನಕ ನಾವು ಅವರ ಜೊತೆಗೆ ಹೆಣಗಬೇಕಾಗಿ ಬರುತ್ತಿತ್ತೇನೋ! ನಾವು ಹಿಂಸೆಯನ್ನು ವಿರೋಧಿಸಬಹುದು. ಕೆಟ್ಟದ್ದನ್ನು ಎದುರಿಸಬಹುದು. ಅನೀತಿಯನ್ನು ಹತ್ತಿಕ್ಕ ಬಹುದು. ಆದರೆ ಒಳ್ಳೆಯದನ್ನು, ಅಹಿಂಸೆಯನ್ನು ನೈತಿಕತೆಯನ್ನು ಹೇಗೆ ಎದುರಿಸುವುದು? ಇಂತಹ ಒಂದು ಸಣ್ಣ ಸತ್ಯ ನಿಮ್ಮ ಕೆಲವು ಸ್ವಘೋಷಿತ ದೇಶಭಕ್ತರಿಗೆ ಹೊಳೆಯದಿರುವುದು ದುರಂತವಲ್ಲವೇ? ಭಗತ್‌ಸಿಂಗ್‌ರಂತಹ ತ್ಯಾಗ ಬಲಿದಾನ ಸಾಮಾನ್ಯವಲ್ಲ. ಸುಭಾಸ್‌ಚಂದ್ರ ಬೋಸ್, ಭಗತ್‌ಸಿಂಗ್‌ರಂತಹ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ಎಲ್ಲ ಭಾರತೀಯರು ತುಂಬು ಹೃದಯದಿಂದ

ಗೌರವಿಸುತ್ತಾರೆ. ಆದರೆ ಗಾಂಧೀಜಿಯವ ರಂತಹ ಅಹಿಂಸಾವಾದಿಗಳು ನಡೆಸಿದ ಸ್ವಾತಂತ್ರ್ಯ ಹೋರಾಟವನ್ನು ರಾಷ್ಟ್ರವಾದಿ ಹೋರಾಟವೇ ಅಲ್ಲವೆಂದು ಹಗುರವಾಗಿ ಮಾತನಾಡುವುದು ಮೂಢಮತಿಿಯಾಗುವುದಿಲ್ಲವೆ?

ಹಿಂಸೆ ಹಿಂಸೆಯನ್ನೇ ಹುಟ್ಟಿಸುತ್ತದೆ. ಅಸತ್ಯ ಅಸತ್ಯವನ್ನೇ ಹುಟ್ಟು ಹಾಕುತ್ತದೆ. ದ್ವೇಷ ದ್ವೇಷವನ್ನೇ ಹುಟ್ಟಿಸುತ್ತದೆ. ಅಶಾಂತಿಯಿಂದ, ಸತ್ಯಗಳಿಂದ ಮಾತ್ರ ಗೆಲ್ಲಲು ಸಾಧ್ಯ. ಇದನ್ನು ಸಾಧ್ಯಮಾಡಿಕೊಟ್ಟವರು ಗಾಂಧೀಜಿ. ಗಾಂಧೀವಾದವನ್ನು ಗಾಂಧೀಜಿಯವರ ವ್ಯಕ್ತಿತ್ವವನ್ನು ಅವರು ಚಿಂತನೆ ಮಾಡಿ ನಂಬಿ ಬದುಕಿನ ತತ್ವಾದರ್ಶಗಳನ್ನು ಇಷ್ಟು ದೀರ್ಘ ವಾಗಿ ವಿಶ್ಲೇಷಣೆ ಮಾಡುವುದು ಅಗತ್ಯವಾಗಿದೆ. ಯಾಕೆಂದರೆ ಅವರ ಇಡೀ ಬದುಕು ಭಾರತದ ರಾಜಕೀಯ ಸ್ವಾತಂತ್ರ್ಯದೊಡನೆ ತಳುಕುಹಾಕಿಕೊಂಡಿದೆ. ಭಾರತದ ಸಂದರ್ಭದಲ್ಲಿ ಮಾತ್ರವಲ್ಲ ಜಗತ್ತಿನ ದೃಷ್ಟಿಯಲ್ಲಿ ಗಾಂಧೀಜಿಯವರು ಕೇವಲ ಒಬ್ಬ ವ್ಯಕ್ತಿ ಮಾತ್ರವಲ್ಲ. ಅವರು ಒಂದು ನೈತಿಕ ಮೌಲ್ಯದ ಪ್ರತೀಕ. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಗಾಂಧೀಜಿ ಯವರು ಕೊಟ್ಟ ಅಹಿಂಸಾತ್ಮಾಕ ಆಯಾಮ ಸತ್ಯಾಗ್ರಹದಿಂದಲೇ ಸ್ವಾತಂತ್ರ್ಯಲಭ್ಯವಾಗಬೇಕು ಎಂಬ ಅವರ ಧ್ಯೇಯಗಳು ಸರಳವಾಗಿ ಮರೆಯುವಂತಹುಗಳಲ್ಲ.

ಸಾವಿರ ಮೈಲುಗಳ ಪ್ರಯಾಣ ಪ್ರಾರಂಭವಾಗುವುದು ಪ್ರಥಮ ಹೆಜ್ಜೆಯಿಂದಲೇ ಎಂಬಂತೆ ಭಾರತದ ರಾಜಕೀಯ ಸ್ವಾತಂತ್ರ್ಯದ ಸಂಗ್ರಾಮವೂ ಕೂಡ ಒಂದು ಸಣ್ಣ ಸಂಗತಿಯಿಂದಲೇ ಪ್ರಾರಂಭವಾಗಿದೆ. ಈ ಕ್ರಾಂತಿ ಮೊಟ್ಟಮೊದಲು ಕಿಡಿಯಾಗಿ ಸಿಡಿದದ್ದು ಸೈನಿಕರ ಚಾವಡಿ ಯಲ್ಲಿ. ಅದು ೧೮೫೭ನೆಯ ಇಸವಿ ಅದನ್ನು ಯಾರು ಯಾವುದೇ ಹೆಸರಿನಿಂದ ಕರೆಯಲಿ ಅದು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ. ಬರಾಕ್‌ಪುರದ ಸೇನಾಭಾವಣಿಯಲ್ಲಿ ಮಾರ್ಚ್ ೨೯, ೧೮೫೭ರಂದು ಮಂಗಲ ಪಾಂಡೆಯ ನೇತೃತ್ವದಲ್ಲಿ ಕ್ರಾಂತಿಯ ಕಿಡಿ ಮುಂದೆ ಸ್ವಾತಂತ್ರ್ಯ ಸಂಗ್ರಾಮದ ಜ್ವಾಲೆಯಾಗಿ ಪರಿಣಮಿಸಿತು. ಸೈನಿಕರಿಗೆ ಪೂರೈಸಲಾದ ಹೊಸ ಕಾಡತೂಸುಗಳನ್ನು ಬಳಸುವ ವಿಚಾರದಲ್ಲಿ ಈ ಕ್ರಾಂತಿಯ ಕಿಡಿ ಸಿಡಿಮದ್ದಿನ ಉಗ್ರಾಣಕ್ಕೆ ಬಡಿದಂತಾಗಿದೆ. ಈ ಕ್ರಾಂತಿ ಕೇವಲ ಸಿಪಾಯಿಗಳಿಗೆ ಮಾತ್ರ ಸೀವಿತವಾಗಿರಲಿಲ್ಲ. ಅದರಲ್ಲಿ ಜನಸಾಮಾನ್ಯರೂ ಪಾಲ್ಗೊಂಡಿದ್ದರು ಎಂದು ಸಮಕಾಲೀನ ಬ್ರಿಟೀಷ್ ಲೇಖಕ ಜಸ್ಟಿಸ್ ಮೆಕಾರ್ದಿ ಹೇಳಿದ್ದಾನೆ ".... ಬ್ರಿಟೀಷ್ ಆಡಳಿತದ ವಿರುದ್ಧ ದೇಶೀಯ ಜನಾಂಗಗಳು ದಂಗೆಯೆದ್ದಿರುವುದು ಸತ್ಯ. ದಂಗೆಯೆದ್ದಿರುವವರು ಕೇವಲ ಸಿಪಾಯಿಗಳಷ್ಟೇ ಅಲ್ಲ. ಅದು ಸೈನಿಕಬಂಡಾಯವಂತೂ ಖಂಡಿತವಲ್ಲ. ಇದೊಂದು ಬ್ರಿಟೀಷ್ ಆಡಳಿತದ ವಿರುದ್ಧ ಪುಟಿದೆದ್ದ ದ್ವೇಷ, ಧಾರ್ಮಿಕ ಮತಾಂಧತೆ ಮತ್ತು ಸೈನಿಕರಲ್ಲಿನ ಅತೃಪ್ತಿ ಇವೆಲ್ಲದರ ಒಟ್ಟು ಪರಿಣಾಮ ವಾಗಿತ್ತು. ದೇಶೀಯ ರಾಜರುಗಳು ಮತ್ತು ದೇಶೀಯ ಸೈನಿಕರೂ ಇದರಲ್ಲಿ ಭಾಗವಹಿಸಿ ದ್ದರು..." ಎಂದು ಮೆಕಾರ್ಥಿ ದಾಖಲಿಸಿದ್ದಾನೆ.

ಈ ಸ್ವಾತಂತ್ರ್ಯ ಚಳವಳಿಗೆ ವ್ಯಾಪಕವಾದ ಜನಬೆಂಬಲವೂ ಇತ್ತು. ಜನಸಾಮಾನ್ಯರಿಗೂ ಕೂಡಾ ಇದೊಂದು ಉದಾತ್ತ ಧ್ಯೇಯವಾಗಿತ್ತು. "ಮಾರೋ ಫಿರಂಗಿ ಕೋ" ಎಂಬ ಜನರ ಉದ್ಘೋಷದಲ್ಲಿ ಬ್ರಿಟೀಷರ ವಿರುದ್ಧ ತೀವ್ರ ಕೋಪದ, ದ್ವೇಷದ, ಆಕ್ರೋಶದ ಭಾವನೆ ತುಂಬಿತ್ತು. ನೇಪಾಳದಲ್ಲಿ ತಲೆಮರೆಸಿಕೊಂಡಿದ್ದ ಕ್ರಾಂತಿಯ ಅಧ್ವರ್ಯ ನಾನಾಸಾಹೇಬ ಪೇಶ್ವೆ ಸ್ವದೇಶ ರಕ್ಷಣೆಯ ಸಲುವಾಗಿಯೇ ಯುದ್ಧ ಆರಂಭವಾಯಿತು ಎಂದಿದ್ದಾನೆ. ಮೊಗಲ ವಂಶದ ಕೊನೆಯ ಬಾದಶಹ "ಬಹಾದ್ದೂರ ಶಾಹ" ನಾವೆಲ್ಲ ದೇಶೀಯ ಸಂಸ್ಥಾನಿಕರು ಒಂದುಗೂಡಿ ಓರ್ವ ವಿದೇಶೀ ವೈರಿಯ ಜತೆ ಖಡ್ಗಹಿಡಿದು ಯುದ್ಧ ಮಾಡಬೇಕು. ಒಮ್ಮೆ ವೈರಿಯು ನಮ್ಮ ಗಡಿಯಾಚೆ ಹೋದಮೇಲೆ ನಾವೆಲ್ಲ ರಾಜರು ಸೇರಿ ಒಂದು ಗೂಡಿ ಒಂದು ಕೂಟ ರಚಿಸಿ ಆಯ್ಕೆ ಮಾಡಿರುವವರ ಕೈಗಳಿಗೆ ದೇಶದ ಆಧಿಪತ್ಯದ ಎಲ್ಲ ಹಕ್ಕುಗಳನ್ನು ನಾನು ಒಪ್ಪಿಸಲು ಸಿದ್ಧನಿರುವುದನ್ನು ನೀವೇ ನೋಡವಿರಂತೆ ಎಂದು ಇನ್ನುಳಿದ ಸಂಸ್ಥಾನಿಕರಿಗೆ ಪತ್ರಬರೆದಿದ್ದ. ಈ ಪತ್ರದ ಧಾಟಿನೋಡಿದರೆ ಈ ಕ್ರಾಂತಿಯ ಹಿಂದೆ ಎಲ್ಲರೂ ಸಂಘಟಿತರಾಗಿ ಬ್ರಿಟೀಷರನ್ನು ಹೊರಹಾಕಿ ಸ್ವತಂತ್ರರಾಗೋಣ ಎಂಬ ಸ್ಪಷ್ಟ ಉದ್ದೇಶವಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಹೀಗೆ ಪ್ರಾರಂಭದ ಯೋಜನೆಯಂತೆ ಈ ಸಮರ ೧೮೫೭ ಮೇ ೩೧ರಂದು ಏಕಕಾಲಕ್ಕೆ ಆರಂಭವಾಗಬೇಕಿದ್ದರೂ ಮಂಗಲ ಪಾಂಡೆ ಮಾರ್ಚ್ ೨೯ರಂದೇ ಸಿಡಿಸಿದ ಮೊದಲ ಕಿಡಿಯಿಂದ ಮೊದಲ್ಗೊಂಡು ನಿರಂತರ ಪ್ರವಾಹವಾಗಿ ಪ್ರವಹಿಸಿ ೧೯೪೭ರವರೆಗಿನ ಸುದೀರ್ಘ

ಸ್ವಾತಂತ್ರ್ಯ ಸಮರ ಅನೇಕ ಮೈಲುಗಳನ್ನು ಒಳಗೊಂಡಿದೆ. ಈ ಕ್ರಾಂತಿಕಾರಿಗಳ ಸೇನಾಪತಿ ಯಾಗಿದ್ದ ತಾತ್ಯಾಟೋಪಿ, ನಾನಾಸಾಹೇಬ ಪೇಶ್ವೆ, ಬ್ರಿಟೀಷರ ಪ್ರತಿಷ್ಠೆಗೆ ಸವಾಲೆಸೆದ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಇವರೆಲ್ಲ ಕ್ರಾಂತಿಯಧ್ವಜ ಹಾರಿಸಿದರು. ಇಂತಹ ಹೊತ್ತಿನಲ್ಲಿ ಇದೇ ಸ್ವಾತಂತ್ರ್ಯಪ್ರಾಪ್ತಿಗಾಗಿ ದಕ್ಷಿಣದ ಕರ್ನಾಟಕದಲ್ಲಿ ವೀರಮಹಿಳೆ ಕಿತ್ತೂರ ಚೆನ್ನಮ್ಮ, ಯತ್ತವಳ್ ದಳವಾಯಿ, ವೀರಸಂಗೊಳ್ಳಿರಾಯಣ್ಣ, ೧೮೨೪ರಲ್ಲಿಯೇ ಬ್ರಿಟೀಷರ ವಿರುದ್ಧ ಝಳಪಿಸಿದ ಕತ್ತಿಯ ಕಥೆ ಇತಿಹಾಸದ ಪುಟಗಳಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ದಾಖಲಾಗಲೇ ಇಲ್ಲ. ಇದು ವಿಚಿತ್ರವಾದರೂ ಸತ್ಯ. ೧೮೨೪ರಷ್ಟು ಹಿಂದೆಯೇ ಲಾರ್ಡ್‌ಡಾಲ್‌ಹೌಸಿ ತಂದ ದತ್ತಕ ರದ್ದತಿ ಕಾಯ್ದೆಯ ಸಿಂಧುತ್ವವನ್ನೇ ಪ್ರಶ್ನಿಸಿ ಸ್ವಧರ್ಮ ರಕ್ಷಣೆಯ ಸ್ವಾಭಿಮಾನ ಪ್ರದರ್ಶಿಸಿದ್ದು ಚರಿತ್ರೆಯಲ್ಲಿ ನಗಣ್ಯವೆನಿಸಬಾರದಿತ್ತು. ಪ್ರಾಯಶಃ ಒಬ್ಬಳೇ ಬಂಡೆದ್ದಳೆಂದೋ ಏನೋ ಇತಿಹಾಸಕಾರರು ಕಿತ್ತೂರಿನ ಚೆನ್ನಮ್ಮನ, ಅಲ್ಲ ಚೆನ್ನಮ್ಮನ ಕಿತ್ತೂರಿನಲ್ಲಿ ನಡೆದ ಈ ಸ್ವಾತಂತ್ರ್ಯ ಸಂಗ್ರಾಮವನ್ನು ಅಷ್ಟಾಗಿ ಗಮನಿಸಲಿಲ್ಲ. ಹಾಗೆ ನೋಡಿದರೆ ೧೮೨೪ರ ಈ ಪ್ರಥಮ ಹೋರಾಟ ಭಾರತದ ರಾಜಕೀಯ ಸ್ವಾತಂತ್ರ್ಯದ ಇತಿಹಾಸದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ದಾಖಲಾಗುವ ಎಲ್ಲ ಅರ್ಹತೆಗಳನ್ನು ಹೊಂದಿತ್ತು. ಆದರೆ ಉತ್ತರದವರ ಕಣ್ಣಿಗೆ ಇದು ಕಾಣಲಿಲ್ಲ. ಸ್ವಾತಂತ್ರ್ಯ ಚಳವಳಿಯ ಹೆಜ್ಜೆಯ ಗುರುತುಗಳಲ್ಲಿ ಕಿತ್ತೂರು ಗುರುತಿಸಿಕೊಳ್ಳಲಿಲ್ಲವೆಂಬುದು ಒಂದು ವಿಷಾದಯೋಗವಾಗಿ ಉಳಿದೇ ಬಿಡುತ್ತದೆ.

ಮತ್ತೆ ಸ್ವಾತಂತ್ರ್ಯ ಹೋರಾಟದ ಉದ್ಘೋಷ, ಝಾನ್ಸಿರಾಣಿ, ತಾತ್ಯಾಟೋಪಿ, ನಾನಾ ಸಾಹೇಬರ ಹಿನ್ನಡೆಯ ನಂತರದ ಸ್ವಲ್ಪಕಾಲ ಶಾಂತವಾಗಿದ್ದ ಹೋರಾಟ ಬಾಲಗಂಗಾಧರ ತಿಲಕರ ಆಗಮನದಿಂದ ಮತ್ತೆ ಪ್ರಖರತೆ ಪಡೆದಿದೆ. 'ಕೇಸರಿ ಕಿಡಿ' 'ಮರಾಠಾ'ದಂತಹ ಪತ್ರಿಕೆಗಳ ಮೂಲಕ ಕ್ರಾಂತಿಯ ಕಿಡಿ ಆರದಂತೆ ನೋಡಿಕೊಂಡರು. 'ಸ್ವಾತಂತ್ರ್ಯವನ್ನು ಜನ್ಮಸಿದ್ಧ ಹಕ್ಕು' ಎಂದು ಪಾಂಚಜನ್ಯ ಮೊಳಗಿಸಿ ಯುದ್ಧ ನಿಶ್ಚಯವೆಂಬ ವಾತಾವರಣ ಮೂಡಿಸಿದರು.

೨೦ನೆಯ ಶತಮಾನದ ಆರಂಭದಲ್ಲಿ ಅವಿಭಕ್ತಬಂಗಾಲ ಕ್ರಾಂತಿಕಾರಿಗಳ ಜೇನುಗೂಡಾ ಗಿತ್ತು. ಈಜೇನುಗೂಡಿಗೆ ಕಲ್ಲು ಹೊಡೆಯುವಂತೆ ಆಗಿನ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ೧೯೦೫ ಜುಲೈ ೨೦ರಂದು ಬಂಗಾಲ ವಿಭಜನೆ ಮಾಡಿದ. ಪ್ರತಿಭಟನೆಯು ಉಗ್ರವಾಗಿ ಬಂಕಿಮಚಂದ್ರ ಚಟರ್ಜಿಯವರ ಆನಂದಮಠ ಕಾದಂಬರಿಯ 'ವಂದೇ ಮಾತರಂ' ಗೀತೆ ರಣಗೀತೆಯಾಯಿತು. ಪರಿಣಾಮವಾಗಿ ಅಕ್ಟೋಬರ ೧೬, ೧೯೦೫ರಂದು ಮತ್ತೆ ಬಂಗಾಲ ಒಂದಾಯಿತು. ಅಲ್ಲಿಂದ ಪ್ರಾರಂಭವಾಗುವುದು ಅರವಿಂದರ ಅಭಿಯಾನ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಪಡೆದು ಪ್ರತಿಭಾವಂತ ವಿದ್ಯಾರ್ಥಿಯಾಗಿ ಐ.ಸಿ.ಎಸ್. ಪದವಿಪಡೆದು ಭಾರತಕ್ಕೆ ಮರಳಿದರು. ಬರೋಡ ಮಹಾರಾಜ ಸಯ್ಯಜಿರಾವ್ ಗಾಯಕವಾಡ್ ಅರವಿಂದರನ್ನು ತಮ್ಮ ದಿವಾನರನ್ನಾಗಿ ನೇಮಿಸಿಕೊಂಡರು. ಆದರೆ ತಿಲಕರ ಹಾಗೂ ಸೋದರಿ ನಿವೇದಿತಾರವರ ಪ್ರೇರಣೆಯಿಂದ ಉದ್ಯೋಗ ತ್ಯಜಿಸಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. 'ವಂದೇ ಮಾತರಂ' ಪತ್ರಿಕೆ ಪ್ರಾರಂಭಿಸಿ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ತುಂಬಿದರು. ತೀವ್ರಗಾಮಿ ಪಂಥದ ಅರವಿಂದ ಘೋಷರು ಸಶಸ್ತ್ರ ಕ್ರಾಂತಿಯ ಹರಿಕಾರರೇ ಆಗಿದ್ದರು.

ನಂತರದ ಕ್ರಾಂತಿಕಾರಿ ಹೋರಾಟ ವೀರ ಸಾವರಕರ ಅವರದ್ದು. ಸಶಸ್ತ್ರ ಕ್ರಾಂತಿಯಿಂದಲೇ ಸ್ವಾತಂತ್ರ್ಯ ಪ್ರಾಪ್ತಿ ಬೇಗ ಲಭಿಸುತ್ತದೆ ಎನ್ನುವ ನಂಬಿಕೆ ಸಾವರಕರ ಅವರದಾಗಿತ್ತು. ಬ್ರಿಟೀಷ್ ಚಕ್ರವರ್ತಿ ಏಳನೆಯ ಎಡ್ವರ್ಡ್‌ನ ಪಟ್ಟಾಭಿಷೇಕದ ಸಮಯದಲ್ಲಿ ಒಂದು ಕಡೆ ಸಂಭ್ರಮದ ಸಮಾರಂಭಗಳು ನಡೆಯುತ್ತಿದ್ದಾಗ, ವಿನಾಯಕ ಸಾವರಕರ ಗುಲಾಮಿ ಪ್ರವೃತ್ತಿಯಲ್ಲಿ ಆನಂದಪಡುವಂತಹ ನಿರ್ಲಜ್ಜತನದ ಮನೋಭಾವ ತ್ಯಜಿಸುವಂತೆ ನಾಸಿಕದ ತುಂಬ ಭಿತ್ತಿ ಪತ್ರಗಳ ಮೂಲಕ ಜನಜಾಗೃತಿ ಮಾಡುತ್ತಿದ್ದರು.

ಇಲ್ಲಿಂದ ಇನ್ನೊಂದೇ ರಕ್ತರಂಜಿತ ಅಧ್ಯಾಯ. ಪಂಜಾಬದ ಕೇಸರಿ ಎನಿಸಿದ್ದ ವಯೋ ವೃದ್ಧ ಲಾಲಾಲಜಪತ್‌ರಾಯರ ಧಾರುಣ ಸಾವಿಗೆ ಕಾರಣನಾಗಿದ್ದ ಸ್ಯಾಂಡರ್ಸ್‌ಎಂಬ ಪೋಲಿಸ್ ಅಧಿಕಾರಿಯನ್ನು ಗುಂಡಿಟ್ಟು ಕೊಂದ ಕೃತ್ಯದಲ್ಲಿ ಭಾಗಿಯಾಗಿದ್ದು ಭಗತ್‌ಸಿಂಗ್, ರಾಜಗುರು, ಸುಖದೇವ, ಆಜಾದ್ ಜಯಗೋಪಾಲರವರನ್ನು ಸರಕಾರ ಬಂಧಿಸಿತು. ವಿಚಾರಣೆಯೆಂಬ ಪ್ರಹಸನ. ೧೯೩೦ ಅಕ್ಟೋಬರ ೭ರಂದು

ತೀರ್ಪುಹೊರಬಂದಿತು. ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವರಿಗೆ ಗಲ್ಲುಶಿಕ್ಷೆ. ೧೯೩೧ ಮಾರ್ಚ್ ೨೩ರಂದು ಮೂರೂ ಕ್ರಾಂತಿಕಾರಿಗೆಳೆಯರು ಸ್ವಾತಂತ್ರ್ಯಕ್ಕಾಗಿ ಮೃತ್ಯು ದೇವತೆಯನ್ನು ವೀರೋಚಿತ ವಾಗಿಯೆ ಸ್ವೀಕರಿಸಿ ಅಮರರಾದರು.

ಇಷ್ಟೆಲ್ಲ ಹೋರಾಟ, ಕ್ರಾಂತಿ, ರಕ್ತತರ್ಪಣ, ಗಲ್ಲು, ಬಂಡಾಯ ಎಲ್ಲ ಒಮ್ಮೆಲೇ ನಿಂತಂತೆ ತಣ್ಣನೆಯ ಗಾಂಧೀಯುಗದ ಶಾಂತಿಪರ್ವ ಮೊದಲಾಗುವುದು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಮಹತ್ವದ ತಿರುವು. ಸಶಸ್ತ್ರ ಹೋರಾಟದ ಬೋರ್ಗರೆತ ಥಟ್ಟನೆ ನಿಂತು ತಂಪಾದ ಮಂದಮಾರುತ ಬೀಸಿದ ಅನುಭವ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಸಾರಥ್ಯವಹಿಸಿಕೊಂಡಾಗ. ಇಲ್ಲಿಂದ ಮುಂದಿನ ಸ್ವಾತಂತ್ರ್ಯ ಹೋರಾಟ ಒಂದು ಸುಂದರ ಭಾವಗೀತೆಯಿದ್ದಂತೆ.

ಬಾಲಗಂಗಾಧರನಾಥ ತಿಲಕರ ನಿಧನಾನಂತರ ಕೇವಲ ಕಾಂಗ್ರೆಸ್ಸಿನ ನಾಯಕತ್ವಮಾತ್ರವಲ್ಲ ಸ್ವಾತಂತ್ರ್ಯ ಚಳುವಳಿಯ ಧುರೀಣತ್ವ ಗಾಂಧೀಜಿಯವರ ಹೆಗಲೇರಿತು. ೧೯೨೦ರಲ್ಲಿ ಖಿಲಾಫತ್ ಚಳುವಳಿಯನ್ನು ಬೆಂಬಲಿಸುವ ನಿಲುವನ್ನು ಕೈಕೊಂಡರು. ಹೀಗೆ ಸುಮಾರು ಎರಡೂವರೆ ದಶಕಗಳ ಕಾಲ ಅವರ ನಾಯಕತ್ವ ಅನೂಚಾನವಾಗಿ ನಡೆಯಿತು. ಈ ಅವಧಿಯ ಪ್ರಮುಖ ಘಟನೆಗಳೆಂದರೆ ೧೯೨೦ರ ಅಸಹಕಾರ ಚಳುವಳಿ, ೧೯೨೨ರ ಚೌರಾಚೌರಿ ಹಿಂಸಾಕಾಂಡ, ಉಪ್ಪಿನ ಸರಣೀ ಉಪವಾಸ ಸತ್ಯಾಗ್ರಹಗಳು. ಈ ಅವಧಿಯ ಇನ್ನೊಂದು ಅತ್ಯಂತ ಪ್ರಮುಖ ಮೈಲಿಗಲ್ಲು ಎಂದರೆ ಭಾರತಬಿಟ್ಟು ತೊಲಗಿ ಚಳುವಳಿ. ೧೯೪೨ರ ಆಗಸ್ಟ್ ಕ್ರಾಂತಿ ಮುಂಬಯಿಯ ಕ್ರಾಂತಿ ಮೈದಾನದಲ್ಲಿ ನಡೆದ ಬೃಹತ್ ಸಭೆಯಲ್ಲಿ ಉಕ್ಕಿನ ಮನುಷ್ಯ ಸರ್ದಾರ ವಲ್ಲಭಭಾಯಿ ಪಟೇಲರು "ಬ್ರಿಟೀಷರ ದಬ್ಬಾಳಿಕೆಯನ್ನು ಭಾರತದ ಜನತೆ ಇನ್ನು ಸಹಿಸದು" ಎಂದು ಗುಡುಗಿದರು. ಆಗಸ್ಟ್‌ನ ಸಭೆಯಲ್ಲಿ ಗಾಂಧೀಜಿ ಯವರು ತಮ್ಮ ಭಾಷಣದಲ್ಲಿ, "ಬ್ರಿಟೀಷರೇ, ಭಾರತಬಿಟ್ಟು ತೊಲಗಿ" ಎಂದು ಎಚ್ಚರಿಕೆ ಕೊಡುವುದರ ಜೊತೆಗೆ, ಭಾರತೀಯರಿಗೆ 'ಮಾಡು ಇಲ್ಲವೇ ಮಡಿ' ಎಂಬ ಕರೆನೀಡಿ ಹೋರಾಟವನ್ನು ಇನ್ನಷ್ಟು ಹುರಿಗೊಳಿಸಿದರು.

ಆಗಸ್ಟ್ ೯ರ ಕ್ರಾಂತಿಯ ಕಹಳೆ ಕೇವಲ ಮುಂಬಯಿಯಲ್ಲಿ ಮಾತ್ರವಲ್ಲ, ಭಾರತ ದುದ್ದಕ್ಕೂ ಮೊಳಗಿತು. ಹರತಾಳ, ಪ್ರತಿಭಟನೆ, ಮೆರವಣಿಗೆ, ಘೋಷಣೆಗಳು, ಶಾಲಾ ಕಾಲೇಜುಗಳ ಬಹಿಷ್ಕಾರ, ವಿದೇಶೀ ವಸ್ತು ದಹನ ಹೀಗೆ ಅಬಾಲವೃದ್ಧರಾಗಿ ದೇಶಾದ್ಯಂತ ಹೋರಾಟ ಹರಳುಗಟ್ಟಿತು. ಸತ್ಯಾಗ್ರಹಿಗಳ ಮೇಲೆ ಪೋಲೀಸರು ಲಾಠಿ ಬೀಸಿದರೂ, ಅಶ್ರುವಾಯು ಪ್ರಯೋಗನಡೆಸಿದರೂ ಗಾಂಧೀಜಿಯವರ ಆಶಯದಂತೆ ಹೋರಾಟ ಮಾತ್ರ ಅಹಿಂಸಾತ್ಮಕವಾಗಿಯೇ ನಡೆಯಿತು. ಆದರೂ ಅಲ್ಲಲ್ಲಿ ಹೋರಾಟಗಾರರು ಆಕ್ರೋಶ, ಆರ್ಭಟ, ಆವೇಶ, ಪ್ರತೀಕಾರದ ಪ್ರತೀಕವಾಗಿ ಹಿಂಸಾತ್ಮಕ ಘಟನೆಗಳು ನಡೆದವು. ಈ ಅವಧಿಯಲ್ಲಿ ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಅಚ್ಯುತ ಪಟವರ್ಧನ, ಅರುಣಾ ಅಸಫ ಅಲಿ, ಸಾನೆ ಗುರೂಜಿ ಮುಂತಾದ ವಿಚಾರವಾದಿ ಚಿಂತಕರು ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾದ ಮಾರ್ಗದರ್ಶನ ನೀಡುತ್ತಿದ್ದರು. ಈ ನಡುವೆ ನಾಡಿನಾದ್ಯಂತ ಪತ್ರಿಕೆಗಳು ಚಲೇಜಾವ್ ಚಳುವಳಿಗೆ ಬೆಂಬಲವಾಗಿ ನಿಂತದ್ದು ಒಂದು ಮಹತ್ವದ ಅಂಶ. ಕರ್ನಾಟಕದಲ್ಲಿ ಸಂಯುಕ್ತ ಕರ್ನಾಟಕ, ವಿಶ್ವಕರ್ನಾಟಕ, ತಾಯಿನಾಡು ದಂತಹ ಪತ್ರಿಕೆಗಳು ಮಹತ್ವದ ಪಾತ್ರವಹಿಸಿದವು. ಜೊತೆಗೆ ನಡೆದ ಸವಿನಯ ಕಾನೂನುಭಂಗ ಚಳುವಳಿ, ಕರನಿರಾಕರಣೆ, ಮುಂತಾದ ಸತ್ಯಾಗ್ರಹ ಸಂಬಂಧಿ ಚಳುವಳಿಗಳು ಬ್ರಿಟೀಷರಿಗೆ ಅಸಹನೀಯ ವಾತಾವರಣ ಸೃಷ್ಟಿಸಿ ್ವಾತಂತ್ರ್ಯನಮಗೆ ಸಮೀಪವಾಗುವಂತೆ ಮಾಡಿದವು. ಇಂತಹ ಸಂಭ್ರಮದ ಸನ್ನಿವೇಶದಲ್ಲಿಯೇ ಪ್ರತ್ಯೇಕ ಪಾಕಿಸ್ತಾನದ ಬೇಡಿಕೆ ಗಾಂಧೀಜಿ ಯಂತಹವರಿಗೆ ಇರಿಸುಮುರುಸಾಯಿತು. ಜಿನ್ನಾರವರ ಪ್ರತ್ಯೇಕ ಪಾಕಿಸ್ತಾನ ಬೇಡಿಕೆ ನುಂಗ ಲಾರದ ತುತ್ತಾದಾಗ, ಭಾರತ ಅಖಂಡವಾಗಿ ಉಳಿಯಬೇಕು ಎಂಬುದು ಹೋರಾಟಗಾರರ ಬೇಡಿಕೆಯಾಗಿದ್ದರೂ ಅನಿವಾರ್ಯವಾಗಿ ಗಾಂಧೀಜಿಯವರು ೧೯೪೭ರ ಜೂನ್ ೪ರ ಸಭೆಯಲ್ಲಿ ಭಾರತದ ವಿಭಜನೆಗೆ ಒಲ್ಲದ ಮನಸ್ಸಿನಿಂದ ಒಪ್ಪಿಗೆ ಕೊಡಬೇಕಾಯಿತು.

ಗಾಂಧೀಜಿಯವರ ಈ ನಿಲುವನ್ನೇ ಕೆಲವು ವಿಘ್ನ ವಿನೋದಿಗಳು ಗಾಂಧೀಜಿಯವರಿಂದಲೇ ಭಾರತ ವಿಭಜನೆಯಾಯಿತು ಎಂದು ಈಗಲೂ ತಮ್ಮ ಬಾಯಿತೀಟೆ ತೀರಿಸಿಕೊಳ್ಳುತ್ತಿದ್ದಾರೆ. ಕೆಲವರು ಸತ್ಯವನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅಥವಾ ಎಲ್ಲವನ್ನು ಅಪಾರ್ಥ ಮಾಡಿ

ಕೊಳ್ಳುತ್ತಾರೆ. ಈ ಸಾಲಿಗೆ ಸೇರಿದವರ ಸಂಖ್ಯೆ ಭಾರತದಲ್ಲಿ ಕಡಿಮೆಯೇನಿಲ್ಲ. ಆದ್ದರಿಂದ ಅಂತವರು ಇನ್ನು ಮುಂದಾದರೂ 'ಗಾಂಧೀಜಿಯವರಿಂದ ಭಾರತ ಇಬ್ಭಾಗವಾಗಲಿಲ್ಲ, ಗಾಂಧೀಜಿಯವರಿದ್ದರೂ ಭಾರತ ಇಬ್ಭಾಗವಾಯಿತು' ಎಂಬ ಕಟುಸತ್ಯವನ್ನು ಗ್ರಹಿಸಲಿ ಎಂದು ಹಾರೈಸೋಣ.

ಅಂತು ಅಂದು ಒಂದು ಶುಭರಾತ್ರಿ. ೧೯೪೭ರ ಆಗಸ್ಟ್ ೧೫ರ ಮಧ್ಯರಾತ್ರಿಯಂದು ಜಗತ್ತು ಗಾಢನಿದ್ದೆಯಲ್ಲಿದ್ದಾಗ ಇಡೀ ಭಾರತ ಮೈಗಣ್ಣಾಗಿ ತುಂಬು ಹೃದಯದಿಂದ ಸ್ವಾತಂತ್ರ್ಯ ಸೂರ್ಯನನ್ನು ಸ್ವಾಗತಿಸಿದರು.

ನನ್ನ ದೃಷ್ಟಿಯಲ್ಲಿ ಇಂತಹ ಒಂದು ವಿಶಿಷ್ಟ ಕ್ರಾಂತಿ ನಡೆದದ್ದು ಭಾರತದಲ್ಲಿ ಮಾತ್ರ. ಇದಕ್ಕೆ ಕೆಲವು ಸಮರ್ಥನೆಗಳಿವೆ. ಈ ಕ್ರಾಂತಿಯ ನೇತಾರರಾಗಿ ಗಾಂಧೀಜಿಯವರು ಭಾರತದ ರಾಷ್ಟ್ರೀಯ ಹೋರಾಟವನ್ನು ಬರೀ ಬುದ್ದಿಜೀವಿ ಮಧ್ಯಮವರ್ಗದ ಜನಕ್ಕೆ ಮಾತ್ರ ಸೀಮಿತ ವಾಗಿದ್ದ ಚಳುವಳಿಯನ್ನು ಒಂದು ಜನಸಾಮಾನ್ಯರ ಸಾಮೂಹಿಕ ಕ್ರಾಂತಿಕಾರಿ ಸಂಗ್ರಾಮ ವನ್ನಾಗಿ ಪರಿವರ್ತಿಸಿದರು. ಈ ಹೋರಾಟಕ್ಕೆ ಬೇಕಾದ ಶಿಸ್ತುಬದ್ಧ ವ್ಯವಸ್ಥೆಯನ್ನು ರೂಪಿಸಿ ಪರಿಣಾಮಕಾರಿ ಕ್ರಿಯಾವಿಧಾನವನ್ನು ಒದಗಿಸಿದರು. ಬ್ರಿಟೀಷರ ವಸಾಹತುಶಾಹಿಯನ್ನು ಮತ್ತು ವಸಾಹತುಗಳನ್ನು ಏಕಕಾಲದಲ್ಲಿ ಹೊಸಕಿ ಹಾಕುವ ಕ್ರಾಂತಿನಡೆದದ್ದು ಭಾರತದಲ್ಲಿ ಮಾತ್ರ. ನಮ್ಮ ಈ ಅನುಪಮ ಸ್ವಾತಂತ್ರ್ಯ ಸಾಧನೆಯ ಹಿಂದೆ ಗಾಂಧೀಜಿಯವರ ವ್ಯಕ್ತಿತ್ವ ಚಿಂತನೆ, ಸತ್ಯಾಗ್ರಹದ ಪರಿಕಲ್ಪನೆ, ಅಹಿಂಸೆಯ ಅಡಿಪಾಯ, ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಾಮಾನ್ಯರನ್ನು, ದುರ್ಬಲರನ್ನು, ದಲಿತರನ್ನು ಸ್ವಾಭಿಮಾನದಿಂದ ಸಂಘಟಿಸಿ ಎಲ್ಲರನ್ನು ಆತ್ಮಗೌರವದ ಹೋರಾಟದಲ್ಲಿ ತೊಡಗಿಸಿದ ದೈತ್ಯಶಕ್ತಿಯಿದೆ. ಒಂದು ಪ್ರಬಲ ಪ್ರಭುತ್ವವನ್ನು ಮತ್ತು ಅದರ ದೈತ್ಯಸೇನಾಬಲವನ್ನು ಮಣಿಸಬಲ್ಲ ನೈತಿಕ ಶಕ್ತಿ ಗಾಂಧೀಜಿ ಯವರಿಗೆ ಮಾತ್ರ ಇತ್ತು. ಈ ನಿಟ್ಟಿನಲ್ಲಿ ಅಮೆರಿಕಾ, ಚೀನಾ, ರಷ್ಯಾದಂತಹ ದೇಶಗಳ ಕ್ರಾಂತಿಗಳಿಗೆ ಹೋಲಿಸಿದರೆ ನಮ್ಮ ಕ್ರಾಂತಿಯ ಅನಾದೃಶ ಶಕ್ತಿ ವೇದ್ಯವಾಗುತ್ತದೆ. ಈ ರಾಷ್ಟ್ರಗಳಲ್ಲಿ ಆದದ್ದು ಕೇವಲ ಮೇಲುಮೇಲಿನ ಸಾಮಾಜಿಕ ಪರಿವರ್ತನೆ ಮಾತ್ರ. ಆದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಸ್ವರೂಪ ಮತ್ತು ಉದ್ದೇಶಗಳು ಆಮೂಲಾಗ್ರ ಬದಲಾವಣೆ ಬಯಸುವಂತಹವುಗಳು. ಇಲ್ಲಿ ಮುಖ್ಯವಾಗಿ ಉಲ್ಲೇಖಿತವಾಗಬೇಕಾಗಿರುವುದು ಹತ್ತಿರಹತ್ತಿರ ಮೂರುನೂರು ವರ್ಷಗಳ ದಾಸ್ಯಪರಂಪರೆಯನ್ನು ಮೂಲೋತ್ಪಾಟನೆ ಮಾಡಲು ಅಗತ್ಯ ವಾಗಿದ್ದ ಸ್ವಾಭಿಮಾನ ಅಂಕುರಿಸುವಂತೆ ಮಾಡಿ ಭಾರತೀಯರಲ್ಲಿ ಇಂಗಿಹೋಗಿದ್ದ ನೈತಿಕಶಕ್ತಿ ಯನ್ನು ಪುನರುತ್ಥಾನ ಮಾಡಿದ ಗಾಂಧೀಜಿಯವರ ಅಂತಃ ಶಕ್ತಿಯನ್ನು. ಈ ಅಂಶವನ್ನು ಯಾರೂ ಹಗುರವಾಗಿ ಕಾಣುವಂತಿಲ್ಲ. ವಿರೋಧಿಗಳ ಮನಪರಿವರ್ತನೆ ಮಾಡಿ, ದ್ವೇಷ, ರಕ್ತಪಾತ, ಹಿಂಸೆಯಿಲ್ಲದೆ ಒಂದು ರಾಷ್ಟ್ರಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿ ನೇತೃತ್ವದ ಜನಾಂದೋಲನೆ ಇಡೀ ವಿಶ್ವಕ್ಕೇ ಮಾದರಿಯಾದುದು. ಇಂದು ಜಗತ್ತಿನಾದ್ಯಂತ ರುದ್ರ ನರ್ತನಗೈಯುತ್ತಿರುವ ಹಿಂಸೆ, ಭಯೋತ್ಪಾದನೆ, ನರಮೇಧದಂತಹ ಜಾಗತಿಕ ಸಮಸ್ಯೆಗಳಿಗೆ ಗಾಂಧೀ ಪ್ರಣೀತ ತತ್ವಗಳೇ ಪರಿಹಾರಕೊಡಬಲ್ಲವು. ಈ ಅರ್ಥದಲ್ಲಿ ಮತ್ತೆಗಾಂಧಿ ನೆನಪಿಗಾಗಿ ಹೆಚ್ಚು ಪ್ರಸ್ತುತರಾಗುತ್ತಾರೆ. ಇಂತಹ ದೇವತಾ ಸ್ವರೂಪ ವ್ಯಕ್ತಿಯನ್ನು ರಾಷ್ಟ್ರಕವಿ ಕುವೆಂಪು ಅವರು ಸಭ್ಯತಾ ದೇವತೆ ಎಂದು ಕರೆದಿದ್ದಾರೆ.

**ಹಲಗಲಿ ಬಂಡಾಯ:** ನಿಜವಾದ ಅರ್ಥದಲ್ಲಿ ೧೮೨೪ರಂದೇ ಪ್ರಾರಂಭವಾದ ಬ್ರಿಟೀಷ್ ವಿರುದ್ಧದ ಹೋರಾಟದಲ್ಲಿ ಕರ್ನಾಟಕದ ಪಾಲು ಗಮನಾರ್ಹವೇ ಆಗಿದೆ. ಇಂತಹ ಬಂಡಾಯ ಗಳಲ್ಲಿ ಕಿತ್ತೂರು ದಂಗೆ, ಕೊಡಗಿನ ಬಂಡಾಯ, ಸುರಪುರದ ಬಂಡಾಯ ಮತ್ತು ಹಲಗಲಿ ಬಂಡಾಯಗಳು ಪ್ರಮುಖವಾದವುಗಳು. ಇವುಗಳಲ್ಲಿ ಎಲ್ಲರ ಗಮನ ಸೆಳೆಯುವ ಬಂಡಾಯ ವೆಂದರೆ ಹಲಗಲಿ ಎಂಬ ಸಣ್ಣ ಊರಿನ ದೊಡ್ಡಬಂಡಾಯ. ಈ ಬಂಡಾಯ ಕಥನ ರೋಮಾಂಚನಕಾರಿಯಾದುದು ಮತ್ತು ವೀರೋಚಿತವಾದುದು.

ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ೧೫೦ ವರ್ಷ ಹೇಗೋ ಹಾಗೆಯೇ ಹಲಗಲಿ ಬಂಡಾಯಕ್ಕೆ ಸರಿಯಾಗಿ ೧೫೦ ವರ್ಷಗಳು ತುಂಬುತ್ತದೆ. ೧೮೫೭ರ ಸರಣಿ ಬಂಡಾಯಗಳಲ್ಲಿ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಸಂಭವಿಸಿದ್ದು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿ ಎಂಬ ಗ್ರಾಮದಲ್ಲಿ. ಇದು ಹಲಗಲಿಯ ಬೇಡರ ಬಂಡಾಯವೆಂದೇ ಪ್ರತೀತಿ. ಹಲಗಲಿ ಗುಡ್ಡದ ಓರೆಯಲ್ಲಿರುವ ಸಣ್ಣ ಗ್ರಾಮ. ಇಲ್ಲಿನ ನಾಯಕ ಸಮುದಾಯ ದವರು ಜೀವನೋಪಾಯಕ್ಕಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರು. ಅಪರಾಧಿ ಪ್ರವೃತ್ತಿ ಯಿಂದಲ್ಲ. ಬ್ರಿಟೀಷ್ ಸರಕಾರ

ಜಾರಿಗೊಳಿಸಿದ ಶಸ್ತ್ರಾಸ್ತ್ರ ಅಧಿಸೂಚನೆಯನ್ನು ಪಾಲಿಸಲು ನಿರಾಕರಿಸಿ, ತಮ್ಮ ಆಯುಧಗಳನ್ನು ಸರಕಾರಕ್ಕೆ ಒಪ್ಪಿಸದೇ ೧೮೫೭ರ ನವೆಂಬರ್‌ನಲ್ಲಿ ಅಲ್ಲಿನ ಬೇಡರು ಪ್ರತಿಭಟಿಸಿದ್ದೇ ಹಲಗಲಿ ಬಂಡಾಯ. ಬ್ರಿಟೀಷ್ ಸರಕಾರದ ದಬ್ಬಾಳಿಕೆ ದಮನಕಾರಿ ಪ್ರವೃತ್ತಿಗೆ ತೀರ ಮುಗ್ಧರಾಗಿದ್ದ ವೀರನಾಯಕ ಸಮುದಾಯದ ನಾಯಕರು ತಮಗರಿವಿಲ್ಲದೇ ಬಲಾಢ್ಯ ಬ್ರಿಟೀಷ್ ಸಾಮ್ರಾಜ್ಯದ ಜೈನುಗೂಡಿಗೆ ಕಲ್ಲೆಸೆದು ಕೆಣಕಿದ್ದರು. ಅದರ ಪರಿಣಾಮ ಮಾತ್ರ ಘೋರ. ನಾವು ಭಾರತದ ಸ್ವಾತಂತ್ರ್ಯ ಚಳುವಳಿಯ ಅವಿಭಾಜ್ಯ ಅಂಗವಾಗುತ್ತಿದ್ದೇವೆ ಎಂಬ ಪರಿಕಲ್ಪನೆಯೇ ಇಲ್ಲದ ಕೆಚ್ಚೆದೆಯ ಕಲಿಗಳ ಈ ಬಂಡಾಯ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ವಿಶಿಷ್ಟ ಸ್ಥಾನಪಡೆದಿದೆ. ಊರು ಚಿಕ್ಕದಿದ್ದರೂ, ಜನ ಸ್ವಲ್ಪೇ ಇದ್ದರೂ ಬ್ರಿಟೀಷ್ ಸರಕಾರದ ಶಾಸ್ತ್ರಾಸ್ತ್ರ ನಿಯಂತ್ರಣ ಕಾಯ್ದೆಯ ವಿರುದ್ಧ ಮಲೆನಿಂತ ಈ ವೀರರ ಚರಿತ್ರೆ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿಯೇ ಉಳಿಯುತ್ತದೆ.

ಬೇಟೆಯೇ ಜೀವನಾಂಶಕ್ಕೆ ಪೂರಕವಾಗಿದ್ದ ಈ ನಾಯಕ (ವಾಲ್ಮೀಕಿ) ಸಮುದಾಯಕ್ಕೆ ಶಸ್ತ್ರಾಸ್ತಗಳು ಅಗತ್ಯವಾದದ್ದು ಬೇಟೆಗೆ ಹೊರತು ಹೊಡೆದಾಟಕ್ಕಲ್ಲ. ಆದರೆ ಶಸ್ತ್ರಾಸ್ತ್ರಗಳನ್ನು ಮರಳಿ ಪ್ರಭುತ್ವಕ್ಕೆ ಒಪ್ಪಿಸಬೇಕೆಂಬ ಕಂಪನಿ ಸರಕಾರದ ಆದೇಶ ಬೇಡಸಮುದಾಯದ ಜೀವನೋಪಾಯಕ್ಕೇ ಸಂಚಕಾರ ತಂದಿತ್ತು. ಈ ದಬ್ಬಾಳಿಕೆಯನ್ನು ಸಹಜವಾಗಿ ಅವರು ವಿರೋಧಿಸಿದರು. ಅವರಿಗೆ ಮರಾಠಾ ಸೈನಿಕ ಬಾಬಾಜಿ ನಿಂಬಾಳಕರ ಎಂಬುವನು ಬ್ರಿಟೀಷರ ವಿರುದ್ಧ ಬಂಡೇಳುವಂತೆ ಪ್ರೋಕೊಡುತ್ತಿದ್ದ. ಈ ನಡುವೆ ಕಂಪನಿಸರಕಾರ ಹಾಗೂ ಹಲಗಲಿಯ ಹೋರಾಟಗಾರರ ನಡುವೆ ಮಧ್ಯಸ್ಥಿಕೆಗಾರನಾಗಿ ಕಣದರಗಿಯ ಕೃಷ್ಣ ರಾವ್ ಎಂಬ ಕಾರ್ಯಭಾರಿ ಸಂಧಾನಕ್ಕೆ ಪ್ರಯತ್ನಿಸಿದರೂ ಅವನ ಸಂಧಾನ ಫಲಕಾರಿಯಾಗಲಿಲ್ಲ. ಜೀವನಾಧಾರಕ್ಕೆ ಬೇಟೆ. ಆ ಬೇಟೆಗೆ ಬೇಕಾದ ಆಯುಧಗಳನ್ನು ಬ್ರಿಟೀಷರಿಗೆ ಒಪ್ಪಿಸಿದರೆ ಜೀವಕ್ಕೆ ಸಂಚಕಾರ ಬಂದೀತು ಎಂಬ ಭಾವನೆಯಿಂದ ಅವರು ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಒಪ್ಪಿಸಲು ನಿರಾಕರಿಸಿದರು. ಜೀವ ಹೋದರೂ ಸರಿ ಹತ್ಯಾರಗಳನ್ನು ಕೊಡುವುದಿಲ್ಲ ಎಂದು ತಿಳಿಸಿದರು.

ಮುಂದಿನದು ಮಾತ್ರ ರಕ್ತರಂಜಿತ ಅಧ್ಯಾಯವೇ. ಹಾಗೆ ನೋಡಿದರೆ ಬ್ರಿಟೀಷರ ವಿರುದ್ಧ ಹೋರಾಡುವುದಕ್ಕೆಂದೇ ಈ ವೀರಬೇಡರು ಶಸ್ತ್ರಾಸ್ತ್ರಗಳನ್ನು ಹೊಂದಿರಲಿಲ್ಲ. ಆದರೆ ಬ್ರಿಟೀಷರು ಮೊದಲೇ ಅಧಿಕಾರದ ಅಮಲಿನ ಅಲೆಯಮೇಲೆ ತೇಲುತ್ತಿದ್ದರು. ಅವರು ಹಲಗಲಿಯ ಬೇಡರ ಸಹಜವಾದ ಆಸೆ ಮತ್ತು ಅಭಿಮಾನವನ್ನು ಅಪಾರ್ಥಮಾಡಿಕೊಂಡರು. ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಮರಳಿಸದಿರಲು ಇರುವ ಸಕಾರಣಗಳನ್ನು ಬ್ರಿಟೀಷ್ ಸರಕಾರ ಅರ್ಥಮಾಡಿಕೊಡುವಲ್ಲಿ ವಿಫಲರಾದರು. ಬೇಡರ ಈ ನಿರಾಕರಣೆಗೆ ಕಂಪನಿ ಸರಕಾರ ೧೮೫೭ರ ನವೆಂಬರ ೨೯ರ ಮಧ್ಯರಾತ್ರಿ ೬೦೦ ಅಶ್ವಾರೂಢ ಸೈನಿಕರೊಂದಿಗೆ ಹಲಗಲಿಯನ್ನು ಮುತ್ತಿದರು. ದಾಳಿಗೆ ಹೆದರದ ಬೇಡರು ಪ್ರತಿಯಾಗಿ ಅದನ್ನು ಎದುರಿಸಿತು. ರಾತ್ರಿಯ ಹೊತ್ತು ನಿಕರದ ಹೋರಾಟವೇ ನಡೆಯಿತು. ಫಸ್ಟ್ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟ್ ವಿಲಿಯಂ ಹೆನ್ರಿ ಹೆವಲಾಕ್ ಎಂಬ ಅಧಿಕಾರಿ ಬೇಡರ ಈ ದಾಳಿಯಲ್ಲಿ ಹತನಾದ. ಇದರಿಂದ ಹೆದರಿದ ಕರ್ನಲ್ ನೆಟನ್‌ಕರ್ ಹೆಚ್ಚಿನ ಸೈನ್ಯಕಳಿಸುವಂತೆ ಕೇಳಿಕೊಂಡ. ಮರುದಿನ ಇನ್ನಷ್ಟು ನಿಕರದ ಹೋರಾಟನಡೆದು ಎರಡೂ ಕಡೆ ಅಪಾರ ಸಾವು ನೋವು ಸಂಭವಿಸಿದವು. ನಾಯಕ ಸಮುದಾಯದ ಈ ಕೆಚ್ಚೆದೆಯ ಕಲಿತನಕ್ಕೆ ಹೆದರಿ, ಬ್ರಿಟೀಷ್ ಸೇನೆ ಮಧ್ಯರಾತ್ರಿ ಊರಿಗೆ ಬೆಂಕಿಹಚ್ಚಿತು. ಬೆಂಕಿಯ ದಳ್ಳುರಿಗೆ ಸಿಕ್ಕು ಆರ್ತನಾದ ಗೈದ ಮಕ್ಕಳ ಮತ್ತು ದನಕರುಗಳ ಕ್ಷಣೆಗೆ ಮುಂದಾದ ಬೇಡರ ಪಡೆಯ ವೀರರನ್ನು ಸೇನೆ ಗುಂಡಿಟ್ಟು ಕೊಂದಿತು. ಜಡಗಾ-ಬಾಲಾ ಎಂಬ ಗ್ರಾಮದ ಬೇಡರ ಮುಖಂಡರು ದಿಟ್ಟ ಹೋರಾಟ ನಡೆಸಿದರೂ ಬ್ರಿಟೀಷ್ ಸೇನೆಯ ವಿರುದ್ಧ ನಿಲ್ಲಲಾಗಲಿಲ್ಲ. ದಾಳಿಯಿಂದ ತಪ್ಪಿಸಿಕೊಳ್ಳಲು ಹತ್ತಿಕಟ್ಟೆಗೆಯಲ್ಲಿ ಅವಿತು ಕೊಂಡಿದ್ದ ೨೩ ಜನರನ್ನು ಸೇನೆ ಸುಟ್ಟುಹಾಕಿತು. ಹೀಗೆ ಒಂದು ರಕ್ತರಂಜಿತ ಅಧ್ಯಾಯ ಕೊನೆಗೊಂಡಿತು.

ನಂತರ ಬ್ರಿಟೀಷ್ ಸೇನೆ ಸುಮಾರು ೨೯೦ ಜನರನ್ನು ಸೆರೆ ಹಿಡಿಯಿತು. ಇವರಲ್ಲಿ ಜಡಗಾ-ಬಾಲಾರನ್ನು ಒಳಗೊಂಡಂತೆ ಮುಧೋಳ ಮತ್ತು ಹಲಗಲಿಯಲ್ಲಿ ಗಲ್ಲಿಗೇರಿಸಿತು. ಹೀಗೆ ಹಲಗಲಿ ಬೇಡರ ಬಂಡಾಯವನ್ನು ಸೇನೆ ಹತ್ತಿಕ್ಕಿತು. ಅಂತು ತಮ್ಮ ಆತ್ಮರಕ್ಷಣೆಗೆ, ಹಾಗೆಯೇ ಸೂರ್ಯ ಮುಳುಗದ ಸಾಮ್ರಾಜ್ಯದ ದಬ್ಬಾಳಿಕೆಗೆ ಮಣಿಯಬಾರದು ಎಂಬ ಬೇಡರ ಕೆಚ್ಚೆದೆಯ ಹೋರಾಟ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಸಂವಾದಿಯಾಗಿ ನಿಲ್ಲಬಲ್ಲ ತಾಕತ್ತು ಹೊಂದಿದೆ. ದಿಟ್ಟ ಹೋರಾಟ ನಡೆಸುವ ಮೂಲಕ ಬ್ರಿಟೀಷರಿಗೆ ಭಾರತೀಯ ಸ್ವಾತಂತ್ರ್ಯ

ಹೋರಾಟಗಾರರ ಸ್ವಾಭಿಮಾನದ ಪರಿಚಯ ಮಾಡಿಸಿದ ಹಲಗಲಿಯ ಬೇಡರ ಈ ಬಲಿದಾನ ಚಿರಸ್ಥಾಯಿಯಾಗಿ ಉಳಿಯುತ್ತದೆ. ಈ ಕಡೆ ಯಾರಾದರೂ ಜಿಗುಟುತನದಿಂದ ಛಲದಿಂದ ವಾದಿಸಿದಾಗ ಜನ ಅರ್ಧ ವಿನೋದಿಂದ ಇನ್ನರ್ಧ ಹೆಮ್ಮೆಯಿಂದ, 'ಏ ಅವ್ರನ್ನ ತಡಿಬ್ಯಾಡ್ರೆಪೋ ಅವರ ಹಲಗಲಿ ಬ್ಯಾಡ್ರಿದ್ದಂಗ' ಎಂದು ಹೇಳುವುದನ್ನು ಕೇಳಬಹುದು. ಅಂತಹ ಕಲಿಗಳು ನಮ್ಮ ಊರ ಸಮೀಪದವರೇ ಎಂಬುದು ಹೆಮ್ಮೆಯ ವಿಚಾರ. ಈ ಶೂರ ಕಲಿಗಳು ಸ್ವಾತಂತ್ರ್ಯತಂದು ಕೊಡಲು ಸಾಧ್ಯವಾಗದಿದ್ದರೂ ಬ್ರಿಟೀಷರ ಗುಲಾಮಗಿರಿ ಯಲ್ಲಿ ಬದುಕುವುದಕ್ಕಿಂತ ವೀರಮರಣವೇ ಲೇಸೆಂದು ಸಾರಿ ದೇಶದ ಸ್ವಾತಂತ್ರ್ಯ ಪ್ರಾಪ್ತಿಯಲ್ಲಿ ಖಂಡಿತಕ್ಕೂ ತಮ್ಮ ಹೆಜ್ಜೆಯ ಗುರುತು ಉಳಿಸಿದವರು.

* * *

**ಹಲಗಲಿ ಬೇಡರು**

ಹೊತ್ತು ಬಂದಿತು ಮತ್ತ ನೋಡರಿ ಕತ್ತಿ ಹಿಡುವ ಜನಕ
ಶಿತ್ತಿನ ಮಂದಿ ಭಂಟರ ಹಲಗಲಿ ಮುಟ್ಟಲಿಲ್ಲ ದಡಕ || ಪಲ್ಲಾ ||

**೧ನೇ ನುಡಿ**

ವಿಲಾತಿಯಿಂದ ಹುಕುಮ ಕಳವಿದರ ಕುಂಪಣಿ ಸರಕಾರಾ
ಎಲ್ಲ ಜನರನಾ ತರಿಸಿ ಜೋರಿ ಮಾಡಿ ತರಬೇಕ ಹತಾರಾ
ಕತ್ತಿ ಕಟಾರಿ ಕೈ-ಚೂರಿ ಬಾಕು ಗುರ್ದಿ ಸುರಾಯಿ ಚಕ್ರಾ
ಬಾಲಿಯ ಬರ್ಚಿ ಬಿಚ್ಚುಗತ್ತಿ ನೋಡ ಬಾಣಬಿಲ್ಲಿನವರಾ
ಪಟಾತ ಪಿಸ್ತುಲ ಕರುಲಿ ತೇಗಾ ಚಾಪಗೊಡ್ಲಿಶಸ್ತ್ರಾ
ತೋಪು ತುಬಾಕಿ ಹೊಡವು ಮದ್ದ ಗುಂಡ ಬಿಡಬ್ಯಾಡರಿ ಚೂರಾ
ಮುಚ್ಚಿ ಇಟ್ಟವರಿಗೆ ಮೂರು ವರ್ಷದ ಬೇಡಿ ಹಾಕರಿ ಪೂರಾ
ಕೊಡದ ದಿಟಾಯಿ ಮಾಡಿದವರನಾ ಕಡದ ಹಾಕರಿ ತಾರಾ || ಚ್ಯಾಲ ||

## ೭. ನಿಶ್ಯಸ್ತ್ರೀಕರಣ ಕಾಯಿದೆ ಹಾಗೂ ಸ್ಥಳೀಯ ಪ್ರತಿಭಟನೆಗಳು

ಭಾರತದ ರಾಜಕೀಯ ಸ್ವಾತಂತ್ರ್ಯದ ಪೂರ್ವ ಕಾಲಘಟ್ಟದಲ್ಲಿ ಭಾರತದಾದ್ಯಂತ ವಿವಿಧ ರೀತಿಯಲ್ಲಿ ನಡೆದ ಸ್ಥಳೀಯ ಪ್ರತಿಭಟನೆಗಳನ್ನು ಭಾರತ ರಾಜಕೀಯ ಸ್ವಾತಂತ್ರ್ಯದ ಪೂರ್ವಸಿದ್ಧತೆಯ ರಂಗತಾಲೀಮು ಎನ್ನುವಂತೆ ವ್ಯಾಖ್ಯಾನಿಸುತ್ತ ಬರಲಾಗಿದೆ. ವಿಶೇಷವಾಗಿ ೧೮೫೭ರ ಆಸು ಪಾಸಿನಲ್ಲಿ ಕರ್ನಾಟಕದೊಳಗೆ ನಡೆದ ಕಿತ್ತೂರು ಬಂಡಾಯ, ನರಗುಂದ ಬಂಡಾಯ, ಹಲಗಲಿ ಬಂಡಾಯ, ಸಿಂಧೂರ ಲಕ್ಷ್ಮಣನ ದಂಗೆ (ಸು. ೧೯೨೪) ಮುಂತಾದ ಪ್ರತಿಭಟನೆಗಳನ್ನು ವ್ಯಾಖ್ಯಾನಿಸಿದ ರೀತಿಗಳನ್ನು ಇಂದು ಪುನರ್ ವಿಮರ್ಶೆಗೆ ಅಣಿಗೊಳಿಸ ಬೇಕಾದ ಅಗತ್ಯವಿದೆ. ಇಂಥ ಪ್ರತಿಭಟನೆಗಳನ್ನು 'ದಂಗೆ', 'ಬಂಡಾಯ', 'ತಳ್ಳಿ', ಮತ್ತು 'ಸ್ವಾತಂತ್ರ್ಯ ಹೋರಾಟ'ಗಳೆಂದು ವಸಾಹತುಶಾಹಿ ಹಾಗೂ ರಾಷ್ಟ್ರೀಯವಾದಿ ಸಂಕಥನ ಗಳೊಳಗಿಟ್ಟು ವಿಶ್ಲೇಷಿಸಲಾಗಿದೆ. ಚರಿತ್ರೆಯನ್ನು ಒಂದು ಏಕಾಕೃತಿಯೊಳಗಿಂದ ಗ್ರಹಿಸುವ ಇಂಥ ವಿಧಾನಗಳು ಈಗಾಗಲೇ ಚಾಲ್ತಿಯಲ್ಲಿರುವ ಸಂಗತಿಗಳನ್ನೇ ಮತ್ತೆ ಮತ್ತೆ ಹೇಳುತ್ತಿರು ತ್ತವೆ. ಕೇಂದ್ರ ಹಾಗೂ ಪಂಥೀಯ ಎನ್ನುವ ವರ್ಗೀಕೃತ ವಿನ್ಯಾಸದಲ್ಲಿಯೇ ಇಂದು ಸ್ಥಳೀಯ ಕ್ರಿಯಾಶೀಲ ನೆಲೆಗಳನ್ನು ಪುನರ್ ನಿರ್ಮಿಸಿಕೊಳ್ಳುತ್ತಿದ್ದೇವೆ. ರಾಜನ ಬದಲು ಜನರ ದೃಷ್ಟಿಯಲ್ಲಿಯೇ ಪ್ರಭುತ್ವದ ಚರಿತ್ರೆಯನ್ನು ಹೇಳಲಾಗುತ್ತದೆಯೇ ಹೊರತು ಜನರ ಚರಿತ್ರೆಯನ್ನಲ್ಲ.

ಲಿಖಿತ ಅಥವಾ ಆ ಸ್ವರೂಪದ ದಾಖಲೆಗಳ ಮೂಲಕ ಸ್ಥಳೀಯ ಪ್ರಕ್ರಿಯೆ ಹಾಗೂ ಸಂಕಥನಗಳ ಮೂಲಕ ಇಂಥ ಸ್ಥಳೀಯ ಪ್ರತಿಭಟನೆಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಏಕರೂಪದ, ಸರಳ ರೇಖಾತ್ಮಕ ಹಾಗೂ ಪಂಚಾಂಗೀಯ ನೆಲೆಯಲ್ಲಿ ಇಂಥ ಸಾಮಾಜಿಕ ಸಂಚಲನೆಗಳನ್ನು ವಿಶ್ಲೇಷಿಸುವ ಬದಲು ಅದರ ಸಾಮಾಜಿಕ ಹಾಗೂ ಸಾಂದರ್ಭಿಕ ಸಂಗತಿಗಳ ಮೂಲಕ ವ್ಯಾಖ್ಯಾನಿಸಿಕೊಳ್ಳಬೇಕಾಗಿದೆ. ಕಾರಣ ಸರಳರೇಖಾತ್ಮಕವಾದ ಪಂಚಾಂಗೀಯ ನೆಲೆಗಳಲ್ಲಿ ಸಾರ್ವಭೌಮ ಅಧಿಕಾರ ರಾಜಕಾರಣದ ಸ್ವಯಂಘೋಷಿತ ದೃಷ್ಟಿಕೋನ ಮುಖ್ಯ ವಾಗಿರುತ್ತದೆ. ಅವು ಸ್ವತಂತ್ರ ವ್ಯಕ್ತಿತ್ವಕ್ಕಾಗಿ ಹೋರಾಡುವವರನ್ನು 'ದಂಗೆಕೋರರು' 'ಪುಂಡರು' 'ಪಟಿಂಗರು' 'ತಂಟೆಕೋರರು', 'ಡಕಾಯಿತರು', 'ಸ್ವಭಾವತಃ ಗಲಭೆಕೋರರು', 'ದಾರಿ ಬಡುಕರು' ಎಂದು ವ್ಯಾಖ್ಯಾನಿಸುತ್ತವೆ. ಬ್ರಿಟೀಷ್ ದಾಖಲೆಗಳಂತೂ ಇಂಥವರನ್ನು 'ರೆಬಲ್ಸ್' ಎಂದು ಕರೆಯುತ್ತವೆ. ಇವತ್ತಿಗೂ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣ, ಹಲಗಲಿ ಬೇಡರು ನಡೆಸಿದ ವ್ಯವಸ್ಥೆಯೊಂದಿಗಿನ ಗುದ್ದಾಟಗಳನ್ನು ಇದೇ ಮಾದರಿಯಲ್ಲಿಯೇ ಅರ್ಥಮಾಡಿಕೊಂಡು ಖುಷಿ ಪಡುತ್ತಿದ್ದೇವೆ. ನಮ್ಮನ್ನು ನಾವೇ ತಳ್ಳಿಕೋರರು ಎಂದು ಕರೆದುಕೊಂಡು ಆತ್ಮ ಸಂತೋಷ ಅನುಭವಿಸುವ ಹಾಗೂ ಮೀಸಿ ಹುರಿಗೊಳಿಸಿ ಬೀಗುವ ಸ್ಥಿತಿಗೆ ತಲುಪಿದ್ದೇವೆ. ಇಂದು ನಮ್ಮ ವಿಸ್ಮೃತಿಗೆ ನಾವೇ ಕಾರಣರಾಗಿದ್ದೇವೆ. ಚರಿತ್ರೆ ವ್ಯಾಖ್ಯಾನಿಸಿದ ದಾಸ್ಯ ಸ್ಥಿತಿಯನ್ನೇ ಪರಮ ಮೋಕ್ಷ ಎಂದು ಭಾವಿಸಿಕೊಂಡಿರುವ ಸ್ಥಿತಿ ಈ ಮೂರು ದಿನಗಳ ಕಾಲ ನಡೆದ ಹೆಚ್ಚಿನ ಚರ್ಚೆಯಲ್ಲಿ ಬಿಂಬಿತವಾಯಿತು. ಹಾಗಾಗಬಾರದು. ನಮ್ಮ ಚರಿತ್ರೆಯನ್ನು ನಮ್ಮ ದೃಷ್ಟಿಕೋನಗಳಿಂದ ಬದುಕಿನ ಒಳಗಡೆಯಿಂದ ಒಮ್ಮೆ ನೋಡಿಕೊಳ್ಳಬೇಕಾಗಿದೆ. ಆ ಮೂಲಕ ಊನಗೊಂಡ ಹಾಗೂ ಗೈರು ಹಾಜರಾಗಿರುವ ಅನುಭವ ಜಗತ್ತನ್ನು ಚರಿತ್ರೆಯ ಮುಖ್ಯ ವಾಹಿನಿಗೆ ತರಬೇಕಾಗಿದೆ. ಹೊಸ ರೀತಿಯ ವ್ಯಾಖ್ಯಾನಗಳಿಗೆ ಗುರಿಪಡಿಸಬೇಕಾಗಿದೆ.

**ದುಡಿತದ ಮೇಲಿನ ದಿಗ್ಬಂಧನ**

ಹಲಗಲಿ ಬಂಡಾಯ ಹಾಗೂ ಸಿಂಧೂರ ಲಕ್ಷ್ಮಣ ಇಂಥ ಸ್ವಯಂಪ್ರೇರಿತ ಪ್ರತಿಭಟನೆಗಳು ಬಹು ಮುಖ್ಯವಾಗಿ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಯ ಆಯಾಮಗಳೊಂದಿಗೆ ಥಳುಕು ಹಾಕಿಕೊಂಡಿವೆ. ಹಾಗಾಗಿ ಭಾರತದ ರಾಜಕೀಯ ಸ್ವಾತಂತ್ರ್ಯದ ಚೌಕಟ್ಟಿನೊಳಗಷ್ಟೇ ಇಟ್ಟು ನೋಡಿದರೆ ಆ ಪ್ರತಿಭಟನೆಗಳಿಗಿದ್ದ ಸ್ಥಳೀಯ ತುರ್ತು ಮರೆಮಾಚುತ್ತದೆ. ಆರ್ಥಿಕ ಖಾಸಗೀಕರಣ ಬಂಡವಾಳಶಕ್ತಿಯ ಕೇಂದ್ರೀಕರಣವಾದಂತೆ ಭಕ್ತಿಯ ಖಾಸಗೀಕರಣ ಶಿವಭಕ್ತಿಯ ಕೇಂದ್ರೀಕರಣವು ಆಗಬಲ್ಲದು. ಹಾಗೆ ನಿಶಸ್ತ್ರೀಕರಣ ಎನ್ನುವ ಕಾಯಿದೆಯ ಹೇರಿಕೆ ಕೂಡ ಶ್ರಮಿಕ ವರ್ಗಗಳ ದಾಸ್ಯದ ಪ್ರತೀಕವೂ ಆಗಿದೆ. ಬ್ರಿಟೀಷ್ ಆಳ್ವಿಕೆಯ ರೀತಿ ರಿವಾಜುಗಳಿಗೆ ಸರಿಯಾಗಿ ಇನ್ನೂ ಹೊಂದಿಕೊಳ್ಳದಿದ್ದ ದುಡಿದ ವರ್ಗಗಳಿಗೆ ಈ ಆಜ್ಞೆ ದೊಡ್ಡ ಆಘಾತ ತಂದಿತ್ತು.

ಹಲಗಲಿ ದಕ್ಷಿಣ ಮರಾಠಾ ನಾಡಿನ ಮುಧೋಳ ಸಂಸ್ಥಾನಕ್ಕೆ ಸೇರಿದ ಕೊನೆಯ ಹಳ್ಳಿ ಯಾಗಿತ್ತು. ೧೮೫೭ರ ಬಂಡಾಯದ ಪರಿಣಾಮವಾಗಿ ಬ್ರಿಟೀಷ್ ಜಿಲ್ಲೆಗಳಲ್ಲಿ ಹಾಗೂ ಅವರ ರಾಜಕೀಯ ಮೇಲ್ವಿಚಾರಣೆಗೊಳಪಟ್ಟ ಸ್ವದೇಶಿ ಸಂಸ್ಥಾನಗಳಲ್ಲಿ ಈ ಕಾಯಿದೆ ಊರ್ಜಿತಗೊಂಡಿತು. ಸಂಸ್ಥಾನಗಳು ಈ ಕಾಯಿದೆ ಕುರಿತು ಯಾವ ಪ್ರತಿಕ್ರಿಯೆಯನ್ನು ವಹಿಸಲಿಲ್ಲ. ಆದರೆ ಸಂಸ್ಥಾನಗಳಿಗೆ ನಿಷ್ಠರಾಗಿದ್ದ ಸ್ಥಳೀಯ ಸೇವಾವರ್ಗಗಳು ಅನ್ಯಮೂಲದ ಇಂಥ ಕಾಯಿದೆಗಳಿಂದ ಕಂಗಾಲಾಗುವಂತಾಯಿತು. ಯಾವಾಗಲೂ ಅಧಿಕಾರ ವರ್ಗಗಳು ಆ ಸ್ಥಾನಿಕ ಉತ್ಪಾದನೆ ಅಥವಾ ಅಂಥ ಸಾಮಗ್ರಿಗಳ ಮೇಲೆ ಒಡೆತನವನ್ನು ಹೊಂದಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಿರುತ್ತವೆ. ಇಂಥ ಸಂದರ್ಭದಲ್ಲಿ ದುಡಿದ ವರ್ಗಗಳಿಗೆ ತನ್ನ ಪ್ರತಿನಿಧೀಕರಣ ಹಾಗೂ ಪ್ರತಿಭಟನೆ ಮಾಡಲು ಇರುವ ಏಕೈಕ ಮಾರ್ಗವೆಂದರೆ ಉತ್ಪಾದನಾ ಸಾಮರ್ಥ್ಯ ಹಾಗೂ ಉತ್ಪಾದನಾ ಸಂಗತಿಗಳು. ಇವು ದುಡಿವ ವರ್ಗಗಳ ಕೈಗೆಟುಕದ ಕಾರಣ ಇವರಿಗೆ ನಿಲುಕದೆ ಹೋಗುತ್ತವೆ. ಅಧಿಕಾರ ಉಳ್ಳವರಿಂದ ಕೂಡಿದ ಜಾತಿಗಳ ವಶದಲ್ಲಿವೆ. ಸುಧಾರಣೆಗಳಿಂದು ಉಳ್ಳವರ ತಿಜೋರಿಯನ್ನು ಭರ್ತಿ ಮಾಡುತ್ತಿವೆ ಹೊರತು ಉಳಿದವರ ಹೊಟ್ಟೆಯನ್ನು ತುಂಬಿಸುತ್ತಿಲ್ಲ. ಕೈಗಾರಿಕಾಭಿವೃದ್ಧಿಯಂಥ ಅತೀ ನಾಗರೀಕ ಪ್ರಣೀತ ಹಂಬಲಗಳನ್ನು ಮುಂದಿಟ್ಟುಕೊಂಡು ನಡೆದ ಸ್ವಾತಂತ್ರ್ಯದ ಕಲ್ಪನೆಗೂ ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ, ಹಾಗೂ ಅವಮಾನಗಳ ವಿರುದ್ಧ ಸಿಡಿದೆದ್ದ ಸ್ಥಳೀಯ ಪ್ರತಿಭಟನೆಗಳಿಗೂ ಮಾಡುವ ಹೋಲಿಕೆ ಈ ಅರ್ಥದಲ್ಲಿ ವಿಹಿತವೆನಿಸದು. ಜನರ ಬದುಕಾಗಿ ಬರಬೇಕಾಗಿದ್ದ ಅಭಿವೃದ್ಧಿ ಅಥವಾ ಅಂತಹ ಸುಧಾರಣೆಗಳು ಜನರ ಬದುಕನ್ನು

ಕಸಿದುಕೊಳ್ಳುವ ಸ್ವಾರ್ಥಪರ ಚಿಂತನೆಗಳಾಗಿ ಪ್ರಚಲಿತಗೊಳ್ಳುತ್ತಿವೆ. ಅಭಿವೃದ್ಧಿ ಯನ್ನು ಜನರ ಬದುಕಾಗಿ ಪರಿವರ್ತಿಸಿಕೊಳ್ಳಲು ಸಾಧ್ಯವಾಗದಿರುವುದೇ ಸ್ವಾತಂತ್ರ್ಯೋತ್ತರ ಭಾರತದ ಬಹುದೊಡ್ಡ ವೈಫಲ್ಯವಾಗಿದೆ.

ದುಡಿವ ಜನರನ್ನು ಯಾಚಕರನ್ನಾಗಿ ಫಲಾನುಭವಿಗಳನ್ನಾಗಿ ನಿರಾಶಿತ್ರರನ್ನಾಗಿ ಮಾಡುವ ಕ್ರಿಯೆ ನಿಶ್ಯಸ್ತ್ರೀಕರಣ ಕಾಯಿದೆಯ ಗರ್ಭದೊಳಗಿದೆ. ದುಡಿವ ವರ್ಗಗಳ ಅನ್ನ ಹಾಗೂ ಅನನ್ಯತೆಯ ಪ್ರಶ್ನೆ ಇಲ್ಲಿದೆ. ಸುಧಾರಣೆಗಳು ಹಾಗೂ ಕಾಯಿದೆಗಳು ಜನರನ್ನು ಸಕ್ರಿಯಾತ್ಮಕ ವಾಗಿ ತೊಡಗಿಸಿಕೊಳ್ಳುವಂಥವಾಗಬೇಕೇ ಹೊರತು ಅವರನ್ನು ನಿಷ್ಕ್ರಿಯರನ್ನಾಗಿ ಮಾಡ ಬಾರದು. ನಿಶಸ್ತ್ರೀಕರಣ ಕಾಯಿದೆಯು ಸ್ಥಳೀಯ ಹಲವು ಸಮುದಾಯಗಳ ಅಸ್ತಿತ್ವವನ್ನೇ ಅಡಗಿಸಲು ಪ್ರಯತ್ನಿಸುತ್ತದೆ. ಹೀಗಾಗಿ ಕಂಪನಿ ಸರಕಾರದ ವಿರುದ್ಧ ದಂಗೆಯೆದ್ದದ್ದು ಶ್ರೀಮಂತ ವರ್ಗಗಳೂ ಅಲ್ಲ ದೇಶಗತಿಗಳೂ ಅಲ್ಲ, ಬದಲಾಗಿ ದಿನನಿತ್ಯ ದುಡಿದು ತಿನ್ನುವ ಶ್ರಮಿಕ ವರ್ಗಗಳು ಎಂಬುದು ಇಲ್ಲಿನ ವಿಶೇಷ.

ನಿಶ್ಯಸ್ತ್ರೀಕರಣ ಕಾಯಿದೆ ಅಡಿಯಲ್ಲಿ ನಿಷೇಧಕ್ಕೆ ಒಳಗಾದ ಹಲಗಲಿ ಬೇಡರ ಆಯುಧ ಗಳಾದರೂ ಎಂಥವು. ಲಾವಣಿಯೊಂದರಲ್ಲಿ ಹೇಳುವಂತೆ

"ಕತ್ತಿ, ಕಟಾರಿ, ಚೂರಿ, ಬಾಕು, ಗುರ್ದಿ, ಸುರಾಯಿ ಚಕ್ರಾ
ಬರ್ಚಿ, ಬಿಚ್ಚುಗತ್ತಿ ಬಾಣ ಬಿಲ್ಲಿನವರಾ"

"ಪಟಾತ ಪಿಸ್ತೂಲ ಕುರಲಿ ತೇಗಾ ಚಾಪಗೊಡ್ಲಿ ಶಸ್ತ್ರಾ
ತೋಪು ತುಬಾಕಿ ಹೊಡವ ಮದ್ದು ಗುಂಡಾ ಬಿಡಬ್ಯಾಡರಿ ಚೂರಾ"

ಮೇಲಿನ ಸಾಲಿನಲ್ಲಿ ಕಾಣುವ ಅಸ್ತ್ರಗಳ ವಿವರ ಕುತೂಹಲಭರಿತವಾದಂಥವು. ದುಡಿಮೆಗೆ ಅಂದಿನ ಅನ್ನದ ಅವತಾರಕ್ಕೆ ದುಡಿವ ವರ್ಗಗಳಿಗೆ ಬೇಕಾಗಿರುವ ಅತಿ ಮುಖ್ಯ ಆಯುಧಗಳು ಇವಾಗಿವೆ. ಗುಡ್ಡಗಾಡು ತಿರುಗಿ, ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಅನ್ನದ ದಾರಿ ಮಾಡಿಕೊಳ್ಳುವ ಜನರ ತುತ್ತನ್ನೇ ಈ ಕಾಯ್ದೆ ಕಸಿದುಕೊಳ್ಳುತ್ತದೆ. "ಸಾಲ ಸಮುದಾ ಮಾಡಿ ದನಕರ ಮಾರಿ ತಂದೀನಿ" "ಹಬ್ಬದಾಗ ನೋಡ ನೋಡ ಹ್ಯಾಂಗ ಕೊಡೂನ ಅಂತ ಹುಗಿದಿಟ್ಟರ ನೆಲದಾಗ" ಈ ಸಾಲುಗಳು ಆಯುಧ, ಅನ್ನ ಹಾಗೂ ಬದುಕು ಇವುಗಳ ಅಭಿನ್ನತೆಯನ್ನೂ ತೀವ್ರತೆಯನ್ನು ಹೇಳುವಂಥವಾಗಿವೆ. "ಹೋದ ಹತಾರಕ ಹೊಟಿಬ್ಯಾನಿ ಹಚ್ಚಕೊಂಡ ನಿಂತಾರ ಸಾವುದಕ" ಎನ್ನುವಲ್ಲಾಗಲೀ

ಹಲ್ಲಕಿತ್ತ ಹಾಂವಿನ ಪರಿಯು ನಮಗ ಆದಿತಲ್ಲಾ
ರಂಡಿ ಮುಸಕ ಹಾಕಿ ತಿರಿಗಿದರ ನಮ ಮಾನ ಉಳಿಯುವದಿಲ್ಲಾ
ಮಗ್ಗಲದಾಗಿನ ಹೇಣತಿ ಕೊಟ್ಹಾಂಗ ಅತಿ/ಹೇಡಿ ಆದೆವಲ್ಲಾ
ಸತ್ತ ಹೆಣಕ ಸಿಂಗಾರ ಮಾಡಿದ ಪರಿ ಆದಿತಲ್ಲಾ

ಆಯುಧವೇ ಬದುಕು, ಬದುಕೇ ಆಯುಧವಾದ ಪರಿ ಇಲ್ಲಿದೆ. ಕಂಪನಿ ಸರಕಾರದ ಕಾಯಿದೆ ಜನರ ಬದುಕನ್ನು ಅಭಿವೃದ್ಧಿ ಪಡಿಸುವ ಬದಲು ಅವರನ್ನು ನಾಗರೀಕ ಬದುಕಿನಿಂದ, ಶ್ರಮ ಬದುಕಿನ ಮೂಲಗಳಿಂದ, ಸ್ವಾವಲಂಬಿ ನೆಲೆಗಳಿಂದ ವಂಚಿತರನ್ನಾಗಿ ಮಾಡುತ್ತಿದೆ. ಕಸುಬಿಗೆ ಮೂಲವಾಗಿದ್ದ, ಅನ್ನಕ್ಕೆ ದಾರಿಯಾಗಿದ್ದ ಪರಿಕರಗಳು ಸಾಮ್ರಾಜ್ಯಶಾಹಿಯ ಎದೆ ನಡುಗಿಸುತ್ತವೆಂದರೆ ಅವುಗಳಿಗಿದ್ದ ಸಾಮರ್ಥ್ಯದ ಅರಿವಾಗದೇ ಇರದು.

ನಿಶಸ್ತ್ರೀಕರಣ ಕಾಯಿದೆಯ ಬಿಸಿ ತಟ್ಟಿದ್ದು ಹೆಚ್ಚಾಗಿ ದುಡಿವ ಹಾಗೂ ಅಂಚಿನ ವರ್ಗ ಗಳಿಗೆ. ಕಾರಣ ಅವುಗಳಿಗಿರುವ ಸಾಮಾಜಿಕ ಹಾಗೂ ಆರ್ಥಿಕ ಅಭದ್ರತೆಗಳು. ಸ್ವ ಮೂಲವನ್ನು ಬಿಡದ ಅನ್ಯ ಮೂಲವನ್ನು ಆಶ್ರಯಿಸದ ಅವುಗಳ ಅನನ್ಯ ಸ್ವಭಾವವು ಅನ್ನ ಹಾಗೂ ನೆಲೆ ಕಸಿದುಕೊಳ್ಳುವ ಪ್ರವೃತ್ತಿಗಳ ವಿರುದ್ಧ ಸೆಟೆದು ನಿಲ್ಲುವಂತೆ ಮಾಡುತ್ತದೆ. ಹಲಗಲಿ ಬೇಡರಂತಹ ಅಡವಿ ಅವಲಂಬಿತ ಸಮುದಾಯಗಳಿಗೆ ವೃತ್ತಿ ಎನ್ನುವುದು ಅಸಮಾನತೆಯ ನೆಲೆಯಾಗದೆ ಅದೊಂದು ಸಾಮುದಾಯಿಕ ಆಚರಣೆಯ ಭಾಗವಾಗಿತ್ತು. ಎಲ್ಲ ದುಡಿವ ಸಂಸ್ಕೃತಿಗಳಲ್ಲಿ ಈ ಗುಣವನ್ನು ಕಾಣುತ್ತೇವೆ. ಹೀಗಾಗಿ ಹಲಗಲಿ ದಂಗೆ ಹಾಗೂ ಸಿಂಧೂರ ಲಕ್ಷ್ಮಣನ ಪ್ರತಿಭಟನೆಗಳು ಬರೀ ಆಂಶಿಕ ಅಗತ್ಯಗಳಾಗಿರದೆ ಆ ಕಾಲದ ಸಾಮಾಜಿಕ, ಆರ್ಥಿಕ, ರಾಜಕೀಯ ಅಸ್ತಿತ್ವದ ಅಗತ್ಯ ಹಾಗೂ ಅನಿವಾರ್ಯತೆಗಳಾಗಿ ಮೂಡಿಬಂದಂಥವು. ಈ ಆರ್ಥಿಕ ಸ್ವಾವಲಂಬನೆ ಹಾಗೂ ಅಸ್ತಿತ್ವ ನಾಶದ ಪ್ರವೃತ್ತಿಗಳ ವಿರುದ್ಧ ಶ್ರಮ ಹಾಗೂ ಸ್ವಾವಲಂಬಿ ಮನಸ್ಸುಗಳು ತೋರಿದ ಚುರುಕುತನವದು. ಬೇಡರದು ನಿಸರ್ಗಮುಖಿ ಹಾಗೂ ನಿಸ್ವಾರ್ಥ ಬದುಕು. ಪ್ರಭುತ್ವದ್ದು ಸ್ವಾರ್ಥಮುಖಿ ಬದುಕು. ವಸಾಹತು ಪ್ರಭುತ್ವ ಯಾವಾಗಲೂ ಸ್ಥಳೀಯ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳ ವಿಘಟನೆಯಾಗಿ ಕೆಲಸ ಮಾಡುತ್ತ ಬಂದಿದೆ. ಇದಕ್ಕೆ ಸ್ಥಳೀಯ ಕೆಲವು ಪ್ರತಿಷ್ಠಿತ ಹಿತಾಸಕ್ತಿಗಳ ಸ್ವಾಥಪರ್ರ ಸಹಾಯವೂ ಕಾರಣವಾಗಿದೆ. ಸ್ಥಳೀಯ ಉತ್ಪಾದನೆಯ ಮುಖ್ಯಗುಣವೇ ಮಾನವಮುಖಿ ಹಾಗೂ ಸಮಾಜಮುಖಿ ಸಂಬಂಧಗಳನ್ನು ಗಟ್ಟಿಗೊಳಿಸುವುದು. ಆ ಮೂಲಕ ವ್ಯಕ್ತಿಯ ಸಾಂಸ್ಕೃತಿಕ ಲೋಕದ ವಿಸ್ತಾರಕ್ಕೆ ಹಾಗೂ ಆರ್ದಿಕ ಭದ್ರತೆಗೆ ಹಂಬಲಿಸುವುದು. ಹೀಗಾಗಿ ಬದುಕನ್ನು ಅಭದ್ರಗೊಳಿಸುವ, ಅವಮಾನಿಸುವ, ನಾಶಗೊಳಿಸುವ ಶಕ್ತಿಗಳ ವಿರುದ್ಧ ಸಿಡಿದೇಳುವ ಮೂಲಕ ಹಲಗಲಿ ಬೇಡರು ಹಾಗೂ ಸಿಂಧೂರ ಲಕ್ಷ್ಮಣನಂತಹ ಸ್ಥಳೀಯ ಪ್ರತಿಭಟನಾಕಾರರು ಪ್ರಭುತ್ವ ಹಾಗೂ ಅದರ ಪರಿವಾರವನ್ನು ತಮ್ಮ ಹೋರಾಟಗಳ ಮೂಲಕ ಕಂಗೆಡಿಸಿದರು.

ನಿಶ್ಯಸ್ತ್ರೀಕರಣ ಕಾಯಿದೆಯಡಿಯಲ್ಲಿ ನಿಷೇಧಕ್ಕೊಳಗಾದ ಕುಡುಗೋಲು, ಕೊಡ್ಲಿ, ಭರ್ಚಿಯಂಥ ಆಯುಧಗಳನ್ನು ಮತ್ತೆ ಮಾಡಿಕೊಳ್ಳುವಂಥ ಸಾಮರ್ಥ್ಯ ಹಲಗಲಿ ಬೇಡರಿಗೆ ಇರಲಿಲ್ಲವೆಂದಲ್ಲ ಇತ್ತು. ಈ ವರೆಗೆ ಚರ್ಚಿಸಿದಂತೆ ಆಯುಧವೆಂದರೆ ಅದೊಂದು ಪರಿಕರ ಮಾತ್ರವಾಗಿರಲಿಲ್ಲ. ಅದು ಅವರ ಜೀವನ ವಿಧಾನವಾಗಿತ್ತು. ಅಂಥ ಜೀವನವನ್ನು ಕಾಯಿದೆ ಸರ್ವನಾಶ ಮಾಡುತ್ತದೆ ಕಸಿದುಕೊಳ್ಳುತ್ತದೆ.

ಕುಬಸಾ ಸಿರಿ ಹಪ್ಪಳ ಶಾಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋತಿ ಕುಡ ಕಬ್ಬಿಣಾ ಮಸರು ಬೆಣ್ಣೆ ಹಾಲಾ
ಉಪ್ಪ ಎಣ್ಣೆ ಅರಿಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಾಳ ಚರಗಿ ಮಂಗಳ ಸೂತ್ರಾ ತಕ್ಕೊಂಡ ಹೋದರ ಬೀಸುಕಲ್ಲಾ
ಎಲ್ಲಾ ತಗೊಂಡ್ರೊ ಸಿಕಷ್ಟ | ಸರ್ದನಿಂತ ಊರಿಗೆ ಕೊಳ್ಳಿ ಕೊಟ್ಟು
ಬೂದಿ ಮಾಡ್ಯಾರ ಹಲಗಲಿ ಸುಟ್ಟು ಗುರ್ತ ಎಳ್ಳಷ್ಟು ಸಿಗದಷ್ಟು

ಲಾವಣಿಯ ಈ ಸಾಲುಗಳು ತುಂಬಾ ಅರ್ಥಗರ್ಭಿತವಾಗಿರುವುದನ್ನು ಇಲ್ಲಿ ಕಾಣಬಹುದು. ಹಲಗಲಿ ಬೇಡರ ಎಣ್ಣೆ, ಉಪ್ಪು, ಹಪ್ಪಳ, ಸೆಂಡಿಗೆ ಉತ್ಪಾದನೆಗೆ ಮುಖ್ಯವಾದ ವಸ್ತುಗಳೇ ಕೊಡಲಿ, ಕೋತಿ, ಕುಡುಗೋಲು. ಅವುಗಳು ಅಭಿನ್ನವಾಗಿ ಇಲ್ಲಿ ಬಳಕೆಯಾಗಿವೆ. ಅಂಥ ಅಭಿನ್ನ ಬದುಕಿನ ಸರ್ವನಾಶವನ್ನು ಕಂಪನಿ ಸರ್ಕಾರ ಇಲ್ಲಿ ಮಾಡುವುದನ್ನು ಲಾವಣಿ ಮಾರ್ಮಿಕವಾಗಿ ಧ್ವನಿಸುತ್ತದೆ.

"ಹಲಗಲಿ ಎಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತೊ
ಪೂಜೇರಿ ಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತ
ಕೈಯಾನ ಹತಾರಕೊಡಬಾರದು ನಾವು ನಾಲ್ಕು ಮಂದಿ ಜತ್ತೋ
ಹತಾರ ಹೋದಿಂದ ಬಾರದ ನಮ್ಮ ಜೀವ ಸತ್ತ ಹೋಗುದು ಗೊತ್ತು"

ಹಲಗಲಿ ಬಂಡಾಯದ ರೂವಾರಿಗಳಾದ ಹಣಮ, ಬಾಲ, ಜಡಗ ಹಾಗೂ ರಾಮ ಇವರು ಹೇಳುವ ಈ ಮಾತು, ಕೆಳವರ್ಗಗಳ ಅಂತಃಸ್ಥೈರ್ಯ ಹಾಗೂ ತಲ್ಲಣಗಳಿಗೆ ಸಾಕ್ಷಿ ಯಾಗಿವೆ. ಅಸ್ತಿತ್ವವನ್ನೇ ಅಡಗಿಸಲು ಪ್ರಯತ್ನಿಸುವ ಪ್ರಭುತ್ವದ ಹುನ್ನಾರದ ವಿರುದ್ಧ ನಡೆದ ಈ ದಂಗೆಗಳನ್ನು ಬರೀ ಬ್ರಿಟೀಷ್ ವಿರೋಧಿ ಅಥವಾ ಭಾರತ ರಾಜಕೀಯ ಸ್ವಾತಂತ್ರ್ಯದ ರಂಗತಾಲೀಮೆಂದು ಬೀಗುವುದು ಬರೋಬ್ಬರಿಯಲ್ಲ. 'ಸ್ವಾತಂತ್ರ್ಯ'ದ ಪರಿಕಲ್ಪನೆಯೇ ಇಲ್ಲದೆ ಬದುಕು ಅರಸುತ್ತಿರುವ ಸಮುದಾಯಗಳೂ ಸ್ವಾತಂತ್ರ್ಯೋತ್ತರ ಕಾಲದಲ್ಲೂ ಇರುವಾಗ ಹಲಗಲಿ ಬಂಡಾಯ ಹಾಗೂ ಸಿಂಧೂರ ಲಕ್ಷ್ಮಣರ ಪ್ರತಿಭಟನೆ ಗಳನ್ನು ಈ ರೀತಿಯ ವ್ಯಾಖ್ಯಾನಗಳಿಗೆ ಹೊಂದಿಸುವುದು ವಿಚಿತ್ರವೆನಿಸುತ್ತದೆ. ಹೀಗೆ ಮಾಡುವುದರಿಂದ ಈ ಪ್ರತಿಭಟನೆಗಳಿಗಿದ್ದ ಆಂತರಿಕ ತಾಕತ್ತು ಹಾಗೂ ತುರ್ತುಗಳು, ಮತಿಗಳು, ಸೂಕ್ಷ್ಮತೆಗಳು ಸಪಾಟಾಗಿ ಹೋಗುತ್ತವೆ. ಅವುಗಳನ್ನು ನೇರ ಅರ್ಥ ಮಾಡಿ ಕೊಳ್ಳಲು ಆಗದ ಜಡತೆ ಆವರಿಸುತ್ತದೆ. ಅನಗತ್ಯವಾಗಿ ಅವುಗಳನ್ನು ರಾಷ್ಟ್ರೀಯವಾದಿ ಕಕ್ಷೆಯಲ್ಲಿಟ್ಟು ನೋಡದೆ ಅದರ ಸ್ಥಳೀಯ ಸಾಮಾಜಿಕ ತುರ್ತಿನಲ್ಲಿಟ್ಟು ವ್ಯಾಖ್ಯಾನಿಸಿದರೆ ಹೊಸ ರೀತಿಯ ಸೂಕ್ಷ್ಮ ಚಾರಿತ್ರಿಕ ಸಂಕಥನಗಳನ್ನು ನಮ್ಮವಾಗಿಸಿಕೊಳ್ಳಬಹುದಾಗಿದೆ.  ಹೀಗಾಗಿ ಇಂಥ ಪ್ರತಿಭಟನೆಗಳನ್ನು ಅರ್ಥಮಾಡಿಕೊಳ್ಳುವ ನೆಲೆಯೇ ಬದಲಾಗಬೇಕಿದೆ.

(ಲೇಖನಕ್ಕೆ ಬಳಸಿಕೊಂಡಿರುವ ಲಾವಣಿಯ ಸಾಲುಗಳನ್ನು ಫ್ಲೀಟರ್ ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು ಪುಸ್ತಕದಿಂದ ಆಯ್ದುಕೊಂಡಿದ್ದೇನೆ).

* * *

**ಹಲಗಲಿ ಬೇಡರು**

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ್ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮ ಹೀಂಗ್ ಎಂದು
ಡಣ್ಗರ ಸಾರಿದರ ಮುಂದು

ಶೂರ ಶಿಪಾಯಿಜನರ ತಾವು ತಿಳಿದು
ಅಳತಾಯ ಕಣ್ಣಿಗೆ ನೀರ್ ತಂದು    ||ಯೇರ||

ಬಹಳ ಚಿಂತಿಯ್ಆಗಿ ದುಖೂಖದಿಂದ ಅವರು ಬಿದ್ದರ್-ಅಣ್ಣ ನೆಲಕ

ಚಿತ್ರದುರ್ಗ, ಸುರಪುರ, ಹಲಗಲಿಯ ಬೇಡರ ಶೌರ್ಯ, ಪರಾಕ್ರಮಗಳು ಯಾವ ಕಾಲಕ್ಕೂ ಚಿರಸ್ಮರಣೀಯ

**– ಹರ್ತಿಕೋಟೆ ವೀರೇಂದ್ರ ಸಿಂಹ**

# ೮. ಚಾರಿತ್ರಿಕ ನೆಲೆಗಳು

ಬಾಗಲಕೋಟೆ ಜಿಲ್ಲೆ ಎಂದಾಕ್ಷಣ ಕೆಲವರಿಗೆ ಚಾಲುಕ್ಯರ ಕಾಲದ ವಾಸ್ತು, ಶಿಲ್ಪಕಲೆ, ಧಾರ್ಮಿಕ ಕ್ಷೇತ್ರಗಳು ನೆನಪಿಗೆ ಬರುತ್ತವೆ. ಆದರೆ ಇವುಗಳಲ್ಲದೇ ಇನ್ನಿತರ ಹಲವು ವೈಶಿಷ್ಟ್ಯಗಳಿಂದಾಗಿ ಬಾಗಲಕೋಟೆ ಜಿಲ್ಲೆ ಇತಿಹಾಸದ ಪುಟಗಳಲ್ಲಿ ತನ್ನ ಹೆಜ್ಜೆಗುರುತುಗಳನ್ನು ಮೂಡಿಸಿದೆ. ಕಲೆ, ಸಾಹಿತ್ಯ, ಸಂಸ್ಕೃತಿಯ ಸಿರಿವಂತಿಕೆಗೆ ಹೆಸರಾಗಿರುವಂತೆ ಶೌರ್ಯ, ಸಾಹಸ, ಪರಾಕ್ರಮಗಳಿಗೆ ಹೆಸರಾಗಿದೆ. ಸ್ವಾಭಿಮಾನ, ಸ್ವಾತಂತ್ರ್ಯದ ರಕ್ಷಣೆಗಾಗಿ ಜಿಲ್ಲೆಯ ಕ್ಷಾತ್ರವೀರರು ನಡೆಸಿದ ಹೋರಾಟಗಳು, ಅವರ ಬಲಿದಾನಗಳನ್ನು ನೆನಪಿಸಿಕೊಂಡರೆ ಇಂದಿಗೂ ಕೆಲಕ್ಷಣ ರೋಮಾಂಚನ ಉಂಟಾಗುತ್ತದೆ. ಆದರೆ ಈ ಬಗ್ಗೆ ಇತಿಹಾಸದಲ್ಲಿ ಸರಿಯಾಗಿ ದಾಖಲಾಗ ದಿರುವುದು ತುಂಬಾ ವಿಷಾದ ಎನ್ನಿಸುತ್ತಿದೆ. ಈಗ ತಡವಾಗಿಯಾದರೂ ಸುಶಿಕ್ಷಿತರು ಜಾಗೃತಗೊಂಡು ಮುಂದಿನ ಪೀಳಿಗೆಗೆ ಜಿಲ್ಲೆಯ ನೈಜ ಹಾಗೂ ಸಮಗ್ರ ಇತಿಹಾಸ ತಿಳಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

ಯಾವುದೇ ಒಂದು ನಿರ್ದಿಷ್ಟ ಪ್ರದೇಶಕ್ಕೆ ಅದರ ಭೌಗೋಳಿಕ ಸ್ಥಾನೀಕರಣದ ಅಂಶ ಅತ್ಯಂತ ಮಹತ್ವದ್ದಾಗಿರುತ್ತದೆ. ಜಿಲ್ಲೆಯ ಬಹುತೇಕ ಭಾಗ ಬೆಟ್ಟಗುಡ್ಡಗಳಿಂದ ಕೂಡಿರುವು ದರಿಂದ ಹಾಗೂ ಮೂರು ನದಿಗಳು ಹರಿದಿರುವುದರಿಂದ ಆದಿವಾಸಿಗಳು, ಬುಡಕಟ್ಟು ಸಮುದಾಯಗಳು ವಾಸಿಸಲು ಅತ್ಯಂತ ಪ್ರಶಸ್ತ ಸ್ಥಳವಾಗಿದೆ. ಈ ಕುರಿತು ಆಳವಾಗಿ ಅಧ್ಯಯನ ಮಾಡಿದಾಗ ಕೆಲವು ಬುಡಕಟ್ಟು ಪಂಗಡಗಳೇ ಈ ಜಿಲ್ಲೆಯ ಮೂಲನಿವಾಸಿಗಳು ಎಂಬುದು ಕಂಡುಬರುತ್ತದೆ. ಅವುಗಳಲ್ಲಿ ವಾಲ್ಮೀಕಿ ಸಮುದಾಯವನ್ನು ನಾವು ಮುಖ್ಯವಾಗಿ ಹೆಸರಿಸ ಬಹುದು. ವಾಲ್ಮೀಕಿ ಸಮುದಾಯದ ಮೂಲವೃತ್ತಿಯಾದ ಬೇಟೆಗಾರಿಕೆ, ಪಶುಪಾಲನೆ ಹಾಗೂ ಕೃಷಿಗೆ ಇದು ಅತ್ಯಂತ ಪ್ರಶಸ್ತವಾದ ಸ್ಥಳವಾದುದರಿಂದ ಈ ಸಮುದಾಯ ಇಲ್ಲಿ ಗಟ್ಟಿಯಾಗಿ ನೆಲೆನಿಂತಿದೆ. ನಂತರ ನಾಗರೀಕತೆ ಬೆಳೆದಂತೆ ಈ ಸಮುದಾಯ ನದಿದಂಡೆ ಬೆಟ್ಟಗುಡ್ಡಗಳನ್ನು ತೊರೆದು ಅಲ್ಲಲ್ಲಿ ಚದುರಿ ಹೋಗಿ ಊರು, ಕೇರಿ, ಓಣಿಗಳಲ್ಲಿ ನೆಲೆ ನಿಂತಿರುವುದು ಕಂಡುಬರುತ್ತಿದೆ. ಕಾಲ ಬದಲಾದಂತೆ ತಾನೂ ಬದಲಾಗಿ ಸಮಾಜದ ಮುಖ್ಯ ವಾಹಿನಿಯಲ್ಲಿ ಬೆರೆತು ಬೇಟೆಗಾರಿಕೆ ಬಿಟ್ಟು, ಕೃಷಿ, ಪಶುಪಾಲನೆ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಬೇಡ, ನಾಯಕ, ವಾಲ್ಮೀಕಿ, ನಾಯಕ ಮಕ್ಕಳು, ತಳವಾರ ಎಂದು ಕರೆಯಲ್ಪಡುವ ವಾಲ್ಮೀಕಿ ಸಮುದಾಯಕ್ಕೆ ಉಜ್ವಲವಾದ ಪೌರಾಣಿಕ, ಐತಿಹಾಸಿಕ ಹಿನ್ನೆಲೆ ಇದೆ. ಜಗತ್ತಿಗೆ ಆದರ್ಶವಾದ ರಾಮಾಯಣ ಮಹಾಗ್ರಂಥವನ್ನು ರಚಿಸಿದ ಮಹರ್ಷಿ ವಾಲ್ಮೀಕಿ ಇದೇ ಸಮುದಾಯದಲ್ಲಿ ಹುಟ್ಟಿ ಬೆಳೆದವ. ಶಬರಿ, ಗುಹಾ, ಜರಾ, ಧರ್ಮವ್ಯಾಧ, ಏಕಲವ್ಯ, ಎಚ್ಚಮನಾಯಕ, ಗಂಡುಗಲಿ ಕುಮಾರರಾಮ, ವೀರಕಂಪಿಲರಾಯ, ಬೇಡರ ಕಣ್ಣಪ್ಪ, ರಾಜಾ ಮದಕರಿನಾಯಕ, ಸುರಪುರದ ವೆಂಕಟಪ್ಪ ನಾಯಕ, ಹಲಗಲಿ ಜಡಗಣ್ಣ-ಬಾಳಣ್ಣ, ತಳವಾರ ಫಕೀರಪ್ಪ, ವೀರ ಸಿಂಧೂರ ಲಕ್ಷ್ಮಣ, ಪೆರಿಯಾರ್ ರಾಮಸ್ವಾಮಿ ನಾಯ್ಕರ, ಭೀಮಪ್ಪನಾಯಕ, ಶ್ರೀ ತಿರುಚ್ಚಿ ಮಹಾಸ್ವಾಮಿ, ಶ್ರೀಪುಣ್ಯನಂದ ಪುರಿಸ್ವಾಮಿ, ಎಲ್.ಜಿ. ಹಾವನೂರು, ಸರ್ದಾರ್ ಬೂಟಾಸಿಂಗ್ ಹೀಗೆ ಈ ಸಮುದಾಯದಲ್ಲಿ ಹುಟ್ಟಿ ಬೆಳೆದು ವಿವಿಧ ಕ್ಷೇತ್ರಗಳಲ್ಲಿ ಇತಿಹಾಸ ಪುರುಷರಾದವರದು ದೊಡ್ಡ ಪಟ್ಟಿ ಇದೆ. ಇತಿಹಾಸದ ಗರ್ಭದಲ್ಲಿರುವ ಸತ್ಯವನ್ನು ಯಾರೂ ಸಾಯಿಸಲಾಗದು. ಹಾಗೆಯೇ ಕಲ್ಲಿನ ಎದೆಯಲ್ಲಿ ನೀರು ದೊರೆಯುವುದನ್ನು ಯಾರೂ ತಪ್ಪಿಸಲಾರರು. ವಾಲ್ಮೀಕಿ ಸಮುದಾಯದ ಪ್ರಾಚೀನ ಇತಿಹಾಸವನ್ನು ಕೂಡ ಚರಿತ್ರೆಯಿಂದ ಮುಚ್ಚಿಡಲಾಗದು ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಚಿತ್ರದುರ್ಗ, ಬಳ್ಳಾರಿ, ತರೀಕೆರೆ, ಲಿಂಗಸೂಗೂರು, ಹರಪನಹಳ್ಳಿ, ಗುಡಗುಂಟಿ, ಸುರಪುರ, ದೇವದುರ್ಗ ಸೇರಿದಂತೆ ರಾಜ್ಯದಲ್ಲಿ ೭೭ ಪಾಳಯಪಟ್ಟುಗಳನ್ನು ಕಟ್ಟಿಕೊಂಡು ವಾಲ್ಮೀಕಿ ಸಮುದಾಯ ರಾಜ್ಯಭಾರ ಮಾಡಿದೆ. ಆ ಸಂದರ್ಭದಲ್ಲಿ ಈ ಸಮುದಾಯ ೧೮,೦೦೦ ಕೆರೆಗಳನ್ನು ಕಟ್ಟಿ ಸಮಾಜಕ್ಕೆ ಶಾಶ್ವತವಾಗಿ ಉಪಯೋಗ ವಾಗುವಂತಹ ಕಾರ್ಯಮಾಡಿರುವುದು ಉಲ್ಲೇಖನೀಯ. ಮೊಗಲರು, ನವಾಬರು, ಬ್ರಿಟೀಷರ ವಿರುದ್ಧ ಈ ಸಮುದಾಯ ಅಪ್ರತಿಮ ಪರಾಕ್ರಮ ಮೆರೆದಿರುವುದನ್ನು ಎಂದಿಗೂ ಮರೆಯಲಾಗದು. ತನ್ನ ಬದುಕಿನ ಕಷ್ಟ-ಕಾರ್ಪಣ್ಯಗಳನ್ನು ಸಹಿಸಿಕೊಂಡು ತ್ಯಾಗ, ಬಲಿದಾನದ ನಿಸ್ಸೀಮ ಜೀವಿಯಂತಿರುವ ವಾಲ್ಮೀಕಿ ಸಮುದಾಯ ಪರನಾರಿ ಸಹೋದರ ಎಂದು ಮನೆ ಮಾತಾಗಿದೆ. ಇಂತಹ ಒಂದು ಧೀಮಂತ ಸಮುದಾಯದ ಕುರಿತು ಈ ಗೋಷ್ಠಿಯಲ್ಲಿ ಚಿಂತನೆ ನಡೆಯುತ್ತಿರುವುದು ಸಮಯೋಚಿತ ಹಾಗೂ ಸ್ತುತ್ಯವಾಗಿದೆ. ನಾನು ಹಿಂದೆಯೇ ಪ್ರಸ್ತಾಪಿಸಿದಂತೆ ಬಾಗಲಕೋಟೆ ಜಿಲ್ಲೆಯ ಮೂಲನಿವಾಸಿಗಳಾದ ವಾಲ್ಮೀಕಿ ಸಮುದಾಯಕ್ಕೆ ತನ್ನದೇ ಆದ ವಿಶಿಷ್ಟ ಪರಂಪರೆ, ಸಂಪ್ರದಾಯಗಳಿವೆ. ಬದಲಾದ

ಸಂದರ್ಭಕ್ಕೆ ತಕ್ಕಂತೆ ಜಿಲ್ಲೆಯಲ್ಲಿ ರಾಜ್ಯಭಾರ ಮಾಡಿದ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಪಲ್ಲವರು, ಕಲ್ಯಾಣ ಚಾಲುಕ್ಯರು, ಕಲಚೂರಿಯರು, ದೇವಗಿರಿ ಯಾದವರ ಸೈನ್ಯದಲ್ಲಿ ಈ ಸಮುದಾಯ ಶೌರ್ಯ ಸಾಹಸಗಳನ್ನು ಮೆರೆದು ಬಿರುದು ಬಾವಲಿಗಳನ್ನು ಪಡೆದುಕೊಂಡಿದೆ. ವಿಜಯನಗರ ಸಾಮ್ರಾಜ್ಯದ ಇತಿಹಾಸದುದ್ದಕ್ಕೂ ಪ್ರಸ್ತಾಪ ವಾಗುವ ಈ ಸಮುದಾಯ ತಾಳಿಕೋಟಿ ಕದನದಲ್ಲಿ ವಿಜಯನಗರದ ಅರಸರ ಪರವಾಗಿ ನಡೆಸಿದ ಹೋರಾಟ ನೆನಪಿಸಿಕೊಂಡರೆ ಮೈನವಿರೇಳುತ್ತದೆ. ಬೇಟೆಗಾರಿಕೆಯಲ್ಲಿ ಆಯುಧ ಗಳನ್ನು ಉಪಯೋಗಿಸುವುದರಲ್ಲಿ ಅತ್ಯಂತ ಪರಿಣತಿ ಹೊಂದಿದ ಈ ಸಮುದಾಯ ಶಾರೀರಿಕ ವಾಗಿ ಬಲಿಷ್ಟವಾಗಿರುವುದನ್ನು ಕಂಡು ಅಂದಿನ ಅರಸರು ಈ ಸಮುದಾಯವನ್ನು ತಮ್ಮ ತಮ್ಮ ಸೈನ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ರಿ.ಶ. ೭ನೇ ಶತಾನದಿಂದ ಕ್ರಿ.ಶ. ೧೬ನೇ ಶತಮಾನದವರೆಗೆ ಅಂದರೆ ಬಾದಾಮಿ ಚಾಲುಕ್ಯರ ಕಾಲದಿಂದ ವಿಜಯನಗರ ಅರಸರ ಕಾಲದವರೆಗೆ ಈ ಸಮುದಾಯ ಸೈನ್ಯಪಡೆಯಲ್ಲಿ ದಂಡಿನ ನಾಯಕತ್ವ ವಹಿಸಿ ಹೋರಾಟ ಮಾಡಿರುವುದಕ್ಕೆ ಬಲವಾದ ಆಧಾರಗಳಿವೆ. ಇದನ್ನು ಗಮನಿಸಿದಾಗ ಶೌರ್ಯ, ಧೈರ್ಯ, ಸಾಹಸ, ಪರಾಕ್ರಮ, ಹೋರಾಟ, ತ್ಯಾಗ, ಬಲಿದಾನ ಈ ಸಮುದಾಯಕ್ಕೆ ರಕ್ತಗತವಾಗಿ ಬಂದಿರುವುದು ಸ್ಪಷ್ಟವಾಗುತ್ತದೆ. ಯಾವುದೇ ಒಂದು ಸಮುದಾಯ ಹಿಂದಿನ ಪೀಳಿಗೆಯಿಂದ ಜೀವಿಗಳ ಮೂಲಕ ಹರಿದು ಬಂದ ಗುಣಲಕ್ಷಣಗಳನ್ನು ಆನುವಂಶಿಕವಾಗಿ ಮುಂದಿನ ಪೀಳಿಗೆಗೆ ರವಾನಿಸುತ್ತದೆ. ಪ್ರಾಚೀನ ಕಾಲದಲ್ಲಿ ಕಾಡುಮೇಡುಗಳಲ್ಲಿ ಅಲೆಯುತ್ತ, ನಂತರ ರಾಜಮಹಾರಾಜರ ಸೈನ್ಯದಲ್ಲಿ ಸಶಸ್ತ್ರ ಹೋರಾಟ ನಡೆಸಿದ ವಾಲ್ಮೀಕಿ ಸಮುದಾಯದ ಆನುವಂಶಿಕ ಗುಣಗಳು ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿರುವುದರಿಂದ ಸಾಮಾನ್ಯವಾಗಿ ಇಂದಿಗೂ ಈ ಸಮುದಾಯದಲ್ಲಿ ಆ ಕ್ಷಾತ್ರ ತೇಜಸ್ಸು ಕಂಡುಬರುತ್ತಿದೆ. ಈ ಜಿಲ್ಲೆಯ ವಾಲ್ಮೀಕಿ ಸಮುದಾಯದಲ್ಲಿ ಬೇರೆ ಬೇರೆ ಬೆಡಗುಗಳಿದ್ದು ಭಿನ್ನ ಭಿನ್ನ ಬೆಡಗಿನವರಲ್ಲಿ ಮದುವೆ ಸಂಬಂಧಗಳನ್ನು ಬೆಳೆಸುವ ಪದ್ಧತಿ ಇದೆ. ಸಮುದಾಯಕ್ಕೆ ತನ್ನದೇ ಆದ ನಂಬಿಕೆ, ಆಚರಣೆ, ಜೀವನಕ್ರಮ ಇದೆ. ಬಾಗಲಕೋಟೆ ಜಿಲ್ಲೆಯ ವಾಲ್ಮೀಕಿ ಸಮುದಾಯದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ವಾಭಿಮಾನದ ಹೆಗ್ಗುರುತು ಎಂದು ಹೇಳಬಹುದು. ಹಾಗಂತ ಈ ಸಮುದಾಯ ತನ್ನ ಬಗ್ಗೆ ಅಹಂಕಾರ ಪಟ್ಟುಕೊಳ್ಳುವುದಿಲ್ಲ. ತಾನು ಇನ್ನೊಂದು ಸಮುದಾಯಕ್ಕಿಂತ ಕಡಿಮೆ ಅಲ್ಲ ಎಂದು ನಂಬಿರುವಂತೆ ಇನ್ನಿತರ ಸಮುದಾಯಗಳು ಕೂಡ ತನಗಿಂತ ಕಡಿಮೆ ಅಲ್ಲ ಎಂದು ಭಾವಿಸಿದೆ. ಹೀಗಾಗಿ ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿರುವ ಇನ್ನಿತರ ಧರ್ಮಗಳಾದ ಮುಸ್ಲಿಂ, ಕ್ರೈಸ್ತ ಧರ್ಮದ ಜತೆ ಈ ಸಮುದಾಯದ ಸುಮಧುರ ಸಂಬಂಧ ಇದೆ. ಅಂತೆಯೇ ಈ ಸಮುದಾಯದವರು ದೇವಸ್ಥಾನಗಳಿಗೆ ಹೋಗು ವಂತೆ ಮಸೀದಿಗಳಿಗೂ, ಚರ್ಚ್‌ಗಳಿಗೂ ಹೋಗುತ್ತಾರೆ. ಇತರೆ ಧರ್ಮೀಯರ ಹಬ್ಬ ಉತ್ಸವಗಳಲ್ಲಿ ಭಕ್ತಿಯಿಂದ ಭಾಗವಹಿಸುತ್ತಾರೆ. ಈ ಸಮುದಾಯದವರು ಹೆಚ್ಚಾಗಿರುವ ಗ್ರಾಮಗಳಲ್ಲಿ ಒಂದೇ ಒಂದು ಕೋಮು ಗಲಭೆಯಾಗಲಿ, ಜಾತಿಯ ದಂಗೆಗಳಾಗಲಿ ನಡೆದಿಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಕ್ರಿ.ಶ. ೬ನೇ ಶತಮಾನದಲ್ಲಿ ಬಾದಾಮಿಗೆ ಭೇಟಿ ನೀಡಿದ್ದ ಚೀನಿ ಯಾತ್ರಿಕ ಹ್ಯುಯೆನ್ ತ್ಸಾಂಗ್ ಕೂಡ ವಾಲ್ಮೀಕಿ ಸಮುದಾಯದ ದಿಟ್ಟ ಪರಾಕ್ರಮವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದನೆಂದು ತಿಳಿದುಬರುತ್ತದೆ. ಪುಲಿಕೇಶಿ ನಾಡಿನಲ್ಲಿ ಗಣನೀಯ ಪ್ರಮಾಣದಲ್ಲಿರುವ ಈ ಸಮುದಾಯ ಶೂರ, ಸ್ವಾಭಿಮಾನ, ನಿಷ್ಠಾವಂತ ಸಮುದಾಯವಾಗಿತ್ತು. ಯುದ್ಧದಲ್ಲಿ ಗೆಲುವೊಂದೇ ಇವರ ಗುರಿಯಾಗಿರುತ್ತದೆ. "ಯುದ್ಧದಲ್ಲಿ ಹೋರಾಡಿ ಮಡಿಯುತ್ತಾರೆಯೇ ವಿನಃ ಸೋತು ಹಿಂದಿರುಗುವುದಿಲ್ಲ. ತಾವೂ ಸೆರೆ ಕುಡಿದು ಆನೆ, ಕುದುರೆಗಳಿಗೂ ಕುಡಿಸಿ ಯುದ್ಧರಂಗಕ್ಕೆ ಧುಮುಕುವ ಚಾಲುಕ್ಯ ಸೈನಿಕರು (ವಾಲ್ಮೀಕಿ ಸಮುದಾಯ) ವಿರಾಟ್ ರೂಪ ತಾಳಿ ಹೋರಾಡುತ್ತಾರೆ. ಇಂತಹ, ಧೀರೋದಾತ್ತ ಸೈನಿಕರ, ಸ್ವಾಭಿಮಾನಿ ಪ್ರಜೆಗಳ ಪ್ರೀತಿಯೇ ಪುಲಿಕೇಶಿಗೆ ಅಬೇಧ್ಯ ಕೋಟೆಯಾಗಿದೆ" ಎಂಬ ಅವನ ಬಣ್ಣನೆಯಲ್ಲಿ ವಾಲ್ಮೀಕಿ ಸಮುದಾಯದ ವೀರಜೀವನದ ಬಗ್ಗೆ ತಿಳಿದುಕೊಳ್ಳಬಹುದು. ನರ್ಮದೆಯ ದಡದಲ್ಲಿ ಇಮ್ಮಡಿ ಪುಲಿಕೇಶಿ ಹರ್ಷವರ್ಧನನನ್ನು ಸೋಲಿಸುವಲ್ಲಿ ವಾಲ್ಮೀಕಿ ಸಮುದಾಯದ ಕೆಚ್ಚೆದೆಯ ಹೋರಾಟ ಕೆಲಸ ಮಾಡಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಬಾದಾಮಿ ಯಲ್ಲಿರುವ ಎರಡು ಪ್ರಾಚೀನ ಶಾಸನಗಳಲ್ಲಿ ನೇರವಾಗಿ ವಾಲ್ಮೀಕಿ ಸಮುದಾಯದ ಹೆಸರಿರದಿದ್ದರೂ ಪರೋಕ್ಷವಾಗಿ ಅದು ಈ ಸಮುದಾಯದ ಬಗ್ಗೆ ಹೇಳಿದಂತಿದೆ. "ವರಂ ತೇಜಸ್ವಿನೋ ಮೃತ್ಯುಃ ನತು ಮಾನಾವಖಂಡನಂ ಮೃತ್ಯುಃ ತತ್‌ಕ್ಷಣಿಕೋ ದುಃಖ ಮಾನಭಂಗಂ ದಿನೇ ದಿನೇ" ಅಂದರೆ ಶೂರರಿಗೆ ಅಪಮಾನಕ್ಕಿಂತ ಸಾವೇ ಶ್ರೇಷ್ಠವಾಗಿದೆ. ಮೃತ್ಯುವು ಕ್ಷಣಿಕ ದುಃಖ ಉಂಟುಮಾಡುತ್ತದೆ. ಆದರೆ ಮಾನಭಂಗ ದಿನದಿನವೂ ದುಃಖ ಉಂಟು

ಮಾಡುತ್ತಿದೆ. ಇಂದಿಗೂ ಕೂಡ ವಾಲ್ಮೀಕಿ ಸಮುದಾಯದವರಲ್ಲಿ ಈ ಗುಣ ವಂಶಪಾರಂಪರ್ಯವಾಗಿ ಬಂದಿದೆ. ಈ ಸಮುದಾಯದವರು ಮಾನಕ್ಕೆ ಹೆದರುತ್ತಾರೆಯೇ ವಿನಃ ಸಾವಿಗೆ ಹೆದರುವುದಿಲ್ಲ. ಕಪ್ಪೆ ಆರ್ಯಭಟ್ಟನ ಶಾಸನ ಇದಕ್ಕೆ ಇನ್ನೊಂದು ಪುಷ್ಟಿ ನೀಡುತ್ತದೆ. 'ಸಾಧುಂಗೆ ಸಾಧುಂ, ಮಾಧುರ್ಯಂಗೆ ಮಾಧುರ್ಯಂ, ಬಾಧಿಪ್ಪಕಲಿಗೆ ಕಲಿಯುಗ ವಿಪರೀತನ, ಮಾಧವನೀತಿ ಪೆರನಲ್ಲ' ಅಂದರೆ ಚಾಲುಕ್ಯ ನಾಡಿನ ಜನ ಒಳ್ಳೆಯವರಿಗೆ ಒಳ್ಳೆಯವರು, ಕೆಟ್ಟವರಿಗೆ ಕೆಟ್ಟವರು, ಆದರೆ ನಂಬಿಕೆದ್ರೋಹ ಮಾಡಿದವರಿಗೆ ಯಾರನ್ನೂ ಕೇಳುವವರಲ್ಲ. ಚಾಲುಕ್ಯರ ಸೈನ್ಯದ ಶೇ ೬೦ ಸೈನಿಕರು ವಾಲ್ಮೀಕಿ ಸಮುದಾಯದವ ರಾಗಿದ್ದುದರಿಂದ ಇಂತಹ ವರ್ಣನೆಗಳೆಲ್ಲ ಅವರನ್ನು ಕುಳಿತೇ ಹೇಳಿದವುಗಳಾಗಿರಬಹುದು. ಬಾದಾಮಿ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಇಂದಿಗೂ ವಾಲ್ಮೀಕಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಆಡಗಲ್, ಹಲಕುರ್ಕಿ, ಮುತ್ತಲಗೇರಿ, ಕುಟಕನ ಕೇರಿ, ಕೆಂದೂರ, ಕಬ್ಬಲಗೇರಿ, ಕರಡೀಗುಡ್ಡ ಮುಂತಾದ ಗ್ರಾಮಗಳಲ್ಲಿ ಈಗಲೂ ಬಹು ಸಂಖ್ಯಾತರಾಗಿರುವ ವಾಲ್ಮೀಕಿ ಸಮುದಾಯದವರು ಅಂದು ಚಾಲುಕ್ಯರ ಆಳ್ವಿಕೆಯಲ್ಲಿ ಮುಂಚೂಣಿಯಲ್ಲಿದ್ದರೆಂದು ತಿಳಿದುಬರುತ್ತದೆ. ಮುಂದೆ ೧೮೧೦ರಲ್ಲಿ ಬಾದಾಮಿಯಲ್ಲಿ ಬ್ರಿಟೀಷರ ವಿರುದ್ಧ ನಡೆದ ಬಂಡಾಯದಲ್ಲಿಯೂ ಈ ಸಮುದಾಯ ಹೋರಾಡಿದೆ. ಈ ಸಮುದಾಯದ ನೂರಾರು ಶೂರರ ಶೌರ್ಯಗಳನ್ನು ಸಾರುವ ವೀರಗಲ್ಲುಗಳು ಜಿಲ್ಲೆಯ ಮೂಲೆಮೂಲೆಗಳಲ್ಲಿ ದೊರಕುತ್ತವೆ. ಆದರೆ ಅವುಗಳಿಗೆ ಸೂಕ್ತ ರಕ್ಷಣೆ ಇಲ್ಲದಿರುವುದರಿಂದ ಹಾಳಾಗುತ್ತಿವೆ. ಯುದ್ಧಭೂಮಿಯಲ್ಲಿ ಖಡ್ಗ ಹಿಡಿದು ವೀರಾವೇಶದಿಂದ ಹೋರಾಡುತ್ತಿರುವ ವಾಲ್ಮೀಕಿ ಸಮುದಾಯದ ಸೈನಿಕರ ವೀರಗಲ್ಲುಗಳು ಚಿತ್ರದುರ್ಗ, ಬಳ್ಳಾರಿ, ರಾಯಚೂರು ಬಿಟ್ಟರೆ ಬಾಗಲಕೋಟೆ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಮುಧೋಳ ತಾಲೂಕಿನ ಹಲಗಲಿ, ಲೋಕಾಪುರ, ಬಂಡನೂರ, ಜಮಖಂಡಿ ತಾಲೂಕಿನ ನಾವಲಗಿ, ಬಾಗಲಕೋಟೆ ತಾಲೂಕಿನ ಬೇವೂರ, ಬಿಲ್‌ಕೇರೂರ, ನೀರಲಕೇರಿ ಬೇವಿನಮಟ್ಟಿ ಹೊನ್ನಾಕಟ್ಟಿ, ಮುಚ ಖಂಡಿ, ಸೀಮಿಕೇರಿ, ಗದ್ದನಕೇರಿ, ಯಡಹಳ್ಳಿ, ಮಲ್ಲಾಪುರ, ಕಿರಸೂರ, ಭಗವತಿ, ಹುನಗುಂದ ತಾಲೂಕಿನ ಕಮತಗಿ, ರಾಮತಾಳ, ಮುಳ್ಳೂರ, ಚಿಕ್ಕಮಾಗಿ, ಯರನಕೇರಿ, ಅಮರಾತಿ, ಬೀಳಗಿ ತಾಲೂಕಿನ ಅರಕೇರಿ, ತೆಗ್ಗಿ, ಸಿದ್ದಾಪುರ, ಯಡಹಳ್ಳಿ, ಕಾತರಕಿ, ಸುನಗ, ಜಾನಮಟ್ಟಿ, ಗಿರಿಸಾಗರ, ಬಾದಾಮಿ ತಾಲೂಕಿನ ನೀಲಗುಂದ, ಬೇಲೂರ, ಜಾಲಿಹಾಳ, ನೆಲದಗಿ, ಅನವಾಲ, ಹುಲ್ಲಿಕೇರಿ ಇನಾಂ, ಬಂದಿಕೇರಿ, ಸೂಳಿಕೇರಿ, ಕಟಗೇರಿ, ಕೆಲವಡಿ, ಖಾನಾಪುರ, ಹಂಸನೂರ, ಪರ್ವತಿ, ಕೋಟೆಕಲ್, ಗುಳೇದಗುಡ್ಡ, ಕೆರುದ, ಬೆಳಗಂಟಿ, ಮತ್ತಿಕಟ್ಟಿ, ಹೊಕೋಟಿ, ಕೈನಕಟ್ಟಿ ಮುಂತಾದ ಊರುಗಳು ಸೇರಿದಂತೆ ಜಿಲ್ಲೆಯ ೨೦೦ಕ್ಕೂ ಹೆಚ್ಚು ಗ್ರಾಮಗಳಲ್ಲಿ ವಾಲ್ಮೀಕಿ ಸಮುದಾಯದವರು ಗಣನೀಯ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಕೆಲವು ಗ್ರಾಮಗಳಲ್ಲಿ ಈ ಸಮುದಾಯಕ್ಕೆ ಹಿಂದಿನ ರಾಜ, ಮಹಾರಾಜರು, ಬ್ರಿಟೀಷ್ ಸರಕಾರದಿಂದ ಇನಾಮುಗಳು, ಬಹುಮಾನಗಳು ದೊರೆತಿವೆ. ಅಂತೆಯೇ ಹಲವು ಗ್ರಾಮಗಳಲ್ಲಿ ವಾಲ್ಮೀಕಿ ಸಮುದಾಯದವರು ಪಾಟೀಲರು, ಗೌಡರು, ದೇಸಾಯರು, ನಾಯಕರು ಎಂದು ವತನಗಳನ್ನು ಪಡೆದುಕೊಂಡಿದ್ದಾರೆ. ಆ ಗ್ರಾಮಗಳಲ್ಲಿ ಇವರಿಗೆ ನೂರಾರು ಎಕರೆ ಜಮೀನು ಗಳ ಒಡೆತನದ ವತನದಾರಿಕೆ ಕೂಡ ಇದೆ. ಕೆಲವು ಗ್ರಾಮಗಳಲ್ಲಿ ಈ ಸಮುದಾಯದವರು ಪೂಜಾರರು, ತಳವಾರರು, ವಾಲೀಕಾರರಾಗಿಯೂ ಇಂದಿಗೂ ಸೇವೆ ಸಲ್ಲಿಸುತ್ತಿದ್ದಾರೆ. ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಿ ಸಂಸ್ಥಾನಗಳ ವಿಲಿನೀಕರಣ, ರಾಜಧನ ರದ್ಧತಿಯಾದಂತೆ ಈ ಸಮುದಾಯದ ವತನದಾನಿಕೆ ರದ್ದಾದರೂ ಆ ಸಮಯದಲ್ಲಿ ಇವರಿಗೆ ನೀಡಲಾಗಿದ್ದ ಜಮೀನುಗಳನ್ನು ರೈತವಾರಿ ಮಾಡಿಕೊಂಡಿದ್ದಾರೆ. ವತನದಾರಿಕೆ ರದ್ದಾದರೂ ಈ ಸಮುದಾಯದವರಿಗೆ ಆಗ ದೊರೆಯುತ್ತಿದ್ದ ಮಾನ, ಮರ್ಯಾದೆ, ಗೌರವಗಳ ಪರಂಪರೆ ಈಗಲೂ ಮುಂದುವರಿದುಕೊಂಡು ಬಂದಿರುವುದು ಕಂಡುಬರುತ್ತದೆ. ವತನದಾರಿಕೆಯ ಕುರುಹುಗಳಾದ ಖಡ್ಗ, ಕತ್ತಿ, ಗುರಾಣಿಗಳನ್ನು ಈ ಸಮುದಾಯದವರು ಜಗಲಿಯ ಮೇಲಿಟ್ಟು ಪೂಜಿಸುತ್ತಿದ್ದು, ಜಾತ್ರೆ, ಉತ್ಸವಗಳಲ್ಲಿ ಹೊರಗೆ ತಂದಿರುತ್ತಾರೆ. ಸ್ವಾಭಿಮಾನ ಅತ್ಯಂತ ಶ್ರೇಷ್ಟವಾದ ಮೌಲ್ಯ ಎಂದು ಭಾವಿಸಿಕೊಂಡಿರುವ ವಾಲ್ಮೀಕಿ ಸಮುದಾಯ ಅದಕ್ಕೆ ಧಕ್ಕೆ ನಡೆದರೆ, ಅನ್ಯಾಯ, ಅಸಮಾನತೆಗಳು ಸಮಾಜದಲ್ಲಿ ತಾಂಡವವಾಡಿದಾಗ ಅವುಗಳ ವಿರುದ್ಧ ಸೆಟೆದು ನಿಂತುಹೋರಾಟ ಮಾಡಿದೆ. ಹಲಗಲಿ, ಜಮುಖಂಡಿ ಬಂಡಾಯಗಳು ಹಾಗೂ ವೀರ ಸಿಂಧೂರ ಲಕ್ಷ್ಮಣನ ಹೋರಾಟವೇ ಇದಕ್ಕೆ ಜೀವಂತ ಸಾಕ್ಷಿಯಾಗಿದೆ. ಬಹುಶಃ ಸ್ವಾತಂತ್ರ್ಯಕ್ಕಾಗಿ ಹಲಗಲಿ ಬೇಡರು ಮಾಡಿದ ಬಲಿದಾನ, ಸ್ವಾತಂತ್ರ್ಯದ ಜತೆಗೆ ಸಮಾನತೆಗಾಗಿ ಸಿಂಧೂರ ಲಕ್ಷ್ಮಣ ನಡೆಸಿದ ಹೋರಾಟವನ್ನು ಬೇರೆ ಯಾವುದೇ ಸಮುದಾಯ ನಡೆಸಿದ್ದರೆ ಅದು ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮೊದಲ ಅಧ್ಯಾಯವಾಗಿರುತ್ತಿತ್ತು. ಆದರೆ ಅದು ವಾಲ್ಮೀಕಿ ಸಮುದಾಯದ ಹೋರಾಟವಾಗಿರುವುದರಿಂದ ಎಲ್ಲೋ ಒಂದು ಮೂಲೆಯಲ್ಲಿ ಇದೆ.

ಇತಿಹಾಸದಲ್ಲಿ ಮಾನವೀಯ ಮೌಲ್ಯಗಳ ರಕ್ಷಣೆಯಲ್ಲಿ, ಅನ್ಯಾಯಗಳನ್ನು ತಡೆಗಟ್ಟುವಲ್ಲಿ, ಸಮಾಜ ಕಂಟಕರನ್ನು ನಿಗ್ರಹಿಸುವಲ್ಲಿ ವಾಲ್ಮೀಕಿ ಸಮುದಾಯ ಬಹುದೊಡ್ಡ ಕೊಡುಗೆ ನೀಡಿದೆ. ಬೇಟೆ ಆಡುವುದು ಬೇಡರ ಕುಲದ ಕಸುಬಾದರೂ ಹಸು ಕೊಲ್ಲುವುದು ಧರ್ಮವಲ್ಲ. ಆದರೆ ಕ್ರೂರ ಮೃಗಗಳನ್ನು ಕಂಡರೆ ಕೊಲ್ಲದೆ ಬಿಡುವಂಗಿಲ್ಲ ಎಂಬ ಈ ಸಮುದಾಯದ ಸಂದೇಶ ಏನೆಂದರೆ ಕ್ರೌರ್ಯ ಸಮುದಾಯದಲ್ಲಿ ರಕ್ತಗತವಾಗಿ ಬಂದಿದ್ದರೂ ಮುಗ್ಧರಿಗೆ, ನಿಷ್ಪಾಪಿಗಳಿಗೆ ಕಿರುಕುಳ ನೀಡಬಾರದು. ಆದರೆ ದುಷ್ಟರು, ಸಮಾಜ ವಿದ್ರೋಹಿಗಳನ್ನು ನಿಗ್ರಹಿಸದೇ ಬಿಡಬಾರದೆಂಬುದಾಗಿದೆ. ಅದರಂತೆಯೇ ಈ ಸಮುದಾಯ ಇಂದಿಗೂ ಬದುಕುತ್ತಿದೆ. ಬಹುತರವಾಗಿ ಇಂತಹ ಆದರ್ಶಗಳನ್ನು ಮೈಗೂಡಿಸಿ ಕೊಂಡಿರುವ ಏಕೈಕ ಸಮುದಾಯವೆಂದರೆ ವಾಲ್ಮೀಕಿ ಸಮುದಾಯ ಎಂದು ಹೇಳಬಹುದು.

ಇಂತಹ ಧೀರೋದಾತ್ತ ಸಮುದಾಯ ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ಮುಂಚೂಣಿ ಯಲ್ಲಿದ್ದರೆ ಬಾಗಲಕೋಟೆ ಜಿಲ್ಲೆ ದೇಶದಲ್ಲೇ ಅಭಿವೃದ್ಧಿಯಲ್ಲಿ ನಂ. ೧ ಆಗಿರುತ್ತಿತ್ತು. ಆದರೆ ಈ ಸಮುದಾಯ ಇನ್ನೂ ಅನಾಯಕತ್ವದಲ್ಲೇ ತೊಳಲಾಡುತ್ತಿರುವುದು ಪರಿಸ್ಥಿತಿಯ ಪಿತೂರಿ ಎಂದೇ ಹೇಳಬೇಕಾಗುತ್ತದೆ. ಸ್ವಾತಂತ್ರ್ಯಾನಂತರ ಬ್ಯಾಕ್‌ವರ್ಡ್ ಟ್ರೈಬ್ಸ್, ಡಿನೋಟಿಫೈಡ್ ಟ್ರೈಬ್ಸ್, ಬ್ಯಾಕ್‌ವರ್ಡ್ ಕ್ಲಾಸ್ ಎಂದು ಸರಕಾರದಿಂದ ವರ್ಗೀಕರಿಸಲ್ಪಟ್ಟ ವಾಲ್ಮೀಕಿ ಸಮುದಾಯ ೧೯೯೨ರಿಂದ ಶೆಡ್ಯೂಲ್ ಟ್ರೈಬ್ಸ್ ಪಟ್ಟಿಯಲ್ಲಿ ಸೇರಿದೆ. ಅದರಡಿ ಅಷ್ಟು ಇಷ್ಟು ಸೌಲಭ್ಯ ಪಡೆದುಕೊಂಡಿದೆ. ಜಿಲ್ಲೆಯಲ್ಲಿ ಎರಡು ಲಕ್ಷಮತದಾರರನ್ನು ಹೊಂದಿರುವ ವಾಲ್ಮೀಕಿ ಸಮುದಾಯ ಒಂದಾಗಿ ನಿಂತರೆ ಬಾಗಲಕೋಟೆ ಲೋಕಸಭೆ ಕ್ಷೇತ್ರದ ಹಣೆಬರಹ ಬರೆಯುವ ಶಕ್ತಿ ಇದ್ದರೂ ಅದರ ಸದ್ಬಳಕೆಗೆ ಕಾಲಕೂಡಿ ಬಂದಿಲ್ಲ. ಜಿಲ್ಲೆಯಲ್ಲಿ ವ್ಯಾಪಕವಾಗಿರುವ ಶೈವ ಸಂಸ್ಕೃತಿ, ಸಂಪ್ರದಾಯಗಳಿಗೆ ಮಾರುಹೋಗಿರುವ ವಾಲ್ಮೀಕಿ ಸಮುದಾಯ ನಿತ್ಯನೈಮಿತ್ತಿಕ ವ್ಯವಹಾರಗಳಲ್ಲಿ ವಿಶೇಷ ಆಚಾರಗಳಲ್ಲಿ ಇದೇ ಚೌಕಟ್ಟನ್ನು ತೆಗೆದುಕೊಂಡು ಅದನ್ನು ತಮ್ಮ ಸ್ಥಿತಿಗತಿಗೆ ಅನುಸಾರವಾಗಿ ಹೊಂದಿಸಿಕೊಂಡಿದೆ. ಸವದತ್ತಿಯ ಯಲ್ಲಮ್ಮ, ತುಳಸಿಗೇರಿ ಹನಮಂತ, ಮುನಿರಾಬಾದ್ ಹುಲಿಗೆಮ್ಮ, ಕಿರಸೂರ ಕೋನಮ್ಮ, ಹಲಕುರ್ಕಿ ಪಾಕೋಳ ರಂಗನಾಥ, ಲೋಕಾಪುರ ದುರಗಮ್ಮ ದೇವರುಗಳನ್ನು ವಾಲ್ಮೀಕಿ ಸಮುದಾಯದವರು ತಮ್ಮತಮ್ಮ ಮನೆದೇವರೆಂದು ಮಾಡಿಕೊಂಡು ಭಕ್ತಿಭಾವದಿಂದ ನಡೆದುಕೊಳ್ಳುತ್ತಾರೆ. ತಿರುಪತಿ ತಿಮ್ಮಪ್ಪ, ಪಂಢರಾಪುರ ಪಂಢರಿನಾಥ, ಧರ್ಮಸ್ಥಳ ಮಂಜುನಾಥ, ಕೊಲ್ಲಾಪುರದ ಮಹಾಲಕ್ಷ್ಮಿ ದರ್ಶನಕ್ಕೆ ಈ ಸಮುದಾಯದವರು ವಿಶೇಷ ಸಂದರ್ಭಗಳಲ್ಲಿ ಹೋಗಿಬರುತ್ತಾರೆ. ತಾವು ನಂಬಿಕೊಂಡ ಶಕ್ತಿದೇವತೆಗಳಿಗೆ ಬಲಿಕೊಡುವುದು ಹಾಗೂ ತಮ್ಮ ಪೂರ್ವಜರ ಆತ್ಮಶಾಂತಿಗಾಗಿ ಪ್ರಾಣಿಬಲಿಕೊಡುವ ಪದ್ಧತಿ ಈ ಸಮುದಾಯದಲ್ಲಿ ಕಂಡುಬರುತ್ತದೆ. ಈ ಸಮುದಾಯದಲ್ಲಿ ಸವದತ್ತಿ ಯಲ್ಲಮ್ಮನ ಹೆಸರಿನಲ್ಲಿ ಹೆಣ್ಣು ಮಕ್ಕಳನ್ನು ಜೋಗತಿ ಬಿಡುವ ಸಂಪ್ರದಾಯ ಇದೆಯಾದರೂ ಇತ್ತೀಚೆಗಿನ ದಿನಗಳಲ್ಲಿ ಕಡಿಮೆಯಾಗಿದೆ. ಅನೇಕ ಊರುಗಳಲ್ಲಿ ಶಕ್ತಿದೇವತೆ ಹಾಗೂ ಹನುಮಂತ ದೇವರ ಪೂಜಾರಿಕೆಯನ್ನು ವಾಲ್ಮೀಕಿ ಸಮುದಾಯದವರೇ ಮಾಡುತ್ತ ಬಂದಿರುವರಾದರೂ ಇವರ ಅನಕ್ಷರತೆ, ಅಜ್ಞಾನದಿಂದಾಗಿ ಅವು ಕೂಡ ಕೆಲವು ಕಡೆ ಬೇರೆ ಸಮುದಾಯದವರ ಪಾಲಾದ ಉದಾಹರಣೆಗಳೂ ಇವೆ.

ತೋಳುಗಳಲ್ಲಿ ಅಪಾರ ಬಲ ತುಂಬಿಕೊಂಡಿರುವ ಈ ಸಮುದಾಯದ ಯುವಕರು ಜಾತ್ರೆ, ಉತ್ಸವಗಳಲ್ಲಿ ಕುಸ್ತಿ ಆಡುವುದು, ಗುಂಡುಕಲ್ಲುಗಳನ್ನು ಎತ್ತುವುದು, ಉಸುಕಿನ ಚೀಲ ಎತ್ತುವುದು, ಕವಣಿಕಲ್ಲು ಬೀಸುವುದು ಮುಂತಾದ ತಾಕತ್ತಿನ ಪ್ರದರ್ಶನಗಳಲ್ಲಿ ಭಾಗವಹಿಸುತ್ತಾರೆ. ಹಲ್ಲುಗಳಿಂದಲೇ ನೀರು ತುಂಬಿದ ತಾಮ್ರದ ಕೊಡ ಎತ್ತಿದ ಮಹಿಳೆಯರು ಈ ಸಮುದಾಯದಲ್ಲಿ ಹುಟ್ಟಿದ್ದಾರೆ. ಆದರೆ ಇತ್ತೀಚೆಗಿನ ನಗರೀಕರಣದ ಪ್ರಭಾವಕ್ಕೆ ಸಿಕ್ಕು ದಾರಿ ತಪ್ಪುತ್ತಿರುವ ಈ ಸಮುದಾಯದ ಯುವಕರು ಮದ್ಯವ್ಯಸನಿಗಳು, ಜೂಜುಕೋರರಾಗಿ ಸೋಮಾರಿಗಳಾಗುತ್ತಿದ್ದಾರೆ. ಇದುವರೆಗೆ ತಮ್ಮಗ್ರಾಮಗಳಲ್ಲಿ ಮುಂಚೂಣಿಯಲ್ಲಿ ನಿಂತು ಸಮಾಜ ಸೇವೆ ಮಾಡಿದವರು ಇಂದಿನ ಕಲುಷಿತ ರಾಜಕೀಯದ ಸುಳಿಯಲ್ಲಿ ಸಿಕ್ಕು ಅನಾಯಕತ್ವಕ್ಕೆ ಈಡಾಗಿದ್ದಾರೆ.

ಬದಲಾದ ಇತ್ತೀಚೆಗಿನ ದಿನಗಳಲ್ಲಿ ಜಿಲ್ಲೆಯಲ್ಲಿ ವಾಲ್ಮೀಕಿ ಸಮುದಾಯ ತನ್ನ ಬದುಕಿನ ಸಂಗಾತಿಯಾಗಿ ಕೃಷಿ, ಗೋವುಗಳ ಸಾಕಾಣಿಕೆ, ಎಮ್ಮೆ, ಕುರಿ, ಆಡುಗಳು ಹಾಗೂ ಸಣ್ಣ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆಯಂತಹ ಉದ್ಯೋಗಗಳನ್ನು ಆಯ್ಕೆ ಮಾಡಿಕೊಂಡಿದೆ. ಹೊಟ್ಟೆಯ

ತುತ್ತಿಗಾಗಿ, ನೆತ್ತಿಯ ಮೇಲಿನ ಸೂರಿಗಾಗಿ ನೆಮ್ಮದಿಯನಿದ್ದೆಗಾಗಿ ಇದೇ ವೃತ್ತಿ ಗಳನ್ನು ನೆಚ್ಚಿಕೊಂಡಿದೆ. ಈ ವೃತ್ತಿಗಳಲ್ಲಿಯೇ ಬೇರೆಯವರ ಹೊಟ್ಟೆ ತುಂಬಿಸಲು ಜೀತದ ಆಳುಗಳಾಗಿ, ಕೃಷಿ, ಕೂಲಿ ಕಾರ್ಮಿಕರಾಗಿ ಈ ಸಮುದಾಯದ ಬೆವರು ಸುರಿಯುತ್ತಿದೆ. ದುಡಿಮೆ ಈ ಸಮುದಾಯದಲ್ಲಿ ಕೇವಲ ಪುರುಷರಿಗಷ್ಟೆ ಸೀಮಿತವಾಗಿರದೆ ಮಹಿಳೆಯರೂ ಕಚ್ಚೆ ಹಾಕಿ ದುಡಿಯುತ್ತಾರೆ.
ಜಿಲ್ಲೆಯಲ್ಲಿ ಈ ಸಮುದಾಯ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ ಸೇರಿದಂತೆ ಬಹುತೇಕ ಅವಕಾಶಗಳಿಂದ ವಂಚಿತವಾಗಿದೆ. ಇದಕ್ಕೆ ಮುಖ್ಯಕಾರಣ ಅನಕ್ಷರತೆ, ಬಡತನ, ಸಂಘಟನಾ ಕೊರತೆ ಎಂದೇ ಹೇಳಬೇಕಾಗುತ್ತದೆ. ಜಿಲ್ಲೆಯಲ್ಲಿರುವ ಒಟ್ಟು ಅನಕ್ಷರಸ್ಥರಲ್ಲಿ, ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವವರ, ಸ್ವಂತ ನಿವೇಶನ, ಮನೆ, ಭೂಒಡೆತನ ಹೊಂದಿಲ್ಲದವರಲ್ಲಿ ಈ ಸಮುದಾಯದ ಪಾಲು ಶೇ ೫೦ಕ್ಕಿಂತ ಹೆಚ್ಚಿಗಿದೆ. ಮಹಿಳಾ ಸಾಕ್ಷರತೆಯಂತೂ ತೀರಾ ಕಡಿಮೆ ಪ್ರಮಾಣದಲ್ಲಿದೆ. ಈ ಸಮುದಾಯದ ಮಹಿಳೆಯರ ಶೇ ೬೦ರಷ್ಟು ಹೆರಿಗೆಗಳು ಅಸುರಕ್ಷಿತ ಹೆರಿಗೆಗಳಾಗುತ್ತಿವೆ. ಗರ್ಭಿಣಿ ಮಹಿಳೆಯರ ಸಾವು, ನವಜಾತ ಶಿಸುಗಳ ಸಾವಿನಲ್ಲಿ ಈ ಸಮುದಾಯದ ಪಾಲು ಹೆಚ್ಚಿದೆ. ಈ ಸಮುದಾಯದ ಶೇ ೬೫ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಾರೆ. ಶೇ ೮೦ರಷ್ಟು ಜನ ಅಸುರಕ್ಷಿತ ಕುಡಿಯುವ ನೀರು ಕುಡಿದು ಹಲವಾರು ಸಾಂಕ್ರಾಮಿಕ ರೋಗರುಜಿನಗಳಿಂದ ಬಳಲುತ್ತಿದ್ದಾರೆ. ವೈದ್ಯಕೀಯ ಸೇವೆಯಂತೂ ಈ ಸಮುದಾಯಕ್ಕೆ ದುರ್ಲಭ ಎಂದೇ ಹೇಳಬೇಕಾಗುತ್ತದೆ.

ತಮ್ಮ ಪಿತ್ರಾರ್ಜಿತ ಹೊಲ, ಮನೆಗಳನ್ನು ಮಾಡಿಕೊಂಡು ಕೂಲಿ, ನಾಲಿ ಮಾಡಿ ಉಪಜೀವನ ಸಾಗಿಸುತ್ತಿರುವ ಈ ಸಮುದಾಯ ಮೂಲತಃ ಅರಣ್ಯವಾಸಿಯಾಗಿದ್ದರೂ ಅರಣ್ಯ ಒತ್ತುವರಿಯಂತಹ ಕಾರ್ಯಮಾಡಿಲ್ಲ. ಬಾಗಲಕೋಟೆ ಜಿಲ್ಲೆಯಲ್ಲಿ ಒತ್ತುವರಿ ಯಾಗಿರುವ ೫೦೦ ಹೆ. ಅರಣ್ಯ ಪ್ರದೇಶದಲ್ಲಿ ಒಬ್ಬರೂ ಈ ಸಮುದಾಯದವರಿಲ್ಲ. ಇವರ ಸೇವೆಯನ್ನು ಬಳಸಿಕೊಂಡು ಮೇಲ್ವರ್ಗದ ದೊಡ್ಡ ದೊಡ್ಡ ರೈತರು ಅರಣ್ಯ ಒತ್ತುವರಿ ಮಾಡಿದ್ದಾರೆ. ವಾಲ್ಮೀಕಿ ಸಮುದಾಯ ಸಾಗಿ ಬಂದಿರುವ ಹಾದಿಯಲ್ಲಿ ಎಷ್ಟೋ ಮೈಲುಗಲ್ಲು ನಿಂತಿವೆ. ಬಾಗಲಕೋಟೆ ಜಿಲ್ಲೆಯ ಇತಿಹಾಸ ಎಂದರೆ ವಾಲ್ಮೀಕಿ ಸಮುದಾಯದ ಇತಿಹಾಸ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದರೆ ಸ್ವಾತಂತ್ರ್ಯ ದೊರೆತು ೬೦ ವರ್ಷಗಳಾದರೂ ಈ ಸಮುದಾಯದ ಬದುಕಿನಲ್ಲಿ ಮಹತ್ತರ ಬದಲಾವಣೆ ಆಗಿಲ್ಲ. ಮೇಲ್ವರ್ಗದವರಿಂದ ಬರೆಯಲ್ಪಟ್ಟ ಜಿಲ್ಲೆಯ ಇತಿಹಾಸದಲ್ಲಿ ಈ ಸಮುದಾಯದ ಬಗ್ಗೆ ಉದ್ದೇಶಪೂರ್ವಕವಾಗಿ ಸರಿಯಾಗಿ ಉಲ್ಲೇಖ ಮಾಡಿಲ್ಲ. ಆದರೆ ಈ ಸಮುದಾಯದ ಬಗ್ಗೆ ಬರೆಯಲಾರದ ಇತಿಹಾಸಕ್ಕಂತೂ ಕೊರತೆ ಇಲ್ಲ. ಈ ಜಿಲ್ಲೆಯ ಮಣ್ಣಿನ ಕಣಕಣದಲ್ಲೂ, ಕಲ್ಲುಕಲ್ಲುಗಳಲ್ಲೂ ಈ ಸಮುದಾಯದ ತ್ಯಾಗ, ಬಲಿದಾನದ ಸಾಹಸ ಗಾಥೆ ಅನುರಣಿಸುತ್ತಿದೆ.

ಜನರು ಇತಿಹಾಸ ನಿರ್ಮಿಸುತ್ತಾರೆ. ಆದರೆ ಇತಿಹಾಸ ಜನರನ್ನು ನಿರ್ಮಿಸುವುದಿಲ್ಲ. ನಾಯಕತ್ವ ಇಲ್ಲದ ಸಮುದಾಯ ಸುಮ್ಮನೆ ನಿಂತು ಬಿಡುತ್ತದೆ. ಅನಕ್ಷರತೆ ಹೆಚ್ಚಾಗಿರುವ ಯಾವುದೇ ಸಮುದಾಯ ಸದಾ ಹಿಂದುಳಿಯುತ್ತದೆ ಎಂಬ ಹ್ಯಾರೀಸ್ ಟ್ರೂಮನ್‌ನ ಮಾತು ವಾಲ್ಮೀಕಿ ಸಮುದಾಯಕ್ಕೆ ಸಂಪೂರ್ಣ ಅನ್ವಯವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಜಿಲ್ಲೆಯಲ್ಲಿ ಸಂಘಟನೆಯ ಬಲ ಇಲ್ಲದಿರುವುದರಿಂದ ಈ ಸಮುದಾಯ ಅಸಹಾಯಕವಾಗಿ ಶೋಷಣೆ ಅನುಭವಿಸುತ್ತಿದೆ. ನೋವು, ಅವಮಾನ, ದೌರ್ಜನ್ಯ, ಸಿಟ್ಟು, ಹತಾಶೆ ಎಲ್ಲವನ್ನೂ ಕಾಲ ಪಕ್ವವಾದಾಗ, ಸಂಘಟನೆಯ ಪ್ರಜ್ಞೆ ಜಾಗೃತವಾದಾಗ, ಸಮರ್ಥ ನಾಯಕತ್ವ ಮೂಡಿ ಬಂದಾಗ ಸ್ಫೋಟಿಸಿದರೆ ಆಶ್ಚರ್ಯಪಡಬೇಕಾಗಿಲ್ಲ.

ಇಂದು ಅಭಿವೃದ್ಧಿ ಅರ್ಥವನ್ನು ಆದಾಯದ ಏರಿಕೆಯಿಂದಲಷ್ಟೇ ಪರಿಗಣಿಸಲಾಗದು. ಅದಕ್ಕೆ ಸೌಲಭ್ಯವಂಚಿತತೆಯ ಪರಿಕಲ್ಪನೆ ಬಂದಿದೆ. ಈ ಸಮುದಾಯದ ಆದಾಯ ಹೆಚ್ಚಿಸುವುದರ ಜತೆಗೆ ಆಯ್ಕೆ ಅವಕಾಶಗಳನ್ನು ಹೆಚ್ಚಿಸುವ ಕೆಲಸ ನಡೆಯಬೇಕಾಗಿದೆ. ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ, ರಾಜಕೀಯ ಸ್ವಾತಂತ್ರ್ಯ, ಸಾಂಸ್ಕೃತಿಕ ಮನ್ನಣೆ, ವ್ಯಕ್ತಿಗತ ಸುರಕ್ಷೆ, ಸಮುದಾಯದಲ್ಲಿ ಭಾಗವಹಿಸುವಿಕೆ, ಪಾರಿಸರಿಕ ಭದ್ರತೆ ದೊರಕಿಸಿಕೊಡ ಬೇಕಾಗಿದೆ. ದೇಶ, ರಾಜ್ಯ, ಜಿಲ್ಲೆಯ ಹಿತಕ್ಕಾಗಿ ಸದಾ ತ್ಯಾಗ ಮಾಡುತ್ತ ಬಂದಿರುವ ವಾಲ್ಮೀಕಿ ಸಮುದಾಯಕ್ಕೆ ಇನ್ನು ಮೇಲಾದರೂ ಭೋಗಗಳ ಸೌಲಭ್ಯ ದೊರಕಿಸಿಕೊಡುವ ಪ್ರಯತ್ನ ನಡೆಯಬೇಕಾಗಿದೆ.

* * *

# ೬. ಆರ್ಥಿಕ ಹಾಗೂ ಶೈಕ್ಷಣಿಕ ಜೀವನ

ಭಾರತೀಯ ಪರಂಪರೆಯಲ್ಲಿ ಮಹಿಳೆಯನ್ನು ಪಾತಿವ್ರತ್ಯ ಮತ್ತು ಸಂಪತ್ತಿನ ಸಮೀಕರಣದೊಂದಿಗೆ ನೋಡುವ ಮೂಲಕ ಖಾಸಗಿ ಆಸ್ತಿಯನ್ನಾಗಿ ಪರಿಗಣಿಸಿದ ಸಂದರ್ಭ ಗಳೇ ಹೆಚ್ಚು. ಚರಿತ್ರೆಯನ್ನು ಅವಲೋಕಿಸಿದಾಗ ಲಿಂಗತಾರತಮ್ಯತೆಯ ಹಿನ್ನೆಲೆಯಲ್ಲಿ ಮಹಿಳೆಯು ಅಸ್ತಿತ್ವರಹಿತಳಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಉದಾಸೀನಕ್ಕೊಳಗಾಗುತ್ತಲೇ ಬಂದಿದ್ದಾಳೆ. ಪುರುಷನಿಗಿಂತ ಮಹಿಳೆ ದುರ್ಬಲಳು ಎನ್ನುವ ಅಸಮಾನ ನೆಲೆಗಳು ಕುಟುಂಬದಿಂದ ಹಿಡಿದು, ಸಮಾಜದ ವಿವಿಧ ಸ್ಥರಗಳಲ್ಲಿ ಬೆಸೆದುಕೊಂಡಿವೆ. ಇತಿಹಾಸದಲ್ಲಿ ರಾಜಮನೆತನದ ಮತ್ತು ಉನ್ನತವರ್ಗದ ಮಹಿಳೆಯರನ್ನು ಹೊರತುಪಡಿಸಿದರೆ, ಸಾಮಾನ್ಯ ವರ್ಗಗಳ ಮಹಿಳೆಯರ ಸ್ಥಾನಮಾನಗಳನ್ನು ಗುರುತಿಸುವುದು ಕಷ್ಟಸಾಧ್ಯವಾಗಿದೆ. ಇದಕ್ಕೆ ಬೇಡ ಸಮುದಾಯದ ಮಹಿಳೆಯರೂ ಹೊರತಾಗಿಲ್ಲ. ಕಾರಣ ಭಾರತೀಯ ಸಂಸ್ಕೃತಿಯ ಒಂದು ಭಾಗವೇ ಅವರು.

ಚರಿತ್ರೆಯನ್ನು ಅವಲೋಕಿಸಿದಾಗ ಬೇಡ ಸಮಾಜದಲ್ಲಿ ಪಾಳೆಗಾರರು (ಅಂದರೆ ಸಂಸ್ಥಾನಿ ಕರು) ಮೊದಲ ವರ್ಗವಾಗಿದ್ದರು. ಗುರಿಕಾರರು, ಸುಬೇದಾರರು, ಸೈನಿಕರು, ತುಬಾಕಿಯವರು, ಪೊಲೀಸ್ ಪಾಟೀಲ, ಕಟ್ಟೆಮನೆಯವರು, ಮಾಲಿ ಪಾಟೀಲ, ತಳವಾರ ಮೊದಲಾದ ಹುದ್ದೆಗಳಲ್ಲಿದ್ದ ಬೇಡರು ೨ನೇಯ ವರ್ಗದಲ್ಲಿದ್ದರು. ಬ್ರಾಹ್ಮಣ ಪುರೋಹಿತ, ವೀರಶೈವರ ಕೈ ಕೆಳಗೆ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದ ಬೇಡರೇ ಆದ ದಾಸಯ್ಯ ಸಮರಾಯ, ಪೂಜಾರಿಗಳು ೩ನೇ ವರ್ಗದಲ್ಲಿದ್ದರು. ಯಾವುದೇ ಹುದ್ದೆ ಅಥವಾ ನಿರ್ದಿಷ್ಟ ವೃತ್ತಿಯಲ್ಲಿ ಇಲ್ಲದೆ ಬೇಟೆ ಪಶುಪಾಲನೆಯಲ್ಲಿ ತೊಡಗಿದವರು ೪ನೆಯ ವರ್ಗದಲ್ಲಿದ್ದರು. ನಾಲ್ಕು ವರ್ಗಗಳಿಂದ ಕೂಡಿದ ಬೇಡ ಸಮುದಾಯವು ಸಮಾಜದಲ್ಲಿ ಬೇರೆ ಬೇರೆ ರೀತಿಯ ಹುದ್ದೆ ಗಳಲ್ಲಿ ತೊಡಗಿ ತನ್ನದೇ ಆದ ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿತ್ತು ಎಂಬುದು ವಿಧಿತವಾಗುತ್ತದೆ.

ಮೇಲಿನ ೪ ವರ್ಗಗಳನ್ನು ಅವಲೋಕಿಸಿದಾಗ ಮಹಿಳೆಯರಿಗೆ ಸ್ಥಾನವೆಲ್ಲಿದೆ ಎಂದು ಹುಡುಕಾಡಬೇಕಾಗುತ್ತದೆ. ೪ ವರ್ಗಗಳು ಆರ್ಥಿಕತೆಗೆ ಅಥವಾ ದುಡಿಮೆಗೆ ಮೂಲವಾದ ವೃತ್ತಿಗಳ ಆಧಾರದ ಮೇಲೆ ನಿರ್ಧಾರವಾಗಿರುವುದು ನಿಚ್ಚಳವಾಗಿ ಗೋಚರಿಸುತ್ತದೆ. ಹಾಗಾದಲ್ಲಿ ಬೇಡ ಮಹಿಳೆಯರ ಆರ್ಥಿಕ ಸ್ಥಾನಮಾನಗಳೇನು? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಬೇಡ ಸಮುದಾಯ ಬಿಲ್ವಿದ್ಯೆಯಲ್ಲಿ ಪರಿಣತಿ ಪಡೆದಿತ್ತು. ಸೈನಿಕ ವೃತ್ತಿ ಇವರಿಗೆ ಪ್ರಿಯವಾದ ಉದ್ಯೋಗವಾಗಿತ್ತು. ಕ್ರಿ.ಶ. ೧೩೨೪ರ ಹರದನಹಳ್ಳಿ ಶಾಸನ, ಕ್ರಿ.ಶ. ೧೩೮೦ರ ಶಾಸನ, ಕ್ರಿ.ಶ. ೧೪೧೩ರ ಮೈಸೂರು ಚಾಮರಾಜನಗರ ತಾಲೂಕಿನ ಮೂಡಲಅಗ್ರಹಾರ ಶಾಸನ, ಇದೇ ತಾಲೂಕಿನ ೧೫೫೭ರ ಗಳಿಗೆ ಕೆರೆಶಾಸನಗಳಿಂದ ಬಹಳ ಪ್ರಮುಖವಾಗಿ ಬಾದಾಮಿ ಚಾಲುಕ್ಯರ ಕಾಲದಿಂದ ವಿಜಯನಗರದ ಕಾಲದವರೆಗೆ ಬೇಡ ಸಮುದಾಯದ ವೃತ್ತಿ ಬೇಟೆಯಾಗಿತ್ತು ಎಂದು ತಿಳಿದುಬರುತ್ತದೆ. ಆಡಳಿತ ನಡೆಸುವ ರಾಜಮನೆತನದವರು ತಮ್ಮ ರಾಜ್ಯವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ಕೂಲಿಯ ಸಿಪಾಯಿಗಳಾಗಿ ಬೇಡರನ್ನು ನೇಮಿಸಿಕೊಂಡಿದ್ದರು. ತಮ್ಮ ಧೈರ್ಯ ಸಾಹಸ ಪ್ರವೃತ್ತಿಗಳಿಂದ ಬೇಡರು ನಾಯಕ, ಗಾವುಂಡ, ರಾಯ, ವೀರ ಬಿರುದುಗಳನ್ನು ಪಡೆದುಕೊಂಡು ಸ್ಥಳೀಯ ಅಧಿಕಾರಿಗಳಾಗಿ ಬಡ್ತಿ ಹೊಂದಿದ್ದರು.

ಹಾಗೆಯೇ ರಾಷ್ಟ್ರಕೂಟರ ಕಾಲದಲ್ಲಿ ಬೇಡ ಪಡೆಗಳು ಸೈನ್ಯದಲ್ಲಿ ಪ್ರಸಿದ್ಧಿಯಾಗಿದ್ದವು. ಬೇಡ ಪಡೆಯ ಕಾಲ್ದಳವು ಮುಖ್ಯ ಅಂಗವಾಗಿತ್ತು. ಸೈನಿಕ ವೃತ್ತಿಯು ಬರುಬರುತ್ತಾ ಹೆಮ್ಮೆಯೊಂದಿಗೆ ವಂಶಪಾರಂಪರ್ಯವಾಯ್ತು. ಮುಂದೆ ಪಾಳೆಯಗಾರಿಕೆಗೂ ಕಾರಣ ವಾಯ್ತು. ೭ನೇ ಶತಮಾನದಿಂದ ಇವರ ಪ್ರತ್ಯೇಕ ರಾಜ್ಯಗಳೇ ಇದ್ದವೆಂದು ತಿಳಿಸುವ ಗದ್ದೆಮನೆಶಾಸನದಲ್ಲಿ ಬೇಡ ಕುಲದವರ ಸೈನಿಕ ವೃತ್ತಿಯನ್ನು ವರ್ಣಿಸಲಾಗಿದೆ. ಟಿಪ್ಪು ಸುಲ್ತಾನನ ಸೇನೆಯಲ್ಲಿದ್ದ ಬೇಡರ ಪಡೆಯು ೧೨ ಪಗೋಡಗಳ ವೇತನ ಹೊಂದಿತ್ತು. ಬೇಟೆಯ ವೃತ್ತಿಯಲ್ಲಿ

ಪರಿಣಿತರಾದ ಇವರು ಯುದ್ಧದಲ್ಲಿ ಗೆಲವು ಸಾಧಿಸಲು ಸಹಕಾರಿ ಗಳಾಗಿದ್ದರು. ಹಾಗಾಗಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಅನೇಕ ಹೋರಾಟಗಳಲ್ಲಿ ಬೇಡ ಸೈನಿಕರಿಂದ ವಿಜಯ ಸಾಧಿಸಿದ್ದರು ಎಂದು ತಿಳಿಯುತ್ತದೆ.

ಪ್ರಾಂತ್ಯಗಳ ರಾಜರ ಗೆಲವು ಸಾಧಿಸಲು, ಬೇಡರ ಸೈನ್ಯದ ಪಡೆಗಳು ಅನಿವಾರ್ಯವಾದವು. ಇದರಿಂದ ಬೇಡ ಸಮುದಾಯದ ಮಹಿಳೆಯರ ಸಾಮಾಜಿಕ ಬದುಕಿನಲ್ಲೂ ಸ್ಥಿತ್ಯಂತರಗಳುಂಟಾದವು. ಪರಿಣಾಮವಾಗಿ ಮಹಿಳೆಯರು ಅರಮನೆಯಲ್ಲಿ ದಾಸಿಯರಾದರು. ಪರಿಚಾರಿಕೆಯರಾದರು. ಕೊನೆಗೆ ಸೈನಿಕರ ಅವಶ್ಯಕತೆಗಳನ್ನು ಪೂರೈಸುವ ಗಣಿಕೆಯರೂ ಆಗಬೇಕಾಯಿತು. ಹೀಗೆ ಪರಿಸ್ಥಿತಿಗಳ ಒತ್ತಡದಿಂದಲೋ ಅನಿವಾರ್ಯತೆಗಳಿಂದಲೋ ಬೇಡ ಮಹಿಳೆಯರು ಬೇಟೆ, ಬೇಸಾಯ, ಪಶುಪಾಲನೆಯ ನಂತರ ಜೀವನೋಪಾಯಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕಾಯ್ತು.

ಯುದ್ಧಗಳಲ್ಲಿ ಮಡಿದ ಸೈನಿಕರ ಕುಟುಂಬದ ಮಹಿಳೆಯರು ಬಹಳ ಅನಿವಾರ್ಯವಾಗಿ, ನಿಧಾನವಾಗಿ ಸಾಮಾಜಿಕ ಮನ್ನಣೆ ಪಡೆದ ಬಸವಿ ಪರಂಪರೆಗೆ ತಲೆಬಾಗಬೇಕಾಯಿತು. ರಾಜ ಮನ್ನಣೆ ಪಡೆದ ದೇವದಾಸಿ ಪದ್ಧತಿಯು ಆರ್ಥಿಕವಾಗಿ ಬಹಳ ಮುಖ್ಯ ಮೂಲ ವಾಯಿತು. ದೇವದಾಸಿಯರು ರಾಜಕೀಯಾಡಳಿತದಲ್ಲಿ ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಬೇಡ ಸಮುದಾಯದ ಮಹಿಳೆಯ ಸ್ಥಾನಮಾನಗಳು ಅವರ ಕುಟಂಬದ ಪುರುಷರ ಮೂಲಕ ನಿರ್ಧಾರವಾಗುತ್ತಿದ್ದವೆಂದು ಅನೇಕ ಸಂಗತಿಗಳಿಂದ ತಿಳಿಯಬಹುದು. ಉನ್ನತ ವರ್ಗದ ಬೇಡ ಮಹಿಳೆಯರು 'ನಾಗತಿ' ಎಂಬ ಹೆಸರಿನಿಂದ ಗೌರವಕ್ಕೆ ಪಾತ್ರರಾಗಿರುತ್ತಿದ್ದರು. ಇವರು ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದರು. ದೇವಾಲಯ, ಕೆರೆ, ಬಾವಿಗಳನ್ನು ಕಟ್ಟಿಸುತ್ತಿದ್ದರು ಹಾಗೂ ಜೀರ್ಣೋದ್ಧಾರ ಮಾಡಿಸುತ್ತಿದ್ದರು. ಗ್ರಾಮಗಳನ್ನು ನಿರ್ಮಿಸುತ್ತಿದ್ದರು. ಶೈಕ್ಷಣಿಕ ಕೇಂದ್ರಗಳಾದ ಅಗ್ರಹಾರಗಳನ್ನು ಸ್ಥಾಪಿಸುತ್ತಿದ್ದರು. ಇದಕ್ಕಾಗಿ ದಾನದತ್ತಿ ಬಿಡುತ್ತಿದ್ದರು.

ಇಂತಹ ಬೇಡ ಸಮುದಾಯವು ರಾಜಮನೆತನಗಳ ಪತನದ ನಂತರ ನಿರುದ್ಯೋಗದ ಸುಳಿಗೆ ಸಿಲುಕಿತು. ಇವರ ಕುಲವೃತ್ತಿಯಾದ ಬೇಟೆಯನ್ನು ಬ್ರಿಟೀಷರು ನಿಷೇಧಿಸಿದ್ದರಿಂದ ಆರ್ಥಿಕ ಮೂಲವಾದ ಬೇಟೆಯೂ ಇವರಿಗಿಲ್ಲವಾಯಿತು. ಅರಣ್ಯ ಸಂರಕ್ಷಣೆಗಾಗಿ ಬಂದ ಕಾನೂನುಗಳಿಂದಾಗಿ ಕಾಡಿನ ಪ್ರವೇಶಕ್ಕೆ ನಿರ್ಬಂಧ ಉಂಟಾಯಿತು. ಜೀವನ ನಿರ್ವಹಣೆಗೆ ಪರ್ಯಾಯ ಮಾರ್ಗಗಳು ಅನಿವಾರ್ಯವಾದವು.

ಹಿಂದುಳಿದ ಪ್ರದೇಶವೆಂದು ಕರೆಯಿಸಿಕೊಳ್ಳುತ್ತಿರುವ ಉತ್ತರ ಕರ್ನಾಟಕದ ಬಾಗಲಕೋಟೆ ಪರಿಸರದಲ್ಲಿರುವ ಬೇಡ ಸಮುದಾಯವು ಕೃಷ್ಣ ನದಿಗೆ ಕಟ್ಟಲಾಗಿರುವ ಅಣೆಕಟ್ಟೆಯಿಂದ ಮುಳುಗಡೆ ಪ್ರದೇಶವಾಗಿದೆ. ಕೃಷಿ ಪ್ರಧಾನವಾದ ಈ ಭಾಗದಲ್ಲಿ ಭೂಮಿಯನ್ನು ಕಳೆದು ಕೊಂಡು ಸರ್ಕಾರ ಕೊಡುತ್ತಿರುವ ಅಲ್ಪ ಪರಿಹಾರದಲ್ಲೇ ಪುನರ್ವಸತಿ ಕೇಂದ್ರಗಳಲ್ಲಿ ಹೊಸ ಬದುಕನ್ನು ರೂಪಿಸಿಕೊಳ್ಳಲು ಸಮುದಾಯವು ಪ್ರಯತ್ನ ನಡೆಸಿದೆ. ಬೇಡ ಸಮುದಾಯದ ಮಹಿಳೆಯರ ಬದುಕು ಮತ್ತಷ್ಟು ಅತಂತ್ರವಾಗಿದೆ. ಉಳಿದ ಸಮುದಾಯಗಳ ಕೆಳ ವರ್ಗದ ಮಹಿಳೆಯರ ಬದುಕಿಗಿಂತ ಬೇಡ ಮಹಿಳೆಯರ ಆರ್ಥಿಕ ಸ್ಥಿತಿಗಳು ಭಿನ್ನವಾಗೇನೂ ಇಲ್ಲ.

ಬಾಗಲಕೋಟೆ ಪರಿಸರದಲ್ಲಿರುವ ಬೇಡ ಸಮುದಾಯವು ಲಿಂಗ ತಾರತಮ್ಯವಿಲ್ಲದೆ ಕೃಷಿಯನ್ನೇ ಅವಲಂಬಿಸಿದೆ. ಮಹಿಳೆ ಪುರುಷರಾದಿಯಾಗಿ ಕೃಷಿ ಕಾರ್ಮಿಕರಾಗಿದ್ದಾರೆ. ಸ್ವಂತ ಕೃಷಿ ಮಾಡುವವರು ವಿರಳ. ಮೊದಲು ಕಾಡಿನ ಜೊತೆ ನಂಟು ಇದ್ದಾಗ ಜೇನುತುಪ್ಪ ಸಂಗ್ರಹ, ಆನೆಯ ದಂತಗಳು, ಕಾಡುಕೋಣ ಮೊದಲಾದ ಪ್ರಾಣಿಯ ಕೋಡುಗಳು, ವಿವಿದ ಪ್ರಾಣಿಗಳ ಚರ್ಮ, ನವಿಲುಗರಿ, ಪುನಗನ ಬೆಕ್ಕು, ಗಿಡದ ಅಂಟು ಸಂಗ್ರಹ ಇಂತಹ ವೈವಿಧ್ಯತೆಯ ಸಂಗ್ರಹ ಆರ್ಥಿಕ ಮೂಲವಾಗಿತ್ತು. ಜೊತೆಗೆ ಕವಳೆ, ಬೋರೆ, ನೇರಳೆ, ಕಾರೆ ಹಣ್ಣು ಸಂಗ್ರಹಿಸಿ ಮಾರುವುದೂ ಇತ್ತು. ಕಟ್ಟಿಗೆ ಸಂಗ್ರಹಿಸಿ ಮಾರುವುದು, ಪತ್ರಾವಳಿ ಮಾರಾಟ ಇವೆಲ್ಲವೂ ಜೀವನೋಪಾಯಕ್ಕೆ ಆಧಾರವಾಗಿದ್ದವು. ಆಧುನಿಕ ಸಂದರ್ಭದಲ್ಲಿ ಮೇಲಿನ ಅನೇಕ ಕಾಯಕಗಳು ಕಣ್ಮರೆಯಾಗಿವೆ.

ರಾಜಮನೆತನಗಳಿದ್ದಾಗ ತಳವಾರರು ಅಂದರೆ ಬೇಡರು ಗ್ರಾಮರಕ್ಷಣೆಗೆ ನಿಯೋಜಿತರಾದವರಾಗಿದ್ದರು. ಈಗ ತಳವಾರಿಕೆ ಎಂದರೆ ಬೇರೆಯವರ ಮನೆಗಳಲ್ಲಿ ಕಸಮುಸುರೆ ಮಾಡುವುದು, ಹೊಲಗಳಲ್ಲಿ ದುಡಿಯುವುದು, ಅವರು ಎತ್ತಿಕೊಟ್ಟದ್ದನ್ನು ಸ್ವೀಕರಿಸುವುದು, ಉನ್ನತ ಜಾತಿಯವರಿಗಾಗಿ ಸೇವೆಗಳನ್ನು ಮಾಡುವ ಅರ್ಥವ್ಯಾಪ್ತಿಯನ್ನು ಹೊಂದಿದೆ.

ಪ್ರಸ್ತುತದಲ್ಲಿ ಬೇಡ ಸಮುದಾಯದವರು ಕೃಷಿಯೊಂದಿಗೆ ಮರಗಳಿಂದ ಅಂಟು ಬಿಡಿಸುವುದು, ಪಶುಪಾಲನೆ, ಹೈನುಗಾರಿಕೆ, ಬೇವಿನ ಬೀಜ, ಹೊಂಗೆ ಬೀಜದಂತಹ ಎಣ್ಣೆ ಕಾಳುಗಳ ಸಂಗ್ರಹ, ತರಕಾರಿ ಮಾರುವುದು, ಹಣ್ಣು ಹಂಪಲು ಮಾರುವುದು, ಹೂ ಕಟ್ಟುವುದು, ವೀಳ್ಯದೆಲೆ ಮಾರುವುದು, ದವಸಧಾನ್ಯ ಹಸನು ಮಾಡುವುದು, ದಿನಗೂಲಿಗಳಾಗಿ ದುಡಿಯುವುದು, ಗಾರೆಕೆಲಸ ಮಾಡುವುದು, ಬೀಡಿಕಟ್ಟುವುದು, ಅಗರಬತ್ತಿ ತಯಾರಿಸುವುದು, ಮಂಡಾಳು ಭಟ್ಟಿಗಳಲ್ಲಿ ಕೆಲಸ ಮಾಡುವುದು, ಸುಣ್ಣ ಬಳಿಯುವುದು, ನಾಟಕಗಳಲ್ಲಿ ಪಾತ್ರ ಮಾಡುವುದು, ಗೂಡಂಗಡಿ ಇಟ್ಟುಕೊಳ್ಳುವುದು ಇಂತಹ ಅನೇಕ ಕಾಯಕಗಳಲ್ಲಿ ಸ್ತ್ರೀ ಪುರುಷರಾದಿಯಾಗಿ ತೊಡಗಿಕೊಂಡು ಜೀವನ ನಿರ್ವಹಿಸುತ್ತಿದ್ದಾರೆ.

ಇಂದಿಗೂ ಕೆಲವು ಹಿಂದುಳಿದ ಹಳ್ಳಿಗಳಲ್ಲಿ ಬಾಬದವರು ಇದ್ದಾರೆ. ಇವರು ಡಂಗುರ ಹಾಕುವ ಮೂಲಕ ಊರಿನ ಜನರಿಗೆ ಸತ್ತಸುದ್ದಿ ತಿಳಿಸುವುದು, ಊರಿನ ಜಾತ್ರೆಯ ದಿನಾಂಕ ತಿಳಿಸುವುದು, ಸಭೆಗಳ ವಿಷಯ ತಿಳಿಸುವಂತಹ ನಿರ್ದಿಷ್ಟ ವಿಷಯಗಳನ್ನು ತಿಳಿಸುವ ಚಾಕರಿ ಮಾಡುತ್ತಿದ್ದಾರೆ.

ಸಮುದಾಯದ ದೇವತೆಗಳಾದ ಉದ್ದವ್ವ, ಹೊನ್ನವ್ವ, ಜುಂಜಪ್ಪರನ್ನು ಪೂಜಿಸುವ ಪೂಜಾರಿ ಹಾಗೂ ಪೂಜಾರಿಣಿಯರೂ ಇದ್ದು, ಕಾಣಿಕೆ ಹಾಗೂ ನೈವೇದ್ಯ ಸ್ವೀಕರಿಸುವುದು ಇವರ ಹಕ್ಕಿನ ಉತ್ಪನ್ನವಾಗಿದೆ. ಉನ್ನತವರ್ಗದವರ ಮನೆಗಳಲ್ಲಿ ಸೂತಕದಂತಹ ಸಂದರ್ಭಗಳಲ್ಲಿ ಸೇವೆ ಮಾಡಿ ಚಾಜ (ಶುಲ್ಕ) ಸ್ವೀಕರಿಸುತ್ತಾರೆ.

ಇನ್ನು ಕೆಲವರು ಅಂಗನವಾಡಿ ಕಾರ್ಯಕರ್ತೆಯರಾಗಿದ್ದಾರೆ. ವಿದ್ಯಾವಂತರು ಸರ್ಕಾರಿ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ. ಈ ಎಲ್ಲ ಕಾಯಕಗಳೊಂದಿಗೆ ಮಹಿಳೆಯರ ದುಡಿಮೆಯನ್ನು ೩ ಬಗೆಯಲ್ಲಿ ವರ್ಗೀಕರಿಸಿ ನೋಡಬಹುದು. ೧. ಉತ್ಪಾದನಾ ದುಡಿಮೆ ೨. ಕೌಟುಂಬಿಕ ದುಡಿಮೆ. ೩. ಸಂತಾನೋತ್ಪತ್ತಿ ದುಡಿಮೆ. ಮೇಲಿನ ಎಲ್ಲ ದುಡಿಮೆಗಳು ಉತ್ಪಾದನಾ ದುಡಿಮೆಯಲ್ಲಿ ಸೇರುತ್ತವೆ. ಈ ದುಡಿಮೆ ಸ್ತ್ರೀ ಪುರುಷರಿಗೆ ಸಮಾನವಾಗಿದೆ. ಕೌಟುಂಬಿಕ ದುಡಿಮೆಯಲ್ಲಿ ಪುರುಷರ ದುಡಿಮೆಯ ಪ್ರಮಾಣಕ್ಕಿಂತ ಮಹಿಳೆಯರ ದುಡಿಮೆಯ ಪ್ರಮಾಣವು ಅಧಿಕವಾಗಿದೆ. ೩ನೆಯ ದುಡಿಮೆಯು ಸಂಪೂರ್ಣವಾಗಿ ಮಹಿಳೆಗೆ ಸಂಬಂಧಿತವಾಗಿದೆ.

ಹೀಗೆ ಆರ್ಥಿಕವಾಗಿ ಹಿಂದುಳಿದಿರುವ, ಅಭಿವೃದ್ಧಿ ದೃಷ್ಟಿಂದ ಕೆಳಮಟ್ಟದಲ್ಲಿರುವ ಬೇಡ ಸಮುದಾಯಕ್ಕೆ ದುಡಿಮೆ ಅನಿವಾರ್ಯವಾಗಿದೆ. ದುಡಿಮೆಯೇ ಬದುಕಾಗಿದೆ. ಬೇಡ ಸಮುದಾಯ ಕೃಷಿಯೇತರ ಚಟುವಟಿಕೆಗಳಲ್ಲಿ ವಿರಳವಾಗಿದ್ದು, ಕೃಷಿಯ ಮೇಲೆ ಅಧಿಕ ಒತ್ತಡ ಇರುವ ಏಕರೂಪಿ ಆರ್ಥಿಕತೆಯನ್ನು ಅವಲಂಬಿಸಿದೆ. ಇವರ ಧಾರುಣ ಶಕ್ತಿಯು ಅತ್ಯಂತ ಕೆಳಮಟ್ಟದಲ್ಲಿದೆ. ಸರ್ಕಾರದಿಂದಾಗಲಿ ಅಥವಾ ಖಾಸಗಿಯಾಗಿ ಹರಿದು ಬರುವ ಅವಕಾಶಗಳನ್ನು ತನ್ನದಾಗಿಸಿಕೊಳ್ಳುವ ಸಾಮರ್ಥ್ಯ ಮತ್ತು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ವನ್ನು ಹೊಂದಿದಾಗ ಮಾತ್ರ ಸಮುದಾಯ ಬದುಕನ್ನು ಉತ್ತಮಪಡಿಸಿಕೊಳ್ಳುವ ಸಾಧ್ಯತೆ ಗಳನ್ನು ತಳ್ಳಿಹಾಕುವಂತಿಲ್ಲ. ಹಿಂದುಳಿದ ಮತ್ತು ಮುಳುಗಡೆ ಪ್ರದೇಶವಾದ ಬಾಗಲಕೋಟೆ ಯಲ್ಲಿ ಬೇಡ ಸಮುದಾಯದ ಜೀವನ ಮಟ್ಟ, ವರಮಾನ ಉತ್ತಮ ಸ್ಥಿತಿಯಲ್ಲಿ ಇಲ್ಲವೆಂದು ಮೇಲ್ಕಂಡ ಸಂಗತಿಗಳಿಂದ ಗೋಚರವಾಗುತ್ತದೆ. ವರಮಾನದ ಏರಿಕೆಯ ಗತಿಯೇ ಅಭಿವೃದ್ಧಿ ಯನ್ನು ಅಳತೆ ಮಾಡುವ ಮಾನದಂಡ ಎಂಬ ವ್ಯಾಖ್ಯಾನವಿದೆ. ಈ ವ್ಯಾಖ್ಯಾನದ ಹಿನ್ನೆಲೆ ಯಲ್ಲಿ ಬೇಡ ಸಮುದಾಯದ ವರಮಾನದಲ್ಲಿ ಅಂತಹ ಏರಿಕೆಯೇನೂ ಕಾಣಬರುತ್ತಿಲ್ಲ. ವ್ಯಾಖ್ಯಾನದ ಹಿನ್ನೆಲೆಯಲ್ಲಿ ಬೇಡ ಸಮುದಾಯ ಇನ್ನೂ ಅಭಿವೃದ್ಧಿಯ ಮುಂಚೂಣಿಗೆ ಬರಬೇಕಾಗಿದೆ. ಯಥೇಚ್ಛವಾದ ಮಾನವ ಸಂಪನ್ಮೂಲವನ್ನು ಹೊಂದಿರುವ ಬೇಡ ಸಮುದಾಯವು ನಿಶ್ಚಿತ ಕಾಲದಲ್ಲಿ ವೃತ್ತಿ, ಉದ್ದಿಮೆಗಳಲ್ಲಿ ಪರಿಣತಿ ಪಡೆದು ಅದರ ಉಪಯೋಗವನ್ನು ಸ್ವಂತ ಬೆಳವಣಿಗೆಗೆ ಉಪಯೋಗಿಸಿಕೊಂಡರೆ ಮಾನವ ಸಂಪನ್ಮೂಲ ಅಭಿವೃದ್ಧಿಯಾಗಲು ಸಾಧ್ಯತೆಗಳಿವೆ.

ಚರಿತ್ರೆಯನ್ನು ಅವಲೋಕಿಸಿದಾಗ ಬೇಡ ಸಂಸ್ಥಾನಿಕರು ರಾಜ್ಯಾಧಿಕಾರ ಹಿಡಿದು ಆಡಳಿತ ನಡೆಸುತ್ತಿದ್ದಾಗಲೇ ಶಿಕ್ಷಣ ಓದು ಬರಹದ ಕುರಿತು ಯೋಚಿಸಲಿಲ್ಲ. ರಾಜ್ಯಾಡಳಿತವೊಂದೇ ತಮ್ಮ ಕರ್ತವ್ಯ. ಓದು ಬರಹವೆಲ್ಲ ಬ್ರಾಹ್ಮಣರಿಗೆ ಸೇರಿದ್ದು ಎಂಬ ಮನೋಭಾವನೆಯನ್ನು ಬೇಡ ಸಂಸ್ಥಾನಿಕರು ಹೊಂದಿದ್ದರು. ಉನ್ನತ ವರ್ಗದ ಬೇಡ ಮಹಿಳೆಯರು ಅರಮನೆಯ ಘೋಷಾದಲ್ಲಿ ಇದ್ದುದ್ದರಿಂದ ಇವರ ಶಿಕ್ಷಣ ಅರಮನೆಯ ಒಳಗೇ ಸೀಮಿತವಾಗಿತ್ತು. ರಾಜಪರಿವಾರದವರು ಶಿಕ್ಷಣ ಪಡೆದರೂ ಅದು ಕಂಠಪಾಠದ ರೂಪದಲ್ಲಿರುತ್ತಿತ್ತು. ಬೇಡರಲ್ಲೇ ಕೆಳವರ್ಗದವರು ಬದುಕಲು ದುಡಿಯಲೇ ಬೇಕಾದ ಅನಿವಾರ್ಯತೆ ಹಾಗೂ ಬಡತನ ಇದ್ದುದರಿಂದ ಶಿಕ್ಷಣದ ಕುರಿತು ಯೋಚಿಸುತ್ತಿರಲಿಲ್ಲ. ಕುಟುಂಬದ ದುಡಿಮೆಗೆ ಆಸರೆಯಾಗಿ ಮಹಿಳೆಯೂ ದುಡಿಯಬೇಕಾದುದರಿಂದ ಮಹಿಳೆಯರಿಗೂ ಶಿಕ್ಷಣಕ್ಕೆ ಅವಕಾಶ ಇರುತ್ತಿರಲಿಲ್ಲ. ಜೊತೆಗೆ ಜಾತಿ ವರ್ಗಾಧಾರಿತವಾದ ಮೇಲುಕೀಳು ಆಚರಣೆ ಕಟ್ಟುನಿಟ್ಟಾಗಿತ್ತು. ಆದ್ದರಿಂದ ಕೆಳವರ್ಗದ ಮಹಿಳೆಯರಿಗೆ ಮಾತ್ರವಲ್ಲ ಪುರುಷರಿಗೂ ಶಿಕ್ಷಣ ಗಗನ ಕುಸುಮ ವಾಗಿತ್ತು. ಮಠಗಳು, ಅಗ್ರಹಾರಗಳು, ದೇವಾಲಯಗಳು ಶಿಕ್ಷಣ ಕಲಿಸುವ ಕೇಂದ್ರಗಳಾ ಗಿದ್ದವು. ಆದರೆ ಕೆಳವರ್ಗದವರಿಗೆ ದೇವಾಲಯಕ್ಕೆ ಪ್ರವೇಶ ಇರಲಿಲ್ಲ.

ಕೆಲವು ಪೂರ್ವಾಗ್ರಹ ಪೀಡಿತ ಭಾವನೆಗಳಿಂದಾಗಿ ಆರಂಭದಲ್ಲಿ ಗುರುತಿಸಿದಂತೆ ಬೇಡರ ನಾಲ್ಕು ವರ್ಗಗಳು ಶಿಕ್ಷಣದಿಂದ ವಂಚಿತವಾಗಿದ್ದವು. ಈ ರೀತಿ ಶಿಕ್ಷಣದ ಕುರಿತು ಉದಾಸೀನತೆಯಿಂದ ಬೇಡರ ಚರಿತ್ರೆಯು ಸರಿಯಾದ ಕ್ರಮದಲ್ಲಿ ದಾಖಲಾಗಲು ಸಾಧ್ಯವಾಗಲಿಲ್ಲ. ಹೀಗಿದ್ದರೂ ಬೇಡ ಸಂಸ್ಥಾನಿಕರು ಶಿಕ್ಷಣದ ಅಭಿವೃದ್ಧಿಗೆ ಶ್ರಮಿಸಿದರು. ಶಿಕ್ಷಣ ಕೇಂದ್ರಗಳಿಗೆ ಅನೇಕ ಗ್ರಾಮಗಳನ್ನು ದತ್ತಿ ಬಿಡುತ್ತಿದ್ದರು.

ಶಿಕ್ಷಣ ಪ್ರೇಮಿಗಳಾದ ನಾಗತಿಯರೂ ಅನೇಕ ಅಗ್ರಹಾರ ಕಟ್ಟಿಸಿ ದಾನದತ್ತಿ ನೀಡಿದ್ದಾರೆ. ರಾಜ ಪರಿವಾರದ ಮಹಿಳೆಯರಿಗೆ ಶಿಕ್ಷಣ ಕೊಡಿಸಲು ಉದಾಸೀನ ತೋರಿದರೂ, ಕೆಲವು ರಾಣಿಯರು ರಾಜಕೀಯ ಅನುಭವದಿಂದ ಸ್ವಾತಂತ್ರ್ಯ ಹೊಂದಿ ಸಾರ್ವಜನಿಕ ಕೆಲಸ ಮಾಡುತ್ತಿ ದ್ದರು. ಇವರು ಧರ್ಮ, ಪುರಾಣ, ಕಾವ್ಯ, ಇತಿಹಾಸ, ಭಾಷೆ ಮೊದಲಾದ ವಿಷಯಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಇವರು ಶಿಕ್ಷಣ ಪಡೆಯುವ ಸಂದರ್ಭ ಇದ್ದು ಆಸಕ್ತಿ ಹೊಂದಿ ದ್ದರೂ ಅತ್ಯಂತ ಸೂಕ್ಷ್ಮವಾಗಿ ಅವರನ್ನು ಶಿಕ್ಷಣದಿಂದ ದೂರ ಇರಿಸುವ ಪ್ರಯತ್ನ ನಡೆಯು ತ್ತಿತ್ತು. ಬಹುಶಃ ಪುರುಷರಾದ ತಾವೇ ಕಲಿಯುತ್ತಿಲ್ಲ. ಇನ್ನು ಮಹಿಳೆಯರಿಗೇಕೆ ಶಿಕ್ಷಣ ಎಂಬ ತಾತ್ಸರ ಭಾವನೆ ಇರಬಹುದು.

ನಂತರ ಮಿಶನರಿ ಶಾಲೆಗಳು ಬಂದರೂ ಕಲಿಯಲು ಆಸಕ್ತಿ ತೋರದೆ ತಾವು ರಾಜ ಮನೆತನಕ್ಕೆ ಸೇರಿದವರು ಎಂಬ ಭ್ರಮೆಯಲ್ಲಿ ಇರುವ ಆಸ್ತಿಯಲ್ಲೇ ಜೀವನ ಸಾಗಿಸುತ್ತ ಬಂದರು. ಈ ಘೋಷಾ ಪ್ರಭಾವದಿಂದ ಇನ್ನೂ ಕೆಲವು ಹಳೆಯ ಬೇಡ ಸಂಸ್ಥಾನಿಕರು ತಮ್ಮ ಹೆಣ್ಣು ಮಕ್ಕಳನ್ನು ಓದಿಸುವ ಪದ್ಧತಿ ಇಲ್ಲ ಎಂದು ಈಗಲೂ ಹೇಳುತ್ತಿದ್ದಾರೆ. ನಿಧಾನವಾಗಿ ಶಿಕ್ಷಣದ ಮಟ್ಟ ಏರುತ್ತಿದೆಯಾದರೂ ಮಹಿಳೆಯರ ಶಿಕ್ಷಣದ ಕುರಿತು ಸಮುದಾಯ ಗಮನ ಹರಿಸುತ್ತಿಲ್ಲ.

ಬೇಡ ಸಮುದಾಯದ ಆರ್ಥಿಕ ಸ್ಥಿತಿಗೂ ಶಿಕ್ಷಣಕ್ಕೂ ನೇರವಾದ ಸಂಬಂಧವಿದೆ. ಧಾರಣಶಕ್ತಿಯ ದುಃಸ್ಥಿತಿಯೇ ಬಡತನ ಎಂದು ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಹೇಳಿದ್ದಾರೆ. ಹಾಗಾದರೆ ಧಾರಣಶಕ್ತಿಯ ದುಃಸ್ಥಿತಿಯಿಂದ ಹೊರಬರಲು ಮಾರ್ಗವೇನು? ಧಾರಣಶಕ್ತಿಯು ಅಕ್ಷರ ಜ್ಞಾನದಿಂದ ಪ್ರಾಪ್ತವಾಗುತ್ತದೆ. ಸಾಕ್ಷರತೆಯು ಬದುಕನ್ನು ಉತ್ತಮಪಡಿಸಿಕೊಳ್ಳಲು ಅವಕಾಶಗಳನ್ನು ವರ್ಧಿಸುತ್ತದೆ. ಈ ಹಿನ್ನೆಲೆಯಲ್ಲಿ ಸಾಕ್ಷರತೆಯೇ ಅಭಿವೃದ್ಧಿಯಾಗಿದೆ. ಬೇಡ ಸಮುದಾಯವು ಆರ್ಥಿಕವಾಗಿ ಕೆಳಮಟ್ಟದಲ್ಲಿರುವುದಕ್ಕೆ ತಜ್ಞರ ಪ್ರಕಾರ ಅನಕ್ಷರತೆಯೇ ಪ್ರಮುಖ ಕಾರಣವಾಗಿದೆ.

ಸಮುದಾಯವನ್ನು ಸರ್ಕಾರವು ಪರಿಶಿಷ್ಟ ಪಂಗಡದಲ್ಲಿ ಗುರುತಿಸಿದೆ. ನಿರ್ದಿಷ್ಟ ಮೀಸಲಾತಿಯನ್ನು ನೀಡಿದೆ. ಬೇಡ ಸಮುದಾಯವನ್ನು ಒಳಗೊಂಡ ಪರಿಶಿಷ್ಟ ಪಂಗಡಕ್ಕೆ ಲಿಂಗ ಭೇದವಿಲ್ಲದೆ ಅನೇಕ ಸವಲತ್ತುಗಳನ್ನು ನೀಡಿದೆ. ಕಲಿಕೆಯ ಉನ್ನತ ಹಂತದವರೆಗೂ ಮೀಸಲಾತಿ ಸೌಲಭ್ಯವನ್ನು ನೀಡಿದೆ.

ಪರಿಶಿಷ್ಟ ವರ್ಗದಲ್ಲಿ ಸೇರ್ಪಡೆಯಾಗಿರುವ ಬೇಡ ಸಮುದಾಯದ ಶಿಕ್ಷಣಕ್ಕಾಗಿ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳನ್ನು ತೆರೆಯಲಾಗಿದೆ. ರಾಜ್ಯದಲ್ಲಿ ಇಂತಹ ಅನೇಕ ಕೇಂದ್ರಗಳಿವೆ. ಆಶ್ರಮ ಶಾಲೆಗಳ (Boarding school) ನ್ನು ತೆರೆಯಲಾಗಿದ್ದು, ಕಲಿಯುವವರು ಉಚಿತ ಸೌಲಭ್ಯಗಳನ್ನು ಹೊಂದಿದ್ದಾರೆ. ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಶಾಲೆಗಳನ್ನು ತೆರೆದಿದ್ದು, ಸರ್ಕಾರ ಅನೇಕ ಸವಲತ್ತುಗಳನ್ನು ನೀಡಿದೆ. ಖಾಸಗಿಯಾಗಿ ನಡೆಯುತ್ತಿರುವ ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರ ಧನ ಸಹಾಯ ನೀಡುತ್ತಿದೆ. ಈ ಮೂಲಕ ಉಚಿತ ಊಟ, ಉಪಾಹಾರ, ಉಡುಪು, ಪುಸ್ತಕ ಹಾಗೂ ಇತರ ಸೌಲಭ್ಯಗಳನ್ನು ಸರ್ಕಾರ ಒದಗಿಸುತ್ತದೆ.

ಹಾಗೆಯೇ ಕುಟುಂಬದ ವಾರ್ಷಿಕ ವರಮಾನವನ್ನು ಆಧರಿಸಿ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಹಾಗೂ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಸೌಲಭ್ಯವನ್ನು ಸರ್ಕಾರ ಕಲ್ಪಿಸಿದೆ. ವೈದ್ಯಕೀಯ, ತಾಂತ್ರಿಕ ಹೀಗೆ ವಿವಿಧ ಕೋರ್ಸ್‌ಗಳಲ್ಲಿ ಶಿಕ್ಷಣ ಪಡೆಯುತ್ತಿರುವವರು ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ. ಇವೆಲ್ಲ ಸೌಲಭ್ಯಗಳೊಂದಿಗೆ ಪ್ರೌಢಶಾಲೆಯ ಹೆಣ್ಣು ಮಕ್ಕಳಿಗಾಗಿ ಹೆಚ್ಚುವರಿಯಾಗಿ ಪ್ರತಿ ವಿದ್ಯಾರ್ಥಿನಿಗೂ ನಿರ್ದಿಷ್ಟ ಮೊತ್ತದ ಪ್ರೋತ್ಸಾಹಧನ ನೀಡಲಾಗುತ್ತಿದೆ. ಇದು ಪ್ರೌಢ ಶಾಲೆಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲಿಕ್ಕಾಗಿ ಸರ್ಕಾರ ಕೈಗೊಂಡ ವಿಶೇಷ ಕ್ರಮವಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಎಂ.ಫಿಲ್ ಮತ್ತು ಪಿಎಚ್.ಡಿ. ಫೆಲೋಶಿಪ್‌ನ್ನು (೮ರಿಂದ ೧೦ ಸಾವಿರ) ನೀಡಲಾಗುತ್ತದೆ. ಉನ್ನತ ವ್ಯಾಸಂಗಕ್ಕಾಗಿ ವಿದೇಶದ ವಿಶ್ವವಿದ್ಯಾಲಯಕ್ಕೆ ತೆರಳುವ ಈ ವರ್ಗದ ವಿದ್ಯಾರ್ದಿಗಳಿಗೆ ಗಿರಿಜನ ಉಪಯೋಜನೆಯಲ್ಲಿ ಕ್ರೋಢೀಕರಿಸಿದ ಹಣದಲ್ಲಿ ಧನ ಸಹಾಯ ನೀಡಲಾಗುತ್ತಿದೆ. ಇದಕ್ಕಾಗಿ ಸರ್ಕಾರವು ನಿರ್ದಿಷ್ಟ ಷರತ್ತುಗಳನ್ನು ವಿಧಿಸಿದೆ. ಈ ಅನುದಾನದಲ್ಲಿ ಬೇಡ ಸಮುದಾಯ ಒಳಗೊಂಡ ಪರಿಶಿಷ್ಟ ವರ್ಗದ ವಿದ್ಯಾವಂತ ನಿರುದ್ಯೋಗಿಗಳಿಗೆ ಪೈಲಟ್ ಹುದ್ದೆಗೆ ಅವಕಾಶವಾಗುವಂತೆ ತರಬೇತಿ ಸೌಲಭ್ಯ ವನ್ನು ನೀಡಿದೆ. ಪ್ರತಿ ಅಭ್ಯರ್ಥಿಯ ತರಬೇತಿ ವೆಚ್ಚ ಸುಮಾರು ೧೧ ಲಕ್ಷ ರೂಪಾಯಿ ಗಳಾಗಿದ್ದು, ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ ಉದ್ಯೋಗ ದೊರೆತ ಮೇಲೆ ತಮ್ಮ ಮಾಸಿಕ ವೇತನದಲ್ಲಿ ಶೇ. ೫೦ರಷ್ಟನ್ನು ೨ ವರ್ಷಗಳವರೆಗೆ ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ.

ಮಹಿಳೆಯರಿಗೆ ಗಿರಿಜನ ಉಪಯೋಜನೆಯ ಅಡಿಯಲ್ಲಿ ಗಗನಸಖಿ/ಟ್ರಾವೆಲ್ ಅಂಡ್ ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿ ಒಂದು ವರ್ಷದ ಅವಧಿಯ ಉಚಿತ ತರಬೇತಿಯನ್ನು ಸರ್ಕಾರ ನೀಡುತ್ತದೆ. ತರಬೇತಿಗೆ ತಗಲುವ ಪೂರ್ಣ ವೆಚ್ಚವನ್ನು ಇಲಾಖೆಯು ಭರಿಸುತ್ತದೆ. ಹಾಗೆಯೇ ಮಾಹಿತಿ ತಂತ್ರಜ್ಞಾನದಲ್ಲಿ ತರಬೇತಿ ನೀಡಿ ೫೦೦ ರೂ. ಗಳನ್ನು ಮಾಸಿಕ ಶಿಷ್ಯವೇತನವಾಗಿ ನೀಡಲಾಗುತ್ತದೆ. ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿಯನ್ನು ನೀಡುವ ಸೌಲಭ್ಯ ಒದಗಿಸಿದೆ. ಈ ವರ್ಗಕ್ಕೆ ಸೇರಿದ ಪದವೀಧರರಿಗೆ ನ್ಯಾಯಾಂಗಕ್ಕೆ ಸಂಬಂಧಪಟ್ಟ ಆಡಳಿತದಲ್ಲಿ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ೪ ವರ್ಷಗಳ ಅವಧಿಯ ತರಬೇತಿ ನೀಡಲಾಗುತ್ತದೆ. ತಿಂಗಳಿಗೆ ರೂ. ೧೦೦೦ ವನ್ನು ಶಿಷ್ಯ ವೇತನವಾಗಿ ನೀಡಲಾ ಗುತ್ತದೆ.

ಕೃಷಿ, ವಿಜ್ಞಾನ, ವೈದ್ಯಕೀಯ, ತಾಂತ್ರಿಕ ವೃತ್ತಿಪರ ವಿಷಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ನಿಗದಿಪಡಿರುವ ಪಠ್ಯಪುಸ್ತಕ ಮತ್ತು ಇತರ ಉಪಯುಕ್ತ ಪುಸ್ತಕಗಳನ್ನು ಕೇಂದ್ರ ಪುರಸ್ಕೃತ ಯೋಜನೆಯಡಿ ಬುಕ್ ಬ್ಯಾಂಕ್ ಅಂದರೆ ಪುಸ್ತಕ ಭಂಡಾರಗಳನ್ನು ಆಯಾ ಕಾಲೇಜುಗಳಲ್ಲಿ ಸ್ಥಾಪಿಸಲಾಗಿದೆ. ಹೀಗೆ ವೃತ್ತಿಪರ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿರುವ ಈ ವರ್ಗದ ವಿದ್ಯಾರ್ಥಿಗಳು ಆರ್ಥಿಕವಾಗಿ ಸಶಕ್ತರಾಗಿಲ್ಲದಿದ್ದಾಗ ಅವರಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದರೆ, ಅಂತಹ ಸಂದರ್ಭದಲ್ಲಿ ಗಿರಿಜನ ಯೋಜನೆಯಡಿ ಯಲ್ಲಿ ರೂ. ಒಂದು ಸಾವಿರವನ್ನು ಪ್ರವಾಸದ ವೆಚ್ಚಕ್ಕಾಗಿ ನೀಡುತ್ತದೆ.

ಈ ವರ್ಗಕ್ಕೆ ಸೇರಿದ ನಿರುದ್ಯೋಗ ಯುವ ಜನತೆಗೆ ಸ್ವಯಂ ಉದ್ಯೋಗ ತರಬೇತಿ ಸೌಲಭ್ಯವಿದೆ. ಜಿಲ್ಲಾವರಿಯ ಯೋಜನೆಯ ಹೆಸರಿನಲ್ಲಿ ಯುವ ಜನರಿಗೆ ಆಟೋರಿಕ್ಷಾ ಹಾಗೂ ಲಘುವಾಹನ ಚಾಲನೆಯಲ್ಲಿ ೧ ತಿಂಗಳು ತರಬೇತಿ ನೀಡುವುದರೊಂದಿಗೆ ವಾಹನ ನಡೆಸಲು ಪರವಾನಗಿಯ (ಲೈಸನ್ಸ್)ನ್ನೂ ಒದಗಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ಇವರಿಗೆ ನಿರ್ದಿಷ್ಟ ಮೊತ್ತದ ಶಿಷ್ಯವೇತನ ನೀಡಲಾಗುತ್ತದೆ.

ಕಲಿಕೆಯ ಉನ್ನತ ಹಂತದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿದ್ದರೆ ಸರ್ಕಾರವು ಅಧ್ಯಯನ ಪ್ರವಾಸ ವೆಚ್ಚವನ್ನು ನೀಡುತ್ತದೆ.

ಗಮನಿಸಬೇಕಾದ ಅಂಶವೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಬಾಲಕಿ ಯರಿಗೆ ಹಾಜರಾತಿ ವಿದ್ಯಾರ್ಥಿ ವೇತನವನ್ನು ನೀಡುತ್ತದೆ. ಹೀಗೆ ಸರ್ಕಾರ ಸಮುದಾಯದ ಶಿಕ್ಷಣಕ್ಕಾಗಿ ಸಾಧ್ಯವಾದಷ್ಟು ಸವಲತ್ತುಗಳನ್ನು ಅವಕಾಶಗಳನ್ನು ಕಲ್ಪಿಸುತ್ತಲೇ ಇದೆ. ೨೦೦೮ರ ಮಾರ್ಚ್‌ನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸೇರಿದಂತೆ ಹಿಂದುಳಿದವರ ಕಲ್ಯಾಣಕ್ಕಾಗಿ ವಿಶೇಷ ಅನುದಾನ ನೀಡಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದ ಎಂ.ಫಿಲ್ ಹಾಗೂ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ನೆರವು ನೀಡುವ ರಾಜೀವ್‌ಗಾಂಧಿ ರಾಷ್ಟ್ರೀಯ ಫೆಲೋಶಿಪ್ ಕಾರ್ಯಕ್ರಮಕ್ಕೆ ೭೫ ಕೋಟಿ ರೂಪಾಯಿಗಳನ್ನು ಮೀಸಲಾಗಿ ಇಟ್ಟಿದೆ.

ಬೇಡ ಸಮುದಾಯ ಒಳಗೊಂಡ ಪರಿಶಿಷ್ಟ ಪಂಗಡಕ್ಕೆ ಲಿಂಗ ಭೇದವಿಲ್ಲದೆ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಶಾಲೆಗಳನ್ನು ತೆರೆದಿದೆ. ಬಿಸಿಯೂಟ ನೀಡುತ್ತಿದೆ. ಅನೇಕ ಬಗೆಯ ಸೌಲಭ್ಯ ಸವಲತ್ತುಗಳನ್ನು ಒದಗಿಸಿದೆ. ಆದರೆ ತೆರೆದಿರುವ ಶಾಲೆ ಕಾಲೇಜುಗಳನ್ನು ಪ್ರವೇಶಿಸುವ, ಒದಗಿಸಿರುವ ಸೌಲಭ್ಯಗಳನ್ನು ಬಳಸಿಕೊಳ್ಳುವ, ಅವುಗಳನ್ನು ಧಾರಣ ಮಾಡಿಕೊಳ್ಳುವ ಸಾಮರ್ಥ್ಯ ಸಮುದಾಯಕ್ಕೆ ಇನ್ನೂ ಬರಬೇಕಾಗಿದೆ.

**ಆಧಾರ–ಆಕರ**


೧. ಕರ್ನಾಟಕ ಗ್ಯಾಝೆಟೀಯರ್, ಡಾ. ಆರ್. ಮುನಿಸ್ವಾಮಿ ೧೯೯೯.

೨. ಕನ್ನಡ ಅಧ್ಯಯನ ಕರ್ನಾಟಕದ ಆರ್ಥಿಕತೆ, ಸಂ: ಪ್ರೊ. ಅಬ್ದುಲ್ ಅಜೀಜ್, ಕೆ.ಜಿ. ವಾಸುಕಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೭.

೩. ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಸಂಯೋಜಕರು ಟಿ.ಆರ್. ಚಂದ್ರಶೇಖರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯.

೪. ಜಿಲ್ಲಾ ಅಭಿವೃದ್ಧಿ ಅಧ್ಯಯನ ಗದಗ, ಸಂ. ಪ್ರೊ. ಟಿ.ಆರ್. ಚಂದ್ರಶೇಖರ, ಸಹ ಸಂಯೋಜಕರು, ಡಾ. ಸಿದ್ಧಗಂಗಮ್ಮ, ಪ್ರೊ. ಚಂದ್ರಪೂಜಾರಿ, ಶ್ರೀ ಎ. ಶ್ರೀಧರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಹಲಗಲಿ ಜಾನಪದ, ಶ್ರೀ ರಾಮ ಇಟ್ಟಣ್ಣನವರ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ ೧೯೯೫.

೬. ವಿಜಯನಗರೋತ್ತರ ಕಾಲಿನ ಬೇಡ ಜನಾಂಗದಲ್ಲಾದ ಸಿತ್ಯಂತರಗಳು: ಚಾರಿತ್ರಿಕ ಅಧ್ಯಯನ, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳನ್ನು ಅನುಲಕ್ಷಿಸಿ. ಪಿಎಚ್.ಡಿ. ಪ್ರಬಂಧ, ಸಂಶೋಧಕರು ಕೆ. ದುರಗಪ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೩.

೭. ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಶಿಕ್ಷಣ ಪ್ರಗತಿ: ಒಂದು ಅಧ್ಯಯನ ಪಿಎಚ್.ಡಿ. ಪ್ರಬಂಧ ಸಂಶೋಧಕರು ಮಲ್ಲಿಕಾರ್ಜುನ ಕಿಚಡಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಮ್ಯಾಸ ಬೇಡರ ಸಾಂಸ್ಕೃತಿಕ ನಾಯಕಿಯರು: ಒಂದು ಅಧ್ಯಯನ ಪಿಎಚ್.ಡಿ ಪ್ರಬಂಧ ಸಂಶೋಧಕರು ಸಿ.ಬಿ. ಅನ್ನಪೂರ್ಣಮ್ಮ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕುಮ್ಮಟ ನಾಯಕರು: ಒಂದು ಸಾಂಸ್ಕೃತಿಕ ಅಧ್ಯಯನ. ಪಿಎಚ್.ಡಿ. ಪ್ರಬಂಧ ಸಂಶೋಧಕರು ಮಂಜುನಾಥಯ್ಯ ಟಿ.ಎಂ., ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೩.

೧೦. ಗ್ರಾಮ ಪಂಚಾಯ್ತಿಯಲ್ಲಿ ಮಹಿಳೆಯ ಪಾತ್ರ: ಹೊಸಪೇಟೆ ಮತ್ತು ಸಂಡೂರು ತಾಲೂಕು ಗ್ರಾಮ ಪಂಚಾಯ್ತಿಗಳ ಒಂದು ತೌಲನಿಕ ಅಧ್ಯಯನ ಪಿಎಚ್.ಡಿ. ಪ್ರಬಂಧ ಸಂಶೋಧಕರು ಡಿ. ಮೀನಾಕ್ಷಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೧. ವಾಲ್ಮೀಕಿ ಸಂಪದ ಸ್ಮರಣಸಂಚಿಕೆ, ಸಂ: ಡಾ. ಮಂಜುನಾಥ ಬೇವಿನಕಟ್ಟಿ, ಡಾ. ತಾರಿಹಳ್ಳಿ ಹನುಮಂತಪ್ಪ ಪ್ರಕಾಶನ: ಶ್ರೀ ವಾಲ್ಮೀಕಿ ಮಹಾಸಂಸ್ಥಾನ ರಾಜನಹಳ್ಳಿ, ೨೦೦೬.

೧೨. ವ್ಯಾಧ ಚರಿತೆ ಬೇಡ ಕುಲಮೂಲದ ಕಥನಗಳು ಸಂ. ಡಾ. ಮಂಜುನಾಥ ಬೇವಿನಕಟ್ಟಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭.

* * *

ಸಾಮಂತ, ನಾಯಕ, ಪಾಳೆಯಗಾರ, ದಂಡನಾಯಕ, ಮಂಡಲೇಶ್ವರ, ರಾಜ, ಮಹಾರಾಜ, ಅರಸ, ಒಡೆಯ, ದೊರೆ ಇತ್ಯಾದಿಯಾಗಿ ಕರೆಸಿಕೊಳ್ಳುತ್ತಿದ್ದವರೆಲ್ಲರೂ ನಾಯಕ ಪಾಳೆಯಗಾರರು.

**– ಪ್ರೊ. ಲಕ್ಷ್ಮಣ್ ತೆಲಗಾವಿ**

# ೧೦. ರಾಜಕೀಯ ಸ್ಥಿತಿಗತಿಗಳು

ಬಾಗಲಕೋಟೆ ಜಿಲ್ಲೆಯನ್ನು ಗಮನದಲ್ಲಿಟ್ಟುಕೊಂಡು ವಾಲ್ಮೀಕಿ ಸಮಾಜದ ರಾಜಕೀಯತೆಯನ್ನು ಗ್ರಹಿಸುವುದಾದರೆ ಮೊದಲಿಗೆ ಅರಿವಾಗುವುದು ಹಲಗಲಿ ಬಂಡಾಯ. ಈ ಹಲಗಲಿ ಬಂಡಾಯದಲ್ಲಿ ಪಾಲ್ಗೊಂಡ ಅಸಂಖ್ಯಾತ ಜನರು ವಾಲ್ಮೀಕಿಗಳೇ ಆಗಿದ್ದಾರೆ. ಆದರೆ ಇಲ್ಲಿ ವಾಲ್ಮೀಕಿಗಳೆಂದು ಹೇಳದೆ ಬೇಡ ಬಂಟರೆಂದು ಉಲ್ಲೇಖಿಸುತ್ತೇನೆ. ಬೇಡರು, ವಾಲ್ಮೀಕಿಗಳು ಒಂದೇ ಜನಸಮುದಾಯವಾಗಿರುವುದರಿಂದ ಇದರಲ್ಲಿ ಯಾವುದೇ ವೈರುಧ್ಯತೆ ಗಳಿಲ್ಲ.

ಬೇಡ ಸಮುದಾಯದ ಇತಿಹಾಸವನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಗಮನಿಸ ಬಹುದು. ಕರ್ನಾಟಕದ ಅತೀ ಪ್ರಾಚೀನ ಸಮುದಾಯದವಾದ ಬೇಡ ಸಮುದಾಯ ಇಲ್ಲಿನ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಬೇಟೆಗಾರ ಸಮುದಾಯವಾಗಿ ಮುಂದುವರಿದ ಬೇಡರು, ತಮ್ಮ ಆಯುಧ ಬಳಕೆಯ ಕಲೆ ಹಾಗೂ ಸಾಹಸಿ ಜೀವನದ ಅಂಗವಾಗಿ ಯುದ್ಧಕಲೆ ಯನ್ನು ಅಳವಡಿಸಿಕೊಂಡವರು. ಮಿಕ

ಹಿಡಿಯಲು ಬಳಸುವ ನಾನಾ ತಂತ್ರಗಳೇ ಮುಂದೆ ಸಮರವ್ಯೆಹ ರಚನೆಯ ತಳಹದಿಗಳಾದವು. ಬೇಟೆಯ ಜೊತೆಗೆ ವೀರತ್ವವನ್ನು ಬೆಳೆಸಿಕೊಂಡ ಬೇಡ ಸಮುದಾಯವು ನಂತರದಲ್ಲಿ ರಾಜ್ಯ ವಿಸ್ತರಣೆ ಹಾಗೂ ನಿರ್ವಹಣೆಯಲ್ಲಿ ಸಾಮ್ರಾಜ್ಯ ಗಳಿಗೆ ಸೇವೆಸಲ್ಲಿಸಿತು. ಹೀಗೆ ನಾಡಿನಾದ್ಯಂತ ಅವರ ಇತಿಹಾಸದ ತುಣುಕುಗಳು ಮೂಲ ದಿಂದಲೂ ಸಿಗುತ್ತವೆ. ಆ ಎಳೆಯ ಜಾಡಿನಲ್ಲಿಯೇ ವಲಸೆಗಾರರಾಗಿ ಬಂದ ಬೇಡ ಸಮುದಾಯ ಬಾಗಲಕೋಟೆ ಜಿಲ್ಲೆಯಲ್ಲಿ ಗುಡ್ಡದ ವಾರಿಯಲ್ಲಿ ನೆಲೆ ನಿಂತು ಜೀವನ ಸಾಗಿಸುತ್ತಿದ್ದುದು ಬಾದಾಮಿ, ಬಾಗಲಕೋಟೆ, ಬೀಳಗಿ, ಮುಧೋಳ, ಜಮಖಂಡಿ ತಾಲೂಕು ಗಳಲ್ಲಿ ಕಂಡುಬರುತ್ತದೆ. ಮೊದಲನೆಯದಾಗಿ ಅವರ ಪೂರ್ವ ಪಾರಂಪರಿಕ, ಏರು ಪೇರುಗಳೂ ರಾಜಕೀಯದ ಆಸ್ತಿಭಾರವಾಗಿದೆ. ಹಾಗಾಗಿ ಪ್ರಥಮದಲ್ಲಿ ಪೂರ್ವಪಾರಂಪರಿಕ ಏರು ಪೇರೆಂದು ಗುರ್ತಿಸಲಾಗಿದೆ.

ಆದಿಮಾನವನ ಸಮುದಾಯದ ವ್ಯವಸ್ಥೆಯು ಶಿಥಿಲಗೊಂಡ ನಂತರ ಪ್ರಪ್ರಥಮವಾಗಿ ವರ್ಗವಿಭಜನೆ ಕಾಣಿಸಿಕೊಳ್ಳುತ್ತದೆ. ಈ ಆದಿಮಾನವನ ಸಮುದಾಯ ವ್ಯವಸ್ಥೆಯು ಶಿಥಿಲ ಗೊಂಡು ವರ್ಗ ಸಮಾಜವು ಅಸ್ತಿತ್ವದಲ್ಲಿ ಬಂದದ್ದು ಸುದೀರ್ಘ ಕಾಲದ ಬೆಳವಣಿಗೆಯ ಪರಿಣಾಮವಾಗಿ, ಹಾಗೇ ಆಯಾ ಕಾಲ ಘಟ್ಟದಲ್ಲಿಯೇ ಗಮನಿಸಿದಾಗ ಸುಮಾರು ಜಾತಿ ಸಮುದಾಯಗಳನ್ನು, ಮತ-ಬೇಧಗಳನ್ನು ಕೂಡ ಕಾಣಬಹುದಾಗಿದೆ. ಅಲ್ಲದೇ ಆಯಾ ಸಮುದಾಯಗಳವರಿಗೆ ಪಾರಂಪರಿಕತೆ ತಿಳಿದು ಬರುತ್ತದೆ.

ಬಹುತೇಕ ಇಲ್ಲಿನ ಬೇಡ ಸಮುದಾಯ ಈಗಾಗಲೇ ಪೀಠಿಕೆಯಲ್ಲಿ ಹೇಳಿದಂತೆ ವಲಸೆ ಬಂದವರೇ ಆಗಿದ್ದಾರೆ. ಅಲ್ಲದೇ ಅವರ ಮೂಲ ಪುರುಷರು ಸುರಪುರ, ಕಂಪಿಲದುರ್ಗದಲ್ಲಿ, ಸಾಗರದಲ್ಲಿ ಗೌಡರಾಗಿ, ದೇಸಗತಿಯವರಾಗಿದ್ದರೆಂದು ಅವರ ವಂಶಾವಳಿಯಿಂದ ತಿಳಿದು ಬರುತ್ತದೆ. ಮ್ಯಾಸ ನಾಯಕರೆಂದು ಹೇಳಿಕೊಳ್ಳುವ ವಾಲ್ಮೀಕಿಗಳು ಬಹುಪಾಲು ಬಾದಾಮಿ ತಾಲೂಕಿನ ಕೆರೂರು ಗ್ರಾಮದಲ್ಲಿ ಕಾಣಸಿಗುತ್ತಾರೆ. ಇವರೂ ಕೂಡ ವೇಷಗಾರರಾಗಿದ್ದು ಕೊಂಡು ನೀರು ಬೂದಿಹಾಳ ದೇಸಗತಿಯ ಕಾವಲುಗಾರರಾಗಿ ಐದಾರು ತಲೆಗಳಿಂದ ಸೇವೆ ಸಲ್ಲಿಸಿ, ತಮ್ಮದೇ ಸಮುದಾಯದಲ್ಲಿ ಜಂಗೀ ನಾಯಕರೆಂದು ಕರೆದುಕೊಂಡದ್ದು ವಿಶೇಷ ಎನಿಸುತ್ತದೆ. “ಜಂಗಿ” ಅಂದರೆ ನ್ಯಾಯ ನಿರ್ಣಯ ಮಾಡುವವರೆಂದು ತಿಳಿದು ಬರುತ್ತದೆ. ತಮ್ಮ ಸಮುದಾಯದ ಯಾವುದೇ ನ್ಯಾಯಗಳು ಕೋರ್ಟು ಕಛೇರಿಗೆ ಹೋಗಿರದೆ ನಾಲ್ಕಾರು ಜನ ಹಿರಿಯರು ತಮ್ಮದೇ ಪಂಚಾಯತಿ ಸೇರಿಸಿ ನ್ಯಾಯಧೀಕರಣದಂತ ಕಾನೂನು ಚೌಕಟ್ಟಿ ನೊಳಗೆ ಬದುಕುತ್ತಿದ್ದಾರೆ. ಈ ಜನರ ಇನ್ನೊಂದು ಮುಖ್ಯವೆಂದರೆ ಬೇರೆ ಸಮುದಾಯದವ ರೊಡನೆ ಸೇರದೇ ಇರುವುದು. ಅಂದರೆ ತಮ್ಮ ನೆರಳಿಗೆ ತಾವೇ ಹೆದರುವ ಈ ಬೇಡ ಸಮುದಾಯ ತಮ್ಮ ಕ್ಷೇತ್ರದಲ್ಲಿ ತಾವೇ ಮುಂದುವರಿದವರೆಂದು ಇದರಿಂದ ಮನವರಿಕೆ ಯಾಗುತ್ತದೆ.

ಒಂದು ನ್ಯಾಯಾಧೀಕರಣದಂತ ನಿರ್ಣಯ ಕೈಕೊಂಡದ್ದು ಅಪರೂಪವೆನಿಸಿದೆ. ಅದು ಹೀಗಿದೆ. ಆಕಸ್ಮಿಕವಾಗಿ ಒಂದು ಹೆಣ್ಣಿನ ಜೊತೆಗೆ ಎರಡನೇ ಮದುವೆ ಮಾಡಿಕೊಂಡಿದ್ದರಿಂದ ಆ ಕುಟುಂಬವನ್ನು ತಮ್ಮ ಸಮಾಜದಿಂದ ಬಹಿಷ್ಕರಿಸಿದ್ದು ಅಲ್ಲದೇ ಎಲ್ಲೇ ಹೋದರೂ ನೆಲೆ ಸಿಗದಂತೆ ಕೋರ್ಟ್ ತೀರ್ಪಿನಂತೆ ವಾಸ್ತವದಲ್ಲೂ ಕಾಣಸಿಗುತ್ತದೆ. ಅವರದೇ ಆದ ಒಂದು ತೀರ್ಮಾನವನ್ನು ಮೀರಿ ಪ್ರಜಾಪ್ರಭುತ್ವದಲ್ಲಿ ಹೇಗಾದರೂ ಬದುಕ ಬಹುದಿತ್ತು, ಆದರೆ ತಮ್ಮ ಸಮುದಾಯದ ಬೇಲಿಯನ್ನು ದಾಟಿ ಬಾರದಿರುವುದೇ ಇದಕ್ಕೆ ಕಾರಣವಾಗಿದೆ. ತಮ್ಮ ಪರಿಸರವಾಗಲಿ, ಸಮುದಾಯವಾಗಲಿ ಒಂದು ಸಾಮಾಜಿಕ ಕಟ್ಟಳೆ ನಿರ್ಬಂಧಗಳು ಎಂತಹ ದಿಗ್ಬ್ಂಧನಗಳನ್ನು ಹಾಕಿ ತಮ್ಮ ಹಿಡಿತದಲ್ಲಿಟ್ಟುಕೊಂಡಿವೆ ಎಂಬುದು ಇದರಿಂದ ತಿಳಿದುಬರುತ್ತದೆ. ಇನ್ನೂ ಮುಂದುವರಿದಂತೆ.

ಇವರು ಕತ್ತಲ ಭೂ ಕಂಡದೊಳಗೆ ಇದ್ದು ತಮ್ಮನ್ನು ತಾವೇ ನೋಡಿಕೊಳ್ಳದ ಅಲಕ್ಷಿತರು, ಮುಖಾಮುಖಿ ಸಂವಹನದಿಂದ ದೂರವಿದ್ದವರು ಇದ್ದುದರಲ್ಲಿಯೇ ಸುಖ ಹಂಚಿಕೊಂಡವರು ವರ್ತಮಾನದ ಶಿಕ್ಷಣ ಸಾರ್ವತ್ರೀಕರಣದಿಂದ ಬೆಳಕು ಪಡೆದುಕೊಂಡವರಾಗಿದ್ದಾರೆ. ಒಂದನ್ನು ನೆನಪಿಟ್ಟುಕೊಳ್ಳುವುದಾದರೆ ಇವರಿಗೆ ಸಿಕ್ಕಂತ ಶಿಕ್ಷಣ ಪಶ್ಚಿಮ ಮುಖಿಯಾದುದೇ ಹೊರತು ಪೂರ್ವದ ಬೆಳಕಲ್ಲ. ಹಾಗಾಗಿ ಇನ್ನೂ ದಾಸ್ಯದಲ್ಲಿದ್ದುದು ಕಂಡುಬರುತ್ತದೆ. ಜಾಗತೀಕರಣದ ಹಿನ್ನೆಲೆಯಲ್ಲಿ ನೋಡಿದಾಗ ಇವರ ವ್ಯಕ್ತಿತ್ವ ಬೆಳವಣಿಗೆ ತೀರಾ ಹಿಂದುಳಿದುದೇ ಆಗಿದೆ.

ಸ್ವಲ್ಪ ಪ್ರಾಚೀನತೆಯತ್ತ ದೃಷ್ಟಿ ಹರಿಸಿದಾಗ ಏಕಲವ್ಯನಂತಹ ಮುಗ್ಧ ಜನ ತುಳಿತಕ್ಕೆ ಒಳಗಾಗಿದ್ದುದು ಆಗಿದೆ. ಇಲ್ಲಿ ಪ್ರಮುಖವಾಗಿ ಏಕಲವ್ಯನನ್ನು ಎತ್ತಿಕೊಂಡಾಗ ತಿಳಿಯುವುದು ಹೀಗೆ, ಏಕಲವ್ಯನು ದ್ರೋಣಚಾರ್ಯರೇ ಬಿಲ್ವಿದ್ಯೆ ಕಲಿಸಿದರೆಂಬ ನಂಬಿಕೆಯಿಂದ ವಿವೇಕವನ್ನು ಮರೆತು ದ್ರೋಣಾಚಾರ್ಯರಿಗೆ ಹೆಬ್ಬೆರಳನ್ನು ಕತ್ತರಿಸಿ ಕೊಟ್ಟಿದ್ದು ಎಷ್ಟು ಸಮಂಜಸ! ಅದು ಏಕಲವ್ಯನ ಹೆಬ್ಬೆರಳಲ್ಲ ಇಡೀ ತನ್ನ ಸರ್ವಸ್ವ ಎನ್ನುವ ಉಪಾದಿಯಾಗಿದೆ. ಇನ್ನೊಂದ ರ್ಥದಲ್ಲಿ ಬೇಡ ಬಾಲಕನ ಅದ್ಭುತ ವಿದ್ಯೆಯನ್ನು ಕಬಳಿಸಲೆಂದೇ ದ್ರೋಣರು ಪಾಂಡವರ ಪಕ್ಷವಹಿಸಿ ಹೊಂಚು ಹಾಕಿದ್ದು ಆ ದಿನದ ರಾಜಕೀಯತೆ ಆಗಿದೆ. ಒಂದರ್ಥದಲ್ಲಿ ಗ್ರಹಿಸುವು ದಾದರೆ ಬೆಳೆಯುವ ಮೊಳಕೆಯನ್ನು ಅಂದೇ ಚಿವುಟಿ ಹಾಕಿದ್ದರಿಂದ ಅಂಧಕಾರದಲ್ಲಿ ಮುಳುಗುತ್ತ ಬದುಕಿದ್ದು ವಾಸ್ತವದಲ್ಲೂ ಕಂಡುಬರುತ್ತದೆ. ಆದರೂ ಕೂಡ ತನ್ನ ಎಡಗೈ ಬಂಟನಾಗಿ ಸಾಧಿಸಿ, ಬೇಧಿ ಬೆಳೆದುದಕ್ಕೆ ಈ ದಿನದ ಸಮುದಾಯವು ತನ್ನ ಏಳ್ಗೆಯನ್ನು ಸ್ವಾತಂತ್ರ್ಯ ನಂತರದಲ್ಲಿ ಹೊಸ ಹೆಜ್ಜೆ ಹಾಕಿದ್ದು ಅಂಥವರ ಧೀರತನ, ವೀರತನಕ್ಕೆ ಸಾಕ್ಷಿ ಯಾಗಿದ್ದು ಮುಂದಿನ ಚರ್ಚೆಯಲ್ಲಿ ಗಮನಿಸಬಹುದಾಗಿದೆ.

**ಸ್ವಾತಂತ್ರ್ಯ ಪೂರ್ವದ ರಾಜಕೀಯತೆ**

ಪ್ರಖ್ಯಾತಿ ಪಡೆದ ಈ ಜನ ಸಮುದಾಯ ಕಾಲ ಉರುಳಿದಂತೆ ಮೇಲ್ವರ್ಗದ ಜನರು ತುಳಿತಕ್ಕೆ ಒಳಪಡಿಸುತ್ತ ಬಂದಿದ್ದರೂ ವಂಶ ಪಾರಂಪರ್ಯದಿಂದ ಬೆಳೆದು ಬಂದಿರುವ ಇವರ ಕೆಚ್ಚೆದೆಯ ಮನೋದಾರ್ಢ್ಯದಿಂದ, ಧೈರ್ಯ ಶೌರ್ಯಾಧಿ ಗುಣಗಳಿಂದ, ಆಡಳಿತ ದಕ್ಷತೆ ಯಿಂದ ಪ್ರತಿ ಕಾಲಕ್ಕೂ ಕೀರ್ತಿಗಳಿಸುತ್ತ ಇತಿಹಾಸದಲ್ಲಿ ಮಿಂಚಿದ್ದಾರೆ. ಒಂದನ್ನು ಗಮನಿಸುವು ದಾದರೆ ವಾಲ್ಮೀಕಿಗಳನ್ನು ಸಾಮಂತರು, ಮಾಂಡಲೀಕರು, ಅರಸರು ತಮ್ಮ ಸೈನ್ಯಕ್ಕೆ ಸೇರಿಸಿ ಕೊಳ್ಳಲಾರಂಭಿಸಿದರು. ಈ ನಾಡಿನ ಎಷ್ಟೋ ದೇಸಗತಿ ಮನೆತನಗಳಲ್ಲಿ ಕೂಡ ಬೇಡ ಪಡೆಯೇ ಪ್ರಮುಖ ಮುಂಚೂಣಿಯಲ್ಲಿತ್ತೆಂಬುದು ನನ್ನದೇ ಆದ ಬಾಗಲಕೋಟೆ ಜಿಲ್ಲೆಯ ದೇಸಗತಿ ಮನೆತನಗಳು ಎಂಬ ಮಹಾ ಪ್ರಬಂಧದಿಂದ ತಿಳಿದು ಬರುತ್ತದೆ. ಇದಕ್ಕೊಂದು ಪ್ರಮುಖ ಕಾರಣವನ್ನು ಇಲ್ಲಿ ಗುರುತಿಸಬಹುದು. ಅರಣ್ಯ ವಾಸಿಗಳಾದ್ದರಿಂದ ಬೇಟೆ ವೃತ್ತಿಯು ಉಪಜೀವನವಾಗಿರುವುದರಿಂದ, ಧೀರರು, ನುರಿತ ಹೋರಾಟಗಾರರಾಗಿದ್ದರಿಂದ ಸೈನ್ಯದಲ್ಲಿ ಇವರಿಗೆ ಆದ್ಯತೆ ದೊರೆಯುತ್ತ ಬಂದಿರಬೇಕೆನಿಸುತ್ತದೆ.

"ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು. ಆದರೆ ಬೇಡರಿಗಿಂತ ಶೂರರು ದೊರೆಯಲಾರರು" ಎಂದು ವಿಲಿಯಂ ಸ್ಮಿಥ್ ಹೇಳಿದ್ದಾರೆ. ಈ ಮಾತಿನ ದಾಟಿಯಲ್ಲಿ ಅವರ ಶೂರತನದ ವ್ಯಕ್ತಿತ್ವಕ್ಕೆ, ಪ್ರತಿಷ್ಟೆಗೆ ಇದೊಂದೇ ಮಾತು ಸಾಕೆನಿಸುತ್ತದೆ. ತೇರದಾಳ ನಾಡಿನ ದೇಸಗತಿಯಲ್ಲಿ ನೂರಾರು ಬೇಡರ ಪಡೆ, ನೀರಬೂದಿಹಾಳ ದೇಸಾಯರಲ್ಲಿ ನೂರಾರು ಬೇಡರು, ಉಳಿದೆಡೆಗೆ ಚಿಕ್ಕ ಪುಟ್ಟ ಪಡೆಗಳು ಸಿಗುತ್ತವೆ. ನಿಷ್ಠಾವಂತ ಸೈನಿಕರಾಗಿ ಪ್ರಾಣದ ಹಂಗು ತೊರೆದು ಹೋರಾಡಿದ ಬೇಡರು, ತಮ್ಮ ದೊರೆಗಳ ಮೆಚ್ಚುಗೆ, ವಿಶ್ವಾಸಗಳಿಸಿದವರು. ಇಂಥ ಬೆಳವಣಿಗೆಯ ಹಂತದಲ್ಲಿ ಸೇನಾ ನಾಯಕ ಬೇಡ ಕುಲಕ್ಕೆ ನಾಯಕ ಪಟ್ಟ ಸಿಕ್ಕಿದ್ದು ಅಲ್ಲದೇ ಸ್ಥಾನಿಕ ದೊರೆಗಳಾಗಿ ತಮ್ಮ ಸಮುದಾಯದಲ್ಲಿ ಪಂಚರಾಗಿದ್ದು ವಿವಿಧ ಹುದ್ದೆಯ ನೆಪದಲ್ಲಿ ರಾಜಕೀಯ ಪ್ರವೇಶಕ್ಕೆ ಮಣಿಹಾಕಿದ್ದುದು ಸ್ಥಾನಿಕ ಸಂದರ್ಶನದ ಮೂಲಕ ತಿಳಿದುಬರುತ್ತದೆ.

ಈ ಭಾಗದ ಬಹುದೊಡ್ಡ ಹೋರಾಟಗಾರರೆಂದರೆ "ಹಲಗಲಿ ಬೇಡರು", "ಬಂಟನೂರ ಬೇಡರು" ನಾಡಿಗೋಸ್ಕರ ತಮ್ಮ ಪ್ರಾಣವನ್ನೇ ಪಣವಾಗಿಟ್ಟ, ತಮ್ಮಮನೆ, ಮಕ್ಕಳು, ಮಡದಿಯರ ವ್ಯಾಮೋಹವನ್ನು ಧಿಕ್ಕರಿಸಿ ಬಂಧು-ಬಳಗದವರನ್ನು, ಐಶ್ವರ್ಯವನ್ನು ಸುಖ ಸಂಪತ್ತನ್ನು ಕಡೆಗಣಿಸಿ ಹೋರಾಡಿದ ವೀರ ತರುಣರು, ಶೌರ್ಯ ಪರಾಕ್ರಮಗಳಿಂದ ವೈರಿಗಳ ಎದೆ ನಡುಗಿಸಿ, ಬ್ರಿಟೀಷರನ್ನು ಸದೆ ಬಡಿದು, ಹಿಂದೂ ಧರ್ಮಕ್ಕೆ ಹಿಂದೂ ಸಂಸ್ಕೃತಿಗೆ ಪರಕೀಯರಿಂದ ಗಂಡಾಂತರ ಬಂದಾಗ ಗಂಡುಗಲಿಗಳಾಗಿ ಹೋರಾಡಿ ರಕ್ಷಿಸಿದ ಪ್ರಥಮ ಹೋರಾಟಗಾರರೇ ಈ ವೀರನಾಯಕರು ಹಲಗಲಿ ಬಂಟರು. ಯಾವ ಅರಸೊತ್ತಿಗೆಯ, ಸಂಸ್ಥಾನಗಳ ನೆರವಿಲ್ಲದೆ ತಮ್ಮ ಸ್ವಾಭಿಮಾನಕ್ಕೆ ದಕ್ಕೆ ತಂದ ಸಾಮ್ರಾಜ್ಯ ಶಾಹಿಗಳ ವಿರುದ್ಧ ಸಮರ ಸಾರಿ ಮಣ್ಣಲ್ಲಿ ಮಣ್ಣಾಗಿ ಹೋಗಿದ್ದಾರೆ. ಅವರ ವೈಯಕ್ತಿಕ ರಾಜಕೀಯತೆಯ ಕೆಲವು ಮಾತನ್ನು ಉಚ್ಚರಿಸುವುದು ಸೂಕ್ತವೆನಿಸುತ್ತದೆ. ಜನತೆಯಲ್ಲಿ ಭಯ, ಭೀತಿ, ವಾತಾವರಣ ನಿರ್ಮಿಸಿ ನಿಶ್ಯಸ್ತ್ರೀಕರರನ್ನಾಗಿ ಮಾಡಿ ಕಿಡಿಯನ್ನು ಹೊಸಕಿ ಹಾಕಬೇಕೆನ್ನುವದು ಪರಂಗಿಯವರ ಉತ್ಕಟೇಚ್ಛೆ. ಆದರೆ ಅವರಿಗೆ ಗೊತ್ತಿಲ್ಲ! ಕಿಡಿ ನಂದದೇ ಉರಿಯುವ ಪಂಜಾಗಿ ತಮ್ಮ ಹುಲ್ಲಿನ

ಬಣವೆಯನ್ನು ಆಹುತಿ ತೆಗೆದುಕೊಳ್ಳುತ್ತದೆನ್ನುವದು, ಕುತಂತ್ರವೇ ಮೈಮೇಲೆ ಇಂಚೆಂಚಾಗಿ ನಮ್ಮನ್ನು ನುಂಗುತ್ತ ಬಂದ ಆಂಗ್ಲರು ಶಾಶ್ವತವಾಗಿ ಇಲ್ಲಿ ತಳ ಊರಬೇಕೆನ್ನುವ ಉದ್ದೇಶದಿಂದ ಹೊಸ ಹೊಸ ಕಾನೂನಿನ ಸಂಕೋಲೆಯಿಂದ ನಮ್ಮನ್ನು ಬಿಗಿಯ ತೊಡಗಿದರು. ಬಿಗಿತವನ್ನು ಸಡಿಲಿಸಿಕೊಳ್ಳಲು ಪ್ರಯತ್ನಿಸಿದ ನಮಗೆ ಆಸೆಯೊಡ್ಡಿ ದರು, ಹೆದರಿಸಿದರು, ಲಾಠಿಯಿಂದ ಹೊಡೆದರು, ಬೂಟಿನಿಂದ ಒದ್ದರು, ಗುಂಡಿಕ್ಕಿ ಕೊಂದರು, ಅಟ್ಟಹಾಸಗೈದರು.

ಇಂಥ ಹೀನ ಕೃತ್ಯ ಬೇಡ ಬಂಟರಿಗೆ ಅಪಥ್ಯವೆನಿಸಿತು. ಹತ್ಯಾರ ಕೊಡಲಿಕ್ಕೆ ಹೆಂಗಸಾಗಿ ಬಳಿ ಇಟ್ಟಿಲ್ಲ ಕೈಯಾಗ, ಜೀವ ಹೋದರೂ ಕೊಡುದಿಲ್ಲ. ಅಲ್ಲದೆ ಮಗ್ಗುಲದಾಗಿನ ಹೆಣತಿ ಕೊಟ್ಟಾಂಗ ಅತಿ ಹೇಡಿ ಆತಲ್ಲಾ ಸತ್ತ/ಹೆಣಕ ಶೃಂಗಾರ ಮಾಡಿದ ಪರಿ ಆದಿತಲ್ಲಾ ಎನ್ನುವುದು ದೇಶ ಪ್ರೇಮಿಗಳ ಎದೆಯನ್ನು ನಡುಗಿಸುವಂತಾಯಿತು. ಎಲ್ಲೆಲ್ಲಿ ಸಾಹಸ ಕಾರ್ಯಗಳು ಜರುಗುತ್ತಿದ್ದವೋ ಅಲ್ಲೆಲ್ಲಾ ನೆರವು ನೀಡುತ್ತಾ ಎಲ್ಲರೊಂದಿಗೆ ಬೆಲ್ಲದಂತಿದ್ದ ಮುಗ್ಧ ಬೇಡರ ಮನೋಭಾವನೆಯನ್ನು ಆತ್ಮಾಭಿಮಾನವನ್ನು ಕೆರಳಿಸಿದಾಗ ಹಠಾತ್ತನೆ ವೈರಿಗಳ ಮೇಲೆ ಬಿದ್ದು ಭರ್ಜಿ ಎಸೆದರು, ಕವಣೆಗಲ್ಲು ತೂರಿದರು, ಕುದುರೆಗಳ ಕಾಲು ಕಡಿದರು, ಹೀಗೆ ಉಭಯ ಬಣಗಳಲ್ಲಿ ಅಪಾರ ಸಾವು ನೋವು ಸಂಭವಿಸಿದರೂ ಬೇಡರ ಪಡೆ ಧೈರ್ಯ ಕಳೆದುಕೊಳ್ಳಲಿಲ್ಲ. ತಮ್ಮ ಜೀವನದಲ್ಲಿ ಸಂಪೂರ್ಣ ಹೊಸತನವನ್ನು ಅಳವಡಿಸಿಕೊಳ್ಳದೇ ಸ್ವಂತಿಕೆಯನ್ನು ಉಳಿಸಿಕೊಳ್ಳಲು ವಿಫಲ ಪ್ರಯತ್ನ ನಡೆಸಿದರು. ಈ ಬುಡಕಟ್ಟು ಸಮುದಾಯವು ಕಾಡಿನ ಸಂಸ್ಕೃತಿಯಿಂದ ನಾಡಿನ ಸಂಸ್ಕೃತಿಯನ್ನು ರೂಢಿಸಿ ಕೊಂಡರು. ಈ ನಾಡಿಗಾಗಿ ಪ್ರಾಣವನ್ನೇ ಮುಡುಪಾಗಿಡಲು ವೈಯಕ್ತಿಕವಾಗಿ ಹೋರಾಟ ಮಾಡಿದ್ದು ಅದ್ಭುತ ಸಾಧನೆಯಾಗಿದೆ.

ಒಂದರ್ಥದಲ್ಲಿ ಗಮನಿಸುವುದಾದರೆ ಸಾಮ್ರಾಜ್ಯ ದಬ್ಬಾಳಿಕೆಯ ಆಳ್ವಿಕೆಗೆ ತುತ್ತಾದ ಭಾರತದ ಬಿಡುಗಡೆಯ ಪ್ರಪ್ರಥಮ ಪ್ರಯತ್ನಗಳು ನಡೆದದ್ದು ಕರ್ನಾಟಕದಲ್ಲಿ ಎಂಬುದು ಕನ್ನಡಿಗರ ಸ್ವಾಭಿಮಾನ, ಸ್ವಾತಂತ್ರ್ಯ ಪ್ರಿಯತೆಗೆ ಸಾಕ್ಷಿಯಾಗಿದೆ. ೧೮೫೭ರಲ್ಲಿ ಹೊತ್ತಿಕೊಂಡ ರಾಷ್ಟ್ರೀಯ ವಿಪ್ಲವದಾವಾಗ್ನಿಯಲ್ಲಿ ಭಾರತೀಯರು ಪ್ರಕಟಿಸಿದ ವೀರ ಸಾಹಸಗಳಿಗೂ ಪ್ರಾಣಾಂತಿಕ ಪ್ರತಿಭಟನೆಗಳಿಗೂ ತ್ಯಾಗ ಬಲಿದಾನಗಳಿಗೂ ಅಸಂಖ್ಯಾತ ನಿದರ್ಶನಗಳಿವೆ.

ಇತಿಹಾಸದಲ್ಲಿ ಇಂದಿಗೂ ಚಿರಸ್ಥಾಯಿಯಾಗಿ ಉಳಿದುಕೊಂಡು ಬಂದಿರುವ ಈ ಎಲ್ಲ ಹೋರಾಟ ಅಧಿಕಾರಕ್ಕಾಗಿ ಅಲ್ಲ; ಅವರ ಮುಂದಿದ್ದು ತಮ್ಮ ರಕ್ಷಣೆ ಜೊತೆಗೆ ಬದುಕು ಎಂಬ ಕೂಗೂ ಕೂಡ ಕೇಳಿ ಬರುತ್ತದೆ. ಈ ಹೋರಾಟ ಕೇವಲ ಹಲಗಲಿ ಬಂಟನೂರಕ್ಕೆ ಸೀಮಿತವಾಗಿ ಅಲ್ಲದೇ ಬಾಗಲಕೋಟೆ ಜಿಲ್ಲೆಯಾದ್ಯಂತ ಪಸರಿಸಿದ್ದಿತೆಂದು ಮನವರಿಕೆ ಯಾಗುತ್ತದೆ ಅನೇಕಾನೇಕ ಸ್ತ್ರೀಪುರುಷರಾಧಿಯಾಗಿ ಹೋರಾಡಿದ್ದು ಇತಿಹಾಸ ಪ್ರಸಿದ್ಧಿ ಯಾಗಿದೆ. "ಸಿಂಧೂರ ಲಕ್ಷ್ಮಣ" ಕೂಡ ಹಲವು ಕಾಲ ಏಕಾಂಗಿಯಾಗಿ ಹೋರಾಡಿದನು. ಸಿಂಹದಂತೆ ಸಂಚರಿಸುತ್ತಿದ್ದ ಇವನನ್ನು ಬ್ರಿಟೀಷರು ಮೋಸದಿಂದ ಸೆರೆ ಹಿಡಿದ ಘಟನೆ ಇತಿಹಾಸದಿಂದ ಇನ್ನೂ ಮಾಸಿಲ್ಲ. ಹೀಗೆ ವೈಯಕ್ತಿಕವಾಗಿ ಹೋರಾಟ ಮಾಡಿದ ಇವರ ಧೈರ್ಯ, ಸಾಹಸ, ಶೂರತನ ಮರೆಯುವಂತಿಲ್ಲ.

ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಬೇಡರು ಸಾಮ್ರಾಜ್ಯ ಶಾಹಿ ವಿರುದ್ಧ ಸಿಡಿದೆದ್ದು ನಡೆಸಿದ ಹೋರಾಟದಲ್ಲಿ ಸ್ವಾಭಿಮಾನವಿದೆ, ದೇಶಾಭಿಮಾನವಿದೆ, ಇಂತಹ ಹೋರಾಟದ ಮೂಲಕ ಇಡೀ ನಾಡಿಗೆ ಬಂಡಾಯದ ರೂಪು ನೀಡಿದ ವಾಲ್ಮೀಕಿ ಸಮುದಾಯದ ವೀರರ ನೆನಪನ್ನು ಚಿರಾಯುಯಾಗಿಸುವ ಪ್ರಯತ್ನಗಳು ಅವರ ವೈಯಕ್ತಿಕ ರಾಜಕೀಯ ಪ್ರವೇಶಕ್ಕೆ ಆಸ್ತಿಭಾರವಾಗಿರುವುದೆಂದು ಭಾವಿಸುತ್ತೇನೆ.

**ಸ್ವಾತಂತ್ರ್ಯ ನಂತರದ ರಾಜಕೀಯ ಸ್ಥಿತಿಗತಿಗಳು**

ಇಡೀ ಭಾರತ ದೇಶವೇ ಇಂದು ಸಾಮಾಜಿಕ, ಆರ್ಥಿಕ, ರಾಜಕೀಯ ಪರಿವರ್ತನೆಯತ್ತ ಮುಖ ಮಾಡಿರುವ ಕಾರಣ ಇದರ ಪರಿಣಾಮಗಳು ಎಲ್ಲ ಜಾತಿ-ಸಮುದಾಯಗಳ ಮೇಲೂ ಕಾಣಿಸಿಕೊಂಡಿವೆ. ಕಳೆದ ಶತಮಾನದ ಮಹತ್ತರ ಕಾಲ ಖಂಡದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ

ಈಗ ಭಿನ್ನವಾಗಿ ಕಾಣಿಸಿಕೊಂಡಿತು. ಅಂದಿನ ದೇಶೀಯ ಹೋರಾಟಗಾರರು ಇಂದಿನ ಸಮುದಾಯಕ್ಕೆ ಪರಿಚಿತರಾಗಿ ವಾಸ್ತವಿಕವಾಗಿ ವ್ಯವಹಾರಿಕವಾಗಿ ಕಾಣುತ್ತಿಲ್ಲ. ಇದಕ್ಕೆ ಇತರೆ ಕಾರಣಗಳೇನೇ ಇರಲಿ ಸ್ವಾತಂತ್ರ್ಯ ನಂತರ ವಾಲ್ಮೀಕಿ ಸಮುದಾಯದ ಅಂದಿನ ಸ್ಮೃತಿಗಳೊಂದಿಗೆ ದಾಸ್ಯದಿಂದ ಬಿಡುಗಡೆಗೊಳ್ಳುವ ಹೋರಾಟ, ಅವಿದ್ಯೆ, ಶೋಷಣೆ ಅಸ್ಪೃಶ್ಯತೆಗಳಿಂದ ಹೊರ ಬರುವ ಸಾಧ್ಯತೆಗಳನ್ನು ತೋರಿಸುವುದು ಸೂಕ್ತವೆನಿಸುತ್ತದೆ.

ಗ್ರಾಮಾಂತರ ಪ್ರದೇಶಗಳಲ್ಲಿರುವ ಮೌಲ್ಯಾದರ್ಶಗಳು ಎಂತಹ ಪವಾಡ ಸದೃಶ ಕೆಲಸ ಮಾಡಿದವು ಎಂಬುದನ್ನು ಯೋಚಿಸಿದರೆ ಅಚ್ಚರಿಯಾಗುತ್ತದೆ. ಅಂದು ಯಾವ ಸೌಲಭ್ಯ ಗಳಿರಲಿಲ್ಲ. ಸಂಪರ್ಕ ಸಾಧನಗಳಿರಲಿಲ್ಲ. ನಾಳೆಯ ಭರವಸೆಯ ನೆಚ್ಚುಗಳಿರಲಿಲ್ಲ. ಆದರೂ ಜನತೆ ತಾವಾಗಿಯೇ ಮುಂದೆ ಬಂದು ಹಲವು ರಾಷ್ಟ್ರೀಯ ಜನಪರ ಹೋರಾಟಗಳಲ್ಲಿ ಸೇರಿಕೊಂಡರು, ಇಂತಹ ಗ್ರಾಮೀಣ ಪರಿಸರ ಜನರಲ್ಲಿ ವಾಲ್ಮೀಕಿ ಜನ ಸಮುದಾಯವು ಒಂದು. ಹಳ್ಳಿಯ ಕೃಷಿಕ ಕುಟುಂಬದಲ್ಲಿ ತುಸು ಓದು ಸಂಪಾದಿಸಿಕೊಂಡು ಸಾಮಾಜಿಕ ಕೆಲಸಗಳನ್ನು ಸಾಧಿಸಿ ಗ್ರಾಮೀಣ ಚರಿತ್ರೆಯಲ್ಲಿ ಗಾಂಧೀಜಿಯವರ ಮೌಲ್ಯಾದರ್ಶಗಳನ್ನು ಕರಗತ ಮಾಡಿಕೊಂಡು ಕಾಂಗ್ರೆಸ್ ರೂವಾರಿಗಳಾಗಿ ವಾಸ್ತವದಲ್ಲೂ ಉಸಿರಾಗಿಸಿಕೊಂಡವರು, ಇನ್ನೂ ಕೆಲವರು ತಮಗೆ ಇಚ್ಛೆ ಪಟ್ಟ ಪಕ್ಷಗಳಲ್ಲಿ ಇದ್ದುಕೊಂಡವರು ಕಾಣಸಿಗುತ್ತಾರೆ.

ಸ್ವಾತಂತ್ರ್ಯ ಹೋರಾಟ ಕಾಲಕ್ಕೆ ನಡೆದ ಪ್ರಮುಖ ಚಳುವಳಿಯಲ್ಲಿ ನೇರವಾಗಿ ಧುಮುಕಿ ಅಸಹಕಾರ, ಸ್ವದೇಶಿ ಖಾದಿ, ಗಾಂಧೀ ಎಂದು ಉತ್ಸಾಹ ಕ್ರೀಯಾಶೀಲತೆಗಳಿಂದ ಓಡಾಡುತ್ತ ಬೆಳೆದುದು ಈ ಬೇಡ ಸಮುದಾಯದವರು ಎಂಬುದು ಕೆಲವೊಂದು ಉದಾಹರಣೆಗಳಿಂದ ತಿಳಿದು ಬರುತ್ತದೆ. ಒಂದನ್ನು ಅರ್ಥೈಸುವುದಾದರೆ ಬಿಸನಾಳ ಗ್ರಾಮದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಈ ಜನ ಸಮುದಾಯವು ಉಪ್ಪನ್ನು ತಯಾರಿಸಿ ಬ್ರಿಟೀಷ್‌ರ ವಿರುದ್ಧ ಸಮರ ಸಾರಿದ್ದು ಅದ್ಭುತವೆನಿಸುತ್ತದೆ. ಹೀಗೆ ವಿವಿದೆಡೆ ಇದೇ ರೀತಿ ಚಳುವಳಿ ನಡೆದುದರ ಬಗೆಗೆ ಉಲ್ಲೇಖಗಳಿವೆ.

೧೯೪೭ರ ನಂತರದಲ್ಲಿ ಇಡೀ ದೇಶದ ತುಂಬೆಲ್ಲಾ ಸರ್ವರೂ ಸಮಾನತೆ ಎಂಬ ಅಂಶದ ಮೇಲೆ ಹೊಸ ಬೆಳವಣಿಗೆ ಕಾರಣಬಂದಿತು. ದೀನ ದಲಿತರ ಉದ್ಧಾರಕ್ಕೋಸ್ಕರ ಪ್ರತ್ಯೇಕ ಸವಲತ್ತುಗಳು ದೊರೆಯಲಾರಂಭಿಸಿದವು. ಸರಕಾರ ನೇಮಿಸಿದ ಹಿಂದುಳಿದ ವರ್ಗಗಳ ಪರವಾಗಿ ಬಂದ ನೇತಾರ ಎಲ್.ಜಿ. ಹಾವನೂರ ವರದಿಯು ಸಾಮಾಜಿಕ ಸಂಘಟನೆ ಹಾಗೂ ಸಮಾನತೆಯನ್ನು ಪ್ರತ್ಯೇಕವಾಗಿ ರೂಪಿಸಿದ್ದು ಈ ಸಮುದಾಯಕ್ಕೊಂದು ವರವಾಗಿ ಪರಿಣಮಿಸಿದೆ. ಎಲ್ಲ ಜಾತಿ ಸಮುದಾಯಗಳೊಡನೆ ಶೇಕಡಾ ೩ರಷ್ಟು ಸ್ಥಾನ ಕಲ್ಪಿಸಿಕೊಟ್ಟುದ್ದ ರಿಂದ ವರ್ತಮಾನ ರಾಜಕೀಯದಲ್ಲಿ ತಮ್ಮನ್ನು ಗುರ್ತಿಸಿಕೊಂಡು ವಿವಿಧ ಹುದ್ದೆ ಅಲಂಕರಿಸಿ ಈ ಸಮುದಾಯದ ಪ್ರಮುಖರಾಗಿ ಪ್ರತಿನಿಧಿಸಿದ್ದಾರೆ. ಅನೇಕ ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿ ಬೆಳೆಸುತ್ತಿರುವ ಸಹೋದರ ಜಿಲ್ಲೆಯ ಗೋಕಾಕದ ಜಾರಕಿಹೊಳಿ ಕುಟುಂಬ ದವರು. ಚಲನ ಚಿತ್ರ ಶಶಿಕುಮಾರ ಕೂಡಾ ಈ ಸಮುದಾಯದ ಧುರೀಣರೆ ಆಗಿದ್ದಾರೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಸಧ್ಯಕ್ಕೆ ಕರ್ನಾಟಕದಿಂದ ಇಬ್ಬರು ಲೋಕಸಭಾ ಸದಸ್ಯರು, ಹದಿನಾರು ಜನ ವಿಧಾನ ಸಭಾ ಸದಸ್ಯರು, ನಾಲ್ಕು ಜನ ವಿಧಾನ ಪರಿಷತ್ ಸದಸ್ಯರು ಈ ವಾಲ್ಮೀಕಿ ಸಮುದಾಯವನ್ನು ಪ್ರತಿನಿಧಿಸುತ್ತಿದ್ದಾರೆಂದು ರಾಜಕೀಯ ಚರಿತ್ರೆಯಿಂದ ತಿಳಿದು ಬರುತ್ತದೆ.

ಜಾಗತೀಕರಣದ ಹಿನ್ನೆಲೆಯಲ್ಲಿ ನೋಡಿದಾಗ ಇವರ ವ್ಯಕ್ತಿತ್ವ ಬೆಳವಣಿಗೆ ತೀರಾ ಕಡಿಮೆ. ಪ್ರಸ್ತುತ ಬಾಗಲಕೋಟೆ ಜಿಲ್ಲೆಯಲ್ಲಿ ಈ ಸಮುದಾಯದವರು ಕೆಲವೇ ಕೆಲವು ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಬಾದಾಮಿ, ಬೀಳಗಿ, ಬಾಗಲಕೋಟೆ ಹಾಗೂ ಮುಧೋಳ ತಾಲೂಕುಗಳಲ್ಲಿ ಮಾತ್ರ. ಒಂದು ಅಂಕಿ ಅಂಶದ ಪ್ರಕಾರ ಸುಮಾರು ೫೦,೦೦೦ (ಐವತ್ತು ಸಾವಿರ ಮಾತ್ರ) ಆಗಿದೆ. ಇತರೆ ನಗರ ಪ್ರದೇಶದಲ್ಲಿ ನೌಕರಿಗಾಗಿ ವಲಸೆ ಬಂದವರಾಗಿದ್ದಾರೆ.

೧೯೮೫ರಲ್ಲಿ ಚಲಾವಣೆಗೆ ಬಂದ ಗ್ರಾಮೀಣ ಅಭಿವೃದ್ಧಿ, ಗ್ರಾಮ ರಾಜ್ಯ ಎಂಬ ಘೋಷಣೆಯ ಪ್ರಕಾರ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿಗೂ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಸದಸ್ಯರಾಗಿ, ನಾಮನಿರ್ದೇಶಿತ ಸದಸ್ಯರಾಗಿದ್ದರೆಂದು ಕ್ಷೇತ್ರ ಕಾರ್ಯದಿಂದ ತಿಳಿದು ಬರುತ್ತದೆ. ಇವರಿಗೆ ಸಿಗುವ ಈ ಸ್ಥಾನಮಾನಗಳಿಗೆ ವಾಸ್ತವಿಕತೆಯಲ್ಲಿ ಆಸ್ತಿಭಾರ ಸಿಕ್ಕಾಂತಾಗಿದೆ ಎಂದು ಹೇಳಬಹುದು. ಇತ್ತಿಚೇಗೆ ವಾಲ್ಮೀಕಿ ಧರ್ಮಪೀಠ ರಚಿಸಿ ಕೂಡಾ ಸಾಮಾಜಿಕ ಸ್ಥಾನ ಮಾನಗಳಿಗೆ ಹೋರಾಟ ನಡೆಸಿದ್ದು ಇದೆ. Man is Social animal ಎಂಬರ್ಥದಲ್ಲಿ "ಮನುಷ್ಯ ಸಂಘ ಜೀವಿ" ಈ ಸಮೂಹ ಸಂಘಟನೆ ಕುರಿತು ಅದರ ಮುಖಾಂತರ ಬೇಡಿಕೆಗಾಗಿ ಹೋರಾಟ ನಡೆಸಿದ್ದಾರೆ.

**ಪರಾಮರ್ಶನ ಗ್ರಂಥಗಳು**

೧. ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳು, ಸೂರ್ಯನಾಥ ಕಾಮತ
೨. ಹಳೆಯ ಲಾವಣಿಗಳು, ಡಾ. ವೀರೇಶ ಬಡಿಗೇರ
೩. ವ್ಯಾದ ಚರಿತೆ, ಡಾ. ಮಂಜುನಾಥ ಬೇವಿನಕಟ್ಟಿ
೪. ಪ್ಲೀಟರು ಸಂಗ್ರಹಿಸಿದ ಲಾವಣಿಗಳು, ಕ್ಯಾತನಹಳ್ಳಿ ರಾಮಣ್ಣ
೫. ಬಾಗಲಕೋಟೆ ಜಿಲ್ಲೆಯ ದೇಸಗತಿಗಳು (ಅಪ್ರಕಟಿತ ಪ್ರಬಂಧ), ಡಾ. ಸಂಗಮೇಶ ಕಲ್ಯಾಣಿ
೬. ಸವನೂರ ನವಾಬರು, ಡಾ. ಗೋವಿಂದ ಮೂರ್ತಿದೇಸಾಯಿ
೭. ಧಾರವಾಡ ಜಿಲ್ಲಾ ಸ್ವಾತಂತ್ರ್ಯ ಸಂಗ್ರಾಮ, ಡಾ. ಗೋವಿಂದ ಮೂರ್ತಿ ದೇಸಾಯಿ

**ಸಂದರ್ಶನಗಳು**

ಶ್ರೀಶೈಲ ಗೋಲಶೆಟ್ಟಿ ಸಾಹಿತಿಗಳು ಹಲಗಲಿ
ಶ್ರೀ ಕಾಗಲಗೊಂಬ ತಲಾರಿಗಳು ತೆಗ್ಗಿ
ಶ್ರೀ ತೆಗ್ಗಿನಾಯಕರು ತೆಗ್ಗಿ ಸಾ. ಬೀಳಗಿ
ಶ್ರೀ ಚಂದ್ರಶೇಖರ ದೇಸಾಯಿ ಸೊನ್ನ

* * *

## ೧೧. ಜನಪದ ಸಾಹಿತ್ಯ ಮತ್ತು ಕಲೆಗಳು

ಜಾನಪದ ಎಂದರೆ ಜಾಣಪದ. ಇದೊಂದು ಸಮುದಾಯದ ಸಾಂಸ್ಕೃತಿಕ ತುಡಿತದ ಸೃಷ್ಟಿ. ಅಡಿಗೆಗೆ ಉತ್ತು ಬಿತ್ತಿ ಬೆಳೆದ ಕಾಳು ಹೇಗೆ ಸಾಮಗ್ರಿಯಾಗುವುದೊ ಹಾಗೆಯೇ ಬದುಕಿನಲ್ಲಿ ಕಂಡು ಉಂಡು ಉಸುರುವ ಅನುಭವ ಸಾಹಿತ್ಯಸಾಮಗ್ರಿಯಾಗುತ್ತದೆ. Literature is the mirror of  life ಎಂಬ Alore crombeನ ಮಾತನ್ನು ಒಪ್ಪದಿದ್ದರೂ ಸಾಹಿತ್ಯ ಜೀವನದ ಗತಿಬಿಂಬ ಎಂಬ ಮಾತನ್ನು ಒಪ್ಪಬಹುದಾಗಿದೆ.

(Literature is equal to facts minus something plus imagination ಎಂಬ ಸೂತ್ರ ಸಾಹಿತ್ಯದ ಸ್ವರೂಪವನ್ನು ವಿವರಿಸುತ್ತದೆ).

ಬದುಕು ಅದರೊಳಗಿನ ಅನಗತ್ಯ ವಿವರಗಳನ್ನು ಹೊರತುಪಡಿಸಿ ಕವಿಯ ಕಲ್ಪನೆ ಯೊಂದಿಗೆ ಸ್ವೀಕಾರಾರ್ಹ ಸಾಹಿತ್ಯವಾಗಿ ಹೊರಹೊಮ್ಮುತ್ತದೆ ಎಂಬುದನ್ನು ಅಲ್ಲಗಳೆಯ ಲಾಗದು. ಜನರ ಅನುಭವವೆಲ್ಲ ಸಾಹಿತ್ಯದ ಆಕರ ಸಾಮಗ್ರಿ ಎಂಬುದನ್ನು ಜನವಾಣಿ ಬೇರು ಕವಿವಾಣಿ ಹೂವು ಎಂದು ಬಣ್ಣಿಸಲಾಗಿದೆ. ಬೇರಿನ ತ್ಯಾಗದಲ್ಲೇ ಹೂವಿನ ಕೀರ್ತಿಯಿದೆ. ಆದ್ದರಿಂದ ಜಾನಪದವೇ ಎಲ್ಲ ಸಾಹಿತ್ಯದ ತಾಯಿಬೇರು ಎಂಬ ಸತ್ಯವನ್ನು ಒಪ್ಪಿಕೊಳ್ಳಲೇ ಬೇಕು. ಜನಪದ ಸಾಹಿತ್ಯ ಒಂದು ಸರ್ವಾಂಗ ಸುಂದರ ಸಶಕ್ತವಾದ ಸಾಹಿತ್ಯ ಇದು ಏನೆಲ್ಲವನ್ನೂ ಒಳಗೊಂಡಿರುತ್ತದೆ.

Folklore includes every thing from culture to agriculture ಎಂಬ ಉಕ್ತಿ ಇದಕ್ಕೆ ಸಾಕ್ಷಿ. ಶಿಷ್ಟ ಸಾಹಿತ್ಯಕ್ಕೆ ಕೃತಿಕಾರನ ಪಾಂಡಿತ್ಯ ಹಾಗೂ ಪರಿಶ್ರಮ ಕಾರಣವಾಗಿ ಸಮಾಜದ ಕೆಲಮಂದಿಗೆ ಮಾತ್ರ ಅದು ಆನಂದ ನೀಡಬಹುದು. ಆದರೆ ಜಾನಪದ ಜನಕ್ಕೆಲ್ಲ ಅಂದರೆ ಇಡೀ ಸಮುದಾಯಕ್ಕೆಲ್ಲ ರಂಜನೆ ಹಾಗೂ ಶಿಕ್ಷಣವನ್ನೊದಗಿಸುತ್ತದೆ.

ಮಾರ್ಗ ಮನುಜ ಸಂತಾನ
ದೇಶಿ ದೇವ ಸಂತಾನ

ಇದು ನನ್ನ ಅನಿಸಿಕೆ ಸಮಷ್ಠಿ ಚಿಂತನ ಹಾಗೂ ಸಮಷ್ಟಿ ಕಲ್ಯಾಣದಲ್ಲೇ ದೈವತ್ವವಿರುತ್ತದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಹಾಗೆಯೇ ಜನಪದ ಸಾಹಿತ್ಯದ ಪಾವಿತ್ರ್ಯ ಮತ್ತು ಸಾರ್ವತ್ರಿಕತೆಯನ್ನು ಅಲ್ಲಗಳೆಯಲಾಗದು. ತ್ರಿಪದಿ ಜನಪದ ಸಾಹಿತ್ಯದ ಅತ್ಯಂತ ಜನಪ್ರಿಯ ಪ್ರಕಾರ. ಬೇಂದ್ರೆ ಅವರು ಇದನ್ನು ಸಾಹಿತ್ಯದ ಗಾಯತ್ರಿ ಎಂದು ಕರೆಯುವ ಮೂಲಕ ಜನಪದವೆಂದರೆ ಮೂಗು ಮುರಿಯುವವರ ಬಾಯಿಗೆ ಬರೆಕೊಟ್ಟಿದ್ದಾರೆ. ಛಂದಸ್ಸು ಹಾಗೂ ಪ್ರಾಸ ಜನಪದ ಸಾಹಿತ್ಯದ ಜನಪ್ರಿಯತೆಗೆ ಕಾರಣ. ಸರ್ವಜ್ಞ ಪ್ರಾಸವಿಲ್ಲದ ಹಾಡ ತಾಸು ಹಾಡಿದರೇನು? ಎಂದು ಪ್ರಶ್ನೆಮಾಡಿರುವುದು ಈ ಕಾರಣಕ್ಕೆ ಇದ್ದೀತು.

ಗಂಡ ಮಲಗಿದಾಗ ಸೆರಗಿನಿಂದ ಗಾಳಿ ಬೀಸುವ ಗರತಿ ಬೀಸಲೊಲ್ಲದ ಸುಳಿಗಾಳಿಗೆ ಕೇಳುವ ಈ ಪ್ರಶ್ನೆಯಲ್ಲಿ ಏನಿಲ್ಲ.

ಬ್ಯಾಸಗಿ ಬಿಸಲೇನು, ರೂಕಂಬು ದಿನವೇನ
ಪೋಷಕದ ರಾಯ ಮಲಿಗ್ಯಾನ/ಮಂಚಕ
ಬೀಸವಲ್ಯಾಕ ಸುಳಿಗಾಳಿ

ಕಾಡುವ ಅತ್ತಿ ಖೊಂಡಿ ಗಂಡ ಇವರ ನಡುವೆ ಇಕ್ಕಳದಲ್ಲಿ ಸಿಕ್ಕ ಪಾತರಗಿತ್ತಿಯಂತೆ ವಿಲಿವಿಲಿ ಒದ್ದೀತುತು ಹೆಣ್ಣು.

ಹುರಳೀಯ ಬಳ್ಳೀಗಿ ಹೂವ್ಯಾಕ ಕಾಯಾಕ
ಹುಳಗಡಿಕಿ ಅತ್ತಿಗಿ ಸೊಸಿಯಾಕ/ನನ್ನವ್ವ
ಪಣತಿ ಮಾರ್ಯಾಂವಗ ಮಡದ್ಯಾಕ?

ಎಂದು ಚಡಪಡಿಸುತ್ತಾಳೆ. ಕಣ್ಣರಿಯದಿದ್ದೊಡೇಂ ಕರುಳರಿಯದೇ? ಎಂದು ಶಿಷ್ಟ ಕವಿ ಕೇಳುವಂತೆ ತಂಗಿಯ ಇಂಥ ಸಂಕಟದ ಸ್ಥಿತಿಯನ್ನು ಕರುಳಿನಿಂದ ಅನುಭವಿಸುವ ಅಣ್ಣನ ಸ್ಥಿತಿಯನ್ನು:

ಕಪ್ಪರಗುಡ್ಡಕ ಬೆಂಕಿ ತಪ್ಪದಲೆ ಇಟ್ಟಾಂಗ
ಸುಣ್ಣದ ಭಟ್ಟ್ಯಾಗ ತಣ್ಣೀರ/ಹೊಯ್ದಂಗ
ಅಣ್ಣನ ಹೊಟ್ಟೆ ತಳಮಳಿಸಿ

ಶಬ್ದಗಳ ಸಂತೆಯಲ್ಲ ಕಾವ್ಯ. ಅದು ಪ್ರತಿಭೆ ಮತ್ತು ಮತಿಮೆಗಳು ಕೂಡಿ ಕುಣಿಯುವ ಮೇಳ. ಈ ತ್ರಿಪದಿಗಳೇ ಇಂಥ ಮೇಳಕ್ಕೆ ಕಟ್ಟಿದ ಗೆಜ್ಜೆಯಂತಿವೆ. ಕಿರಿದರಲ್ಲಿ ಪಿರಿದರ್ಥ ಹೇಳುವ ಈ ತ್ರಿಪದಿಗಳ ರಾಶಿರಾಶಿ ನಕ್ಷತ್ರಗಳು ಈ ಜಾನಪದ ಬಾನ ತುಂಬೆಲ್ಲ ಮಿನುಗುತ್ತವೆ. ಜನಪದ ಸಾಹಿತ್ಯ ಹಾಗೂ ಕಲೆಗಳ ಹುಟ್ಟಿಗೆ ಕಾರ್ಯ ಕಾರಣ ಸಂಬಂಧ ಇರಲೇಬೇಕೆಂದಿಲ್ಲ. ಅದೊಂದು ಸಹಜ ಸೃಷ್ಟಿ.

ಗಿಡಗಳಿಗೆ ಎಲೆ ಮೂಡಿ ಕಂಡತೆರನಾಗಿ,
ವನಿತೆಗೆ ಮೊಲೆಮೂಡಿ ಬಂದ ತೆರನಾಗಿ
ಕೋಗಿಲೆಗೆ ಇಂಚರ ಸಂದ ತೆರನಾಗಿ
ಕಾವ್ಯಕನ್ನಿಕೆ ನೀ ಬಂದೆ ಸ್ವರವಾಗಿ

‘ನಾನೀ ಅಂಬೋ ಪೂರ್ಣ ನಾಟಕ’ ಎಂಬ ನನ್ನ ನಾಟಕದ ನಾಟ್ಯಚಾರ್ಯ ಜನಪದ ಸಾಹಿತ್ಯ ಹಾಗೂ ಕಲೆಯ ಹುಟ್ಟಿನ ಬಗ್ಗೆ ಹೇಳುವ ಪರಿ ನೋಡಿ.

ನಾಟ್ಯಾಚಾರ್ಯ ಈ ಜಾನಪದ ಭೂಮಿಮ್ಯಾಗ ಹುಲ್ಲು ಹುಟ್ಟುವಾಂಗ ಹುಟ್ಟಿತು. ಹುಲ್ಲು ಹಾಲಾತು, ಕುದ್ದುಕೆನಿ ಗಟ್ಟಿತು. ಹೆಪ್ಪಕಡದಾಗ ಬೆಣ್ಣಿ ಆತು, ಕಾದು ಕಾದು ತುಪ್ಪಾತು, ಅದರ ಘಮ ಘಮ ಓಣೆಲ್ಲ ಹಬ್ಬಿತು. ಹಬ್ಬ, ಹರಿದಿನ ಜಾತ್ರಿ, ಓಕುಳಿ, ಕಾರ್ತೀಕದಂಥಾ ಸಂದರ್ಭದೊಳಗ ನಟರಾಜನ ಬಳಗಕ್ಕೆ ಎಡಿ ಆಗಿ, ಗಂಗಾಳ ತುಂಬಿ ಹೊರಸೂಸಿತು.. ಇನ್ನೂ ತಿಳಿಯೂವಂಗ ಹೇಳಬೇಕೆಂದರೆ ಚಿಗುರು ಹಾದಂಗ, ಕಟ್ಟಿಗಿ ಕೊಳಲಾದಂಗ, ಗಾಳಿಸ್ವರಾ ಆದಂಗ ಹುಟ್ಟಿತು ಈ ಜಾನಪದ.

ಜನಪದರ ಬದುಕು ಎಷ್ಟು ಸಹಜ ಹಾಗೂ ಸುಂದರವೊ.. ಅಷ್ಟೇ ಸಹಜ ಹಾಗೂ ಸುಂದರ ಜನಪದ ಸಾಹಿತ್ಯ.

ಏಳುತಲೆ ಶಿವನೆನ್ನುವರು ಅವರ ಬದುಕು ಸುಂದರ
ಮಲಗುವಾಗ ಶಿವನೆನನ್ನುವರು ಅವರ ಕನಸು ಸುಂದರ
ನೆನಪು ನಿಮಗ್ನತೆ ಜನಪದ
ಬದುಕಿನಾಧಾರ ಕಾಣು ಸದ್ಗುರು ಬಸವಲಿಂಗ

ಜನಪದ ಗಂಧರ್ವರಿಗೆ ನಾನು ಸಮರ್ಪಿಸಿದ ವಚನ ಇದು. ಕೊಟ್ಟಾಂವಗ, ಕೊಟ್ಟೆ ಅನಬೇಕು. ಇಲ್ಲಾದವರಿಗೆ ಇಗಾ ಒಂದು ರೊಟ್ಟಿ ಅನಬೇಕು ಇದು ಜನಪದರ ನೀತಿ. ಆದ್ದರಿಂದ ಅವರ ಬೆಳಗು ಆರಂಭವಾಗುವುದು ಕೊಟ್ಟ ಭೂಮಿ ತಾಯಿಯ ಸ್ಮರಣೆಯೊಂದಿಗೆ

ಬೆಳಗಾಗಿ ನಾನೆದ್ದು ಯಾರ್ಯಾರ ನೆನಿಯಲಿ
ಎಳ್ಳು ಜೀರಿಗಿ ಬೆಳಿಯೋಳ ಭೂಮಿಯ
ಎದ್ದೊಂದು ಗಳಿಗಿ ನೆನದೇನ

ಅನ್ನ ಬದುಕಿನಾಧಾರ ಅನ್ನ ಕೊಟ್ಟ ಭೂಮಿತಾಯಿಯನ್ನು ನೆನೆಯದಿದ್ದರೆ ಅನ್ನಗೇಡಿ ಯಾದೇವು ಎಂಬ ನೀತಿ ಇಲ್ಲಿದೆ.

ಹಂತಿಯ ಕಟ್ಟುತಲೆ ಹೆಂತಾವನ ನೆನಿಬೇಕೆ
ಕಾಂತ್ಯಾಳ್ ಪಿತನಾದ ಬಸವಣ್ಣ ನೆನದರ
ತಂಪತ್ತಿನ್ಹಂತಿ ನುರದಾವೊ

ಬಸವಣ್ಣ ಜನಪದ ಜೀವನದ ಆಧಾರಸ್ತಂಭ. ಕಾರ್ಯ, ದಾಸೋಹದ ಮಂತ್ರ ಕಲಿಸಿದಾತ ಅವನನ್ನು ಗಳೆ ಹಂತ ಹೊಡೆಯುವ ಗಂಡಸರಷ್ಟೆ ಅಲ್ಲ ಬೀಸುವ ಹೆಂಗಸರೂ ನೆನೆಯುತ್ತಾರೆ ಹೀಗೆ

ಮುಕ್ಕಿಗಿ ಮೊದಲ ಬಸವನಮಂದರ ಭಾಗ್ಯ ಬಾಗಲದಲ್ಲೇ
ಮುಗಿಸುವ ಮೊದಲ ಬಸವೆನ್ನಿರಿ ಶಿವನ ಸದರಿನಲ್ಲೆ.

ನೀತಿಯಿಂದ ಬಾಳಗೊಟ್ಟ, ಬದುಕು ಕೊಟ್ಟ ಬಸವನನ್ನಷ್ಟೇ ಅಲ್ಲ ಬೀಸಲ ಕಲ್ಲುಕೊಟ್ಟ ತಾಯಿಯನ್ನು ನೆನೆಯಲೂ ಮರೆಯುವುದಿಲ್ಲ. ಜನಪದ ಗರತಿಯರು.

ಕಲ್ಲ ಕೊಟ್ಟವ್ವಗ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿಮ್ಯಾಗ ಮಗ ಬರಲಿ ಹಡದವ್ವ
ಸೊಸಿಮುದ್ದ ಗಂಡ ಹಡಿಯಲಿ

ಹೀಗೆ ಪ್ರತಿಭೆಯ ಜೊತೆಗೆ ಉಪಕೃತಿ ಸ್ಮರಣೆಯನ್ನು ಬೆರೆಸಿ ಬೆರೆತು ಬದುಕಿದ ಜನಪದರು ಸಾಹಿತ್ಯಕ್ಕೆ ಮೂರು ಸಾಲಿನಲ್ಲಿ ಮಹಾಭಾರತದ ಕತೆಯನ್ನು ಹೇಳುವ ಸಾಮರ್ಥ್ಯವಿದೆ.

ಕಲ್ಲ ಕಡುಬವ ಮಾಡಿ, ಮುಳ್ಳಶ್ಯಾವಿಗಿ ಮಾಡಿ
ಬನ್ನಿ ಎಲಿಯಾಗ ಎಡಿಮಾಡಿ/ಧರುಮರು
ಉಣ್ಣದಲ್ಹೋಗ್ಯಾರ ವನವಾಸ.

ಈ ತ್ರಿಪದಿಯ ಸಾರ್ವತ್ರಿಕತೆ ಅಗಾಧವಾದುದು. 'ಧರ್ಮವಂತರಿಗೆ ವನವಾಸ ತಪ್ಪಿದ್ದಲ್ಲ, ಅಂತೂ ಇಂತೂ ಕುಂತೀಮಕ್ಕಳಿಗೆ ರಾಜ್ಯ ಸಿಗಲಿಲ್ಲ' ಎಂಬ ಅನುಭವವಾಣಿಗಳ ಕಾವ್ಯರೂಪ ವಾಗಿದೆ ಈ ತ್ರಿಪದಿ. ಕಲ್ಲಕಡಬು, ಮುಳ್ಳುಶ್ಯಾವಿಗೆ, ಬನ್ನಿ ಎಲೆಯಲ್ಲಿ ಎಡೆಮಾಡುವುದು, ಇವೆಲ್ಲ ಅದ್ಭುತ ಪ್ರತಿಮೆಗಳು ಯಾವ ಶಿಷ್ಟಕವಿಗೂ ನಿಲುಕದ ಪ್ರತಿಭೆ ಮೆರೆದ ಜನಪದರ ಹಾಡಿನ ಕಣಜ ಎಷ್ಟು ದೊಡ್ಡದೆಂದರೆ

ಹಾಡ ಹಾಡಂದರ ಹಾಡೇನ ಪಾವನ
ಹಾಡಬಿತ್ಯಾಡ ಬೆಳದೇವ/ಹಗೆ ಹಾಕಿ
ನೀಡಂದ ಗಳಿಗಿ ನೀಡೇವ

ಬಾಹುಳ್ಯ ಅಷ್ಟೇ ಅಲ್ಲ ಭಕ್ತಿಯಿದೆ, ಅಲ್ಲ ಭಕ್ತಿಯಿಂದ ಭವ್ಯತೆಯಿದೆ, ಜೀವನಾನು ಭವವಿದೆ. ವಿನೋದವಿದೆ, ಕೌತುಕವೂ ಇದೆ ಈ ಜನಪದ ಸಾಹಿತ್ಯದಲ್ಲಿ.

ಹಂಪಿಯ ವಿರುಪಾಕ್ಷ ಹೆಂತಲ್ಲಿ ನೆಲೆಸಿದಿ
ಹಿಂತಿಂತಾ ಕಲ್ಲ ಎಡವುತ ನಾ ಬಂದೆ
ಸಂಪ ಕೊಡು ನನ್ನ ತವರಿಗೆ

ಎಂಬ ಗರತಿಯ ಪ್ರಾರ್ಥನೆಯಲ್ಲಿ ಬರಿ ಸ್ವಾರ್ಥವಿಲ್ಲ. ಹೆಂತೆಂತ ಕಲ್ಲ ಎಡವಿ ಬಂದು ಹಂಪೆಯಲ್ಲಿ ನೆಲೆಸಿದೆ ವಿರೂಪಾಕ್ಷ ಎಂಬ ಕಳಕಳಿಯೂ ಇದೆ.

ಹೆಣ್ಣು ಹಡೆದ ಅಕ್ಕನ ಮನೆಗೆ ಹೊಸ ಅಂಗಿ ತೊಟ್ಟುಕೊಂಡು ಬಂದ ತಮ್ಮನ ಮೇಲೆ ಮಗಳು ಉಚ್ಚೆ ಹೊಯ್ದಗ ಅಳತೊಡಗಿದ ಅವನನ್ನು ನಗಿಸಲು ಅಕ್ಕ ಹಾಡುವ ಪರಿನೋಡಿ.

ಉಚಬುರಕಿ ನನ ಮಗಳು ಉಚ್ಚೆಯ ಹೊಯ್ದಳ
ಬಚ್ಚಲ ತುಂಬಿ ಕೆರಿತುಂಬಿ/ನನ ತಮ್ಮ
ಜಕಣಿ ಭಾವೆಂತ ಜಿಗದಾನ
ತೆಂಗಿನ ನೀರಂತ ಕುಡದಾನ….

ಹಾರುವರ ಆಹಾರದ ಮೇಲಿನ ಪ್ರೀತಿಯನ್ನು ಗೇಲಿಮಾಡುತ್ತ ಹಾಡುವ ರೀತಿ ಎಂಥವರಿಗೂ ನಗೆ ತರಿಸುತ್ತದೆ.

ಹಾರೂರ ಮದಿವ್ಯಾಗ ಮಾರುದ್ದ ಶ್ಯಾಮಿಗಿ
ದೊಣ್ಣೀಮ್ಯಾಲ ದೊಣ್ಣಿ ತಿಳಿದುಪ್ಪ ತಿಂದುರ
ಹಾರುವ ನಿನ ಜುಟ್ಟ ನಿಗರ್ಯಾವ

ಹೀಗೆ ಜನಪದ ಸಾಹಿತ್ಯ ವಿಪುಲವಾಗಿರುವಷ್ಟೇ… ವೈವಿಧ್ಯಮಯವೂ ಆಗಿದೆ. ಆದ್ದರಿಂದ ಇದು ಜನ ಇರುವವರೆಗೆ ಇರುತ್ತದೆ. Tristram Coffin ಎಂಬ ಪಾಶ್ಚಾತ್ಯವಿದ್ವಾಂಸ Folklore is a lively fossil that refuses to die ಎಂದು ಹೇಳಿದ ಮಾತು ಗಮನೀಯ ವೆನಿಸುತ್ತದೆ. ಬದುಕಿನ ರೀತಿ, ನೀತಿ ಹಾಗೂ ಗತಿ ಬದಲಾದಂತೆ ಅದರ ಸ್ವರೂಪವೂ ಬದಲಾಗುತ್ತ ಹೋಗಿ ತನ್ನತನ ಉಳಿಸಿಕೊಳ್ಳುತ್ತದೆ ಅಂತೆಯೇ ಈ ಜನಪದ ಸಾಹಿತ್ಯಕ್ಕೆ ಸಾವಿಲ್ಲ. ಇದೇ ರೀತಿಯಲ್ಲಿ ತಮ್ಮ ತಾಜಾತನ ಉಳಿಸಿಕೊಂಡು ಬಂದಿವೆ ಜನಪದ ಕಲೆಗಳು.

**ಜನಪದ ಕಲೆಗಳು**

ಜನಪದ ಕಲೆಗಳು ಹುಟ್ಟಿದ್ದು ನಮ್ಮ ಹಳ್ಳಿಗಾಡಿನ ಜನರ ಹೃದಯಗಳಲ್ಲಿ, ಅವು ಬೆಳೆದದ್ದು ಅವರ ಮನೆಯಂಗಳದಲ್ಲಿ, ಉಳಿದದ್ದು ಅವರ ಪ್ರೀತಿಯ ತೆಕ್ಕೆಯಲ್ಲಿ. ಈ ಜನಪದ ಕಲೆಗಳು ಗ್ರಾಮ ಜೀವನದ ಹೈನದ ಕೆನೆಯಿದ್ದಂತೆ. ಕೆಚ್ಚಲಿನಿಂದ ಹಾಲು ಹರಿದು ಬಂದಷ್ಟು ಸಹಜವಾಗಿ ಹುಟ್ಟಿಬಂದಂಥವು ಇವು. ನೋಡುಗರಲ್ಲಿ ಕೇಳುಗರಲ್ಲಿ ಆನಂದ ಉಕ್ಕಿಸಿ ಅವರ ಹೃದಯಗಳನ್ನು ಗೆಲ್ಲುವ ಶಕ್ತಿ ಈ ಜನಪದ ಕಲೆಗಳಿಗಿದೆ. ಈ ಕಲೆಗಳಲ್ಲಿ ಹೆಚ್ಚಿನವು ದೈವೀಶಕ್ತಿಯ ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿ, ಬೆಳೆದು, ಉಳಿದು ಬಂದಿವೆ ಹಾಗೂ ಇವು ಕುಣಿತ ವಾದ್ಯ ಹಾಗೂ ಹಾಡುಗಳ ಸಮ್ಮಿಶ್ರ ಕಲೆಗಳಾಗಿವೆ.

**ಜನಪದ ಕಲೆಗಳು ಮತ್ತು ಸಮಾಜ**

ಜಾನಪದ ಎಂದರೆ ಗ್ರಾಮಸಮುದಾಯದ ಹಾಡು ಎಂದರ್ಥ. ಆದ್ದರಿಂದ ಸಮಾಜಕ್ಕೂ ಜನಪದ ಕಲೆಗಳಿಗೂ ನಿಕಟವಾದ ಸಂಬಂಧ ಇದೆ. ಎಂತಾಯಿತು. ಸಮಾಜದ ಕ್ಷೇಮ, ಸಮುದಾಯ ಶಿಕ್ಷಣ, ಮನರಂಜನೆ ಹಾಗೂ ನೀತಿ ಬೋಧನೆ ಈ ಕಲೆಗಳ ಉದ್ದೇಶ. ಬರ ಹಾಗೂ ಬೇನೆಗಳು ಸಮುದಾಯವನ್ನು ಕಾಡದಂತೆ ಹುಲುಸು (ಹೆಚ್ಚು ಫಸಲು) ಕೊಡುವಂತೆ ಫಲವತ್ತತೆಯ ದೇವತೆಗಳನ್ನು ಆರಾಧಿಸಿದ್ದಾರೆ. ದುಡಿದು ಬೇಸತ್ತ, ದುಡಿದುಡಿದು ಸತ್ತ ಶ್ರೀಸಾಮಾನ್ಯನಿಗೆ ಮನರಂಜನೆ ನೀಡಲು, ನೀತಿಬೋಧನೆ ಮಾಡಲು ತರತರದ ಹಾಡು ಹಾಡಿದ್ದಾರೆ, ಆಟ ಆಡಿದ್ದಾರೆ. ಅಟ್ಟಹತ್ತಿ ಕುಣಿದಿದ್ದಾರೆ. ಹೀಗಾಗಿ ಈ ಕಲೆಗಳೆಲ್ಲ ಸಮಾಜದ ಪ್ರೇರಣೆಯಿಂದ ಹುಟ್ಟಿ ಸಮಾಜದ ಪೋಷಣೆಯಲ್ಲಿಯೇ ಬೆಳೆದು ಬಂದವುಗಳಾಗಿವೆ.

**ಶಿಷ್ಟ ಕಲೆಗಳು ಮತ್ತು ಜನಪದ ಕಲೆಗಳು**

ಶಿಷ್ಟಕಲೆಗಳು ಎಂದರೆ ಸುಶಿಕ್ಷಿತರಿಂದ ಹುಟ್ಟಿ ಬೆಳೆದು ಬಂದ ಕಲೆಗಳು. ಇವುಗಳಲ್ಲಿ ಬಹುತೇಕ ಕಲೆಗಳು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹುಟ್ಟಿಕೊಂಡಂಥವಾಗಿವೆ. ಜನಪದರು ಬದುಕನ್ನೇ ಕಲೆಯನ್ನಾಗಿ ಅರಳಿಸಿದ್ದಾರೆ. (ಆದರೆ ಶಿಷ್ಟರು ವಿಶೇಷ ಶ್ರಮಪಟ್ಟು ಈ ಕಲೆಯ ಹುಟ್ಟಿಗೆ ಕಾರಣರಾಗಿದ್ದಾರೆ. ಜನಪದ ಕಲೆಗಳಲ್ಲಿ ದಟ್ಟವಾದ ಮಣ್ಣಿನ ವಾಸನೆಯಿದೆ. ಶಿಷ್ಟಕಲೆಗಳಲ್ಲಿ ಪಾಂಡಿತ್ಯ ಪ್ರದರ್ಶನವಿದೆ. ಕೃತಿಮತೆಯಿದೆ. ಅಪಾರ ಅನುಭವ, ಅಭಿವ್ಯಕ್ತಿಯ ಸಹಜತೆ, ಬದುಕಿನ ಕಲೆಗಳ ಮುಖ್ಯ ಲಕ್ಷಣಗಳು. ಶಿಷ್ಟಕಲೆಗಳಲ್ಲಿ ಇವುಗಳ ಕೊರತೆಯಿದ್ದು ಇವು ಬೌದ್ಧಿಕ ಕಸರತ್ತನ್ನು ಅಪೇಕ್ಷಿಸುತ್ತವೆ. ಹೀಗಿದ್ದರೂ ಇವುಗಳಲ್ಲಿ ಸಾಮ್ಯ ಇರುವುದು ಒಂದು ವಿಷಯದಲ್ಲಿ. ಈ ಎರಡೂ ಕಲೆಗಳಿಗಿರುವ ಉದ್ದೇಶ ಒಂದೇ ಜೀವನ ಚಿತ್ರಣ, ಮನರಂಜನೆ ನೀತಿಬೋಧನೆ ಇತ್ಯಾದಿ ಉಪಉದ್ದೇಶಗಳು).

**ಪುರಾಣ ಮತ್ತು ಜನಪದ ಕಲೆಗಳು**

ಪುರಾಣಗಳಿಗೂ ಜನಪದ ಕಲೆಗಳಿಗೂ ಅವಿನಾಭಾವ ಸಂಬಂಧ ಇದೆ. ಪುರಾಣ ಎಂದರೆ ಸಾಂಪ್ರದಾಯಿಕ ಅಥವಾ ಕಾಲ್ಪನಿಕ ಕತೆ. ಈ ಕತೆ ದೇವ-ದೇವತೆಗಳದಾಗಿರಬಹುದು, ವೀರ -ಧೀರರದೂ ಆಗಿರಬಹುದು. ನಮ್ಮ ಜನಪದ ಕಥಾಕೋಶ ಮತ್ತು ಕಲಾಕೋಶಗಳಲ್ಲಿ ಇಂಥ ಲಕ್ಷಗಟ್ಟಲೆ ಹಾಡು-ಕತೆ ಮತ್ತು ಆಟಗಳಿವೆ. ಉದಾಹರಣೆಗೆ ವಿಷ್ಣು-ವೀರಭದ್ರರ ಅವತಾರದ ಕತೆ, ಪಾರಿಜಾತ (ಪುಷ್ಪ)ದ ಕತೆ ಇತ್ಯಾದಿ. ಬುದ್ಧ, ಬಸವ, ಗಾಂಧಿ, ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಒನಕೆ ಓಬವ್ವ, ಕೆಂಪೇಗೌಡ, ಮದಕರಿನಾಯಕ, ಟಿಪ್ಪು ಸುಲ್ತಾನ, ಸಂಗೊಳ್ಳಿರಾಯಣ್ಣ ಇವರೆಲ್ಲಾ ಐತಿಹಾಸಿಕ ವ್ಯಕ್ತಿಗಳೆ. ಇವರ ವಿಶಿಷ್ಟ ಶೌರ್ಯ ಸಾಹಸಗಳ ಕತೆಗಳು, ಹಾಡುಗಳು ಬಾಯಿಯಿಂದ ಬಾಯಿಗೆ ಹರಿದುಬಂದಿವೆ. ಇವರೆಲ್ಲ ಈಗ ದಂತಕತೆಯಾಗಿದ್ದಾರೆ, ಪೌರಾಣಿಕ ವ್ಯಕ್ತಿಗಳೆನಿಸಿಬಿಟ್ಟಿದ್ದಾರೆ. ರಾಮಾಯಣ ಮಹಾ ಭಾರತದ ಹಾಡು ಕತೆಗಳಂತೂ ಮನೆಮಾತಾಗಿವೆ. ಇಂಗ್ಲಿಷಿನ ಕವಿ-ಕಲಾವಿದರು ರಾಬಿನ್ ಹುಡ್ ಎಂಬ ಧೀರ-ಕಳ್ಳನನ್ನು ಪುರಾಣಪುರುಷನನ್ನಾಗಿ ಮಾಡಿದ್ದಾರೆ. ಅದರಂತೆ ನಮ್ಮ ಜನಪದ ಕವಿ ಕಲಾವಿದರು ಸಿಂಧೂರ ಲಕ್ಷ್ಮಣ, ಕನ್ನೇಶ್ವರ ರಾಮರಂಥವರನ್ನು ಹುಡುಕಿ ಹೊಗಳಿ ಹಾಡಿದ್ದಾರೆ. ಅವರನ್ನು ಕತೆಯಾಗಿಸಿದ್ದಾರೆ.

**ಕರ್ನಾಟಕದ ಕಲೆಗಳ ವೈಶಿಷ್ಟ್ಯ**

ಜನಪದ ಕಲೆಗಳ ಸಂಖ್ಯೆ ಮತ್ತು ವೈವಿಧ್ಯ ಈ ಎರಡರಲ್ಲೂ ಕರ್ನಾಟಕಕ್ಕೆ ತನ್ನದೇ ಆದ ಸ್ಥಾನವಿದೆ. ಕಲೆಗಳ ಭಂಡಾರವೇ ಇದು ಎನ್ನಿಸಿದೆ. ಜನಪದ ಕಲೆಗಳ ಮಾತು ಬಂದಾಗ ದೇಶದಲ್ಲೇ ಅತಿ ಶ್ರೀಮಂತ ಎನ್ನಿಸಿಕೊಳ್ಳುವ ಮೂರು ರಾಜ್ಯಗಳಲ್ಲಿ ಕರ್ನಾಟಕವೂ ಒಂದು (ಮಧ್ಯಪ್ರದೇಶ ಮತ್ತು ಹರಿಯಾಣ ಉಳಿದೆರಡು ರಾಜ್ಯಗಳು) ಎಂಬುದು ಜಾನಪದ ವಿದ್ವಾಂಸರ ಅಭಿಪ್ರಾಯ.

ಬೀಸುವ ಕುಟ್ಟುವ ಮತ್ತು ಹಂತಿಯ ಹಾಡುಗಳಂಥ ಹಾಡು, ಕರಡಿ-ಕಂಸಾಳೆ, ಕಣಿಯಂಥ ವಾದ್ಯ, ಸೋಮನಕುಣಿತ, ಪಟಕುಣಿತ ಹಾಗೂ ದಟ್ಟಿ ಕುಣಿತದಂಥ ಕುಣಿತ, ದೊಟ್ಟಾಟ ಯಕ್ಷಗಾನ, ಪಾರಿಜಾತಗಳಂಥ ಆಟಗಳು ಕರ್ನಾಟಕದ ಕಲಾ ವೈಶಿಷ್ಟ್ಯಗಳು.

**ಪ್ರಕಾರಗಳು**

ಈ ಜನಪದ ಕಲೆಗಳಲ್ಲಿ ಹಲವು ಬಗೆಗಳಿವೆ. ಆದರೆ ಅಧ್ಯಯನದ ದೃಷ್ಟಿಯಿಂದ ಈ ಕೆಳಗಿನಂತೆ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

೧. ಜನಪದ ಹಾಡುಗಳು (ಜನಪದ ಸಂಗೀತ)

೨. ಜನಪದ ಕುಣಿತಗಳು (ಜನಪದ ನೃತ್ಯ)

೩. ಜನಪದ ಆಟಗಳು (ನಾಟಕ ಕ್ರೀಡೆ ಇತ್ಯಾದಿ)

೪. ಜನಪದ ವಾದ್ಯಗಳು.

ಒಂದು ಮಾತಿನಲ್ಲಿ ಹೇಳುವುದಾದರೆ ಈ ಜನಪದ ಕಲೆಗಳೆಂದರೆ ಸಂಗೀತ, ನೃತ್ಯ ಮತ್ತು ಅಭಿನಯಗಳ ತ್ರಿವೇಣಿ ಸಂಗಮ. ಯಾವ ರಾಜಾಶ್ರಯವೂ ಇಲ್ಲದೆ ಜನಾಶ್ರಯದಲ್ಲೇ ಬೆಳೆದ ಕಲೆಗಳು ಇವು.

ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚು ಹಾಡು ಮತ್ತು ವಾದ್ಯಗಳು, ಇನ್ನೂರಕ್ಕೂ ಹೆಚ್ಚು ಕುಣಿತಗಳು, ಹತ್ತು ಹಲವು ಬಗೆಯ ಆಟಗಳು ಇವೆಯೆಂಬುದು ವಿದ್ವಾಂಸರ ಅಭಿಪ್ರಾಯ. ಇವೆಲ್ಲ ಊರಮಧ್ಯದ ಬಯಲಿನಲ್ಲಿ, ದೇವಾಲಯಗಳ ಪ್ರಾಂಗಣಗಳಲ್ಲಿ, ಜಾತ್ರೆ ಉತ್ಸವ ಗಳಂಥ ಸಂದರ್ಭಗಳಲ್ಲಿ ಹುಟ್ಟಿ, ಬೆಳೆದು, ಅರಳಿದ ಕಲೆಗಳು. ಹಾಡುತ್ತ ಆಡುತ್ತ ಬೆಳೆಸಿ, ಉಳಿಸಿಕೊಂಡು ಬಂದ ಸಂಪತ್ತು ಇದು. ಈ ಕಲೆಗಳಲ್ಲಿ ಬಯಲಾಟ ಮತ್ತು ಕ್ರೀಡೆಗಳಿಗೆ ವಿಶಿಷ್ಟವಾದ ಸ್ಥಾನವಿದೆ.

ಜೀವನವೇ ಒಂದು ಆಟ. ಈ ಆಟದಲ್ಲಿ ಹಿಡಿದವ ಮತ್ತು ಜಾರಿಕೊಂಡವ ಇಬ್ಬರೂ ಜಾಣರೆ. ಯಾಕೆಂದರೆ ಈ ಎರಡೂ ಅಪರೂಪದ ಕಲೆಗಳೆ. ಇದನ್ನು ಕಲಿಸುವಂಥ ಹುತೂತು (ಕಬಡ್ಡಿ), ಸಂಗೆರೆ (ಆಟ್ಯಾ-ಪಾಟ್ಯಾ)ದಂಥ ಆಟಗಳಿಗೆ ಕರ್ನಾಟಕ ತವರಾಗಿದೆ. ಅದರಂತೆ ದೊಡ್ಡಾಟ, ಯಕ್ಷಗಾನ, ಶ್ರೀಕೃಷ್ಣ ಪಾರಿಜಾತ, ಸಂಗ್ಯಾಬಾಳ್ಯದಂಥ ಬಯಲಾಟಗಳಿಗೂ ಇದು ನೆಲೆ-ಸೆಲೆ ಒದಗಿಸಿದೆ.

ಈ ಎಲ್ಲ ಆಟಗಳು ನೋಡುವವರಿಗೆ ಮನರಂಜನೆ ನೀಡುತ್ತವೆ, ಆಡುವವರಿಗೆ ದೇಹಕ್ಕೆ ಅಗತ್ಯವಾದ ವ್ಯಾಯಾಮವನ್ನೊದಗಿಸುತ್ತವೆ. ಸಮರಸವೇ ಜೀವನ ಎಂಬುದನ್ನು ಸಾರುತ್ತವೆ. ಆದ್ದರಿಂದಲೇ ಈ ಆಟಗಳು, ಈ ಜನಪದ ಕಲೆಗಳು ಅನಾದಿಕಾಲದಿಂದಲೂ ಉಳಿದು-ಬೆಳೆದು ಬಂದಿವೆ.

* * *

## ೧೨. ಮಹಿಳಾ ಸಂವೇದನೆಗಳು

ಮನುಷ್ಯ ತಾನು ನೆಲೆಸಿದ ದೇಶವನ್ನು ಅಭಿವ್ಯಕ್ತಿಸುವ ಭಾಷೆಯನ್ನು ತಾಯಿಗೆ ಸಮೀಕರಿಸುತ್ತಾನೆ. ಮಾತೃಭೂಮಿ ಮಾತೃಭಾಷೆ ತಾಯಿನಾಡು ಮುಂತಾದ ಪರಿಭಾಷೆಗಳು ಮಾತೃ ಮೌಲ್ಯಗಳನ್ನು ಗೌರವಿಸುವಂಥವುಗಳಾಗಿವೆ. ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು ಎಂಬ ಕವಿ ವಾಣಿಯಂತೆ ಮಾತೆಯೇ ಈ ಲೋಕದ ಮೊದಲ ಗುರು. ಮಾತೃದೇವೋಭವ ಎಂಬ ಉಕ್ತಿಯು ಶಿಷ್ಟ

ಸಮುದಾಯದ ಮಹಿಳೆಗೆ ಮಾತ್ರವಲ್ಲದೆ, ಜನಪದ ತಾಯಂದಿರಿಗೂ ಅನ್ವಯವಾಗುತ್ತದೆ. ಹೆಣ್ಣಿನ ಜನ್ಮಸಿದ್ಧ ಗುಣವಾದ ಮಾತೃತ್ವದ ಭಾವನೆ ತನ್ನ ಮಕ್ಕಳಿಗಷ್ಟೇ ಅಲ್ಲ ಕುಟುಂಬದ ಎಲ್ಲ ಸದಸ್ಯ ರೊಂದಿಗೂ ಹೊಂದಿಕೆಯಾಗುತ್ತದೆ.

ತಾಯಿ ಮಗುವಿನ ಆಟಪಾಟದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಆಡಿ ಬಾ ನನ ಕಂದ ಅಂಗಾಲತೊಳದೇನು ತೆಂಗಿನ ಕಾಯಿ ಎಳನೀರ ತಕ್ಕೊಂಡು ಬಂಗಾರ ಮೋರಿ ತೊಳಿದೇನು ಅಂದಂತೆ ತಂದೆ ಅನ್ನಲಾಗುತ್ತದೆಯೇ. ಆಡಿ ಬಾ ನನ ಕಂದ ಕೈಕಾಲ ಮುರಿದೇನು ತೆಂಗಿನ ಮರದ ಎಳೆ ಬರಲು ತಕ್ಕೊಂಡು ಮುಖ ಮಾರಿ ನೋಡದೆ ಬಡಿದೇನು ಎನ್ನುತ್ತಾನೆ. ಇದು ಸಾರ್ವತ್ರಿಕ ಮಾತೃ ಮೌಲ್ಯದ ಅನುಮೋದನೆ.

ಬೇಡ ಮಹಿಳೆ ಮಾತೃಮೂಲದ ಕುಟುಂಬ ವ್ಯವಸ್ಥೆಯನ್ನು ಮಾನವ ಸಂಸ್ಕೃತಿಯ ಕೌಟುಂಬಿಕ ವಿಕಾಸದ ಹಂತದಲ್ಲಿ ಎಲ್ಲ ಮಹಿಳೆಯರು ಪಾಲಿಸಿದಂತೆ ಅನುಸರಿಸಿದಂತೆ ಅನಿವಾರ್ಯವಾಗಿ ಅವಲಂಬಿಸಿದರು. ನಂತರ ಧಾರ್ಮಿಕ ಕಾರಣಗಳಿಗಾಗಿ ಎಲ್ಲ ಬುಡಕಟ್ಟು ಗಳ ಹೆಣ್ಣುಮಕ್ಕಳು ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ರೂಪಿಸಿಕೊಂಡಂತೆ ಇವರೂ ಸಹ ದೇವದಾಸಿ ಪದ್ಧತಿಯಂಥ ಆಚರಣೆಗಳಿಗೆ ಒಳಗಾದರು. ಬೇಡರು ಸೈನಿಕರಾಗಿ ತೊಡಗಿಸಿ ಕೊಂಡಂಥ ಸಂದರ್ಭಗಳಲ್ಲಿ ವಿವಾಹ ಪದ್ಧತಿಯ ನಿರ್ಬಂಧ ಇವರಿಗೆ ಇದ್ದ ಕಾರಣ ಹೆಣ್ಣುಗಳು ಕೂಡುವ ಸಂತತಿಯಾಗಿ ಬೇಡ ಸೈನಿಕರ ಸಂತಾನ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ನೆರಳಿನಲ್ಲಿ ಬೆಳೆಯುವಂಥಾಯಿತು. ಹಾಗೆಯೇ ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳಿಂದಾಗಿ ಸೈನಿಕರ ಮರಣಗಳು ಸಂಭವಿಸಿದಂತೆಲ್ಲ ಪಿತೃತ್ವದ ಆಶ್ರಯವಿಲ್ಲದೆ ತಾಯಿಯ ಮಡಿಲಿನಲ್ಲೇ ಮಕ್ಕಳು ಬೆಳೆದು ಉಳಿಯಬೇಕಾಯಿತು. ಹೀಗೆ ಬೇಡ ಮಹಿಳೆ ಕುಟುಂಬ ಪೋಷಣೆಯ ಸಾಮಾಜಿಕ ಜವಾಬ್ದಾರಿ ಹಾಗೂ ಆರ್ಥಿಕ ಜವಾಬ್ದಾರಿಗಳಿಗೆ ಸ್ಪಂದಿಸಬೇಕಾಯಿತು.

ರಾಮಾಯಣದಲ್ಲಿ ಉಲ್ಲೇಖವಾಗುವ ಶಬರಿ ರಾಮಭಕ್ತೆ. ಕೊನೆಯವರೆಗೂ ರಾಮ ದರ್ಶನಕ್ಕಾಗಿ ಬದುಕನ್ನು ಕಳೆದ ಆದರ್ಶಮಯಿ ಅವಿವಾಹಿತೆ. ಇದು ಬುಡಕಟ್ಟು ಮಹಿಳೆ ಶಿಷ್ಟರಂತೆ ಪುರುಷಪ್ರಧಾನ ವಿವಾಹ ಪದ್ಧತಿಗೆ ಸ್ಪಂಧಿಸುವ ನಿರ್ಬಂಧದಿಂದ ಹೊರತಾಗಿದ್ದಳು ಎಂಬುದಕ್ಕೆ ಸಾಕ್ಷಿ. ಮದುವೆ ಬುಡಕಟ್ಟು ಹೆಣ್ಣಿನ ಐಚ್ಛಿಕ ವಿಷಯವಾಗುತ್ತಿತ್ತು ಎಂಬ ತತ್ವ ಬೇಡ ಮಹಿಳೆಯ ಪರಂಪರೆಗೆ ಅನ್ವಯವಾಗುತ್ತದೆ.

ಬೇಡನಾಯಕರು ಪಾಳೆಯಗಾರರಾಗಿ ರಾಜರಾಗಿ ಆಳ್ವಿಕೆ ನಡೆಸಿದ ಕಾಲಘಟ್ಟಗಳಲ್ಲಿ ಅವರಿಗೆ ಸಂಬಂಧಿಸಿದ ಕುಟುಂಬ ಹಾಗೂ ಪರಿವಾರಗಳ ಪರಿವಲಯಗಳಲ್ಲಿ ಶಿಷ್ಟ ಆಚರಣೆ ಗಳು ಧಾರ್ಮಿಕ ಮೌಲ್ಯಗಳು ಶಿಷ್ಟ ದೈವಾಚರಣೆಗಳು ಪ್ರವೇಶಿಸಿದಂತೆಯೇ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಬೇಡ ಸಂಕುಲದಲ್ಲಿ ದಟ್ಟವಾಯಿತು. ಬಹು ಪತ್ನಿತ್ವ ರಾಜ್ಯವಾಳುವವನ ಸಾಮಾಜಿಕ ಘನತೆ Social prestige ಎಂಬಂತಾಯಿತು. ಇಂಥ ಪ್ರಭಾವಗಳು ಈ ಸಮುದಾಯದಲ್ಲಿ ಹೆಚ್ಚುತ್ತಾ ಹೋದವು. ರಾಜರ ಆಳ್ವಿಕೆ ಮುಗಿದು ಬೇಡರು ಆಸ್ತಿ-ಪಾಸ್ತಿ ಗಳನ್ನು ಕಳೆದುಕೊಂಡು ನಿರ್ಗತಿಕರಾದ ಹಂತಗಳಲ್ಲಿಯೂ ಇವರ ಹೆಣ್ಣು ಮಕ್ಕಳು ಕಟ್ಟು ಪಾಡುಗಳಿಗೆ ಒಗ್ಗಿಹೋಗುವಂಥಾಯಿತು.

ಸಾಮಾಜಿಕ ಪರಿವರ್ತನೆ ಆಧುನೀಕರಣ ಎಂದೆಲ್ಲ ಹೇಳುತ್ತಿರುವ ಈ ಕಾಲದಲ್ಲಿಯೂ ಬೇಡ ಮಹಿಳೆಯರ ಸ್ಥಿತಿ-ಗತಿಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಹಾಗೂ ಉಪಪಂಗಡಗಳಿಗೆ ಅನುಗುಣವಾಗಿ ಬೇರೆ ಬೇರೆಯಾಗಿ ಹೋಗುತ್ತವೆ. ಸಾಮಾಜಿಕ ಅಥವಾ ಧಾರ್ಮಿಕ ಕಾರಣಗಳಿಂದಾಗಿ ಪುರುಷನ ಅಧೀನತೆ ಅಥವಾ ಆಶ್ರಯದ ನೆರವಿಲ್ಲದೆ ಬದುಕನ್ನು ಕಟ್ಟಿಕೊಂಡ ಬೇಡ ಹೆಣ್ಣುಮಕ್ಕಳ ಬದುಕು ಈಗಲೂ ಸಮಾಜದಲ್ಲಿ ನೆಲೆಯನ್ನು ಪಡೆದು ಕೊಂಡಿದೆ. ಬೇಡ ಸಮುದಾಯಗಳು ಪ್ರಬಲರಾದ ಚರಿತ್ರೆಯ ಕಾಲಘಟ್ಟಗಳಲ್ಲಿ ಯುದ್ಧದಲ್ಲಿ ಮಡಿದ ತಮ್ಮ ತಮ್ಮ ಗಂಡಂದಿರಿಗಾಗಿ ಮಹಾಸತಿಯಾಗಿ ಚಿತೆಯೇರಿದ ಬೇಡ ಸ್ತ್ರೀಯರು ನಮ್ಮ ನೆನಪುಗಳಲ್ಲಿ ಉಳಿದಿದ್ದಾರೆ. ಇವರ ಆಚರಣೆ ಅಥವಾ ಆರಾಧನೆಗಳಲ್ಲಿ ಅವರ ನೆನಪುಗಳನ್ನು ಭದ್ರಗೊಳಿಸಿಕೊಂಡಿದ್ದೇವೆ. ಬೇಡ ಅರಸರ ಕಾಲದಲ್ಲಿ ಪೂಜಿಸುತ್ತಿದ್ದ ಮಾತೃ ದೈವಗಳು ತಮ್ಮ ಸಂಸ್ಕೃತಿಯ ಮೂಲದ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ನೆನಪಿನ ಸಂಕೇತಗಳಾಗಿವೆ. ಇಂದು ಶಿಷ್ಟ ದೈವಗಳು ರಾಷ್ಟ್ರೀಯ ಅಂತರ ರಾಷ್ಟ್ರೀಯ ದೈವ ಆರಾಧನೆ ಆಚರಣೆಗಳು ಎಲ್ಲ ಕಡೆ ಪರಿಚಲನಗೊಳ್ಳುತ್ತಿವೆ. ನಮ್ಮೆಲ್ಲ ಬೇಡ ಮಹಿಳೆಯರು ಇದಕ್ಕೂ ಸ್ಪಂದಿಸುತ್ತಾರೆ.

ಒಂದೇ ಕುಟುಂಬದಲ್ಲಿ ತನ್ನ ಅಜ್ಜಿ ಪೂಜಿಸುತ್ತಿದ್ದ ಯಲ್ಲಮ್ಮನೂ ವಾರಕ್ಕೊಮ್ಮೆ ಆರಾಧನೆಗೆ ಒಳಗಾಗುತ್ತಾರೆ. ಸಂದರ್ಭಕ್ಕೆ ಅನುಗುಣವಾಗಿ ಶಿಷ್ಟ ದೈವಗಳೂ ಪೂಜಿಸಲ್ಪಡು ತ್ತವೆ. ಸಸ್ಯಾಹಾರ ಮಾಂಸಾಹಾರಗಳ ಸಮತೋಲವೂ ಕುಟುಂಬ ವ್ಯವಸ್ಥೆಯಲ್ಲಿ ನಿರ್ವಹಣೆ ಯಾಗುತ್ತದೆ.

ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪರಂಪರೆ ಎಂದು ಸ್ವೀಕರಿಸುತ್ತಿರುವ ಇಂದಿನ ಬೆರಳೆಣಿಕೆಯಷ್ಟು ಕುಟುಂಬದಲ್ಲಿಯೂ ಬಹುವಿಧ ಸಂಸ್ಕೃತಿಯ ಆಯಾಮಗಳು ಕಂಡು ಬರುತ್ತವೆ. ಕೆಲವು ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುತ್ತಾರೆ. ಕೆಲವರಿಗೆ ಮದುವೆ ಗಂಡು ಮಕ್ಕಳು ಕಡ್ಡಾಯವಾಗಿ ವಿವಾಹ ಸಂಕೀರ್ಣ ಸನ್ನಿವೇಶಗಳಲ್ಲಿ ವಿವಾಹ ಸಂಬಂಧದ ಆಚೆಗೆ ಸಂತಾನವನ್ನು ಪಡೆದ ಹೆಣ್ಣುಮಕ್ಕಳು ತಮ್ಮ ಕುಟುಂಬ ಬಂಧು ಬಳಗದ  ಚೌಕಟ್ಟಿನಲ್ಲಿ ಮತ್ತು ಸಮಾಜದ ವ್ಯಾಪ್ತಿಯಲ್ಲಿ ಪದೇ ಪದೇ ತಪ್ಪಿತಸ್ಥರಂತೆ ಅವಮಾನಿತರಾಗುತ್ತಿರುವುದು ಗಮನಕ್ಕೆ ಬರುತ್ತದೆ.

ಉದಾ. ದೇವದಾಸಿಯಾದ ಅತ್ತೆಯನ್ನು ಅವಿವಾಹಿತ ಮಗಳನ್ನು ಅದೇ ಕುಟಂಬ ದೊಳಗಿನ ವಿವಾಹಿತ ಹೆಣ್ಣುಗಳು ಕೀಳಾಗಿ ಪರಿಗಣಿಸುತ್ತಾರೆ. ಅತ್ತೆ-ಸೊಸೆ, ಅತ್ತಿಗೆ-ನಾದಿನಿ, ಅಕ್ಕ-ತಂಗಿಯರಲ್ಲಿ ಜಗಳ ಮನಸ್ಥಾಪಗಳು ಬಂದಾಗ, ಮನೆಗೆ ಬಿಡುವ ಪದ್ಧತಿಯನ್ನು ಅನುಸರಿಸುವ ಹೆಣ್ಣುಮಕ್ಕಳು ಅವಮಾನಿತರಾಗುತ್ತಾರೆ.

ಮೊದಲಿಗೆ ಬೇಡರಲ್ಲಿ ಕನ್ಯಾಶುಲ್ಕದ ಪದ್ಧತಿ ಇತ್ತು. ಅಂದರೆ ಮದುವೆಯಾಗುವ ವ್ಯಕ್ತಿ ೬.೫೦ರೂಗಳನ್ನು ಅದಕ್ಕೂ ಮೊದಲು ೧.೫೦ರೂಗಳನ್ನು  ಕನ್ಯಾತೆರವಾಗಿ ನೀಡಬೇಕಾ ಗಿತ್ತು. ಇದನ್ನು ಹೆಣ್ಣಿನ ತಂದೆಗೆ ನೀಡುತ್ತಿದ್ದರು. ಕಾಲಕ್ರಮೇಣ ಹೆಣ್ಣಿನ ತಂದೆಯು ಗಂಡಿಗೆ ಮದುವೆ ಆಗುವ ಹುಡುಗನಿಗೆ ಕಾಲು ತೊಳೆದು ಕನ್ಯಾದಾನ ಮಾಡುವ ಪದ್ಧತಿ ಬಂತು. ಇದರಲ್ಲಿ ವಧು ದಕ್ಷಿಣೆಗೆ ಬದಲಾಗಿ ವರೋಪಚಾರ ಸೃಷ್ಟಿಯಾಯಿತು. ನಂತರ ಅದು ವರದಕ್ಷಿಣೆಗೆ ನಾಂದಿಯಾಯಿತು. ಮ್ಯಾಸ ಬೇಡರಲ್ಲಿ ಮಾತ್ರ ಈಗಲೂ ಕನ್ಯಾತೆರದ ಪದ್ಧತಿ ಇದೆ. ಆದರೆ ಇಲ್ಲಿನ ವಿಶೇಷ ಅಂದರೆ ಹೆಣ್ಣಿನ ತಾಯಿ ಮದುವೆಗೆ ಒಪ್ಪಿಗೆ ಕೊಡಬೇಕು ನಂತರ ಅವರ ಸಹೋದರರು ಅಂದರೆ ವಧುವಿನ ಸೋದರ ಮಾವಂದಿರು ಅನುಮತಿ ನೀಡಬೇಕಾಗುತ್ತದೆ. ಹೀಗೆ ಪ್ರಾದೇಶಿಕ ವ್ಯತ್ಯಾಸಗಳು ಅಥವಾ ಉಪಪಂಗಡಗಳ ಭಿನ್ನತೆಗಳಿಗೆ ಅನುಗುಣವಾಗಿ ಸ್ತ್ರೀ ಸಂವೇದನೆಗಳು ಬದಲಾವಣೆ ಪಡೆದಿವೆ.

ಬೇಟೆಗಾರಿಕೆಯ ಹಂತದಲ್ಲಿ ಬೇಡನಿಗೆ ಸರಿಸಮಾನಳಾಗಿ ಬೇಡತಿಯು ಬೇಟೆಯಾಡು ತ್ತಿದ್ದಳು. ನಂತರ ಬೇಟೆಯಾಡಿದ ಪ್ರಾಣಿಯ ಮಾಂಸವನ್ನು ಆಹಾರವಾಗಿ ತಯಾರಿಸುತ್ತಿದ್ದಳು. ಬೇಟೆಗಾರಿಕೆಗೆ ಸಾಮಾಜಿಕ ಮಾನ್ಯತೆ ಮುರಿದು ನಿರ್ಬಂಧವೇರ್ಪಟ್ಟ ನಂತರವೂ ಮಾಂಸಾ ಹಾರದ ಅಡಿಗೆಯನ್ನು ಬೇಡತಿಯರು ಬೇಯಿಸುತ್ತಾರೆ. ಶಿಷ್ಟ ಪ್ರಭಾವಗಳಿಂದಾಗಿ ಕೆಲವು ಬೇಡ ಹೆಣ್ಣುಮಕ್ಕಳು ಸಸ್ಯಹಾರಿಗಳಾಗಿದ್ದರೂ ತನ್ನ ಗಂಡ ಅಥವಾ ಕುಟುಂಬ ವ್ಯವಸ್ಥೆಯ ಪರಂಪರಾಗತ ಆಹಾರವಾದ ಮಾಂಸವನ್ನು ಬೇಯಿಸಲು ಹಿಂಜರಿಯುವುದಿಲ್ಲ.

ಬೇಡ ಸಂಸ್ಕೃತಿ ಕೃಷಿ ಮತ್ತು ಪಶುಪಾಲನೆಯತ್ತ ವಾಲಿದ ನಂತರ ಬೇಡತಿಯರು ತಮ್ಮ ಪುರುಷರಿಗೆ ಸರಿಸಮಾನರಾಗಿ ವೃತ್ತಿ ಪಲ್ಲಟಕ್ಕೆ ತಾವು ಪಲ್ಲಟಗೊಂಡರು. ಆಧುನೀಕರಣ ಮತ್ತು ನಗರ ಸಂಸ್ಕೃತಿಯ ಪ್ರಭಾವದಿಂದ ಕಾಡುಗಳು ನಾಶಗೊಂಡು ಪಶುಪಾಲನೆ ನಶಿಸಿದ ಸಂದರ್ಭಗಳಲ್ಲಿ ಹಾಗೂ ಕೈಗಾರಿಕೆಗಳಿಂದಾಗಿ ಕೃಷಿಭೂಮಿ ಕ್ಷೀಣಿಸಿದ ದಿನಗಳಿಗೆ ಅನುಗುಣ ವಾಗಿ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡರು.

ಅಕ್ಷರ ಪ್ರಪಂಚ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿಯೂ ಅಲ್ಪ ಸಂಖ್ಯೆಗಳಲ್ಲಿ ಬೇಡ ಮಹಿಳೆ ಪ್ರಗತಿ ಹೊಂದುತ್ತಿದ್ದಾಳೆ. ಕೆಲವು ಕಡೆಗಳಲ್ಲಿ ಇಂಥ ಹೆಣ್ಣುಮಕ್ಕಳು ತಮ್ಮ ಸಂಕೀರ್ಣ ಕುಟುಂಬ ವ್ಯವಸ್ಥೆಯ ಗೊಂದಲಗಳಿಂದ ತತ್ತರಿಸುತ್ತಿದ್ದಾರೆ. ಇಂದು ಬಹುಪಾಲು ಬೇಡ ನಾಯಕ ಕುಟುಂಬಗಳು ಪುರುಷ ಪ್ರಾಧಾನ್ಯತೆಯನ್ನು ಒಪ್ಪಿಕೊಂಡಿವೆ. ತಾವು ನಾಯಕ ಮೂಲದವರು ಪಾಳೆಯಗಾರ ವಂಶಸ್ಥರು ರಾಜ ವೈಭವದಿಂದ ಮೆರೆದವರೆಂಬ ಘನತೆಗಳ ಮೆರಗುಗಳನ್ನು ಮೆಲುಕು ಹಾಕುತ್ತಿರುತ್ತಾರೆ. ಆದ್ದರಿಂದ ಇವರ ಮಹಿಳೆಯರು ಸಂಪೂರ್ಣ ಪುರುಷ

ಪ್ರಾಬಲ್ಯಕ್ಕೆ ಒಳಗಾಗಿದ್ದಾರೆ. ದುಡಿಯುವ ಗಳಿಸುವ ಸ್ವಾತಂತ್ರ್ಯ ಈ ಹೆಣ್ಣುಮಕ್ಕಳ ಪಾಲಿಗೆ ಲಭಿಸಿದಂತೆ ಅದನ್ನು ವ್ಯಯಿಸುವ ಸಂದರ್ಭಗಳಲ್ಲಿ ಪುರುಷಾಧೀನರಾಗಿರುತ್ತಾರೆ. ಮದುವೆಯ ಸ್ವಾತಂತ್ರ್ಯ ಸಂಪೂರ್ಣ ಪುರುಷನಿಗೆ ಇರುವಂತೆ ಮಹಿಳೆಯ ಪಾಲಿಗೆ ಇರುವುದಿಲ್ಲ. ಅಂತರ್ ಜಾತಿ ವಿವಾಹದ ಬಗ್ಗೆ ಬಹುಪಾಲು ಬೇಡರ ಹೆಣ್ಣು ಮಕ್ಕಳಿಗೆ ಹೆದರಿಕೆ ಇದೆ. ಮೇಲ್ಜಾತಿಯ ಮದುವೆ ನೆಲೆ ತಪ್ಪಿದರೆ ಮುಂದೆ ಗತಿಯೇನು? ಎಂದು ಯೋಚಿಸುತ್ತಾರೆ. ತಮಗಿಂತ ಕೆಳಜಾತಿಯೊಂದಿಗೆ ಮದುವೆಯಾಗಲು ತಮ್ಮ ಮನೆತನ, ವಂಶ ಅಥವಾ ಕುಟುಂಬದ ಘನತೆಗೆ ಕಳಂಕವಾದೀತೆಂದು ಎಚ್ಚರ ವಹಿಸುತ್ತಾರೆ. ಒಟ್ಟಾರೆ ಬೇಡ ಸಮುದಾಯದ ಅಂತರ್ ಜಾತಿಯ ವಿವಾಹಗಳು ವಿದ್ಯಾವಂತ ಪುರುಷರ ಪಾಲಿಗೆ ದಕ್ಕಿದಷ್ಟು ಮಹಿಳೆಯರಿಗೆ ಲಭಿಸಿಲ್ಲ. ಆದರೆ ಈ ಸಮುದಾಯದ ಪುರುಷರು ಹೀಗೆ ಮದುವೆಯಾಗು ತ್ತಿರುವುದು ಒಟ್ಟಾರೆ ಸಾಮಾಜಿಕ ಪರಿವರ್ತನೆ ಅಥವಾ ಪ್ರಗತಿಗೆ ಮಾರ್ಗವಾದಂತೆಲ್ಲ ಇದೇ ಸಮುದಾಯದ ಹೆಣ್ಣುಮಕ್ಕಳ ಪಾಲಿಗೆ ಕಷ್ಟವಾಗುತ್ತಿದೆ. ಶಿಷ್ಟರ ಆರ್ಥಿಕವ್ಯವಸ್ಥೆ, ಸಾಮಾಜಿಕ ಭದ್ರತೆ, ಮಾನಸಿಕ ನೆಮ್ಮದಿ ಸೌಂದರ್ಯ ಪೂರಕವಾಗಿರುವಂತೆ ಬೇಡ ಹೆಣ್ಣು ಮಕ್ಕಳಿಗೆ ಇರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಅಜ್ಞಾತವಾದ ಅನಾತ ಪ್ರಜ್ಞೆ ಕಾಡುತ್ತಿ ರುತ್ತದೆ.

ಬೇಡತಿಯರು ಮೃದು ಮನಸ್ಕರಾದರೂ ಧೈರ್ಯ ಮತ್ತು ದಿಟ್ಟತನದ ಸ್ವಾಭಾವದವರು ಯಾವ ವರ್ಗದ ಮಹಿಳೆಯೇ ಆಗಲಿ ತನ್ನನ್ನು ಕೆಣಕಿದವರನ್ನು ಶಿಕ್ಷಿಸದೆ ಬಿಡುವುದಿಲ್ಲ. ಉಡುಗೆ ತೊಡುಗೆಗಳ ವಿಷಯದಲ್ಲಿ ಮೂಲ ಸಂಪ್ರದಾಯದ ವೇಷ-ಭೂಷಣಗಳನ್ನು ಅವುಗಳಿಗೆ ಸಂಬಂಧಿಸಿದ ನಿರ್ಬಂಧಗಳನ್ನು ಪಾಲಿಸುವುದಿಲ್ಲ. ಆದರೆ ಅತ್ಯಾಧುನಿಕ ವೇಷ ಭೂಷಣಗಳಲ್ಲಿ ತೀರಾ ಸಂಕೋಚ ತರಿಸುವ ತುಂಡು ಉಡುಗೆಗಳನ್ನು ಧರಿಸುವುದಿಲ್ಲ.

ಉದಾ. ರವಿಕೆ ಧರಿಸುವಿಕೆ ಮೊದಲಿಗೆ ನಿಷೇಧ. ತಾಳಿ, ಕಾಲ್ಗೆಜ್ಜೆ, ಕಪ್ಪುವಸ್ತ್ರ ಈಗ Sleevless ಹೀಗೆ ಸಾಮಾಜಿಕ ಹೊಣೆಗಾರಿಕೆಗೆ ಅನುಗುಣವಾಗಿ ಬೇಡ ಮಹಿಳೆಯ ಸಂವೇದನೆಗಳು ಭೂಷಣ ಪ್ರಾಯವಾಗಿವೆ.

* * *

��q ���ੑ� p� �ಡಿವ ಹಾಗೂ ಅಂಚಿನ ವರ್ಗ ಗಳಿಗೆ. ಕಾರಣ ಅವುಗಳಿಗಿರುವ ಸಾಮಾಜಿಕ ಹಾಗೂ ಆರ್ಥಿಕ ಅಭದ್ರತೆಗಳು. ಸ್ವ ಮೂಲವನ್ನು ಬಿಡದ ಅನ್ಯ ಮೂಲವನ್ನು ಆಶ್ರಯಿಸದ ಅವುಗಳ ಅನನ್ಯ ಸ್ವಭಾವವು ಅನ್ನ ಹಾಗೂ ನೆಲೆ ಕಸಿದುಕೊಳ್ಳುವ ಪ್ರವೃತ್ತಿಗಳ ವಿರುದ್ಧ ಸೆಟೆದು ನಿಲ್ಲುವಂತೆ ಮಾಡುತ್ತದೆ. ಹಲಗಲಿ ಬೇಡರಂತಹ ಅಡವಿ ಅವಲಂಬಿತ ಸಮುದಾಯಗಳಿಗೆ ವೃತ್ತಿ ಎನ್ನುವುದು ಅಸಮಾನತೆಯ ನೆಲೆಯಾಗದೆ ಅದೊಂದು ಸಾಮುದಾಯಿಕ ಆಚರಣೆಯ ಭಾಗವಾಗಿತ್ತು. ಎಲ್ಲ ದುಡಿವ ಸಂಸ್ಕೃತಿಗಳಲ್ಲಿ ಈ ಗುಣವನ್ನು ಕಾಣುತ್ತೇವೆ. ಹೀಗಾಗಿ ಹಲಗಲಿ ದಂಗೆ ಹಾಗೂ ಸಿಂಧೂರ ಲಕ್ಷ್ಮಣನ ಪ್ರತಿಭಟನೆಗಳು ಬರೀ ಆಂಶಿಕ ಅಗತ್ಯಗಳಾಗಿರದೆ ಆ ಕಾಲದ ಸಾಮಾಜಿಕ, ಆರ್ಥಿಕ, ರಾಜಕೀಯ ಅಸ್ತಿತ್ವದ ಅಗತ್ಯ ಹಾಗೂ ಅನಿವಾರ್ಯತೆಗಳಾಗಿ ಮೂಡಿಬಂದಂಥವು. ಈ ಆರ್ಥಿಕ ಸ್ವಾವಲಂಬನೆ ಹಾಗೂ ಅಸ್ತಿತ್ವ ನಾಶದ ಪ್ರವೃತ್ತಿಗಳ ವಿರುದ್ಧ ಶ್ರಮ ಹಾಗೂ ಸ್ವಾವಲಂಬಿ ಮನಸ್ಸುಗಳು ತೋರಿದ ಚುರುಕುತನವದು. ಬೇಡರದು ನಿಸರ್ಗಮುಖಿ ಹಾಗೂ ನಿಸ್ವಾರ್ಥ ಬದುಕು. ಪ್ರಭುತ್ವದ್ದು ಸ್ವಾರ್ಥಮುಖಿ ಬದುಕು. ವಸಾಹತು ಪ್ರಭುತ್ವ ಯಾವಾಗಲೂ ಸ್ಥಳೀಯ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂಬಂಧಗಳ ವಿಘಟನೆಯಾಗಿ ಕೆಲಸ ಮಾಡುತ್ತ ಬಂದಿದೆ. ಇದಕ್ಕೆ ಸ್ಥಳೀಯ ಕೆಲವು ಪ್ರತಿಷ್ಠಿತ ಹಿತಾಸಕ್ತಿಗಳ ಸ್ವಾಥಪರ್‍ರ ಸಹಾಯವೂ ಕಾರಣವಾಗಿದೆ. ಸ್ಥಳೀಯ ಉತ್ಪಾದನೆಯ ಮುಖ್ಯಗುಣವೇ ಮಾನವಮುಖಿ ಹಾಗೂ ಸಮಾಜಮುಖಿ ಸಂಬಂಧಗಳನ್ನು ಗಟ್ಟಿಗೊಳಿಸುವುದು. ಆ ಮೂಲಕ ವ್ಯಕ್ತಿಯ ಸಾಂಸ್ಕೃತಿಕ ಲೋಕದ ವಿಸ್ತಾರಕ್ಕೆ ಹಾಗೂ ಆರ್ದಿಕ ಭದ್ರತೆಗೆ ಹಂಬಲಿಸುವುದು. ಹೀಗಾಗಿ ಬದುಕನ್ನು ಅಭದ್ರಗೊಳಿಸುವ, ಅವಮಾನಿಸುವ, ನಾಶಗೊಳಿಸುವ ಶಕ್ತಿಗಳ ವಿರುದ್ಧ ಸಿಡಿದೇಳುವ ಮೂಲಕ ಹಲಗಲಿ ಬೇಡರು ಹಾಗೂ ಸಿಂಧೂರ ಲಕ್ಷ್ಮಣನಂತಹ ಸ್ಥಳೀಯ ಪ್ರತಿಭಟನಾಕಾರರು ಪ್ರಭುತ್ವ ಹಾಗೂ ಅದರ ಪರಿವಾರವನ್ನು ತಮ್ಮ ಹೋರಾಟಗಳ ಮೂಲಕ ಕಂಗೆಡಿಸಿದರು.

ನಿಶ್ಯಸ್ತ್ರೀಕರಣ ಕಾಯಿದೆಯಡಿಯಲ್ಲಿ ನಿಷೇಧಕ್ಕೊಳಗಾದ ಕುಡುಗೋಲು, ಕೊಡ್ಲಿ, ಭರ್ಚಿಯಂಥ ಆಯುಧಗಳನ್ನು ಮತ್ತೆ ಮಾಡಿಕೊಳ್ಳುವಂಥ ಸಾಮರ್ಥ್ಯ ಹಲಗಲಿ ಬೇಡರಿಗೆ ಇರಲಿಲ್ಲವೆಂದಲ್ಲ ಇತ್ತು. ಈ ವರೆಗೆ ಚರ್ಚಿಸಿದಂತೆ ಆಯುಧವೆಂದರೆ ಅದೊಂದು ಪರಿಕರ ಮಾತ್ರವಾಗಿರಲಿಲ್ಲ. ಅದು ಅವರ ಜೀವನ ವಿಧಾನವಾಗಿತ್ತು. ಅಂಥ ಜೀವನವನ್ನು ಕಾಯಿದೆ ಸರ್ವನಾಶ ಮಾಡುತ್ತದೆ ಕಸಿದುಕೊಳ್ಳುತ್ತದೆ.

ಕುಬಸಾ ಸಿರಿ ಹಪ್ಪಳ ಶಾಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋತಿ ಕುಡ ಕಬ್ಬಿಣಾ ಮಸರು ಬೆಣ್ಣೆ ಹಾಲಾ
ಉಪ್ಪ ಎಣ್ಣೆ ಅರಿಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಾಳ ಚರಗಿ ಮಂಗಳ ಸೂತ್ರಾ ತಕ್ಕೊಂಡ ಹೋದರ ಬೀಸುಕಲ್ಲಾ
ಎಲ್ಲಾ ತಗೊಂಡ್ರೊ ಸಿಕಷ್ಟ | ಸರ್ದನಿಂತ ಊರಿಗೆ ಕೊಳ್ಳಿ ಕೊಟ್ಟು
ಬೂದಿ ಮಾಡ್ಯಾರ ಹಲಗಲಿ ಸುಟ್ಟು ಗುರ್ತ ಎಳ್ಳಷ್ಟು ಸಿಗದಷ್ಟು

ಲಾವಣಿಯ ಈ ಸಾಲುಗಳು ತುಂಬಾ ಅರ್ಥಗರ್ಭಿತವಾಗಿರುವುದನ್ನು ಇಲ್ಲಿ ಕಾಣಬಹುದು. ಹಲಗಲಿ ಬೇಡರ ಎಣ್ಣೆ, ಉಪ್ಪು, ಹಪ್ಪಳ, ಸೆಂಡಿಗೆ ಉತ್ಪಾದನೆಗೆ ಮುಖ್ಯವಾದ ವಸ್ತುಗಳೇ ಕೊಡಲಿ, ಕೋತಿ, ಕುಡುಗೋಲು. ಅವುಗಳು ಅಭಿನ್ನವಾಗಿ ಇಲ್ಲಿ ಬಳಕೆಯಾಗಿವೆ. ಅಂಥ ಅಭಿನ್ನ ಬದುಕಿನ ಸರ್ವನಾಶವನ್ನು ಕಂಪನಿ ಸರ್ಕಾರ ಇಲ್ಲಿ ಮಾಡುವುದನ್ನು ಲಾವಣಿ ಮಾರ್ಮಿಕವಾಗಿ ಧ್ವನಿಸುತ್ತದೆ.

"ಹಲಗಲಿ ಎಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತೊ
ಪೂಜೆರಿ ಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತ
ಕೈಯಾನ ಹತಾರಕೊಡಬಾರದು ನಾವು ನಾಲ್ಕು ಮಂದಿ ಜತ್ತೋ
ಹತಾರ ಹೋದಿಂದ ಬಾರದ ನಮ್ಮ ಜೀವ ಸತ್ತ ಹೋಗುದು ಗೊತ್ತು"

ಹಲಗಲಿ ಬಂಡಾಯದ ರೂವಾರಿಗಳಾದ ಹಣಮ, ಬಾಲ, ಜಡಗ ಹಾಗೂ ರಾಮ ಇವರು ಹೇಳುವ ಈ ಮಾತು, ಕೆಳವರ್ಗಗಳ ಅಂತಃಸ್ಥೈರ್ಯ ಹಾಗೂ ತಲ್ಲಣಗಳಿಗೆ ಸಾಕ್ಷಿ ಯಾಗಿವೆ. ಅಸ್ತಿತ್ವವನ್ನೇ ಅಡಗಿಸಲು ಪ್ರಯತ್ನಿಸುವ ಪ್ರಭುತ್ವದ ಹುನ್ನಾರದ ವಿರುದ್ಧ ನಡೆದ ಈ ದಂಗೆಗಳನ್ನು ಬರೀ ಬ್ರಿಟೀಷ್ ವಿರೋಧಿ ಅಥವಾ ಭಾರತ ರಾಜಕೀಯ ಸ್ವಾತಂತ್ರ್ಯದ ರಂಗತಾಲೀಮೆಂದು ಬೀಗುವುದು ಬರೋಬ್ಬರಿಯಲ್ಲ. 'ಸ್ವಾತಂತ್ರ್ಯ'ದ ಪರಿಕಲ್ಪನೆಯೇ ಇಲ್ಲದೆ ಬದುಕು ಅರಸುತ್ತಿರುವ ಸಮುದಾಯಗಳೂ ಸ್ವಾತಂತ್ರ್ಯೋತ್ತರ ಕಾಲದಲ್ಲೂ ಇರುವಾಗ ಹಲಗಲಿ ಬಂಡಾಯ ಹಾಗೂ ಸಿಂಧೂರ ಲಕ್ಷ್ಮಣರ ಪ್ರತಿಭಟನೆ ಗಳನ್ನು ಈ ರೀತಿಯ ವ್ಯಾಖ್ಯಾನಗಳಿಗೆ ಹೊಂದಿಸುವುದು ವಿಚಿತ್ರವೆನಿಸುತ್ತದೆ. ಹೀಗೆ ಮಾಡುವುದರಿಂದ ಈ ಪ್ರತಿಭಟನೆಗಳಿಗಿದ್ದ ಆಂತರಿಕ ತಾಕತ್ತು ಹಾಗೂ ತುರ್ತುಗಳು, ಮತಿಗಳು, ಸೂಕ್ಷ್ಮತೆಗಳು ಸಪಾಟಾಗಿ ಹೋಗುತ್ತವೆ. ಅವುಗಳನ್ನು ನೇರ ಅರ್ಥ ಮಾಡಿ ಕೊಳ್ಳಲು ಆಗದ ಜಡತೆ ಆವರಿಸುತ್ತದೆ. ಅನಗತ್ಯವಾಗಿ ಅವುಗಳನ್ನು ರಾಷ್ಟ್ರೀಯವಾದಿ ಕಕ್ಷೆಯಲ್ಲಿಟ್ಟು ನೋಡದೆ ಅದರ ಸ್ಥಳೀಯ ಸಾಮಾಜಿಕ ತುರ್ತಿನಲ್ಲಿಟ್ಟು ವ್ಯಾಖ್ಯಾನಿಸಿದರೆ ಹೊಸ ರೀತಿಯ ಸೂಕ್ಷ್ಮ ಚಾರಿತ್ರಿಕ ಸಂಕಥನಗಳನ್ನು ನಮ್ಮವಾಗಿಸಿಕೊಳ್ಳಬಹುದಾಗಿದೆ. ಹೀಗಾಗಿ ಇಂಥ ಪ್ರತಿಭಟನೆಗಳನ್ನು ಅರ್ಥಮಾಡಿಕೊಳ್ಳುವ ನೆಲೆಯೇ ಬದಲಾಗಬೇಕಿದೆ.

(ಲೇಖನಕ್ಕೆ ಬಳಸಿಕೊಂಡಿರುವ ಲಾವಣಿಯ ಸಾಲುಗಳನ್ನು ಫ್ಲೀಟರ್ ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು ಪುಸ್ತಕದಿಂದ ಆಯ್ದುಕೊಂಡಿದ್ದೇನೆ).

* * *

**ಹಲಗಲಿ ಬೇಡರು**

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ್ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮ ಹೀಂಗ್ ಎಂದು
ಡಣ್ಗರ ಸಾರಿದರ ಮುಂದು

ಶೂರ ಶಿಪಾಯಿಜನರ ತಾವು ತಿಳಿದು
ಅಳತಾಯ ಕಣ್ಣಿಗೆ ನೀರ್ ತಂದು ||ಯೇರ||

ಬಹಳ ಚಿಂತಿಯ್ಆಗಿ ದುಖ್ಖೂಖದಿಂದ ಅವರು ಬಿದ್ದರ್-ಅಣ್ಣ ನೆಲಕ

ಚಿತ್ರದುರ್ಗ, ಸುರಪುರ, ಹಲಗಲಿಯ ಬೇಡರ ಶೌರ್ಯ, ಪರಾಕ್ರಮಗಳು ಯಾವ ಕಾಲಕ್ಕೂ ಚಿರಸ್ಮರಣೀಯ

**– ಹರ್ತಿಕೋಟೆ ವೀರೇಂದ್ರ ಸಿಂಹ**

## ೧೩. ಲೋಕೋಪಯೋಗಿ ಕೊಡುಗೆಗಳು

ವಾಲ್ಮೀಕಿ ಸಮುದಾಯದ ಲೋಕೋಪಯೋಗಿ ಕೊಡುಗೆಗಳು ಸಾಕಷ್ಟು. ಮುಖ್ಯ ವಾಗಿ ಈ ಸಮುದಾಯದ ವಾಲ್ಮೀಕಿ ಮಹರ್ಷಿಯು ರಾಮಾಯಣ ದರ್ಶನ ಎಂಬ ಬೃಹತ್ ಕಾವ್ಯವನ್ನು ರಚಿಸಿ ಲೋಕಕ್ಕೆ ನೀಡಿದ ಕೊಡುಗೆಯೇ ಬಲು ದೊಡ್ಡದು. ಬೇಟೆಗಾರ ನಾಗಿದ್ದ ವಾಲ್ಮೀಕಿಯು ಸಪ್ತರ್ಷಿಗಳ ಮೂಲಕ ಜ್ಞಾನವನ್ನು ಪಡೆದು ರಾಮಮಂತ್ರವನ್ನು ಜಪಿಸುತ್ತ ಧ್ಯಾನಾಸಕ್ತನಾಗಿ ಕುಳಿತಿದ್ದಾಗ ಆತನ ಮೈಮೇಲೆ ಹುತ್ತ ಬೆಳೆಯುತ್ತದೆ. ಆ ಹುತ್ತದ ಒಳಗಿನಿಂದ ‘ರಾಮ’ ‘ರಾಮ’ ಎನ್ನುವ ಮಂತ್ರ ಘೋಷದ ಧ್ವನಿ ಕೇಳಿ ಬರುತ್ತಿತ್ತು. ಅದನ್ನು ಕೇಳಿದ ಸಪ್ತರ್ಷಿಗಳೇ ಬಂದು ಆತನನ್ನು ಎಚ್ಚರಿಸಿ ಹುತ್ತದಿಂದ ಹೊರಬರಸಿದರು. ಸಂಸ್ಕೃತದಲ್ಲಿ ವಲ್ಮೀ ಅಂದರೆ ಹುತ್ತ. ವಲ್ಮೀದಿಂದ ಹೊರಬಂದವನಾದ್ದರಿಂದ ಆತನನ್ನು ವಾಲ್ಮೀಕಿ ಎಂದು ಕರೆದರು.

ನಾರದ ಮಹರ್ಷಿಯಿಂದ ಶ್ರೀ ರಾಮ ಕಥೆಯನ್ನು ಕೇಳಿ ರೋಮಾಂಚನಗೊಂಡ ವಾಲ್ಮೀಕಿಯು ಒಮ್ಮೆ ಬೆಳಗಿನ ಸಮಯಕ್ಕೆ ಸ್ನಾನ ಮಾಡಲೆಂದು ತಮಸಾ ನದಿಯ ತೀರಕ್ಕೆ ಬರುತ್ತಾನೆ. ಆಗ ತಾನೆ ಉದಯಿಸುತ್ತಿದ್ದ ಸೂರ್ಯನ ಹೊನ್ನ ಕಿರಣಗಳ ಹೊಂಬಿಸಿಲಲ್ಲಿ ಕಳಕಳಿಸುತ್ತಿದ್ದ ಅರಣ್ಯದಲ್ಲಿ ಚೈತ್ರಖುಥು ಪಕ್ಷಿಯ ಇಂಚರವನ್ನು ಆಲಿಸುತ್ತ ನದಿ ತಾಟಕದ ಪಾವಟಿಗೆಗಳನ್ನಿಳಿದು ನೀರಲ್ಲಿ ಮುಳುಗಲುದ್ಯುಕ್ತನಾದಾಗ ಆಹ್ಲಾದಕರವಾದ ಸುಸ್ವರ ಧ್ವನಿಯೊಂದು ಕೇಳಿ ಬರುತ್ತದೆ. ಸ್ವರ್ಗವೇ ಭೂಮಿಗಿಳಿದಂತಿರುವ ಆ ಉದಯ ಕಾಲದಲ್ಲಿ ಉದಯರಾಗಾಲಾಪನೆ ಗೈಯುತ್ತಿದ್ದ ದಂಪತಿ ಕ್ರೌಂಚಗಳ ಮಿಥುನವನ್ನು ಕಂಡು ವಾಲ್ಮೀಕಿಯ ಮನಸ್ಸು ಪುಳುಕಗೊಂಡಿತು. ಆ ಸುಮಧುರ ರಾಗಾಲಾಪನೆಯನ್ನು ಆಲಿಸುತ್ತ ವಾಲ್ಮೀಕಿಯು ಅದೆಷ್ಟು ಹೊತ್ತು ಹಾಗೇ ನಿಶ್ಚಲನಾಗಿ ನಿಂತುಕೊಂಡನೋ!

ಗಾಳಿವಟ್ಟೆಯಲ್ಲಿ ಸರಸವಾಗಿ ಆಡುತ್ತಿದ್ದ ಆ ವಿಹಂಗಮಗಳಲ್ಲಿ ಗಂಡು ಕ್ರೌಂಚವು ಒರಲಿ ಧೊಪ್ಪನೆ ನೆಲಕ್ಕೆ ಬಿದ್ದಿತು. ಆ ಸಪ್ಪಳವನ್ನು ಕೇಳಿದ ವಾಲ್ಮೀಕಿಯು ಮೈಮರವೆಯಿಂದ ಎಚ್ಚರಾಗಿ ನೋಡುತ್ತಾನೆ; ನೆಲಕ್ಕೆ ಬಿದ್ದ ಗಂಡು ಕ್ರೌಂಚವು ರಕ್ತದ ಮಡುವಿನಲ್ಲಿ ಮುಳುಗಿತ್ತು. ಮಾಂಸದ ಆಶೆಯಿಂದ ವ್ಯಾಧನೋರ್ವನು ಅದಕ್ಕೆ ಬಾಣವನ್ನು ಎಸೆದಿದ್ದನು. ಬಾಣ ನೆಟ್ಟು ಅದರ ಎದೆಯಿಂದ ನೆತ್ತರು ಪುಟಿಯುತ್ತಿತ್ತು.

ಹೆಣ್ಣು ಕ್ರೌಂಚವು ತನ್ನ ಇನಿಯನ ಹತ್ಯೆಯನ್ನು ಕಂಡು ಶೋಕಾತಿಶೋಕದಿಂದ ಚೀತ್ಕರಿಸಿತು. ಆ ಆಕ್ರಂದನವನ್ನು ಕೇಳಿದ ವಾಲ್ಮೀಕಿಯ ಕರುಳು ಕರಗಿ ಕಂಬನಿಯುಕ್ಕಿತು. ಕೂಡಲೆ ಆತನಿಗೆ ತನ್ನ ಪೂರ್ವದ ಕೃತ್ಯದ ನೆನಪಾಯಿತು. ಆಗ ವಾಲ್ಮೀಕಿಯು ಆ ಕ್ರೌಂಚ ಪಕ್ಷಿಯ ಹಂತಕನಿಗೆ "ಬೇಡ, ನಿಷಾದನೇ ಬೇಡ! ಕೊಲೆ ಸಾಕಿನ್ನು! ನಾರದ ಮಹರ್ಷಿಯ ದಯೆಯಿಂದ ಕರುಣೆಯನ್ನು ಕಲಿತೆನು" ಎಂದು ಆ ಹಂತಕ ನಿಷಾದನಿಗೆ ಬೋಧನೆ ಮಾಡಿ ಅಹಿಂಸೆಯ ರುಚಿಗಲಿಸಿದನು.

ವಾಲ್ಮೀಕಿಯ ಬೋಧೆಯಿಂದ ಎಚ್ಚರಗೊಂಡ ಆ ವ್ಯಾಧನು ಅಂದಿನಿಂದ ಬೇಟೆಯಾಡು ವುದನ್ನೇ ಬಿಟ್ಟು ಬಿಟ್ಟನು. ವಾಲ್ಮೀಕಿಯು ಆ ಕ್ರೌಂಚ ಪಕ್ಷಿಯ ಮೈಗೆ ನಾಟಿದ್ದ ಬಾಣವನ್ನು ಕಿತ್ತು ಸಂಜೀವಿನಿ ಪ್ರಯೋಗದಿಂದ ಅದಕ್ಕೆ ಮರಳಿ ಪ್ರಾಣವನ್ನು ಬರಿಸಿದನು. ಆಗ ತನ್ನ ಇನಿಯನು ಜೀವಂತನಾದುದನ್ನು ಕಂಡು ಆ ಹೆಣ್ಣು ಕ್ರೌಂಚದ ಶೋಕದ ಉರಿ ತಣ್ಣಗಾಗಿ ಎದೆಯಲ್ಲಿ ಸಂತಸ ತುಂಬಿತು.

ಸ್ನಾನ ಮುಗಿಸಿಕೊಂಡು ಆ ಸನ್ನಿವೇಶದ ಸ್ಮರಣೆಯಲ್ಲಿಯೆ ಮಹರ್ಷಿ ವಾಲ್ಮೀಕಿಯು ತನ್ನ ಆಶ್ರಮಕ್ಕೆ ಬಂದು, ಧ್ಯಾನಮಗ್ನನಾಗಿರಲು ಕಾವ್ಯ ಪ್ರತಿಭೆಯ ಮಿಂಚಿನಿಂದ ಕಾವ್ಯ ವೊಂದುಹೊಮ್ಮಿ ಶ್ರೀ ರಾಮಾಯಣ ದರ್ಶನವಾಯ್ತು! ಅಂಥಾ ಒಂದು ಬೃಹತ್ ಕಾವ್ಯವನ್ನೇ ಲೋಕಕ್ಕೆ ನೀಡಿದ ವಾಲ್ಮೀಕಿ ಮಹರ್ಷಿಯ ಕೊಡುಗೆ ಬಲುದೊಡ್ಡದಲ್ಲವೆ?

ಬೇಡರ ಮುದುಕಿ ಶಬರಜ್ಜಿ ಶ್ರೀರಾಮನಿಗೆ ಕೊಡಲೋಸುಗ ಬೋರೆ ಹಣ್ಣಗಳನ್ನು ಸಂಗ್ರಹಿಸಿ ಆತನ ಬರುವಿಗಾಗಿ ತವಕಿಸುತ್ತ ಕಾದು ಕುಳಿತಿದ್ದ ಅವಳ ಭಕ್ತಿಯ ಕೊಡುಗೆಯೂ ಕೂಡ ಅಷ್ಟೇ ದೊಡ್ಡದು!

ಪ್ರತ್ಯಕ್ಷವಾಗಿ ಗುರುವಿನಿಂದ ಪಾಠ ಹೇಳಿಸಿಕೊಂಡು ಕಲಿಯದಿದ್ದರೂ ಗುರುವಿನ ವಿಗ್ರಹ ವನ್ನೇ ಮುಂದಿರಿಸಿಕೊಂಡು ನಿಷ್ಠೆಯಿಂದ ಧನುರ್ವಿದ್ಯೆಯನ್ನು ಅಭ್ಯಾಸ ಮಾಡಿ ನಿಷ್ಣಾತನಾದ ಕಿರಾತ ಬಾಲಕ ಏಕಲವ್ಯನು ದ್ರೋಣಾಚಾರ್ಯನಿಗೆ ತನ್ನ ಹೆಬ್ಬೆರಳನ್ನೇ ಕತ್ತರಿಸಿ ಗುರುದಕ್ಷಿಣೆ ಯನ್ನಾಗಿ ನೀಡಿದ ಅವನ ಗುರುಭಕ್ತಿಯ ಕೊಡುಗೆಗೆ ಬೆಲೆ ಕಟ್ಟಲಾದೀತೆ?

ಬೇಟೆಗಾರನಾಗಿದ್ದ ಕಿರಾತನೋರ್ವನು ತಾನು ಬೇಟೆಯಾಡಿ ತಂದ ಪ್ರಾಣಿಗಳ ಮಾಂಸ ವನ್ನೇ ಪ್ರತಿದಿನವೂ ಶಿವನಿಗೆ ನೈವೇದ್ಯ ಮಾಡುತ್ತ ತನ್ನ ಭಕ್ತಿಯನ್ನು ಸಮರ್ಪಿಸುತ್ತಿದ್ದ. ಒಮ್ಮೆ ಅವನು ಪೂಜಿಸುತ್ತಲಿದ್ದ ಅಡವಿಯ ಶಿವಲಿಂಗದ ಕಣ್ಣುಗಳಿಂದ ನೀರು ಒಸರುವುದನ್ನು ಆ ಕಿರಾತನು, ಪಾಪ, ಶಿವನಿಗೆ ಕಣ್ಣುಬೇನೆಯಾಗಿದೆಯೆಂದು ತಿಳಿದು, ಶಿವನು ಕಣ್ಣು ಕಳೆದು ಕೊಂಡು ಕುರುಡನಾದರೆ ಲೋಕವನ್ನು ರಕ್ಷಿಸಬೇಕಾದ ಅವನಿಗೆ ಲೋಕವಾದರೂ ಗೋಚರಿ ಸುವದೆಂತು? ಹೀಗೆ ತಿಳಿದ ಆ ಕಿರಾತನು ತಾನು ಸ್ವತಃ ಕುರುಡನಾದರೂ ಚಿಂತೆಯಿಲ್ಲ ಶಿವನು ಲೋಕವನ್ನು ಕಾಣುವಂತಾಗಲೆಂದು ತನ್ನ ಕಣ್ಣುಗಳನ್ನೇ ಬಾಣದಿಂದ ಕಿತ್ತು ಆ ಶಿವಲಿಂಗಕ್ಕೆ ತೊಡಿಸಿ, ಬೇಟೆಗಾರನಾದ ಆ ಬೇಡನು ಕಣ್ಣಪ್ಪನೆಂದು ಹೆಸರಾದನು. ಇಂದು ವೈದ್ಯಕೀಯದಲ್ಲಿ ನಡೆದಿರುವ ನೇತ್ರದಾನ ಪದ್ಧತಿಗೆ ಅಂದು ಪೌರಾಣಿಕ ವ್ಯಕ್ತಿಯಾದ ವ್ಯಾಧ ಕಣ್ಣಪ್ಪನೇ ಅಡಿಗಲ್ಲು ಹಾಕಿದನೆಂದರೆ ತಪ್ಪಾಗಲಿಕ್ಕಿಲ್ಲ. ಇಂದು ಮರಣಾನಂತರ ಮೃತ ವ್ಯಕ್ತಿಯ ಕಣ್ಣುಗಳನ್ನು ಪಡೆದುಕೊಳ್ಳುತ್ತಿದ್ದರೆ, ಜೀವಂತನಾಗಿದ್ದಾಗಲೇ ಕಣ್ಣುಗಳನ್ನು ಕಿತ್ತುಕೊಟ್ಟ ಬೇಡರ ಕಣ್ಣಪ್ಪನ ಕೊಡುಗೆಯೇನು ಸಾಮಾನ್ಯವೇ?

ವಿಜಯನಗರ ಸಾಮ್ರಾಜ್ಯದ ಪತನಾನಂತರ ಕನ್ನಡ ನಾಡಿನಲ್ಲಿ ಅನೇಕ ಪಾಳೆಯಪಟ್ಟಗಳು ತಲೆಯೆತ್ತಿದ್ದವು. ಚಿತ್ರದುರ್ಗದ ಮದಕರಿ ನಾಯಕರು, ಸುರಪುರದ ವೆಂಕಟಪ್ಪನಾಯಕರು ಅಂಥಾ ಪಾಳೆಯಗಾರರಲ್ಲಿ ಪ್ರಮುಖರು. ಇವರ ದಂಡಿನಲ್ಲಿ ಬೇಡ ಸಮುದಾಯದವರೇ

ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರು ಅತ್ಯಂತ ಶೂರ-ವೀರರೂ, ಪ್ರಾಣದ ಹಂಗುತೊರೆದು ಹೋರಾಡುವ ಧೀರ ದಳವಾಯಿಗಳಾಗಿದ್ದರು. ಕದನ ಕಲಿಗಳಾಗಿದ್ದರು. ಸ್ವಾಮಿ ನಿಷ್ಠೆಯಲ್ಲಿ ಹೆಸರಾಗಿದ್ದರು. ತಮ್ಮ ಅಧೀನದಲ್ಲಿದ್ದ ಪಾಳೆಯಕ್ಕೆ ನಾಯಕರಾಗಿ ಅದನ್ನು ಆಳುವ ಒಡೆತನ ವನ್ನು ವಹಿಸಿಕೊಂಡುದರಿಂದಲೇ ಅವರಿಗೆ ನಾಯಕರು ಎನ್ನುವ ಹೆಸರು ರೂಢಿಯಾಗಿರಬಹು ದಾಗಿದೆ.

ಹೀಗೆ ಪೌರಾಣಿಕವಾಗಿ, ಐತಿಹಾಸಿಕವಾಗಿ ಲೋಕ ಕಲ್ಯಾಣಾರ್ಥವಾಗಿ ಅಹಿಂಸೆಯ, ಭಕ್ತಿಯ ಹಾಗೂ ಶೌರ್ಯದ ಅಮೂಲ್ಯ ಕೊಡುಗೆಯನ್ನು ನೀಡಿದ ಸಮುದಾಯ ಈ ಬೇಡ ಸಮುದಾಯದವರದು. ಇನ್ನು ಪಾಳೆಯಪಟ್ಟಗಳು ಕಾಲಾನಂತರದಲ್ಲಿ ತಮ್ಮ ಪ್ರಾಬಲ್ಯ ವನ್ನು ಕಳೆದುಕೊಂಡ ನಂತರ ಆಯಾ ಪಾಳೆಯದಲ್ಲಿ ಪಾಳೆಯಗಾರರ ಕೈ ಕೆಳಗೆ ಅಧಿಕಾರ ದಲ್ಲಿದ್ದ ಈ ಸಮುದಾಯದ ಕೆಲವು ಜನ ವರ್ಚಸ್ವೀ ಶ್ರೀಮಂತರೂ ಸ್ಥಿತಿವಂತರೂ ಪ್ರಮುಖರೂ ಆಗಿ ಉಳಿದರು. ಅಂಥವರಲ್ಲಿ ಕೆಲವರು ಕೆಲವೊಂದು ಗ್ರಾಮಸಮುದಾಯ ಗಳಿಗೆ ದೊರೆಗಳೋ ದೇಸಾಯರೋ ನಾಯಕರೋ ಎನ್ನುವ ಗೌರವ ಪಡೆದರು. ಅಂಥವರ ಮುನ್ನಿನ ಐತಿಹಾಸಿಕ ಚಾರಿತ್ರ್ಯವನ್ನೂ, ರಾಜಕೀಯ ಪ್ರಾಬಲ್ಯವನ್ನು ಗುರುತಿಸಿ ನಂತರ ಬಂದ ಬ್ರಿಟೀಷ್ ಸರ್ಕಾರವು ಅವರಿಗೆ ಬಿರುದು ಬಾವಲಿಗಳನ್ನಿತ್ತು ಭೂಮಿ ಕಾಣಿಯನ್ನು ನೀಡಿ ಜಹಗೀರು ಹಾಕಿ ಕೊಟ್ಟು ಅವರಿಗೆ ಮಾನ್ಯತೆ ನೀಡಿದರು. ಹಾಗೂ ಅವರನ್ನೂ ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು.

ಈ ರೀತಿಯಾಗಿ ಅಸ್ತಿತ್ವಕ್ಕೆ ಬಂದ ದೇಸಗತಿಗಳು, ಜಹಗೀರುಗಳು ಇಂದಿಗೂ ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿವೆ. ಇವರ ಅರಮನೆ, ವಾಡೆ, ದಿವಾನಖಾನೆಗಳಲ್ಲಿ ಹುಲಿ, ಸಿಂಹ, ಸಾರಂಗ ಮುಂತಾದ ಪ್ರಾಣಿಗಳ ಮುಖವಾಡಗಳೂ, ಖಡ್ಗ-ಢಾಲು, ಬಂದೂಕು ಮುಂತಾದ ಆಯುಧಗಳು ಗೋಡೆಯ ಮೇಲೆ ರಾರಾಜಿಸುತ್ತಿರುವುದನ್ನು ಇಂದಿಗೂ ಕಾಣಬಹು ದಾಗಿದೆ. ಇದು ಅವರು ಹೆಸರಾಂತ ಬೇಟೆಗಾರರಾಗಿದ್ದರೆನ್ನುವುದನ್ನೇ ಬಿಂಬಿಸುತ್ತದೆ.

ಕ್ರಿ.ಶ. ೧೮೫೭ರಲ್ಲಿ ಬ್ರಿಟೀಷ್ ಸರ್ಕಾರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಜಾರಿಗೊಳಿಸಿತು. ಇದರಿಂದಾಗಿ ಭಾರತೀಯರಾರೂ ಬ್ರಿಟೀಷ್ ಸರ್ಕಾರದ ಅನುಮತಿಯಿಲ್ಲದೆ ಯಾವ ಶಸ್ತ್ರಾಸ್ತ್ರ ಗಳನ್ನು ತಮ್ಮ ಬಳಿಯಲ್ಲಿಟ್ಟುಕೊಳ್ಳದಂತಾಯಿತು. ಕಂಪನಿ ಸರ್ಕಾರದ ಈ ಶಸ್ತ್ರಾಸ್ತ್ರ ನಿಯಂತ್ರಣದ ಹುಕುಂ ೧೮೫೭ರ ಸೆಪ್ಟೆಂಬರ ೧೧ರಂದು ಬೆಳಗಾವಿ ಮ್ಯಾಜಿಸ್ಟ್ರೇಟನ ಮೂಲಕ ಮುಧೋಳ ಸಂಸ್ಥಾನ ಸರ್ಕಾರಕ್ಕೆ ಬಂತು. ಯಾರ ಬಳಿಯಲ್ಲಿ ಆಯುಧಗಳಿವೆಯೊ ಅವರೆಲ್ಲಾ ತಮ್ಮ ಆಯುಧಗಳನ್ನು ಸರಕಾರದಿಂದ ಅನುಮತಿಯಿಲ್ಲದೆ ಬಳಕೆಯಲ್ಲಿಟ್ಟುಕೊಳ್ಳಬಾರದು ಎಂಬ ಕಾನೂನು ಹಲಗಲಿ ಗ್ರಾಮಕ್ಕೂ ಬಂತು.

ಹಲಗಲಿ ಗ್ರಾಮವು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನಲ್ಲಿರುವ ಒಂದು ಊರು. ಆ ಊರಿನಲ್ಲಿ ಬೇಡರ ಜನವಸತಿಯೇ ಹೆಚ್ಚು. ಅವರೆಲ್ಲಾ ಹೆಚ್ಚಾಗಿ ಬೇಟೆಗಾರರು. ಆದ್ದರಿಂದ ಆಯುಧಗಳೇ ಅವರಿಗೆ ಪ್ರಾಣವಾಗಿದ್ದವು. ಅವುಗಳನ್ನು ಬಿಟ್ಟು ಬದುಕುವ ದಾರಿಯೇ ಅವರಿಗಿರಲಿಲ್ಲ. ಸರ್ಕಾರದ ಹುಕುಮಿನಂತೆ ಆಯುಧಗಳನ್ನು ಒಪ್ಪಸದಿದ್ದರೆ ಅವರು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಈ ಕಾಯ್ದೆಯಿಂದಾಗಿ ಹಲಗಲಿಯ ಬೇಡರೆಲ್ಲಾ ಚಿಂತೆಗೀಡಾದರು. ಸಂಸ್ಥಾನದ ಕೆಲವರು ತಮ್ಮ ಆಯುಧಗಳನ್ನೊಯ್ದು ಮ್ಯಾಜಿಸ್ಟ್ರೇಟರಿಗೆ ಒಪ್ಪಿಸಿದರು. ಆದರೆ ಸ್ವಾಭಿಮಾನಿಗಳಾದ ಬಂಟ ಬೇಡರು ಇದಕ್ಕೆ ಒಪ್ಪಲಿಲ್ಲ. ಅವರಲ್ಲಿ ದಿಟ್ಟಧೀರ ಬಂಟರಾದ ಬಡಗಣ್ಣ, ಬಾಲಣ್ಣ, ಹಣಮಣ್ಣ ಹಾಗೂ ರಾಮಣ್ಣ ಎಂಬುವರು ಜೀವ ಹೋದರೂ ಹತ್ಯಾರಗಳನ್ನು ಒಪ್ಪಿಸಲಾರೆವೆಂದು ಸ್ಪಷ್ಟವಾಗಿ ಹೇಳಿ ಸರ್ಕಾರದ ಹುಕುಮನ್ನು ದಿಟ್ಟತನದಿಂದ ನಿರಾಕರಿಸಿದರು. ಊರಿನ ತಮ್ಮ ಸಮುದಾಯದವರನ್ನೆಲ್ಲ ಸೇರಿಸಿ ಬ್ರಿಟೀಷ್ ಸರ್ಕಾರದ ವಿರುದ್ಧ ಬಂಡಾಯವನ್ನೇ ಸಾರಿದರು.

ಇದನ್ನು ತಿಳಿದ ಬ್ರಿಟೀಷ್ ಸರ್ಕಾರ ೧೮೫೭ರ ನವೆಂಬರ್ ೨೯ರಂದು ರಾತ್ರಿ ಹೊತ್ತು ೨೦೦ ಕುದುರೆ ಸವಾರ ಸೈನಿಕರನ್ನು ಕಳಿಸಿ ಹಲಗಲಿಯ ಮೇಲೆ ದಾಳಿ ನಡೆಸಿತು. ಆದರೆ ಬೇಡರ ಪಡೆಯು ಬ್ರಿಟೀಷ್‌ರ ಈ ದಾಳಿಗೆ ಬಗ್ಗಲಿಲ್ಲ. ಧೈರ್ಯದಿಂದ ಹೋರಾಡಿದರು. ಬೇಡರ ಈ ಕೆಚ್ಚನ್ನು ಅರಿತು ಕರ್ನಲ್ ಸೆಟನ್‌ಕರನು ಹೆದರಿಕೊಂಡು ಹೆಚ್ಚಿನ ಸೈನ್ಯವನ್ನು ತರಸಿಕೊಂಡು ಹೋರಾಟ ಮುಂದುವರಿಸಿದನು. ಅದಕ್ಕೆ ಬೇಡರು ಹಿಂಜರಿಯಲಿಲ್ಲ. ಶೌರ್ಯ ದಿಂದ ಕಾದಿದರು. ಬೇಡರ ಹೊಡೆತಕ್ಕೆ ಬ್ರಿಟೀಷ್ ಅಧಿಕಾರಿ ವಿಲಿಯಮ್ ಹೇನ್ರಿ ಹೆವಲಾಕ್ ಎಂಬಾತನು

ಬಲಿಯಾದನು. ಇದರಿಂದ ತಲ್ಲಣಿಸಿದ ಇಂಗ್ರೇಜಿಯವರು ಮಧ್ಯರಾತ್ರಿಯಲ್ಲಿ ಊರಿಗೆ ಕೊಳ್ಳಿ ಇಟ್ಟರು. ಹಲಗಲಿ ಬೆಂಕಿಯಲ್ಲಿ ಹೊತ್ತಿ ಧಗಧಗಿಸಿ ಉರಿಯ ಹತ್ತಿತ್ತು. ಎಷ್ಟೋ ಜನ ಬೇಡ ಪಡೆಯ ವೀರರು ಬ್ರಿಟೀಷ್ ಸೈನ್ಯದ ಗುಂಡಿಗೆ ಬಲಿಯಾದರು. ಬ್ರಿಟೀಷ್ ಸೈನಿಕರು ಊರನ್ನು ಲೂಟಿ ಮಾಡಿದರು. ಬೇಡಪಡೆಯ ವೀರರನ್ನು ಬಂಧಿಸಿದರು. ಅವರಲ್ಲಿ ೧೯ ಜನರನ್ನು ೧೮೫೮ನೆಯ ಡಿಸೆಂಬರ ೧೧ರಂದು ಮುಧೋಳದಲ್ಲಿ ಸಂತೆ ಕೂಡುವ ಜಾಗೆಯಲ್ಲಿ ಗಲ್ಲಿಗೇರಿಸಿದರು. ಹಾಗೂ ಡಿಸೆಂಬರ ೧೪ರಂದು ೧೩ ಜನರನ್ನು ಹಲಗಲಿ ಅಗಸಿ ಮುಂದೆ ನಿರ್ದಯವಾಗಿ ಗಲ್ಲಿಗೇರಿಸಿದರು. ಹಲಗಲಿಯ ಜಡಗಣ್ಣ ಬಾಲಣ್ಣ ರಂಥ ಅನೇಕ ಬೇಡರ ವೀರರು ಆತ್ಮಗೌರವಕ್ಕಾಗಿ, ಸ್ವಾಭಿಮಾನಕ್ಕಾಗಿ, ಬ್ರಿಟೀಷ್ ಸೈನ್ಯ ದೊಂದಿಗೆ ಕೆಚ್ಚೆದೆಯಿಂದ ಹೋರಾಡಿ, ನೇಣಿಗೆ ಕೊರಳೊಡ್ಡಿದ ಈ ಬೇಡರ ಕೊಡುಗೆ, ಮುಂದಿನ ಸ್ವಾತಂತ್ರ್ಯ ಸಮರಕ್ಕೆ ನಾಂದಿಯಾಯಿತೆನ್ನಬಹುದು!

ಇದು ಸ್ವಾತಂತ್ರ್ಯ ಪೂರ್ವದ ಸಂಗತಿಯಾದರೆ ಸ್ವಾತಂತ್ರ್ಯ ನಂತರ ಅಸ್ತಿತ್ವಕ್ಕೆ ಬಂದ ಹಿಂದುಳಿದ ವರ್ಗದ ಆಯೋಗದಲ್ಲಿ ಈ ವಾಲ್ಮೀಕಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿದಾಗ ಇವರಿಗೆ ಸರ್ಕಾರದಿಂದ ಅನೇಕ ಸೌಲಭ್ಯಗಳು ಸಿಗಲಾರಂಭಿಸಿದವು. ವಿದ್ಯಾರ್ಥಿಗಳಿಗೆ ವೇತನ, ಸರ್ಕಾರಿ ಹಾಸ್ಟೇಲುಗಳಲ್ಲಿ ಉಚಿತ ಊಟ-ವಸತಿ, ಬೇಸಾಯಗಾರ ರಿಗೆ ಬ್ಯಾಂಕಿನಿಂದ ಸಾಲಸೌಲಭ್ಯ ಸಬ್‌ಸಿಡಿ ಹಾಗೂ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ. ಹೀಗೆ ಅನೇಕ ಬಗೆಯ ಲಾಭವನ್ನು ಪಡೆದು ವಾಲ್ಮೀಕಿ ಸಮುದಾಯದವರು ಕ್ರಮೇಣ ಪ್ರಗತಿಯತ್ತ ಹೆಜ್ಜೆ ಇಡಲಾರಂಭಿಸಿದರು.

ಸರ್ಕಾರದ ಹಾಸ್ಟೇಲುಗಳಲ್ಲಿದ್ದು, ಶುಲ್ಕ ವಿನಾಯಿತಿ ಪಡೆದು ವ್ಯಾಸಂಗ ಮಾಡಿ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದು ಪದವೀಧರರಾಗಿ, ಡಾಕ್ಟರೇಟ ಪಡೆದವ ರಾಗಿ ಸರ್ಕಾರಿ ಇಲ್ಲವೆ ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗ ಪಡೆದು, ಪ್ರೌಢಶಾಲೆಗಳಲ್ಲಿ ಉಪಾಧ್ಯಾಯರಾಗಿ, ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೇಸರು ಗಳಾಗಿ ಆಡಳಿತ ಇಲಾಖೆಯಲ್ಲಿ ಶಿಕ್ಷಣಾಧಿಕಾರಿಗಳಾಗಿ ಕೆಲಸ ಮಾಡುತ್ತ ಈ ವಾಲ್ಮೀಕಿ ಸಮುದಾಯದವರು ಲೋಕೋಪಯೋಗಿ ಕೊಡುಗೆಯನ್ನು ನೀಡುತ್ತಿದ್ದಾರೆ.

ಕೃಷಿಕರಾದವರು ಸರ್ಕಾರದಿಂದ ಸಾಲಸೌಲಭ್ಯ ಪಡೆದು ಆಧುನಿಕ ಪದ್ಧತಿಯ ಸುಧಾರಿಸಿದ ಕೃಷಿ ಪದ್ಧತಿಯನ್ನವಲಂಬಿಸಿ ನೀರಾವರಿ ಬೇಸಾಯ ಮಾಡುತ್ತ ಪ್ರಗತಿಪರ ರೈತರಾಗಿ ಇವರು ನೀಡುತ್ತಿರುವ ಕೊಡುಗೆಯೂ ಅಪಾರವಾದುದು. ಇದೇ ರೀತಿ ಸರ್ಕಾರದ ಸಾಲಸೌಲಭ್ಯದಿಂದ ತಾಂತ್ರಿಕ ಶಿಕ್ಷಣ ಪಡೆದು ಅನೇಕ ಎಂಜೀನಿಯರಿಂಗ್ ಪದವೀಧರರು ಸರ್ಕಾರಿ ನೌಕರಿಗೂ ಸೇರದೆ ಸ್ವಂತ ಫ್ಯಾಕ್ಟರಿಯನ್ನೋ, ಕಾರ್ಖಾನೇ, ಗ್ಯಾರೇಜನ್ನೋ ನಡೆಸುತ್ತ ಉದ್ದಿಮೆ ಕ್ಷೇತ್ರದಿಂದ ಕೊಡುಗೆ ನೀಡುತ್ತಲಿದ್ದಾರೆ. ಹೀಗೆ ವಾಲ್ಮೀಕಿ ಸಮುದಾಯದವರು ತಾವು ಪಡೆದ ಶಿಕ್ಷಣ, ಸಂಪಾದಿಸಿದ ಅನುಭವ ಜ್ಞಾನ ಹಾಗೂ ಪರಿಶ್ರಮದಿಂದ ಲೋಕೋಪಯೋಗಿ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ.

**ಬೀಳಗಿ ತಾಲೂಕು**

ಸಿದ್ದಾಪುರ ಬೀಳಗಿ ತಾಲೂಕಿನಲ್ಲಿ ಸಿದ್ದಾಪುರ ಗ್ರಾಮದಲ್ಲಿಯೇ ವಾಲ್ಮೀಕಿ ಸಮುದಾಯ ದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇಲ್ಲಿಯ ನಿಂಗಪ್ಪ ಅಂಟಿನ ಎಂಬುವರು ಅಪ್ಪಟ ಖಾದೀಧಾರಿಯಾಗಿ, ಗಾಂಧೀವಾದಿಗಳಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿ ಜೇಲಿಗೆ ಬಿದ್ದು, ಸ್ವಾತಂತ್ರ್ಯ ಯೋಧರಾಗಿ, ಸ್ವಾತಂತ್ರ್ಯಾ ನಂತರ ದಿವಂಗತರಾದರು. ಸ್ವಾತಂತ್ರ್ಯ ಕ್ಕಾಗಿ ಅವರು ನೀಡಿದ ಕೊಡುಗೆ ದೊಡ್ಡದಲ್ಲವೆ? ಅವರ ಪುತ್ರರಲ್ಲಿ ಈರ್ವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಈಗ ನಿವೃತ್ತರಾಗಿದ್ದಾರೆ. ಈ ಶಿಕ್ಷಣರೀರ್ವರ ಮಕ್ಕಳಲ್ಲಿ ಒಬ್ಬರು ಪ್ರೌಢಶಾಲಾ ಮುಖ್ಯೋಪಾಧ್ಯಾಯರಾಗಿ, ಇನ್ನೀರ್ವರು ಪ್ರೌಢಶಾಲಾ ಶಿಕ್ಷಕರಾಗಿದ್ದರೆ, ಇನ್ನೋರ್ವರು ಎಂ.ಬಿ.ಬಿ.ಎಸ್. ಡಾಕ್ಟರ್ ಆಗಿದ್ದಾರೆ. ಒಬ್ಬರು ರೇಲ್ವೆ ಇಲಾಖೆಯಲ್ಲಿದ್ದರೆ ಇನ್ನೋರ್ವರು ಬಿ.ಇ. ಎಂಜಿನೀಯರಾಗಿ ಊರಲ್ಲಿದ್ದುಕೊಂಡೇ ಸಮಾಜ ಸೇವೆ ಮಾಡುತ್ತಲಿ ದ್ದಾರೆ. ಇದೇ ಊರಿನ ವಡವಾಣಿಯವರ ಮನೆಯಲ್ಲಿ ಮೂವರು ಹಾಗೂ ಜೇವೋಜಿಯವರ ಮನೆಯಲ್ಲಿ ಮೂವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದಾರೆ. ಹೀಗೆ ಈ

ಊರಿನ ವಾಲ್ಮೀಕಿ ಸಮುದಾಯವು ಶಿಕ್ಷಣ ಕ್ಷೇತ್ರಕ್ಕೆ ತನ್ನ ಅಪಾರ ಕೊಡುಗೆಯನ್ನು ನೀಡಿದೆ. ಇಲ್ಲಿಯ ವಾಲ್ಮೀಕಿ ಯುವಕ ಸಂಘವು ತನ್ನ ಸಮುದಾಯದ ಅಭಿವೃದ್ಧಿಗಾಗಿ ಕಾರ್ಯ ಮಾಡುತ್ತಲಿದೆ. ಇಲ್ಲಿಯ ಸ್ತ್ರೀಶಕ್ತಿ ಸಂಘಕ್ಕೆ ವಾಲ್ಮೀಕಿ ಸಮುದಾಯದ ಮಹಿಳೆಯೇ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಲಿದ್ದಾರೆ. ಇಲ್ಲಿಯ ಭೀಮಪ್ಪ ಕೂಗಟ ಎಂಬವರು ಬೀಳಗಿ ಪಿ.ಎಲ್.ಡಿ. ಬ್ಯಾಂಕಿನ ಉಪಾಧ್ಯಕ್ಷರಾಗಿದ್ದಾರೆ.

**ತೆಗ್ಗಿ:** ಈ ಗ್ರಾಮವು ಬೀಳಗಿ ತಾಲೂಕಿನದಾಗಿದ್ದು ಇದು ವಾಲ್ಮೀಕಿ ಸಮುದಾಯ ದಿಂದಾಗಿ ವಿಶೇಷ ಮಹತ್ವ ಪಡೆದ ಗ್ರಾಮವಾಗಿದೆ. ಈ ತೆಗ್ಗಿ ಗ್ರಾಮವು ಬೇಡರ ಬಂಟನಾಗಿದ್ದ ಸಿಂದೂರ ಲಕ್ಷ್ಮಣನಿಗೆ ಆಶ್ರಯ ನೀಡಿದ್ದ ವೆಂಕಪ್ಪ ನಾಯಕರ ಊರು. ಕೆಲವು ಜನ ಸಾಹಿತಿ ಗಳು, ನಾಟಕಕಾರರು ವಸ್ತು ಸ್ಥಿತಿಯ ನಿಜವಾದ ಸಂಗತಿಯನ್ನರಿಯದೇ ವೆಂಕಪ್ಪ ನಾಯಕನೇ ಇಂಗ್ರೇಜಿಯವರಿಗೆ ಪಿತೂರಿಯಾಗಿ ಮೋಸದಿಂದ ಲಕ್ಷ್ಮಣನನ್ನು ಕೊಲ್ಲಿಸಿದನೆಂದು ಸಾಹಿತ್ಯ ಸೃಷ್ಟಿಸಿ, ವೆಂಕಪ್ಪ ನಾಯಕನ ಪಾತ್ರವನ್ನು ದೇಶದ್ರೋಹಿಯಂತೆ ಚಿತ್ರಿಸಿದ್ದಾರೆ. ಅವರದು ವಸ್ತುನಿಷ್ಠವಾದುದಲ್ಲ. ಇತಿಹಾಸಕ್ಕೆ ಬಗೆದ ಅಪಚಾರವದು. ವೆಂಕಪ್ಪನಾಯಕನ ಕೈ ಕೆಳಗಿನ ವರು ತಮ್ಮ ಒಡೆಯನಿಗೆ ತಿಳಿಯದಂತೆಯೇ ಇಂಗ್ರೇಜಿ ಸರ್ಕಾರದ ಅಧಿಕಾರಿಗಳೊಂದಿಗೆ ಶಾಮೀಲಾಗಿ ಲಕ್ಷ್ಮಣನ ಹತ್ಯೆ ಮಾಡಿದರೆಂಬುದಾಗಿ ತಿಳಿದು ಬರುತ್ತದೆ. ಈ ಹಂತಕರನ್ನು ಬಚಾವ ಮಾಡಲೋಸುಗ ಹತ್ಯೆಯ ಹೊಣೆಯನ್ನು ಬ್ರಿಟೀಷ್ ಸರ್ಕಾರವೇ ಹೊತ್ತು ಕೊಂಡದ್ದು ಇತಿಹಾಸ. ಲಕ್ಷ್ಮಣನ ಚರಿತ್ರೆಯಲ್ಲಿ ತೆಗ್ಗಿಯ ಹೆಸರು ದಾಖಲೆಯಾಗಿ ಉಳಿಯಿತು. ಯಾವುದೋ ಒಂದು ಅನಿಷ್ಟ ಪ್ರಸಂಗಕ್ಕೆ ಸಿಲುಕಿ, ಹುಟ್ಟಿದ ನಾಡನ್ನು ಬಿಟ್ಟು ಕನ್ನಡ ನಾಡಿಗೆ ಬಂದು, ಸರ್ಕಾರದ ಕಣ್ಣು ತಪ್ಪಿಸಿ ನಾಗರಾಳದ ಕಪ್ಪರ ಪಡಿಯಮ್ಮನ ಗುಡ್ಡದಲ್ಲಿ ನೆಲೆಮಾಡಿಕೊಂಡಿದ್ದು ಬಡವರನ್ನು ಶೋಷಣೆ ಮಾಡುತ್ತಿದ್ದ ನಿರ್ದಯಿ ಶ್ರೀಮಂತರ ಸಂಪತ್ತನ್ನು ಸುಲಿದು ತನ್ನ ತಾಯಿ-ಹೆಂಡತಿಗೆ ಕಳಿಸಲಾರದೇ ಇಲ್ಲಿಯೇ ಬಡಬಗ್ಗ ರಿಗೆ ಹಂಚುತ್ತ ಸಮಾಜವಾದಿ, ಸಮತಾವಾದಿಯಾಗಿ ನೀಡಿದ ಲಕ್ಷ್ಮಣನ ಕೊಡುಗೆಯು ಚಿರಸ್ಮರಣೀಯವಾದುದು! ಈ ತೆಗ್ಗಿ ಗ್ರಾಮದಲ್ಲಿ ಸಣಮನಿ ಎಂಬವರ ಒಂದೇ ಮನೆತನದಲ್ಲಿ ಒಬ್ಬರು ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನೀಯರಾಗಿ ಇನ್ನೊಬ್ಬರು ಪೋಲೀಸ ಇಲಾಖೆಯಲ್ಲಿ ಎಸ್.ಆಯ್. ಆಗಿದ್ದು ಸಾರ್ವಜನಿಕರಿಗೆ ತಮ್ಮ ಸೇವೆಯ ಕೊಡುಗೆ ನೀಡುತ್ತಲಿದ್ದಾರೆ. ಈ ಊರಲ್ಲಿ ಮಹರ್ಷಿ ವಾಲ್ಮೀಕಿ ಬಯಲು ರಂಗಮಂದಿರವಿದ್ದುದು ಇಲ್ಲಿಯ ವಾಲ್ಮೀಕಿ ಸಮುದಾಯದವರ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಾಕ್ಷಿಯಾಗಿದೆ.

**ಬಿಸನಾಳ:** ಬೀಳಗಿ ತಾಲೂಕಿನ ಈ ಬಿಸನಾಳ ಗ್ರಾಮದ ವಾಲ್ಮೀಕಿ ಸಮುದಾಯವು ರಾಜಕೀಯವಾಗಿ ವಿಶೇಷ ಗೌರವ ಪಡೆದುಕೊಂಡಿದೆ. ಮಂಡಲ ಪಂಚಾಯತಿಯ ಅಧ್ಯಕ್ಷ ಸ್ಥಾನ ಹಾಗೂ ತಾಲೂಕು ಪಂಚಾಯಿತಿಯ ಅಧ್ಯಕ್ಷಸ್ಥಾನ ಈ ಊರಿನ ವಾಲ್ಮೀಕಿ ಸಮುದಾಯಕ್ಕೆ ದೊರೆತದ್ದು ವಿಶೇಷ ಗೌರವವಾಗಿದೆ.

**ಜಾನಮಟ್ಟಿ:** ಬೀಳಗಿ ತಾಲೂಕಿನ ಜಾನಮಟ್ಟಿ ಗ್ರಾಮದಲ್ಲಿ ಚಿಗರಿ ಯಮನಪ್ಪ ಎಂಬಾತನು ಸಿಂಧೂರ ಲಕ್ಷ್ಮಣನಿಗೆ ಅತ್ಯಂತ ನಂಬಿಗಸ್ಥ ಒಡನಾಡಿಯಾಗಿದ್ದನು. ಲಕ್ಷ್ಮಣ ನನ್ನು ಸೆರೆ ಹಿಡಿಯಲು ಬರುತ್ತಿದ್ದ ಪೋಲೀಸರಿಗೆ ತಿಳಿಯದಂತೆ ಈ ಯಮನಪ್ಪನು ಲಕ್ಷ್ಮಣನಿಗೆ ಆಶ್ರಯ ನೀಡುತ್ತಿದ್ದನು. ಈ ಊರಿನವರೊಬ್ಬರು ಸಾರ್ವಜನಿಕ ಗ್ರಂಥಾಲಯದ ನಿರ್ದೇಶಕರಾಗಿದ್ದಾರೆ. ಕೆಲವು ಯುವಕರು ಭಾರತದ ಸೈನ್ಯ ಖಾತೆಯಲ್ಲಿ ಸೇವೆ ಸಲ್ಲಿಸುತ್ತಲಿ ದ್ದಾರೆ. ಇವರು ವಾಲ್ಮೀಕಿ ಸಮುದಾಯದವರು.

**ಕೊಪ್ಪ (ಎಸ್.ಕೆ.) :** ಬೀಳಗಿ ತಾಲೂಕಿನ ಈ ಕೊಪ್ಪ ಗ್ರಾಮದಲ್ಲಿಯು ವಾಲ್ಮೀಕಿ ಸಮುದಾಯದ ಜನರಿದ್ದಾರೆ. ಈ ಊರಿನ ವಾಲ್ಮೀಕಿ ಸಮುದಾಯದ ಮನೆತನಗಳಲ್ಲಿ ಬೂದಿಹಾಳ ಎನ್ನುವ ಮನೆತನದವರೇ ಐದು ಜನರು ವಕೀಲರಾಗಿದ್ದುದೊಂದು ವಿಶೇಷ. ಇವರಲ್ಲಿ ಒಬ್ಬರು ಹೈಕೋರ್ಟ ರಿಜಿಸ್ಟ್ರಾರ್ ಜನರಲ್‌ರಾಗಿದ್ದಾರೆ.

**ಗಿರಗಾಂವ:** ಈ ಊರಿನ ಪ್ರಗತಿಪರ ರೈತರಾದ ಸುರೇಂದ್ರನಾಯಕ ಎಂಬವರು ಒಂದು ಎಕರೆಗೆ ಅತೀ ಹೆಚ್ಚು ಕಬ್ಬನ್ನು ಬೆಳೆದು ಕೃಷಿ ಕ್ಷೇತ್ರದಲ್ಲಿ ದಾಖಲೆ ಮಾಡಿದ್ದಾರೆ. ವಾಲ್ಮೀಕಿ ಸಮುದಾಯದವರಾದ ಇವರು ಬೀಳಗಿಯಲ್ಲಿ ದ್ವಿಚಕ್ರವಾಹನದ ಶೋ-ರೂಮ್ ನಡೆಸು ತ್ತಿದ್ದು ತಾಲೂಕು ಮಟ್ಟದಲ್ಲಿ ಮಹರ್ಷಿ ವಾಲ್ಮೀಕಿ ಸಂಘವನ್ನು ಸ್ಥಾಪಿಸಿ ಅದಕ್ಕೆ ಅಧ್ಯಕ್ಷರಾಗಿ ತನ್ಮೂಲಕ ವಾಲ್ಮೀಕಿ ಸಮುದಾಯದಲ್ಲಿ ಜಾಗೃತಿ

ಹಾಗೂ ಅಭಿವೃದ್ಧಿಗಾಗಿ ಅನೇಕ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇವರು ಅಪ್ಪಾಜಿ ಮೆಮೋರಿಯಲ್ ಸ್ಕೂಲಿಗಾಗಿ ಸಂಸ್ಥೆ ಯೊಂದನ್ನು ಸ್ಥಾಪಿಸಿಕೊಂಡಿದ್ದು ಶಿಕ್ಷಣ ಪ್ರಸಾರಕ್ಕೆ ಅಣಿಯಾಗಿದ್ದಾರೆ. ಸಿಂಧೂರ ಲಕ್ಷ್ಮಣನ ಬಗ್ಗೆ ಅಪಾರ ಅಭಿಮಾನ ಹೊಂದಿರುವ ಇವರು ತಮ್ಮ ಮಹರ್ಷಿ ವಾಲ್ಮೀಕಿ ಸಂಘದ ಸರ್ವಸದಸ್ಯರೆಲ್ಲರೊಡಗೂಡಿ ಬೀಳಗಿಯಲ್ಲಿ ಸಿಂಧೂರ ಲಕ್ಷ್ಮಣನ ಸ್ಮಾರಕವನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ. ಇವರು ಬಾಗಲಕೋಟೆ ಎ.ಪಿ.ಎಂ.ಸಿ.ಯ ಅಧ್ಯಕ್ಷರಾಗಿದ್ದಾರೆ. ಚೆನ್ನಪ್ಪ ಬೀಳಗಿ, ಬೆನ್ನಪ್ಪ ಬೀಳಗಿ ತಾಲೂಕಿನ ಯಡಹಳ್ಳಿಯವರಾದ ಚೆನ್ನಪ್ಪ ಬೀಳಗಿ ಎಂಬವರು ಬಾಗಲಕೋಟೆ ಜಿಲ್ಲಾ ಪಂಚಾಯತಿಯ ಸದಸ್ಯರಾಗಿದ್ದಾರೆ. ಬೀಳಗಿಯಲ್ಲಿ ವಾಲ್ಮೀಕಿ ಸಮುದಾಯದವರದೇ ಒಂದು ಸಹಕಾರಿ ಕ್ರೆಡಿಟ್ ಸೊಸೈಟಿಯಿದೆ.

**ಬಾಗಲಕೋಟೆ ತಾಲೂಕು**

ಬಾಗಲಕೋಟೆ ಜಿಲ್ಲೆಯ ಕೇಂದ್ರ ಸ್ಥಳವಾದ ಇಲ್ಲಿ ವಾಲ್ಮೀಕಿ ಸಮುದಾಯದವರ ಮಹಿಳಾ ವಿವಿದೋದ್ದೇಶ ಸಹಕಾರ ಸಂಘವಿದ್ದು ಅದಕ್ಕೆ ಶ್ರೀಮತಿ ಶಾಮವ್ವ ಗೌಡರ ಎಂಬವರು ಅಧ್ಯಕ್ಷರಾಗಿದ್ದಾರೆ. ಇದೇ ತಾಲೂಕಿನ ವೀರಾಪೂರ ಗ್ರಾಮದ ಎಂಜಿನೀಯರ್ ಸುರೇಶ ಗೌಡರು ಈ ಸಂಘದ ಸಂಸ್ಥಾಪಕರು. ಬಾಗಲಕೋಟೆಯಲ್ಲಿ ಕರ್ನಾಟಕ ವಾಲ್ಮೀಕಿ ಸಂಘರ್ಷ ಸಮಿತಿಯು ಅಸ್ತಿತ್ವದಲ್ಲಿದ್ದು ಅಶೋಕ ಲೋಗಾಂವಿ ಎಂಬವರು ಕಾರ್ಯದರ್ಶಿ ಯಾಗಿ ವಾಲ್ಮೀಕಿ ಸಮುದಾಯದ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಭಗವತಿ:** ಬಾಗಲಕೋಟೆ ತಾಲೂಕಿನ ಈ ಭಗವತಿ ಗ್ರಾಮದಲ್ಲಿ ಹಣಮಂತ ವಾಲಿ ಎಂಬವರು ಸಬ್ ಟ್ರೇಝರಿ ಆಫೀಸರರಾಗಿದ್ದಾರೆ. ಯಮನಪ್ಪ ವಾಲಿಯವರು ಕಾಲೇಜ ಪ್ರೊಫೆಸರರಾಗಿದ್ದಾರೆ. ಮಲ್ಲಿಕಾರ್ಜುನ ವಾಲಿಯವರು ದೈಹಿಕ ಶಿಕ್ಷಣಾಧಿಕಾರಿಯಾಗಿದ್ದಾರೆ. ಇವರೆಲ್ಲರೂ ವಾಲ್ಮೀಕಿ ಸಮುದಾಯದ ಒಂದೇ ಮನೆತನದವರೆನ್ನುವದೊಂದು ವಿಶೇಷ.

**ಬಾದಾಮಿ ತಾಲೂಕು**

ಈ ತಾಲೂಕಿನಲ್ಲಿ ವಾಲ್ಮೀಕಿ ಸಮುದಾಯದವರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಬಾದಾಮಿಯವರಾದ ಕೆ.ಬಿ. ಲೆಂಕೆಣ್ಣನವರ ಎಂಬುವರು ಬೆಂಗಳೂರು ಹೈಕೋರ್ಟ್ ಜಡ್ಜರಾಗಿದ್ದಾರೆ. ಶ್ರೀಮತಿ ರೇಣುಕಾ ದಳವಾಯಿ ಎಂಬುವರು ಜಿಲ್ಲಾ ಪಂಚಾಯ್ತಿ ಸದಸ್ಯ ರಾಗಿದ್ದಾರೆ. ರಂಗನಗೌಡ ಎಂಬುವರು ತಾಲೂಕು ಪಂಚಾಯ್ತಿಯ ಉಪಾಧ್ಯಕ್ಷರಾಗಿದ್ದಾರೆ. ಆರ್.ಡಿ. ದಳವಾಯಿ ಎಂಬುವರು ವಾಲ್ಮೀಕಿ ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ. ಹಂಡಿಯವರು ಪುಲಿಕೇಶಿ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದಾರೆ. ಆರ್.ಟಿ.ದಿಬ್ಬದಮನಿ ಹಾಗೂ ನಾಯಕ ಎಂಬವರು ವಕೀಲರಾಗಿದ್ದಾರೆ.

ಇದೇ ತಾಲೂಕಿನ ಆಡಗಲ್ಲನವರು ಒಬ್ಬರು ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಎಂಜಿನೀಯರ್ ಆಗಿದ್ದಾರೆ. ಎಚ್.ಕೆ. ನಾಯಕ ಎಂಬುವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಜಾಯಿಂಟ್ ಡೈರೆಕ್ಟರ್‌ರಾಗಿದ್ದಾರೆ. ಊರಿನ ಹಲವರು ಶಾಲಾ ಶಿಕ್ಷಕರೂ ಆಗಿದ್ದಾರೆ. ಬಾಗಲಕೋಟ ಜಿಲ್ಲಾದಲ್ಲಿ ಬಾದಾಮಿ ತಾಲೂಕು ವಾಲ್ಮೀಕಿ ಸಮುದಾಯದ ಅತಿಹೆಚ್ಚು ಜನರನ್ನು ಹೊಂದಿರುವ ತಾಲೂಕಾಗಿದೆ.

**ಹುನಗುಂದ ತಾಲೂಕು**

**ಚಿಕ್ಕಯರನಕೇರಿ :** ಹುನಗುಂದ ತಾಲೂಕಿನ ಈ ಗ್ರಾಮದಲ್ಲಿ ವಾಲ್ಮೀಕಿ ಸಮುದಾಯ ದವರ ಹೊರತಾಗಿ ಬೇರೆ ಸಮುದಾಯದವರೇ ಇಲ್ಲ. ಇಡೀ ಗ್ರಾಮವೇ ವಾಲ್ಮೀಕಿ ಸಮುದಾಯದವರದಾಗಿದೆ. ಊರಿನ ಕೆಲವರು ನೌಕರಸ್ಥರಾಗಿದ್ದು, ಮೂವರು ಶಾಲಾ ಶಿಕ್ಷಕರಾಗಿದ್ದಾರೆ. ಒಬ್ಬರು ಪೋಲೀಸ ಇಲಾಖೆಯಲ್ಲಿ ಎ.ಎಸ್.ಆಯ್. ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

**ರಾಮಥಾಳ :** ಹುನಗುಂದ ತಾಲೂಕಿನ ರಾಮಥಾಳ ಗ್ರಾಮದಲ್ಲಿ ಅರ್ಧದಷ್ಟು ನಾಯಕ ಸಮುದಾಯದವರೇ ಇದ್ದಾರೆ. ಈ ಊರಿನ ಒಬ್ಬರು ಎಂಜಿನಿಯರಾಗಿದ್ದು ಇವರ ತಾಯಿ ಹಿಂದಿನ ಅವಧಿಯಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದರು.

**ಮುಧೋಳ ತಾಲೂಕು**

**ಹಲಗಲಿ :** ಮುಧೋಳ ತಾಲೂಕಿನ ಹಲಗಲಿಯು ಬೇಡರ ಊರೆಂದೇ ಹೆಸರಾಗಿದೆ. ನಿಶ್ಯಸ್ತ್ರೀಕರಣ ಕಾಯ್ದೆ ವಿರುದ್ಧ ಬ್ರಿಟೀಷ್ ಸೈನ್ಯದೊಂದಿಗೆ ಹೋರಾಡಿ, ಗಲ್ಲಿಗೇರಿದ ಜಡಗಣ್ಣ, ಬಾಲಣ್ಣ ಎನ್ನುವ ಬೇಡರ ಬಂಟರು ಇದೇ ಹಲಗಲಿಯವರು. ಬಂಡಾಯದ ಇತಿಹಾಸದಲ್ಲಿ ಹಗಲಿಯ ಹೆಸರು ಹಚ್ಚ ಹಸುರಾಗಿ ಉಳಿದಿದೆ. ಹಲಗಲಿಯಲ್ಲಿ ಪುರವಂತ ದಂಡಿನ ಎಂಬುವರು ಪೋಲೀಸ್ ಇಲಾಖೆಯಲ್ಲಿ ಎಸ್. ಆಯ್. ಆಗಿದ್ದಾರೆ. ತಳವಾರ ಎಂಬುವರು ಎಕ್ಸೈಜ್ ಇನ್‌ಸ್ಪೆಕ್ಟರರಾಗಿದ್ದಾರೆ. ಚನಬಸು ಹಿರಕನ್ನವರ ಎಂಬವರು ಪ್ರಗತಿಪರ ರೈತರಾಗಿದ್ದಾರೆ. ಬಸಪ್ಪ ಹಿರಕನ್ನವರ ಎಂಬುವರು ಮಂತ್ರದ ಮೂಲಕ ರೋಗ ವಾಸಿ ಮಾಡುವ ಜನಪದ ವೈದ್ಯರಿದ್ದಾರೆ. ಲಕ್ಷ್ಮಣ ದಂಡಿನ ಈತ ರಂಗಭೂಮಿಯ ಹೆಸರಾಂತ ನಟನಾಗಿದ್ದಾನೆ.

**ಮಂಟೂರ :** ಮುಧೋಳ ತಾಲೂಕಿನ ಮಂಟೂರ ಗ್ರಾಮದಲ್ಲಿಯೂ ವಾಲ್ಮೀಕಿ ಸಮುದಾಯದ ಜನಸಂಖ್ಯೆಯು ವಿಶೇಷವಾಗಿದೆ. ಇವರು ಕೃಷಿ ಕ್ಷೇತ್ರದಲ್ಲಿ ಪ್ರಗತಿ ಪರರೆನಿಸಿ ಕೊಂಡಿದ್ದಾರೆ. ಇಲ್ಲಿ ಮಹರ್ಷಿ ವಾಲ್ಮೀಕಿ ನಾಟ್ಯ ಸಂಘದ ಬಯಲು ರಂಗಮಂದಿರವು ವಾಲ್ಮೀಕಿ ಸಮುದಾಯದವರ ನಾಟ್ಯ ಕಲೆಗೆ ಸಾಕ್ಷಿಯಾಗಿ ನಿಂತಿದೆ.

**ಜಮಖಂಡಿ :** ತಾಲೂಕಿನ ಕೇಂದ್ರ ಸ್ಥಾನವಾದ ಈ ನಗರದಲ್ಲಿ ಸುಶಿಕ್ಷಿತ ವಿದ್ಯಾವಂತರ ಸಂಖ್ಯೆಯು ಹೆಚ್ಚಾಗಿದ್ದು ಸುಮಾರು ಮೂವತ್ತಕ್ಕೂ ಹೆಚ್ಚು ಜನ ವಾಲ್ಮೀಕಿ ಸಮುದಾಯ ದವರು ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಇಲ್ಲಿಯ ಎಲ್ಲ ಮನೆತನಗಳೂ ಆರ್ಥಿಕವಾಗಿ ಪ್ರಬಲವಾಗಿದ್ದು ವ್ಯಾಪಾರ, ವ್ಯವಸಾಯ ಹಾಗೂ ರಾಜಕೀಯದಲ್ಲೂ ವಿಶೇಷವಾಗಿ ನಿರತರಾಗಿದ್ದಾರೆ.

**ಬನಹಟ್ಟಿ :** ಬನಹಟ್ಟಿಯಲ್ಲಿ ವಾಲ್ಮೀಕಿ ಸಮುದಾಯದವರಿದ್ದು ಇಲ್ಲಿಯೂ ಈ ಸಮುದಾಯದವರು ಸುಶಿಕ್ಷಿತರಾಗಿದ್ದು ಸರ್ಕಾರಿ ನೌಕರಿಯಲ್ಲಿದ್ದಾರೆ.

**ನಾವಲಗಿ :** ತಾಲೂಕಿನ ನಾವಲಗಿ ಗ್ರಾಮದಲ್ಲಿಯೂ ವಾಲ್ಮೀಕಿ ಸಮುದಾಯದ ಜನಸಂಖ್ಯೆಯು ಹೆಚ್ಚಾಗಿದ್ದು; ಇಲ್ಲಿ ಸುಶಿಕ್ಷಿತ ಜನರಿದ್ದು ಕೆಲವರು ಸರ್ಕಾರಿ ನೌಕರಿಯಲ್ಲಿ ದ್ದಾರೆ. ಕೆಲವು ಮನೆತನದವರು ಆರ್ಥಿಕವಾಗಿ ಪ್ರಬಲರಾಗಿದ್ದಾರೆ.

**ಕೊಣ್ಣೂರ :** ಈ ಊರಿನಲ್ಲಿ ವಾಲ್ಮೀಕಿ ಸಮುದಾಯದ ಮನೆತನಗಳು ಹೆಚ್ಚಿನ ಸಂಖ್ಯೆ ಯಲ್ಲಿದ್ದು; ಕೆಲವೊಂದು ಮನೆತನಗಳು ಆರ್ಥಿಕವಾಗಿ ಪ್ರಬಲರಾಗಿದ್ದಾರೆ. ಕೆಲವರು ಸರ್ಕಾರಿ ನೌಕರಿಯಲ್ಲಿದ್ದಾರೆ.

**ಶಿರಗುಪ್ಪಿ :** ಈ ಗ್ರಾಮದಲ್ಲಿ ವಾಲ್ಮೀಕಿ ಸಮುದಾಯದವರು ಹೆಚ್ಚಾಗಿ ಸುಶಿಕ್ಷಿತರಾಗಿದ್ದು; ಇಲ್ಲಿಯ ಬಹಳಷ್ಟು ಜನರು ಸರ್ಕಾರಿ ಉದ್ಯೋಗಿಗಳಾಗಿದ್ದಾರೆ. ಹಲವಾರು ಮನೆತನಗಳವರು ಆರ್ಥಿಕವಾಗಿ ಪ್ರಬಲರಾಗಿದ್ದಾರೆ.

**ಜಕನೂರ :** ಈ ಗ್ರಾಮದಲ್ಲಿ ಹಲವಾರು ವಾಲ್ಮೀಕಿ ಸಮುದಾಯದವರ ಮನೆತನಗಳಿದ್ದು; ಕೆಲವರು ಸರ್ಕಾರಿ ನೌಕರಿಯಲ್ಲಿದ್ದಾರೆ. ಕೆಲವು ಮನೆತನಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿವೆ.

**ಆಲಗೂರ :** ಇಲ್ಲಿಯೂ ವಾಲ್ಮೀಕಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದು ಕೆಲವು ಮನೆತನಗಳು ಆರ್ಥಿಕವಾಗಿ ಸಬಲವಾಗಿವೆ ಕೆಲವರು ಸರ್ಕಾರಿ ನೌಕರಿಯಲ್ಲೂ ಇದ್ದಾರೆ.

ಇದು ಬಾಗಲಕೋಟೆ ಜಿಲ್ಲೆಯ ವಾಲ್ಮೀಕಿ ಸಮುದಾಯದ ಪಕ್ಷಿನೋಟವಾಗಿದ್ದು; ಈ ಸಮುದಾಯದವರು ಸಮಾಜ ವಿಕಾಸಕ್ಕಾಗಿ ಹಾಗೂ ಲೋಕೋಪಯೋಗಕ್ಕಾಗಿ ತಮ್ಮ ತಮ್ಮ ಪಾಲನ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ.

* * *

**ಹಲಗಲಿ ಬೇಡರು**

**೧ನೇ ನುಡಿ**
ಕೇಳುತ ಹುಕುಮಾ ಕೆಳವರ ತಂದ ಕೊಟ್ಟಾರ ಆವಾಗ
ಬಹಳ ಬೆಲಿವು ಹೆಚ್ಚಿನ ಹತಾರಾ ಮುಚ್ಚಿ ಇಟ್ಟರ ವೊಳಗ

ಸಾಲಸಮದ ಮಾಡಿ ದನ-ಕರ ಮಾರಿ ತಂದಿನ್ನಿ ಹಬ್ಬದಾಗ
ನೋಡ ನೋಡ ಹ್ಯಾಂಗೆ ಕೊಡುನ್‌ಅಂತ ಹುಗಿದ್‌ಇಟ್ಟರ ನೆಲದಾಗ

ಶೂರ ಚಟೆಗಾರು ಜಾಯಿತಸಾಹೇಬ ಬಂದಾರ ಆವಾಗ
ಸಂದಿಯಗೊಂದಿ ವೊಂದು ಉಳಿಯದ್ ಅಂಗ್ ಹೊಕ್ಕ ಹುಡಿಕೆರ ಮನಿಯಾಗ

ತೆಪ್ಪಿತ್‌ಉಪಾಯಿ ಇನ್ನ ಮಾತರ ಮಾಡುನ್‌ಅಂತರ ಹ್ಯಾಂಗ
ವೊಬ್ಬರಕ್ ಒಬ್ಬರ ಚ್ಯಾಡ ಹೇಳತರ ವರ್ಮ ಸಾಧಿಸಿದ್ ಹಾಂಗೆ ||ಚ್ಯಾಲ||
ಜ್ಯಾಡಿಸಿ ಹೋದವೊ ಯಲ್ಲಾ
ನಾಡ್ ಒಳಗೆ ಯೇನು ಉಳಿಲಿಲ್ಲಾ

ಅಜ್ಜ ಮುತ್ತೆರ ಹಿಡುವಪಿಸ್ತುಲ
ಕಾಸದ್‌ಓದರ ಕತ್ತಿಯ ಡಾಲಾ

ಕವಚ ಬೆಳ್ಳಿಯ ಮಕಮಾಲಾ
ರತ್ನದ ಹಿಡಿಕಿವ ಹೋದವು ಯೆಲ್ಲಾ ||ಯೇರಾ||
ಹೋದ ಹತಾರಕ ಹೊಟಿಬ್ಯಾನಿ ಹಚ್ಚಿಕೊಂಡ ನಿಂತರ ಸಾವುದಕ

## ೧೪. ನಂಬಿಕೆ, ವಿಧಿ-ನಿಷೇಧಗಳು

**ಪ್ರಾಸ್ತಾವಿಕ**

ಊರ ಸಂಸ್ಕೃತಿಗೆ ಒಗ್ಗಿಕೊಂಡು ಒಂದೆಡೆ ನೆಲೆಕಂಡುಕೊಂಡ ವಾಲ್ಮೀಕಿ-ಬೇಡರ ಗುಂಪು ಗಳು ಕೃಷಿ ಅವಲಂಬಿಸಿ ಬೇಟೆಗಾರಿಕೆ ಮತ್ತು ಪಶು ಪಾಲನೆಗಳನ್ನು ಪೂರಕ ವೃತ್ತಿಯಾಗಿಸಿ ಪರಿವರ್ತಿತರಾದರು. ಹೀಗಾಗಿ ಊರುಗಳಲ್ಲಿ ವಾಸವಾದಂದಿನಿಂದ ಕೃಷಿಯೇ ಅವರ ಮೂಲ ಆಧಾರ. ಕೃಷಿಗೆ ಪೂರಕವಾಗಿ ಪಶುಪಾಲನ ವೃತ್ತಿ. ಇದು ನಾಡಿನ ಕೃಷಿಗೂ ಮುಖ್ಯ ತಳಹದಿ. ದನಕರುಗಳಿಂದಲೇ ಗ್ರಾಮಜೀವನ. ಯಾಕೆಂದರೆ ಗೊಬ್ಬರ, ಪುಷ್ಟೀಕರಣದ ಆಹಾರ ಪಶು ಗಳಿಂದಲೇ. ಹೀಗಾಗಿ ಸಾಮಾನ್ಯಜನ ಪಶುಪಾಲನೆ ಮತ್ತು ರಕ್ಷಣೆಗಾಗಿ ಹೆಚ್ಚು ಗಮನಕೊಡು ತ್ತಿದ್ದರು. ಪ್ರಯುಕ್ತ ಕಾಡಿನೆಡೆಗೆ ಅವರ ನಡಿಗೆ. ಅಲ್ಲಿಂದ ಕಾಡನ್ನೇ ಅವಲಂಬಿಸಿದ ಕಟ್ಟಿಗೆ, ಬೇಟೆ ಪಾಶುಪಾಲನದಂತಹ ದೇಹಬಲ ಅವಲಂಬಿಸಿರುವ ಕಾರ್ಯಕದಲ್ಲಿ ತೊಡಗುವದು ಸರ್ವೇ ಸಾಮಾನ್ಯವಾಯಿತು. ಹೀಗೆ ಕಾಡಿನ ಕಟ್ಟಿಗೆ, ಬೇಟೆಗೆ ಬಳಸುವ ಜನಸಮೂಹದ ವೃತ್ತಿಯು ಜಾತಿಯಾಗಿ ಹೆಪ್ಪುಗಟ್ಟಿ ಅವರೊಂದು  ವಾಲ್ಮೀಕಿ ಬೇಡರು ಜಾತಿಯಾಗಿದ್ದಾರೆ. ಆ ಬೇಡ ಸಮುದಾಯದ ಮೂಲ ಎಲ್ಲಿ ಎಂದು ಕೆದಕುತ್ತಾ ಹೋದರೆ, ಬೇಡರಲ್ಲೇ ಎದ್ದು ಕಾಣುವ ವ್ಯಕ್ತಿತ್ವದ ವಾಲ್ಮೀಕಿಯೇ ಅವರ ಮೂಲ ಎಂಬುವುದೆಂದು ತೋರುತ್ತದೆ.

ಕ್ರಮೇಣ ಊರ ಇತರ ಸಮುದಾಯಗಳೊಂದಿಗೆ ಸಮನ್ವಯ ಹೊಂದಾಣಿಕೆಗಳನ್ನು ಮಾಡಿಕೊಂಡ ಗುಂಪುಗಳು ಗ್ರಾಮ-ನಗರ-ಪಟ್ಟಣ ಹೀಗೆ ನೆಲಸಿದೆಡೆಯಲ್ಲಿ ಪ್ರಾದೇಶಿಕ, ಸಾಮಾಜಿಕ, ಸಂಸ್ಕೃತಿಯನ್ನು ರೂಪಿಸಿಕೊಂಡು ಕರ್ನಾಟಕದ ಬಾಗಲಕೋಟೆ ಪರಿಸರದಲ್ಲಿ ವಾಲ್ಮೀಕಿ-ಬೇಡ, ನಾಯಕ ಜಾತಿಯವರೆಂಬ ಹೆಸರಿನಿಂದ ಹೇರಳವಾಗಿ ನೆಲೆಯೂರಿದ್ದಾರೆ. ಇವತ್ತಿಗೂ ಈ ಬುಡಕಟ್ಟಿನ ಸಂತತಿಯವರು ತಮ್ಮ ಮೂಲದ ಭಾಷೆ,ವೇಷ, ರೂಪ, ದೈವ ಮತ್ತು ಆಚಾರ ವಿಧಿ-ವಿಧಾನಗಳೊಂದಿಗೆ ಇತರ ಸಮುದಾಯದ ಆಚರಣೆಗಳನ್ನು ಪಾಲಿಸತೊಡಗಿದರು.

**ಅಧ್ಯಯನದ ಉದ್ದೇಶ**

ಮನುಷ್ಯ ಲೋಕದಲ್ಲಿ ಕುಲ, ಜಾತಿ, ಜನಪದ, ರಾಜ್ಯ ಮೊದಲಾದ ವಿಭಾಗಗಳಿವೆ. ಈ ವಿಭಾಗಗಳು ಮೊದ-ಮೊದಲು ಪ್ರಕೃತಿಸಿದ್ಧವಾದ ಕಾರಣಗಳಿಂದ ಉಂಟಾದವು. ಭೂಗುಣ, ವಾಯುಗುಣಗಳು ಜನರ ದೇಹ ಸ್ವಭಾವವನ್ನು, ಮನಃ ಪ್ರವೃತ್ತಿಯನ್ನು ರೂಪ ಗೊಳಿಸಿರುತ್ತವೆ. ಅನಂತರ ಅವರ ಮತ ವಿಶ್ವಾಸಗಳು ಅವರ ಮನೋ ವೃತ್ತಿಯನ್ನು ತಿರುಗಿ ಸುತ್ತವೆ. ಅವರ ಆರ್ಥಿಕ ಪರಿಸ್ಥಿತಿ, ಉದ್ಯೋಗ ಸಂದರ್ಭಗಳು ಅವರ ಶೀಲಸ್ವಭಾವವನ್ನು ತಿದ್ದುತ್ತೆ. ನಾನಾ ಸಮುದಾಯಗಳಲ್ಲಿ ನಾನಾ ಆಚಾರಗಳು ವ್ಯವಹಾರ ಪದ್ಧತಿಗಳು ನೆಲೆ ಗೊಂಡಿರುತ್ತವೆ.

ಈ ಆಚಾರ ಪದ್ಧತಿಗಳು ಜೀವನದ ಮೇಲೆ ಇಂದು ಅಧಿಕಾರ ನಡೆಸುತ್ತಿವೆ. ಇಂತಹ ವಿಷಯಗಳಲ್ಲಿ ನಾವು ಚಿಕಿತ್ಸಕ ಬುದ್ಧಿಯನ್ನು ಇರಿಸಿಕೊಳ್ಳಬೇಕಾಗುತ್ತದೆ.

ಪ್ರಸ್ತುತ ನಮ್ಮ ಹಿಂದಿನ ತಲೆಮಾರಿನ ಜನಪರ ಆಚರಣೆಗಳು ಜನಸಮೂಹದಲ್ಲಿ ಈಗಲೂ ಪ್ರಚಲಿತದಲ್ಲಿದ್ದು, ಆ ಹಿನ್ನೆಲೆಯಲ್ಲಿ ನಂಬಿಕೆಗಳು, ವಿಧಿ-ನಿಷೇಧಗಳು ಈಗಲೂ ತೀರ್ಮಾನಬದ್ಧವೇ? ಆ ಜನರ ಮನಸ್ಸು, ಅವರ ತರ್ಕ ಆಚರಣೆಗಳ ಹಿನ್ನೆಲೆ, ಕಟ್ಟಿದ ಗುಡಿ ಗೋರಿಗಳು ಅವರ ಮೇಲೆ ಬಲವಾಗಿ ಹಿಡಿತವಿರಿಸಿ ಹೇಗೆ ಬೆಳೆದುಬಂದಿವೆ? ಇಂದಿನ ನಮ್ಮ ಮತಗಳು ಹೇಗೆ ನಿನ್ನಿನ ಈ ನಂಬಿಕೆಗಳಿಂದ ಉತ್ಪನ್ನವಾಗಿವೆ ಎಂಬುದನ್ನು ಗುರುತಿ ಸುವುದು ಅವಶ್ಯ. ಈ ದಿಶೆಯಲ್ಲಿ ಬಾಗಲಕೋಟೆ ಪರಿಸರದಲ್ಲಿ ವಾಲ್ಮೀಕಿ ಸಮುದಾಯದ ಆಚರಣೆಗಳ ನೆಲೆಯಲ್ಲಿ ನಂಬಿಕೆ, ವಿಧಿ-ನಿಷೇಧಗಳನ್ನು ತಿಳಿಯುವದು ಈ ಅಧ್ಯಯನದ ಉದ್ದೇಶವಾಗಿದೆ.

**ವಾಲ್ಮೀಕಿ ಸಮುದಾಯದ ನಂಬಿಕೆಗಳು, ವಿಧಿ–ನಿಷೇಧಗಳು**

ಆಂಗ್ಲ ಕವಿ ಜಾನ್‌ಡೆನ್ ಹೇಳುವಂತೆ ಯಾವೊಬ್ಬ ಮಾನವನೂ ದ್ವೀಪವಲ್ಲ ಎಂಬಂತೆ, ಇಬ್ಬರು ಅಥವಾ ಅದಕ್ಕೂ ಹೆಚ್ಚು ಹೆಚ್ಚು ಜನರ ನಡುವೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷ ವಾಗಿ ಸಂಪರ್ಕ ಸಂಬಂಧಗಳು ಏರ್ಪಟ್ಟು ಅವರುಗಳ ನಡುವೆ ಕ್ರಮಬದ್ಧವಾದ ಅಂತಃಕ್ರಿಯೆ ಅಥವಾ ಒಡನಾಟಗಳು ಆರಂಭವಾದಾಗ ಸಮುದಾಯ ಸ್ಥಾಪನೆಗೆ ವೇದಿಕೆ ಸಿದ್ಧವಾಗು ವುದು

ಈ ಸಮುದಾಯ ಕೆಲವು ವಿಷಯ, ವಿಚಾರ ಅಥವಾ ವಸ್ತುಗಳಿಗೆ ಸಂಬಂಧಿಸಿದಂತೆ ಸತ್ಯವೆಂದು ಭಾವಿಸಿ ಸ್ವೀಕರಿಸಲು ಅಣಿಯಾಗುವರು. ಅದನ್ನು ನಂಬಿಕೆ ಎನ್ನುವರು. ಆದರೆ ಪ್ರತ್ಯಕ್ಷ ಅನುಭವದ ದೃಷ್ಠಿಯಿಂದ ಅವು ಸತ್ಯವಿರಬಹುದು ಅಥವಾ ಅಸತ್ಯವಿರಬಹುದು.

ಹೀಗೆ ತಮ್ಮದೇ ಆದ ನಂಬಿಕೆಗಳನ್ನು ಸೃಷ್ಠಿಸಿಕೊಂಡು ಬಂದ ಜನ ನಂಬಿಕೆಗಳನ್ನು ಆಚರಿಸುತ್ತಾ ತಮ್ಮ ಮುಂದಿನ ತಲೆಮಾರಿಗೆ ವರ್ಗಾಯಿಸುತ್ತಾ ಅವರಲ್ಲಿ ನಡತೆಯಾಗಿ ಮಾರ್ಪಟ್ಟಿತು. ಮುಂದೆ ತಮ್ಮ ನಡತೆಯ ಬಗೆಗಿನ ಸಮೂಹದ ನಿರೀಕ್ಷೆಗಳು, ನಿಯಮ, ವಿಧಿಗಳಾಗಿ ಪರಿಣಮಿಸಿದವು.

ವಿಧಿಗಳೆಂದರೆ ಸಮೂಹದ ಸದಸ್ಯರುಗಳಿಗೆ ಅವರ ನಡತೆಯ ನೀಲಿನಕಾಶಗಳಾದವು. ತರುವಾಯ ವಿಧಿಗಳಿಗೆ ಸಹಾಯಕವಾಗಿ ನಿಷೇಧಗಳು ಹುಟ್ಟಿಕೊಂಡು ಸಾಮಾಜಿಕ ನಿಯಂತ್ರಣ ಗಳಿಗೆ ಕಾರಣವಾದವು.

ಸಮುದಾಯದ ಐಕ್ಯಮತ್ಯ ಹಾಗೂ ನಿರಂತರತೆಯನ್ನು ಸಾಧಿಸುವದರೊಂದಿಗೆ ಸಾಮಾಜಿಕ ಅನುವರ್ತನೆಯನ್ನು ಕಾಯ್ದುಕೊಳ್ಳುವುದು ನಿಷೇಧದ ಕಾರ್ಯವಾಯಿತು.

ವ್ಯಕ್ತಿಗಳ ಅಪವರ್ತನೆಯನ್ನು ನಿಯಂತ್ರಿಸುವ ಸಾಧನವೇ ನಿಷೇಧ. ಇದು ವ್ಯಕ್ತಿಯ ನಿಯಮಿತವಾದ ಹಾಗೂ ನಿರೀಕ್ಷಿತವಾದ ರೀತಿಯಲ್ಲಿ ವರ್ತನೆ ಸಾಗುವಂತೆ ಮಾಡುವುದು.

ಹೀಗೆ ಎಲ್ಲಾ ಸಮೂಹಗಳ ಆಚರಣೆಯ ನಂಬಿಕೆ, ವಿಧಿ-ನಿಷೇಧಗಳೊಂದಿಗೆ ಮೇಳೈಯಿಸಿ ಕೊಂಡು ಬಂದ ವಾಲ್ಮೀಕಿ ಸಮುದಾಯ ತನ್ನ ಸಮುದಾಯದ ಆಚರಣೆಗಳ ನೆಲೆಯಲ್ಲಿ ನಂಬಿಕೆ, ವಿಧಿ-ನಿಷೇಧಗಳಲ್ಲಿ ಜೀವಂತಿಕೆಯನ್ನಿರಿಸಿಕೊಂಡು ಬಂದಿರುವುದನ್ನು ನೋಡ ಬಹುದು.

ವಾಲ್ಮೀಕಿ ಸಮುದಾಯವು ಅನೇಕ ಸಮುದಾಯಗಳೊಂದಿಗೆ ಸಾಮಾಜಿಕ, ಧಾರ್ಮಿಕ ನಂಬುಗೆಗಳು, ವಿಧಿ-ನಿಷೇಧಗಳಿಗೆ ಸಂಬಂಧಿಸಿದಂತೆ ಸಹಸಂಬಂಧಗಳನ್ನು ಹೊಂದಿದ್ದರೂ, ಕೆಲವೊಂದು ವಿಶಿಷ್ಟವಾದ ನಂಬಿಕೆ, ವಿಧಿ-ನಿಷೇಧಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

**ಸಾಮಾಜಿಕ ನಂಬಿಕೆಗಳು, ವಿಧಿಗಳು**

ವಾಲ್ಮೀಕಿ ಸಮೂಹದಲ್ಲಿ ಸಾಮಾಜಿಕ ನಂಬುಗೆ ಹಾಗೂ ವಿಧಿಗಳು ಸಾಮಾಜಿಕ ಜೀವನದ ಮೇಲೆ ತುಂಬಾ ಪ್ರಭಾವ ಬೀರುವಂತಾಗಿವೆ. ಈ ಸಾಮಾಜಿಕ ನಂಬುಗೆ, ವಿಧಿಗಳೇ ಇಲ್ಲದಿರು ತ್ತಿದ್ದರೆ. ಮಾನವರು ಇಂದು ಸಮೂಹ ಜೀವನವನ್ನು ನಡೆಸುವದೇ ಸಾಧ್ಯವಾಗುತ್ತಿರಲಿಲ್ಲ, ಮಾತ್ರವಲ್ಲ ಜೈವಿಕ ಅಸ್ತಿತ್ವಕ್ಕೆ ಸಂಚಕಾರ ಬರುತ್ತಿತ್ತು. ವಾಲ್ಮೀಕಿ ಸಮೂಹದ ಮೇಲಿನ ವ್ಯಕ್ತಿಗಳ ಅವಲಂಬನೆಯು ಸಮೂಹದ ನಂಬುಗೆ, ವಿಧಿಗಳ ಮೇಲಿನ ಅವಲಂಬನೆಯೇ ಆಗಿದೆ. ಸಾಮಾಜಿಕ ಜೀವನದ ಎಲ್ಲಾ ಸಂದರ್ಭಗಳಲ್ಲೂ ನಂಬುಗೆ, ವಿಧಿಗಳು ವಾಲ್ಮೀಕಿ ಜನರ ನಡತೆಗೆ ಮಾರ್ಗದರ್ಶನವಾಗಿದ್ದು ಅವುಗಳ ಪಟ್ಟಿ ಈ ಕೆಳಗಿನಂತಿದೆ.

**ಬೇಟೆ**

ವಾಲ್ಮೀಕಿ-ಬೇಡ ಕುಲದಲ್ಲಿ ಹುಟ್ಟಿದ ಮೇಲೆ ವರ್ಷದಲ್ಲಿ ಒಂದು ದಿನವಾದರೂ ಬೇಟೆ ಯಾಡಲೇಬೇಕು.

ಬೇಟೆಯಾಡಿದರೆ ಕೇವಲ ಕೆಲವೇ ಕಾಡುಪ್ರಾಣಿಗಳಾದ ಜಿಂಕೆ, ಮೊಲ, ಹಾಗೂ ಕೌಜುಗ ಬುರ್ಲಿಗಳನ್ನು ಮಾತ್ರ ಆಡಬೇಕು.

ಗಾಳಿಬೀಸುವ ಎದುರು ದಿಕ್ಕಿನಲ್ಲಿ ಬೇಟೆಯಾಡಿದರೆ ಬೇಟೆ ತಪ್ಪಿಸಿಕೊಳ್ಳುವದಿಲ್ಲವೆಂಬ ನಂಬಿಕೆ ಇದೆ.

ಬೇಟೆಯ ಬಡಿಗೆಗೆ ಆರಿಯ ತಪ್ಪಲವನ್ನು ತಿಕ್ಕುವದರಿಂದ ಬೇಟೆ ಬೇಗ ಸಿಗುವದೆಂಬ ನಂಬಿಕೆ.

ಬೇಟೆಯಲ್ಲಿ ಯಾರು ಬೇಟೆಯನ್ನು ಎತ್ತಿಹಿಡಿಯುವರೋ ಅವರದೇ ಬೇಟೆ ಎಂಬ ನಿಯಮವಿದೆ.

ಗುಡ್ಡದ ಮೇಲಿನಿಂದ ಇಳಿಯುವ ಮೊಲ/ಜಿಂಕೆಗಳ ಹೆಜ್ಜೆಯ ಮಣ್ಣು, ತಿಪ್ಪೆಯಲ್ಲಿನ ಹುಲ್ಲಿನ ಕಸಬರಗಿಯ ಗರಿಗಳು, ಮೂರು ಹಾದಿಗಳು ಕೂಡಿದ ಮಣ್ಣು, ರಂಡೆ-ಮುಂಡೆ ಹೆಣ್ಣುಮಕ್ಕಳು ಉಂಡು ಬಿಸಾಡಿದ ಎಲೆ, ಗಂಜಿತಪ್ಪಲು ಒಡೆಯನ ತಪ್ಪಲು/ಕಟ್ಟಿಕೆ ಕೌಡಿಲೋಬಾನ ಇವೆಲ್ಲವುಗಳನ್ನೂ ಮೂರು ಹಾದಿಗಳು ಸೇರುವ ಸ್ಥಳದಲ್ಲಿ ಬೆಂಕಿಯನ್ನು ಹೊತ್ತಿಸಿ ಅದರ ಮೇಲೆ ಬೇಟೆಗಾರ, ಬೇಟೆನಾಯಿ, ಬಂದೂಕು, ಬೇಟೆಯಾಡುವ ಬಲಿ, ಇತ್ಯಾದಿಗಳನ್ನು ತೆಗೆದುಕೊಂಡು ಹೋದರೆ ಬೇಟೆ ಸಿಗುವದೆಂಬ ನಂಬಿಕೆ.

ಗುಡ್ಡ ಹತ್ತಿದ ಮೊಲ/ಜಿಂಕೆಗಳ ಹೆಜ್ಜೆ ಮಣ್ಣನ್ನು ತೆಗೆದುಕೊಂಡು ತಮ್ಮ ವಸ್ತ್ರ ಅಥವಾ ಧೋತಿಯ ಚುಂಗಿನಲ್ಲಿ ಅಥವಾ ಮನೆಯಲ್ಲಿ ಕಟ್ಟಿದರೆ ಆ ಬೇಟೆಗಳು ಬೇರೆ ಬೇಟೆಗಾರರಿಗೆ ಸಿಗುವುದಿಲ್ಲ ಎಂಬ ನಂಬಿಕೆ ಇದೆ.

ಬೇಟೆಯ ಕರಿಯನ್ನು ತರದೆ ಊರಿಗೆ ಬರಬಾರದೆಂಬ ನಂಬಿಕೆ ಇದೆ.

**ವಾಲ್ಮೀಕಿ–ಬೇಡರ ಬೇಟೆಯ ಧರ್ಮ**

ಬೇಟೆಗಾರ ಬೇಡ, ನಾಯಕರು ನೀರು-ಆಹಾರ ಸೇವಿಸುವ ಹಾಗೂ ಮಲಗಿರುವ ಪ್ರಾಣಿಗಳನ್ನು ಎಚ್ಚರಿಸಿ, ಎಬ್ಬಿಸಿ ಬೇಟೆಯಾಡುವದು ಧರ್ಮ ಎಂಬ ನಂಬಿಕೆಯುಳ್ಳವ ರಾಗಿರುತ್ತಾರೆ.

**ಬೇಟೆ ಪಂಚಪ್ರಾಣ**

ಬ್ಯಾಡ ಹಡದು ಬೇಲಿ ಮೇಲೆ ಎಸೆದ, 'ನಾಯಕಗ ಯಾಕ ಬೇಕು ನಾಲ್ಕು ಎತ್ತು' ಅಮೃತ ಕೊಟ್ಟರೂ ಬೇಟೆ ಕಂಡರೆ ಬಿಡೆನು, ಎಂಬ ಮಾತುಗಳು ಬೇಟೆ ಎಂದರೆ ಪಂಚಪ್ರಾಣ ಎಂಬುದನ್ನು ತೋರಿಸುತ್ತದೆ.

**ಬೇಟೆಗಾರನ ಚುಕ್ಕೆ**

ಮೂರು ತಾಸಿನ ಚುಕ್ಕೆ (ಶುಕ್ರಗ್ರಹ) ಅಂದರೆ ಸೂರ್ಯ ಮುಳುಗಿದ ತರುವಾಯ ಮೂರು ತಾಸಿನವರೆಗೂ ಇರುವ ಚುಕ್ಕೆ ಮುಳುಗುವುದರೊಳಗಾಗಿ ಬೇಟೆಯಾಡಬೇಕು.

ಮೂರು ತಾಸಿನ ಚುಕ್ಕೆ ಇರುವದರೊಳಗಾಗಿ ಬೇಟೆಯಾಡಿದರೆ ಬೇಟೆ ಅತ್ಯಂತ ಯಶಸ್ವಿ. ಹಾಗೂ ಯಾವ ತೊಂದರೆ ಇಲ್ಲದೇ ಸರಾಗವಾಗಿ ನಡೆಯುವದೆಂಬ ನಂಬಿಕೆ.

ಮೊಲಕ್ಕಾಗಿ ಬೆಳಗಿನ ಜಾವ ಬೆಳ್ಳಿ ಚುಕ್ಕೆ (ಶುಕ್ರ) ಜಿಗಿದ ಮೇಲೆ ಸೂರ್ಯೋದಯ ದವರೆಗಿನ ಬೇಟೆಯಾಡಿದರೆ ಬೇಟೆ ಯಶಸ್ವಿ ಎಂಬ ನಂಬಿಕೆ

**ಬಣ್ಣ**

ಹಳದಿ ಬಣ್ಣ ಶುಭ ಸಂಕೇತವೆಂದೂ, ಕರಿಯಬಣ್ಣ ಅಶುಭವೆಂದೂ ನಂಬಿಕೆ ಇದೆ.

ಬೇಟೆಗೆ ಹೋಗುವಾಗ ಮತ್ತು ಬರುವಾಗ 'ಹಳದಿ' ಬಣ್ಣವನ್ನು ಪರಸ್ಪರ ಎರಚಾ ಡುವರು.

**ನಾಮ**

ಹಣೆಯ ಮೇಲೆ ಉದ್ದ ಗಂಧದ ನಾಮವನ್ನು ಧರಿಸಿದರೆ ಶುಭ ಸಂಕೇತವೆಂಬ ನಂಬಿಕೆ ಇದೆ.

**ಹಕ್ಕಿ ಪಕ್ಷಿಗಳು ಪ್ರಾಣಿಗಳು**

ಯಾರ ಮನೆಯ ಹತ್ತಿರ ಹಾಲಕ್ಕಿ ಒಂದು ಬಾರಿ ಕೂಗುತ್ತದೆಯೋ ಆ ಮನೆಯಿಂದ ಹೊರಗೆ ಹೋದ ವ್ಯಕ್ತಿ ಸೂಸೂತ್ರವಾಗಿ ಬರಲು ಸಾಧ್ಯವಿಲ್ಲವೆಂಬ ನಂಬಿಕೆ.

ಯಾರ ಮನೆಯ ಹತ್ತಿರ ಹಾಲಕ್ಕಿ ಎರಡುಬಾರಿ ಕೂಗುವದೋ ಅವರ ಕೆಲಸಗಳಿಗೆ ಜಯ ಸಿಗುವದೆಂಬ ನಂಬಿಕೆ.

ಸಾಂಬಾರ ಕಾಗೆ, ಮುಂಗಲಿ, ನರಿ ಕಂಡರೆ ಶುಭವೆಂದೂ ಬೆಕ್ಕು ಅಶುಭವೆಂದು ನಂಬಿಕೆ.

ಟಿವ್ವಕ್ಕಿ, ಗೂಬೆ ಮನೆಯ ಹತ್ತಿರ ಕೂಗಿದರೆ ಆ ಮನೆಯಲ್ಲಿ ಕೇಡಾಗುವದೆಂಬ ನಂಬಿಕೆ ಇದೆ.

ಕಾಗೆಗಳ ಮೈಥುನವನ್ನು ನೋಡಿದ ವ್ಯಕ್ತಿಗೆ ಸಾವು ಬರುವದೆಂಬ ನಂಬಿಕೆ.

**ಮುತ್ತೈದೆ**

ಕಿವಿ, ಕಣ್ಣು, ಮೂಗು ಇತರ ಅಂಗಾಂಗಗಳು ಊನವಾದ ವ್ಯಕ್ತಿಗಳಿಗೆ ಮುತ್ತೈದೆಯರು ಮದುವೆ ಮಾಡಿದರೆ ಅವರ ಕುಲದಲ್ಲಿ ದೋಷವಾಗುವದೆಂಬ ನಂಬಿಕೆ.

**ಸ್ತ್ರೀಯರು**

ಸ್ತ್ರೀಯರು ದುಂಡು ಕುಂಕುಮ ಬೊಟ್ಟನ್ನು ಹಚ್ಚುವುದು ವಾಡಿಕೆ.

ಸ್ತ್ರೀಯರು ಮೂಗಿನ ಎಡಕ್ಕೆ ಮೂಗೂತಿ ಧರಿಸುವುದು ವಿಧಿಯಾಗಿದೆ.

**ಹೊಸದಟ್ಟಿ ಹಳೆದಟ್ಟಿ ಪರಂಪರೆ**

ಕನ್ನೆಯನ್ನು ವರನಿಗೆ ಗಟ್ಟಿಮಾಡುವ ಪ್ರಸಂಗಗಳಲ್ಲಿ ಕೆಲವರು ಕನ್ಯೆಗೆ ಹೊಸ ಸೀರೆಯಲ್ಲಿ ಉಡಿ ತುಂಬಿದರೆ ಅವರನ್ನು ಹೊಸದಟ್ಟಿಯವರೆಂದೂ, ಹಳೆಯ ಸೀರೆಯಲ್ಲಿ ಉಡಿ ತುಂಬಿ ದರೆ ಹಳೆದಟ್ಟಿಯವರೆಂದೂ ಪರಂಪರೆಗಳು ಇದ್ದು ಇವುಗಳಲ್ಲಿ ನಂಬಿಕೆಯುಳ್ಳವರಾಗಿದ್ದಾರೆ.

**ಕೃಷಿಯಲ್ಲಿ ಸಾಕು ಪ್ರಾಣಿಗಳು**

ಕುರಿಗಾರರು ಕಾಡಿನಲ್ಲಿ ಕುರಿ ಮೇಯಿಸುವಾಗ ಮೋಡ ಇದ್ದಕಡೆಗೆ ಕುರಿಗಳು ಚಲಿಸಲಾ ರಂಭಿಸಿದರೆ ಮಳೆ ಆಗುವದೆಂಬ ನಂಬಿಕೆ ಇದೆ.

ಎತ್ತುಗಳು ಹೊಲಗಳಲ್ಲಿ ಮೋಡದ ಕಡೆ ಮುಖಮಾಡಿ ನಿಂತರೆ ಮಳೆ ಬರುವದೆಂಬ ನಂಬಿಕೆ

ಹೊಲದಲ್ಲಿ ಬಿತ್ತುವ ಸಂದರ್ಭಗಳಲ್ಲಿ ಎರಡು ಎತ್ತುಗಳೂ ಒಂದೇ ಪಕ್ಕಕ್ಕೆ ಮಲಗಿ ಕೊಂಡಾಗ ಶುಭವೆಂದು ರೈತರು ನಂಬಿ ಆ ಎತ್ತುಗಳನ್ನು ಪೂಜಿಸಿ ಕಾಯಿ ಒಡೆಯುವರು.

**ಬೆಡಗುಗಳು**

ವಧು ವರರ ವಿವಾಹಕ್ಕೆ ಬೆಡಗುಗಳು ಬೇರೆ ಬೇರೆ ಆಗಿದ್ದರೆ ಮಾತ್ರ ವಿವಾಹಕ್ಕೆ ಸಾಧ್ಯ ಎಂಬ ವಿಧಿ ಇದೆ.

ಬೆಡಗುಗಳು ಪರಸ್ಪರ ಒಂದೇ ಆದರೆ ಅವರು ಸಹೋದರ ಸಹೋದರಿ ಬಾಂಧವ್ಯ ಹೊಂದುವರು ಎಂಬ ನಂಬಿಕೆ ಇದೆ.

**ಮಾಂಸಾಹಾರ ಸೇವನೆ**

ವಾಲ್ಮೀಕಿ ಬೇಡ ಕುಲದಲ್ಲಿ ಹುಟ್ಟಿದ ಮೇಲೆ ಮಾಂಸಾಹಾರ ಸೇವನೆ ಸರ್ವೇಸಾಮಾನ್ಯ ಕಾಡು ಪ್ರಾಣಿಗಳಾದ ಜಿಂಕೆ, ಮೊಲ, ಕೌಜುಗ, ಬುರ್ಲಿ ಹಾಗೂ ಸಾಕು ಪ್ರಾಣಿಗಳಾದ ಆಡು ಕುರಿ ಕೋಳಿಗಳನ್ನು ಮಾತ್ರ ಸೇವಿಸುವದು ವಿಧಿ.

ನವಿಲಿನ ಮಾಂಸವನ್ನು ಸೇವಿಸಿದರೆ ಕುಷ್ಠರೋಗ ಬರುವದೆಂಬ ನಂಬಿಕೆ ಇದೆ.

**ಹುಟ್ಟು**

ಹುಟ್ಟಿದ ಮಗು ಬಾಯಿ ಮೇಲೆ ಮಾಡಿ ಹುಟ್ಟಿದರೆ ಸೂಲಗಿತ್ತಿಗೆ ಮರಣ ಬರುವದೆಂದು ನಂಬಿಕೆ ಇದೆ.

**ಉಡುದಾ**

ಬಟ್ಟೆ ಇಲ್ಲದಿರುವಾಗ ಸೊಪ್ಪನ್ನು ಸಿಗಿಸಿಕೊಳ್ಳಲು ಸೊಂಟಕ್ಕೆ ದಾರದಂಥ ನಾರನ್ನು ಸುತ್ತಿಕೊಳ್ಳುತ್ತಿದ್ದರೆಂದೂ, ಅದು ಉಡುದಾರವೆಂದೂ ಗಂಡಸರು ಮಾತ್ರ ನಡುವಿನ ಸುತ್ತ ಕಟ್ಟಿಕೊಳ್ಳುವರು. 'ಉಡುದಾರ ವಿಲ್ಲದೇ ಗಂಡಸು ಇರಬಾರದು,' ಉಡುದಾರ ಇಲ್ಲದ ಮೂಡದಾರ.

ಗಂಡಸರು ಉಡದಾರ ಕಟ್ಟಬೇಕು ಎಂಬ ವಿಧಿ ಇದೆ. ಅದು ದಾರದ್ದಾಗಿರಬಹುದು ಇಲ್ಲವೇ ಬೆಳ್ಳಿಯದಾದರೂ ಇರಬಹುದು. ಇದನ್ನು ಹೆಣ್ಣಿನ ತವರು ಮನೆಯವರು ಗಂಡು ಮಗುವಿಗೆ ಉಡುದಾರ ಕಾಣಿಕೆ ನೀಡುವದು ವಾಡಿಕೆ.

ಗಂಡಸರು ನಡಕ್ಕೆ ಉಡುದಾರ ಕಟ್ಟದಿದ್ದಾಗ ಬೆನ್ನ ಮೇಲೆ ಬಡಿದರೆ ಅಥವಾ ನೆತ್ತಿಯ ಮೇಲೆ ಬಡಿದರೆ ನಪುಂಸಕನಾಗುವನೆಂಬ ನಂಬಿಕೆ ಇದೆ.

**ಸಾಮಾಜಿಕ ನಿಷೇಧಗಳು**

ಜಗತ್ತಿನ ಯಾವುದೇ ಸಮಾಜದಲ್ಲಿಯೂ ಮಾನವನು ಸಂಪೂರ್ಣವಾಗಿ ಸ್ವತಂತ್ರ ನಾಗಿಲ್ಲ. ನಿಷೇಧಗಳ ಹೊರತಾಗಿ ಸಮೂಹ ಜೀವನ ನಡೆಸುವದು ಸಾಧ್ಯವಾಗದ ಮಾತು. ತನ್ನ ಹಾಗೂ ತನ್ನ ಸಮಾಜದ ಹಿತದೃಷ್ಟಿಯಿಂದ ತಾನು ವಿಧಿ-ವಿಷೇಧಗಳಿಗೆ ಒಳಪಡುವದು ಅಗತ್ಯವೆಂದು ಮಾನವ ತನ್ನ ಅನುಭವದಿಂದ ಕಂಡುಕೊಂಡಿದ್ದಾನೆ. ವೈಯಕ್ತಿಕ ಹಿತ ಸಾಧನೆಯೇ ಸಮೂಹ ಜೀವನದ ಗುರಿಯಾಗಿದ್ದರೂ ಅದು ಸಾಧ್ಯವಾಗುವದು ವ್ಯಕ್ತಿಗಳು ಸಮೂಹದ ಕಟ್ಟುಪಾಡುಗಳಿಗೆ ಒಳಪಟ್ಟಾಗ ಮಾತ್ರ. ತಾನು ಸ್ವಚ್ಛಂದವಾಗಿ ವರ್ತಿಸದೇ ಇರುವಂತೆ ತನ್ನ ನಡವಳಿಕೆಯ ಮೇಲೆ ಹತೋಟಿಯನ್ನಿಟ್ಟುಕೊಳ್ಳಲು ಮಾನವನು ನಿಷೇಧದ ರೂಪದಲ್ಲಿ ಸಮಾಜಕ್ಕೆ ಅಧಿಕಾರ ನೀಡಿದ್ದಾನೆ. ಇದು ಎಲ್ಲ ಸಮುದಾಯದಲ್ಲಿರುವಂತೆ ವಾಲ್ಮೀಕಿ ಸಮುದಾಯದಲ್ಲಿ ನಿಷೇಧಗಳು ಪ್ರಚಲಿತದಲ್ಲಿದ್ದರೂ ವಿಶೇಷವಾಗಿ ವಾಲ್ಮೀಕಿ ಸಮುದಾಯಕ್ಕೆ ಸಂಬಂಧಿಸಿದವುಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ.

ಪೂರ್ವ ಸಿದ್ಧತೆ ಇಲ್ಲದೆ ಬೇಟೆಗೆ ಹೋಗಬಾರದು.

ಕೇವಲ ಜಿಂಕೆ/ಮೊಲ, ಕೌಜುಗ, ಬುರ್ಲಿ ಇವುಗಳನ್ನು ಬಿಟ್ಟು ಬೇರೆ ಕಾಡು ಪ್ರಾಣಿಗಳನ್ನು ಬೇಟೆಯಾಡುವಂತಿಲ್ಲ.

ಕಾಡು ಪ್ರಾಣಿಗಳಾದ ನರಿ, ತೋಳ, ಸಿಂಹ ಹಾಗೂ ಸಾಕು ಪ್ರಾಣಿಗಳಾದ ಆಕಳು, ಎತ್ತು, ಎಮ್ಮೆ, ಬೆಕ್ಕುಗಳ ಮಾಂಸವನ್ನು ತಿನ್ನಬಾರದು.

ಮೂರು ತಾಸಿನ ಬ್ಯಾಟಗಾರನ ಚುಕ್ಕೆ (ಶುಕ್ರ) ಮುಳುಗಿದ ನಂತರ ಬೇಟೆಯಾಡಬಾರದು.

ಬೆಳಗಿನ ಜಾವದ ಬೆಳ್ಳಿಚುಕ್ಕೆಯ ಮುಂಚೆ ಬೇಟೆಯಾಡಬಾರದು.

ಬೇಟೆಗೆ ಹೋಗುವಾಗ ಹಾಗೂ ಬರುವಾಗ ಎರಚುವ ಬಣ್ಣದಾಟದಲ್ಲಿ ಕುಂಕುಮ ಹಾಗೂ ಗುಲಾಲನ್ನು ಎರಚುವಂತಿಲ್ಲ.

ಆಹಾರ-ನೀರು ಸೇವಿಸುವ ಹಾಗೂ ಮಲಗಿರುವ ಪ್ರಾಣಿಗಳನ್ನು ಬೇಟೆಯಾಡುವುದನ್ನು ನಿಷೇಧಿಸಲಾಗಿದೆ.

ಸ್ತ್ರೀಯರು ಬೇಟೆಯಾಡಬಾರದು.

ಗಾಳಿಬೀಸುವ ದಿಕ್ಕಿನಲ್ಲಿ ಬೇಟೆಯಾಡಬಾರದು.

ಸ್ತ್ರೀಯರು ಹಣೆಯ ಮೇಲೆ ಕುಂಕುಮದ ಬೊಟ್ಟನ್ನು ಅಡ್ಡ-ಉದ್ದ ಹಚ್ಚಬಾರದೆಂದು ನಿಷೇಧಿಸಲಾಗಿದೆ.

ಸ್ತ್ರೀಯರು ಮೂಗಿನ ಬಲಕ್ಕೆ ಮೂಗುತಿ ಧರಿಸಬಾರದು.

ಒಂದೇ ಬೆಡಗುಗಳುಳ್ಳ ವಧು-ವರರು ಪರಸ್ಪರ ಮದುವೆಯಾಗಬಾರದು.

ಹಾಸುಹೋಗುವ (ತಲೆ ಅಳ್ಳಾಡಿಸುವ) ಎತ್ತುಗಳನ್ನು ಮನೆಯಲ್ಲಿಟ್ಟುಕೊಳ್ಳಬಾರದು.

ನೊಗ ಮುರಿದ ಎತ್ತುಗಳನ್ನು ಮನೆಯಲ್ಲಿಟ್ಟುಕೊಳ್ಳಬಾರದು.

ಹೊಲದಲ್ಲಿ ಗಳೆಯನ್ನು ದಕ್ಷಿಣ ಮತ್ತು ಪಶ್ಚಿಮಕ್ಕೆ ನಿಲ್ಲಿಸುವುದನ್ನು ನಿಷೇಧಿಸಿದೆ.

**ಧಾರ್ಮಿಕ ನಂಬಿಕೆಗಳು, ವಿಧಿಗಳು**

ಧಾರ್ಮಿಕ ನಂಬುಗೆ ವಿಧಿಗಳು ಸಮಾಜದ ನೈತಿಕ ವ್ಯವಸ್ಥೆಗೆ ಸಂಬಂಧಿಸಿದವುಗಳಾಗಿವೆ. ಹಾಗೂ ಈ ನಂಬುಗೆ ವಿಧಿಗಳಲ್ಲಿ ಧಾರ್ಮಿಕತೆಯ ಪ್ರಭಾವ ತುಂಬಾ ಇದೆ. ಸಮಾಜ ಮತ್ತು ಧಾರ್ಮಿಕ ನಂಬುಗೆ ವಿಧಿಗಳು ದೈವಿಕ ಸಂವೇದನೆಗಳನ್ನುಂಟು ಮಾಡುತ್ತವೆ. ಜೊತೆಗೆ ನೈತಿಕ ಅಧಿಕಾರ ಹೊಂದಿದ್ದು ಸ್ವಾರ್ಥ, ತ್ಯಾಗ ಮತ್ತು ಅನುಪಮವಾದ ನಡತೆಯನ್ನು ಪ್ರಚೋದಿಸುತ್ತದೆ. ಇಂತಹ ಕೆಲವು ವಿಶೇಷ ಪ್ರಚೋದನೆಗಳನ್ನು ವಾಲ್ಮೀಕಿ ಸಮುದಾಯ ದಲ್ಲಿ ಗುರುತಿಸಬಹುದು.

**ಓಕಳಿ**

ಗ್ರಾಮಗಳಲ್ಲಿ ಪ್ರತಿ ವರ್ಷ ಹನುಮಂತದೇವರ ಓಕಳಿ. ಯುಗಾದಿ ಪಾಡ್ಯ ಮತ್ತು ಕಾರ್ತೀಕದಲ್ಲಿ ಎರಡು ಬಾರಿ ನಡೆಯುತ್ತಿದ್ದು ಆ ಸಂದರ್ಭಗಳಲ್ಲಿ ಹೊಂಡಗಳಿಗೆ ನೀರು ತುಂಬುವರು.

ನೀರು ತುಂಬುವ ಉತ್ಸವದಲ್ಲಿ ವಾಲ್ಮೀಕಿ ಸಮುದಾಯದವರೇ ಮಾತ್ರ ನೀರು ತುಂಬಬೇಕೆಂಬ ದೈವ ನಿರ್ಣಯ ಕೆಲವು ಗ್ರಾಮಗಳಲ್ಲಿ ಇದೆ.

ಇಂತಹ ಸಂದರ್ಭಗಳಲ್ಲಿ ದೇವರ ಸೇವೆ ನಾವು ಮಾಡಲೇಬೇಕು ಮಾಡದಿದ್ದರೆ ತೀವ್ರ ಬರಗಾಲ ತಲೆದೋರಿ ತಿನ್ನುವ ಅನ್ನಕ್ಕೂ ಗತಿಯಿಲ್ಲದಂತಾಗುವದೆಂಬ ನಂಬಿಕೆ ಇದೆ.

**ವಾರ್ಷಿಕ ಆಹುತಿ**

ಕಾಲ ಕಾಲಕ್ಕೆ ದೇವರು ದೇವತೆಗಳಿಗೆ ಆಹಾರ ಮತ್ತು ಆಹುತಿಗಳನ್ನು ಅರ್ಪಿಸಿದರೆ ಅವುಗಳನ್ನು ತೃಪ್ತಿಪಡಿಸಿದಂತಾಗುವದೆಂದೂ, ಇವುಗಳು ನಿತ್ಯ ಜೀವನದಲ್ಲಿ ತಮಗೆ ಸಂತೋಷ ನೆಮ್ಮದಿಯಿಂದಿರಲು ಸಹಾಯ ಮಾಡುತ್ತವೆಂದೂ ನಂಬಿಕೆ ಇದೆ.

ವಿಶೇಷವಾಗಿ ಶಕ್ತಿದೇವತೆಗಳ ಆರಾಧಕರು ಇವರಾಗಿದ್ದು ದೇವತೆ (ಹೆಣ್ಣದೇವತೆ)ಯ ಆಹುತಿಗಾಗಿ ಟಗರು, ಹೋತ (ಗಂಡುಬದುಕುಗಳು)ಗಳನ್ನು ಮಾತ್ರ ಬಲಿ ನೀಡುವದು ವಾಡಿಕೆ.

**ವಾಲ್ಮೀಕಿ ಜಯಂತಿ**

ಪ್ರತಿ ಶೀಗಿಹುಣ್ಣಿಮೆಯಂದು ತಮ್ಮ ಕುಲದೇವರಾದ ಮಹರ್ಷಿ ವಾಲ್ಮೀಕಿ ಋಷಿಗಳ ಹುಟ್ಟಿದ ದಿನವೆಂದು ಪ್ರತಿಗ್ರಾಮಗಳಲ್ಲಿ ಆಚರಿಸುವದು ವಾಡಿಕೆ.

**ಬೇವು ಇಳಿಸಿಕೊಳ್ಳುವದು**

ಭಾರತ ಹುಣ್ಣಿಮೆಯ ದಿನ ಕುಟುಂಬದಲ್ಲಿನ ಹೆಣ್ಣುಮಗಳನ್ನು ಬಿಟ್ಟು ಎಲ್ಲರೂ ಬೇವು ಇಳಿಸಿಕೊಳ್ಳುವುದು ವಿಧಿಯಾಗಿದೆ.

**ನೈವೇದ್ಯ**

ಉಚ್ಛ ಕುಲದವರ ದೇವತೆಗಳಿಗೆ ನಮ್ಮ ನೈವೇದ್ಯ (ನೀರಿನಿಂದ ತಯಾರಿಸಿದ) ಸ್ವೀಕಾರಾರ್ಹವಲ್ಲವೆಂಬ ನಂಬುಗೆ ಇತ್ತು. ಬೆಲ್ಲ, ಸಕ್ಕರೆ, ಹೂ ಹಣ್ಣು, ಕಾಯಿಗಳನ್ನು ಮಾತ್ರ ಅರ್ಪಿಸಬೇಕೆಂಬ ನಿಯಮವಿದೆ.

**ಬೀಜಪರು**

ರೈತ ಹೊಲದ ಬಿತ್ತಣಿಕೆ ಪ್ರಾರಂಭದಲ್ಲಿ ಸುತ್ತಲಿನ ದೇವರಿಗೆ ಐದು ನಿಧಿಗಳನ್ನು ಅರ್ಪಿಸು (ಉಡಿತುಂಬು)ವನು. ನಿಧಿ ಅರ್ಪಿಸಿದ ಸ್ವಲ್ಪ ಭಾಗವನ್ನು ಬಿತ್ತುವ ಬೀಜದಲ್ಲಿ ಸೇರಿಸಿ ಬಿತ್ತಣಿಕೆ ಮಾಡುವನು. ಹೀಗೆ ಮಾಡುವದರಿಂದ ಭೂಮಿ ತಾಯಿ ಪ್ರಸನ್ನಳಾಗಿ ಬೆಳೆಯ ಇಳುವರಿ ಚೆನ್ನಾಗಿ ಬರುವದೆಂದು ನಂಬಿಕೆ.

**ಸೆಟಿಗೆವ್ವಾ**

ಸೆಟಿಗೆವ್ವಾ ಎಂಬ ದೇವತೆ ಮಗು ಹುಟ್ಟಿದ ಐದು ದಿನಕ್ಕೆ ಬ್ರಹ್ಮನ ಆದೇಶದಂತೆ ಹಣೆ ಬರಹ ಬರೆಯುವಳೆಂಬ ನಂಬಿಕೆ ಇದೆ.

ಸೆಟಿಗೆವ್ವಾ ಮಗುವಿನ ಹಣೆಬರಹ ಚೆನ್ನಾಗಿ ಬರೆಯಲಿ ಎಂಬ ನಂಬಿಕೆಯಿಂದ ಮಗು ಹುಟ್ಟಿದ ಐದು ದಿನಕ್ಕೆ ಕಡುಬಿನ ಸಿಹಿ ಅಡಿಗೆ ಮಾಡಿ ಅದರಲ್ಲಿ ೧೦ ಕಡಬು, ಅಕ್ಕಿಗಳ ತುಂಬಿದೆಡೆಯನ್ನು ತೊಟ್ಟಿಲ ಬುಡದಲ್ಲಿ ಇಟ್ಟು ಅರಿಷಿಣ ಗುಂಡವನ್ನು ಜೋಳದ ನಿಧಿಯ ಮೇಲೆ ಇಟ್ಟು ಹಡೆದ ತಾಯಿಯ ತಾಳಿ, ಮೂಗೂತಿಗಳನ್ನಿಟ್ಟು ಸೆಟಿಗೆವ್ವಳನ್ನು ಶೃಂಗರಿಸಿ ಶಾಂತಪಡಿಸುವರು.

**ಬೇಟೆ**

ಊರ ಬಾಗಿಲಲ್ಲಿರುವ ದೇವತೆ (ಬಾಗಿಲ ಬರಮಪ್ಪ)ಗೆ ಊರನ್ನು ಸಂರಕ್ಷಿಸಲಿ ಎಂಬ ನಂಬಿಕೆಯಿಂದ ತಂದಿರುವ ಬೇಟೆಯನ್ನು ಅರ್ಪಿಸುವರು.

**ಧಾರ್ಮಿಕ ನಿಷೇಧಗಳು**

ಧಾರ್ಮಿಕ ನಿಷೇಧಗಳು ಜನರ ನಡತೆಯನ್ನು ನಿಯಂತ್ರಿಸುವದರೊಂದಿಗೆ ಸಮುದಾಯದ ಐಕ್ಯಕ್ಕೂ ಕಾರಣವಾಗುತ್ತವೆ. ಸಾಮಾಜಿಕ ಮೌಲ್ಯಗಳನ್ನು ಮಾತ್ರ ನಿಯಮಗಳನ್ನು ಪವಿತ್ರ ವಾಗಿರಿಸುವಲ್ಲಿ ಹಾಗೂ ಸಮೂಹದ ಗುರಿ ಉದ್ದೇಶಗಳು ಉಳಿಯುವಂತೆ ಧಾರ್ಮಿಕ ನಿಷೇಧ ಗಳು ಕಾರ್ಯ ತತ್ಪರವಾಗಿರುತ್ತವೆ. ಅಂತೆಯೇ ವಾಲ್ಮೀಕಿ ಸಮುದಾಯದಲ್ಲೂ ಕೆಲವು ಧಾರ್ಮಿಕ ನಿಷೇಧಗಳನ್ನು ಕಾಣಬಹುದಾಗಿದೆ.

ದೇವತೆಗಳ ಆಹುತಿಗಾಗಿ ಟಗರು ಹೋತಗಳನ್ನು ಬಿಟ್ಟು ಅನ್ಯ ಪ್ರಾಣಿಗಳನ್ನು ಬಲಿಕೊಡು ವಂತಿಲ್ಲ.

ದೇವತೆಗಳಿಗೆ ಆಹುತಿ ನೀಡುವ ಪ್ರಾಣಿಗಳ ಕಣ್ಣು, ಕಿವಿ, ಬಾಲ ಇತ್ಯಾದಿಗಳ ಊನಗಳಿರ ಬಾರದು.

ಉಚ್ಛಕುಲದೇವರ ದೇವತೆಗಳಿಗೆ ನೀರಿನಿಂದ ಮಾಡಿದ ನೈವೇದ್ಯಗಳನ್ನು ಅರ್ಪಿಸ ಬಾರದು.

ಹೊಸ ಧಾನ್ಯಗಳಿಗೆ ಭೂತದ ವಕ್ರದೃಷ್ಟಿ ಬೀಳಬಾರದೆಂದು ಭೂತಪ್ಪಗೆ ಹಗೆಯಲ್ಲಿ ಜೋಳವನ್ನು ತುಂಬಿ ಅದರ ಮೇಲೆ ಮಣ್ಣಿನ ಮಡಿಕೆ, ನೀರು ನೈವೇದ್ಯ ಹಾಕಿ ಪೂಜಿಸುವದ ರಿಂದ ಭೂತಾಯಿ ತನ್ನ ಒಡಲಿನಲ್ಲಿ ಧಾನ್ಯಗಳನ್ನು ಚೆನ್ನಾಗಿ ಸಂರಕ್ಷಣೆ ಮಾಡುತ್ತಾಳೆ ಎನ್ನುವ ಕಾರಣಕ್ಕಾಗಿ ಹಗೆಯಲ್ಲಿ ಧಾನ್ಯಗಳನ್ನು ಭೂತಪ್ಪಗೆ ಮಾಡದೇ ಹಾಕಬಾರದೆಂಬ ನಿಷೇಧವಿದೆ.

ಮನೆಯಲ್ಲಿ ಯಾರಾದರು ಮರಣ ಹೊಂದಿ ೩ನೆ ದಿನ ಮರಣ ಹೊಂದಿದ ವ್ಯಕ್ತಿಯ ಜೀವ ಬಿಟ್ಟಾಗಿನ ಅರಿವೆ ಗಳಿಗೆಗಳನ್ನು ಪೂಜಿಸುವರು. ಇದಕ್ಕೆ೩ ದಿನ ಹೊಲಿತೊಳೆಯುವದು ಎನ್ನುವರು. ಈ ಕಾರ್ಯಕ್ರಮ ಆಗುವವರೆಗೂ ಆ ಮನೆಯಲ್ಲಿನ ನೀರು ಆಹಾರವನ್ನು ಯಾರು ಸೇವಿಸುವದಿಲ್ಲ ಹಾಗೂ ಯಾವ ಶುಭಕಾರ್ಯವನ್ನು ಮಾಡಬಾರದೆಂಬ ನಿಷೇಧವಿದೆ.

ಮನೆಯ ಶುಭ ಪ್ರಸಂಗಗಳಲ್ಲಿ ಕರಿಕಂಬಳಿಯನ್ನು ಬಿಟ್ಟು ಬೇರೆ ಯಾವುದನ್ನೇ ನೆಲಕ್ಕೆ ಹಾಸುವುದನ್ನು ನಿಷೇಧಿಸಲಾಗಿದೆ.

ಪ್ರಸ್ತುತ ವೈಜ್ಞಾನಿಕ ಮತ್ತುತಾಂತ್ರಿಕ ಕ್ಷೇತ್ರದಲ್ಲಿ ಸಂಭವಿಸಿರುವ ಗಣನೀಯ ಸಾಧನೆಗಳು, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಉಂಟಾಗುತ್ತಿರುವ ವಿದ್ಯಮಾನಗಳು ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆ, ವಿಧಿ-ನಿಷೇಧಗಳ ಮೇಲೆ ಗಂಭೀರ ಪರಿಣಾಮವುಂಟು ಮಾಡಿರುವ ಇಂದಿನ ಕಾಲಘಟ್ಟದಲ್ಲಿಯೂ ವಾಲ್ಮೀಕಿ ಬೇಡ ಸಮುದಾಯದಲ್ಲಿ ತನ್ನ ಮೂಲದ ನಂಬಿಕೆ, ವಿಧಿ-ನಿಷೇಧಗಳನ್ನು ಕಾಣಬಹುದಾಗಿದೆ.

ಬೇಟೆಗಾರಿಕೆ ವಾಲ್ಮೀಕಿ ಸಮುದಾಯದ ಮೂಲ ಕಸುಬಾದರೂ ವೃತ್ತಿ ಬದಲಾವಣೆ ಗಳಾದಂತೆ ಅವುಗಳಿಗೆ ಒಗ್ಗಿಹೋಗಿದ್ದಾರೆ. ಆದರೆ ಮುಲಭೂತವಾಗಿ ಬೇಟೆಯಾಡುವುದನ್ನು ವರ್ಷದಲ್ಲಿ೧-೨ ದಿನವಾದರೂ ಸಾಂಕೇತಿಕವಾಗಿ ಆಡುವದರ ಮೂಲಕ ಅಲ್ಲಿಯ ನಂಬಿಕೆ ವಿಧಿ-ನಿಷೇಧಗಳನ್ನು ತಮ್ಮ ಇತರ ವೃತ್ತಿಗಳಲ್ಲೂ ಅನ್ವಯಿಸಿಕೊಂಡು ಬದುಕುತ್ತಿದ್ದಾರೆ.

ಆಹಾರಕ್ಕಾಗಿ ಅನಿವಾರ್ಯವಾಗಿ ಬೇಟೆಯಾಡಿದ ಬೇಡ ತನಗೆ ಅಪಾಯ ತರುವ ಕಾಡು ಪ್ರಾಣಿಗಳನ್ನು ಕೊಲ್ಲದೇ ಬಿಡುತ್ತಿರಲಿಲ್ಲ. ಬೇಟೆಯು ಕೂಡಾ ಒಂದು ಧರ್ಮಯುದ್ಧವೆಂದು ತಿಳಿದು ಹೋರಾಡುತ್ತಿದ್ದನು. ಇವತ್ತಿಗೂ ತಾವು ಬಾಳುತ್ತಿರುವ ಪರಿಸರದಲ್ಲಿ ಬೇಡರು ತಮಗೆ ಅಪಾಯವೆನಿಸಿದ ವ್ಯಕ್ತಿ ಸಮೂಹದೊಂದಿಗೆ ಹೋರಾಡುತ್ತಿರುವರು.

ಬೇಟೆಯಲ್ಲಿ ಆಹಾರ ನೀರು ಸೇವಿಸುತ್ತಿರುವ ಮಲಗಿರುವ ಪ್ರಾಣಿಗಳ ಮೇಲೆ ಬೇಟೆ ಯಾಡಲು ಆಕ್ರಮಣಮಾಡುವದಿಲ್ಲವೋ ಹಾಗೆಯೇ ತಾನು ನಂಬಿಕೊಂಡಿರುವವರನ್ನು ಬೆನ್ನ ಹಿಂದಿನಿಂದ ಚೂರಿ ಹಾಕುವ ಜಾಯಮಾನದವರು ಅವರಲ್ಲ. ಎದುರು ಬದರು ಸೆಣಸಿ ಗೆಲ್ಲಬೇಕು ಎಂಬ ನಂಬಿಕೆಯ ನೆಲೆಯಲ್ಲಿ ಜೀವಿಸಿರುವರು. ಇವತ್ತಿಗೂ ವಿಕಾಸದ ಹಂತಗಳ ವೃತ್ತಿಬದಲಾವಣೆಗಳಲ್ಲಿ ತಮ್ಮ ಪಾರಂಪರಿಕ ನಂಬುಗೆಗಳನ್ನು ಬಿಡದವರಾಗಿದ್ದಾರೆ.

ಅಂತೆಯೇ ವಾಲ್ಮೀಕಿ ಸಮುದಾಯ ಅನಕ್ಷರಸ್ಥರೆನಿಸಿಬಾಳುತ್ತಿದ್ದರೂ ಕೆಲವು ಪಾರಂಪರಿಕ ವಾಗಿ ಬಂದ ನಂಬುಗೆ ಆಚರಣೆಗಳಿಂದ ಅವರೂ ಕೂಡಾ ಚಾಣಾಕ್ಷರು, ನಿಪುಣರು, ವೈಜ್ಞಾನಿಕ ಮನೋಭಾವವುಳ್ಳವರಾಗಿದ್ದರು ಎಂಬುದಕ್ಕೆ, ಗಾಳಿದಿಕ್ಕಿನೊಂದಿಗೆ ಬೇಟೆಯಾಡಲು ಚಲಿಸಿ ದರೆ ಪ್ರಾಣಿಗಳು ಇವರ ವಾಸನೆಗಳನ್ನು ಗ್ರಹಿಸಿ ಪಲಾಯನ ಮಾಡುತ್ತವೆಂಬ ಸೂಕ್ಷ್ಮಮತಿ, ದಿಕ್ಕುಗಳು, ಗ್ರಹ-ನಕ್ಷತ್ರಗಳ ಪರಿಚಯ ವೈದ್ಯಕೀಯ ಮಾರ್ಗದರ್ಶನದಲ್ಲಿ ಒಂದೇ ಸಂತತಿ ಯಲ್ಲಿ ಮದುವೆಗಳಾಗುವದು ನಿಷಿದ್ಧ ಇರುವಂತೆ ಈ ಸಮುದಾಯದಲ್ಲಿಯೂ ಕೂಡಾ ವಿವಾಹದಂತಹ ನಡವಳಿಕೆಗಳಲ್ಲಿ ಒಂದೇ ಬೆಡಗುಗಳಲ್ಲಿ ವಿವಾಹ ನಿಷೇಧವಾಗಿರುವ ನಿದರ್ಶನಗಳನ್ನು ನೋಡಬಹುದು. ಆದಾಗ್ಯೂ ಕೆಲವು ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಗಳು, ವಿಧಿ-ನಿಷೇಧಗಳು ಪ್ರಶ್ನಾರ್ಹವಾದರೂ, ಕೆಲವು ಪ್ರಗತಿಪರ ವಿಚಾರಧಾರೆಗಳ ಮೂಲಕ ಸಮುದಾಯದ ಸದಸ್ಯರಲ್ಲಿ ಅಪವರ್ತನೆಯ ಪ್ರಮಾಣವನ್ನು ತಗ್ಗಿಸುತ್ತಾ ಒಬ್ಬರಿಗಾಗಿ ಇನ್ನೊಬ್ಬರು ಸ್ಪಂದಿಸುವ ವಾತಾವರಣ

ಉಂಟುಮಾಡುತ್ತಾ ಸಾಮರಸ್ಯದಿಂದ ವಾಲ್ಮೀಕಿ ಬೇಡ ಸಮುದಾಯ ಬಾಗಲಕೋಟೆ ಪರಿಸರದ ಜನಮಾನಸದ ಮುಖ್ಯ ಹರಿವಿನಲ್ಲಿ ಒಂದಾಗಿ ಸಾಗಿಬರುತ್ತಿದೆ.

**ಮಾಹಿತಿ ಸಂಗ್ರಹ ನೀಡಿದವರು**

೧. ಚುರಚಪ್ಪ ಲೋಕಾಪೂರ ಸೂಳಿಕೇರಿ

೨. ಟಿ. ವಾಯ್. ಜಾಣಮಟ್ಟಿ ಬೀಳಗಿ

೩. ಚರಚಪ್ಪಾ ಬಾಲಪ್ಪ ತಳವಾರ ಲಕ್ಕಸಕೊಪ್ಪ

೪. ಜಗನ್ನಾಥ ಶಂಕ್ರಪ್ಪ ವಾಲೀಕಾರ ಲಕ್ಕಸಕೊಪ್ಪ

೫. ಬಿ.ಎಮ್.ಬಾರಕೇರ ನಿವೃತ್ತ ಶಿಕ್ಷಕರು ಮುರನಾಳ

೬. ಶ್ರೀಮತಿ ಮಲ್ಲವ್ವ ಹನಮಪ್ಪ ದ್ಯಾವನಗೌಡರ ಮುರಡಿ

೭. ರಾಮಣ್ಣ ಹನಮಪ್ಪ ಕಟ್ಟಿಮನಿ ಕೆರೂರ

೮. ಎಸ್.ಬಿ.ಕೋರಿ ಉಪನ್ಯಾಸಕರು ಬಾಗಲಕೋಟೆ

೯. ಸಮಾಜ ಶಾಸ್ತ್ರ; ಚ.ನ. ಶಂಕರರಾವ್

* * *

**ಹಲಗಲಿ ಬೇಡರು**

**೩ನೇ ನುಡಿ**
ಹಲ್ಲ ಕಿತ್ತಿದಾ ಹಾಂವಿನ ಪರಿಯು ನಮಗ ಆದಿತ್‌ಅಲ್ಲಾ
ರಂಡಿ ಮುಸುಕ ಹಾಕಿ ತಿರಿಗಿದರ ನಮ ಮಾನ ಉಳಿಯುವದಿಲ್ಲಾ

ಮಗ್ಗಲದಾಗಿನ ಹೇಣತಿ ಕೊಟ್‌ಅಂಗ ಅತಿ ಹೇಡಿ ಆದೇವ್‌ಅಲ್ಲಾ
ಸತ್ತ ಹೆಣಕ ಶೃಂಗಾರ ಮಾಡಿದ ಪರಿ ಆದಿತ್‌ಅಲ್ಲಾ

ಸಾವಕಾರ ನಮ್ಮ ಜೀವ ಹೋದಿತ್ ಅಂತ ಚಿಂತಿ ಮಾಡೇರ್‌ಅಲ್ಲಾ
ಹಗಲಿ ಮನಿ ಹೊಕ್ಕ ಹಣಾ ವೊದರ ಕೇಳವರ್ ಯಾರ್‌ಇಲ್ಲಾ

ಪುಂಡ ಪಾಳೆಗಾರ ಪಚ್ಚ್ಯಾ ವಜೀರರು ಪಂತ ಹಿಡಿಯಲಿಲ್ಲಾ
ದಂಡನ್ ಆಳುವ ಧೊರಿ ದೌಲತರ್‌ಅಂಜಿ ಕುಳಿತರ್‌ಅಲ್ಲಾ ||ಚ್ಯಾಲ||

## ೧೫. ದೈವಗಳ ಲೋಕ

ಬಾಗಲಕೋಟೆ ಜಿಲ್ಲೆ ಬುಡಕಟ್ಟು ಸಂಸ್ಕೃತಿಗಳ ಕಣಜ. ಹನುಮಂತ ದೇವರು, ಗುಡ್ಡದ ಯಲ್ಲವ್ವ, ಹುಲ್ಲಪ್ಪ, ಚಂದ್ರಪ್ಪ, ಮೂಕನೆವ್ವ ಇವು ಈ ಸಮುದಾಯದ ಆರಾಧ್ಯ ದೈವಗಳು. ಈ ಸಮುದಾಯದವರಿಗೆ ರೋಗರುಜಿನಗಳು ಕಾಡಿದರೆ ಕಷ್ಟ ಕಾಲದಲ್ಲಿ ಇಷ್ಟ ದೇವರಿಗೆ ಮೊರೆ ಹೋಗುವರು ಹರಕೆ ತೀರಿಸುವರು.

ಮಾನವ ವಿಕಾಸದ ಮೂಲ ಘಟ್ಟವೇ ಅಲೆಮಾರಿತನ. ಬೇಟೆಗಾರಿಕೆಯನ್ನು ಮೂಲ ಕಸುಬಾಗಿ ಮಾಡಿಕೊಂಡಿದ್ದ ಬೇಡ ಸಮುದಾಯದವರು ಶೌರ್ಯ ಸಾಹಸಕ್ಕೆ ಹೆಸರಾದವರು. ಕೃಷಿಯಿಂದ ಗ್ರಾಮಗಳು ಉದಯವಾದವು. ಕೃಷಿ ಆಧಾರಿತ ಸ್ವಯಂ ಪರಿಪೂರ್ಣ ಗ್ರಾಮ ಗಳಿಗೆ ನೈಪುಣ್ಯತೆಯುಳ್ಳ ವಿವಿಧ ಕಸುಬುದಾರರ ಕುಟುಂಬಗಳು ಪಾರಂಪರಿಕವಾಗಿ ಮುಂದು ವರಿದಂತೆ ಅವು ಕಸುಬಾದಾರಿತ ಕುಲಗಳಾಗಿ ಮಾರ್ಪಟ್ಟವು. ಸಾಮಾಜಿಕ ಸ್ಥಾನಮಾನದಿಂದ ವಂಚಿತವಾದ ಕೆಲ ಕುಲಗಳು ಮತ್ತೆ ಅಲೆಮಾರಿತನವನ್ನು ಮುಂದುವರಿಸಿದವು. ಅಂತಹು ಗಳಲ್ಲಿ ಬೇಡ ಸಮುದಾಯವು ಒಂದು. ಅಲೆಮಾರಿತನದ ಬೇಟೆಗಾರಿಕೆ ಇವರ ಸಹಜ ಬದುಕು. ಜನಸಂಖ್ಯೆ ಬೆಳವಣಿಗೆ ಹಾಗೂ ಆಧುನಿಕ ವೈಪರೀತ್ಯಗಳು ಇವರ ಮುಕ್ತ ಬದುಕಿಗೆ ಕಡಿವಾಣ ಹಾಕಿವೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಇವರು ಒಂದೆಡೆ ನೆಲೆನಿಂತು ಸಮಾಜದ ಮುಖ್ಯವಾಹಿನಿಗೆ ಸೇರಿದ್ದಾರೆ.

ಇವರು ಸರ್ವಚೇತನವಾದಿಗಳು. ದೇವರಲ್ಲಿ ಅಪಾರ ನಂಬಿಕೆಯನ್ನಿಟ್ಟಿರುವ ಇವರು ಪ್ರಾಂತೀಯವಾಗಿ ಅನೇಕ ದೇವರುಗಳನ್ನು ತಮ್ಮ ಆರಾಧ್ಯದೈವವಾಗಿ ಪೂಜಿಸುವುದು ವಾಡಿಕೆ. ಇದಕ್ಕೆ ಅವರ ಬೆಡಗುಗಳು ಕಾರಣವೆಂದು ಹೇಳಬಹುದು. ಇಲ್ಲಿ ಪ್ರಮುಖವಾಗಿ ಹೆಣ್ಣು ದೇವರನ್ನು ಆರಾಧಿಸುವುದು ವಾಡಿಕೆ. ಈ ಭಾಗದ ತುಳಸೀಗಿರಿ ಹನುಮಪ್ಪ ಬಹುಸಂಖ್ಯೆ ಬೇಡರ ಆರಾದ್ಯದೈವ. ಬ್ರಿಟೀಷರಿಗೆ ಸಿಂಹಸ್ವಪ್ನವಾಗಿ ಕಾಡಿದ ಬಡವರ ಪಾಲಿನ ದೈವವಾಗಿದ್ದ ವೀರ ಸಿಂಧೂರಲಕ್ಷ್ಮಣನೂ ಕೂಡ ತುಳಸಿಗಿರಿಯ ಹನಮಪ್ಪನವರ ಪ್ರಸಾದದಿಂದಲೇ ಜನಿಸಿದರು ಎಂದು ಹೇಳುವಲ್ಲಿ ಈ ಭಾಗದ ಬೇಡ ಸಮುದಾಯದವರು ಆ ದೇವರ ಬಗೆಗೆ ಇಟ್ಟುಕೊಂಡು ಬಂದ ಶ್ರದ್ಧಾ ಭಕ್ತಿಯ ಅರಿವಾಗುತ್ತದೆ. ಬಾಗಲಕೋಟ ಜಿಲ್ಲೆಯ ಗ್ರಾಮಜೀವನದಲ್ಲಿಯೂ ಗ್ರಾಮದೇವತೆಗಳು ಹಾಸುಹೊಕ್ಕಾಗಿವೆ. ಪುರಾಣಮೂಲದ ದೇವತೆಗಳನ್ನೊಳಗೊಂಡಂತೆ ಸಾಮಾನ್ಯ ದೇವತೆಗಳವರೆಗೂ ನೂರಾರು ಶಕ್ತಿದೇವತೆಗಳಿವೆ. ಕರೆವ್ವ, ಕಾಟವ್ವ, ಮಾರೆವ್ವ, ಕಾಳಿದುರ್ಗವ್ವ, ದ್ಯಾಮವ್ವ, ಉಡಚವ್ವ, ಶೆಟ್ಟವ್ವ, ಮೂಕನೆವ್ವ, ಹುಲಿಗೆಮ್ಮ, ಯಲ್ಲಮ್ಮ, ಮಾಯವ್ವ ಹೀಗೆ ಬೇರೆ ಬೇರೆ ಹೆಸರುಗಳನ್ನು ಶಕ್ತಿ ದೇವತೆಗಳು ತಮ್ಮ ಅಸಂಖ್ಯ ಭಕ್ತರಿಂದ ಈ ಜಿಲ್ಲೆಯಲ್ಲಿ ಬೇಡ ಸಮುದಾಯದ ಶಕ್ತಿ ದೇವತೆಗಳಾಗಿವೆ.

ಈ ಶಕ್ತಿ ದೇವತೆಗಳ ಗುಡಿಗಳು ಊರಸುತ್ತಲೂ ಇರುತ್ತದೆ. ಹಾಗಾಗಿ ಇವು ಗಡಿರಕ್ಷಕ ದೇವತೆಗಳು. ಊರಿನ ಬೆಳೆರಕ್ಷಣೆ, ದನಕರುರಕ್ಷಣೆ, ಸಕಾಲಕ್ಕೆ ಮಳೆ ತರಿಸುವುದು ಸಾಂಕ್ರಾಮಿಕ ರೋಗಗಳಿಂದ ಊರು ರಕ್ಷಣೆ, ಮಕ್ಕಳುಮರಿ ಕಾಪಾಡುವುದು, ಭೂತ ಪ್ರೇತಾದಿಗಳು ಊರೊಳಗೆ ಪ್ರವೇಶಿಸದಂತೆ ನೋಡಿಕೊಳ್ಳುತ್ತವೆ ಎಂಬುವುದು ಈ ಸಮುದಾಯದ ಪ್ರಮುಖ ನಂಬಿಕೆ. ಗ್ರಾಮದಲ್ಲಿ ಈ ದೇವಾಲಯಗಳನ್ನು ಹೆಚ್ಚಾಗಿ ಮಣ್ಣು ಕಲ್ಲುಗಳಿಂದ ಕಟ್ಟಿದ್ದಾರೆ. ಗರ್ಭಗುಡಿ, ಪ್ರಕಾರಪಾಳೆ ಇದಾವು ಇದ್ದಂತಿಲ್ಲ. ಮೂರ್ತಿ ಕೂಡ ಅತ್ಯಂತ ಸರಳ. ಸ್ತ್ರೀ ರೂಪದ ಮೂರ್ತಿ ಇರಬೇಕೆಂದಿಲ್ಲ. ಕರಿಕಲ್ಲು, ಗುಂಡಕಲ್ಲುಗಳ ದೇವತೆ ಎನಿಸಿಕೊಂಡಿವೆ. ಗಿಡಗಂಟೆಯ ನೆರಳಿನಲ್ಲಿ ಇವು ಇರಬಹುದು, ಕ್ರಮೇಣ ಗುಡಿ, ಕಳಸ, ತೇರು, ನಿರ್ಮಾಣ ಗೊಂಡಿರಬಹುದು. ಮಂಗಳವಾರ, ಶುಕ್ರವಾರ ದೇವಿವಾರಗಳೆನಿಸಿವೆ. ಪರಿಶಿಷ್ಟರ ಜೊತೆಗೆ ಶಿಷ್ಟರು

ಉತ್ಸವಾಚರಣೆಯಲ್ಲಿ ಪಾಲ್ಗೊಳ್ಳುವುದು ಇಲ್ಲಿನ ವಿಶಿಷ್ಟತೆ ಈ ದೇವತೆಗಳ ಸುತ್ತ ಪುರಾಣ, ಐತಿಹ್ಯ, ಕತೆ, ಪವಾಡಗಳು ಸೃಷ್ಟಿಗೊಂಡು ಅವುಗಳ ಶಕ್ತಿ ಮತ್ತು ಪ್ರಭಾವ ವೃದ್ಧಿಸಿದಂತೆ ತೋರುತ್ತದೆ. ಪ್ರತಿಯೊಂದು ಸ್ಥಳದೇವತೆಗಳ, ಸ್ಥಳಗತೆಗಳ ನೆಲೆಯಲ್ಲಿ ಆಶ್ಚರ್ಯಕರ ವಿವರಗಳು ಸಿಗುತ್ತವೆ. ಈ ದೇವತೆಗಳನ್ನು ಗಮನಿಸಿದಾಗ ಆ ಪ್ರದೇಶದ ವ್ಯಕ್ತಿ ಅಥವಾ ಸಮುದಾಯದ ಮೂಲ ನೆಲೆಯಲ್ಲಿ ಆ ವಿಶಿಷ್ಟ ದೇವರುಗಳು ಹುಟ್ಟಿದ್ದನ್ನು ಗಮನಿಸಿರುವುದು ಉತ್ಸವಗಳು, ಬಾಹುಕ ಜನರು ಆರಾಧಿಸುವ ಮಾಧ್ಯಮಗಳಾದವು. ಇವುಗಳಲ್ಲಿ ಬುಡಕಟ್ಟು ಸಮುದಾಯದ ಮೋಜು, ಮನರಂಜನೆಗಿಂತ ಹೆಚ್ಚಾಗಿ ಧಾರ್ಮಿಕ ನಂಬಿಕೆ, ಹರಕೆ, ವಿವಿಧ ಬಗೆಯ ವಿಚಿತ್ರ ನಮೂನೆಯ ಆಚರಣೆಗಳೂ ಸೇರಿಕೊಂಡವು. ದೈವದ ಸಂತೃಪ್ತಿಗಿಂತ ಪ್ರಾಣಿಬಲಿಯೂ ಶುರುವಾಯಿತು. ಹುಣ್ಣಿಮೆಯ ದಿನ ರಾತ್ರಿ ದೇವಿಗೆ ಬೆತ್ತಲೆಸೇವೆ, ಉಟಗಿ ಸಲ್ಲಿಸುವ ಪದ್ಧತಿ ಇತ್ತು. ಜನಗಿ ಬಿಡುವ, ಮುಡುಪು ಕಟ್ಟುವ, ದೀಡನಮಸ್ಕಾರ ಹಾಕುವ, ಉರುಳು ಸೇವೆ ಮಾಡುವ, ಸಿಡಿಯಾಡುವ, ಉಪ್ಪುಹಾಕುವ, ಜಡೆ ಇಳಿಸುವ, ತೊಟ್ಟಿಲು ಸೇವೆ ಸಲ್ಲಿಸುವ, ಮೀಸಲು ತುಪ್ಪ ನೀಡುವ ಇತ್ಯಾದಿ ದೇವರ ಹರಕೆ ಒಪ್ಪಿಸುವುದು ರೂಢಿಯಲ್ಲಿತ್ತು. ಇವುಗಳಲ್ಲಿ ಕೆಲವು ನಿರ್ಬಂಧನೆಗೊಂಡರೂ ನಂಬಿಕೆಯ ಪಾಲನೆಗಾಗಿ ಹತ್ತು ಹಲವು ಸೇವೆಗಳು ಜಿಲ್ಲೆಯಲ್ಲಿ ನಡದೇ ಇವೆ.

ಅಕ್ಕಿ, ಬೇಳೆ, ಎಣ್ಣೆ, ತುಪ್ಪ, ಉತ್ತತ್ತಿ, ಕಲ್ಲುಸಕ್ಕರೆ, ಹಣ್ಣು, ಕಾಯಿ, ಕರ್ಪೂರ, ದೀಪಾರತಿ ಮುಂತಾದುವನ್ನು ಪೂಜಾ ಸಂದರ್ಭದಲ್ಲಿ ನೀಡುವುದು. ಹಣೆಗೆ ಭಂಡಾರ, ಚಂದ್ರ ಬಳಿಯುವುದು ಒಂದು ವಿಶೇಷ. ವಿಜ್ಞಾನ-ತಂತ್ರಜ್ಞಾನಗಳು ಬೆಳೆದಂತೆಲ್ಲಾ ನಂಬಿಕೆ ಗಳಲ್ಲಿ ಕೆಲವು ಶಿಥಿಲಗೊಂಡಿವೆ. ಆದರೆ ಇಂದಿಗೂ ಇಷ್ಟ ದೇವರುಗಳ ಪೂಜೆ ನಡದೇ ಇದೆ. ಶೂದ್ರ ವರ್ಗದ ದೇವತೆಗಳು ಮೂಲ ಆದಿಶಕ್ತಿಯ ಅವತಾರಗಳಾಗಿ ಗ್ರಾಮದೇವತೆ ಗಳಾಗಿ ಆರಾಧನೆಗೊಳ್ಳುತ್ತಾ ಬಂದಿವೆ. ಹೆರಿಗೆಯಾದ ೧೧-೧೩ ದಿನಗಳಲ್ಲಿ ಮಗುವಿಗೆ ನಾಮಕರಣ ಮಾಡುವ ಪದ್ಧತಿ ಜಾರಿಯಲ್ಲಿದೆ. ಮನೆದೇವರ ಹೆಸರನ್ನು ಮೊದಲು ಮಗುವಿಗೆ ಕರೆದು ನಂತರ ಐದುದೇವರುಗಳ ಹೆಸರು ಕರೆದು ನಂತರ ತಮಗಿಷ್ಟವಾದ ಹೆಸರನ್ನು ಕರೆಯುತ್ತಾರೆ.

ಮೂಕನೆವ್ವ ಈ ಭಾಗದ ಬೇಡ ಸಮುದಾಯದ ಇಷ್ಟ ದೇವತೆ. ಹಿಂದೆ ಮೂರು ವರ್ಷಕ್ಕೊಮ್ಮೆ ಈ ಜಾತ್ರೆ ನಡೆಯುತ್ತಿತ್ತು. ಆದರೆ ಈಗ ಒಂಭತ್ತು ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಕೋಟೆಕಲ್ಲು ದೇಸಾಯಿಯವರ ಮನೆಯಿಂದ ಕೊಡ ಹೊರಬಿದ್ದಾಗ ಒಂಭತ್ತು ದಿನದವರೆಗೆ ಜಾತ್ರೆ ನಡೆಯುತ್ತದೆ. ದೇಸಾಯಿಯವರು ಕೊಡವನ್ನು ಆನೆ ಮೇಲೆ ಗುಳೆದ ಗುಡ್ಡಕ್ಕೆ ತರುತ್ತಾರೆ. ಕೋಟೆಕಲ್ಲು ದೇಸಾಯಿಯವರು ಬೇಡ ಸಮುದಾಯದವರು ದೇವರ ಹಂದರಕ್ಕೆ ಹಾಲುಗಂಬ, ಹಸರುಗಂಬ ತರುವದು ಬೇಡ ಸಮುದಾಯದವರೇ. ದೇವರಿಗೆ ಹೋಳಿಗೆ ಎಡೆಯನ್ನು ಒಯ್ಯುವುದು. ಅಲ್ಲಿ ಜಾತ್ರೆ ಗುಂಪಲ್ಲಿ ಒಂದು ದಿನ ಬ್ಯಾಟಿ ಬೀಳು ತ್ತವೆ. ಈ ದೇವಿ ಜಾತ್ರೆಯದಿನ ಹಂದರ ಹಾಕುವಾಗ ಬಲಭಾಗದ ಹಂದರ ಪಾಲು ಬೇಡ ಸಮುದಾಯದ್ದು. ಪೂರ್ವ ಇತಿಹಾಸ ಹಾಗೂ ಧಾರ್ಮಿಕತೆಯನ್ನು ಮೆಲಕು ಹಾಕಿದಾಗ ಈ ಮೂಕನೆವ್ವ ಮೂರುಡಿ ದ್ಯಾಮನಗೌಡ್ರ ಮನೆತನದವರ ಮಗಳು ಎಂದು ತಿಳಿದುಬರುತ್ತದೆ. ಈಗಲೂ ಆ ಮನೆತನದವರು ಆ ದೇವಿಗೆ ನಡೆದುಕೊಳ್ಳುತ್ತಾರೆ. ಈ ಜಿಲ್ಲೆಯಲ್ಲಿ ನಾಗರ ಪಂಚಮಿಯನ್ನು ಅದ್ದೂರಿಯಾಗಿ ಆಚರಿಸುವರು. ನಾಗಪ್ಪಗೆ ಹಾಲು ಎರೆಯುವಾಗ ಊರ ವರು ತಂದ ಎಡೆಯನ್ನು ನೈವೇದ್ಯಮಾಡಿದ ಉಂಡಿ, ಅರಳು, ಎಲ್ಲವನ್ನು ಸಮುದಾಯದ ಪೂಜಾರಿಗೆ ಕೊಟ್ಟುಹೋಗುವರು. ಊರಿಗೊಂದು ಬೋರಗಲ್ಲು ಇರುತ್ತದೆ. ಅಂದರೆ ಈ ಬೋರಗಲ್ಲು ಊರ ಅಗಸಿ ಬಾಗಿಲದ ಆಚೆ ಇರುತ್ತದೆ. ಅದಕ್ಕೆ ಭರಮದೇವರು ಎಂದು ವಾಡಿಕೆ. ಊರೊಳಗೆ ಭೂತ ಪ್ರೇತಗಳು ಬರದಂತೆ ಕಾಯುವ ಕಾರ್ಯ ಈ ಭರಮದೇವರದು ಎನ್ನುತ್ತಾರೆ. ಬೇಡ ಸಮುದಾಯದವರು ಒಟ್ಟಿಗೆ ಹೋಗುವಾಗ ಬೋರಗಲ್ಲಿಗೆ ನಮಸ್ಕರಿಸಿ ಹೋಗುವುದು, ಬ್ಯಾಟಿ ಬಿದ್ದಾಗ ಅದನ್ನು ತಂದು ಬೋರಗಲ್ಲಿಗೆ ಇಟ್ಟು ಪೂಜಿಸಿ ಬಲಿಕೊಟ್ಟು ಮಾಂಸದ ಎಡಿ ಹಿಡಿಯುತ್ತಾರೆ.

ಸತ್ತ ಮೂರು ದಿನದಾಗ ಹೊಲಿ ತೊಳೆಯುವುದು ಜೀವ ಬಿಡುವಾಗ ಆ ವ್ಯಕ್ತಿ ತೊಟ್ಟ ಬಟ್ಟೆಯನ್ನು ಹೊಳೆಯಲ್ಲಿಯೋ, ಹಳ್ಳದಲ್ಲಿಯೋ ತೊಳೆದುತಂದು ಮೂರು ದಿನದಾಗ ಪೂಜೆ ಮಾಡುತ್ತಾರೆ. ಒಂಭತ್ತು ದಿನದ ನಂತರ ದೈವದಾಗ ಹಾಕಿಕೊಳ್ಳುತ್ತಾರೆ. ಆ ದಿನ ಹೊಸ ಅರಬಿ ತಂದು ಸಿಹಿ ಅಡುಗೆ ಮಾಡಿ ದೈವಕ್ಕೆ ಊಟ ಹಾಕುವುದು. ದೈವದ ಕೈ ತೊಳಸ್ತಾರೆ ಆಗ ಸತ್ತ ಮನುಷ್ಯ ದೈವಸ್ವರೂಪವಾಗುತ್ತಾನೆ.

ಫೋಟೋ ಪೂಜಿಸುತ್ತಾರೆ. ಹಣಮಂತ ದೇವರು ಈ ಜಿಲ್ಲೆಯ ಬೇಡ ಸಮುದಾಯದ ಆರಾಧ್ಯ ದೇವರು. ಜಾತ್ರೆಯ ದಿನ ಸಮುದಾಯದವರೆಲ್ಲಾ ಪಾಲ್ಗೊಂಡು ಆಚರಣೆ ಮಾಡುತ್ತಾರೆ. ಓಕಳಿ ದಿನ ಓಕಳಿ ಹೊಂಡಕ್ಕೆ ಒಕ್ಕಲಿಗರ ಜನ ಬಣ್ಣ ಹಾಕುತ್ತಾರೆ. ಬೇಡ ಸಮುದಾಯದವರು ಬೇರೆಯವರಿಗೆ ನೀರು ಗೊಜ್ಜುವುದು ಇಲ್ಲಿನ ವಾಡಿಕೆ. ಅಲ್ಲದೆ ಊರ ಜನ ಊರಾಗ ಬಿಟ್ಟ ಹೆಣ್ಣು ಮಕ್ಕಳಿಗೆ ನೀರು ಗೊಜ್ಜು ಆದ ನಂತರ ಅವರನ್ನು ಮನೆಗೆ ಕರೆದುಕೊಂಡು ಹೋಗಿ ಸೀರೆ ಕುಪ್ಪಸ ಕೊಟ್ಟು ಕಳಿಸುವ ಸಂಪ್ರದಾಯ ಇದೆ.

ಈ ಸಮುದಾಯದಲ್ಲಿ ಬರುವ ಇನ್ನೊಂದು ವಿಶಿಷ್ಟ ಜನವೆಂದರೆ ಕರಕರ ಮೊಂಡರು. ಕೈಯಲ್ಲಿ ಒಂದು ಕಡಗ ಹಾಕಿಕೊಂಡು ಮನೆಬಾಗಿಲ ಮುಂದೆ ನಿಂತು ಭಿಕ್ಷೆ ಕೇಳುವುದು. ಭಿಕ್ಷೆ ಕೊಡುವವರೆಗೂ ಆ ಮನೆಯಿಂದ ಕದಲುವುದಿಲ್ಲ. ಚೂರಿಯಿಂದ ರಕ್ತ ಹಾಯಿಸಿ ಕೊಂಡು ವಿಚಿತ್ರ ರೀತಿಯಲ್ಲಿ ವರ್ತಿಸುತ್ತಾ ಮನೆಮುಂದೆ ನಿಂತುಕೊಳ್ಳುತ್ತಾರೆ. ಭಿಕ್ಷೆ ಕೊಟ್ಟ ಮೇಲೆ ಮುಂದಿನ ಮನೆಗೆ ಹೋಗುತ್ತಾರೆ.

ಈ ಜಿಲ್ಲೆಯ ಬೇಡ ಸಮುದಾಯದವರು ಸುರುಪುರ, ಮಸ್ಕಿ, ಮುದಗಲ್, ಮುನಿರಾ ಬಾದ್ ಮೂಲದವು ಎಂದು ತಿಳಿದು ಬರುತ್ತದೆ. ಲಕ್ಕಸಕೊಪ್ಪ ಗ್ರಾಮದ ತುಳಸಿಗಿರೆಪ್ಪ ತಳವಾರ್ ಅವರ ಪ್ರಕಾರ ಚಂದ್ರಗಿರೆವ್ವ, ಕೆಲೂಡಿ ರಂಗನಾಥ ಈ ಭಾಗದ ಜನರ ಆರಾಧ್ಯ ದೈವ ಎಂದು ಹೇಳುತ್ತಾರೆ. ದೇವದಾಸಿಯರು ಹೆಚ್ಚಾಗಿದ್ದ ಈ ಭಾಗದಲ್ಲಿ ಅವರೆಲ್ಲ ಕೆಲೂಡಿ ರಂಗನಾಥನಿಗೆ ನಡೆದುಕೊಳ್ಳುತ್ತಾರೆ. ಈ ದೇವದಾಸಿಯರು ಹಣೆಯಲ್ಲಿ ಕುಂಕುಮವನ್ನು ಉದ್ದವಾಗಿ (ಗೋಟಾಗಿ) ಹಚ್ಚುತ್ತಾರೆ. ಉಚ್ಛ ಕುಲದವರು ಹಿಂದಿನ ದಿನದಲ್ಲಿ ಬೇಡ ಸಮುದಾಯದ ಕೆಲವು ಮಹಿಳೆಯರನ್ನು ದೇವದಾಸಿಯರನ್ನಾಗಿ ದೇವರ ಹೆಸರಿನಲ್ಲಿ ಬಿಡುತ್ತಿದ್ದರು. ದೊಡ್ಡವರ ವಿರುದ್ಧ ಪ್ರತಿಭಟಿಸದೇ ದೇವರ ದಯವಿದ್ದಂತೆ ಆಗಲೆಂದು ಪರಿಶಿಷ್ಟರು ಸಮ್ಮತಿಸುತ್ತಿದ್ದರು. ಉಚ್ಛಕುಲದವರು ಈ ಮಹಿಳೆಯರನ್ನು (ದೇವದಾಸಿ ಯರನ್ನು) ಮೋಜಿಗಾಗಿಯೋ ಅಥವಾ ತಮ್ಮ ಸೇವೆಗಾಗಿಯೋ ಬಳಸಿಕೊಳ್ಳುತ್ತಿದ್ದರು ಎಂಬ ಪ್ರತೀತಿ ಇದೆ. ಈಗ ಈ ಸಂಪ್ರದಾಯ ಅಷ್ಟಾಗಿ ಕಂಡುಬರುತ್ತಿಲ್ಲ. ಈ ಸಮುದಾಯದ ಮಹಿಳೆಯರು ಮೂಗುತಿಯನ್ನು ಎಡಗಡೆ ಇಡುವುದು ವಾಡಿಕೆ. ಚೌರಬೀಸುವ ಹೆಣ್ಣು ಮಕ್ಕಳು ಹಣೆಗೆ ಹಸಿರು ಮಿಶ್ರಿತ ಕುಂಕುಮ ಹಚ್ಚುವರು. ಅಲ್ಲದೇ, ಇಲ್ಲಿನ ಕೆಲವು ದೇವರು ಗಳಿಗೆ ಬೇಡ  ಸಮುದಾಯದ ಮನೆಯ ಎಡೆ ಏರುವುದಿಲ್ಲ. ಅಂತಹ ದೇವರಿಗೆ ಹಣ್ಣು, ಕಾಯಿ, ಅಕ್ಕಿ, ಕೊಬ್ಬರಿ, ಕೊಟ್ಟು ನೈವೇದ್ಯ ಮಾಡಿಸುತ್ತಾರೆ.

ಈ ಸಮುದಾಯದ ಹಳೆಯ ತಲೆಮಾರಿನವರು ಮುಂಜಾನೆ ಎದ್ದ ಕೂಡಲೇ ಸೂರ್ಯ ನಮಸ್ಕಾರ ಮಾಡುವ ರೂಢಿಯಿದೆ. ಹಕ್ಕಿ ಶಕುನಗಳಲ್ಲಿ ಈ ಸಮುದಾಯದವರು ನಂಬಿಕೆ ಇಟ್ಟುಕೊಂಡಿದ್ದಾರೆ. ಹಾಲಕ್ಕಿ ಒಂದು ಸಲ ನುಡಿದರೆ ಅಪಶಕುನ, ಎರಡು ಸಲ ನುಡಿದರೆ ಶುಭ ಎಂದು ನಂಬಿಕೊಂಡಿದ್ದಾರೆ. ಬೇಟೆಗೆ ಹೊರಡುವ ಸಂದರ್ಭದಲ್ಲಿ ಹಾಲಕ್ಕಿ ನುಡಿಯು ವುದರ ಮೇಲೆ ಬೇಟೆ ಸಿಗುವುದನ್ನು ಖಾತ್ರಿ ಪಡಿಸಿಕೊಳ್ಳುತ್ತಿದ್ದರು. ಇನ್ನು ಟೀವಕ್ಕಿ ಯಾರ ಮನೆ ಮೇಲೆ ಕೂಗುತ್ತದೆಯೋ ಅವರಿಗೆ ಕೇಡು ಎಂದು ನಂಬಿದ್ದಾರೆ. ಗೂಗಿ ನುಡಿಯುವುದು ಅಶುಭದ ಸಂಕೇತ ಎಂದು ಈ ಜನರ ಗಾಢನಂಬಿಕೆ. ಮುಸ್ಲಿಂರ ಹಬ್ಬವಾದ ಮೊಹರಂ ಹಬ್ಬವನ್ನು ಈ ಭಾಗದ ಅನೇಕ ಗ್ರಾಮಗಳಲ್ಲಿ ಊದು ಹಾಕುವುದು, ದೇವರ ಹಿಡಿಯುವುದು ಬೇಡ ಸಮುದಾಯದವರೇ ಅಲ್ಲದೇ ಈ ಸಮುದಾಯದ ಮಕ್ಕಳಾದಿಯಾಗಿ ಫಕೀರ ಆಗುವುದು ಇಲ್ಲಿನ ವೈಶಿಷ್ಟ್ಯ.

ಮದುವೆ ಸಂದರ್ಭದಲ್ಲಿ ಒಳಕಲ್ಲು ಪೂಜೆಯನ್ನು ಐದಗಿತ್ತೆಯರು ಮುತ್ತೈದೆಯರು ಮಾಡುವರು. ಆದಿನ ಐದು ಜನ ಮುತ್ತೈದೆಯರು ಉಪವಾಸ ವೃತಮಾಡಿ ಮಡಿಯಿಂದಲೇ  ಒಳಕಲ್ಲ ಪೂಜೆ ಮಾಡುವರು. ಅಲ್ಲದೇ, ಕಳಸಕ್ಕೆ ನೂಲು ಸುತ್ತವುದು ಹೀಗೆ ನೂಲು ಸುತ್ತುವಾಗ ಬಸವಣ್ಣ ದೇವರ ಹಾಗೂ ಮನೆದೇವರ ಹೆಸರಲ್ಲೆ ನೂಲುಸುತ್ತುವರು. ಶವಸಂಸ್ಕಾರದ ಸಂದರ್ಭದಲ್ಲಿಯೂ ಕೂಡ ಕೆಲವು ಸಂಪ್ರದಾಯವನ್ನು ರೂಢಿಸಿಕೊಂಡು ಬಂದಿದ್ದಾರೆ. ಸತ್ತ ಶವವನ್ನು ಚಟ್ಟ ಅಥವಾ ಡೋಲಿಯಲ್ಲಿ ಒಯ್ಯುವುದು,ಪಟಾಕಿ ಸಿಡಿಸುವುದು, ಚಿಲ್ಲರೆ ಹಣವನ್ನು ಶವ ಒಯ್ಯುವಾಗ ತೂರುವುದು ಅಲ್ಲದೇ ನವಣೆ ಕಾಳು ತೂರುವುದು ವಾಡಿಕೆ. ಹಾಗೂ ಹೆಣವನ್ನು ಸುಡುವುದು ಇಲ್ಲವೇ ಹೂಳುವುದು ರೂಢಿ. ಮದುವೆ ಆಗದೇ ವಯಸ್ಕ ಸತ್ತರೆ ಚಟ್ಟದಲ್ಲಿ ಬೋರಲು ಹಾಕಿ ಒಯ್ಯುವುದು ಸಂಪ್ರದಾಯ.

ದುರಗಮುರಗಿ ಸಂಪ್ರದಾಯ ಆಚರಣೆಯು ಕೂಡ ಜಿಲ್ಲೆಯಲ್ಲಿ ಅಲ್ಪಮಟ್ಟಿಗೆ ಗೋಚರವಾಗುತ್ತಿದೆ. ಆದರೆ ಸಂಪ್ರದಾಯ ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಇದ್ದಷ್ಟು ಪ್ರಮಾಣದಲ್ಲಿಲ್ಲ. ದುರ್ಗಿಯನ್ನು ಒಂದು ಮರದ ಪೆಟ್ಟಿಗೆಯಲ್ಲಿ ಉದ್ದ ಕೋಲು ಹಾಕಿ ಹೊತ್ತುಕೊಂಡು ಊರೂರು ಅಲೆಯುವದು. ಬರಿಮೈಯ್ಯಲ್ಲಿ ತುಂಡು ಬಟ್ಟೆಯನ್ನ ಹೊಚ್ಚಿಕೊಂಡು ತಲೆಯಲ್ಲಿ ಉದ್ದ ಕೂದಲು ಬಿಟ್ಟು ಒಂದು ಬಾರಕೋಲಿನಿಂದ ಹೊಡೆದು ಕೊಳ್ಳುತ್ತಾ ತಿರುಗುವರು. ಅಲ್ಲದೇ ದೇವಿ ಹೊತ್ತ ವ್ಯಕ್ತಿಯ ಹೆಂಡತಿಯೋ ಮಗಳೋ ಒಂದು ಡೋಲು ಭಾರಿಸುತ್ತಾ ದೇವಿಯ ಮಹಿಮೆಯನ್ನು ಹೊಗಳುವುದು ದುರುಗಮುರಗಿ ಯವರ ಸಂಪ್ರದಾಯ. ಈ ಸಮುದಾಯ ಹಿಂದೆ ಇದ್ದಷ್ಟು ಈಗ ಅಷ್ಟಾಗಿ ಕಾಣುತ್ತಿಲ್ಲ ಎನ್ನುತ್ತಾರೆ ಮುರಡಿ ಗ್ರಾಮದ ಮಲ್ಲಪ್ಪ ದ್ಯಾಮನಗೌಡ್ರು.

ಬೀಳಗಿ ತಾಲೂಕಿನ ಕಪ್ಪರಪಡಿಯವ್ವ ವೀರ ಸಿಂಧೂರ ಲಕ್ಷ್ಮಣನಿಗೆ ಆಶ್ರಯ ನೀಡಿದ ಆರಾಧ್ಯ ದೈವ. ಬ್ರಿಟೀಷರಿಂದ ತಲೆಮರೆಸಿಕೊಂಡು ಕಾಡುಮೇಡು ಅಲೆಯುವ ಸಿಂಧೂರ ಲಕ್ಷ್ಮಣನಿಗೆ ತಾಯಿ ಕಪ್ಪರ ಪಡಿಯವ್ವನ ಗುಡ್ಡವೇ ಆಶ್ರಯತಾಣ. ಕೊನೆಗೆ ಅದೇ ಸಮುದಾಯದವರ ಕುಟಿಲೋಪಾಯದಿಂದ ಬ್ರಿಟೀಷರಿಂದ ಸಿಂಧೂರ ಲಕ್ಷ್ಮಣ ಹತ ನಾದುದು ಎಲ್ಲರಿಗೂ ತಿಳಿದವಿಷಯ. ಲಕ್ಷ್ಮಣ ಪ್ರಾಣಬಿಡುವಾಗ ತಾಯಿ ಕಪ್ಪರಪಡಿಯವ್ವ ನನ್ನು ಜೋರಾಗಿ ಕೂಗಿ ಪ್ರಾಣಬಿಟ್ಟನೆಂಬ ವಾಡಿಕೆ ಇದೆ. ಇನ್ನು ಈ ಜಿಲ್ಲೆಯ ಕೆಲವು ಕಡೆ ಗಳಲ್ಲಿ ಜೋಕುಮಾರ ಹುಣ್ಣಿಮೆಯಲ್ಲಿ ಜೋಕುಮಾರನನ್ನು ಒಂದು ಬಿದಿರಿನ ಪುಟ್ಟಿಯಲ್ಲಿ ಹೊತ್ತು ಊರೂರು ಸುತ್ತಿ ಬರುತ್ತಿದ್ದರೆಂದು ವಾಡಿಕೆ ಇದೆ. ಮಳೆಗಾಲದ ಸಂದರ್ಭದಲ್ಲಿ ಚೋಕುಮಾರನನ್ನು ಹಾಡಿ ಹೊಗಳುವರು. ''ಅಡ್ಡಡ್ಡ ಮಳೆ ಬಂದು ದೊಡ್ಡ ದೊಡ್ಡ ಕೆರೆ ತುಂಬಿ ಗೊಡ್ಡುಗಳೆಲ್ಲಾ ಹೈನಾದ್ವ ಜೋಕುಮಾರ'' ಎಂದು  ಹಾಡುತ್ತ ತಿರುಗುವುದು ಬೇಡ ಸಮುದಾಯದ ಮಹಿಳೆಯರು ಎಂಬುವುದು ತಿಳಿದುಬರುತ್ತದೆ.

ಅಲ್ಲದೇ ಮಳೆಗಾಲದಲ್ಲಿ ಮಳೆ ಬಾರದೇ ಇದ್ದಾಗ ಊರವರೆಲ್ಲ ಸೇರಿ ಗುರ್ಚಿ ಮೆರವಣಿಗೆ ಮಾಡಿಸುವುದು ರೂಢಿಯಲ್ಲಿತ್ತು. ಅಂದರೆ ಗುರ್ಚಿ ಮೆರವಣಿಗೆ ಮಾಡಿದರೆ ಮಳೆ ಆಗುತ್ತದೆ ಎಂಬ ನಂಬಿಕೆ ಇದೆ. ಹಾಗಾಗಿ ಊರ ತುಂಬ ಗುರ್ಚಿ ಹೊತ್ತು ತಿರುಗುವರು. ಆಗ ಮನೆ ಮನೆಯವರು ಕಾಲಿಗೆ ನೀರು ಹಾಕಿ, ಊದಿನಕಡ್ಡಿ ಬೆಳಗಿ ಮುಂದೆ ಕಳುಹಿಸುವುದು ಸಂಪ್ರದಾಯ. ಆಗ ಗುರ್ಚಿ ಹೊತ್ತು ಊರು ಸುತ್ತಿ ಬರುವವರು ಬೇಡ ಸಮುದಾಯದವರೇ ಎಂಬುದು ಪ್ರತೀತಿ ಇದೆ.

ಒಟ್ಟಾರೆ, ಈ ಜಿಲ್ಲೆಯಲ್ಲಿ ಬೇಡ ಸಮುದಾಯದವರು ಬಹು ಸಂಖ್ಯೆಯಲ್ಲಿದ್ದು ಉಳಿದ ಸಮುದಾಯದ ಒಂದು ಮುಖ್ಯ ಭಾಗದಂತೆ ಇದ್ದಾರೆ. ವಿಜ್ಞಾನ ತಂತ್ರಜ್ಞಾನದ ಆವಿಷ್ಕರಣೆ ಯಲ್ಲಿ ಮೂಲ ಸಂಪ್ರದಾಯವನ್ನು ಕಡೆಗಣಿಸಿ, ಈ ಸಮುದಾಯದವರು ಬೇರೆಯವರಂತೆ ಆಚರಣೆ ಸಂಪ್ರದಾಯದಲ್ಲಿ ತೊಡಗಿದ್ದರೂ, ದೈವಾಚಾರದಲ್ಲಿ ಹಿರಿಯರ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದಾರೆ. ಈ ಜಿಲ್ಲೆಯಲ್ಲಿ ಬೇಡ ಸಮುದಾಯದ ಸಾಹಸಗಾತೆ ಲಾವಣಿ ಗಳಾಗಿ ಜನಪದರ ಬಾಯಲ್ಲಿ ಹರಿದು ಬರುತ್ತಿವೆ. ದೈವಗಳ ಲೋಕದಲ್ಲಿ ಬೇಡ ಸಮುದಾಯ ತನ್ನ ಮೂಲತನವನ್ನು ಉಳಿಸಿಕೊಂಡಿದೆ ಎಂದಷ್ಟೇ ಹೇಳಬಲ್ಲೆ.

* * *

**ಹಲಗಲಿ ಬೇಡರು**

ದೇವರ ತಂದ ಪಡಿಪಾಟಾ
ಚೆಂತಿ ಹತ್ತಿ ಆದರೋ ನಷ್ಟಾ
ಅಧಿಕಾರ ಉಳಿಯಲಿಲ್ಲ ಯೆಳ್ಳಅಷ್ಟಾ
ಕೇಡಗಾಲ ಊಂದಿತು ಕನಿಕಷ್ಟಾ

ಹೆಂಗಸ್ಆಗಿ ಶೀರಿಯ ವುಟ್ಟಾ
ಸೋಂಡ್ಒಣಗಿ ಆದೀತೋ ಬೊಬ್ಬಾಟಾ

ಅದ್ಹಾಂಗ್ಅತಿ ಸ್ತ್ರೀಯರ ಕ್ರೀಡಾದ್ ಆಟಾ
ಭಂಟರಿಗೆ ಬಂದಿತೊ ಕಿಕ್ಕಷ್ಟಾ ||ಯೇರ||

ಪಕ್ಕಾ ಕಿತ್ತ ಪಕ್ಷಿ ಗತಿ ಆಗಿ ಚಿಂತಿ ಅದರ ಮನಕ

���� p� � ಲಾವಣಿಗಳು ಪುಸ್ತಕದಿಂದ ಆಯ್ದುಕೊಂಡಿದ್ದೇನೆ).

* * *

**ಹಲಗಲಿ ಬೇಡರು**

ಬೇಡಿದಾ ಕ್ಷಣಕ ತಾವು ತಂದು
ಕೊಡತಾರ ಹಿಡಿಹಿಡಿರ್ ಎಂದು

ವತ್ನ ಕೊಡತೇವ್ ಅನ್ನರಿ ವೊಂದ್ ಒಂದು
ತಂದು ಕೊಡತಾರ ತಮ್ಮ ಕುಸಿಲಿಂದು

ಬಂದಿತು ಹುಕುಮ ಹೀಂಗ್ ಎಂದು
ಡಣ್ಗರ ಸಾರಿದರ ಮುಂದು

ಶೂರ ಶಿಪಾಯಿಜನರ ತಾವು ತಿಳಿದು
ಅಳತಾಯ ಕಣ್ಣಿಗೆ ನೀರ್ ತಂದು ||ಯೇರ||

ಬಹಳ ಚಿಂತಿಯ್ಆಗಿ ದುಃಖೂಖದಿಂದ ಅವರು ಬಿದ್ದರ್-ಅಣ್ಣ ನೆಲಕ

ಚಿತ್ರದುರ್ಗ, ಸುರಪುರ, ಹಲಗಲಿಯ ಬೇಡರ ಶೌರ್ಯ, ಪರಾಕ್ರಮಗಳು ಯಾವ ಕಾಲಕ್ಕೂ ಚಿರಸ್ಮರಣೀಯ

**– ಹರ್ತಿಕೋಟೆ ವೀರೇಂದ್ರ ಸಿಂಹ**

## ೧೬. ಜಾತ್ರೆ-ಉತ್ಸವಗಳು

ಜನಪದ ಅಂಶಗಳ ಯಾವುದೇ ಉಗಮದ ಬಗ್ಗೆ ನಿರೂಪಿತವಾಗುವ ಸಿದ್ಧಾಂತ ಮತ್ತು ವಿಧಾನಗಳು ಕೇವಲ ಊಹೆಯ ನಿಲುವಿನಲ್ಲಿಯೇ ಬರುವಂತಹವು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಆಚರಣಾತ್ಮಕ ನೆಲೆಗಳಲ್ಲಿ "ಜಾತ್ರೆ ಉತ್ಸವಗಳು" ಜನಪದರ ಬದುಕಿನ ಆರಂಭದಿಂದಲೇ ಹುಟ್ಟಿಕೊಂಡವು. ಆರಂಭದಲ್ಲಿ ಹುಟ್ಟಿಕೊಂಡ ಈ ಜಾತ್ರೆ-ಉತ್ಸವಗಳಲ್ಲಿ ಪ್ರಧಾನವಾಗಿ ಕಾಣಸಿಗುವ ಅಂಶ ಒಪ್ಪಿತಭಾವನೆ ಅಥವಾ ಭಯ. ಸಮಾಜದ ಶ್ರೇಯಸ್ಸಿಗಾಗಿ, ಸಾಮಾಜಿಕ ಸಂಬಂಧಗಳ ಹೊಂದಾಣಿಕೆಗಾಗಿ, ಧಾರ್ಮಿಕ ನೆಲೆಗಟ್ಟಿನ ಸಮ್ಮಿಲನಕ್ಕಾಗಿ ಬದುಕಿನುದ್ದಕ್ಕೂ ವರ್ಷದ ವಿಶೇಷ ಸಂದರ್ಭಗಳಲ್ಲಿ ಉಲ್ಲಾಸ-ಉತ್ಸಾಹ ಹಾಗೂ ಸಂಭ್ರಮ ಸಂತೋಷಗಳಿಂದ ಆಚರಿಸ ಲ್ಪಡುವ ಜಾತ್ರೆ-ಉತ್ಸವಗಳು ವಾಸ್ತವವಾಗಿ ಸಾಂಪ್ರದಾಯಿಕ ನಡುವಳಿಕೆ-ಉಪಾಸನೆಗಳ ಕೇಂದ್ರಬಿಂದುವಾಗಿ ಕಂಡುಬರುತ್ತವೆ. ಜಾತ್ರೆ-ಉತ್ಸವಗಳು ಸಾಮಾನ್ಯವಾಗಿ ಸಾರ್ವತ್ರಿಕ ಅಥವಾ ಸಾಮೂಹಿಕ ಆಚರಣೆಗಳಾಗಿ ಸಾಂಘಿಕ ಹಾಗೂ ಸಾಂದರ್ಭಿಕ ವಿಶೇಷಗಳಾಗಿಯೂ ತೋರುತ್ತಲಿವೆ.

ಇಲ್ಲಿ ಮುಖ್ಯವಾಗಿ ಕಾಣುವ ಅಂಶ ದೈವ ಸಂಬಂಧದ ನಡುವಳಿಕೆ ಉಪಾಸನೆಗಳದು. ದೈವಾರಾಧನೆ ವ್ಯಕ್ತಿ ವ್ಯಕ್ತಿಗಿರುವ ಸಂಬಂಧ ಅತ್ಯಂತ ಅತ್ಮೀಯವಾಗಿ ಬೆಳೆದುಕೊಂಡು ಹೋಗುವಂತೆ ನೋಡಿಕೊಳ್ಳುತ್ತದೆ. ಪ್ರತಿಯೊಬ್ಬರು ಜಾತ್ರೆ-ಉತ್ಸವಗಳ ಕಾರ್ಯಾಚರಣೆ ಯಲ್ಲಿದ್ದಾಗಲಂತೂ ಧಾ್ಮಿರಕ ಭಾವನೆಯ ಜೊತೆಗೆ ಸಾಮಾಜಿಕ ರಾಜಕೀಯ ಬಾಂಧವ್ಯಗಳನ್ನು ಏರ್ಪಡಿಸಿಕೊಳ್ಳಲು ಅವಕಾಶವನ್ನಿತ್ತಿರುತ್ತದೆ. ಈ ಬುಡಕಟ್ಟು ಜನಪದರಿಗೆ ಇಂಥ ಅನ್ಯೋನ್ಯ ವಾದ ಹೊಂದಾಣಿಕೆಯ ಸಂಬಂಧಕ್ಕಿಂತ ಬೇರೇನೂ ಬೇಕಿರುವುದಿಲ್ಲ. ಹೀಗಾಗಿ ತಮ್ಮ ತಮ್ಮ ಇಚ್ಛಾನುಸಾರಗಳಂತೆಯೇ ಆಚರಿಸಿಕೊಳ್ಳುವ ಜಾತ್ರೆ-ಉತ್ಸವಗಳು ನೋಡುಗರ ಕಣ್ಣಿಗೆ ವಿಶೇಷ ವೈಭವಗಳನ್ನೇ ಸೃಷ್ಟಿಸಿದ ಹಾಗೆ ಕಾಣುತ್ತಿವೆ. ನಂಬಿಕೆಯ ಮುಂದುವರೆದ ರೂಪಗಳಾದ ಈ ಜಾತ್ರೆ-ಉತ್ಸವಗಳು ಅವರಿಗೆ ಒಂದು ರೀತಿಯ ಸಂವಿಧಾನ ಶಾಸ್ತ್ರಗಳಾಗಿ ಪರಿಣಮಿಸಿವೆ. ಅವರ ಧರ್ಮ ಹಾಗೂ ಸಂಸ್ಕೃತಿಯ ಚಟುವಟಿಕೆಗಳಲ್ಲಿ ಅನೇಕ ನಂಬಿಕೆಗಳು ಕಾಣಸಿಗುತ್ತವೆ. ಅವರು ಆಚರಿಸುವ ದಿನ, ವಾರ, ಹಬ್ಬ, ಜಾತ್ರೆ, ಉತ್ಸವ, ತೇರು, ಮುಂತಾದ ಪ್ರತಿಯೊಂದು ಆಚರಣೆಯಲ್ಲಿಯೂ ತಮ್ಮದೆ ಆದ ನಂಬಿಕೆಗಳನ್ನು ನಂಬಿಕೊಂಡಿದ್ದಾರೆ.

ಧಾರ್ಮಿಕತೆ ಜಾತ್ರೆ ಉತ್ಸವಗಳಿಗೆ ಅಂಟಿಕೊಂಡ ಒಂದು ಗುಣ. ಅದು ಗುಣವು ಹೌದು. ದೋಷವು ಹೌದು. ಧಾ್ಮಿರಕ ಗುಣ ಏಕೆಂದರೆ ಶಿಸ್ತು ಸಂಯಮದ ನಡುವಳಿಕೆಗಳನ್ನು ಅದು ರೂಢಿಸುತ್ತದೆ. ಅದು ದೋಷ ಏಕೆಂದರೆ ಸಂತೋಷದ ಸಂಭ್ರಮದಲ್ಲಿ ಅನಕ್ಷರಸ್ಥ ಜನಪದರನ್ನು ಸುಲಿಗೆಮಾಡುತ್ತದೆ. ಉಸಿರುಗಟ್ಟಿಸುವ ವಾತಾವರಣ ನಿರ್ಮಾಣ ಮಾಡುತ್ತದೆ. ಇವುಗಳಿಗೆ ಒಳಿತು ಕೆಡುಕುಗಳು ಎರಡೂ ಇದ್ದರೂ ಜನಪದರ ಬದುಕಿನಲ್ಲಿ ಇವು ಪಡೆದು ಕೊಂಡಿರುವ ಮಹತ್ವವೇ ಹೆಚ್ಚು ಎನ್ನಬೇಕು. ಈ ಆಚರಣೆಗಳು ಇರದಿದ್ದರೆ ಅವರ ಆಚಾರ-ವಿಚಾರ, ಹಬ್ಬ-ಹರಿದಿನ, ರೀತಿ-ನೀತಿ, ನೋವು-ನಲಿವು, ಮದುವೆ-ಮುಂಜಿ, ಸುಗ್ಗಿ, ಕುಣಿತ, ಅಡುಗೆ, ಊಟ, ವೈದ್ಯ ಮುಂತಾದ ಬದುಕಿನ ಯಾವ ಚಟುವಟಿಕೆಗಳೂ ಇರುತ್ತಿರ ಲಿಲ್ಲವೇನೋ ಅನ್ನುವಷ್ಟರ ಮಟ್ಟಿಗೆ ಬೆಳೆದುಕೊಂಡು ಬಂದಿವೆ. ಹುಟ್ಟಿನಿಂದ ಸಾಯುವರೆಗಿನ ಅವರ ಬದುಕಿನ ಪ್ರತಿಯೊಂದು ಚಟುವಟಿಕೆಗಳಲ್ಲಿಯೂ ಕಾಣಸಿಗುತ್ತವೆ. ಬದುಕಿನ ಏರಿಳಿತಗಳಲ್ಲಿ ಸಾವು ನೋವಿನಲ್ಲಿ ಅಚ್ಚಾಗಿವೆ ಹೆಚ್ಚಾಗಿವೆ. ಇವು ಜನಪದರಿಗೆ ಅನೇಕ ರೀತಿಯ ಒಳ್ಳೆಯ ಅವಕಾಶಗಳನ್ನು ಸೃಷ್ಟಿಸಿವೆ. ಜನರು ಸ್ನಾನ, ಮಡಿಯಲ್ಲಿದ್ದು ಸಾಂಪ್ರ ದಾಯಿಕ ವೇಷಭೂಷಣಗಳನ್ನಾಧರಿಸಿ ಹಿರಿಯರನ್ನು ಸ್ಮರಿಸಲು ನಂಬಿದ ದೈವಗಳ ಉಪಾಸನೆ ಮಾಡಲು ದೈವದ ಉತ್ಸವ ಮೂರ್ತಿಯನ್ನು ಮೆರೆಸಲು ಅವು ಸಂದರ್ಭಗಳು. ಔತಣಕೂಟ ಗಳನ್ನೇರ್ಪಡಿಸಿ ಹಿರಿಯರಿಗೆ ಎಡೆ ಸಲ್ಲಿಸಿ ಆಪ್ತರೊಂದಿಗೆ ಸಹಭೋಜನ ನಡೆಸಲು ಕಲ್ಪಿತವಾದ ಅವಕಾಶಗಳು. ಇಂಥ ಸಹಭೋಜನಗಳು ಬಿರುಕು ಬಿಟ್ಟ ಮನಸ್ಸುಗಳು ಒಂದಾಗಲು ನೆರವಾಗುತ್ತವೆ.

ಬಾಗಲಕೋಟೆ ಪರಿಸರದ ಜಾತ್ರೆ ಉತ್ಸವಗಳನ್ನು ವಿಶ್ಲೇಷಿಸುವಾಗ ಗಮನಿಸಬೇಕಾದ ಅಂಶಗಳು ಹಲವಾರು ಇವೆ. ಸಾರ್ವತ್ರಿಕ ಅಥವಾ ಸಾಮೂಹಿಕ ಆಚರಣೆಗಳೆನಿಸಿರುವ ಯುಗಾದಿ, ದೀಪಾವಳಿ, ಶಿವರಾತ್ರಿ, ಗೌರಿಗಣೇಶ, ಶ್ರಾವಣ, ಬಸವಜಯಂತಿ ಈ ಮೊದಲಾದ ಹಬ್ಬಗಳಲ್ಲಿ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಭಾವೈಕ್ಯದ ಪ್ರತಿಪಾದನೆಗಳ ಸಂಗತಿಗಳನ್ನು ಮರೆಯುವಂತಿಲ್ಲ. ಏಕಕಾಲದಲ್ಲಿ ಒಂದೇ

ರೀತಿಯ ನಿಯಮದ ಕಟ್ಟುಪಾಡುಗಳ ಜಾಡನ್ನೇ ಹಿಡಿದು ಪ್ರತಿಪಾದಿಸುವ ಅಂಶಗಳು ಇಲ್ಲಿರುವುದು ಸಹಜ. ಆದರೆ ಪ್ರಾದೇಶಿಕ ಭಿನ್ನತೆಗಳ ದೃಷ್ಟಿಯಲ್ಲಿ ನಾವು ಈ ಜಾತ್ರೆ ಉತ್ಸವಗಳನ್ನು ಗಮನಿಸಿದಾಗ ಈ ಎಲ್ಲ ಉತ್ಸವಗಳ ಮೇಲೆ ರಾಮಾಯಣ ಹಾಗೂ ಮಹಾಭಾರತ ಮಹಾಕಾವ್ಯಗಳ ಪ್ರಭಾವ ಬಿದ್ದದ್ದು ತಿಳಿದು ಬರುತ್ತದೆ. ಅಲ್ಲದೆ ಹಿಂದೂ ಧರ್ಮದ ಇತ್ತಿತ್ತಲಾಗಿ ವೀರಶೈವ ಧರ್ಮಗಳ ಪ್ರಭಾವ ಆದದ್ದೇ ಇನ್ನು ಗಮನಿಸಬೇಕಾದ ಸಂಗತಿಯಾಗಿದೆ. ಬಾಗಲಕೋಟೆ ಪರಿಸರ ಎಂದಾಗ ಹಲಗಲಿಯದೇ ಒಂದು ಪ್ರಧಾನ ಕವಲಾಗಿ ಒಡೆದರೂ ಅಲ್ಲಿಯ ಮೂಲ ಆಚರಣೆಗೆ ದಕ್ಕೆ ಬಂದಿರಲಿಕ್ಕಿಲ್ಲ ಎಂದು ಹೇಳುವ ಸಾಹಸ ಬಹುಷಃ ಯಾರಿಗೂ ಇರಲಿಕ್ಕಿಲ್ಲ ಎಂದು ಅನಿಸುತ್ತದೆ. ಉದಾಹರಣೆಗೆ ಯುಗಾದಿ. ಇದು ವರ್ಷದ ಮೊದಲಹಬ್ಬ. ಹೊಸ ಸಂವತ್ಸರ, ಹೊಸಬದುಕು, ಹೊಸಯುಗ. ವರ್ಷವೆಲ್ಲ ದುಡಿದು ದಣಿದು ಆಯಾಸಗೊಂಡು ವಿಶ್ರಾಂತಿಯ ಹಂತಕ್ಕೆ ಬಂದಿರುವ ವ್ಯಕ್ತಿಗೆ ಹೊಸವರ್ಷಕ್ಕೆ ಬದುಕಿಗೆ ಕಾಲಿಕ್ಕಲು ಯುಗಾದಿ ಹಬ್ಬ ಸ್ವಾಗತ ನೀಡುತ್ತದೆ. ಹೊಸವರ್ಷದ ಬೇಟೆಯ ಹಾಗೂ ಬೇಸಾಯದ ಸಲುವಾಗಿ ಸಲಕರಣೆ ಗಳನ್ನು ಸಿದ್ಧಪಡಿಸಿಕೊಳ್ಳುವುದು. ಹೊಸಬಟ್ಟೆ ಧರಿಸಿ ಹೊಸಶ್ಯಾವಿಗೆ ಹೊಸೆದುಕೊಂಡು ಬೇವಿನರಸದ ಜೊತೆಗೆ ಶ್ಯಾವಿಗೆಯ ಸಿಹಿಪಾಯಸ ಉಣ್ಣುವುದು ವಾಡಿಕೆಯಲ್ಲಿದೆ. ಆಯಾ ವರ್ಷದ ಕಷ್ಟಸುಖದ ಮುಂಬಾಳಿನ ಸೂಚನೆಗಳಾಗಿ ಈ ಹಬ್ಬ ಕಾಣಸಿಗುತ್ತದೆ.

ಶ್ರಾವಣ ಮಾಸದ ಒಂದು ಉದಾಹರಣೆ ಶ್ರವಣ ಎಂದರೆ ಕೇಳುವುದು ಒಳ್ಳೆಯದನ್ನು ಆಲಿಸುವುದಾಗಿದೆ. ಶ್ರಾವಣ ದೇಹಾರೋಗ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಹುಟ್ಟಿಕೊಂಡಿರು ವಂತಹದು ಎಂಬ ನಂಬಿಕೆ ವಾಲ್ಮೀಕಿ ಸಮುದಾಯದ ಜನರಲ್ಲಿದೆ. ವರ್ಷದ ಬಹುತೇಕ ದಿನಗಳಲ್ಲಿ ಮಾಂಸಾಹಾರವನ್ನು ಉಪಯೋಗಿಸುವ ಈ ಜನ ಶ್ರಾವಣ ಮಾಸದಲ್ಲಿ ಇದನ್ನು ಕೈಬಿಟ್ಟು ಸಸ್ಯಾಹಾರವನ್ನು ಸೇವಿಸುವುದು ರೂಢಿ. ಅಲ್ಲದೆ ಈ ಮಾಸದ ಎಲ್ಲಾ ಶನಿವಾರ ಗಳಲ್ಲೂ ಒಪ್ಪೊತ್ತು (ಒಂದು ಹೊತ್ತು ಉಪವಾಸ) ಆಚರಿಸುವುದು ರೂಢಿಯಲ್ಲಿದೆ. ರಾಷ್ಟ್ರೀಯ ಹಬ್ಬದ ಸಾಲಿನಲ್ಲಿ ಸಾರ್ವತ್ರಿಕವಾಗಿ ಆಚರಣೆಗೊಳ್ಳುವ ಇನ್ನೊಂದು ಪ್ರಮುಖ ಹಬ್ಬವೆಂದರೆ ದೀಪಾವಳಿ. ಇದು ನಾಲ್ಕು ಐದು ದಿನ ಅವಧಿಯಲ್ಲಿ ಸಂಭ್ರಮೋತ್ಸಾಹದಿಂದ ಆಚರಿಸಲ್ಪಡುತ್ತದೆ. ಮೊದಲದಿನ ನೀರು ತುಂಬುವುದು, ಜಳಕ ಮಾಡುವಾಗ ಉಪಯೋಗಿ ಸುವ ಹಂಡೆ, ಹರವಿಗಳಿಗೆ ಸುಣ್ಣ (ಪಟಗ) ಕೆಮ್ಮಣ್ಣು ಸಾರಣೆ ಮಾಡುತ್ತಾರೆ. ಹೋಳಿ ಹುಣ್ಣಿಮೆಯ ಸಂದರ್ಭದಲ್ಲಿ ಕುಳ್ಳು ಕಟ್ಟಿಗೆ ಕಳುವು ಮಾಡಿದರೆ ಶಿಕ್ಷೆ ಇಲ್ಲವಂತೆ. ಈ ಸಂದರ್ಭದಲ್ಲಿ ಹಣ್ಣು, ಕಾಯಿಪಲ್ಲೆ ಹೂಗಳನ್ನು ಕಳ್ಳತನ ಮಾಡಲು ಅನುಮತಿ ಇದ್ದು, ಕಳ್ಳತನ ಮಾಡಿದರೆ ಸಿಕ್ಕು ಬೀಳಬಾರದು. ಅಕಸ್ಮಾತ್ ಸಿಕ್ಕು ಬಿದ್ದರೆ ಅಪಶಕುನ ಎಂದು ವಾಲ್ಮೀಕಿ ಸಮುದಾಯದ ಹಿರಿಯರು ಹೇಳುತ್ತಾರೆ. ಎರಡನೆಯದಿನ ದಿನ ಬಲಿಪಾಡ್ಯ. ಮನೆಯ ಅಂಗಳದಲ್ಲಿ ದೀಪಗಳನ್ನು ಹಚ್ಚುವುದು ಈ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯದ ಯುವ ದನಗಾಹಿಗಳು 'ಗೊಗ್ಗೆ' ಆಣಿ ಪೀಣಿದೀಪ ಹಿಡಿದು ಊರಿನ ದನಗಳಿಗೆ ದೀಪ ಬೆಳಗಿ ಅವುಗಳ ಪೀಡೆ ತೆಗೆಯುವ ಸಂಪ್ರದಾಯವು ಬಾಗಲಕೋಟೆ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿವೆ.

ಇನ್ನು ವಾಲ್ಮೀಕಿ ಸಮುದಾಯದವರೆ ಮುಂಚೂಣಿಯಲ್ಲಿದ್ದು ಆಚರಿಸುವ ಜಾತ್ರೆ ಉತ್ಸವಗಳು ಬಾಗಲಕೋಟೆ, ಬಿಜಾಪುರ ಜಿಲ್ಲೆಗಳ ಅನೇಕ ಹಳ್ಳಿಗಳಲ್ಲಿ ಕಾಣಸಿಗುತ್ತವೆ. ಪ್ರಾರಂಭದಲ್ಲಿ ಮಹರ್ಷಿ ವಾಲ್ಮೀಕಿ ಇವರಿಗೆ ದೇವರು ಹಾಗೂ ಕುಲಗುರುವಾದರೂ ಇತ್ತೀಚಿನ ದಿನಗಳಲ್ಲಿ ಬೇಡರ ಕಣ್ಣಪ್ಪ, ಇನ್ನು ನವಯುಗಕ್ಕೆ ಬಂದರೆ ಸಿಂಧೂರ ಲಕ್ಷ್ಮಣ ಇವರಿಗೆ ಆದರ್ಶಪುರುಷರಾಗಿ ಅವರ ಮನೆ ಮನಗಳನ್ನು ಬೆಳಗುವ ದೈವವಾಗಿದ್ದಾರೆ. ಇವರ ಯಾವುದೇ ಜಾತ್ರೆ, ಉತ್ಸವ ಆಚರಣೆ ನಡೆದರು ಅಲ್ಲಿ ಈ ಮೂವರಿಗೂ ಪೂಜ್ಯ ಸ್ಥಾನವಿರುತ್ತದೆ. ಅಪಮಾನ, ಮೇಲ್ವರ್ಗದ ಜನರಿಂದ ಹಿಂಸೆ, ಸರ್ಕಾರಗಳ ನಿರ್ಲಕ್ಷತನದಿಂದ ಸಂಚಾರಿ ಗುಡಿಸಲುಗಳನ್ನು ಕಟ್ಟಿಕೊಂಡು ತಾತ್ಪೂರ್ತಿಕ ನೆಲೆಗಳಲ್ಲಿ ವಾಸಿಸುತ್ತ ತಮ್ಮ ಬದುಕನ್ನು ಪ್ರಾರಂಭಿಸಿದ ಈ ಜನತೆ ಅಡವಿಯಲ್ಲಿ ಬೇಟೆಯಾಡುತ್ತಾ ಜೀವನ ಕಳೆದದ್ದೆ ಹೆಚ್ಚು. ದೀರ್ಘಕಾಲ ಒಂದೇ ಸ್ಥಳದಲ್ಲಿ ನಿಲ್ಲದ ಕಾರಣ ಇವರ ಆಚರಣೆ ಉತ್ಸವಗಳು ಕೂಡಾ ಸಂಚಾರಿಯಾದವು. ಭಾರತ ಸ್ವಾತಂತ್ರ್ಯಾನಂತರ ತಮ್ಮ ಪರಿಸರದಲ್ಲಿರುವ ಇತರ ಧರ್ಮ ಆಚರಣೆಗಳು ಇವರ ಮೇಲೆ ಪ್ರಭಾವಬೀರಿ ಅವು ಮೂಲ ಆಚರಣೆ ಕಳೆದುಕೊಂಡವು ಎಂದರೆ ತಪ್ಪಾಗಲಿಕ್ಕಿಲ್ಲ. ಬಾಗಲಕೋಟೆ ಜಿಲ್ಲೆಯ ಬೀಳಗಿ, ತೆಗ್ಗಿ, ಸಿದ್ದಾಪೂರ, ಹಲಗಲಿ, ಇಲಕಲ್ಲು ಮುಂತಾದ ಕಡೆ ನಡೆಯುವ ವಾಲ್ಮೀಕಿ ಸಮುದಾಯದ ಉತ್ಸವಗಳು, ಜಾತ್ರೆಗಳು ಅನೇಕ ಜನರ ಗಮನ ಸೆಳೆಯುತ್ತವೆ. ಆದರೆ ಈ ಉತ್ಸವಗಳು ತಮ್ಮ ಮೂಲ ಆಚರಣೆಯ ಬಗ್ಗೆ ಸ್ಪಷ್ಟ ಇತಿಹಾಸ ಹಾಗೂ ಮಾಹಿತಿ

ನೀಡುವಲ್ಲಿ ಕ್ಷೇತ್ರಕಾರ್ಯ ಮಾಡುವವರಿಗೆ ಸ್ಪಷ್ಟತೆ ನೀಡುವಲ್ಲಿ ವಿಫುಲವಾಗುತ್ತಲಿವೆ. ಅದಕ್ಕೆ ಕಾರಣಗಳು ಬಹಳ ಇವೆ. ಜನರ ಅನಕ್ಷರತೆ, ಸಂಚಾರಿ ಜೀವನ, ಇತರ ಸಮುದಾಯದ ಪ್ರಭಾವ, ಬದುಕಿಗೆ ಗಟ್ಟಿಯಾದ ನೆಲೆ ಇಲ್ಲದಿರುವುದು ಇತ್ಯಾದಿ. ಇತ್ತೀಚಿನ ದಿನಗಳಲ್ಲಿ ಈ ಸಮುದಾಯದಲ್ಲಿ ಅಕ್ಷರಸ್ತರು ಬೇಡರ ಕಣ್ಣಪ್ಪನ ಉತ್ಸವ, ಸಿಂಧೂರ ಲಕ್ಷ್ಮಣನ "ಹುಟ್ಟುಹಬ್ಬ"ಗಳನ್ನು ಆಚರಿಸುತ್ತಾ ಈ ಸಮುದಾಯವಿರುವ ಹಳ್ಳಿಗಳಲ್ಲಿ ಸಂಘಟನೆ ಮಾಡಿಕೊಂಡಿದ್ದಾರೆ. ಹೆಚ್ಚು ಜನರಿರುವ ಗ್ರಾಮಗಳಲ್ಲಿ ವಾಲ್ಮೀಕಿ ಭವನ ಎಂದು ತಮ್ಮ ಸಮಾಜ ಬಾಂಧವರನ್ನು ಅಪ್ಪಿಕೊಂಡು ಅವರ ಅಭಿವೃದ್ಧಿಗೆ ಶ್ರಮಿಸುತ್ತಾಲಿದ್ದಾರೆ. ಬಾಗಲಕೋಟೆ ಜಿಲ್ಲೆಗೆ ಹೊಂದಿಕೊಂಡಂತೆ ಇರುವ ಬಿಜಾಪೂರ ಜಿಲ್ಲೆಯ ಸಾತಿಹಾಳ, ಅಡಿರಸಂಗ, ಅರಳಿಚಂಡಿ, ಬುಯಾರ, ಮುತ್ತಾಗಿ ಅರಕೇರಿ, ಉತ್ನಾಳ, ಮುಂತಾದ ಕಡೆ ಜಾತ್ರೆ ಉತ್ಸವಗಳು ನಡೆಯುತ್ತಲಿವೆ ಎಂಬುದು ಸಹ ಗಮನಿಸಬೇಕಾದ ಸಂಗತಿಯಾಗಿದೆ.

ವಾಲ್ಮೀಕಿ ಇವರ ಮೂಲಪುರುಷನಾದರೂ ಈ ಜನರನ್ನು ಅತಿ ಹೆಚ್ಚಾಗಿ ನಾಯಕ ಸಮುದಾಯ, ಬೇಡ ಸಮುದಾಯ ಎಂತಲೇ ಕರೆಯಲಾಗುತ್ತದೆ. ಶಾಸನಗಳಲ್ಲಿಯು ಸಹ ಬೇಡನಾಯಕರೆಂದೇ ಕರೆದಿದ್ದನ್ನು ಎಂ.ವಿ ಚಿತ್ರಲಿಂಗಯ್ಯನವರು ಕಂಡುಕೊಂಡಿದ್ದಾರೆ. ನಾಯಕ ಎಂಬ ಉಪನಾಮವು ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ. ೧೧-೧೨ನೆಯ ಶತಮಾನದ ಶಿಲಾಶಾಸನಗಳಲ್ಲಿ ಕಂಡುಬರುತ್ತದೆ. ಆಗ ಇದು ಜಾತಿಸೂಚಕ ಪದವಾಗಿರಲಿಲ್ಲ. ಬೇಡರಿಗೆ 'ನಾಯಕ' ಎಂಬ ಗೌರವಸೂಚಕ ಪದ ಕಲ್ಯಾಣ ಚಾಲುಕ್ಯರ ಕಾಲದಿಂದ ಬಂದಿರ ಬೇಕು ಎಂಬುದು ಇಲ್ಲಿ ಅರಿಕೆಯಾಗುತ್ತದೆ. ಈ ಬೇಡ ಸಮುದಾಯದ ನಾಯಕರು ೧೦-೨೦ ಕುಟುಂಬಗಳನ್ನು ಒಂದೇ ಸ್ಥಳದಲ್ಲಿ ಸಲುಹಿ ತಮ್ಮ ಬೇಡ ಘಟ್ಟಿಗಳನ್ನು ಕಟ್ಟಿಕೊಳ್ಳು ತ್ತಿದ್ದರು. ಈ ಗುಂಪುಗಳು ಅಲೆಮಾರಿಗಳಾಗಿ ಹೊರಟಾಗ ತಮಗೆ ತೊಂದರೆ ಮಾಡಿದವರನ್ನು ಎದುರಾದವರನ್ನು ಕೊಂದು ಅಲ್ಲಿಯ ದನಕರುಗಳನ್ನು ಅಟ್ಟಿಸಿಕೊಂಡು ತೆರಳುತ್ತಿದ್ದರು. ಹೀಗೆ ಸ್ಥಳಬಿಟ್ಟು ಸ್ಥಳಕ್ಕೆ ತೆರಳುವಾಗ ಕೆಲವು ದೈವ, ದೇವರುಗಳನ್ನು ಅವರು ತಮ್ಮ ಸಂಗಡ ಒಯ್ಯುತ್ತಿದ್ದರು. ಈ ಸಂದರ್ಭದಲ್ಲಿ ಕೆಲವು ಆಚರಣೆಗಳು ನಡೆಯುತ್ತಲಿದ್ದವು ಎಂದು ಹಿರಿಯರು ಹೇಳುತ್ತಾರೆ. ಹೀಗೆ ಸಂಚಾರಿಯಲ್ಲಿರುತ್ತಿದ್ದ ಈ ಸಮುದಾಯ ಬೇರೆ ಸಮುದಾಯಗಳೊಡನೆ ಬೆರೆಯದೆ ಬಹಳಕಾಲ ಸ್ವತಂತ್ರವಾಗಿದ್ದುದು ತಮಗೆ ವಿಶಿಷ್ಟವಾದ ಸಂಸ್ಕೃತಿಯನ್ನು ಹಿಂದೂ ಧರ್ಮದ ಪ್ರಭಾವ ಯಾವ ಪ್ರಮಾಣದಲ್ಲಿ ಆಗಿದೆ ಎಂಬ ಅಂಶ ಜಾತಿ ಹಾಗೂ ಬುಡಕಟ್ಟು ಈ ಎರಡಕ್ಕೂ ಇರುವ ವ್ಯತ್ಯಾಸವನ್ನು ಸೂಚಿಸುವ ಮಾನದಂಡ ವಾಗಿದೆ. ವಾಲ್ಮೀಕಿ ಜನ ಹುಟ್ಟು, ಮದುವೆ, ಮತ್ತು ಸಾವು ಈ ಮೂರು ಸಂದರ್ಭಗಳಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಅವಕಾಶ ಕೊಟ್ಟಿಲ್ಲ. ಹೀಗಿದ್ದೂ ಹಿಂದುಗಳೊಡನೆ ಜಾತ್ರೆಯಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಅವರು ಬಾಗವಹಿಸುತ್ತಾರೆ. ಈ ಕಾರಣದಿಂದಲೆ ಮಾನವ ವಿಜ್ಞಾನಗಳು ಇವರನ್ನು ಬುಡಕಟ್ಟು ಸಮುದಾಯ ಎಂದು ಕರೆದರೆ ಜಾನಪದ ವಿಜ್ಞಾನದಲ್ಲಿ "ಜನಪದವರ್ಗ" ಎಂದು ಪರಿಗಣಿಸಲಾಗುತ್ತಿದೆ. ಈ ಜನಪದವರ್ಗ ಪಶುಪಾಲನೆಯ ಮೇಲೆ ಬಂದಿತಾದರೂ ಇದರ ಜತೆಗೆ ಬೇಟೆ ಮತ್ತು ಯೋಧವೃತ್ತಿಯನ್ನು ಕೈಗೊಂಡು ಬಂದದ್ದು ಐತಿಹಾಸಿಕ ಸಂಗತಿ. ದೃಢಕಾಯರಾದ ಇವರು ಯಾವ ಅಪಾಯಕ್ಕೂ ಅಂಜುತ್ತಿರಲಿಲ್ಲ. ಪೂರ್ವಾಪರ ಯೋಚಿಸದೆ ಶತೃಗಳ ಮೇಲೆ ಬೀಳುವವರೂ ಅಗಿರುತ್ತಾರೆ. ಇತರರ ದನಗಳನ್ನು ತರುಬಿಕೊಂಡು ಹೋಗಿ ತಮ್ಮ ವಶದಲ್ಲಿಸಿರಿಕೊಂಡ ಪ್ರಸಂಗಗಳು ಇವರಲ್ಲಿವೆ.

* * *

**ಹಲಗಲಿ ಬೇಡರು**

**ಆನೇ ನುಡಿ**

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜೆರಿಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್‌ಇಂದ ಬಾರದ ನಮ್ಮ ಜೀವ ಸತ್ತ್‌ಓಗುದು ಗೊತ್ತು

ಸುತ್ತಿನ ಹಳ್ಳಿ ಮತ್ತು ಧೊರಿಗಳಿಗೆ ತಿಳಶೆರ ಹೀಂಗ್‌ಅಂತು
ಮಾಡರಿ ಜಗಳಾ ಕೂಡ್‌ಇರತೇವು ಕುಮುಕಿ ಯಾವತ್ತು

ವೊಳಗಿಂದ್‌ಒಳಗ ವಚನ ಕೊಟ್ಟರೊ ಬ್ಯಾಡರ್ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು

## ೧೭. ಸಾಂಸ್ಕೃತಿಕ ಯೋಗಿಗಳು ಮತ್ತು ಶೂರರು

ಮಾನವ ವಿಕಾಸದ ಆರಂಭದ ವೃತ್ತಿ ಬೇಟೆಗಾರಿಕೆ. ನಂತರ ಸಂಸ್ಕೃತಿಯ ವಿಕಾಸ ದೊಂದಿಗೆ ಹಲವು ವೃತ್ತಿಗಳು ಸಮಾಜದಲ್ಲಿ ಕಂಡುಬಂದವು. ಆದರೆ ಬೇಟೆಗಾರಿಕೆಯನ್ನೇ ಉಳಿಸಿಕೊಂಡು ಕಾಡಿನಲ್ಲಿ ನೆಲೆಯನ್ನು ಸ್ಥಾಪಿಸಿಕೊಂಡು, ನಂತರ ನಾಡಿನೊಂದಿಗೆ ಸ್ಪಂದಿಸುತ್ತಾ ಕಾಡು-ನಾಡುಗಳ ಸಾಮರಸ್ಯ ಸಂಘರ್ಷಗಳೊಂದಿಗೆ ಸಂಸ್ಕೃತಿಯನ್ನು ರೂಪಿಸಿ ಕೊಂಡ ಸಮುದಾಯ ಬೇಡನಾಯಕರದು.

ಬೇಟೆ ವೃತ್ತಿಯಿಂದ ವಿಕಾಸಗೊಂಡ ಈ ಬುಡಕಟ್ಟು ಜನ ಆರಂಭದಲ್ಲಿ ಉತ್ತರ ಭಾರತದ ಸಿಂಧೂ, ಬ್ರಹ್ಮಪುತ್ರ, ಗಂಗಾ, ಯಮುನಾ ನದಿಗಳ ಮಲಜ ಭೂಮಿಯಲ್ಲಿದ್ದರು. ಆರ್ಯರು ಈ ದೇಶಕ್ಕೆ ವಲಸೆ ಬಂದಾಗ ಅವರೊಡನೆ ಹೋರಾಡಿ ದಕ್ಷಿಣ ಭಾಗಕ್ಕೆ ವಿಂಧ್ಯಾ ಪರ್ವತಗಳ ಮೂಲಕ ನಿರ್ಗಮಿಸಿದರು. ಓರಿಸ್ಸಾ, ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ನೆಲೆಗೊಂಡರು.

ವಾಲ್ಮೀಕಿಯ ಹೆಸರು ಒಂದು ಸಮುದಾಯಕ್ಕೆ ಮತ್ತು ಒಬ್ಬ ವ್ಯಕ್ತಿಗೆ ಇರುವದು ಭವ್ಯ ಪರಂಪರೆಯ ಪ್ರತೀಕ. ವಾಲ್ಮೀಕಿ ಮಹರ್ಷಿಯು ರಾಮಾಯಣ ಮಹಾಕಾವ್ಯವನ್ನು ರಚಿಸಿ ಈ ದೇಶಕ್ಕೆ ದೊಡ್ಡ ಉಪಕಾರ ಮಾಡಿದ್ದಾರೆ. ವಾಲ್ಮೀಕಿ ಈ ದೇಶದ ಚರಿತ್ರೆ, ಸಂಸ್ಕೃತಿ ಮತ್ತು ನಾಗರೀಕತೆಯ ನಿಜವಾದ ನಿರ್ಮಾಪಕ. ಅಲ್ಲದೆ ಯಾವುದೇ ಒಂದು ಭಾಷೆ, ಜಾತಿ, ಪ್ರದೇಶಕ್ಕೆ ಸೀಮಿತವಾದ ವ್ಯಕ್ತಿ ಈತನಲ್ಲ. ಸರ್ವತೋಮುಖ ವಿಚಾರಗಳಿಗೆ ಅವಕಾಶ ಮಾಡಿಕೊಟ್ಟಿದ್ದಾನೆ ತನ್ನ ಕಾವ್ಯದಲ್ಲಿ.

ವಾಲ್ಮೀಕಿ, ಶಬರಿ, ಗುಹಾ, ಬೇಡರ ಕಣ್ಣಪ್ಪ, ಏಕಲವ್ಯ, ಧರ್ವವ್ಯಾಧ, ಮುಂತಾದವರು ವಾಲ್ಮೀಕಿ ಸಮುದಾಯದ ಪ್ರಾತಃ ಸ್ಮರಣೀಯರು. ಇವರು ತಮ್ಮ ನಡೆ-ನುಡಿಯಿಂದ, ಜೀವನ ಕ್ರಮದಿಂದ ಜೀವನ ಪಾವನ ಮಾಡಿದ್ದಾರೆ. ತಮ್ಮ ತ್ಯಾಗದಿಂದ ಮತ್ತೊಬ್ಬರಿಗೆ ಮಾದರಿಯಾಗಿದ್ದಾರೆ. ವಾಲ್ಮೀಕಿಯ ಜೀವನ, ಪರಿವರ್ತನೆಯ ಬದುಕು, ತಪಸ್ಸು, ರಾಮಾಯಣ ರಚನೆ ಮತ್ತು ವಾಲ್ಮೀಕಿಯ ವಿಚಾರಗಳು ಯೋಗಿಯ ಜೀವನಕ್ಕೆ ಸಾಕ್ಷಿ ಯಾಗಿವೆ. ಮಹಾಪತಿವೃತೆ ಶಬರಿ, ಶ್ರೀರಾಮ ಲಕ್ಷ್ಮಣ ವನವಾಸದಲ್ಲಿದ್ದಾಗ ಬೋರೆ ಹಣ್ಣುಗಳನ್ನು ನೀಡಿ ಸಂತೈಸಿದಳು. ದೊರೆ ಹಿರಣ್ಯಧನುವಿನ ಮಗ ಏಕಲವ್ಯ ದ್ರೋಣಾಚಾರ್ಯ ರಿಗೆ ಎಡಗೈ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ನೀಡಿದನು. ಬೇಡರ ದೊರೆ ಗುಹಾ, ಸೀತೆ ರಾಮ-ಲಕ್ಷ್ಮಣರನ್ನು ಹರಿಗೋಲು ಮೂಲಕ ಗಂಗಾನದಿ ದಾಟಿಸಿದನು.

ಸರಳ ಬದುಕಿನ ಮೂಲಕ ಅಪಾರ ಜ್ಞಾನ ಹಾಗೂ ದಿವ್ಯ ದೃಷ್ಟಿಯನ್ನು ಗಳಿಸಿದವನು ಧರ್ಮವ್ಯಾಧನು. ಅಹಂಕಾರ ದೂರ ಮಾಡಿದವನಿಗೆ ಮೋಕ್ಷದ ದಾರಿ ಸಿಗುವದೆಂದು ತೋರಿಸಿ ಕೊಟ್ಟವನು ಬೇಡರ ಕಣ್ಣಪ್ಪನು. ದಕ್ಷಿಣ ಭಾರತದ ಪುಣ್ಯ ಕ್ಷೇತ್ರವಾದ ಕಾಳಹಸ್ತಿ ನಾಡಿನ ವನು. ಕಾಳ ಹಸ್ತಿ ದೇವಾಲಯವು, ಲೋಕ ಪ್ರಸಿದ್ದಿಯಾಗಿ ದಕ್ಷಿಣ ಕಾಶಿ ಎನಿಸಿಕೊಂಡಿದೆ. ಬೇಡರ ಕಣ್ಣಪ್ಪನು ಶಿವನಿಗೆ ಹಸಿಮಾಂಸವನ್ನು ಹಾಗೂ ತನ್ನ ಕಣ್ಣನ್ನು ಕಿತ್ತು ಅರ್ಪಿಸಿ, ಶಿವನಿಂದ ಕಣ್ಣಪ್ಪನೆಂದು ಪರಮ ಭಕ್ತನಾಗಿ ಅಮರನಾಗಿದ್ದಾನೆ. ಸುಮಾರು ೧೫೦೦ ವರ್ಷಗಳ ಹಿಂದೆಯೇ ಬೇಡರ ಕಣ್ಣಪ್ಪನ ದೇವಾಲಯ ಶ್ರೀಕಾಳಹಸ್ತಿಯಲ್ಲಿ ಕಟ್ಟಲ್ಪಟ್ಟಿದೆ.

ಹೀಗೆ ವಾಲ್ಮೀಕಿ, ಏಕಲವ್ಯ, ಶಬರಿ, ಗುಹಾ, ಧರ್ಮವ್ಯಾಧ, ಬೇಡರ ಕಣ್ಣಪ್ಪ ಸಾಮಾನ್ಯ ಮಾನವರಾಗಿ, ನಡೆಯಿಂದ ಸರಳ ಬದುಕು ಸಾಗಿಸಿಬದುಕಿನಲ್ಲಿ ತಿರುವು ಪಡೆದು ಪರಿವರ್ತನೆ ಗೊಂಡು ದೇವ ಮಾನವರಾಗಿ ಬದುಕಿದರು. ಹಾಗೂ ಯೋಗಿಗಳಾಗಿ ಬದುಕಿದರು.

ವಾಲ್ಮೀಕಿ ಸಮುದಾಯದಲ್ಲಿ ಸಾಂಸ್ಕೃತಿಕ ಶೂರರು ಹಲವಾರು ಜನರಿದ್ದಾರೆ. ಬೇಡ ನಾಯಕರು ರಾಜ್ಯಸ್ಥಾಪನೆ ಆಳ್ವಿಕೆ ನಡೆಸಿದ್ದು ಕಮ್ಮಟ ದುರ್ಗದಲ್ಲಿ. ಮುಮ್ಮಡಿ ಸಿಂಗೇನಾಯಕ ವೀರಕಂಪಿಲರಾಯ ಮತ್ತು ಕುಮಾರರಾಮ ಅವರ ಹೆಸರು ಚರಿತ್ರೆ ಪುಟದಲ್ಲಿ ದಾಖಲಾಗಿದೆ. ''ವಿಜಯನಗರ ಕಾಲದ ಸ್ಥಾಪಕರಾದ ಹಕ್ಕ-ಬುಕ್ಕರು ಕುಮಾರರಾಮನ ಸಹೋದರಿ ಮಾರಾಂಬಿಕೆಯ ಮಕ್ಕಳು''. ವಿಜಯನಗರ ಕಾಲೀನ ಪಾಳೆಯಗಾರರಲ್ಲಿ ಎಚ್ಚಮನಾಯಕ ಪ್ರಾಮಾಣಿಕತೆ ಮೆಚ್ಚತಕ್ಕದ್ದು.

ಸುರುಪರದ ರಾಜಾವೆಂಕಟಪ್ಪ ನಾಯಕ , ಕಾರುಗನಹಳ್ಳಿ ಮಾರನಾಯಕ, ತರೀಕೆರೆ ಸರ್ಜಪ್ಪ ನಾಯಕರು, ರಾಜಾವೀರಮದಕರಿನಾಯಕ, ಸಣ್ಣನಾಯಕರ ಜೀವನ, ಆಡಳಿತ, ಶೂರತನ, ಇತಿಹಾಸ ಓದಿ ತಿಳಿದುಕೊಳ್ಳಬಹುದು. ನಾವೆಲ್ಲರೂ ಹೆಮ್ಮೆಪಡುವಂತಿದೆ. ಮಧ್ಯಕಾಲದ ಈ ವಾಲ್ಮೀಕಿ  ಸಮುದಾಯದ ರಾಜರ ಆಡಳಿತಕಾಲ. ಅಲ್ಲದೆ ಹಲವಾರು ಸಣ್ಣ ಪುಟ್ಟ ಪಾಳೆಯಗಾರರಾಗಿ ಕೋಟೆ ಕೊತ್ತಳದ ರಕ್ಷಕರಾಗಿ ರಾಜರ ಆಪ್ತಸೇವಕರಾಗಿ ಕೆಲಸ ಮಾಡಿದ್ದಾರೆ.

ಆಧುನಿಕ ಕಾಲದ ವೀರಸಿಂಧೂರ ಲಕ್ಷ್ಮಣ ಹಾಗೂ ಹಲಗಲಿಯ ವೀರ ಜಡಗಾಬಾಲರ ವೀರರ ಬಗ್ಗೆ ಹೆಚ್ಚಿನ ವಿವರ ನೀಡಲು ಈ ಲೇಖನದಲ್ಲಿ ಪ್ರಯತ್ನಿಸಿದ್ದೇನೆ.

ಕುಮಾರರಾಮ ಪರನಾರಿ ಸಹೋದರ, ಶೂರ, ಧೀರ, ಸ್ವದೇಶ, ಸ್ವಧರ್ಮ ಹಾಗೂ ಸ್ವ ಸಂಸ್ಕೃತಿಯನ್ನು ಸಂರಕ್ಷಿಸುವಲ್ಲಿ ಈತನು ಮುಂದಾದ. ಹೊಯ್ಸಳರ ಅಂತ್ಯಕಾಲದಲ್ಲಿ ಉದಯಿಸಿ, ವಿಜಯನಗರದ ಆರಂಭಕ್ಕೆ ಅಸ್ತಂಗತನಾದ. ಈ ಕುಮಾರರಾಮನ ವ್ಯಕ್ತಿತ್ವ ಕುರಿತು ಕನ್ನಡದಲ್ಲಿ ಮೂರು ಜನ ಕವಿಗಳು ಕಾವ್ಯಕ್ಕೆ ವಸ್ತುವಾಗಿ ಬಳಸಿಕೊಂಡಿದ್ದಾರೆ.

ಸುರಪುರ ಸಂಸ್ಥಾನ ೧೯ನೇ ಶತಮಾನದ ಇತಿಹಾಸ ಪ್ರಸಿದ್ಧವಾದ ರಾಜ್ಯ. ಸುರಪುರದ ನಾಯಕರು ಸ್ವಾತಂತ್ರ್ಯ ಪ್ರೇಮಿಗಳು ಶೂರರು. ಬ್ರಿಟೀಷರ ಕುಟಿಲೋಪಾಯಕ್ಕೆ ಬಲಿ ಯಾದರು. ಆದರೆ ಚಿಕ್ಕವೆಂಕಟಪ್ಪನಾಯಕ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ಬಲಿಕೊಟ್ಟ.

ರಾಜ ವೆಂಕಟಪ್ಪನಾಯಕನ ತಾಯಿ ಈಶ್ವರಮ್ಮ ಬುದ್ದಿವಂತೆ. ಪರಾಕ್ರಮಶಾಲಿ ಮಹಿಳೆ. ಗಂಡನ ಮರಣದನಂತರ ಸುರುಪುರದ ಆಡಳಿತವಹಿಸಿಕೊಂಡಳು. ಮಗನಿಗೆ ತಂದೆ-ತಾತರ ಹೋರಾಟ ಸ್ಮರಿಸಿ ಬ್ರಿಟೀಷರ ವಿರುದ್ಧ ಹೋರಾಡುವ ಶಕ್ತಿ ನೀಡಿದಳು. ತಾಯಿ ಪ್ರೇರಣೆ ಪ್ರೋಸಂಸ್ಥಾನದ ಉಳಿವಿಗಾಗಿ ಹೋರಾಟಕ್ಕೆ ಮುಂದಾದ. ೧೮೫೭ರ ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಸುರಪುರದ ವೆಂಕಟಪ್ಪ ನಾಯಕ ವೀರತನದಿಂದ ಹೋರಾಡಿ ಮಡಿದ ತನ್ನ ೨೪ ನೇ ವಯಸ್ಸಿನಲ್ಲಿ.

ಮದಕರಿನಾಯಕನೆಂದರೆ ಚಿತ್ರದುರ್ಗ, ಚಿತ್ರದುರ್ಗವೆಂದರೆ ಮದಕರಿನಾಯಕನೆಂಬಂತೆ ಜನರಿಗೆ ತಿಳಿದ ವಿಷಯ. ೧೭೫೪ರಿಂದ ೧೭೭೯ರ ವರೆಗೆ ಚಿತ್ರದುರ್ಗವನ್ನಾಳಿದ ಸುಮಾರು ೩೭ ವರ್ಷದವನಿರುವಾಗಲೇ ಮಡಿದ ಮದಕರಿನಾಯಕನ ಬಗ್ಗೆ ಗೌರವವಿದೆ, ಹೆಮ್ಮೆ ಇದೆ.

"ದೊರೆ ಸದಾಶಿವನಾಯಕನ ಮರಣಾನಂತರ ಇಕ್ಕೇರಿಯ ದೊರೆಯಾಗಿ, ವಿಜಯ ನಗರದ ಬಲಗೈ ಬಂಟನಾದ, ಉಡುಗಣಿಯ ವೀರಣ್ಣನ ಸೊಕ್ಕನ್ನಡಿಸಿ ಅವನನ್ನು ಸರಿದಾರಿಗೆ ತಂದುವಿಜಯನಗರದ ದೊರೆ ರಾಮರಾಯನ ಪ್ರೀತಿಗೆ ಪಾತ್ರನಾದ. ಅಂದು ವಿಜಯನಗರದ ಪರಮ ಶತ್ರುವಾಗಿದ್ದ ಗೋವೆಯ ಕರ್ಣನನ್ನು ಸೋಲಿಸಿ ವಿಜಯನಗರ ಸಾಮ್ರಾಜ್ಯಕ್ಕೆ ಭದ್ರಬುನಾದಿ ಹಾಕಿದ ವೀರದೊಡ್ಡ ಸಂಕಣ್ಣನಾಯಕ''

ಮಹಾರಾಷ್ಟ್ರ ಕರ್ನಾಟಕ ಗಡಿಭಾಗದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ವೀರಯೋಧ ಉಮಾಜಿ ರಾಜೇನಾಯಕ. ೧೯೨೬ರಲ್ಲಿ ಜೆಜುರಿಯಲ್ಲಿ ಉಮಾಜಿ ಟೋಳಿಯವರು ಬ್ರಿಟೀಷರ ಸೈನಿಕರನ್ನು ಕೊಂದು ಆಯುಧ ಸಂಗ್ರಹಿಸಿದರು. ಉಮಾಜಿ ರಾಜೇನಾಯಕ ಬ್ರಿಟೀಷರಿಂದ ತಪ್ಪಿಸಿಕೊಳ್ಳುವ ಕಲೆ ಅರಿತುಕೊಂಡಿದ್ದ. ದರೋಡೆ ಮಾಡಿತಂದ ಹಣವನ್ನು ಬಡಜನರಿಗೆ ಹಂಚುತ್ತಿದ್ದ ಉಮಾಜಿ, ಜನರಿಗೆ ನಾವು ಕಳ್ಳರಲ್ಲ, ನಾವು ಕ್ರಾಂತಿಕಾರಿಗಳು. ನಾವು ಒಂದು ಸರಕಾರವೆಂದು ಹೇಳುತ್ತಿದ್ದ. ಬ್ರಿಟೀಷ ಸರಕಾರ ಕಿತ್ತೊಗೆಯಲು ಯತ್ನಿಸುತ್ತೇವೆ ಎಂದು ಹೇಳಿದ್ದ

ಬ್ರಿಟೀಷರು ಉಮಾಜಿ ರಾಜೇನಾಯಕನನ್ನು ಹಿಡಿಯಲು ಅನೇಕ ರೀತಿಯಲ್ಲಿ ಯತ್ನಿಸಿ ದರು. ಕುಟಿಲ ನೀತಿ ಅನುಸರಿಸಿ ಉಮಾಜಿಯ ವಿಶ್ವಾಸಿತ ಬಂಟರಾದ ನಾನಾ ಹಾಗೂ ಕಾಳೂರನ್ನು ಒಲಿಸಿಕೊಂಡು ಇವರ ಟೋಳಿಯಿಂದ ಉಮಾಜಿ ರಾಜೇನಾಯಕನನ್ನು ಹಿಡಿಸಿ ಬಿಟ್ಟರು. ಮುಳ್ಳನ್ನು ಮುಳ್ಳಿನಿಂದ ತೆಗೆದಂತೆ ಬ್ರಿಟೀಷರು ಮಾಡಿದರು. ದಿನಾಂಕ ೩.೨.೧೮೩೪ ರಲ್ಲಿ ಪುಣೆಯಲ್ಲಿ ಗಲ್ಲಿನ ಶಿಕ್ಷೆ ವಿಧಿಸಲಾಯಿತು. ಸ್ವಾತಂತ್ರ್ಯಕ್ಕಾಗಿ ತಹಿಸುತ್ತಿದ್ದ ಜೀವ ಕಣ್ಮರೆಯಾಯಿತು.

ಸಿಂಧೂರ ಲಕ್ಷ್ಮಣ ಬೇಡರ ಸಾಬು ಮತ್ತು ನರಸವ್ವ ದಂಪತಿಗಳ ಪುತ್ರ. ಲಕ್ಷ್ಮಣನು ಗೌಡರ ದಬ್ಬಾಳಿಕೆಯ ವಿರುದ್ಧ ತಿರುಗಿ ಬಿದ್ದನು. ನಂತರ ಬ್ರಿಟೀಷ್ ಸರಕಾರ ಲಕ್ಷ್ಮಣನನ್ನು ಹಿಡಿಯಲು ಯತ್ನಿಸಿತು. ಜತ್‌ಜೇಲಿನಿಂದ ತಪ್ಪಿಸಿಕೊಂಡು ಬೀಲೂರು ಮೂಲಕ ವಿಜಾಪುರ, ಬಾಗಲಕೋಟೆ ಜಿಲ್ಲೆಗೆ ಬಂದ. ಊರು-ಕೇರಿ-ಗುಡ್ಡ-ಗವಿಗಳಲ್ಲಿ ಕಾರ್ಯಾಚರಣೆ ಮಾಡಿದ. ಲಕ್ಷ್ಮಣನ ಹೋರಾಟ ಸಂಸ್ಥಾನ ಮತ್ತು ಬ್ರಿಟೀಷ ಕಂಪನಿ ಸರಕಾರದ ವಿರುದ್ಧ ಮಾತ್ರವಿತ್ತು. ಸಿಂಧೂರಿನ ವಿವಾದದ ತರುವಾಯ ಲಕ್ಷ್ಮಣತನ್ನ ಅಳಿಯಂದಿರು ಮತ್ತು ಗೆಳೆಯರೊಂದಿಗೆ ಗುಂಪು ಕಟ್ಟಿಕೊಂಡು ಜಮೀನ್ದಾರನ ಹಾಗೂ ಕಂಪನಿ ಸರಕಾರದ ವಿರುದ್ಧ ಹೋರಾಟ ಮಾಡಿದ. ಬಡವರಿಗೆ ತಾನು ತಂದ ಹಣ ಕೊಡುತ್ತಿದ್ದ ಜನಸಾಮಾನ್ಯರ ನಜರಿನಲ್ಲಿ ಲಕ್ಷ್ಮಣ ಆದರ್ಶನಾಯಕನಾಗಿದ್ದ.

ಜಮೀನ್ದಾರರು, ಇನಾಮುದಾರರು ಹಾಗೂ ಕಂಪನಿ ಸರಕಾರದವರು ಜನರನ್ನು ಸುಲಿಯು ತ್ತಿದ್ದರು. ಇವರಿಂದ ಜನಸಾಮಾನ್ಯರಿಗೆ ಮುಕ್ತಿ ಸಿಗಬೇಕಾದರೆ ಬಂಡಾಯ ಮಾಡಲೇ ಬೇಕೆಂದು ಲಕ್ಷ್ಮಣ ಬಯಸಿದ್ದ. ಲಕ್ಷ್ಮಣ ಯಾವ ಸಂಸ್ಥಾನದ ದೊರೆಯಲ್ಲ ರಾಜನಲ್ಲ. ಆದರೆ ಸಾಮಾನ್ಯರು ಬದುಕಿ ಬಾಳಲು ರಕ್ಷಣೆ ಕೊಡಬೇಕಾದ ಸರಕಾರ, ಜಮೀನ್ದಾರರು ಅನ್ಯಾಯ ಮಾಡುತ್ತಿದ್ದರು. ಆ ಅನ್ಯಾಯದ ವಿರುದ್ಧ ಹೋರಾಡಲು ಕೊನೆಯವರೆಗೂ ಸಿದ್ಧನಾದವನು ಈ ಲಕ್ಷ್ಮಣ.

"ಲಕ್ಷ್ಮಣನ ದೃಷ್ಟಿಯಲ್ಲಿ ಈ ದೇಶದ ವೈರಿಗಳು ಇಬ್ಬರು. ಒಬ್ಬರು ದೇಶವನ್ನೇ ಕಿತ್ತು ತಿನ್ನುತ್ತಿರುವ ಆಂಗ್ಲರು. ಇನ್ನೊಬ್ಬರು ಜನರನ್ನೇ ಸುಲಿಯುತ್ತಿರುವ ಸ್ಥಾನಿಕ ಆಡಳಿತ ಗಾರರು. ಇವರೀರ್ವರನ್ನು ಮುಗಿಸಿದ ಹೊರತು ಜನಸಾಮಾನ್ಯರಿಗೆ ಮುಕ್ತಿಯೆಂಬುದಿಲ್ಲ ವೆಂದು ಲಕ್ಷ್ಮಣನ ಬಂಡಾಯದ ಮೂಲ ಗುರಿಯಾಗಿತ್ತು.'' ಈ ಗುರಿ ಸಾಧನೆಗಾಗಿ ತನ್ನ ಚೋಳಿಯೊಂದಿಗೆ ಗುಡ್ಡ ಗವಿಗಳಲ್ಲಿ ಇರತೊಡಗಿದ.

ಲಕ್ಷ್ಮಣ ಬಾಗಲಕೋಟೆ ಜಮುಖಂಡಿ ಭಾಗದಲ್ಲಿ ವಾಸ ಮಾಡತೊಡಗಿದ. ಈ ಸುದ್ದಿ ಬ್ರಿಟೀಷರಿಗೂ ತಿಳಿಯಿತು. ಬ್ರಿಟೀಷರು ಫೌಜುದಾರ ಕಲಾಲನನ್ನು ಜತ್‌ದಿಂದ ಜಮುಖಂಡಿಗೆ ವರ್ಗಮಾಡಿದರು. ಚಿಕ್ಕಪಡಸಲಗಿ ಲಕ್ಷ್ಮಣನನ್ನು ಬಂಧಿಸಿದರು. ಜಮುಖಂಡಿ ಜೇಲಿಗೆ ಹಾಕಿದರು. ಆದರೆ ಜಮುಖಂಡಿ ಜೇಲ ಮುರಿದು ಲಕ್ಷ್ಮಣನು ತನ್ನ ಸಂಗಡಿಗರೊಂದಿಗೆ ಪರಾರಿಯಾದ. ಕಲ್ಲೋಳ್ಳಿ ಗುಡ್ಡದಲ್ಲಿ ಫೌಜುದಾರ ಕಲಾಲನಿಗೂ ಲಕ್ಷ್ಮಣನಿಗೂ ಸೆಣಸಾಟ ನಡೆಯಿತು. ಲಕ್ಷ್ಮಣನ ಅಳಿಯ ನರಸಪ್ಪನು ಕೊಡಲಿಯಿಂದ ಕಲಾಲನ ಕುತ್ತಿಗೆಯನ್ನು ಬೇರ್ಪಡಿಸಿದ. ಕಲಾಲನ ಕೊಲೆಯ ಸುದ್ದಿ ಹಬ್ಬತೊಡಗಿತು.

ಬ್ರಿಟೀಷ್ ಸರಕಾರ ಲಕ್ಷ್ಮಣನನ್ನು ಹಿಡಿಯಲು ಸಂಸ್ಥಾನಗಳಿಗೆ, ಇನಾಮುದಾರರಿಗೆ ತಿಳಿಸಿತು. ಅಲ್ಲದೆ ಪೋಲಿಸ್ ಅಧಿಕಾರಿ ಗಾರ್ಮನನ್ನು ತೆಗ್ಗಿ ಗ್ರಾಮಕ್ಕೆ ಕಳಿಸಿತು. ತೆಗ್ಗಿ ಗ್ರಾಮದ ಪೋಲಿಸ್ ಪಾಟೀಲ ಹುದ್ದೆಯಲ್ಲಿ ವೆಂಕನಗೌಡನಿದ್ದನು. ಇವರು ಲಕ್ಷ್ಮಣನ ಕುಲದವರು. ಲಕ್ಷ್ಮಣನಿಗೆ ಸ್ವ ಕುಲದ ಕಾರಣ ಬೆಂಬಲಿಸುವದು, ಶಸ್ತ್ರಾಸ್ತ್ರ ಕೊಡುವುದು ಅಪರಾಧವೆಂದು ಗಾರ್ಮನ ಹೇಳಿದ. ಕಾನೂನು ರೀತ್ಯಾ ನಿಮ್ಮನ್ನು ಬಂದಿಸುವನೆಂದೂ ಎಚ್ಚರಿಕೆ ನೀಡಿದ. ಗಾರ್ಮನ ನೀಡಿದ ಎಚ್ಚರಿಕೆ ಪೋಲಿಸ್ ಪಾಟೀಲ ಹುದ್ದೆ ಕೈಬಿಡುವದೆಂದು ಚಿಂತಿಸತೊಡಗಿದ, ಲಕ್ಷ್ಮಣನ ಸ್ನೇಹ, ಕುಲದ ಸ್ನೇಹ ಈಗ ಮುಳುವಾಗಿತ್ತು ವೆಂಕನಗೌಡರಿಗೆ.

"ಕುಲದ ವಿರುದ್ಧ ಕುಲವನ್ನು, ಸಂಸ್ಥಾನದ ವಿರುದ್ದ ಸಂಸ್ಥಾನವನ್ನೇ ಎತ್ತಿಕಟ್ಟಿ ತಮ್ಮ ಉದ್ದೇಶ ಈಡೇರಿಸಿಕೊಳ್ಳುವ ಇಂಗ್ಲೀಷರ ಒಡೆದು ಆಳುವ ನೀತಿ ತೆಗ್ಗಿ ವೆಂಕಟನಗೌಡರ ಮೇಲೂ ಪ್ರಯೋಗಿಸಲ್ಪಟ್ಟಿತು. ನಂತರ ಕುಲ-ಜಾತಿ ಸಮುದಾಯದವನೆಂದು ತಿಳಿದು ಲಕ್ಷ್ಮಣನನ್ನು ಹಿಡಿದುಕೊಡಲು ನಿರ್ಣಯಿಸಿದ.''

೧೯೨೨ರಲ್ಲಿ ತೆಗ್ಗಿಯ ಕಪ್ಪರ ಪಡಿಯವ್ವನ ಗುಡ್ಡದಲ್ಲಿ ತನ್ನ ಸಂಗಡಿಗರೊಂದಿಗೆ ಲಕ್ಷ್ಮಣನು ಊಟ ಮಾಡುವಾಗ ಬಂದೂಕಿನ ಗುಂಡಿಗೆ ಬಲಿಯಾದ. ಬಡಜನರ ಪಾಲಿನ ದೇವರು ಮರೆಯಾದ. ಬ್ರಿಟೀಷ್ ಸರಕಾರ, ಜಮುಖಂಡಿ, ಜತ್ ಮುಧೋಳ ಮುಂತಾದ ಸಂಸ್ಥಾನಗಳ ಆಡಳಿತಗಾರರು, ಶ್ರೀಮಂತರು ಲಕ್ಷ್ಮಣನ ವಿರೋಧಿಗಳಾಗಿದ್ದರು. ಆತನನ್ನು ಬಂಧಿಸುವಲ್ಲಿ ಯತ್ನಿಸುತ್ತಿದ್ದರು. ಆ ಪ್ರಯತ್ನದಲ್ಲಿ ಯಶ ಕಂಡರು.

ಒಂದು ಮಾತು ವಿಚಾರಕ್ಕೆ ಅಸ್ಪದಮಾಡಿಕೊಡುತ್ತದೆ. ಲಕ್ಷ್ಮಣ ಊರು ಬಿಡುವುದಕ್ಕೆ ಸಣ್ಣ ಕಾರಣವೊಂದು ಯಾವ ಯಾವ ತಿರುವು ಮಾಡಿಕೊಟ್ಟಿತು. ಸಿಂಧೂರಿನಿಂದ ಸಿಡಿದು ಹೊರಬಂದ ಈ ಲಕ್ಷ್ಮಣ ತಿರುಗಿದ ಪ್ರದೇಶಗಳು ನೂರಾರು, ಮಾಡಿದ ಹೋರಾಟಗಳು ನೂರಾರು, ನೀಡಿದ ಘರ್ಷಣೆಗಳು ಅನಂತವೆನ್ನಬಹುದು. ಸ್ವಾಭಿಮಾನಕ್ಕೆ ಆತ್ಮಾಭಿಮಾನಕ್ಕೆ ದಕ್ಕೆಯಾದ ವೀರನು ಸಮರ್ಥನಾಗಿ ಹೋರಾಟ ಮಾಡುತ್ತಾನೆ ಎನ್ನುವುದಕ್ಕೆ ವೀರ ಸಿಂಧೂರ ಲಕ್ಷ್ಮಣ ಉದಾಹರಣೆ. ಸ್ಥಾನಿಕ ಇನಾಮುದಾರರೊಂದಿಗೆ ಬ್ರಿಟೀಷರು ರೂಪಿಸಿದ್ದ ಜಂಟಿ ಕಾರ್ಯಾಚರಣೆಯಲ್ಲಿ ಸಿಂಧೂರ ಲಕ್ಷ್ಮಣ ಅಮೋಘ ಪ್ರತಿಭಟನೆ ನೀಡಿದ್ದಾನೆ. ತನ್ನ ತಾರುಣ್ಯದ ಬಹುಪಾಲು ಸಮಯವನ್ನು ಬೆಟ್ಟಗುಡ್ಡಗಳಲ್ಲೇ ಸವೆಸಿದ. ಸಿಂಧೂರ ಲಕ್ಷ್ಮಣನ ತ್ಯಾಗ, ಬಲಿದಾನ ಯಾವ ಸ್ವಾತಂತ್ರ್ಯ ಹೋರಾಟಗಾರರಿಗಿಂತಲೂ ಕಡಿಮೆಯಾದುದಲ್ಲ. ಈ ಹೋರಾಟಕ್ಕೆ ಲಕ್ಷ್ಮಣನ ಅಳಿಯಂದಿರಾದ ಸಾಬು, ನರಸು, ಗೋಪಾಲಿ, ಭೀಮ ಬಲ ನೀಡಿದರು.

ನಾನಿರುವ ಊರು ಹಲಗಲಿ. ಈ ಹಲಗಲಿ ಗುಡ್ಡದಲ್ಲಿ ಲಕ್ಷ್ಮಣ ಹಾಗೂ ಆತನ ಅಳಿಯಂದಿರು, ಗೆಳೆಯರ ಗುಂಪು ಹಲವಾರು ದಿನ ಕಾಲ ಕಳೆದಿದ್ದಾರೆ, ಗುಡ್ಡದಲ್ಲಿ ಜನ ಸಾಮಾನ್ಯರ ಜತೆ ಮಾತನಾಡಿದ್ದಾನೆ. ಜನಸಾಮಾನ್ಯರು ಪ್ರೀತಿಯಿಂದ ತಂದುಕೊಟ್ಟ ರೊಟ್ಟಿ ಪಲ್ಲೆಯನ್ನು ಸಂತೋಷದಿಂದ ತಿಂದಿದ್ದಾರೆ. ಅವರ ಸುಖ-ದುಃಖವನ್ನು ಕೇಳಿಕೊಂಡಿದ್ದಾನೆ. ಲಕ್ಷ್ಮಣನ ಅಳಿಯ ನರಸಪ್ಪನ ಜತೆ ಮಾತನಾಡಿದ ಹಿರಿಯರನ್ನು ಭೆಟ್ಟಿಯಾಗಿದ್ದೇನೆ. ''ಲಕ್ಷ್ಮಣನ ಹೋರಾಟದ ಹೆಜ್ಜೆಗಳನ್ನು ಗುರುತಿಸಲು ಜನಪದರು ಹಾಡಿದ ಹಾಡುಗಳೇ ಅನನ್ಯ ಆಕರಗಳು'' ಎಂದು ಡಾ. ರಂಗರಾಜು ವನದುರ್ಗರು ಹೇಳಿದ ಮಾತು ಸತ್ಯ.

ಲಕ್ಷ್ಮಣ ಬಡವರ ಬಗ್ಗೆ ಅನುಕಂಪ ತೋರುತ್ತ ಬಂದ. ಸರಳಜೀವನ ನಡೆಸುತ್ತ ಬಂದ. ಪರನಾರಿ ಸಹೋದರತ್ವ ತೋರಿದ. ತನ್ನನ್ನು ತನ್ನ ಬಂಧು ಬಳಗಕ್ಕೆ ಸಮರ್ಪಿಸಿಕೊಂಡ. ಹೀಗಾಗಿ ಲಕ್ಷ್ಮಣನ ಹೋರಾಟ ಅತ್ಯಂತ ರೋಮಾಂಚನಕಾರಿಯಾಗಿದೆ. ಈ ಹೋರಾಟ ಸ್ವಾತಂತ್ರ್ಯ ಹೋರಾಟಕ್ಕಿಂತಲೂ ಕಡಿಮೆಯಾದುದ್ದಲ್ಲ ಎನ್ನುವ ಮಾತು ಡಾ. ಆರ್.ಸಿ. ಮುದ್ದೇಬಿಹಾಳರು ''ಸಿಂಧೂರ ಲಕ್ಷ್ಮಣ'' ಎಂಬ ತ್ರಿಪದಿಯಲ್ಲಿ ಬರೆದ ಮಹಾಕಾವ್ಯ ಈ ಮಾತು ಸತ್ಯವೆನಿಸುತ್ತದೆ.

ಸಿಂಧೂರಿನಲ್ಲಿ ಬಾಳಿ ಬದುಕಬೇಕಾದ ಲಕ್ಷ್ಮಣನನ್ನು ಗೌಡ, ಇನಾಮುದಾರರು, ಬ್ರಿಟೀಷ್ ಸರಕಾರಕ್ಕೊಂದು ಹಾಕಿತು.

**ಹಲಗಲಿಯ ವೀರಜಡಗಾಬಾಲರು**

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಹಳ್ಳಿ-ಹಲಗಲಿ. ಈ ಹಲಗಲಿಯ ಜಡಗಾ, ಬಾಲ, ಭೀಮ ಮತ್ತು ಹಣಮ ಮುಂತಾದ ವೀರರು ಬ್ರಿಟೀಷರ ನಿಶ್ಯಸ್ತ್ರೀಕರಣ ಕಾಯ್ದೆಯ ವಿರುದ್ಧ ಹೋರಾಟ ಮಾಡಿದರು.

೧೮೫೭ರಲ್ಲಿ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಬ್ರಿಟೀಷರು ಜಾರಿಗೆ ತಂದರು. ಈ ಕಾಯ್ದೆ ಭಾರತ ವ್ಯಾಪ್ತಿ ಜಾರಿಗೆ ಬಂದಿತು. ಈ ಕಾನೂನಿನನ್ವಯ ಹಲಗಲಿಯ ಬೇಡರು ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಬೇಕಾಗಿತ್ತು. ಹಲಗಲಿಯಲ್ಲಿಯೂ ಡಂಗೂರ ಸಾರಲಾಯಿತು. ''ಮಾರಕ ಶಸ್ತ್ರಾಸ್ತ್ರ ಯಾರೂ ಇಟ್ಟುಕೊಳ್ಳಕೂಡದು. ತಕ್ಷಣ ಕಂಪನಿ ಸರಕಾರಕ್ಕೆ ಒಪ್ಪಿಸ ಬೇಕು. ಒಂದು ವೇಳೆ ಬಚ್ಚಿಟ್ಟವರಿಗೆ ಮೂರು ವರ್ಷ ಶಿಕ್ಷೆಯಾಗುವದು. ಪ್ರತಿಭಟಿಸಿದ ವರನ್ನು ಕೊಂದು ಹಾಕಲಾಗುವದು" ಎಂಬ ಶಾಸನ ಹಲಗಲಿ ಬೇಡರಿಗೆ ನುಂಗಲಾರದ ತುತ್ತಾಯಿತು.

ನಾವು ತಂದ ಶಸ್ತ್ರಾಸ್ತ್ರ ಬೇಟೆಯಾಡುವುದಕ್ಕಾಗಿ ಮತ್ತು ಬದುಕು ಸಾಗುವ ಸಾಧನಕ್ಕಾಗಿ ಮಾತ್ರ ಬಳಸುತ್ತೇವೆ. ಈ ಆಯುಧ ಬ್ರಿಟೀಷರಿಗೆ ಒಪ್ಪಿಸಿ ನಾವು ಬರಿಗೈಯಿಂದ ಬದುಕಬೇಕೆ? ಹೀಗೆ ಹೇಳಲು ಇವರಾರು? ವ್ಯಾಪಾರಕ್ಕಾಗಿ ಬಂದ ಬ್ರಿಟೀಷರು ನಮ್ಮ ಶಸ್ತ್ರಾಸ್ತ್ರ ಕೇಳಲು ಇವರ್ಯಾರು? ಎಂಬ ಪ್ರಶ್ನೆಯ ಜತೆಗೆ ಆತ್ಮಾಭಿಮಾನ ಜಾಗೃತವಾಯ್ತು. ಒಂದು ವೇಳೆ ಹೇಡಿಯಾಗಿ ಆಯುಧಗಳನ್ನು ಬ್ರಿಟೀಷರಿಗೆ ಒಪ್ಪಿಸಿದರೆ ಮಗ್ಗುಲಲ್ಲಿಯ ಹೆಂಡತಿಯನ್ನೇ ಕೊಟ್ಟಂಥ ಅಪಮಾನ ತಮಗಾಗುತ್ತದೆ ಎಂದು ತಿಳಿದರು. ಹೊರಗಿನಿಂದ ಬಂದವರಿಗೆ ತಾವೇಕೆ ಹೇಡಿಯಾಗಿ ತಮ್ಮ ಆಯುಧಗಳನ್ನು ಬ್ರಿಟೀಷರಿಗೆ ಕೊಡಲೇಬಾರದೆಂದು ನಿರ್ಧರಿಸಿ ದರು. ಜಡಗಾ, ಬಾಲ, ಹಣಮ, ಭೀಮರು ಒಟ್ಟಾಗಿ ಬೇಡರ ಪರವಾಗಿ ತಮ್ಮ ಆಸುಪಾಸಿನ ಹಿರಿಯರಿಗೆ ಯುವಕರಿಗೆ ತಿಳಿಸಿದರು. ಶಸ್ತ್ರಾಸ್ತ್ರಗಳನ್ನು ಒಪ್ಪಿಸದೆ ಬಲಿದಾನ ಮಾಡಿದರು. ಹಲಗಲಿ ವೀರರು ಈ ತೆರನಾಗಿ ಬ್ರಿಟೀಷರ ವಿರುದ್ಧ ಹೋರಾಡಿ ಸತ್ತ ಹಲಗಲಿಯ ಬೇಡರ ಹೋರಾಟ ಪ್ರಾಯಶಃ ಭಾರತದಲ್ಲಿ ಇದೊಂದೆ ಎಂದು ಹೇಳಬಹುದು. ಹೀಗೆ ಇಡೀ ಊರಿನ ಜನ ಬಲಿದಾನವಾದ ಘಟನೆಗೆ ಜಪಾನಿ ಭಾಷೆಯಲ್ಲಿ ''ಹರಾಕರಿ'' ಎಂದು ಕರೆಯು ತ್ತಾರೆ.

ಬ್ರಿಟೀಷ ಸರಕಾರ ೧೮೫೩, ಸೆಪ್ಟೆಂಬರ್ ೧೧ರಂದು ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಹೊರಡಿಸಿತು. ಭಾರತೀಯರು ತಕ್ಷಣ ತಮ್ಮಲ್ಲಿದ್ದ ಶಸ್ತ್ರಾಸ್ತ್ರಗಳನ್ನು ತಂದು ಸರಕಾರಕ್ಕೆ ಒಪ್ಪಿಸಿ ಲಾಯಸನ್ಸ್ ಪಡೆಯಬೇಕೆಂದು ತಿಳಿಸಿತು. ಹಲಗಲಿಗೂ ಈ ಕಾಯ್ದೆ ಬಂದಿತು. ಆಗ ಹಲಗಲಿ ಮುಧೋಳ ಸಂಸ್ಥಾನದ ಒಂದು ಹಳ್ಳಿ. ಮುಧೋಳ ಸಂಸ್ಥಾನದ ರಾಜೇಸಾಹೇಬ ರಾದ ಘೋರ್ಪಡೆಯವರು ಬ್ರಿಟೀಷ್ ಸರಕಾರಕ್ಕೆ ವಿಧೇಯರಾಗಿದ್ದರಿಂದ ಸಂಸ್ಥಾನದಲ್ಲಿ ಯಾವ ತೊಂದರೆಯಾಗಲಿಲ್ಲ. ಆದರೆ ಹಲಗಲಿ ಬೇಡರಿಗೆ ಈ ಕಾಯ್ದೆ ಸರಿ ಬರಲಿಲ್ಲ.

ಬ್ರಿಟೀಷರ ಈ ಕಾನೂನನ್ನು ಜಾರಿಗೆ ತರಲು ಮುಧೋಳ ಸಂಸ್ಥಾನದ ಕಾರಬಾವಿ ಕೃಷ್ಣರಾವ ಪ್ರಯತ್ನ ಮಾಡಿದ. ಹಲಗಲಿ ಬೇಡರು ಒಪ್ಪಲಿಲ್ಲ. ಆಗ ಕಾರಬಾರಿಯು ತನ್ನ ಕಾರಕೂನನಾದ ರಾಮರಾಯ ಭುಜಂಗನನ್ನು ಕಳಿಸಿ ಬೇಡರ ಮನಸ್ಸು ಒಲಿಸಲು ಪ್ರಯತ್ನಿಸಿ ವಿಫಲನಾದ. ಬೇಡರ ನಾಯಕ ವೀರಹನುಮನಾಯಕನನ್ನು ಕಳಿಸಿದ ಕೆಲಸವಾಗಲಿಲ್ಲ. ಕುಂದರಗಿಯ ಕೃಷ್ಣೇಗೌಡರನ್ನು ಬೇಡರ ಮನಸ್ಸನ್ನು ಒಲಿಸಲು ಕಳಿಸಿದ ಆಗಲೂ ಕೆಲಸ ವಾಗಲಿಲ್ಲ. ಹಲಗಲಿಯ ಸುತ್ತಲಿನ ಹಳ್ಳಿಗಳಾದ ಮಂಟೂರ, ಬುದ್ನಿ, ಬಂಟನೂರು, ಅಲಗುಂಡಿ, ಬೇಡರ

ಮುಖಂಡರನ್ನು ಕರಿಸಿ ಬ್ರಿಟೀಷರ ಕಾನೂನ ಒಪ್ಪಿಕೊಳ್ಳುವಂತೆ ಹಲಗಲಿ ಬೇಡರಿಗೆ ತಿಳಿಸಲು ಕಾರಬಾವಿ ಪ್ರಯತ್ನ ಮಾಡಿದರೂ ಯಾವ ಕೆಲಸವಾಗಲಿಲ್ಲ. ಆಗ ಮೇಲಾಧಿಕಾರಿಗೆ ಬರೆದು ತಿಳಿಸಿದ ''ಹಲಗಲಿಯಲ್ಲಿ ಏನು ನಡೆಯುತ್ತಿದೆ ಎಂಬುದು ಒಂದು ತಿಳಿಯದು. ಹಲಗಲಿ ಬೇಡರು ಈ ಹಳ್ಳಿಗೆ ಹೊರಗಿನವರು ಬರುವುದನ್ನು ಪ್ರತಿಬಂಧಿಸಿ ದ್ದಾರೆ.'' ಎಂದು ಹೇಳಿ ಕೈಚಲ್ಲಿ ಕುಳಿತ. ಆಗ ಬ್ರಿಟೀಷರು ಹಲಗಲಿ ಬೇಡರ ಆಯುಧ ಒಪ್ಪಿಸುವ ನಿರಾಕರಣೆಯನ್ನು ಗಂಭೀರವಾಗಿ ಪರಿಗಣಿಸಿ ನವ್ಹೆಂಬರ್ ೨೭. ೧೮೫೩ರಂದು ಕರ್ನಲ್ ಮಾಲ್ಕಂ ಸಾಹೇಬನಿಗೆ ಈ ಕಾರ್ಯ ಒಪ್ಪಿಸಿತು.

೧೮೫೭ರ ಹೊತ್ತಿಗೆ ಬ್ರಿಟೀಷರು ಕಲಾದಗಿಯನ್ನು ತಮ್ಮ ಆಡಳಿತ ವ್ಯವಸ್ಥೆಯ ಮುಖ್ಯ ಸ್ಥಳವನ್ನಾಗಿ ಮಾಡಿಕೊಂಡಿದ್ದರು. ಕಲಾದಗಿಯಿಂದ ಬ್ರಿಟೀಷ್ ಅಧಿಕಾರಿಯೊಬ್ಬ ಹಲಗಲಿಗೆ ಬಂದ. ಆಗ ಕಾವಲು ಕಾಯುತ್ತಿದ್ದ ಭೀಮ ಅಧಿಕಾರಿಯ ಕುದುರೆಗೆ ಕವಣೆಗಲ್ಲು ಬೀಸಿದ. ಕುದುರೆ ಮುಗ್ಗರಿಸಿ ಸವಾರ ಕೆಳಗೆ ಬಿದ್ದ ಹಲಗಲಿಯ ಬೇಡರು ದಾಳಿಮಾಡಿ ೧೨-೧೩ ಜನ ಅಧಿಕಾರಿಗಳನ್ನು ಕೊಂದರೆಂದು (ಹಲಿಗಲಿಯಲ್ಲಿ ವಾಸವಾಗಿದ್ದ ಕುಲಕರ್ಣಿ ಡಾಕ್ಟರ್ ಹೇಳುತ್ತಿದ್ದರು) ಪ್ರತೀತಿ ಇದೆ. ವಿಷಯದ ಗಂಭೀರತೆ ಅರಿತುಕೊಂಡ ಅಧಿಕಾರಿ ಹಲಗಲಿ ಯೊಳಗೆ ಬರಲಾರದೆ ಹಾಗೆ ಹಿಂತಿರುಗಿದ್ದ. ಹಲಿಗಲಿ ಬೇಡರು ಅಯುಧ ನಿರಾಕರಣೆ ಕಾಯ್ದೆ ಯನ್ನು ಗಂಭೀರವಾಗಿ ಪರಿಗಣಿಸಿ ಇದೊಂದು ಸಶಸ್ತ್ರ ಕ್ರಾಂತಿಯಾಗಲಿದೆ ಎಂದು ಸರಕಾರ ಮನವರಿಕೆ ಮಾಡಿಕೊಂಡಿತು.

ಲೆಫ್ಟಿನೆಟ್ ಸೆಟನ್‌ಕರ್ ಸಾಹೇಬನಿಗೆ ವಿಜಾಪೂರದ ಅಶ್ವದಳದೊಂದಿಗೆ ಹಲಗಲಿಗೆ ಬರಲು ಮಾಲ್ಕಂ ಸಾಹೇಬ ತಿಳಿಸಿದರು. ಸೆಟನ್‌ಕರ್ ಸಾಹೇಬ ಹಲಿಗಲಿ ಬೇಡರಿಗೆ ತಕ್ಷಣ ಆಯುಧಗಳನ್ನು ಒಪ್ಪಿಸಿ ಅನುಮತಿ ಪಡೆದು ಒಯ್ಯಬೇಕೆಂದು ತಿಳಿಸಿದ ಆದರೆ ಬೇಡರು ಸಿದ್ಧರಾಗಲಿಲ್ಲ.

ನವ್ಹೆಂಬರ್ ೨೮, ೧೮೫೭ರಂದು ಬ್ರಿಟೀಷ್ ಸೈನ್ಯ ಹಲಗಲಿ ಊರಲ್ಲಿ ಪ್ರವೇಶಿಸಲು ಯತ್ನಿಸಿತು. ಬೇಡರು ಧೈರ್ಯದಿಂದ ಸೆಟನ್‌ಕರ್ ಸೈನ್ಯವನ್ನು ಎದುರಿಸಿತು. ಒಳಗೆ ಪ್ರವೇಶಿ ಸಲು ಸಾಧ್ಯವಾಗಲಿಲ್ಲ. ಮಾಲ್ಕಂ ಸಾಹೇಬನೂ ಸೈನ್ಯ ಪಡೆ ತೆಗೆದುಕೊಂಡು ಹಲಗಲಿಗೆ ಬಂದ. ಗುಡ್ಡದಲ್ಲಿ ಅಡಗಿದ ಬೇಡರನ್ನು ಹಿಡಿದುಕೊಂಡು ಬರಲು ಗುಡ್ಡದತ್ತ ಮಾಲ್ಕಂ ತನ್ನ ಸೈನ್ಯದೊಂದಿಗೆ ಹೋದ. ಬಾಗಲಕೋಟೆಯಿಂದ ಮುಂಬೈ ಎನ್.ಆಯ್ ೨೮ನೇ ದಂಡಿನ ಗುಂಪುಗಳು ಮಿಃ ಲಿಯಾಟನ ನೇತೃತ್ವದಲ್ಲಿ ಹಲಗಲಿಗೆ ಬಂದಿತು. ವೀರತ್ವದಿಂದ ಬೇಡರು ಹೋರಾಡ ತೊಡಗಿದರು.

ಸೆಟನ್‌ಕರ್ ಬೇರೆ ಉಪಾಯ ಕಾಣದೆ ತನ್ನ ಸೈನಿಕರಿಗೆ ಬೇಡರ ಮನೆಗಳಿಗೆ ಬೆಂಕಿ ಹಚ್ಚಲು ಆಜ್ಞೆಮಾಡಿದ. ಬೆಂಕಿ ಹತ್ತಿ ಉರಿಯುವಾಗಲೂ ಬೇಡರು ಶಸ್ತ್ರಾಸ್ತ್ರ ಒಪ್ಪಲು ಸಿದ್ಧರಾಗಲಿಲ್ಲ. ಹಲಗಲಿ ಸುಟ್ಟು ಬೂದಿಯಾಯಿತು. ಬ್ರಿಟೀಷರು ೩೦೦ ರಷ್ಟು ಬೇಡರನ್ನು ಬಂಧಿಸಿ ಖಟ್ಲೆ ಹಾಕಿದರು. ಅದರಲ್ಲಿ ೧೯ ಬೇಡರಿಗೆ ಗಲ್ಲಿನ ಶಿಕ್ಷೆಯಾಯಿತು.೧೮೫೩ ನೆಯ ಡಿಸೆಂಬರ್ ೧೧ ರಂದು ೧೩ ಜನರನ್ನು ಮುಧೋಳದಲ್ಲಿ ೬ ಜನರನ್ನು ೩ ದಿನಗಳ ತರುವಾಯ ಹಲಗಲಿಯಲ್ಲಿ ಗಲ್ಲಿಗೇರಿಸಿದರು.

ಹಲಗಲಿ ಹಾಳಾದರೂ ಹಲಗಲಿ ವೀರರು ಶೌರ್ಯ-ಸಾಹಸ ತೋರಿದರು. ಹಲಗಲಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿರಂತನವಾದ ಹೆಸರಿದೆ.

**ಬಳಸಿಕೊಂಡದ್ದು**

೧. ವ್ಯಾಧ ಚರಿತೆ ಸಂ. ಡಾ. ಮಂಜನಾಥ ಬೇವಿನಕಟ್ಟಿ

೨. ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೩. ಹಲಗಲಿ ಗ್ರಾಮ ಜಾನಪದ ಡಾ. ಶ್ರೀರಾಮ ಇಟ್ಟಣ್ಣವರ

೪. ಆತ್ಮಾರ್ಪಣೆ (ಐತಿಹಾಸಿಕ ಕಾದಂಬರಿ) ವಿ.ಎಸ್. ಶಿರಹಟ್ಟಿಮಠ

೫. ಫ್ಲೀಟ್ ಸಂಗ್ರಹಿಸಿದ ಐದು ಲಾವಣಿಗಳು, ಸಂ. ಕ್ಯಾತನಹಳ್ಳಿ ರಾಮಣ್ಣ

೬. ಹಲಗಲಿ ಬಂಡಾಯ (ನಾಟಕ) ವಿ.ಎಸ್. ಶಿರಹಟ್ಟಿಮಠ

೭. ಕನ್ನಡ ವಿಶ್ವಕೋಶ

೮. ಕನ್ನಡದ ಕಲಿಗಳು

೯. ಸಿಂಧೂರ ಲಕ್ಷ್ಮಣ, (ಮಕ್ಕಳ ನಾಟಕ), ವಿ.ಎಸ್.ಶಿರಹಟ್ಟಿಮಠ

* * *

**ಹಲಗಲಿ ಬೇಡರು**

ದುಃಖದಿಂದ ಅವರು ಅಲ್ಲಿಗ್‌ಹೋಗಿ
ಸಾಹೆಬಗ ಹೇಳಿದರ ಕೂಗಿ

ಕೇಳಿ ಸಾಹೇಬ ಯೆದ್ದ ಸಿಟ್ಟಿಗಿ
ತಿರಿಗಿ ಹೋದ ಆವಾಗ ಕಲಾದಗಿ

ಕರ್ಸಿ ಕೃಷ್ಣನಾಯಕಗೌಡ ಕುಂದರಗಿ
ಕರಶ್ಯಾನ ಸಂಧಾನಕ್ಕ್ ಆಗಿ ||ಯೇರ||

ಹಟಾ ಮಾಡಬಾರದು ನಿಮ್ಮ ಹತಾರ ಕೊಡರಿ ಸಾಹೇಬನ್ ಈಶಕ

## ೧೮. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ನಾನು ಇಲ್ಲಿ ಮುಖ್ಯವಾಗಿ ಖಾಟಿಕ್ ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವನ್ನು ಸಿದ್ಧಪಡಿಸಿದ್ದೇನೆ. ಇವರು ಮಾಡುವ ವೃತ್ತಿಯ ಆಧಾರದ ಮೇಲೆ ಜನ ಇವರನ್ನು ಕರ್ನಾಟಕದಲ್ಲಿ ಕಟುಗರು, ಕಟುಕರು ಎಂದು ಗುರುತಿಸತೊಡಗಿದರು. ಹೀಗೆ ಖಾಟಿಕ್ ಸಮುದಾಯ ಕರ್ನಾಟಕದಲ್ಲಿ ತನ್ನನ್ನು ಹಲವಾರು ಹೆಸರುಗಳಿಂದ ಗುರುತಿಸಿ ಕೊಳ್ಳುತ್ತಿರುವುದನ್ನು ಕಾಣಬಹುದು. ಇವರು ವೃತ್ತಿಯಾಧಾರವಾಗಿ ತಮ್ಮನ್ನು ಸಮಾಜ ಗುರುತಿಸುತ್ತಿರುವುದನ್ನು ನಿರಾಕರಿಸುತ್ತ ಸೂರ್ಯವಂಶಿ ಕ್ಷತ್ರಿಯ, ಮರಾಠಿ, ಅರೆಮರಾಠಿ,

ಕ್ಷತ್ರಿಯ, ರಜಪೂತ ಎಂದು ಗುರುತಿಸಿಕೊಳ್ಳಲು ಮುಂದಾಗುತ್ತಾರೆ. ಏಕೆಂದರೆ ಇವರಿಗೆ ಸಮಾಜದಲ್ಲಿ ಕಟುಕರೆಂದರೆ, ಖಾಟಿಕ್ ಎಂದರೆ ಸ್ಥಾನಮಾನ ಇಲ್ಲದಿರುವುದೇ ಕಾರಣವಾಗಿದೆ. ಹೀಗಾಗಿ ಬಹಳಷ್ಟು ಜನರು ಇವರ ಮೂಲ ವೃತ್ತಿಯಿಂದ ಏತಕ್ಕಾಗಿ ಸಮಾಜದಲ್ಲಿ ಅವಮಾನಿತರಾಗಬೇಕೆಂದು ತಮ್ಮ ವೃತ್ತಿಯನ್ನೇ ಬದಲಾಯಿಸಿಕೊಂಡಿರುವುದು ಸಹ ಕಂಡು ಬರುತ್ತದೆ.

ಇವರನ್ನು ವರ್ಣವ್ಯವಸ್ಥೆಯ ಯಾವ ಮೂಲದಿಂದ ಬಂದವರೆಂದು ಗುರುತಿಸುವಾಗ ಕರ್ನಾಟಕದಲ್ಲಿ ಖಾಟಿಕ್‌ರ ಮತ್ತು ಹಿಂದೂ ಶೂದ್ರ ಸಮುದಾಯದ ಜೊತೆಗಿನ ಸಂಬಂಧ ಅವರೊಂದಿಗೆ ಒಡನಾಟ ಮತ್ತು ಪಾಲ್ಗೊಳ್ಳುವಿಕೆಯನ್ನು ಗಮನಿಸಿದರೆ ಅವರ ಸಾಮಾಜಿಕ ಸ್ಥಾನಮಾನಗಳ ಚಿತ್ರಣ ದೊರೆಯುತ್ತದೆ. ಸಮಾಜದಲ್ಲಿ ಖಾಟಿಕ್‌ರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ಇವರು ವಾಸಿಸುವ ಕೇರಿಗಳನ್ನು ಕಟುಕರ ಕೇರಿ, ಕುಟುಕರ ಬೀದಿ, ಕಟುಕ ಮೊಹಲ್ಲಾ, ಕಟುಗರ ಓಣಿ ಎಂದು ಗುರುತಿಸುತ್ತಾರೆ. ಇವರ ಹೆಸರುಗಳನ್ನು ಸಹ ಕಟುಗರ ರಾಮಪ್ಪ, ಕಟುಗರ ಯಂಕಪ್ಪ, ಕಟುಗರ ಶಂಕ್ರಪ್ಪ ಎಂದು ಕರೆಯುತ್ತಾರೆ. ಹಾಗೆಯೆ ಲಿಂಗಾಯತ, ಕುರುಬ, ನಾಯಕ ಬೇರೆ ಸಮುದಾಯಗಳು ಇವರನ್ನು ತಮ್ಮ ಮನೆಯಲ್ಲಿ ಒಳಗೆ ಬಿಟ್ಟುಕೊಂಡರೂ, ಅದು ಮನೆಯ ಮುಂದಿನ ಪಡಸಾಲೆಯವರೆಗೆ ಮಾತ್ರ ಪ್ರವೇಶ ವಿರುತ್ತದೆ. ನಡುಮನೆ ಅಥವಾ ಅಡುಗೆ ಮನೆಯಾಗಲಿ ದೇವರ ಕೋಣೆಯವರೆಗೆ ಇವರಿಗೆ ಪ್ರವೇಶವಿರುವುದಿಲ್ಲ. ಇವರು ಸಹ ಇಲ್ಲಿಯ ಜನರಲ್ಲಿ ಸಾಮಾನ್ಯವಾಗಿ ಹೆಚ್ಚಾಗಿ ಬೆರೆಯಲು ಇಷ್ಟಪಡುವುದಿಲ್ಲ. ಕಾರಣ ಇವರ ನಿರಂತರ ಉದ್ಯೋಗ ಹಾಗೂ ವ್ಯಾಪಾರದಿಂದ ಸಮಯದ ಅಭಾವ ಒಂದಾದರೆ, ಇನ್ನೊಂದು ಅನ್ಯ ಸಮುದಾಯದವರು ಇವರನ್ನು ನೋಡುವ ದೃಷ್ಟಿಕೋನದಿಂದ ಎಂಬ ಕಾರಣಕ್ಕೆ ಸಮಾಜದಲ್ಲಿ ಯಾರೊಂದಿಗೂ ಹೆಚ್ಚಾಗಿ ಬೆರೆಯುವು ದಿಲ್ಲ. ಮುಸ್ಲಿಂ ಸಮುದಾಯದೊಂದಿಗೆ ಮಾತ್ರ ಹೆಚ್ಚು ಬಾಂಧವ್ಯ ಹಾಗೂ ಒಡನಾಟ ಇರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಒಂದು ಇವರೊಂದಿಗೆ ವ್ಯಾಪಾರ, ವ್ಯವಹಾರ ಸಂಬಂಧವಿರುವುದು ಮತ್ತು ಭಾಷೆಯು ಇವರನ್ನು ಹತ್ತಿರ ಬೆಸೆಯುವಂತೆ ಮಾಡಿದೆ ಎಂದು ಹೇಳಬಹುದು. ಇವರಾಡುವ ಗುಪ್ತ ಭಾಷೆಯನ್ನು ಮುಸ್ಲಿಂ ವ್ಯಾಪಾರಸ್ಥರು ಬಲ್ಲವರಾಗಿರು ತ್ತಾರೆ. ಹಾಗಾಗಿ ವ್ಯಾಪಾರದ ಬಾಂಧವ್ಯ ಇವರನ್ನು ಪರಸ್ಪರ ನಿಕಟವಾಗಿಸುವ ಒಂದು ಅವಿನಾಭಾವ ಸಂಬಂಧವಾಗಿದೆ. ಇವರು ಪರಸ್ಪರರಲ್ಲಿ ಹಾಗೂ ವ್ಯಾಪಾರದಲ್ಲಿ, ವ್ಯವಹಾರ ದಲ್ಲಿಯಾಗಲಿ ಅಥವಾ ಕುಶಲ ಕ್ಷೇಮಗಳನ್ನು ವಿಚಾರಿಸುವಾಗ ಮಾಮು (ಮಾವ), ಚಾಚಾ (ದೊಡಪ್ಪ ಚಿಕ್ಕಪ್ಪ), ದಾದಾ ನಾನಾ (ಅಜ್ಜ) ಆಪಾ (ಅಕ್ಕ), ದೀದಿ (ಸಹೋದರಿ), ಖಾಲಾ, ಚಾಚಿ (ಚಿಕ್ಕಮ್ಮ), ಬೈಯಾ (ಅಣ್ಣ) ಎಂದು ಸಂಭೋದಿಸುತ್ತಾರೆ. ಹಾಗೆಯೇ ತಮ್ಮಲ್ಲಿರುವ ಪ್ರೀತಿ ವಾತ್ಸಲ್ಯ ಮತ್ತು ಸ್ನೇಹಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಾರೆ. ಅವರ ಮದುವೆ ಕಾರ್ಯಕ್ರಮ ಇತರೆ ಕಾರ್ಯಗಳಲ್ಲಿ ಇವರು ಭಾಗವಹಿಸುವುದು ಸಹ ಕಂಡುಬರುತ್ತದೆ. ಈ ರೀತಿ ಖಾಟಿಕ್ ಸಮುದಾಯ ಮುಸ್ಲಿಂ ಸಮುದಾಯದೊಂದಿಗೆ ಅನನ್ಯತೆಯ ಸಂಬಂಧ ಗಳನ್ನು ಹೊಂದಿರುವುದು ಕ್ಷೇತ್ರಕಾರ್ಯದಲ್ಲಿ ತಿಳಿದುಬರುತ್ತದೆ.

ಖಾಟಿಕ್ ಸಮುದಾಯವು ಉತ್ತರದಿಂದ ದಕ್ಷಿಣಕ್ಕೆ ಬಂದಂತಹ ಸಂದರ್ಭದಲ್ಲಿ ಇಲ್ಲಿ ಸೈನಿಕರಾಗಿ ಸೇವೆ ಸಲ್ಲಿಸುವ ಜೊತೆಗೆ ಹೊಟ್ಟೆಪಾಡಿಗಾಗಿ ಮಾಂಸ ಮತ್ತು ಮದ್ಯ ಮಾರಾಟ ಮಾಡುತ್ತ ಜೀವನ ಸಾಗಿಸುವಾಗ ತಮ್ಮ ಸಂಸ್ಕೃತಿಯ ಮೂಲ ನೆಲೆಗಳಾದ ಅವರ ಆಚರಣೆ, ಸಂಪ್ರದಾಯಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು. ಭಾರತ ಆರಂಭದಿಂದಲೂ ಅನ್ಯ ದೇಶೀಯರ ಆಕ್ರಮಣಗಳಿಗೆ ತುತ್ತಾಗುತ್ತ ರಾಜಕೀಯ ಗುಲಾಮಗಿರಿ ಯನ್ನು ಅನುಭವಿಸಿದರೂ ತನ್ನ ಸಾಮಾಜಿಕ ರಚನೆಯ ಒಳವಿವರಗಳನ್ನು ಬಿಟ್ಟುಕೊಟ್ಟಿಲ್ಲ. ಇಲ್ಲಿನ ಧಾರ್ಮಿಕ ಬದ್ಧತೆಯೊಂದಿಗೆ ಬೆಸೆದು ಹೋದ ಸಮಾಜ ಅದರ ಕಟ್ಟುಪಾಡುಗಳನ್ನು ರೂಪಿಸಿಕೊಳ್ಳುವಾಗ ಮನುಷ್ಯ ಮತ್ತು ದೇವರ ನಡುವಿನ ಸಂಬಂಧವನ್ನು ಕಟ್ಟಿಕೊಂಡಿದೆ. ದೇವರು, ಧರ್ಮ, ಜಾತಿ, ಪಾಪ-ಪುಣ್ಯ, ಸ್ವರ್ಗ-ನರಕ ಮೊದಲಾದವುಗಳೆಲ್ಲಾ ಒಂದರೊಳ ಗೊಂದರಂತೆ ಹೆಣೆದುಕೊಂಡು ಇಲ್ಲಿನ ಸಮಾಜದ ತಾರತಮ್ಯ ನೆಲೆಯನ್ನು ರೂಪಿಸಿದೆ. ಖಾಟಿಕರು ಸಹ ಇಂತಹ ರಚನೆಯ ಒಳಗಡೆಯೇ ಆಕಾರ ಪಡೆದುಕೊಂಡವರಾಗಿದ್ದಾರೆ. ಅವರ ಸಾಮಾಜಿಕ ಸ್ಥಾನಮಾನಗಳನ್ನು ಕುರಿತು ಯೋಚಿಸುವಾಗ ಸಹಜವಾಗಿಯೇ ಅವರ ಮೂಲ ಸಂಸ್ಕೃತಿಯ ರೂಪಗಳು ಕಣ್ಣೆದುರಿಗೆ ಬರುತ್ತದೆ.

ಮುಖ್ಯವಾಗಿ ಇವರ ವೃತ್ತಿಯ ಕಾರಣದಿಂದಾಗಿ ಸಮಾಜ ಇವರನ್ನು ಅಸ್ಪೃಶ್ಯರಂತೆ ಕಾಣುತ್ತದೆ. ಆದರೆ ಇವರ ಮತ್ತು ದಲಿತರ ಸಂಬಂಧಗಳನ್ನು ನೋಡಿಕೊಂಡಾಗ ಇವರು ದಲಿತರನ್ನು ತಮ್ಮ ಮನೆಯಲ್ಲಿ ಸೇರಿಸಿಕೊಳ್ಳಲು ಇಷ್ಟಪಡುವುದಿಲ್ಲ. ಹಾಗೆಯೇ ಅವರಿಂದ ಆಹಾರ ಪಾನೀಯಗಳನ್ನು ಸಹ ಸ್ವೀಕರಿಸುವುದಿಲ್ಲ. ಇದನ್ನು ಗಮನಿಸಿದಾಗ ಇವರ ಮೂಲ ನೆಲೆ ಯಾವುದಿರಬಹುದು ಎಂದು ಗುರುತಿಸುವುದು ಕಷ್ಟವಾಗುತ್ತದೆ. ಸಮಾಜದ ಇತರ ಸಮುದಾಯಗಳು ಇವರನ್ನು ಅಸ್ಪೃಶ್ಯರಂತೆ ಕಾಣುತ್ತವೆ. ಇವರು ತಮಗಿಂತ ಕನಿಷ್ಟರನ್ನಾಗಿ ಮತ್ತೊಂದು ತಳ ಸಮುದಾಯವನ್ನು ಕಾಣುವಂತ ಸಂದರ್ಭದಲ್ಲಿ ಯಾರ ನೆಲೆ ಯಾವುದು ಎಂದು ಗುರುತಿಸುವುದು ಕಷ್ಟದ ಕೆಲಸವೇ ಎಂದು ತೋರುತ್ತದೆ.

ಮೂಲದಿಂದ ಬೇಟೆಯಾಡುತ್ತ ಬಂದ ಒಂದು ಸಮುದಾಯ ಕಾಲಾನಂತರ ಬೇಟೆಯಿಂದ ಪಶುಪಾಲನೆ ನಂತರ ಮಾಂಸ ಮಾರಾಟ ಮಾಡುವಿಕೆಯಲ್ಲಿ ತೊಡಗಿಕೊಂಡು ಬಂದುದನ್ನು ಗಮನಿಸಿದಾಗ ಮಾಂಸ ಮಾರಾಟ ಮಾಡುವಿಕೆ ಇವರ ಮೂಲ ಉದ್ಯೋಗವಾಗಿರುವುದು ಕಂಡುಬರುತ್ತದೆ. ಅವಶ್ಯವಿದ್ದಾಗ ಸೈನಿಕರಾಗಿ ನಂತರ ಹೊಟ್ಟೆ ಪಾಡಿಗಾಗಿ ಈ ಉದ್ಯೋಗ ವನ್ನು ಸ್ವೀಕರಿಸಿ ಅದನ್ನೇ ವಂಶಪಾರಂಪರ್ಯವಾಗಿ ಮುಂದುವರೆಸಿಕೊಂಡು ಬಂದಿರುವ ಸಮುದಾಯ ಇಂದಿನ ಜಾಗತೀಕರಣದಲ್ಲಿಯೂ ತನ್ನ ಮೂಲವೃತ್ತಿಯನ್ನುಳಿಸಿಕೊಳ್ಳುತ್ತಾ ಆಧುನಿಕತೆಯ ಭರಾಟೆಯಲ್ಲಿ ಸಾಗುವ ಸಮಾಜದ ಬದಲಾವಣೆಗಳ ಪರಿಸ್ಥಿತಿಗಳಿಂದ ಒಂದು ಕಡೆ ತನ್ನ ವೃತ್ತಿಯನ್ನು ಉಳಿಸಿಕೊಳ್ಳುವ ಮತ್ತೊಮ್ಮೆ ಹೊಸ ಔದ್ಯೋಗೀಕರಣಗಳಾದ ಕೈಗಾರಿಕೀಕರಣ, ಜಾಗತೀಕರಣ, ಸಂಸ್ಕೃತೀಕರಣದ ಪ್ರಭಾವದಿಂದ ಹೊಸ ಉದ್ಯೋಗದ ಕಡೆ ಚಲನೆಯನ್ನು ಪ್ರಾರಂಭಿಸುವ ವ್ಯಕ್ತಿ ಸ್ವಾತಂತ್ರ್ಯ, ಜಾತಿ ಸ್ವಾತಂತ್ರ್ಯ, ಶಿಕ್ಷಣದ ಸವಲತ್ತು ಗಳಿಲ್ಲದ್ದರಿಂದ ಇಂತಹ ಸಮುದಾಯಗಳಿಗೆ ಮುಂದೆ ಚಲಿಸಲು ಆಗದೆ ಹಿಂದೆ ಉಳಿಯಲು ಆಗದೆ ಒದ್ದಾಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗುವುದು. ಆದ್ದರಿಂದ ಇಂತಹ ಹೊಸತನ ಮೈಗೂಡಿಸಿಕೊಳ್ಳಲು ಶಿಕ್ಷಣ, ರಾಜಕೀಯ, ಆರ್ಥಿಕ, ಕಂಪ್ಯೂಟರ್ ಜ್ಞಾನಗಳು ಬಡ ಸಮುದಾಯಗಳ ಮೆದುಳಿಗೆ ತಲುಪಿ ಅವರು ಜಾಗೃತರಾಗುವ ಹೊತ್ತಿಗೆ ಇಂತಹ ನೂರೆಂಟು ಸಮುದಾಯಗಳಿಗಿಂತ ಜಗತ್ತು ಯಾವ ಹಂತದಲ್ಲಿರುತ್ತದೆಯೋ ಸಮಯವೇ ನಿಗದಿಸುತ್ತದೆ.

ಆಧುನಿಕತೆ ಹೆಚ್ಚಿದಂತೆಲ್ಲಾ ಈ ವೃತ್ತಿ ಮೂಲ ಸಮುದಾಯಗಳು ಹೆಚ್ಚಿನ ಆತಂಕಗಳಿಗೆ ಒಳಗಾಗುತ್ತಲೇ ಇವೆ. ಆಧುನಿಕತೆಯ ಪರಿಣಾಮವಾಗಿ ವೃತ್ತಿ ಮೂಲ ಸಮುದಾಯಗಳು ಜನತೆಯ ಕಣ್ಣಿನಿಂದ ದೂರವಾಗುತ್ತಿವೆ. ಇದಕ್ಕೆ ಕಾರಣ ಇವರು ತಮ್ಮ ವೃತ್ತಿಯಿಂದ ಎಷ್ಟೇ ದುಡಿದರು ತುಂಬದ ಅರೆಹೊಟ್ಟೆ, ಕುಟುಂಬದ ಹೊರೆ, ಉತ್ತಮ ಶಿಕ್ಷಣಗಳಂತಹ ಸ್ಥಿತಿಯಿಂದ ಮುಂದುವರೆಯಲು ಹಾಗೂ ಉತ್ತಮ ಸ್ಥಿತಿಗೆ ತಲುಪಲು ಆಗುತ್ತಿಲ್ಲ. ಇನ್ನೊಂದೆಡೆ ವಿದ್ಯೆ ಇದ್ದರೆ ತಂತ್ರಜ್ಞಾನ ಲೋಕದಲ್ಲಿ ಗಳಿಸುವ ಮತ್ತು ಎಣಿಸಲಾರದ ವೇತನ ನೀಡುತ್ತಿರುವ ಆಧುನಿಕ ವ್ಯವಸ್ಥೆ ಇವರಲ್ಲಿ ವಿದ್ಯೆ ಪಡೆದು ಆಧುನಿಕತೆಯನ್ನು ತಲುಪುವುದಕ್ಕೆ ಸಮಯವಿಲ್ಲ. ಇವರು ಕಲಿತು ಮುಂದುವರೆಯುವ ತನಕ ಅದು ಮತ್ತೇ ನನ್ನೋ ಸಾಧಿಸಿ ಇವರೊಂದಿಗೆ ಕಣ್ಣುಮುಚ್ಚಾಲೆ ಆಟವನ್ನು ಆಡುತ್ತಿದೆಯೇನೋ ಅನಿಸುತ್ತದೆ. ಇನ್ನೊಂದೆಡೆ ಮನುಷ್ಯ ಎಷ್ಟೇ ಹಾಗೂ ಏನೇ ಸಾಧಿಸಿದರು ಅವರನ್ನು ಜಾತಿಯಿಂದ ಅಳೆಯುವ ನಮ್ಮ ಸಮಾಜದ ಮಾನದಂಡ. ಇದರಿಂದ ವ್ಯಕ್ತಿಯ ಪರಿಸ್ಥಿತಿ ನಮ್ಮ ಜನಪದರು ಹೇಳುವಂತೆ "ರೋಸಿಗೆ ಬಂದು ಬಿಟ್ಟಿದೆ ನೋಡಿ ನೋಡಿ" ಎಂದು ಬೇಜಾರು ಪಟ್ಟುಕೊಳ್ಳು ವಂತ ಪರಿಸ್ಥಿತಿಯಿಂದಾಗಿ ಇಂತಹ ಸಮುದಾಯಗಳು ನರಳುತ್ತಿವೆ. ಅನೇಕ ಸಾಮಾಜಿಕ ನಿರ್ಲಕ್ಷ್ಯದಿಂದ ಕಡೆಗಾಣಿಸುವ ಬುದ್ಧಿವಂತರಿಂದ ಇಂತಹ ಸಮುದಾಯಗಳು ಇಂದು ಸವಕಲು ನಾಣ್ಯಗಳಾಗುತ್ತಿವೆ.

ಆಧುನಿಕ ಪ್ರವೇಶದಿಂದಾಗಿ ಭಾರತದ ಬಹುಪಾಲು ಬುಡಕಟ್ಟು ಪಂಗಡಗಳು ಈ ತರಹದ ಸಮುದಾಯಗಳು ಬುಡಮೇಲಾದುದು ಹೇಗೆ ಎಂಬುದನ್ನು ಕುರಿತು ಯೋಚಿಸುವಾಗ ಆಧುನಿಕತೆ ಭಾರತೀಯನಿಗೆ ಅಧ್ಯಯನದ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸಿದರೂ ಬುಡಕಟ್ಟು ಸಮುದಾಯಗಳನ್ನು ನೋಡಿದಾಗ ಅವರ ಪರಿಸ್ಥಿತಿ ಹೆಚ್ಚು ಹೆಚ್ಚು ಶೋಚನೀಯ ವಾಗಿರುವುದನ್ನು ನೋಡಬಹುದು. ಪ್ರಾರಂಭದಲ್ಲಿ ತಮ್ಮ

ಪಾರಂಪರಿಕ ವೃತ್ತಿಯಿಂದಾಗಿ ತುಂಬಾ ಸ್ವಾವಲಂಬಿಗಳಾಗಿದ್ದ ಸಮುದಾಯಗಳು ಆರ್ಥಿಕವಾಗಿ ಶೋಚನೀಯ ಸ್ಥಿತಿಯನ್ನು ಬಹುಶಃ ತಲುಪಿರಲಿಲ್ಲ ಎಂದೆನಿಸುತ್ತದೆ.

ಖಾಟಿಕ್ ಸಮುದಾಯವನ್ನು ಕುರಿತು ಆಲೋಚಿಸುವಾಗ ಮೊದಲು ಇವರಿಗೆ ವೃತ್ತಿಯಲ್ಲಿ ಬರುವ ಲಾಭದಿಂದ ತಮ್ಮ ಜೀವನ ನಿರ್ವಹಣೆ ಕಷ್ಟವಾಗಿರಲಿಲ್ಲ. ಆಗ ಇವರಿಗೆ ಉದ್ಯೋಗಕ್ಕೆ ಕುರಿಗಳ ಸಂಖ್ಯೆ ಜಾಸ್ತಿ ಇದ್ದು ಮಾಂಸಾಹಾರ ಮಾಡುವ ಜನವರ್ಗವು ಒಂದು ಪ್ರಮಾಣದಲ್ಲಿತ್ತು ಎಂದು ಹೇಳಬಹುದು. ಆದರೆ ಇಂದು ಮಾಂಸಾಹಾರ ಎಂಬುದು ಒಂದು ಫ್ಯಾಷನ್ ರೂಪ ತಾಳುತ್ತಿರುವುದು ಕಂಡುಬರುತ್ತೆ. ಕೆಲವೊಂದು ಸಮುದಾಯದವರು ಕದ್ದುಮುಚ್ಚಿ ಬಳಸುತ್ತಾರೆ ಎನ್ನುವ ಮಾತುಗಳು ಕೇಳಿಬರುತ್ತಿದ್ದರು ಅದನ್ನು ಯಾರೂ ಬಾಯಿಬಿಟ್ಟು ಹೇಳಲು ಇಷ್ಟಪಡುವುದಿಲ್ಲ.

ತಾವು ತುಂಬಾ ಮಡಿವಂತರು, ಮಾಂಸಾಹಾರ ಉಪಯೋಗಿಸುವುದೇ ಮಹಾ ಘೋರ ಅಪರಾಧ ಎನ್ನುವಂತೆ ಮಾತನಾಡುತ್ತಾರೆ. ಇನ್ನು ಮಾಂಸ ಉಪಯೋಗಿಸುವವರು ಮನೆಯಲ್ಲಿ ಉಪಯೋಗಿಸುತ್ತೇವೆ ಎಂದು ಹೇಳುವುದಿಲ್ಲ. ತಾವು ಮಾಂಸ ತಿನ್ನುವವರಿದ್ದರು ನಾನು ತಿನ್ನಲ್ಲ ಮನೆಯಲ್ಲಿ ಒಬ್ಬಿಬ್ಬರು ಉಪಯೋಗಿಸುತ್ತಾರೆ. ಹೊಲಸು ಮಾಡಿದ್ದೇವೆ ಎಂದು ತಿನ್ನುವ ಆಹಾರದ ಬಗ್ಗೆ ತಾಳುವ ನಿಲುವು ಇದು. ಹೀಗೆ ಸಮಾಜದಲ್ಲಿ ಮಾಂಸಾಹಾರವನ್ನು ಅದನ್ನು ಮಾರುವ ಸಮುದಾಯವನ್ನು ಕುರಿತು ಸಮಾಜವೇ ಒಂದು ಕಲ್ಪನೆಯನ್ನು ಹುಟ್ಟು ಹಾಕಿದೆ. ಸಾತ್ವಿಕ ಆಹಾರ. ತಾಮಸಿಕ ಆಹಾರ. ಆಹಾರದಿಂದ ಮನುಷ್ಯನ ಗುಣಗಳನ್ನು ತಿಳಿಸುವ ಕೆಲಸದ ಮೇಲೆ ಸಮಾಜವನ್ನು ಯಾವುದು ಸರಿ ಯಾವುದು ತಪ್ಪು ಎಂಬ ಯೋಚನೆಗೆ ನೂಕಿ ಆಹಾರವನ್ನು ಪೂರೈಸುವ ಸಮುದಾಯದ ಕುರಿತು ಭಯಂಕರ ಚಿತ್ರಣ ನೀಡಿದೆ. ನಮ್ಮ ಸಾಹಿತ್ಯವನ್ನು ಒಮ್ಮೆ ಗಮನಿಸಿದಾಗ ಅದರಲ್ಲಿ ಸಿಗುವ ಹಲವು ಮಾಹಿತಿಗಳು ಖಾಟಿಕ್‌ರನ್ನು ಕುರಿತು ಈ ಸಮಾಜದ ದೃಷ್ಟಿಕೋನ ಗೊತ್ತಾಗುತ್ತದೆ.

“ತಲೆಗಳ ತುಂಡು, ತೋಳ್ಗಳ ತುಂಡು, ನಡು ತುಂಡು, ಸಲೆಜಾನು ಜಂಘೆಯ ತುಂಡು ಬೆಲೆಯಿಂದ ಕಟುಕರಂಗಡಿಯಂತೆ ರಣರಂಗ ಸಲೆ ಜಿಗುಪ್ಸೆಯ ತೋರಿಸಿತು” ಮೋಹನ ತರಂಗಿಣಿಯಲ್ಲಿ ಬರುವ ಮೇಲಿನ ವಾಕ್ಯಗಳು ರಣರಂಗವು ಕಟುಕರಂಗಡಿಯಂತೆ ಭಯಾನಕ ವಾತಾವರಣದಿಂದ ಕಂಗೊಳಿಸಿ ಜಿಗುಪ್ಸೆಯನ್ನುಂಟು ಮಾಡುವಂತಿತ್ತು ಎಂದು ತಿಳಿದು ಬರುತ್ತದೆ.

“ಕಟುಕರ ಮನೆಯ ಕುರಿಯ ಹಾಗೆ” ಎಂಬಿ ಗಾದೆಯು ಕುರಿಯು ಇಂದಲ್ಲ ನಾಳೆ ಸಾಯುವುದು ಖಂಡಿತ ಅದರ ಸಾವು ತಪ್ಪಿದ್ದಲ್ಲ ಎಂಬ ಧ್ವನಿಯನ್ನು ಹೇಳುತ್ತಾ ಕಟುಕರ ಮತ್ತು ಕುರಿಯ ಸಂಬಂಧದಲ್ಲಿ ಯಾವ ತರಹದ ನಂಟಿರುತ್ತದೆ ಅವರ ದೃಷ್ಟಿಯಲ್ಲಿ ಕುರಿ ಯೆನ್ನುವುದು ಅವರ ವ್ಯಾಪಾರದ ವಸ್ತುವೆ ವಿನಃ ಅದು ಪ್ರಾಣಿ ಅಥವಾ ದಯೆಯ ವಿಚಾರ ಸುಳಿಯುವುದಿಲ್ಲ ಎಂಬುದನ್ನು ತಿಳಿಸುತ್ತೆ.

ಕಟುಗ ಗಂಜಿಕೆಯೇಕೆ ದಿಟಕೆ ಮೂದಲೆಯೇಕೆ (ಸರ್ವಜ್ಞ)
ಆ ಕಟಿಗರು ಅವನ ರಭಸಕ್ಕೆ ಭೀತರಾದವರಂತೆ
ಶಕಟದಾಸನಂ ಬಿಟ್ಟು ದಿಕ್ಕು ದಿಕ್ಕಿಗೆ ಓಡಿ ಹೋಗಲು
ಮುದ್ರಾಮಂಜುಷಾದಲ್ಲಿ ದೊರೆಯುವ ಈ ಮಾಹಿತಿಯು

ಅಂಜಿ ಅಳುವ ಬಾಲಕನಂ ಕಂಡು ಕಟುಕರ ಮನ ಕರಗಿತು. ಚಂದ್ರಹಾಸನ ಕಥೆಯಲ್ಲಿ ಬರುವ ಈ ವಾಕ್ಯವನ್ನು ಗಮನಿಸಿದರೆ ಇಲ್ಲಿಯವರೆಗೆ ಸಮಾಜ ಕಟುಕರೆಂದ ತಕ್ಷಣ ಹೃದಯವಿಲ್ಲದವರು ಮನುಷ್ಯತ್ವವಿಲ್ಲ ಎಂದು ಗುರುತಿಸುವಾಗ ಒಂದು ಚಿಕ್ಕ ಮಗು ಅಳುವುದನ್ನು ಕಂಡು ಕಟುಕರ ಮನ ಕರಗಿರುವುದು ಅವರಲ್ಲಿಯೂ ಕರುಣೆ ಎನ್ನುವುದಿದೆ. ಇವರು ಮನುಷ್ಯರೇ, ಇವರಲ್ಲಿಯೂ ಪ್ರೀತಿ, ಮಮತೆ, ಕರುಣೆ, ಸ್ನೇಹ

ಎಂಬುದಿದೆ. ಆದರೆ ವೃತ್ತಿ ಮಾಡಿದ ತಕ್ಷಣ ಇವರ ಮನಸ್ಸು ಕಲ್ಲು ಎನ್ನುವುದು ಸರಿಯಲ್ಲ. ಹೀಗೆ ನಮ್ಮ ಸಾಹಿತ್ಯದಲ್ಲಿ ಖಾಟಿಕ್‌ರನ್ನು ಕುರಿತು ಚಿತ್ರಣ ದೊರೆಯುತ್ತದೆ.

ಇತ್ತೀಚಿನ ದಿನಗಳಲ್ಲಿ ಕುರಿಮಾಂಸ ಮಾರಾಟದೊಂದಿಗೆ ಹಲವು ಇತರ ಚಿಕ್ಕಪುಟ್ಟ ವೃತ್ತಿಗಳಲ್ಲಿ ಖಾಟಿಕ್‌ರು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಉದಾಹರಣೆಯಾಗಿ ಕೋಳಿಮಾಂಸ ಮಾರಾಟ ಮಾಡುವುದು, ಮೀನುವ್ಯಾಪಾರ ಮಾಡುವುದರಿಂದ ಮೀನನ್ನು ಸ್ವಚ್ಛಗೊಳಿಸಿ ಗಿರಾಕಿಗಳಿಗೆ ನೀಡುವುದು, ಮೊಟ್ಟೆ ವ್ಯಾಪಾರ, ರಾತ್ರಿ ಹೊತ್ತು ರಸ್ತೆಯಲ್ಲಿ ಚಿಕನ್ ಪಕೋಡ, ಅನ್ನ ಮಾಂಸದ ಸಾರು ಮಾರುವುದು ಹೀಗೆ ಅವರು ಹತ್ತು ಹಲವು ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಇತ್ತೀಚೆಗೆ ಮಕ್ಕಳ ಶಿಕ್ಷಣದ ಕಡೆ ಗಮನ ಹರಿಸಿದ್ದಾರೆ. ನಮ್ಮಂತೆ ನಮ್ಮ ಮಕ್ಕಳು ಕಷ್ಟಪಡುವುದು ಬೇಡ ಆದರೆ ವಿದ್ಯೆ ಹತ್ತದಿದ್ದರೆ ನಮ್ಮ ಕುಲಕಸುಬು ನಮಗೆ ತಪ್ಪಿದ್ದಲ್ಲ ಎಂದು ಹೇಳುತ್ತಾರೆ. ಹೀಗೆ ಒಂದು ಕಡೆ ತಮ್ಮ ಮಕ್ಕಳು ವಿದ್ಯಾವಂತರಾಗಲಿ ಎಂಬ ಆಶಾವಾದದೊಂದಿಗೆ ಕುಲ ಕಸುಬನ್ನು ಮುಂದುವರೆಸುವ ಯೋಚನೆಯುಳ್ಳವರು ಒಂದು ಸಮುದಾಯದಲ್ಲಿ ಕಂಡುಬರು ತ್ತಾರೆ. ಹಾಗೆಯೇ ಈ ಉದ್ಯೋಗವೇ ಬೇಡ ಎಂದು ಕಿರಾಣಿ ಅಂಗಡಿಯೋ, ಬಟ್ಟೆ ವ್ಯಾಪಾರವೋ, ಸ್ಟೇಷನರಿ ಅಂಗಡಿಯೋ ಸ್ವಲ್ಪವಾದರು ಸ್ಥಿತಿ ಉತ್ತಮಗೊಂಡು ಸಮಾಜದ ಜನರೊಂದಿಗೆ ಬೆರೆಯುವಲ್ಲಿ ಕೆಲವರು ಆಸಕ್ತಿ ವಹಿಸುವವರು ಸಿಗುತ್ತಾರೆ. ಅಪ್ಪ ಹಾಕಿದ ಆಲದ ಮರ ಎಂದು ಬೇರೆ ಉದ್ಯೋಗ ಬಾರದೆ ಇದೇ ಉದ್ಯೋಗದಲ್ಲಿ ಹಾಗೂ ಹೀಗೂ ಮಾಡಿ ಜೀವನ ನಿರ್ವಹಿುತ್ತ ಮಕ್ಕಳಿಗೆ ಶಿಕ್ಷಣ, ಮಗಳ ಮದುವೆ, ಸಾಲಸೋಲ ತೆಗೆದು ಕೊಂಡು ಬದುಕು ಸಾಗಿಸುವವರು ಇರುವರು. ಹೀಗೆ ಒಂದು ಸಮುದಾಯದಲ್ಲಿ ಹಲವು ಸ್ಥಿತಿಯಲ್ಲಿರುವ ಜನ ಕಂಡುಬರುತ್ತಾರೆ.

ಕೈಗಾರಿಕೀಕರಣದ ಪ್ರಭಾವದಿಂದಾಗಿ ಇವರು ಹೊಸ ಉದ್ಯೋಗಗಳತ್ತ ಆಕರ್ಷಿತರಾಗಿ ಬೇರೆ ಬೇರೆ ಉದ್ಯೋಗಗಳನ್ನು ಮಾಡುವಲ್ಲಿ ಆಸಕ್ತರಾಗಿದ್ದರೂ ಬಂಡವಾಳದ ಕೊರತೆ, ಹೊಸ ಉದ್ಯೋಗದ ಬಗ್ಗೆ ಮಾಹಿತಿ, ವ್ಯವಹಾರ ಜ್ಞಾನ ಇಲ್ಲದಿರುವುದರಿಂದ ವೃತ್ತಿ ಕೌಶಲ್ಯದ ಕೊರತೆ ಹೀಗೆ ಹಲವು ಅಡೆತಡೆಗಳು ಎದುರಾಗಿ ಇವರು ತಮ್ಮ ಉದ್ಯೋಗದಲ್ಲೇ ಮುಂದುವರಿಯುವಲ್ಲಿ ಆಸಕ್ತಿ ವಹಿಸಿದ್ದಾರೆ. ಆದರೆ ವಿದ್ಯೆಯ ಕಡೆಗೆ ಇವರು ಇತ್ತೀಚೆಗೆ ಹೆಚ್ಚು ಒಲವನ್ನು ತೋರಿಸುತ್ತಿದ್ದಾರೆ. ಇವರು ಉದ್ಯೋಗದಲ್ಲಿ ಬದಲಾವಣೆಯನ್ನು ಬಯಸಿದರು ದೊಡ್ಡ ದೊಡ್ಡ ವ್ಯಾಪಾರಗಳಾಗಲಿ ತುಂಬಾ ಉತ್ತಮ ಶ್ರೇಷ್ಠಮಟ್ಟದ ಉದ್ಯೋಗಗಳನ್ನು ಮಾಡುವಂತಹ ಶಕ್ತಿ ಇವರಲ್ಲಿ ಇಲ್ಲ. ಬದಲಾಗಿರುವ ಇಂದಿನ ಪರಿಸ್ಥಿತಿ ಯಲ್ಲಿ ಇವರು ಹಣ್ಣು, ಹೂವು ಮಾರುವುದು, ಗುಜರಿ ಅಂಗಡಿ ಇಡುವುದು, ಗೋಣಿಚೀಲ ಮಾರಾಟ, ಆಟೋರಿಕ್ಷಾ ಓಡಿಸುವುದು, ರಸ್ತೆ ಬದಿಯಲ್ಲಿ ಬೀಡಿ ಸೀಗರೇಟು ಅಂಗಡಿ ಇಡುವುದು. ಹಾಗೆಯೇ ಚಿಕನ್ ಪಕೋಡ, ಪಲಾವ, ಅನ್ನಸಾರು, ರೊಟ್ಟಿ, ಮೊಟ್ಟೆಗಳನ್ನು ಬಂಡಿಗಳಲ್ಲಿಟ್ಟುಕೊಂಡು ಮಾರುವುದು. ಮೀನಿನ ಮಾರ್ಕೆಟ್‌ಗಳಲ್ಲಿ ಮೀನುಗಳನ್ನು ಕಡಿದು ಕೊಡುವುದು. ಹಾಗೆಯೇ ಲಾರಿ ಡ್ರೈವರ್‌ಗಳಾಗಿ, ಕೂಲಿಗಳಾಗಿ, ಡ್ರೈವರ್, ಮೆಕಾನಿಕ್‌ಗಳಾಗಿ ಹಲವು ಚಿಕ್ಕಪುಟ್ಟ ಕೆಲಸಗಳಲ್ಲಿ ಕಂಡುಬರುತ್ತಾರೆ. ಇತ್ತೀಚೆಗೆ ಚಿಕನ್ ಅಂಗಡಿಗಳು ಹೆಚ್ಚು ಪ್ರಚಲಿತವಾಗಿರುವುದು ಕಂಡುಬರುತ್ತದೆ.

ಮಾಂಸ ಮಾರುವ ದೊಡ್ಡ ವ್ಯಾಪಾರಿಗಳಲ್ಲಿ ಮಾಂಸ ಕತ್ತರಿಸುವ ಅಂಗಡಿಯ ಕೆಲಸ ಗಳನ್ನು ಮಾಡುವ, ಕುರಿಯ ಅವಯವಗಳನ್ನು ಮಾರುವ ವೃತ್ತಿಯಲ್ಲಿಯೂ ಈ ಸಮುದಾಯದ ಮಧ್ಯಮ, ಬಡವರ್ಗದವರು ದುಡಿಯುವುದು ಕಂಡುಬರುತ್ತದೆ. ಹೀಗೆ ಜೀವನ ನಿರ್ವಹಣೆಗೆ ಸಾಧ್ಯವಾದುದೆಲ್ಲವನ್ನು ಅವರು ಮಾಡುತ್ತಾರೆ. ಖಾಟಿಕ್‌ರ ಸಾಮಾಜಿಕ, ಆರ್ಥಿಕ ಸ್ಥಿತಿಗಳು ಸಮಾಧಾನಕರವಾಗಿಲ್ಲ. ಇದಕ್ಕೆ ಇವರು ತಮ್ಮ ಮೂಲ ಕಸುಬನ್ನು ಪೂರ್ತಿ ಬಿಡಲು ಆಗದೆ ಮುಂದುವರೆಸಲು ಆಗದೆ ಹಲವು ಇತರ ಚಿಕ್ಕಪುಟ್ಟ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವುದನ್ನು ಗಮನಿಸಿದರೆ ಹೊಟ್ಟೆ ಹೊರೆಯುವ ನಿರಂತರ ಹೋರಟದಲ್ಲಿ ರುವುದು ತಿಳಿಯುತ್ತದೆ.

ಜಾಗತೀಕರಣ ಎನ್ನುವುದು ಖಾಟಿಕ್‌ರ ವಿಚಾರದಲ್ಲಿ ಅಂತಹ ಪರಿಣಾಮವನ್ನು ಬೀರಿ ದಂತಿಲ್ಲ. ಇದು ಕೇವಲ ಆರ್ಥಿಕವಾದ ಜಾಗತಿಕ ಮಾರುಕಟ್ಟೆಗೆ ಸಂಬಂಧಿಸಿದ ವಿಷಯವೋ, ಇಂಡಿಯಾದ ಸಾಮಾಜಿಕ ಸಾಂಸ್ಕೃತಿಕ ಒಳಾವರಣಗಳನ್ನು ಪಲ್ಲಟಗೊಳಿಸಬಲ್ಲ ಮಾಯಾ ವಿಯೋ ಎಂಬ ಬಗ್ಗೆ ತಜ್ಞರಲ್ಲಿಯೇ ಗೊಂದಲವಿದ್ದಂತಿದೆ. ಜಾಗತೀಕರಣವನ್ನು ವಿಸ್ಮಯ ದಿಂದ ನೋಡುತ್ತೇವೆಯೇ ಹೊರತು ಸಂಸ್ಕೃತಿಯ

ನಿಜರೂಪಗಳನ್ನು ಅದಕ್ಕೆ ತೆರೆದುಕೊಳ್ಳು ವುದಿಲ್ಲ. ಸಮಾಜದ ಮೇಲುಸ್ತರಗಳೇ ಜಾಗತೀಕರಣದಿಂದ ಪರಿವರ್ತನೆಗೆ ಒಳಗಾಗುತ್ತವೆ. ಭವಿಷ್ಯದ ಆಲೋಚನೆಗಳೇ ಇಲ್ಲದ ಇಂಥ ಹತ್ತಾರು ಸಮುದಾಯಗಳು ತಮ್ಮ ಪರಂಪರಾಗತ ಜೀವನ ವಿಧಾನವನ್ನು ಜಾಗತೀಕರಣದಂತಹ ಯಾವುದೇ ದಾಳಿಗಳಿಂದ ರಕ್ಷಿಸಿಕೊಳ್ಳಬಲ್ಲ ವಾಗಿವೆ.

ಜಾಗತೀಕರಣದಿಂದ ವಿಶ್ವವೇ ಹಳ್ಳಿಯಾಗಿದೆ. ಪ್ರಪಂಚದ ಮೂಲೆ ಮೂಲೆಗಳ ಸುದ್ದಿ ಕ್ಷಣಮಾತ್ರದಲ್ಲಿ ಲಭ್ಯವಾಗುತ್ತದೆ. ಜಗತ್ತಿನ ಯಾವುದೇ ಭಾಗದ ಉತ್ಪನ್ನಗಳು ರಸ್ತೆ ಕಾಣದ ಹಳ್ಳಿಗಳನ್ನು ತಲುಪುತ್ತವೆ. ಅಗತ್ಯವಿರಲಿ, ಇಲ್ಲದಿರಲಿ ಜನರ ಮನೆ ಮನಸ್ಸುಗಳಲ್ಲಿ ಹೊಕ್ಕು ಶೃಂಗಾರದ ವಸ್ತುಗಳು ರಾರಾಜಿಸುತ್ತವೆ. ಜನ ತಮ್ಮ ಭಾಷೆಯಲ್ಲಿ ಅನ್ಯ ಭಾಷೆಯ ಪದಗಳನ್ನು ಸೇರಿಸಿಕೊಳ್ಳಬಹುದು. ಉಡುಗೆ, ತೊಡುಗೆಯಲ್ಲಿ ಆಧುನಿಕರಾಗಬಹುದು. ಇಂಡಿಯಾದ ಸಾಮಾಜಿಕ ರಚನೆಯ ಒಳಭಾಗದಲ್ಲಿ ಹೂತು ಹೋಗಿರುವ ಧಾರ್ಮಿಕವಾದ ಸಂವೇದನೆಗಳು ಮಾತ್ರ ಬದಲಾಗಲಾರವು. ಜಾಗತೀಕರಣ ಭಾರತದ ರೈತರ ಕೃಷಿಗೆ ಅಪಾಯ ಕಾರಿಯಾಗಿರುವ ಹಾಗೇನೂ ಇತರ ಕ್ಷೇತ್ರಗಳಿಗೆ ಹಾನಿಕರವಲ್ಲ ಎಂಬಂತಹ ಅಭಿಪ್ರಾಯ ಗಳಿವೆ. ಆಳುವ ವ್ಯವಸ್ಥೆಯೇ ಅಂತರಾಷ್ಟ್ರೀಯ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಂಡು ದೇಶೀ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಮಾರಾಟವಾಗುವಂತೆ ನೋಡಿಕೊಳ್ಳುತ್ತಿದೆ. ಹೀಗಿರು ವಾಗ ಇಲ್ಲಿನ ನೆಲ ಜಲದಂತಹ ಮೂಲ ಅವಶ್ಯಕತೆಗಳನ್ನು ಮತ್ತು ಸಾಂಸ್ಕೃತಿಕ ಸಂವೇದನೆಗಳ ಮೂಲ ಸ್ವರೂಪವನ್ನು ಸಮಕಾಲೀನ ಪ್ರೇರಣೆಗಳ ಜೊತೆಗೇ ಉಳಿಸಿಕೊಳ್ಳುವ ಬಗ್ಗೆ ಚರ್ಚೆಯಾಗಬೇಕಿದೆ. ಖಾಟಿಕ್ ಬದುಕಿನ ಪರಿವರ್ತನೆಯನ್ನು ಕೂಡ ಈ ನೆಲೆಯಲ್ಲಿಯೇ ಗಮನಿಸಬೇಕಿದೆ.

ಸಾಮಾಜಿಕ ಪರಿವರ್ತನೆಯನ್ನು ಸಾಮಾನ್ಯವಾಗಿ ಸಮಾಜ ಸ್ವೀಕರಿಸುವ ಸಮಕಾಲೀನ ಪ್ರೇರಣೆ ಪ್ರಭಾವಗಳ ನೆಲೆಯಲ್ಲಿ ಗುರುತಿಸಲಾಗುತ್ತದೆ. ಚಲನಶೀಲ ಸಮಾಜದ ಜೀವನ ವಿಧಾನ ಮತ್ತು ಆಲೋಚನಾಕ್ರಮ ರೂಪಗೊಳ್ಳುವುದು ಮತ್ತು ಪರಂಪರಾಗತ ಆಚರಣೆಗಳಲ್ಲಿ ಅನೇಕ ಬಗೆಯ ಒತ್ತಡಗಳಿಂದಾಗಿ ಹಲ ಕೆಲವು ಮಾರ್ಪಾಡುಗಳನ್ನು ತಂದುಕೊಳ್ಳುವುದು ಸಮಕಾಲೀನ ಪ್ರೇರಣೆ ಪ್ರಭಾವಗಳಿಂದ ಸಾಧ್ಯವಾಗುತ್ತದೆ. ಜನಸಂಖ್ಯೆ, ಬದಲಾಗುತ್ತಿರುವ ಸಾಮಾಜಿಕ ಸಂವೇದನೆಗಳು, ಬದುಕಿನ ತೀವ್ರಗತಿ, ರಾಜ್ಯಾವಸ್ಥೆಯಲ್ಲಿ ಕಂಡುಬರುತ್ತಿರುವ ಬದಲಾವಣೆ, ತಂತ್ರಜ್ಞಾನದ ಆಶ್ಚರ್ಯಕರ ಬೆಳವಣಿಗೆ ಮತ್ತು ವ್ಯಾಪ್ತಿ, ಪರಿಸರಪ್ರಜ್ಞೆ, ಧರ್ಮ ಮೂಲವಾದ ಆತಂಕ, ತಳಮಳ, ಸಾಮಾನ್ಯರ ಬದುಕಿನ ಭದ್ರತೆಗಿರುವ ಅಪಾಯಗಳು, ರಾಷ್ಟ್ರದ ಒಳ ಹೊರಗಿನ ಒಟ್ಟಾರೆ ವಿದ್ಯಾಮಾನಗಳು ಹೀಗೆ ಸಮಾಜ ಅನ್ನುವುದು ಹತ್ತು ಹಲವು ದಿಕ್ಕುಗಳ ದೃಷ್ಟಿಗಳ ತಾಕಲಾಟದಲ್ಲಿ ಸಂಕೀರ್ಣಗೊಳ್ಳುತ್ತಿರುವುದು ನಿಜ. ಸಮಾಜದ ಸಂಕೀರ್ಣತೆಗೂ, ಈ ಸಂಕೀರ್ಣತೆಯನ್ನು ಗೋಜಲುಗೊಳಿಸಲು ಬಹುಮಟ್ಟಿಗೆ ಕಾರಣ ವಾಗುವ ಧಾರ್ಮಿಕ, ರಾಜಕೀಯ ಒತ್ತಡಗಳಿಗೂ ಇರಬಹುದಾದ ಸಂಬಂಧ ವಸಾಹತುಶಾಹಿ ಆಡಳಿತ ವ್ಯವಸ್ಥೆಯ ಮೂಲದಲ್ಲಿರುವಂತಿದೆ. ಶತಮಾನಗಳ ಕಾಲ ವಸಾಹತುವಾಗಿಯೇ ಉಳಿದಿದ್ದ ಇಂಡಿಯಾ ಸ್ವಾತಂತ್ರ್ಯದ ನಂತರ ಕೂಡ ಆ ಮೂಲದ ಲಕ್ಷಣಗಳನ್ನು ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ನಿಚ್ಚಳವಾಗಿ ಕಾಪಾಡಿಕೊಂಡು ಬಂದಿದ್ದರ ಪರಿಣಾಮವಾಗಿ ಇಲ್ಲಿನ ಸಂಸ್ಕೃತಿ ಕೂಡ ನವ ವಸಾಹತುಶಾಹಿ ಗುಣಗಳನ್ನು ಇನ್ನೂ ಅರಗಿಸಿಕೊಳ್ಳುವುದರಲ್ಲೇ ಇದೆ. ಹಾಗಾಗಿ ಇಂಡಿಯಾದ ಪ್ರಾಚೀನ ಸಂಸ್ಕೃತಿಯ ನೆಲೆ ಬೆಲೆಯನ್ನು ಸಮಕಾಲೀನ ಸಂದರ್ಭದ ಒಳ ಹೊರ ಒತ್ತಡಗಳ ಹಿನ್ನೆಲೆಯಲ್ಲಿ ಗುರುತಿಸುವಾಗ ವಸಾಹತು ಮೂಲದ ಆಧುನಿಕತೆಯು ಮಾನದಂಡವಾಗುತ್ತಿದೆ. ಬದುಕಿನ ಬಾಹ್ಯರೂಪ ಮತ್ತು ಮನೋಧರ್ಮದ ನಡುವಿನ ಅಂತರದಲ್ಲಿ ಸಾಮಾಜಿಕ ಸಂವೇದನೆಗಳ ಮತ ಧರ್ಮ ನಿರಪೇಕ್ಷ ಗುಣವನ್ನು ಕಾಣಬಹುದಾದ್ದರಿಂದ ಸಂಸ್ಕೃತಿ ಅನ್ನುವುದು ಸಾಮಾಜಿಕ ಪರಿವರ್ತನೆಯ ಸಂದರ್ಭದಲ್ಲಿ ಬೇರೆಯದೇ ಆದ ಆವರಣದಲ್ಲಿ ಅಭಿವ್ಯಕ್ತವಾಗುತ್ತದೆ. ಈ ಮಾತು ಖಾಟಿಕ್‌ರ ಸಂಸ್ಕೃತಿ ಯನ್ನು ಸಾಮಾಜಿಕ ಬದಲಾವಣೆಯ ಹಿನ್ನೆಲೆಯಲ್ಲಿ ಗಮನಿಸುವಾಗಲೂ ನಿಜವೆನಿಸುತ್ತದೆ.

ಖಾಟಿಕ್‌ರ ಸ್ಥಿತ್ಯಂತರ ಪರಿಸ್ಥಿತಿಯನ್ನು ಅಧ್ಯಯನ ಮಾಡುವಾಗ ಅವರ ಆಚರಣೆಗಳನ್ನು ಕುರಿತು ಗಮನಿಸಿದರೆ ಹಿಂದೆ ಇವರ ಮದುವೆಯ ಆಚರಣೆಗಳಾಗಲಿ ಅಥವಾ ಇತರ ಬೇರೆ ಸಮಾರಂಭಗಳಲ್ಲಿ ಕುರಿಬಲಿ ನೀಡುವುದು ಮಾಂಸಾಹಾರವು ಮುಖ್ಯವಾದ ಆಹಾರ ಪದ್ಧತಿ ಯಾಗಿತ್ತು. ಆದರೆ ಇಂದು ಇವರ ಆಚರಣೆಗಳನ್ನು ಗಮನಿಸಿದಾಗ ಮಾಂಸಾಹಾರವು ತುಂಬಾ ಕಡಿಮೆಯಾಗಿದ್ದು ತಮ್ಮ ದೇವರಿಗೆ ನೈವೇದ್ಯ

ಮಾತ್ರ ಮಾಂಸಾಹಾರವನ್ನು ಬಳಸಿ ಉಳಿದಂತೆ ಸಸ್ಯಾಹಾರವನ್ನು ಪ್ರಮುಖವಾಗಿ ಬಳಸಲಾಗುತ್ತದೆ. ಇದಕ್ಕೆ ಒಂದು ಕಾರಣ ಇಂದಿನ ದುಬಾರಿಯಾಗಿರುವ ಖರ್ಚು ವೆಚ್ಚದಲ್ಲಿ ಮಾಂಸಾಹಾರವನ್ನು ಎಲ್ಲರಿಗೂ ಪೂರೈಸುವುದು ಕಷ್ಟ. ಇನ್ನೊಂದು ಈ ಸಮುದಾಯದವರು ಇತರ ಸಮುದಾಯದವರಿಗೆ ತಮ್ಮ ಕೆಲಸ ಕಾರ್ಯಗಳಿಗೆ ಆಹ್ವಾನಿಸುವರು. ಇಂಥ ಸಂದರ್ಭದಲ್ಲಿ ಎಲ್ಲರೂ ಮಾಂಸಾಹಾರ ತಿನ್ನುವವರಿರುವುದಿಲ್ಲ. ಹಾಗಾಗಿ ಸಸ್ಯಾಹಾರ ಶ್ರೇಷ್ಠ ಎಂಬ ಕಲ್ಪನೆಯಿಂದ ಮತ್ತು ಸಸ್ಯಾಹಾರವು ಒಂದು ಸಾಮಾಜಿಕ ಅಂತಸ್ತನ್ನು, ಗೌರವವನ್ನು ತಂದು ಕೊಡುತ್ತದೆ ಎಂಬ ಕಾರಣದಿಂದ ಹೆಚ್ಚಾಗಿ ಸಸ್ಯಾಹಾರವನ್ನು ಬಳಸುತ್ತಿರುವುದನ್ನು ಕಾಣಬಹುದು. ಮದುವೆಯ ಸಂದರ್ಭದಲ್ಲಿ ಹಲವು ಹೊಸ ಆಚರಣೆಗಳು ಬದಲಾವಣೆಗಳಾಗಿರುವುದು ಕಂಡುಬರುತ್ತದೆ. ಹಿಂದೆ ಇಲ್ಲದಂತ ಹೊಸ ಬ್ಯಾಂಡ್ ಸಿಸ್ಟಮ್‌ಗಳು, ಆರ್ಕೆಸ್ಟ್ರಾಗಳು, ವಿವಿಧ ಅಲಂ಼ಾರಗಳನ್ನು ಹೊಂದಿರುವ ಮದುವೆಯ ಚಪ್ಪರಗಳು, ದೀಪಾಲಂಕಾರ ವ್ಯವಸ್ಥೆ ಮದುವೆಯ ಜೋಡಿಗಳಿಗೆ ಕೂಡಿಸಲು ಹೊಸ ಮಾದರಿಯ ಅಲಂಕಾರಿಕ ಕುರ್ಚಿಗಳು, ಮದುಮಗಳಿಗೆ ಹಾಕುವ ಮದರಂಗಿಯ ಅಲಂಕಾರಿಕ ಚಿತ್ತಾರಗಳು, ಅಭರಣಗಳಲ್ಲೂ ನವೀನತೆ, ಬಟ್ಟೆ ಉಡುಗೆ ತೊಡುಗೆಗಳಲ್ಲಿ ಆಧುನಿಕತೆಯ ಛಾಪನ್ನು ಗುರುತಿಸಬಹುದು.

ಅಲಂಕಾರ, ಬ್ಯೂಟಿಪಾರ್ಲರ್‌ಗಳಲ್ಲಿ ಅವರು ಶೃಂಗರಿಸಿಕೊಳ್ಳುವುದು. ಉಡುಗೆ ತೊಡುಗೆ ಗಳನ್ನು ಗಮನಿಸಿದರೆ ಈ ಸಮುದಾಯದ ಯುವತಿಯರು, ಹೆಣ್ಣು ಮಕ್ಕಳು ಆಧುನಿಕ ರೀತಿಯ ಉಡುಪುಗಳಾದ ಚೂಡಿದಾರ, ಪ್ಯಾಂಟು, ಶರ್ಟ್, ನೈಟಿ, ಮಿಡಿಗಳು ಆಧುನಿಕ ರೀತಿಯ ಸೀರೆ ಡಿಸೈನುಗಳನ್ನು ಬಳಸಿದರೆ, ಯುವಕರು ಶರ್ಟ್, ಪ್ಯಾಂಟ್, ಬನಿಯನ್‌ಗಳು, ಟೀ ಶರ್ಟ್‌ಗಳು, ಬರ್ಮೋಡಾ, ಹಾಫ್ ಪ್ಯಾಂಟ್ ಹೀಗೆ ಸಿನಿಮಾ ಶೈಲಿಯ ಉಡುಪುಗಳನ್ನು ಸಹ ತೊಡುವುದನ್ನು ಕಾಣಬಹುದು. ಮನೆಯ ರಚನೆಗಳಲ್ಲೂ ಹೊಸ ಮಾದರಿಗಳನ್ನು ಅಳವಡಿಸಿಕೊಳ್ಳುತ್ತಿರುವುದನ್ನು ಗಮನಿಸಬಹುದು. ಮನೆಯ ಒಳಗಡೆ ಪಡಸಾಲೆಯಲ್ಲಿ ಸೋಫಾ, ಕುರ್ಚಿಗಳು, ನಡುಮನೆಯಲ್ಲಿ ಅಲಂಕಾರಿಕ ವಸ್ತುಗಳು, ಷೋಕೇಶ್‌ಗಳು, ಟಿ.ವಿ. ಇಂತಹ ವಸ್ತುಗಳಿಂದ ಬದಲಾಗಿರುವುದು ಹಾಗೆಯೇ ಮನೆಯ ಪೂಜಾ ವಿಧಾನಗಳಲ್ಲೂ, ದೇವರುಗಳ ವಿಷಯದಲ್ಲೂ ಸಾಕಷ್ಟು ಬದಲಾವಣೆಗಳು ಕಂಡುಬಂದಿರುವುದನ್ನು ಕಾಣ ಬಹುದು. ಉದಾಹರಣೆಗೆ ಅಭಿಷೇಕ ಮಾಡಿಸುವುದು, ಕುಂಕುಮಾರ್ಚನೆ, ಸಾಕಷ್ಟು ಹೊಸ ದೇವರುಗಳು ಇತ್ತೀಚೆಗೆ ಪೂಜೆಗೊಳ್ಳುತ್ತಿರುವುದು ಕಂಡುಬರುತ್ತಿದೆ. ಇದೆಲ್ಲಾ ಸಂಸ್ಕೃತೀ ಕರಣದ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಗಮನ ಸೆಳೆಯುತ್ತವೆ. ಹೊಸ ದೇವಾನು ದೇವತೆಗಳು ಈ ಸಮುದಾಯದಲ್ಲಿ ಪೂಜೆಗೊಳ್ಳುತ್ತಿರುವುದನ್ನು ಕಾಣಬಹುದು. ಹೀಗೆ ಒಟ್ಟಾಗಿ ಈ ಸಮುದಾಯವು ನಿಧಾನವಾಗಿ ಬದಲಾಗುತ್ತಿರುವ ಸಂದರ್ಭಕ್ಕೆ ತನ್ನನ್ನು ತಾನು ಒಗ್ಗಿಸಿಕೊಳ್ಳು ವತ್ತ ಪ್ರಯತ್ನಿಸುತ್ತಿರುವುದು ಕಂಡುಬರುತ್ತಿದೆ.

ಹಿಂದಿನಿಂದಲೂ ಈ ಸಮುದಾಯದಲ್ಲಿ ದೈವ ಪಂಚಾಯಿತಿ (ಜಮಾತ್)ಯು ನ್ಯಾಯ ತೀರ್ಮಾನ ಮಾಡುತ್ತ ಸಮುದಾಯದ ಸದಸ್ಯರಲ್ಲಿ ಒಡಕುಗಳು, ವ್ಯಾಜ್ಯಗಳು ಕಂಡುಬಂದರೆ ಅದನ್ನು ಬಗೆಹರಿಸುವಲ್ಲಿ ಪ್ರಮುಖ ಕಾರ್ಯ ನಿರ್ವಹಿಸುತ್ತಿತ್ತು. ಆದರೆ ಇಂದು ದೈವ ಪಂಚಾಯಿತಿಯ ಮಾತನ್ನು ಕೆಲವರು ಒಪ್ಪಿದರೆ ಮತ್ತೆ ಕೆಲವರು ಸರ್ಕಾರದ ಕಾನೂನುಗಳಾದ ಪೋಲೀಸ್, ಕೋರ್ಟ್ ಕಛೇರಿಗಳ ಮೆಟ್ಟಿಲು ಹತ್ತುವುದು ಕಂಡುಬರುತ್ತದೆ. ಈ ರೀತಿ ನ್ಯಾಯ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಿರುವುದು ಕಂಡುಬರುತ್ತದೆ.

ಯುವ ಸಮೂಹವು ಕೆಟ್ಟ ವ್ಯಸನಗಳಿಗೆ ಮಾರು ಹೋಗುತ್ತಿರುವುದು ಕಂಡುಬರುತ್ತದೆ. ಉದಾಹರಣೆಗೆ ಗುಟುಕಾ, ಸಿಗರೇಟು, ಕುಡಿತ, ಜೂಜು ಹೀಗೆ ಆಧುನೀಕತೆಯ ಯುವ ಪೀಳಿಗೆಯು ಇದನ್ನು ಫ್ಯಾಷನ್ ಎನ್ನುವಂತೆ ಯುವ ಜನತೆ ಈ ಚಟಗಳಿಗೆ ದಾಸರಾಗಿ ಮಾರು ಹೋಗುವುದು ಸಾಮಾನ್ಯ ಎನಿಸಿಬಿಟ್ಟಿದೆ. ಹಾಗೆಯೇ ಇಂದು ಹಲವು ಸಾಂಪ್ರದಾಯಿಕ ಆಚರಣೆಗಳ ಜೊತೆಗೆ ಹುಟ್ಟುಹಬ್ಬವನ್ನು ನವೀನ ರೀತಿಯಲ್ಲಿ ಆಚರಿಸಿಕೊಳ್ಳುವುದು, ವ್ಯಾಲೇಂಟೈನ್ಸ್ ಡೇ, ಫ್ರೆಂಡ್ಸ್ ಡೇ, ರೋಸ್ ಡೇ, ಬ್ಯಾಂಗಲ್ಸ್ ಡೇ, ಮದರ್ಸ್‌ಡೇ, ಫಾದರ್ಸ್‌ಡೇ ಹೀಗೆ ಹತ್ತು ಹಲವು ಹೊಸ ಸಂಪ್ರದಾಯಗಳು ಖಾಟಿಕ್ ಯುವ ಜನತೆಯಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

ಖಾಟಿಕ್‌ರು ಇತರ ಸಮುದಾಯದವರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿ ದ್ದಾರೆ. ಮುಖ್ಯವಾಗಿ ಮುಸ್ಲಿಂರೊಂದಿಗೆ, ಈಡಿಗರೊಂದಿಗೆ ಇವರ ನಂಟು ಹೆಚ್ಚು ಎಂದು ಹೇಳಬಹುದು. ಮುಸ್ಲಿಂರು ಖಾಯಂ ಗ್ರಾಹಕರಾಗಿ ಮಾಂಸ ಖರೀದಿಸುವ ಹಾಗೂ ಹಿಂದಿ

ಭಾಷೆಯನ್ನು ಬಲ್ಲವರಾಗಿರುವುದರಿಂದ ಇವರೊಂದಿಗೆ ಒಳ್ಳೆಯ ಬಾಂಧ್ಯವ್ಯವಿದೆ. ಹಾಗೆಯೇ ಮಧ್ಯ ಮಾರಾಟ ಇವರ ಎರಡನೆಯ ಪ್ರಮುಖ ವೃತ್ತಿ ಎಂದು ಗುರುತಿಸುವುದಾದರೆ ಈಡಿಗರೊಂದಿಗೆ ಮಧ್ಯ ಮಾರುವಿಕೆ ಹಾಗೂ ಮಧ್ಯ ಮಾರುವ ಈಡಿಗರ ಅಂಗಡಿಗಳಲ್ಲಿ ಖಾಟಿಕ್‌ರು ಚಾಕಣಾ ಮಾರುವ ಪ್ರಮುಖ ವೃತ್ತಿಯಲ್ಲಿ ತೊಡಗಿಕೊಂಡಿರುವುದು ಖಾಟಿಕ್ ಮತ್ತು ಈಡಿಗರಲ್ಲಿ ಅಣ್ಣ ತಮ್ಮಂದಿರ ನಂಟಿದೆ ಎಂದು ಹೇಳಬಹುದು. ಮಧ್ಯ ಕುಡಿದ ನಂತರ ಅಲ್ಲಿಯೇ ರೊಟ್ಟಿ, ಅನ್ನ, ಚಾಕಣಾ, ಮಾಂಸದ ಸಾರು ಕುಡಿದ ಜನರು ಕೊಂಡು ತಿನ್ನುವುದರಿಂದ ಮಧ್ಯಕ್ಕೆ ಮಾಂಸವು ಪೂರಕವಾಗಿರುವುದರಿಂದ ಈ ವ್ಯಾಪಾರವು ನಡೆಯು ತ್ತದೆ. ಹೀಗೆ ಕೆಲವೊಮ್ಮೆ ಈಡಿಗರು ಖಾಟಿಕ್‌ರಿಗೆ ತಮ್ಮ ಮದ್ಯದಂಗಡಿಗಳನ್ನು ಸಹ ನೋಡಿಕೊಳ್ಳುವಂತೆ ಹೇಳುತ್ತಿದ್ದರು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬರುತ್ತದೆ. ಹೀಗೆಯೇ ಕುರಿ ವ್ಯಾಪಾರದಲ್ಲಿ ಇವರಿಗೆ ಹತ್ತಿರವಾಗಿರುವ ಸಮುದಾಯವೆಂದರೆ ಕುರುಬರು ಎಂದು ಹೇಳಬಹುದು. ಹಾಗಾಗಿ ಇವರು ಕುರುಬರು ಮತ್ತು ಖಾಟಿಕ್‌ರ ಸಂಬಂಧಗಳು ಉತ್ತಮಾಗಿವೆ. ಇವರು ತಮ್ಮ ಮನೆಯ ಕೆಲಸ, ಶುಭ ಕಾರ್ಯಗಳಿಗೆ ಕುರುಬರನ್ನು ಈಡಿಗರನ್ನು ಮುಸ್ಲಿಂರನ್ನು ಅಮಂತ್ರಿಸುತ್ತಾರೆ. ಅವರ ಮನೆಗಳಿಗೂ ಹೋಗಿ ಬರುತ್ತಾರೆ.

* * *

**ಹಲಗಲಿ ಬೇಡರು**

**೫ನೇ ನುಡಿ**

ಹತಾರ ಕೊಡಲಿಕೆ ಹೆಂಗಸ್‌ಆಗಿ ಬಳಿಯ್‌ಇಟ್ಟಿಲ ಕೈಯಾಗ
ಯಾವ ಬಂದೀರಿ ಜೀವಹೋದರು ಕೊಡುದಿಲ್ಲ ಸುಮ್ಮನ್‌ಹೋಗರಿ ಈಗ

ಅಂದ ಮಾತ ಯೆಲ್ಲ ಬಂದ ಹೇಳಿದಾನ ಆವಾಗ ಸಾಹೆಬಗ
ಶಿಟ್ಟಿಲಿ ಮುಂಗೈ ಕಟ್ಟನೆ ಕಡಕೊಂಡ ಹುಕುಮ ಕೊಟ್ಟರ್‌ಆಗ

ಕುದರಿಯಮಂದಿ ಕೂಡಿ ಮುಟ್ಟಿತೊ ಹಲಗಲಿಸ್ಥಳದ ಮೇಗ
ವೊಳಗಿನ ಮಂದಿ ವೊಟ್ಟರಲೆ ಹೊಡದರ ಮುಂಗಾರಿ ಮಳಿ ಸುರದ್‌ಅಂಗ

ಹೊರಗಿನ ಮಂದಿ ಗುಂಡ ಹತ್ತಿಕೆರ ತಿರಿಗೆರ ಆವಾಗ
ಕಾಗದ ಬರದ ಕಳವೆರ ಬೇಗನ ದಂಡ ಬರಲ್‌ಎಂತ ಹೀಂಗ

## ೧೯. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಜಾಗತೀಕರಣ ಎನ್ನುವುದು ಮನುಷ್ಯನ ಸಾಮಾಜಿಕ ಜೀವನದ ವಿಸ್ತೃತ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಹೆಣೆದುಕೊಂಡಿರುವ ಒಂದು ಸಂಕೀರ್ಣ ಪ್ರಕ್ರಿಯೆ. ಜಾಗತೀಕರಣವೆಂದರೆ ಮನುಷ್ಯ ಸಮಾಜದಲ್ಲಿ ಉತ್ಪಾದಿತವಾಗುವ ಜ್ಞಾನ ಹಾಗೂ ವಿಚಾರಗಳು ಅಡೆತಡೆ ಇಲ್ಲದೆ ಪ್ರಪಂಚದಾದ್ಯಂತ ಪ್ರಸಾರವಾಗಿ ಆಯಾ ದೇಶಗಳ ಜನರು ಅವುಗಳನ್ನು ಪಳಗಿಸಿ, ಅರಗಿಸಿ ಕೊಂಡು ತಮ್ಮ ಬದುಕಿಗೆ ಒಳಿತಾಗುವ ರೀತಿಯಲ್ಲಿ ದುಡಿಸಿಕೊಳ್ಳುವ ಪ್ರಕ್ರಿಯೆ. ಯಾವ ಜ್ಞಾನವನ್ನು ಸ್ವೀಕರಿಸಿ, ಆರೋಗ್ಯಕರವಾಗಿ ಅದನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳ ಬೇಕು. ಯಾವುದನ್ನು ತಮಗೆ ಒಗ್ಗುವಂತಹುದಲ್ಲ ಎಂದು ನಿರಾಕರಿಸಬೇಕು ಎಂದು ನಿರ್ಧರಿ ಸುವ ಪ್ರಜ್ಞಾಶಕ್ತಿ ಸಾಮಾನ್ಯ ಜನರಿಗೆ ಇದೆ.

ಇಂತಹ ಆಯ್ಕೆಯ ಸ್ವಾತಂತ್ರ್ಯವನ್ನು ಜನರಿಂದ ಕಿತ್ತುಕೊಳ್ಳುವ ಹಕ್ಕು ಯಾರಿಗೂ ಇರಕೂಡದು. ಆದರೆ ಇಂತಹ ಪ್ರಕ್ರಿಯೆಯಿಂದ ತಮ್ಮ ಯಜಮಾನಿಕೆಗೆ ಸಂಚಕಾರ ಬರುತ್ತದೆ ಎಂದು ಅಧಿಕಾರಸ್ಥ ಜನ ಜಾಗತೀಕರಣವನ್ನು ಏನಾದರೂ ಮಾಡಿ ತಡೆಯುವ ಪ್ರಯತ್ನ ಮಾಡುತ್ತಾರೆ. ಇದುವರೆಗೂ ರಾಷ್ಟ್ರಗಳ ಗಡಿಗಳ ಒಳಗೆ ನಡೆಯುವ ಆರ್ಥಿಕ ಉತ್ಪಾದನೆ ಹಾಗೂ ವಿತರಣೆಗಳನ್ನು ಆಯಾ ರಾಷ್ಟ್ರಪ್ರಭುತ್ವಗಳು ತಮ್ಮ ಬಿಗಿ ಹಿಡಿತದಲ್ಲಿ ಇಟ್ಟುಕೊಂಡಿದ್ದವು. ರಾಷ್ಟ್ರಪ್ರಭುತ್ವದ ಮೇಲೆ ನಿಯಂತ್ರಣ ಹೊಂದಿರುವ ಅಧಿಕಾರಸ್ಥ ವರ್ಗಗಳು ತಮಗೆ ಮಾತ್ರ ಲಾಭದಾಯಕವಾಗುವ ರೀತಿಯಲ್ಲಿ ಈ ವ್ಯವಸ್ಥೆಯನ್ನು ಪೋಷಿಸಿದ್ದರಿಂದ ಒಂದು ಕಡೆ ಬಹುಪಾಲು ಜನ ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಅದುಮಿಟ್ಟುಕೊಂಡು ಸದರಿ ಅಧಿಕಾರಶಾಹಿ ವ್ಯವಸ್ಥೆಯ ಕರುಣೆಯಲ್ಲಿ ಬದುಕು ಸಾಗಿಸುವಂತಾಯಿತು ಮತ್ತೊಂದು ಕಡೆ ಜನರ ಉತ್ಪಾದನಾ ಚೈತನ್ಯ ಉಪಯೋಗಕ್ಕೆ ಬಾರದೆ ಜಡಗೊಂಡು, ಇಡೀ ಉತ್ಪಾದನಾ ವ್ಯವಸ್ಥೆಯೇ, ಸಂಪನ್ಮೂಲಗಳನ್ನು ಅನಾವಶ್ಯಕ ವಾಗಿ ಪೋಲು ಮಾಡುವ ಹೊಸದಾದ ಸಮರ್ಥ ಉತ್ಪಾದನಾ ತಂತ್ರಗಳನ್ನು ಕಂಡುಕೊಂಡು ಬೆಳೆಸಲಾಗದೆ, ತನ್ನ ರಕ್ತವನ್ನು ತಾನೇ ಹೀರಿಕೊಳ್ಳುವ ಅಪಾಯಕಾರಿ ವ್ಯವಸ್ಥೆಯಾಗಿ ರೂಪಾಂತರ ಹೊಂದತೊಡಗಿತು. ಇಂತಹ ವ್ಯವಸ್ಥೆಯಲ್ಲಿ ಅನಕ್ಷರತೆ, ಬಡತನ, ನಿರುದ್ಯೋಗಗಳು ದೈತ್ಯಾಕಾರದಲ್ಲಿ ಬೆಳೆದು ಬಿಡುತ್ತವೆ. ಭಾರತವು ಇಂತಹ ದರಿದ್ರ ದೇಶಗಳಲ್ಲಿ ಒಂದಾಗಿದ್ದು ಈ ಸ್ಥಿತಿಯಿಂದ ಹೊರಬರಬೇಕೆಂದರೆ ತುರ್ತಾಗಿ ಅಧಿಕಾರಶಾಹಿ ರಾಷ್ಟ್ರ ಪ್ರಭುತ್ವದ ಹಿಡಿತದಿಂದ ಆರ್ಥಿಕ ಉತ್ಪಾದನೆ ಹಾಗೂ ವಿತರಣೆಯನ್ನು ಮುಕ್ತಗೊಳಿಸಿ ದೇಶದ ಜನ ಅನಿರ್ಬಂಧಿತರಾಗಿ ಚೈತನ ಶಾಲಿಯಾದ ಉತ್ಪಾದನಾ ವ್ಯವಸ್ಥೆಯನ್ನು ರೂಪಿಸಿ ಕೊಳ್ಳುವುದಕ್ಕೆ ಪ್ರೇರೇಪಿಸುವ ಕ್ರಮಗಳನ್ನು ಜಾರಿ ಮಾಡಬೇಕು. ನಮ್ಮ ದೇಶಕ್ಕೆ ಸದ್ಯಕ್ಕಂತೂ ಸ್ಪಷ್ಟ ಮಾರ್ಗಗಳಾವುವು ಇರದೇ ಇರುವುದರಿಂದ ಒಂದಿಷ್ಟು ಎಚ್ಚರಿಕೆಯಿಂದ ಇವನ್ನು ಅನುಸರಿಸದೇ ಬೇರೆ ಮಾರ್ಗವೇ ಇಲ್ಲ.

ಜಾಗತೀಕರಣ ಎಂದರೆ ಇದುವರೆಗೆ ಪ್ರಪಂಚದ ಇತರ ದೇಶಗಳ ಜೊತೆ ಯಾವ ರೀತಿಯ ವ್ಯಾಪಾರ ವಹಿವಾಟು ಸಂಬಂಧ ಇಟ್ಟುಕೊಳ್ಳುವ ರಾಷ್ಟ್ರೀಯ ಪ್ರಭುತ್ವಗಳು ಈಗ ಅಂತಹ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದು ಎಂದೇನೂ ಅಲ್ಲ. ಶ್ರೀಮಂತ ಕೈಗಾರಿಕಾ ರಾಷ್ಟ್ರಗಳು ಮತ್ತು ವರ್ಲ್ಡ್ ಬ್ಯಾಂಕ್, ಐ.ಎನ್.ಐ. ನಂತಹ ಸಂಸ್ಥೆಗಳು ಬೋಧಿಸುತ್ತಿರುವ ಅರ್ಥನೀತಿಗಳನ್ನು ರಾಷ್ಟ್ರೀಯ ಪ್ರಭುತ್ವಗಳು ಅಳವಡಿಸಿಕೊಳ್ಳಬೇಕು ಎನ್ನುವುದಾಗಿದೆ.

ಕೆನಡಾದ ಖ್ಯಾತ ಅರ್ಥಶಾಸ್ತ್ರಜ್ಞ ಜೆರೋಂ ಪೊಲಿರ್‌ನ ವಿವರ The poor Complain, they always do But that is idle Chatter our system brings records to all atleast to all teat matters ಹೇಗೆ ಹೇಳಿದ್ದಾರೆ. ಇಲ್ಲೇ ಇನ್ನೊಂದು ಮಾತು. ಆಧುನೀಕತೆಗೂ ಜಾಗತೀಕರಣಕ್ಕೂ ಇರುವ ವ್ಯತ್ಯಾಸ ಆಧುನೀಕತೆಯ ವಿನ್ಯಾಸ ಮತ್ತು ಹರಿವು ವಿಸ್ತಾರವಾದುದು. ದಮನಕಾರಿ ಇರುವಂಥದ್ದು ಎಲ್ಲಕ್ಕಿಂತ ಹೆಚ್ಚಾಗಿ ವಿಮೋಚನೆಯ ಹೆಸರಿನಲ್ಲೇ ಹೊಸ ಸೂಕ್ಷ್ಮರೀತಿಯ ದಬ್ಬಾಳಿಕೆಯನ್ನು ಅನ್ಯಾಯಗಳನ್ನು ಹುಟ್ಟುಹಾಕಬಲ್ಲ ವಿಪರ್ಯಾಸವನ್ನು ತನ್ನ ಗರ್ಭದಲ್ಲೇ ಹೊತ್ತಿರುವಂಥದ್ದು. ಆದರೆ ಜಾಗತೀಕರಣದ ವಿಷಯದಲ್ಲಿ ವಿಮೋಚನೆಯ ಸಾಧ್ಯತೆ ಕ್ಷೀಣ, ದಬ್ಬಾಳಿಕೆಯ ಅಪಾಯಗಳೇ ಹೆಚ್ಚು.

ಒಟ್ಟಿನಲ್ಲಿ ಜಾಗತೀಕರಣವು ರಾಷ್ಟಪ್ರಭುತ್ವದ ಗೆರೆ ಗಡಿಗಳು ಮಾಯವಾಗುವ ಹಂತವನ್ನು ಸೃಷ್ಟಿಸಿವೆ ಎಂಬುದೇ ಈ ವಾದದ ತಿರುಳು.

ವೈಜ್ಞಾನಿಕ ಯುಗದಲ್ಲಿ ಮನುಷ್ಯನ ಮನೋಭಾವದಲ್ಲೇ ಆದ ಮೂಲಭೂತ ಬದಲಾವಣೆ, ಇದು ಆತನನ್ನು ವರ್ತಮಾನದಲ್ಲಿ ಬದುಕುವ ಮನುಷ್ಯನ ಸಾಮಾನ್ಯ ನೆಲೆ ಯಿಂದ ಕೇವಲ ಭವಿಷ್ಯದ ಭದ್ರತೆಗಾಗಿ ಹಪಹಪಿಸುವ ಕೊಳ್ಳುಬಾಕ ಆರ್ಥಿಕ ಮನುಷ್ಯ ನನ್ನಾಗಿ ಪರಿವರ್ತಿಸಿದ್ದು, ಇದು ಹುಟ್ಟು ಹಾಕಿದ ದುರಾಸೆ. ಈ ಮಾದರಿಯ ಅನಿರ್ಬಂಧಿತ ಅಭಿವೃದ್ಧಿಮೀಮಾಂಸೆ ಇವೆಲ್ಲವೂ ಮನುಷ್ಯನನ್ನು ಅತ್ಯಂತ ಕ್ರೌರ್ಯ ತುಂಬಿದ ಜೀವ ವಿರೋಧಿ ನೆಲೆಗಳಿಗೆ ಕೊಂಡೊಯ್ದಿಲ್ಲ. ಹಿಂಸೆಯನ್ನು ಶಾಸ್ವತೀಕರಿಸಿ ನ್ಯಾಯ ಸಮ್ಮತ ಗೊಳಿಸಿಬಿಟ್ಟಿದೆ. ಅಭಿವೃದ್ಧಿ ಹೆಸರಿನಲ್ಲಿ ಇಂದು ನಡೆಯುತ್ತಿರುವ ಪೈಪೋಟಿ ಪ್ರೇರಿತ ಅಕ್ರಮಣಕಾರಿ ಹಿಂಸೆ ತನ್ನದೇ ಆದ ಅಭಿವೃದ್ದಿ ವ್ಯಾಖ್ಯೆಯನ್ನು ಸೃಷ್ಟಿಸಿಕೊಂಡಿದ್ದು ಅದನ್ನು ಅನಿವಾರ್ಯವೆಂಬಂತೆ ತರ್ಕಬದ್ಧವಾಗಿಯೂ ವೈಜ್ಞಾನಿಕವಾಗಿಯೂ ಭಾವರಹಿತವಾಗಿಯೂ ಮುಂದಿಡುತ್ತದೆ. ಇದರ ಫಲವೇ

ದುರ್ಬಲ ಬಹುಜನರ ನಿರಂತರ ಬಲಿ ಕೋಮುವಾದದ ಬಲಿ ಬಲಿದಾನಗಳ ರೂಪಕ್ಕಿಂತಲೂ ಭೀಕರ ಸ್ವರೂಪವನ್ನು ಇದು ಹಲವೊಮ್ಮೆ ಪಡೆಯು ತ್ತದೆ. ಇಲ್ಲಿ ಬಲಿ ಹಾಕುವವರು ಯಾರು, ಬಲಿಯಾಗುವವರು ಯಾರು ಎಂದೇ ತಿಳಿಯದಷ್ಟು ಸೂಕ್ಷ್ಮವಾಗಿ ದೂರದಲ್ಲೆಲ್ಲೋ ಅಗೋಚರ ಶಕ್ತಿಗಳಿಂದ, ಮಂತ್ರಿ ಮಂಡಲಗಳಲ್ಲೋ, ಬಹುರಾಷ್ಟ್ರೀಯ ಕಂಪನಿಗಳ 'ಬೋರ್ಡು ರೋಮ್'ಗಳಲ್ಲೋ ಬಲಿಯ ನಿರ್ಧಾರಗಳಾಗುತ್ತಿ ರುತ್ತವೆ.

ಈ ದೇಶದ ಜಾತಿವ್ಯವಸ್ಥೆ, ದಲಿತರ, ಮಹಿಳೆಯರ ಶೋಷಣೆ, ಗಿರಿಜನರ ಒಕ್ಕಲೆಬ್ಬಿ ಸುವಿಕೆ ಮುಂತಾದ ಪ್ರಶ್ನೆಗಳಿಗೆ ಜಾಗತೀಕರಣ ಪರಿಹಾರವಾಗಬಲ್ಲದೆ, ಎಂಬುದನ್ನೊಮ್ಮೆ ಅವಲೋಕಿಸಿದರೆ ಚಿತ್ರಣ ಇನ್ನಷ್ಟು ಮಸುಕುಗೊಳ್ಳುವುದನ್ನು ನಾವು ನೋಡಬಹುದು. ಸಮಾಜದ ಅಂಚಿನಲ್ಲಿ ವಾಸಿಸುತ್ತಿರುವವರ ಬಿಡುಗಡೆಯ ದಾರಿಯಾಗುವ ಬದಲು ಜಾಗತೀ ಕರಣ ಶ್ರೇಣೀಕೃತ ಸಮಾಜ ವ್ಯವವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಸಾಮಾಜಿಕ ಬದುಕಿನ ಸಮಾನತೆಯ ಸತ್ವವನ್ನೇ ಕುಗ್ಗಿಸಿ, ಶಿದಿಲಗೊಳಿಸಿ ಕೊನೆಯ ಪಕ್ಷ ದುರ್ಬಲರು ಗೌರವದಿಂದ ಬದುಕುವ ಅವಕಾಶವನ್ನು ವಂಚಿಸುತ್ತಿದೆ. ಮೀಸಲಾತಿಯ ಸಾಮಾಜಿಕ ನ್ಯಾಯದ ಆಶಯವನ್ನು ಖಾಸಗೀಕರಣ ದಕ್ಷತೆ ಲಾಭಗಳ ಹೆಸರಲ್ಲಿ ಸಂಪೂರ್ಣ ಪರಿಣಾಮ ಶೂನ್ಯ ಮಾಡಲಾಗುತ್ತಿದೆ.

ಇನ್ನು ದಲಿತರ ಕೆಳಪಯಣ ಈ ಜಾಗತೀಕ ಆರ್ಥಿಕ ಸಂದರ್ಭದಲ್ಲಿ ಇನ್ನೂ ಭೀಕರ ವಾದದು. ಅವರು ಈ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಅಂಚಿಗೆ ತಳ್ಳಲಲ್ಪಡುತ್ತಿದ್ದಾರೆ. ಜಾಗತೀಕರಣವು ದಲಿತರ ಉದ್ಯೋಗವಕಾಶ ಹೆಚ್ಚಿಸುತ್ತವೆ ಎಂದು ನಂಬಿಸಲಾಗುತ್ತಿದೆ. ಆದರೆ ತಳಮಟ್ಟದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಈ ಮಾತಿನ ಪೊಳ್ಳುತನ ಬಯಲಾಗ ದಿರದು. ಉದಾ. ಒಂದೆಡೆ ಸುಲಭ ಶೌಚಾಲಯ, ರ್ಯಾಗ್ ಪಿಕಿಂಗ್ ಮುಂತಾದ ಹೊಸ ಕ್ಷೇತ್ರಗಳಲ್ಲಿ ಅವಕಾಶ ಹೆಚ್ಚುತ್ತಿವೆ ಎನ್ನಲಾಗುತ್ತಿದೆ. ಹೆಚ್ಚುತ್ತಿರುವ ಸುಲಭ ಶೌಚಾಲಯ ಗಳಲ್ಲಿ ಜಾತಿ ವ್ಯವಸ್ಥೆ ಭದ್ರಗೊಳ್ಳುತ್ತಿರುವುದನ್ನು ನಾವು ಇನ್ನೊಂದೆಡೆ ಗಮನಿಸಬಹುದು. ಸುಲಭ ಶೌಚಾಲಯವನ್ನು ಮೇಲ್ವರ್ಗ ಗುತ್ತಿಗೆ ತೆಗೆದುಕೊಂಡರೆ ಹಿಂದುಳಿದ ವರ್ಗ ಅದರ ಆಡಳಿತ ನಡೆಸುತ್ತಿದೆ. ಅವನ್ನು ಸ್ವಚ್ಚಗೊಳಿಸುವ ತೋಟಿ ಕೆಲಸವನ್ನು ಇಂದು ಅಂತ್ಯಜರೆನಿಸಿಕೊಂಡವರೇ ಮಾಡುತ್ತಿದ್ದಾರೆ.

ಹೀಗೆ ಒಂದು ಕಡೆ ಮನುಷ್ಯ ತನ್ನ ಜಾತಿವ್ಯವಸ್ಥೆಯು ಇಂದು ತುಂಬಾ ಸಡಿಲವಾಗಿದೆ ಎಂದು ಅಂದುಕೊಳ್ಳುವುದರಲ್ಲಿ ಅದು ತನ್ನ ಪ್ರತಿಬಿಂಬಿವನ್ನು ಕರಿನೆರಳನ್ನು ಬೇರೆ ರೂಪದಲ್ಲಿ ಚಾಚಿಯೇ ಇವೆ. ಉದಾ. ಆಲಮಟ್ಟಿ, ಟಿ.ಬಿ.ಡ್ಯಾಂನ ಕಟ್ಟಡ ಕಾಮಗಾರಿಯಿಂದ ನಾವೆಲ್ಲಾ ಅಂದುಕೊಂಡಿದ್ದು ಇದು ನಮ್ಮ ದೇಶದ ಏಳಿಗೆಯ ಸಂಕೇತವೆಂದು. ಆದರೆ ಅದನ್ನು ಒಮ್ಮೆ ಬಿಚ್ಚಿ ಅದರಲ್ಲಿ ಇಣುಕಿ ನೋಡಿದಾಗ ಕೆಂಡ ಮುಚ್ಚಿದ ಬೂದಿಯಂತೆ ಹಲವಾರು ಸಮಸ್ಯೆಯನ್ನು ಉದ್ಘಾಟಿಸಿದೆ. ಹೇಗೆಂದರೆ ಮೊದಲು ಆ ಪ್ರದೇಶವು ಒಂದು ವ್ಯವಸಾಯದ ಪ್ರದೇಶವಾಗಿದ್ದು ಹಲವರಿಗೆ ಜೀವನದ ಆಧಾರವಾಗಿತ್ತು. ಆದರೆ ಆ ಪ್ರದೇಶದ ಆಕ್ರಮಣ ದಿಂದ ಡ್ಯಾಂ ಆಯಿತು. ಸರ್ಕಾರವೇನು ವಸತಿ, ಆಹಾರ, ಎಲ್ಲಾ ಸೌಕರ್ಯ ನೀಡುತ್ತೇವೆ ಎಂದು ಹೇಳಿತು. ಆದರೆ ಒಬ್ಬ ಮನುಷ್ಯನ ಸರ್ಕಾರವಲ್ಲ. ಸ್ವತಃ ತಂದೆ ತಾಯಿಯೇ ಎಷ್ಟು ದಿನ ತಾನೇ ನೋಡಿಕೊಳ್ಳುತ್ತಾರೆ?

ಹೀಗೆ ನಮ್ಮ ದೇಶದಲ್ಲಿ ಒಂದು ಕಡೆ ಈ ಜಾಗತೀಕರಣದಿಂದ ಆಗುತ್ತಿರುವ ಲಾಭ ಹಾಗೂ ಎಲ್ಲಾ ಅಂಶಗಳು ನಮಗೆ ಕಂಡುಬರುತ್ತವೆ.

ಇನ್ನೊಂದು ದುರಂತವೆಂದರೆ ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಹೊಂದಿರುವ ಭಾರತಕ್ಕೆ ಅರ್ಧ ಗುಡಿ ಕೈಗಾರಿಕೆಯಿಂದಲೇ ಆದಾಯ ಬರುತ್ತಿತ್ತು. ಆದರೆ ಜಾಗತೀಕರಣ, ಆಧುನೀ ಕರಣದ ಪ್ರಭಾವದಿಂದಾಗಿ ಅದು ಸಹ ತುಂಬಾ ಶೋಚನೀಯ ಸ್ಥಿತಿಯಲ್ಲಿದೆ. ಹಿಂದೆ ಹಲವಾರು ಗುಡಿ ಕೈಗಾರಿಕೆಗಳಾದ ಕುಂಬಾರಿಕೆ, ಬಡಿಗ, ಅಕ್ಕಸಾಲಿಗ, ಚಾಪೆ ಹೆಣೆಯುವುದು, ಬಟ್ಟೆ ನೇಯುವುದು ಇವು ಜಾಗತೀಕರಣದಿಂದಾಗಿ ತಮ್ಮ ನೆಲೆಯ ಹೆಸರನ್ನು ಉಳಿಸಿಕೊಳ್ಳ ಲಾರದೇ ಅಧೋಗತಿಯನ್ನು ಹೊಂದಿ ಪಾತಾಳ ಸೇರಿವೆ. ಹಿಂದೆ ಈ ಗುಡಿ ಕೈಗಾರಿಕೆಯಿಂದ ಹಲವಾರು ಕುಟುಂಬಗಳಿಗೆ ಉದ್ಯೋಗ ಸಿಕ್ಕು, ಜನರು ಬಂದು ಸುಖವಾದ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದರು. ಆದರೆ ಈ

ಆಧುನೀಕರಣದಿಂದಾಗಿ ಅವೆಲ್ಲ ನಿಂತು ಹೋಗಿ ಮನುಷ್ಯನಿಗೆ ಉದ್ಯೋಗವೇ ಇಲ್ಲದಂತಾಗಿ ತುಂಬಾ ಹೀನಾಯ ಸ್ಥಿತಿಯನ್ನು ಅನುಭವಿಸಿ ಅವನು ಊಟಕ್ಕೂ ಸಹ ಪಡಬೇಕಾದ ಪಾಡು ನಾಯಿ ಪಾಡೇ ಸರಿ. ಅದಕ್ಕಾಗಿ ಜನ ಈಗ ಅದರಲ್ಲೂ ಒಂದು ದೇಶದ ಅಭಿವೃದ್ಧಿಯ ಕೇಂದ್ರಬಿಂದುವಾಗಿದ್ದ ಮಾನವ ಸಂಪನ್ಮೂಲ ಅದರಲ್ಲೂ ಯುವಕರು ಆಧುನೀಕರಣದ ಪ್ರಭಾದಿಂದಾಗಿ ಪಾಶ್ಚಾತೀಕರಣದಿಂದಾಗಿ ಹೊಸ ಹೊಸ ಆಸೆ ತೀರಿಸಿಕೊಳ್ಳಲು ಹೋಗಿ ಎಷ್ಟು ಕೆಟ್ಟದಾರಿ ಹಿಡಿದು ಹಣದಾಸೆಗೆ ಕಳ್ಳ, ಸುಳ್ಳ, ಉಗ್ರಗಾಮಿಯಾಗಿ ಹಣದಾಸೆಗೆ ತನ್ನ ಎಲ್ಲವನ್ನು ಮಾರಿಕೊಳ್ಳುವ ಸ್ಥಿತಿಗೆ ಹೋಗಿದ್ದಾನೆ.

ಹೀಗೆ ಜಾಗತೀಕರಣದಿಂದಾಗಿ ಅತಿ ಕೆಳವರ್ಗದಲ್ಲಿರುವ ಜನ ಬೇರೆಯಾವ ಕೆಲಸವನ್ನು ಅವರು ತಿಳಿದಿರುವುದಿಲ್ಲ. ಕೇವಲ ತನ್ನ ಮೂಲವೃತ್ತಿ, ಇಲ್ಲವೇ ಗುಡಿಕೈಗಾರಿಕೆಯ ಮೇಲೆ ತನ್ನ ಜೀವನ ಅವಲಂಬನೆ ಮಾಡಿರುವಾಗ ಅವೆಲ್ಲದರ ನಾಶದಿಂದಾಗಿ ನೈಜವಾಗಿಯೇ ಅವನ ನಾಶವು ಸಾಗುತ್ತಾ ಅವನಿಂದಲೇ ಅಕ್ಷರಸ್ಥನು ಇಲ್ಲದಿರುವುದರಿಂದ ಅವನ ಜೀವನದ ಕೊನೆಯದಿನಗಳು ಅವನ ಹುಟ್ಟಿನಿಂದಲೇ ಪ್ರಾರಂಭವಾಗಿ ಬಿಟ್ಟಿವೆ.

ಒಟ್ಟಾರೆಯಾಗಿ ಈ ಜಾಗತೀಕರಣದಿಂದಾಗಿ ನಮ್ಮ ದೇಶಕ್ಕೆ ಒಂದು ಕಡೆಯಿಂದ ಲಾಭ ವೆಂದರೂ ನಮ್ಮ ದೇಶದ ಪರಿಸ್ಥಿತಿ, ಸಂದರ್ಭ, ಕ್ಷೇತ್ರವನ್ನು ತಿಳಿದು ಅರಿತು ಅದನ್ನು ಅಳವಡಿಸಿಕೊಳ್ಳಬೇಕೆ ವಿನಃ ಆಧುನಿಕರಣ ಅಥವಾ ಜಾಗತೀಕರಣದ ಹೆಸರಿನಲ್ಲಿ ನಮ್ಮ ಸಂಸ್ಕೃತಿ, ನೀತಿ-ನಿಯಮ ಸಂಪ್ರದಾಯ, ಆಚಾರ-ವಿಚಾರ ಎಲ್ಲವನ್ನು ಧೂಳೀಪಟಮಾಡಿ ಗಾಳಿಯಲ್ಲಿ ತೂಗು ಬಿಡುವುದಲ್ಲ. ಏಕೆಂದರೆ ಭಾರತ ದೇಶಕ್ಕೆ ತನ್ನದೇ ಆದ ಒಂದು ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ ಅಂತಹ ಹಲವಾರು ಅತಿ ಅಮೂಲ್ಯವಾದ ಆಭರಣವನ್ನು ಭಾರತಾಂಬೆ ಧರಿಸಿದ್ದಾಳೆ ಎಂಬುದನ್ನು ಮರೆಯಬಾರದು.

* * *

��� `� ು� @� ಣೆಯ ಬಗ್ಗೆ ಸ್ಪಷ್ಟ ಇತಿಹಾಸ ಹಾಗೂ ಮಾಹಿತಿ ನೀಡುವಲ್ಲಿ ಕ್ಷೇತ್ರಕಾರ್ಯ ಮಾಡುವವರಿಗೆ ಸ್ಪಷ್ಟತೆ ನೀಡುವಲ್ಲಿ ವಿಪುಲವಾಗುತ್ತಲಿವೆ. ಅದಕ್ಕೆ ಕಾರಣಗಳು ಬಹಳ ಇವೆ. ಜನರ ಅನಕ್ಷರತೆ, ಸಂಚಾರಿ ಜೀವನ, ಇತರ ಸಮುದಾಯದ ಪ್ರಭಾವ, ಬದುಕಿಗೆ ಗಟ್ಟಿಯಾದ ನೆಲೆ ಇಲ್ಲದಿರುವುದು ಇತ್ಯಾದಿ. ಇತ್ತೀಚಿನ ದಿನಗಳಲ್ಲಿ ಈ ಸಮುದಾಯದಲ್ಲಿ ಅಕ್ಷರಸ್ತರು ಬೇಡರ ಕಣ್ಣಪ್ಪನ ಉತ್ಸವ, ಸಿಂಧೂರ ಲಕ್ಷ್ಮಣನ “ಹುಟ್ಟುಹಬ್ಬ”ಗಳನ್ನು ಆಚರಿಸುತ್ತಾ ಈ ಸಮುದಾಯವಿರುವ ಹಳ್ಳಿಗಳಲ್ಲಿ ಸಂಘಟನೆ ಮಾಡಿಕೊಂಡಿದ್ದಾರೆ. ಹೆಚ್ಚು ಜನರಿರುವ ಗ್ರಾಮಗಳಲ್ಲಿ ವಾಲ್ಮೀಕಿ ಭವನ ಎಂದು ತಮ್ಮ ಸಮಾಜ ಬಾಂಧವರನ್ನು ಅಪ್ಪಿಕೊಂಡು ಅವರ ಅಭಿವೃದ್ಧಿಗೆ ಶ್ರಮಿಸುತ್ತಾಲಿದ್ದಾರೆ. ಬಾಗಲಕೋಟೆ ಜಿಲ್ಲೆಗೆ ಹೊಂದಿಕೊಂಡಂತೆ ಇರುವ ಬಿಜಾಪೂರ ಜಿಲ್ಲೆಯ ಸಾತಿಹಾಳ, ಅಡಿರಸಂಗ, ಅರಳಿಚಂಡಿ, ಬುಯಾರ, ಮುತ್ತಾಗಿ ಅರಕೇರಿ, ಉತ್ನಾಳ, ಮುಂತಾದ ಕಡೆ ಜಾತ್ರೆ ಉತ್ಸವಗಳು ನಡೆಯುತ್ತಲಿವೆ ಎಂಬುದು ಸಹ ಗಮನಿಸಬೇಕಾದ ಸಂಗತಿಯಾಗಿದೆ.

ವಾಲ್ಮೀಕಿ ಇವರ ಮೂಲಪುರುಷನಾದರೂ ಈ ಜನರನ್ನು ಅತಿ ಹೆಚ್ಚಾಗಿ ನಾಯಕ ಸಮುದಾಯ, ಬೇಡ ಸಮುದಾಯ ಎಂತಲೇ ಕರೆಯಲಾಗುತ್ತದೆ. ಶಾಸನಗಳಲ್ಲಿಯು ಸಹ ಬೇಡನಾಯಕರೆಂದೇ ಕರೆದಿದ್ದನ್ನು ಎಂ.ವಿ ಚಿತ್ರಲಿಂಗಯ್ಯನವರು ಕಂಡುಕೊಂಡಿದ್ದಾರೆ. ನಾಯಕ ಎಂಬ ಉಪನಾಮವು ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ. ೧೧-೧೨ನೆಯ ಶತಮಾನದ ಶಿಲಾಶಾಸನಗಳಲ್ಲಿ ಕಂಡುಬರುತ್ತದೆ. ಆಗ ಇದು ಜಾತಿಸೂಚಕ ಪದವಾಗಿರಲಿಲ್ಲ. ಬೇಡರಿಗೆ ‘ನಾಯಕ’ ಎಂಬ ಗೌರವಸೂಚಕ ಪದ ಕಲ್ಯಾಣ ಚಾಲುಕ್ಯರ ಕಾಲದಿಂದ ಬಂದಿರ ಬೇಕು ಎಂಬುದು ಇಲ್ಲಿ ಅರಿಕೆಯಾಗುತ್ತದೆ. ಈ ಬೇಡ ಸಮುದಾಯದ ನಾಯಕರು ೧೦-೨೦ ಕುಟುಂಬಗಳನ್ನು ಒಂದೇ ಸ್ಥಳದಲ್ಲಿ ಸಲುಹಿ ತಮ್ಮ ಬೇಡ ಘಟ್ಟಿಗಳನ್ನು ಕಟ್ಟಿಕೊಳ್ಳು ತ್ತಿದ್ದರು. ಈ ಗುಂಪುಗಳು ಅಲೆಮಾರಿಗಳಾಗಿ ಹೊರಟಾಗ ತಮಗೆ ತೊಂದರೆ ಮಾಡಿದವರನ್ನು ಎದುರಾದವರನ್ನು ಕೊಂದು ಅಲ್ಲಿಯ ದನಕರುಗಳನ್ನು ಅಟ್ಟಿಸಿಕೊಂಡು ತೆರಳುತ್ತಿದ್ದರು. ಹೀಗೆ ಸ್ಥಳಬಿಟ್ಟು ಸ್ಥಳಕ್ಕೆ ತೆರಳುವಾಗ ಕೆಲವು ದೈವ,

ದೇವರುಗಳನ್ನು ಅವರು ತಮ್ಮ ಸಂಗಡ ಒಯ್ಯುತ್ತಿದ್ದರು. ಈ ಸಂದರ್ಭದಲ್ಲಿ ಕೆಲವು ಆಚರಣೆಗಳು ನಡೆಯುತ್ತಲಿದ್ದವು ಎಂದು ಹಿರಿಯರು ಹೇಳುತ್ತಾರೆ. ಹೀಗೆ ಸಂಚಾರಿಯಲ್ಲಿರುತ್ತಿದ್ದ ಈ ಸಮುದಾಯ ಬೇರೆ ಸಮುದಾಯಗಳೊಡನೆ ಬೆರೆಯದೆ ಬಹಳಕಾಲ ಸ್ವತಂತ್ರವಾಗಿದ್ದುದು ತಮಗೆ ವಿಶಿಷ್ಟವಾದ ಸಂಸ್ಕೃತಿಯನ್ನು ಹಿಂದೂ ಧರ್ಮದ ಪ್ರಭಾವ ಯಾವ ಪ್ರಮಾಣದಲ್ಲಿ ಆಗಿದೆ ಎಂಬ ಅಂಶ ಜಾತಿ ಹಾಗೂ ಬುಡಕಟ್ಟು ಈ ಎರಡಕ್ಕೂ ಇರುವ ವ್ಯತ್ಯಾಸವನ್ನು ಸೂಚಿಸುವ ಮಾನದಂಡ ವಾಗಿದೆ. ವಾಲ್ಮೀಕಿ ಜನ ಹುಟ್ಟು, ಮದುವೆ, ಮತ್ತು ಸಾವು ಈ ಮೂರು ಸಂದರ್ಭಗಳಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಅವಕಾಶ ಕೊಟ್ಟಿಲ್ಲ. ಹೀಗಿದ್ದೂ ಹಿಂದುಗಳೊಡನೆ ಜಾತ್ರೆಯಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಅವರು ಬಾಗವಹಿಸುತ್ತಾರೆ. ಈ ಕಾರಣದಿಂದಲೆ ಮಾನವ ವಿಜ್ಞಾನಗಳು ಇವರನ್ನು ಬುಡಕಟ್ಟು ಸಮುದಾಯ ಎಂದು ಕರೆದರೆ ಜಾನಪದ ವಿಜ್ಞಾನದಲ್ಲಿ "ಜನಪದವರ್ಗ" ಎಂದು ಪರಿಗಣಿಸಲಾಗುತ್ತಿದೆ. ಈ ಜನಪದವರ್ಗ ಪಶುಪಾಲನೆಯ ಮೇಲೆ ಬಂದಿತಾದರೂ ಇದರ ಜತೆಗೆ ಬೇಟೆ ಮತ್ತು ಯೋಧವೃತ್ತಿಯನ್ನು ಕೈಗೊಂಡು ಬಂದದ್ದು ಐತಿಹಾಸಿಕ ಸಂಗತಿ. ದೃಢಕಾಯರಾದ ಇವರು ಯಾವ ಅಪಾಯಕ್ಕೂ ಅಂಜುತ್ತಿರಲಿಲ್ಲ. ಪೂರ್ವಾಪರ ಯೋಚಿಸದೆ ಶತೃಗಳ ಮೇಲೆ ಬೀಳುವವರೂ ಅಗಿರುತ್ತಾರೆ. ಇತರರ ದನಗಳನ್ನು ತರುಬಿಕೊಂಡು ಹೋಗಿ ತಮ್ಮ ವಶದಲ್ಲಿಸಿರಿಕೊಂಡ ಪ್ರಸಂಗಗಳು ಇವರಲ್ಲಿವೆ.

* * *

**ಹಲಗಲಿ ಬೇಡರು**

**೧ನೇ ನುಡಿ**

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜೆರಿಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್‌ಇಂದ ಬಾರದ ನಮ್ಮ ಜೀವ ಸತ್ತ್‌ಓಗುದು ಗೊತ್ತು

ಸುತ್ತಿನ ಹಳ್ಳಿ ಮತ್ತು ಧೊರಿಗಳಿಗೆ ತಿಳಶೆರ ಹೀಂಗ್‌ಅಂತು
ಮಾಡರಿ ಜಗಳಾ ಕೂಡ್‌ಇರತೇವು ಕುಮುಕಿ ಯಾವತ್ತು

ವೊಳಗಿಂದ್‌ಒಳಗ ವಚನ ಕೊಟ್ಟರೊ ಬ್ಯಾಡರ್ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು

# ೧೦. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಯಾವುದೇ ಸಮುದಾಯವು ತನ್ನದೇ ಆದ ಜೀವನ ವಿಧಾನವನ್ನು ಹೊಂದಿರುತ್ತದೆ. ಅವರ ಜೀವನ ವಿಧಾನಕ್ಕನುಗುಣವಾಗಿ ಅವರವರ ಸಂಸ್ಕೃತಿಯು ರೂಪಗೊಳ್ಳುತ್ತದೆ. ಹಾಗೆಯೇ ತಳ ಸಮುದಾಯಗಳು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಗಳನ್ನು ಹೊಂದಿವೆ. ಅಂತಹ ಸಂಸ್ಕೃತಿಯನ್ನು ಪರಂಪಾರಗತವಾಗಿ ಉಳಿಸಿಕೊಂಡು ಕಾಲಕ್ಕೆ ತಕ್ಕಂತೆ ಬೆಳಸಿಕೊಂಡು ಬರುತ್ತವೆ.

ತಳಸಮುದಾಯಗಳು ಎಂದಾಕ್ಷಣ ಅವರು ಯಾವುದೋ ಒಂದು ಪ್ರದೇಶದ ಮೂಲ ನಿವಾಸಿಗಳಾಗಿರುತ್ತಾರೆ. ಅವರು ಅನೇಕ ಶತಮಾನಗಳಿಂದ ಬೆಟ್ಟ, ಗುಡ್ಡ, ಮರಳುಗಾಡು, ಹಿಮಪ್ರದೇಶ ಅಥವಾ ದ್ವೀಪಗಳಲ್ಲಿ ವಾಸವಾಗಿರುತ್ತಾ, ಬಹುಕಾಲ ಯಾವುದೇ ಸಂಸ್ಕೃತಿಯ ಪ್ರಭಾವಕ್ಕೆ ಸಿಕ್ಕದೆ, ತಮ್ಮದೇ ಆದ ಸಂಸ್ಕೃತಿಯನ್ನು ಪ್ರತ್ಯೇಕವಾಗಿ ಉಳಿಸಿಕೊಂಡು ಬಂದಿರುವು ದುಂಟು.

ಅವರದೇ ಆದ ಭಾಷೆ, ಆಚಾರ-ವಿಚಾರ-ದೈವ ಮೂಲ ಪುರುಷ, ಸಂಪ್ರದಾಯ, ಉಡುಗೆ ತೊಡುಗೆ, ಭಾಷೆ, ಆಟ, ಹಾಡು, ವಿಧಿ-ನಿಷೇಧಗಳು, ತಮ್ಮದೇ ಆದ ಕಟ್ಟು ಪಾಡುಗಳನ್ನು ಹೊಂದಿ ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕವಾಗಿ ಬದುಕಿ ನಾಗರೀಕರ ಕಣ್ಣಿಗೆ ವಿಚಿತ್ರವೆಂಬಂತೆ ಬದುಕುತ್ತಿರುವ ಸಮುದಾಯಗಳಿವು. ನನ್ನ ಅನುಭವಕ್ಕೆ ಬಂದಂತೆ ನಮ್ಮ ಕರ್ನಾಟಕದಲ್ಲಿ ಸರಿಸುಮಾರು ೫೦ ಬಗೆಯ ಆದಿವಾಸಿ ತಳಸಮುದಾಯಗಳಿರುವುದು ಕಂಡು ಬಂದಿದೆ.

ತಳಸಮುದಾಯವೆಂದರೆ ನನ್ನ ಅನಿಸಿಕೆಯ ಪ್ರಕಾರ ಪಾರಂಪರಿಕ ಜ್ಞಾನವನ್ನು ಹೊಂದಿ ರುವ ಸಮುದಾಯ. ಪ್ರಸ್ತುತ ಅಂತಹ ತಳಸಮುದಾಯಗಳೊಂದಾದ ಹಕ್ಕಿ ಪಿಕ್ಕಿ ಸಮುದಾ ಯದ ಸಂಸ್ಕೃತಿಯ ಮೇಲೆ ಆಧುನಿಕತೆಯ ಪ್ರಭಾವ, ಅದರ ಪರಿಣಾಮ ದುಷ್ಪರಿಣಾಮಗಳ ಬಗ್ಗೆ ಚರ್ಚಿಸಲು ಇಚ್ಛಿಸುತ್ತಿದ್ದೀನಿ.

ಆಧುನಿಕತೆ ಎನ್ನುವುದು ಇದೊಂದು ನಿರಂತರ ಸಾಮಾಜಿಕ ಕ್ರಿಯೆ. ನನ್ನ ಅನಿಸಿಕೆಯ ಪ್ರಕಾರ ಆಧುನಿಕ ಶಿಕ್ಷಣ, ಆಧುನಿಕ ಆರೋಗ್ಯ ಸೇವೆಗಳು, ಆಧುನಿಕ ತಾಂತ್ರಿಕ ಸವಲತ್ತುಗಳು ಹಾಗೂ ಆಧುನಿಕ ಸಂಪರ್ಕ ಮಾಧ್ಯಮಗಳು ಆಗಿವೆ.

ನಾನು ನನ್ನ ಚರ್ಚೆಗೆ ಬಳ್ಳಾರಿಜಿಲ್ಲೆಯ ಹೊಸಪೇಟೆ ತಾಲೂಕಿನ ಕಂಪ್ಲಿ ಪಟ್ಟಣದಲ್ಲಿರುವ ಹಕ್ಕಿ ಪಿಕ್ಕಿ ಸಮುದಾಯದ ಮೇಲೆ ಆಧುನಿಕತೆಯ ಪ್ರಭಾವದ ಬಗ್ಗೆ ಚರ್ಚಿಸಿದ್ದೀನಿ. ಇದೊಂದು ದ್ರಾವಿಡ ಬುಡಕಟ್ಟಿಗೆ ಸೇರಿದ ಅಲೆಮಾರಿ ಸಮುದಾಯ. ಇವರು ಕೂಡ ಮೊದಲೆಲ್ಲ ಅಲೆಮಾರಿಗಳಾಗಿದ್ದವರು. ಈಗ ಒಂದೊಂದು ಊರಿನಲ್ಲಿ ಸ್ಥಿರವಾಗಿ ನೆಲೆ ನಿಂತಿದ್ದಾರೆ. ನನ್ನೂರಿನಲ್ಲಿ ಈ ಸಮುದಾಯದ ೪೫ ಮನೆಗಳಿವೆ. ಅಲೆಮಾರಿಗಳಾದ ಇವರಿಗೆ ಸರ್ಕಾರ ನೆಲೆನಿಲ್ಲಲು ನಿವೇಶನಗಳನ್ನು ಕೊಟ್ಟು ಅವರದೇ ಒಂದು ಕೇರಿಯಾಗುವಂತೆ ಮಾಡಿದೆ. ನನ್ನ ಅನುಭವಕ್ಕೆ ಬಂದಂತೆ ಈ ಸಮುದಾಯದಲ್ಲಿಯೂ ೭ ಬೆಡಗುಗಳಿವೆ. ಇವರಲ್ಲಿ ಪಿಂಪ್ಲಾಜ, ಕುರೋಬಿಯಾ, ಇಕೋಡಿಯಾ, ಸಾವುಂಡ್ಯ, ಹರ್ಕತಿಯಾ, ಮತ್ತು ಕೊಡಿಯಾರ ಎಂಬ ಆರು ಬೆಡಗುಗಳಿವೆ. ಈ ಆರು ಬೆಡಗುಗಳಿಗೆ ಕುಂದ ಎಂಬ ಹೆಸರನ್ನು ಸೇರಿಸಿ ೭ ಬೆಡಗು ಎಂದು ಹೇಳುತ್ತಾರೆ. ಪ್ರತಿಯೊಂದು ಬೆಡಗಿಗೂ ಒಂದೊಂದು ಕುಲದೇವರು ಗಳಿವೆ. ಇವರ ಭಾಷೆ ವಾಗರಿ, ಅವರು ವಾಗರಿಯೇ ಎನ್ನುತ್ತಾರೆ. ಈ ಭಾಷೆ ಹಲವಾರು ಭಾಷೆಗಳ ಪದ ಮತ್ತು ಶೈಲಿಯನ್ನು ಒಳಗೊಂಡು ಬಳಕೆಯಾಗುತ್ತದೆ. ಕನ್ನಡವನ್ನು ಅವರ ಬಹುತೇಕ ಜನರು ಸ್ಪಷ್ಟವಾಗಿ ಮಾತಾನಾಡುತ್ತಾರೆ. ಇವರ ಭಾಷೆ ಮಿಶ್ರ ಭಾಷೆ ಇವರ ಕನ್ನಡ ಉಚ್ಛಾರಣೆಯೂ ಕೂಡ ವಾಗರಿ ಭಾಷೆಯನ್ನು ಅವಲಂಬಿಸಿದೆ. ಇವರದೇ ಆದ ಆಚಾರ-ವಿಚಾರ ಸಂಪ್ರದಾಯಗಳಿವೆ.

ಈ ಸಮುದಾಯದಲ್ಲಿ ಜಾತಿ ಬಹಿಷ್ಕಾರ ಪದ್ಧತಿಯು ಇಂದಿಗೂ ಜೀವಂತವಾಗಿದೆ. ಹಾಗೆಯೇ ಇಲ್ಲಿನ ನ್ಯಾಯ ಪದ್ಧತಿಯ ಕ್ರಮ ತುಂಬಾ ಕಠಿಣವಾಗಿದೆ. ನ್ಯಾಯ ತೀರ್ಮಾನ ಮಾಡುವ ಮುಖಂಡನನ್ನು 'ಕಟ್ಟಿಮನಿ' ಎಂದು ಕರೆಯುತ್ತಾರೆ. ಇವರ ಹೆಸರೇ ಸೂಚಿಸಿದಂತೆ

ವೃತ್ತಿಯಿಂದ ಇವರು ಬೇಟೆಯಾಡುವರು. ಹಕ್ಕಿಗಳನ್ನು ಹಿಡಿಯುವುದರಿಂದಲೇ ಅವರಿಗೆ ಹಕ್ಕಿ ಪಿಕ್ಕಿ ಎಂಬ ವೃತ್ತಿನಾಮವೇ ಸಮುದಾಯದ ಹೆಸರು ಪಡೆದುಕೊಂಡಿದೆ. ಹಕ್ಕಿಗಳನ್ನು ಹಿಡಿಯುವುದರಲ್ಲಿ ಇವರನ್ನು ಮೀರಿಸುವವರು ಯಾರು ಇಲ್ಲ. ಕಾರಣ ಇವರು ಹಕ್ಕಿಗಳಿಗಿಂತ ಬುದ್ಧಿವಂತರು. ಇವರಿಗೆ ಹಕ್ಕಿಗಳನ್ನು ಹೇಗೆ ಬೇಟೆಯಾಡಬೇಕು ಮತ್ತು ಯಾವ ಕಾಲದಲ್ಲಿ ಯಾವ ಯಾವ ಪಕ್ಷಿಗಳು ಹೇಗೆ ಬದುಕುತ್ತವೆ; ಅವುಗಳ ಜೀವನ ಪದ್ಧತಿ ಹೇಗೆ ಎಂಬ ಪಕ್ಷಿಶಾಸ್ತ್ರದ ಅರಿವು ಅವರಿಗಿರುತ್ತದೆ. ಪ್ರಾಣಿಗಳನ್ನು ಕೂಡ ಬೇಟೆಯಾಡುವ ಪದ್ಧತಿಯೂ ಇವರಿಗೆ ಗೊತ್ತು. ಇನ್ನು ಹೆಂಗಸರು ಬಿಕ್ಷೆ ಬೇಡುವುದರ ಜೊತೆಗೆ ಹಲವಾರು ಸಾಮಾನು ಗಳನ್ನು ಮಾರಾಟ ಮಾಡುತ್ತಾರೆ. ಉದಾ. ಸೂಜಿ, ಡಬ್ಬಣ, ಪಿನ್ನ, ಕಸ್ತೂರಿ, ಕರಿಮಣಿ, ಹಾಲುಮಣಿ ಮುಂತಾದ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಾರೆ.

ಇದುವರೆಗೂ ಸಂಕ್ಷಿಪ್ತವಾಗಿ ಈ ಸಮುದಾಯದ ಆಚಾರ-ವಿಚಾರ ಸಂಪ್ರದಾಯ ಪದ್ಧತಿ ಗಳನ್ನು ಅವಲೋಕಿಸಿದೆವು. ಈ ಸಮುದಾಯ ಬಹುವಾಗಿ ಆಧುನೀಕರಣಕ್ಕೆ ಒಳಗಾಗಿದೆ. ಅವರ ಅಲೆಮಾರಿ ಜೀವನವೇ ಅವರ ನಿರಂತರ ಬದಲಾವಣೆಗೆ ಕಾರಣ. ಅವರು ಹಿಂದಿನಂತೆ ಇಂದು ಸುಲಭವಾಗಿ ತಿಂದು (ಬಿಕ್ಷೆ ಬೇಡಿ) ಬದುಕುವಂತಿಲ್ಲ. ಭಿಕ್ಷೆ ಬೇಡಲು ಹೋದರೆ, ನಿಮಗೇನು ಧಾಡಿ ಕಸ ಮುಸುರಿ ಮಾಡಿ ಬದುಕಿ ಎನ್ನುತ್ತಾರೆ ಎಂಬುದು ಆ ಹೆಂಗಸರ ಜೀವನಾನುಭವ. ಒಂದಂತು ಸತ್ಯ ಶತಮಾನಗಳಿಂದ ಮೇಲ್ಜಾತಿಯವರ ತುಳಿಕ್ಕೊಳಗಾಗಿರುವ ಇವರು ಮಾನಸಿಕವಾಗಿ ಹೊರಬರಲು ಆಗಿಲ್ಲ.

ಆಧುನೀಕತೆಗೆ ಒಳಪಡಿಸಿರುವ ತಳಸಮುದಾಯ ಅರ್ಥಾತ್ ಬುಡಕಟ್ಟುಗಳ ಅಭಿವೃದ್ಧಿಗೆ ಸರಕಾರದಿಂದ ಕೋಟ್ಯಾಂತರ ರೂಪಾಯಿಗಳ ವ್ಯಯವಾದರೂ ಅದು ಸರಿಯಾದ ಮಟ್ಟದಲ್ಲಿ ಉಪಯೋಗಕ್ಕೆ ಬಾರದೆ ಸೋರಿಕೆಯಾಗಿದೆ. ಎಲ್ಲಾ ಬುಡಕಟ್ಟಿನ ಜನ ತಮ್ಮ ಮೂಲ ವೃತ್ತಿಗಳಿಂದ ಬದುಕಲು ಸಾಧ್ಯವಾಗುತ್ತಿಲ್ಲ. ಆಧುನೀಕತೆಯ ಪ್ರಭಾವದಿಂದ ಅವರ ವೃತ್ತಿಗಳು ನೆಲಕಚ್ಚುತ್ತಿವೆ.

ನಾನೀಗಾಗಲೇ ಹೇಳಿದಂತೆ ಹಕ್ಕಿ ಪಿಕ್ಕಿಯವರು ಆಧುನೀಕತೆಗೆ ಹೊಂದಿಕೊಳ್ಳ ತೊಡಗಿ ದ್ದಾರೆ. ಈಗೀಗ ತಮ್ಮ ಅಸ್ತಿತ್ವದ ರಕ್ಷಣೆಯ ಸಂಕ್ರಾಮಣಾವಸ್ಥೆಯ ಸ್ಥಿತಿಯಲ್ಲಿದ್ದಾರೆ. ಇಂತಹ ಆಧುನೀಕರಣ ವ್ಯಕ್ತಿ ಮತ್ತು ಒಟ್ಟು ಪರಿಸರದ ನಡುವಿನ ಸಂಬಂಧ ತುಂಬಾ ಸೀಮಿತವಾಗಿದೆ. ಆಧುನೀಕರಣ ಅಮೂರ್ತ ಸ್ವರೂಪದ ವ್ಯಕ್ತಿಯನ್ನು ರೂಪಿಸಿದೆ. ಅಮೂರ್ತ ಸ್ವರೂಪದ ವ್ಯಕ್ತಿ ಇತರರೊಂದಿಗೆ ಕೇವಲ ಒಪ್ಪಂದ ಆಧಾರಿತ ಸಂಬಂಧ ಇಟ್ಟುಕೊಳ್ಳುತ್ತಾನೆ. ಇದರಿಂದ ಸಮುದಾಯದ ಬದುಕೇ ನಾಶವಾಗುತ್ತಿದೆ.

ಆಧುನೀಕತೆಯ ಸೋಂಕು ಹಕ್ಕಿ ಪಿಕ್ಕಿ ಸಮುದಾಯದ ಮೇಲೆ ಆಗಿದೆ. ಆದರೆ ಅದರ ಪರಿಣಾಮ ಮಾತ್ರ ಅತ್ಯಲ್ಪ. ಏಕೆಂದರೆ ಗುಡ್ಡಗಾಡಿನಲ್ಲಿ ವಾಸವಾಗಿದ್ದ ಈ ಜನರನ್ನು ಸರ್ಕಾರ ನಾಡಿಗೆ ತಂದಿತು. ಅಭಿವೃದ್ಧಿ ಹೆಸರಿನಲ್ಲಿ ಅರಣ್ಯ ನಾಶ ಅಂದರೆ ರೈಲ್ವೆ ಹಳಿ ಹಾಕುವುದು ಡಿಫೆನ್ಸ್ ಉದ್ದೇಶಕ್ಕಾಗಿ, ಬೃಹತ್ ಆಣೆಕಟ್ಟುಕಟ್ಟಲು ಅರಣ್ಯ ನಾಶವಾಯಿತು. ಸರ್ಕಾರ ಇದರೊಂದಿಗೆ ಪ್ರಾಣಿ ಪಕ್ಷಿಗಳ ಬೇಟೆಯಾಡುವವರಿಗೆ ಕಾನೂನು ರೀತಿಯ ನಿರ್ಬಂಧ ವೇರಿತು.

ನಗರ ಪ್ರದೇಶಗಳಿಗೆ ಬಂದ ಇವರಿಗೆ ಸಂಕಷ್ಟ ಸ್ಥಿತಿ ಎದುರಾಯಿತು. ಆಧುನೀಕತೆಗೆ ಒಳಗಾಗುವುದೆಂದರೆ ತಮ್ಮ ಸಂಸ್ಕೃತಿಯ ಪರದೆಯಿಂದ ದೂರ ಸರಿದಂತೆಯೇ! ಅಲ್ಲವೆ? ನಾನೀಗಾಗಲೇ ಚರ್ಚಿಸಿದಂತೆ ಹಕ್ಕಿ ಪಿಕ್ಕಿ ಸಮುದಾಯ ನಗರದಲ್ಲೇನು ಬಂದು ನೆಲೆಸಿದೆ. ಅವರಿಗೆ ಸರ್ಕಾರದ ಅಲ್ಪಸ್ವಲ್ಪ ಯೋಜನೆಗಳು ಸಿಗುತ್ತಿವೆ. ಆದರೆ ಸರ್ಕಾರ ಅವರ ಪಾರಂಪರಿಕ ಜ್ಞಾನಕ್ಕೆ ಒತ್ತು ಕೊಟ್ಟಿದೆಯೇ? ಎಂಬ ಪ್ರಶ್ನೆ ಏಳುತ್ತದೆ. ಅಂದರೆ ಹಕ್ಕಿ ಪಿಕ್ಕಿಯವರು ಮೂಲತಃ ಪ್ರಾಣಿಪಕ್ಷಿಗಳನ್ನು ಬೇಟೆಯಾಡುವವರು. ಅವರಿಗೆ ಪ್ರಾಣಿಗಳ ಶಿಕ್ಷಣದ ಅಧ್ಯಯನದ ಬಗ್ಗೆ ಅರಿವಿದ್ದರೂ ಕೂಡ ಅವರನ್ನು ಮೂಲೆಗುಂಪು ಮಾಡಿ ಪಕ್ಷಿ ವೀಕ್ಷಣೆ ಯಂತಹ ಜ್ಞಾನ ಶಾಖೆಗಳನ್ನು ತೆರೆದು So called ಸಲೀಂ ಅಲಿ, ಪೂರ್ಣಚಂದ್ರ ತೇಜಸ್ವಿ ಯವರು ಮಾಡುವ ಕೆಲಸವನ್ನು ಗುರುತಿಸಿ ಪುರಸ್ಕರಿತು ಎಂಬುದು ನನ್ನ ಚರ್ಚೆ ಯಾಕೆ? ಸರ್ಕಾರ ಇವರಲ್ಲಿರುವ ಪಾರಂಪರಿಕ ಜ್ಞಾನವನ್ನು ಗುರುತಿಸಿ ಅದಕ್ಕೆ ತರಬೇತಿಯನ್ನು ಕೊಟ್ಟು ಅವರ ಜ್ಞಾನದ ಉಳಿಕೆಗಾಗಿ ಪ್ರಯತ್ನಿಸಬಾರದು, ಅರಣ್ಯದಲ್ಲಿರುವ ಪ್ರಾಣಿ ಪಕ್ಷಿ ಜೀವಸಂಕುಲವನ್ನು ಸಂರಕ್ಷಿಸಬಾರದು. ಇದನ್ನೆಲ್ಲ ಗಮನಿಸಿದರೆ ಕೆಲವು ಅಂಶಗಳು ಗಮನಕ್ಕೆ ಬರುತ್ತವೆ. ಈ ದೇಶದಲ್ಲಿ

ಬುದ್ಧಿಶಕ್ತಿಗೆ ಕೊಟ್ಟಷ್ಟು ಪ್ರಾಮುಖ್ಯತೆ, ದೈಹಿಕ ಶಕ್ತಿಗೆ ಪಾರಂಪರಿಕ ಜ್ಞಾನಕ್ಕೆ ಕೊಡುವುದಿಲ್ಲ. ಅವರ ಈ ವೃತ್ತಿಯನ್ನು ಕೀಳಾಗಿ ಕಾಣುವ ಮನೋಭಾವ ಮೊದಲಿ ನಿಂದಲೂ ಬೆಳೆದು ಬಂದಿದೆ. ಅದನ್ನು ಗೌರವಿಸುವ ಭಾವನೆ ಬೆಳೆಸುವುದರ ಜೊತೆಗೆ ಅವರ ಕರಕುಶಲ ಜ್ಞಾನವನ್ನು ಗೌರವಿಸಿ, ಆರ್ಥಿಕ ಬೆಂಬಲ ನೀಡುವ ಮೂಲಕ ಆ  ಸಮುದಾಯಕ್ಕೆ ಆರ್ಥಿಕ ಸ್ವಾಯುತ್ತತೆ ಸಿಗುವಂತೆ ಸರ್ಕಾರ ನೋಡಿಕೊಳ್ಳಬೇಕು. ಇವರ ಪಾರಂಪರಿಕ ಜ್ಞಾನವನ್ನು ಸರ್ಕಾರವಾಗಲಿ, ಆಧುನಿಕ ಸಮಾಜವಾಗಲಿ ಗುರುತಿಸಲಿಲ್ಲ ಬಳಸಿ ಕೊಳ್ಳಲಿಲ್ಲ. ಅಂದರೆ ನಾನಿಲ್ಲಿ ಪ್ರಾಣಿಪಕ್ಷಿಗಳನ್ನು ಬೇಟೆಯಾಡಬೇಕೆಂದು ಹೇಳುತ್ತಿಲ್ಲ. ಅವರಲ್ಲಿರುವ ಈ ಜ್ಞಾನವನ್ನು ಪುಷ್ಟೀಕರಿಸುತ್ತಾ ಬೇಟೆಯಾಡುವುದು ತಪ್ಪೆಂಬ ಭಾವನೆಯ ತರಬೇತಿ ನೀಡಿ, ಅವರ ಪಾರಂಪರಿಕ ಜ್ಞಾನವನ್ನು ಆಧುನೀಕತೆಗೆ ಬಳಸಿದರೆ ಹೆಚ್ಚಿನ ಉಪಯೋಗ ಆಧುನೀಕತೆಗೆ ಆಗುತ್ತದೆಂಬುದು ನನ್ನ ಆಶಯ.

ನಾನೀಗಾಗಲೇ ಚರ್ಚಿಸಿದಂತೆ ನನ್ನೂರಿನ ಹಕ್ಕಿ ಪಿಕ್ಕಿಯವರು ಸಣ್ಣಪುಟ್ಟ ವ್ಯಾಪಾರದಲ್ಲಿ ತೊಡಗಿದ್ದಾರೆ. ಸರ್ಕಾರದ ಸೌಲಭ್ಯಗಳನ್ನು ಪಡೆದಿರುವ ಇವರು ಆಧುನೀಕತೆಯ ಸಂಕೇತ ಗಳೆನ್ನುವ ವಸ್ತುಗಳನ್ನು ಉದಾ. ಟಿ.ವಿ., ಟೇಪ್‌ರೆಕಾರ್ಡ್, ಮೊಬೈಲ್ ಇತ್ಯಾದಿ ತಮ್ಮಲ್ಲಿಟ್ಟು ಕೊಂಡಿದ್ದಾರೆ ಎಂದು ಹೇಳಲು ಸಂತೋಷವೆನಿಸುತ್ತದೆ. ಅವರ ಆಧುನಿಕ ಉಡುಗೆ ತೊಡುಗೆ ಗ್ರಾಮೀಣ ಪ್ರದೇಶದ ಯಾವುದೇ ಜನ ಬಳಸದಷ್ಟು ಮುಂದುವರಿದ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಬಹಳಷ್ಟು ಜನ ಇತ್ತೀಚೆಗೆ ತಮ್ಮ ಮಕ್ಕಳನ್ನು ವ್ಯಾಪಾರಕ್ಕೆ ಕರೆದೊಯ್ಯುವ ಬದಲು ಓದಲು ಶಾಲೆಗೆ ಕಳುಹಿಸುತ್ತಿದ್ದಾರೆ. ಇದೊಂದು ಅವರ ಬದುಕಿನ ದೊಡ್ಡ ಬದಲಾವಣೆ. ಎಲ್ಲಿಯೂ ಒಂದು ಕಡೆ ನೆಲೆ ನಿಲ್ಲದ ಅಲೆಮಾರಿಗಳಾಗಿದ್ದ ಇವರು ಒಂದು ಕಡೆ ಸ್ಥಳವೂರಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರಮಿಸುವುದು ಎಂದರೆ ಅದೊಂದು ಅದಮ್ಯ ಬದಲಾವಣೆ.

ಒಟ್ಟಿನಲ್ಲಿ ಸರ್ಕಾರ ಹಲವಾರು ಯೋಜನೆಗಳ ಮೂಲಕ ಕಾಡಿನಲ್ಲಿರುವವರನ್ನು ನಾಡಿಗೆ ತಂದು ಬದಲಾವಣೆ ತರಲಿಚ್ಛಿಸುತ್ತದೆ. ಆಧುನಿಕತೆ ತಳಸಮುದಾಯಗಳ ಪಾರಂಪರಿಕ ಜ್ಞಾನವನ್ನು ಮುಂದುವರಿಸದೆ ನಾಶಪಡಿಸುತ್ತಿದೆ. ಪರ್ಯಾಯವಾಗಿ ಪ್ರತ್ಯೇಕವಾದ ಜ್ಞಾನ ಶಾಖೆಯೊಂದನ್ನು ತೆರೆಯುತ್ತದೆ ವಿನಃ ತಳಸಮುದಾಯದ ಜ್ಞಾನವನ್ನು ನಂಬುವುದಿಲ್ಲ ವೆಂಬುದೇ ನನ್ನ ತುಡಿತ.

* * *

ಹಿಂದೂ ಸಂಸ್ಕೃತಿಗೆ ಗಂಡಾಂತರ ಒದಗಿದ ಕಾಲದಲ್ಲಿ ಗಂಡುಗಲಿಗಳಾಗಿ ಹೋರಾಟ ನಡೆಸಿದ ಪ್ರಥಮ ಸ್ವಾತಂತ್ರ್ಯ ವೀರರೆಂದರೆ
ವಾಲ್ಮೀಕಿ-ಜನಾಂಗದವರು.
**– ಹೆಚ್.ವಿ. ವೀರನಾಯಕ**

lang{ ����ಿ� @� ಚಂಡಿ, ಬುಯಾರ, ಮುತ್ತಾಗಿ ಅರಕೇರಿ, ಉತ್ನಾಳ, ಮುಂತಾದ ಕಡೆ ಜಾತ್ರೆ ಉತ್ಸವಗಳು ನಡೆಯುತ್ತಲಿವೆ ಎಂಬುದು ಸಹ ಗಮನಿಸಬೇಕಾದ ಸಂಗತಿಯಾಗಿದೆ.

ವಾಲ್ಮೀಕಿ ಇವರ ಮೂಲಪುರುಷನಾದರೂ ಈ ಜನರನ್ನು ಅತಿ ಹೆಚ್ಚಾಗಿ ನಾಯಕ ಸಮುದಾಯ, ಬೇಡ ಸಮುದಾಯ ಎಂತಲೇ ಕರೆಯಲಾಗುತ್ತದೆ. ಶಾಸನಗಳಲ್ಲಿಯು ಸಹ ಬೇಡನಾಯಕರೆಂದೇ ಕರೆದಿದ್ದನ್ನು ಎಂ.ವಿ ಚಿತ್ರಲಿಂಗಯ್ಯನವರು ಕಂಡುಕೊಂಡಿದ್ದಾರೆ. ನಾಯಕ ಎಂಬ ಉಪನಾಮವು ಕಲ್ಯಾಣ ಚಾಲುಕ್ಯರ ಕಾಲದ ಕ್ರಿ.ಶ. ೧೧-೧೨ನೆಯ ಶತಮಾನದ ಶಿಲಾಶಾಸನಗಳಲ್ಲಿ ಕಂಡುಬರುತ್ತದೆ. ಆಗ ಇದು ಜಾತಿಸೂಚಕ ಪದವಾಗಿರಲಿಲ್ಲ. ಬೇಡರಿಗೆ 'ನಾಯಕ' ಎಂಬ ಗೌರವಸೂಚಕ ಪದ ಕಲ್ಯಾಣ ಚಾಲುಕ್ಯರ ಕಾಲದಿಂದ ಬಂದಿರ ಬೇಕು ಎಂಬುದು ಇಲ್ಲಿ ಅರಿಕೆಯಾಗುತ್ತದೆ. ಈ ಬೇಡ ಸಮುದಾಯದ ನಾಯಕರು ೧೦-೨೦ ಕುಟುಂಬಗಳನ್ನು ಒಂದೇ ಸ್ಥಳದಲ್ಲಿ ಸಲುಹಿ ತಮ್ಮ

ಬೇಡ ಘಟ್ಟಿಗಳನ್ನು ಕಟ್ಟಿಕೊಳ್ಳು ತ್ತಿದ್ದರು. ಈ ಗುಂಪುಗಳು ಅಲೆಮಾರಿಗಳಾಗಿ ಹೊರಟಾಗ ತಮಗೆ ತೊಂದರೆ ಮಾಡಿದವರನ್ನು ಎದುರಾದವರನ್ನು ಕೊಂದು ಅಲ್ಲಿಯ ದನಕರುಗಳನ್ನು ಅಟ್ಟಿಸಿಕೊಂಡು ತೆರಳುತ್ತಿದ್ದರು. ಹೀಗೆ ಸ್ಥಳಬಿಟ್ಟು ಸ್ಥಳಕ್ಕೆ ತೆರಳುವಾಗ ಕೆಲವು ದೈವ, ದೇವರುಗಳನ್ನು ಅವರು ತಮ್ಮ ಸಂಗಡ ಒಯ್ಯುತ್ತಿದ್ದರು. ಈ ಸಂದರ್ಭದಲ್ಲಿ ಕೆಲವು ಆಚರಣೆಗಳು ನಡೆಯುತ್ತಲಿದ್ದವು ಎಂದು ಹಿರಿಯರು ಹೇಳುತ್ತಾರೆ. ಹೀಗೆ ಸಂಚಾರಿಯಲ್ಲಿರುತ್ತಿದ್ದ ಈ ಸಮುದಾಯ ಬೇರೆ ಸಮುದಾಯಗಳೊಡನೆ ಬೆರೆಯದೆ ಬಹಳಕಾಲ ಸ್ವತಂತ್ರವಾಗಿದ್ದುದು ತಮಗೆ ವಿಶಿಷ್ಟವಾದ ಸಂಸ್ಕೃತಿಯನ್ನು ಹಿಂದೂ ಧರ್ಮದ ಪ್ರಭಾವ ಯಾವ ಪ್ರಮಾಣದಲ್ಲಿ ಆಗಿದೆ ಎಂಬ ಅಂಶ ಜಾತಿ ಹಾಗೂ ಬುಡಕಟ್ಟು ಈ ಎರಡಕ್ಕೂ ಇರುವ ವ್ಯತ್ಯಾಸವನ್ನು ಸೂಚಿಸುವ ಮಾನದಂಡ ವಾಗಿದೆ. ವಾಲ್ಮೀಕಿ ಜನ ಹುಟ್ಟು, ಮದುವೆ, ಮತ್ತು ಸಾವು ಈ ಮೂರು ಸಂದರ್ಭಗಳಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಅವಕಾಶ ಕೊಟ್ಟಿಲ್ಲ. ಹೀಗಿದ್ದೂ ಹಿಂದುಗಳೊಡನೆ ಜಾತ್ರೆಯಲ್ಲಿ ಮತ್ತು ಇತರ ಸಂದರ್ಭಗಳಲ್ಲಿ ಅವರು ಬಾಗವಹಿಸುತ್ತಾರೆ. ಈ ಕಾರಣದಿಂದಲೆ ಮಾನವ ವಿಜ್ಞಾನಗಳು ಇವರನ್ನು ಬುಡಕಟ್ಟು ಸಮುದಾಯ ಎಂದು ಕರೆದರೆ ಜಾನಪದ ವಿಜ್ಞಾನದಲ್ಲಿ "ಜನಪದವರ್ಗ" ಎಂದು ಪರಿಗಣಿಸಲಾಗುತ್ತಿದೆ. ಈ ಜನಪದವರ್ಗ ಪಶುಪಾಲನೆಯ ಮೇಲೆ ಬಂದಿತಾದರೂ ಇದರ ಜತೆಗೆ ಬೇಟೆ ಮತ್ತು ಯೋಧವೃತ್ತಿಯನ್ನು ಕೈಗೊಂಡು ಬಂದದ್ದು ಐತಿಹಾಸಿಕ ಸಂಗತಿ. ದೃಢಕಾಯರಾದ ಇವರು ಯಾವ ಅಪಾಯಕ್ಕೂ ಅಂಜುತ್ತಿರಲಿಲ್ಲ. ಪೂರ್ವಾಪರ ಯೋಚಿಸದೆ ಶತೃಗಳ ಮೇಲೆ ಬೀಳುವವರೂ ಅಗಿರುತ್ತಾರೆ. ಇತರರ ದನಗಳನ್ನು ತರುಬಿಕೊಂಡು ಹೋಗಿ ತಮ್ಮ ವಶದಲ್ಲಿಸಿರಿಕೊಂಡ ಪ್ರಸಂಗಗಳು ಇವರಲ್ಲಿವೆ.

* * *

**ಹಲಗಲಿ ಬೇಡರು**

**೧ನೇ ನುಡಿ**

ಹಲಗಲಿ ಅಂಬುವ ಹಳ್ಳಿ ಮುಧೋಳ ರಾಜ್ಯದಾಗ ಇತ್ತು
ಪೂಜೆರಿಹಣಮಾ ಬಾಲ ಜಡಗ ರಾಮ ಮಾಡ್ಯಾರ ಮಸಲತ್ತು

ಕೈನ ಹತಾರ ಕೊಡಬಾರದೊ ನಾವು ನಾಲ್ಕು ಮಂದಿ ಜತ್ತು
ಹತಾರ ಹೋದ್ಇಂದ ಬಾರದ ನಮ್ಮ ಜೀವ ಸತ್ತ್ಓಗುದು ಗೊತ್ತು

ಸುತ್ತಿನ ಹಳ್ಳಿ ಮತ್ತು ಧೊರಿಗಳಿಗೆ ತಿಳಶೆರ ಹೀಂಗ್ಅಂತು
ಮಾಡರಿ ಜಗಳಾ ಕೂಡ್ಇರತೇವು ಕುಮುಕಿ ಯಾವತ್ತು

ವೊಳಗಿಂದ್ಒಳಗ ವಚನ ಕೊಟ್ಟರೊ ಬ್ಯಾಡರ್ ಎಲ್ಲ ಕಲಿತು
ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು

# ೧೧. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಆಧುನಿಕ ಜಗತ್ತಿನೆಡೆಗೆ ಪರಸ್ಪರ ಹೊಂದಿಕೊಂಡಿರುವ ಮಾನವನು ಯಾವರೀತಿಯ ಜೀವನಕ್ಕೆ ಮಾರುಹೋಗಿದ್ದಾನೆ ಎನ್ನುವುದನ್ನು ಪ್ರಶ್ನಿಸುತ್ತಿದೆ. ಕೇವಲ ಒಬ್ಬ ಮಾನವನನ್ನೇ ಉದಾಹರಣೆಯಾಗಿ ನೋಡುವುದಾದರೆ ತಳಸಮುದಾಯಗಳ ಬದುಕಿನ ಹಿನ್ನೆಲೆ ಗಮನಿಸಿದಾಗ ಆಧುನಿಕ ಜಗತ್ತಿಗೆ ಹೊಂದಿಕೊಂಡಿದ್ದಾರೋ ಅಥವಾ ಜಾಗತೀಕರಣವು ತಳಸಮು ದಾಯಗಳಿಗೆ ಸುಖಕರವಾದ ಜೀವನವನ್ನೊದಗಿಸಿದೆಯೋ ಎನ್ನುವ ಚರ್ಚೆ ಇಂದು ನಮ್ಮ ಕಣ್ಮುಂದೆ ಸೆಳೆಯುತ್ತೇ.

ಮೊದಲೆಲ್ಲಾ ಯಾವುದೇ ಜಾತಿ-ಭೇದಗಳಿಲ್ಲದೆ ಬದುಕುತ್ತಿದ್ದ ಸಮುದಾಯಗಳನ್ನು ಮೇಲ್ಜಾತಿ ರಾಜಕಾರಣವು ಆ ಕೊಡುಕೊಳ್ಳುವಿಕೆ ಸಂಬಂಧವನ್ನು ಎಷ್ಟರ ಮಟ್ಟಿಗೆ ಬೇರೆ ಮಾಡಿಟ್ಟಿದೆ ಎಂದರೆ ಇಂದು ಆ ಸಂಬಂಧಗಳಿಲ್ಲದೆ ಒಬ್ಬರ ಮುಖ ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ. ಅಂದರೆ ಇದು ನಮ್ಮ ನಮ್ಮಲ್ಲಿ ಪ್ರಬಲ ಸಂಘಟನೆ ಇಲ್ಲದೆ ಬೇರೊಬ್ಬರಿಗೆ ಒಂದು ರೀತಿಯ ನಾಗಾಡಿಕೆಯ ಪ್ರಸಂಗವನ್ನು ಎತ್ತಿ ತೋರಿಸುವಿಕೆಯಾಗಿದೆ.

ಅಂದರೆ ಇಬ್ಬರ ನಡುವೆ ಕಿಚ್ಚು ಹಚ್ಚಿ ಮೂರನೆಯವರು ಲಾಭ ಮಾಡಿಕೊಳ್ಳುವ ಒಂದು ಪ್ರಸಂಗ ಅಥವಾ ನೋಟವೆನ್ನಬಹುದು. ಅಂದರೆ ತಳಸಮುದಾಯಗಳನ್ನು ಮೇಲ್‌ಸ್ಥಾನದ ಎತ್ತರಕ್ಕೆ ಕೊಂಡೊಯ್ದು ಅವರನ್ನು ಬಾಯಿಮುಚ್ಚಿಸುವ ಹುನ್ನಾರು ಇಂದು ಒಂದು ಒಳರಾಜಕಾರಣವನ್ನು ಎತ್ತಿತೋರಿಸುವಂತದು. ಇದರಲ್ಲಿ ಒಳ್ಳೆಯದು ಕೆಟ್ಟದ್ದೂ ಅನ್ನುವುದಕ್ಕಿಂತ ನಮಗೆ ಹತ್ತಿರವಾದದ್ದು ದೂರವಾದದ್ದು ಯಾವುದು ಎಂಬುದರ ಬಗ್ಗೆ ತಿಳಿಯಬೇಕಾದು ದಾಗಿದೆ.

ಏಕೀಕೃತ ಸ್ಥಾನವನ್ನು ಕೊಡುವುದರ ಮೂಲಕ ತಳಸಮುದಾಯಗಳನ್ನು ಅತಂತ್ರ ಸ್ಥಿತಿಯಲ್ಲಿಟ್ಟು ಆ ಮುಖಾಂತರ ಅವರ ಜೀವನವನ್ನು ಹಾಳುಮಾಡುವುದಲ್ಲದೆ ಪರಸ್ಪರ ದ್ವೇಷ, ಅಸೂಯೆ, ಕೋಮು ದಳ್ಳುರಿಗಳನ್ನು ಸೃಷ್ಟಿಸಿ ತಳಸಮುದಾಯಗಳು ಮತ್ತು ಹಿಂದುಳಿದವರನ್ನು, ಮಹಿಳೆಯರನ್ನು ಅಧೋಗತಿಗಿಳಿಸಿ ಅವರ ಶ್ರಮವನ್ನು ಹಾಳುಮಾಡುವದಲ್ಲದೆ, ಅವರ ಜಮೀನನ್ನು ಕಸಿದುಕೊಳ್ಳುವಿಕೆಗೆ ಈ ಜಾಗತೀಕರಣ ಗೊತ್ತಿಲ್ಲದೆಯೇ ಈ ಕೆಲಸಕ್ಕೆ ದಾರಿಮಾಡಿಕೊಟ್ಟಿರುತ್ತದೆ. ಈ ನಮ್ಮ ತಳಸಮುದಾಯಗಳ ಜನರು ಹೆಂಡ ಮತ್ತು ದುಡ್ಡಿನ ಆಸೆಗೆ ಬಲಿಯಾಗಿ ತಮಗೆ ಗೊತ್ತಿಲ್ಲದೆಯೇ ತಾವೆ ಬಲಿಯಾಗಿರುತ್ತಾರೆ. ಇದಕ್ಕೆ ಕಾರಣ ಶಿಕ್ಷಣ ಇಲ್ಲದಿರುವಿಕೆ.

ತಮ್ಮ ಮಕ್ಕಳಿಗೆ ಇಂದಿಗೂ ಎಷ್ಟೋ ಸೌಲಭ್ಯಗಳಿರುವ ಶಾಲೆಗಳಿದ್ದರು ಶಿಕ್ಷಣ ಕೊಡಿಸದೆ ಗ್ಯಾರೇಜುಗಳಲ್ಲಿ, ಬಾರುಗಳಲ್ಲಿ, ಗಣಿಕೈಗಾರಿಕೆಯಲ್ಲಿ, ಹೋಟೆಲ್ಲುಗಳಲ್ಲಿ ಇಲ್ಲೆಲ್ಲಾ ನಾವು ಕಾಣುವುದು ಬರೀ ತಳಸಮುದಾಯದ ವರ್ಗದವರ ಮಕ್ಕಳನ್ನೇ ವಿನಃ ಯಾವ ಮೇಲ್ವರ್ಗದ ಮಕ್ಕಳನ್ನು ಕಾಣುವುದಿಲ್ಲ. ನಾವು ಮೊನ್ನೆಯವರೆಗೂ ಕಂಡಂತೆ ಮತ್ತು ಈಗಲೂ ಕಾಣುತ್ತಿರುವ ಪ್ರಸಂಗ ನಾವು ಯಾವುದಾದರೂ ಹೋಟೆಲ್ಲುಗಳಲ್ಲಿ ಹೋದಾಗ ಏ ತಮ್ಮ ನೀನು ಯಾವು ಜಾತಿಯವನು ಎಂದು ಕೇಳಿದಾಗ ಎಸ್.ಸಿ. ಅಥವಾ ಎಸ್.ಟಿ. ಎಂದು ಅಂದರೆ ಜಾತಿಯನ್ನು ಕೂಡ ಹೇಳಿಕೊಳ್ಳಲಾಗದ ಪ್ರಸಂಗವು ಇದೆ. ಅಂದರೆ ಸರ್ಕಾರವೇ ನೀನು ಈ ಕೆಲಸ ನೀನು ಈ ಕೆಲಸ ಎಂದು ಸೂಚಿಸಿರುವಾಗ ನಾವು ಊಹೆ ಮಾಡಲಿಕ್ಕೂ ಸಾಧ್ಯವಾಗದ ಪರಿಸ್ಥಿತಿ ಈ ಆಧುನಿಕತೆಯಲ್ಲಿ ಎತ್ತಿ ಕಾಣುತ್ತದೆ ಎನ್ನಬಹುದು.

ಅಂದರೆ ಇಂದಿಗೂ ತಳಸಮುದಾಯಗಳಲ್ಲಿ ಅಶಿಕ್ಷಿತೆ ರಾರಾಜಿಸುವುದನ್ನು ಈ ಹೋಟೆಲ್ಲುಗಳಲ್ಲಿ ಕೆಲಸ ಮಾಡುವ ಬಾಲ ಕಾರ್ಮಿಕತೆ-ಯಿಂದಲೇ ಕಂಡುಕೊಳ್ಳುವುದಾಗಿದೆ.

ಇನ್ನು ಕುಲಕಸುಬುಗಳನ್ನು ತೆಗೆದುಕೊಂಡಾಗ ಮೊದಲೆಲ್ಲ ಚಾಪೆಯಲ್ಲಿ ಈಚಲು ಚಾಪೆಗಳು ಮೈಗೂ ಹಿತ ಮತ್ತು ರಕ್ತ ಪರಿಚಲನೆಗೆ ಒಂದು ಸಹಾಯಕ ಸಾಧನವು. ಆದರೆ ಇಂದು ಪ್ಲಾಸ್ಟಿಕ್ ಚಾಪೆಗಳು ಬಂದಿರುವುದರಿಂದ ಈಚಲು ಚಾಪೆಯನ್ನು ನಂಬಿಕೊಂಡು ಬದುಕು ಸಾಗಿಸುವ

ತಳಸಮುದಾಯಗಳ ಬದಕು ಎಷ್ಟು ಸಮಸ್ಯೆಯನ್ನು ತಂದಿಟ್ಟಿರುವುದರ ಜೊತೆಗೆ ಅವರು ಯಾವುದನ್ನು ಅನುಸರಿಸಿಕೊಂಡು ಬದುಕಬೇಕೋ ಎನ್ನುವುದರ ಕಡೆಗೆ ಆಧುನೀಕರಣ ಗಮನ ಹರಿಸದಿರುವುದು ಒಂದು ಶೋಚನೀಯ ಸಂಗತಿ ಎನ್ನಬಹುದು.

ಇನ್ನು ಕೆಲವರು ಹೊಲಗಳಲ್ಲಿ ಕೂಲಿಯನ್ನೇ ಮಾಡಿ ಬದುಕುತ್ತಿರುವುದು ಹೆಣ್ಣಿಗೆ ಇಂತಿಷ್ಟು, ಗಂಡಿಗೆ ಇಂತಿಷ್ಟು ಎಂದು, ಕೆಲವರು ಕೃಷಿಯನ್ನೇ ಅವಲಂಬಿಸಿಕೊಂಡು ಬದುಕುತ್ತಿರುವುದು ಅಪ್ಪ ಹಾಕಿದ ಆಲದ ಮರಕ್ಕೆ ನೇತು ಬೀಳುವ ಮಗನ ಉದಾ. ಇಲ್ಲಿ ಕಾಣ ಬಹುದು.

ಅಂದರೆ ಆಡಂಬರದ ಬದುಕಿನತ್ತ ಸಾಗಿರುವ ತಳಸಮುದಾಯಗಳ ಬದುಕು ಅತ್ತ ಒಳ ಇರಲಾರದೇ, ಇತ್ತ ಹೊರಬರಲಾರದೇ ಅತ್ಯಂತ ಹೀನಾಯ ಸ್ಥಿತಿಯತ್ತ ಸಾಗುವಿಕೆಯಾಗಿದೆ.

ಇನ್ನು ಈಗೆಲ್ಲಾ ವುಲ್ಲನ್ ಶಾಲ್ ಅಥವಾ ವುಲ್ಲನ್ ರಗ್ಗುಗಳು ಬಂದಿರುವುದರಿಂದ ಕಂಬಳಿಯನ್ನು ಯಾರು ಕೇಳುವುದಿಲ್ಲ. ಕಂಬಳಿ ಬೆಚ್ಚನೆಯ ಹೊದಿಕೆಯಾದರೂ ಕೂಡ ಮೈಗೆ ಚುಚ್ಚುತ್ತದೆಂದು ವುಲ್ಲನ್ ಆದರೆ ಮೆತ್ತಗೆ ಇರುತ್ತದೆಂದು ಹೊದ್ದುಕೊಂಡರೂ ಚುಚ್ಚುವುದಿಲ್ಲವೆಂದು ಈ ಕಡೆಯತ್ತ ಮರಳುವ ಜನ ಮತ್ತು ಪಿಂಜಾರರು ಮಾಡಿದ ತಡೀ (ಹಾಸಿಗೆ)ಗಳನ್ನು ಮೊದಲೆಲ್ಲಾ ಹೇಳಿಸಿ ಮಾಡಿಸಿಕೊಂಡು ಹೋಗುತ್ತಿದ್ದರು. ಆದರೆ ಈಗೆಲ್ಲಾ curlon bedsಗಳು ಸಿಗುತ್ತಿರುವುದಲ್ಲದೆ ವಿವಿಧ ವಿನ್ಯಾಸಗಳಿಂದ ಮಾಡಿರುತ್ತಾರೆಂದು ಜನರೆಲ್ಲಾ ಅದನ್ನೇ ಕೊಂಡುಕೊಳ್ಳುವುದು ಅವರು ಮಾಡೋದು ಹತ್ತಿಯಿಂದಲೇ ಇವರು ಮಾಡದು ಹತ್ತಿಯಿಂದಲೇ ಆದರೂ ಕೂಡ ಜಾಗತೀಕರಣ ಮನುಷ್ಯನನ್ನು ಯಾವ ರೀತಿಗೆ ತಂದಿಟ್ಟಿದೆ ಎನ್ನುವುದು ಮತ್ತು ಈ ಹಾಸಿಗೆ ಮಾಡುವವರಿಗೆ ಕೆಲಸವಿಲ್ಲದೆ ಅವರು ಯಾವ ಹೋರಾಟಕ್ಕೂ ಸಜ್ಜಾಗದೇ ಒಂದು ವೇಳೆ ಸಜ್ಜಾದರೂ ಅದನ್ನು ಪರಿಶೀಲಿಸದಿರುವ ಆಶ್ವಾನೆಯ ಸರ್ಕಾರಗಳು ಇದನ್ನೆಲ್ಲಾ ಕಂಡಾಗ ತಳಸಮುದಾಯಗಳ ಬದುಕು ಮತ್ತು ಹಕ್ಕನ್ನು ಆಧುನಿಕ ಜಗತ್ತು ಹೇಗೆ ಕಬಳಿಸಿಕೊಂಡಿದೆ ಎನ್ನವುದು ಗೊತ್ತಾಗುತ್ತದೆ.

ಆಧುನೀಕತೆಯು ತಳಸಮುದಾಯಗಳ ಸ್ವಾಭಿಮಾನದ ಮನಸ್ಸನ್ನು ಕಿತ್ತುಹಾಕಿ ಉಪಭೋಗ ಸಂಸ್ಕೃತಿಯತ್ತ ಎಡೆಮಾಡಿಕೊಟ್ಟಿದೆ. ಉದಾ ೧೭ನೇಯ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಮೂಲಕ ಹುಟ್ಟಿದ ಬಂಡವಾಳಶಾಹಿ ವ್ಯವಸ್ಥೆಯು ಬೃಹತ್ ಕೈಗಾರಿಕೆ ಗಳನ್ನು ಸ್ಥಾಪಿಸಿತೊಡಗಿತು. ಇದರಿಂದ ಗೃಹಕೈಗಾರಿಕೆಗಳು ಕಡಿಮೆಯಾದವು ಎನ್ನಬಹುದು.

ಇನ್ನು ತಳಸಮುದಾಯಗಳ ಕಲೆಗಳತ್ತ ಹೊರಟಾಗಲೂ ಆಧುನಿಕತೆಯು ಕಲೆಗೆ ಸಂಬಂಧ ಪಟ್ಟಂತೆ ಪ್ರತಿಷ್ಠಿತ ಮಾದರಿಗಳನ್ನು ಸೃಷ್ಟಿಸಿದೆ ಎನ್ನಬಹುದು. ಈ ಪ್ರತಿಷ್ಠಿತ ಮಾದರಿಗಳು ಬಹುಮುಖ್ಯವಾಗಿ ವಾಣಿಜ್ಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಂತವುಗಳಾಗಿ ರುತ್ತವೆ.

ತಳಸಮುದಾಯಗಳ ಕಲೆಗಳ ಮಾದರಿಗಳನ್ನು ನೋಡಿದಾಗ ಎರಡು ಮುಖ್ಯ ಅಂಶಗಳ ಮುಖೇನ ನಮಗೆ ಗೊತ್ತಾಗುತ್ತೆ. ತಳಸಮುದಾಯಗಳ ಕಲೆಗಳಿಗೆ ತನ್ನದೇ ಆದ ಸ್ವಂತಸ್ತಿಕೆ ಇದ್ದು ಇದನ್ನು ಬೆಳೆಸುವಲ್ಲಿ ಇಲ್ಲಿನ ಸಮುದಾಯಗಳು ನಿರಂತರವಾಗಿ ಪಾಲುಗೊಂಡಿ ರುತ್ತವೆ. ಪ್ರತಿಷ್ಠಿತ ಮಾದರಿ ರಾಜ್ಯದ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನದಿಂದ ಹುಟ್ಟಿದ ಜೀವನ ಕ್ರಮವನ್ನು ತರುವಂತದ್ದು ಆಧುನಿಕತೆಯ ಈ ಕೆಂದ್ರೀಕರಣವು ಕಲೆಯನ್ನು ನಾಗರೀಕತೆಯ ಹೆಸರಿನಲ್ಲಿ ಪೊಳ್ಳುಗೊಳಿಸುತ್ತದೆ ಎನ್ನಬಹುದು.

ಹಲವಾರು ಪತ್ರಿಕೆಗಳಲ್ಲಿ ತಳಸಮುದಾಯದವರ ಬದುಕನ್ನು ಗಮನಿಸಿದಾಗ ಇಂದಿಗೂ ಇವರು ಸರ್ಕಾರದ ಸೌಲಭ್ಯದಿಂದ ಎಷ್ಟು ವಂಚಿತರಾಗುತ್ತಿದ್ದಾರೆ ಎನ್ನುವುದು ಊಹೆ ಮಾಡಲಿಕ್ಕೂ ಸಾಧ್ಯವಾಗದ ಪರಿಸ್ಥಿತಿ ಎನ್ನಬಹುದಕ್ಕಿಂತ ಅವರ ಬದುಕು ಒಂದು ಸಮಸ್ಯೆಯ ಸವಾಲಾಗಿ ಪರಿಣಮಿಸಿದೆ ಎನ್ನಬಹುದು. ಆರ್ಥಿಕವಾಗಿ, ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದಿರುವುದೇ ಅಲ್ಲದೆ ತಮ್ಮ ಮೂಲನೆಲೆಯತ್ತಲೇ ಇನ್ನು ಇರುವಿಕೆಯನ್ನು ನಾವು ಕಾಣುವುದಾಗಿದೆ.

ಇನ್ನು ಸ್ತ್ರೀಯರತ್ತ ಗಮನ ಹರಿಸಿದಾಗ ತಳಸಮುದಾಯಗಳ ಸ್ತ್ರೀಯರ ಬದುಕು ಯಾವ ರೀತಿ ಶೋಷಿತವಾಗುತ್ತಿದೆ ಎನ್ನುವುದು ಒಂದು ಪ್ರಶ್ನಾರ್ಥಕ. ಅಂದರೆ ಪುರುಷಶಾಹಿ ಅದರಲ್ಲೂ ಮೇಲ್ವರ್ಗಕ್ಕೆ ಪುರುಷಶಾಹಿ ವರ್ಗವು ಅವಳನ್ನು ಬಳಸಿಕೊಂಡು ಅವಳಿಗೆ ಸಾಮಾಜಿಕವಾಗಿ ಯಾವ ಭದ್ರತೆಯನ್ನು ಒದಗಿಸಿದೆ. ಅವಳಿಗೆ ಹೆಸರೇಳಲು ಅಂಜುವ ಒಂದು ಪಟ್ಟವನ್ನು ಕೊಟ್ಟು ಅವಳನ್ನು ತನ್ನ ಸ್ವಂತಿಕೆಗೆ ಬಳಸಿಕೊಳ್ಳುವುದು ಒಂದು ರೀತಿಯ ಹಿಂಸೆ ಅನ್ನುವುದಲ್ಲದೆ ಆಧುನಿಕ ಮಾಧ್ಯಮಗಳು ಅವಳನ್ನು ಸೌಂದರ್ಯಸ್ಪರ್ದೆ ಎನ್ನುವ ಹೆಸರಿನಲ್ಲಿ ಅವಳ ಅಂಗಾಂಗಗಳನ್ನು ಬೆಳೆಸುವ ತಾಂತ್ರಿಕತೆಯನ್ನು ಕಂಡು ಹಿಡಿದು ಈ ಆಧುನಿಕತೆಗೆ ಅವಳನ್ನು ಒಗ್ಗಿಸಿಕೊಂಡಿರುವಂತೆ, ಸಮೂಹ ಮಾಧ್ಯಮಗಳು ತಳಸಮುದಾಯದ ಸ್ತ್ರೀಯ ರನ್ನು ಒಪ್ಪಿಸುವ ಪ್ರಯತ್ನವನ್ನು ಮಾಡುತ್ತಿವೆ.

ಇನ್ನು ಆಧುನಿಕ ಜಗತ್ತಿನ ಮೀಸಲಾತಿಯ ಬದುಕು ತಳಸಮುದಾಯಗಳನ್ನು ಬುಡ ಮೇಲು ಮಾಡಿ ಒಣ ಆಡಂಬರದ ಬದುಕಿಗೆ ಈಡು ಮಾಡಿದೆ. ತಳಸಮುದಾಯಗಳಲ್ಲಿ ಇಂದಿಗೂ ಶಿಕ್ಷಣವಿಲ್ಲದೆ, ಅರೆ ಬರೆ ಕೆಲಸದಲ್ಲಿ ತೊಡಗಿಸಿಕೊಂಡು ಒಗ್ಗಟ್ಟಿಲ್ಲದ ಜೀವನ ವನ್ನು ಸರಿಯಾದ ಮಾಹಿತಿ ಇಲ್ಲದೆ ಕುಡಿದು ಹಾಳಾಗಿ ಜಗಳವಾಡಿ ಜೀವನ ಮಾಡುತ್ತಿದ್ದು ದನ್ನು ಇಂದಿಗೂ ಕಾಣುವುದಾಗಿದೆ.

ಜನಪರ ಕಾಳಜಿ ಇಲ್ಲದೆ ಸರ್ಕಾರಗಳು ತೆಗೆದುಕೊಳ್ಳುವ ನೀತಿ ನಿಯಮಗಳು ಆಧುನಿಕ ಜಗತ್ತಿನಲ್ಲಿ ಹೊಂದಿಕೊಳ್ಳುವ ಅನಿವಾರ್ಯತೆಗೆ ಬೇಕಾದ ಮಾರ್ಗಗಳು ತಿಳಿವಳಿಕೆ ಹೇಳುವ ಯಾವೊಂದು ಜವಾಬ್ದಾರಿಗಳನ್ನು ಸ್ವಯಂ ಸಮುದಾಯದ ಮುಂದಾಳುಗಳು ಹಾಗೂ ಸರಕಾರ ಗಳು ಕೈಗೊಳ್ಳದೇ ಇರುವುದು ಇನ್ನು ಈ ಸಮುದಾಯಗಳನ್ನು ದುಃಸ್ಥಿತಿಗೆ ದೂಡುವಂತೆ ಮಾಡಿದೆ ಎನ್ನಬಹುದಾಗಿದೆ.

ಒಟ್ಟಾರೆ ತಳಸಮುದಾಯಗಳ ಜಗತ್ತು ಆಧುನಿಕ ಹೊಡೆತಕ್ಕೆ ಸಿಕ್ಕು ಹೇಳಹೆಸರಿಲ್ಲದೆ ಬದುಕುವ ಪರಿಸ್ಥಿತಿ ಉಂಟಾಗಿದೆ. ಆಧುನಿಕ ಜಗತ್ತು ಅವರನ್ನು ಉತ್ತಮ ಜೀವನಕ್ಕೆ ಕೊಂಡೊಯ್ದು ಅವರನ್ನು ಅಭಿವೃದ್ದಿ ಸಾಗಿಸಬೇಕೇ ಹೊರತು ಅವರ ಜೀವನವನ್ನು ತುಳಿಯುವಂತಾಗಬಾರದು.

ಕೆಲವರು ಹೇಳಬಹುದು ಜಾಗತೀಕರಣಕ್ಕೆ ಹೊಂದಿಕೊಳ್ಳುವುದು, ಬಿಡುವುದು ಅದು ಅವರಿಷ್ಟ ಎಂದು ಹೇಳಲು ಸುಲಭ ಆದರೆ ಆಧುನಿಕ ಜಗತ್ತಿನ ಹಿಂದೆ ಒಳ ನೋಟದ ಬದುಕು ಯಾವ ಅತಂತ್ರ ಸ್ಥಿತಿಯಲ್ಲಿ ತೇಲಾಡುತ್ತಿದೆ ಎಂದು ಇನ್ನೊಂದು ಕಡೆ ಕಂಡು ಬರುವ ಚರ್ಚೆಗೆ ಆಸ್ಪದ ಮಾಡಿಕೊಡುತ್ತದೆ.

ಒಟ್ಟಾರೆ ಜಾಗತೀಕರಣವು ತಳಸಮುದಾಯಗಳನ್ನು ಸಮಸ್ಯೆಯಲ್ಲೇ ಸಿಲುಕಿಕೊಳ್ಳುವಂತೆ ಮಾಡಿ ಅವರನ್ನು ತಮ್ಮ ಹೂಟದ ಭಾಗವಾಗಿಸಿಕೊಂಡಿವೆ.

* * *

ನಾಯಕ ಪಾಳೆಯಗಾರರು ವಿಜಯನಗರವೆಂಬ ಜ್ಯೋತಿಗೆ ತೈಲವಾದವರು. ವಿಜಯನಗರ ದೇಹವಾಗಿದ್ದರೆ, ಅದರ ಪ್ರಾಣದಂತಿದ್ದವರು ನಾಯಕ ಪಾಳೆಯ ಗಾರರು.

**– ಪ್ರೊ. ಲಕ್ಷ್ಮಣ್ ತೆಲಗಾವಿ**

# ೧೧. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಇಂದು ವಿಶ್ವದಲ್ಲೆಡೆ ಜಾಗತೀಕರಣದ ಕುರಿತು ಹಲವಾರು ರೀತಿಯಲ್ಲಿ ಪರ ಮತ್ತು ವಿರೋಧ ಚರ್ಚೆಗಳೇರ್ಪಡುತ್ತಿವೆ. ಇಡೀ ಚರ್ಚೆಯೂ ಇದರ ತೀವ್ರತೆಯಿಂದಲೇ ಮುಂದುವರೆಯುತ್ತಿದೆ. ಅದರ ಅನಿವಾರ್ಯತೆ ಅಪಾಯಗಳೆರಡನ್ನೂ ಇಂದು ನಾವುಗಳು ಅರಿತುಕೊಳ್ಳಬೇಕಾಗಿದೆ. ಇನ್ನೊಂದು ಬಹುಮುಖ್ಯವಾದ ವಿಷಯವೆಂದರೆ ಆಧುನೀಕರಣದ ಪರ್ಯಾಯ ರೂಪವೇ ಜಾಗತೀಕರಣ, ಅದರಲ್ಲಿಯೇ ಬರುವಂತಹ ಔದ್ಯೋಗೀಕರಣ, ಕೈಗಾರಿಕೀಕರಣ ಮತ್ತು ಖಾಸಗೀಕರಣ ಇದರ ವಿಕೃತ ರೂಪುರೇಷೆಗಳೆಂದು ಹೇಳಬಹುದು.

ಈ ಪ್ರಬಂಧದ ಚರ್ಚೆಯಲ್ಲಿ ಪ್ರಮುಖವಾಗಿ ಆಧುನೀಕರಣದ ವಿಲಕ್ಷಣವಾದ ಮುಖ ವಾಡಗಳು ತಳಸಮುದಾಯಗಳ ಮೇಲೆ ಬೀರಿರುವಂತಹ ಪರಿಣಾಮಗಳನ್ನು ಕುರಿತು ಚರ್ಚಿಸಲು ಪ್ರಯತ್ನಿಸಿದ್ದೇನೆ. ಅದರಲ್ಲಿ ತಮ್ಮ ಜೀವನೋಪಾಯಕ್ಕೆ ದೈಹಿಕ ಶ್ರಮವನ್ನೇ ಬಂಡವಾಳ ಮಾಡಿಕೊಂಡು ಬದುಕು ಮುಂದುವರೆಸುತ್ತಿರುವ ಬುಡಕಟ್ಟು, ದಲಿತರು ಮತ್ತು ದಲಿತೇತರರನ್ನು ಒಳಗೊಂಡು ವಿಷಯವನ್ನು ಮುಂದುವರೆಸಿದ್ದೇನೆ. ಮೊದಲಿಗೆ ಆಧುನೀಕರಣ ವೆಂದರೆ ಯಾವ ರೀತಿ ಅರ್ಥೈಯಿಸಿಕೊಳ್ಳಬೇಕು ಎನ್ನುವುದನ್ನು ನೋಡೋಣ.

**ಆಧುನಿಕರಣದ ಅರ್ಥ (Meaning of modernisation)**

ಮಾನವನ ನೂತನ ಜೀವನಕ್ಕೆ ಸಂಬಂಧಪಟ್ಟ ಒಂದು ಮೌಲ್ಯ ಸೂಚಕ ಪದ. ಅದು ಸಮಾಜವೊಂದರಲ್ಲಿ ಉದ್ಭವಿಸುತ್ತಿರುವ ಸಾಮಾಜಿಕ ಪರಿವರ್ತನಾ ಪ್ರಕ್ರಿಯೆಯನ್ನು ಸಂಕೇತಿ ಸುವ ಪರಿಕಲ್ಪನೆಯಾಗಿದೆ. ಇದರ ಪ್ರಕಾರ ಹಳೆಯ ರೂಢಿ ಹಾಗೂ ಪರಂಪರೆಗಳ ಹಿಡಿತ ದಲ್ಲಿದ್ದ ಸಮಾಜವೊಂದು ಅದರಿಂದ ಹೊರಬಂದು ಆಧುನಿಕ ಪರಿಸ್ಥಿತಿಗಳು, ಜೀವನ ಕ್ರಮಗಳು, ನಂಬಿಕೆಗಳನ್ನು ಸ್ವೀಕರಿಸುವ ಹಾಗೂ ಅವುಗಳಿಗೆ ಅನುಗುಣವಾಗಿ ನಡೆದುಕೊಳ್ಳುವ ಪ್ರಯತ್ನವೊಂದನ್ನು ಸೂಚಿಸುವ ಪರಿಕಲ್ಪನೆಯಾಗಿದೆ, ಅದು ಜನರ ಇಡೀ ಜೀವನದಲ್ಲಿ ಆಗಿರುವ ಬದಲಾವಣೆಯನ್ನು ಎತ್ತಿ ತೋರಿಸುವದಾಗಿದೆ.

ಈ ಪ್ರಕ್ರಿಯೆಯು ಇವತ್ತಿನದಲ್ಲ ಅದು ವಾಸ್ಕೋ ಡಿ ಗಾಮ ಜಲಮಾರ್ಗದ ಮೂಲಕ ೧೪೯೮ರಲ್ಲಿ ಕ್ಯಾಲಿಕಟ್‌ಗೆ ಬಂದನೋ, ಅಂದಿನಿಂದ ಪಶ್ಚಿಮದ ವಿಧಿ-ವಿಧಾನಗಳು ನಮ್ಮ ಸಮಾಜ, ಸಮುದಾಯದ ಮೇಲೆ ಪ್ರಭಾವ ಬೀರಲು ಆರಂಭಿಸಿದವು. ಮುಂದೆ ಕೈಗಾರಿಕೀ ಕರಣ, ಉದಾರೀಕರಣ, ಹಾಗೂ ಖಾಸಗೀಕರಣ ಎಂಬ ಫೆಡಂಭೂತಗಳು ಬೃಹದಾಕಾರವಾಗಿ ವಿಸ್ತಾರಗೊಂಡು ಜಾಗತೀಕರಣದ ಸ್ವರೂಪ ಪಡೆದುಕೊಂಡವು. ಇಂಡಿಯಾದ ಗಣತಂತ್ರ ವ್ಯವಸ್ಥೆಯೂ ಈ ನೀತಿಗಳನ್ನು ಒಪ್ಪಿಕೊಂಡು ಡಬ್ಲೂ, ಟಿ,ಒ. ಒಪ್ಪಂದಕ್ಕೆ ಪಿ.ವಿ. ನರಸಿಂಹ ರಾವ್ ನೇತೃತ್ವದ ಕೇಂದ್ರ ಸರಕಾರ ಎಂದು ಸಹಿ ಹಾಕಿತೋ, ಅಂದೇ ಈ ನಾಡಿನ ತಳ ಸ್ತರದ ಸಮುದಾಯದ ಜನರ ಬದುಕಿಗೆ ಇತಿಶ್ರೀ ಹಾಡಿತು.

ಅತಿ ಮುಖ್ಯವಾಗಿ ಆಧುನೀಕರಣವು ಇಂಡಿಯಾದ ತಳಸಮುದಾಯಗಳ ವೃತ್ತಿಗಳನ್ನು ತನ್ನ ಉತ್ಪಾದನೆ ಮತ್ತು ಮಾರುಕಟ್ಟೆಯ ವಿಸ್ತರಣೆಯ ತಂತ್ರದಲ್ಲಿ ನಿಶ್ಯಕ್ತರನ್ನಾಗಿಸುತ್ತಿದೆ. ಅದರ ಜೊತೆಗೆ ಅರಣ್ಯ ಪ್ರದೇಶಗಳಲ್ಲಿ ಇರುವಂತಹ ಬುಡಕಟ್ಟು ಸಮುದಾಯದವರನ್ನು ಆಣೆಕಟ್ಟು, ರಬ್ಬರ್ ಬೆಳೆ, ಹಾಗೂ ತಮ್ಮ ವಿಲಾಸಿ ಜೀವನಕ್ಕೆ ಹೋಟೆಲ ಉದ್ಯಮ, ರೆಸಾರ್ಟ್‌ಗಳು, ಇನ್ನಿತರ ತೆರನಾದ ಸ್ವ ಹಿತಾಸಕ್ತಿಯ ಮುಖವಾಡ ಧರಿಸಿ ಅವರು ನೆಲೆ ನಿಂತಿರುವ ಪ್ರದೇಶಗಳನ್ನು ಭೂಮಿ ಹಕ್ಕು ಪತ್ರ ಹೊಂದಿಲ್ಲವೆಂದು ಸ್ಥಳ ಪಲ್ಲಟ ಗೊಳಿಸುತ್ತಿದ್ದಾರೆ. ಇಂತಹ ಹಲವಾರು ವಿಕೃತ ವೇಷಗಳೊಂದಿಗೆ ಸಮಾಜದ ಅತೀ ಕೆಳಮಟ್ಟ ದಲ್ಲಿರುವಂತಹ ಸಮುದಾಯಗಳ ಪರಿಸ್ಥಿತಿಯೂ ಅತಂತ್ರ ಪಡಿಸುವಂತಹ ಹುನ್ನಾರುಗಳು ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೇನೆ ತನ್ನ ಕಾರ್ಯ ಆರಂಭಿಸಿತು. ಇಡೀ ಭಾರತದಲ್ಲಿ ರಚನೆಯಾಗಿರುವ "ರೇಲ್ವೇ ಮಾರ್ಗಗಳನ್ನು ಒಮ್ಮೆ ಸೂಕ್ಷ್ಮವಾಗಿ ಆಲೋಚನೆ ಮಾಡಿ ಅದು ಆಯಾ ಪ್ರದೇಶಗಳಲ್ಲಿ ಖನಿಜ ಸಂಪತ್ತು, ಅರಣ್ಯ ಸಂಪತ್ತುಗಳನ್ನು ದೋಚುವ ಮಾರ್ಗಗಳು ಆಗಿವೆ ಹೊರತು, ಈ ದೇಶದ ಪ್ರಜೆಗಳನ್ನು ಉದ್ಧಾರ ಮಾಡಬೇಕೆನ್ನುವ ಹುನ್ನಾರದಿಂದಲ್ಲ. ಈ ತರಹದ ಅನೇಕ

ಪಶ್ಚಿಮಾತ್ಯ ಜಾಣತನಕ್ಕೆ ಕೆಳವರ್ಗಗಳು ತತ್ತರಿಸಿ ಹೋಗಿವೆ. ಮುಂದುವರೆದು ಅದಕ್ಕೆ ಪ್ರತ್ಯುತ್ತರವೆನ್ನುವಂತೆ ಪರ್ಯಾಯ ೃತ್ತಿಯನ್ನು ಹುಡುಕಿಕೊಂಡು ಹೋಗುವ ಅಲೆದಾಟ ಇತರೆ ಕುತಂತ್ರಕ್ಕೆ ಬಲಿಯಾಗುವಂತಹ ಸಂದರ್ಭಗಳು ಈ ನಾಡಿನ ತಳಸಮುದಾಯಗಳ ಪಾಲಿಗೆ ಮೃತ್ಯು ಸ್ವರೂಪದ್ದಾಗಿವೆ.

ಎರಡನೆಯದಾಗಿ ತಳಸಮುದಾಯಗಳು ಯಾವುವು. ಅವುಗಳನ್ನು ಯಾವ ಮಾನದಂಡಗಳ ಮೇಲೆ ಅರ್ಥೈಯಿಸಕೊಳ್ಳಬೇಕು ಮತ್ತು ನಿರ್ಧರಿಸುವಂತಹ ಪ್ರಮುಖ ಅಂಶಗಳು ಯಾವವು. ಪ್ರಸ್ತುತದಲ್ಲಿ ರಾಜಕಾರಣದ ಯಜಮಾನ್ಯ ವ್ಯವಸ್ಥೆಯಿಂದ ಎಂತಹ ಸಮುದಾಯಗಳು ಪ್ರತಿನಿಧಿಸುತ್ತಿವೆ. ಇಂತಹ ವ್ಯವಸ್ಥೆಯಿಂದಿರುವ ಕುಂತಂತ್ರ ಯಾರದು. ಈ ವಿಷಯಗಳನ್ನು ತಳಸಮುದಾಯಗಳು ಅರಿತುಕೊಂಡಿವೆಯಾ ಎನ್ನುವಂತಹ ಪ್ರಶ್ನೆಯೂ ನಮ್ಮುಂದೆ ಬಹುದೊಡ್ಡ ಸವಾಲಾಗಿ ನಿಲ್ಲುತ್ತದೆ ಮತ್ತು ಇದೇ ಪ್ರಕ್ರಿಯೆಯು ಮುಂದುವರೆದರೆ ಸಮಾಜ ದಲ್ಲಿ ಅಸಮಾನತೆ ತಲೆದೂರಿ ಬಹುದೊಡ್ಡ ಕ್ರಾಂತಿಗೆ ನಾಂದಿಯಾಗಬಹುದು.

ನಮ್ಮ ಸಮಾಜದಲ್ಲಿ ಬಹುದೀರ್ಘ ಕಾಲವಧಿಯಿಂದಲೂ ಬದುಕುತ್ತಿರುವ ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳಾದ ಕುಂಬಾರರು, ಹಾಗೂ ನೇಕಾರರು, ಅಕ್ಕಸಾಲಿಗರು, ಮತ್ತು ಕಂಬಾರರು ಇತರೆಲ್ಲರೂ ಸಹ ಇಂದಿನ ಆಧುನಿಕ ಜಗತ್ತಿನ ಪ್ರಕ್ರಿಯೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಇಲ್ಲಿ ಯಾಕೆ ಎನ್ನುವ ಪ್ರಶ್ನೆಯೂ ಬರುತ್ತದೆ. ಕ್ಷಣ-ಕ್ಷಣಕ್ಕೂ ಆಧುನಿಕ ಪ್ರಭಾವದಿಂದ ಸಮಾಜವು ಪರಿವರ್ತನೆಗೊಂಡು ಮುಂದುವರೆ ಯುತ್ತಿದೆ. ಇಂತಹ ಪರಿವರ್ತನೆಯ ಅಲೆಯ ಹಸಿವನ್ನು ತಣ್ಣಗಾಗಿಸಲು ತಳಸಮುದಾಯಗಳ ಕುಲಕಸುಬುಗಳು ಎದುರು ನಿಲ್ಲದೆ ನಿಷ್ಕ್ರಿಯಗೊಳ್ಳುತ್ತಿವೆ.

**ಪ್ರಸ್ತುತ ಸಮಯದಲ್ಲಿ ತಳಸಮುದಾಯಗಳು**

ಇವತ್ತಿನ ಕೈಗಾರಿಕೀಕರಣ, ನಗರಿಕೀಕರಣ, ಮತ್ತು ಖಾಸಗೀಕರಣದ ಮುಂದುವರೆದ ಜಾಗತೀಕರಣದ ಆರ್ಭಟದಲ್ಲಿ ಕೆಳಸ್ತರದ ಸಮುದಾಯಗಳಾದ ನೇಕಾರರು ತಮ್ಮ ವಂಶ ಪರಂಪರೆ ವೃತ್ತಿಯಾದ ನೇಕಾರಿಕೆಯನ್ನು ಬಿಟ್ಟು, ಇವತ್ತಿನ ಕಾಟನ್ ಮಿಲ್‌ಗಳಲ್ಲಿ ದಿನಗೂಲಿ ಕಾರ್ಮಿಕರಾಗಿ ಶ್ರಮವಹಿಸುವ ಪರಾವಲಂಬಿ ಜೀವನ ಇವರದಾಗಿದೆ. ಒಂದು ವೇಳೆ ನಗರ ಪ್ರದೇಶಗಳಿಗೆ ಕುಟುಂಬದ ಮಡಿ ಮೈಲಿಗೆ ಕಲ್ಪನೆಯಿಂದ ಹೋಗದೆಯಿದ್ದ ಸಮಯದಲ್ಲಿ ಅನಿವಾರ್ಯವಾಗಿ ಕೃಷಿ ಕೂಲಿ, ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳವಂತಹ ಅವಶ್ಯಕತೆಯೂ ಇಂದು ತೀವ್ರತೆರನಾಗಿದೆ. ಈ ರೀತಿಯ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಮಾನಸಿಕವಾಗಿ ಸಿದ್ಧರಿಲ್ಲದಿದ್ದರೂ ಸಹ ಜೀವನದ ಮುಂದುವರಿಕೆಗಾಗಿ ಅನಿವಾರ್ಯವಾಗಿದೆ.

ತಮ್ಮ ವಂಶ ಪರಂಪರೆಯಿಂದ ಕ್ರಿಯಾತ್ಮಕವಾಗಿ ಮುಂದುವರೆದುಕೊಂಡು ಬಂದಂತಹ ಕೈಮಗ್ಗಗಳು ಇಂದು ಮೂಲೆಗುಂಪಾಗಿವೆ, ಇವರ ವೃತ್ತಿಯನ್ನು ಮರು ಜೀವಗೊಳಿಸುವ ಪ್ರಯತ್ನವನ್ನು ಪ್ರಜಾತಂತ್ರ ಸರ್ಕಾರವು ತನ್ನ ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದಲ್ಲಿ ಅಲ್ಪ-ಸ್ವಲ್ಪ ಹಣ ಮೀಸಲಿಡಿಸಿದರೂ ಸಹ ಆ ಹಣವು ಯಾರೋ ಪ್ರಭಾವಿ ಮಂತ್ರಿ ಮಹೋದಯರ ಪಾಲು ಆಗುವಲ್ಲಿ ಸಂಶಯವಿಲ್ಲ. ಇಂತಹ ಅನೇಕ ಕಾರಣಗಳಿಂದ ನೇಕಾರರು ಮತ್ತು ಅವರ ವೃತ್ತಿಯೂ ವಿನಾಶದ ಅಂಚಿಗೆ ತಲುಪುತ್ತಿದೆ. ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಇನ್ನಿತರ ಪರದೆಗಳಿಂದ ಇನ್ನಷ್ಟು ದೂರ ಪಯಣ ಮಾಡುತ್ತಿದ್ದಾರೆ. ಕೆಳಸ್ತರದ ಸಮುದಾಯಗಳನ್ನು ಕುರಿತು ಇಂದಿನ ರಾಜಕಾರಣಗಳು, ತಮ್ಮ ಗೆಲುವಿಗಾಗಿ ಉಪಯೋಗಿಸಿಕೊಂಡು ತಿಂದು ಎಸೆದ ಬಾಳೆ ಹಣ್ಣಿನ ಸಿಪ್ಪೆತರಹ ಮಾಡುವಲ್ಲಿ ಸಫಲತೆ ಹೊಂದಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇವರಂತೆ ಕುಂಬಾರರು ಸಹ ಇವತ್ತಿನ ಸಂದರ್ಭದಲ್ಲಿ ಆಧುನಿಕ ಮಾರುಕಟ್ಟೆಯ ವ್ಯವಸ್ಥೆ ವಿರುದ್ಧ ತಮ್ಮ ಪರಂಪರೆ ವೃತ್ತಿಯಾದ ಮಣ್ಣಿನ ಮಡಿಕೆ, ಪಾತ್ರೆಗಳ ತಯಾರಿಕೆ ಕ್ರಮವು ಎದುರುಗೊಳ್ಳುತ್ತಿಲ್ಲ. ಯಾಂತ್ರೀಕರಣದಿಂದ ತಯಾರಿಸಿದಂತಹ ಪ್ಲಾಸ್ಟಿಕ್ ಪಾತ್ರೆ ಗಳು

ಮಾರುಕಟ್ಟೆಗೆ ಪ್ರವೇಶ ಮಾಡಿ ಇವರ ಕುಲಕಸುಬನ್ನು ಹಿಂದಿಕ್ಕಿದೆ. ಅಂದರೆ ಕುಂಬಾರರು ಇದೇ ವೃತ್ತಿಯಲ್ಲಿಯೇ ಮುಂದುವರೆಯಬೇಕು ಎನ್ನುವುದು ನನ್ನ ವಾದವಲ್ಲ. ಅದೇ ಆದಿಮ ಪರಿಸ್ಥಿತಿಯಲ್ಲಿ ಜೀವಿಸಬೇಕು ಎಂದು ಹೇಳುವುದಿಲ್ಲ. ಇವರ ಪಾತ್ರೆಗಳ ತಯಾರಿಕೆ ಕ್ರಮವನ್ನು ಹಾಗೂ ಉತ್ಪಾದನಾ ಸಲಕರಣೆಗಳನ್ನು ಸರಕಾರವು ಬದಲಾಯಿಸಬೇಕು. ಯಾವುದೋ ವಿದೇಶಿ ಕಂಪನಿಗಳಿಗೆ ಬೃಹತ್ತಾದ ಭೂಮಿಯನ್ನು ನೀಡಿ, ಅದು ಸಿದ್ಧಪಡಿಸುವ ವಸ್ತುಗಳಿಗೆ ತೆರಿಗೆ ವಿನಾಯಿತಿ ನೀಡುವುದರ ಜೊತೆಗೆ ಮುಕ್ತ ಮಾರಾಟಕ್ಕೆ ಅವಕಾಶ ನೀಡುವುದು ಅಷ್ಟೊಂದು ಸರಿಯಾದ ಕ್ರಮವಲ್ಲ.

ಇಂತಹ ಮುಂದಾಲೋಚನೆಯಿಲ್ಲದ ಕ್ರಮಗಳಿಂದ ಶತಮಾನಗಳಿಂದ ದೇಶಿಯ ಮಣ್ಣಿನಲ್ಲೆ ಹುಟ್ಟಿ, ಅದೇ ಮಣ್ಣನ್ನು ಹದಮಾಡಿ ಜನರ ಬೇಡಿಕೆಗೆ ಅನುಗುಣವಾಗಿ ಪಾತ್ರೆ ಗಳನ್ನು ಸಿದ್ಧಪಡಿಸಿ ಅದರಿಂದ ಬಂದಂತಹ ಪ್ರತಿಫಲದಿಂದ ತಮ್ಮ ಜೀವನವನ್ನು ಕಟ್ಟಿ ಕೊಂಡು ಬಾಳುತ್ತಿರುವವರ ಬದುಕು ಏನಾಗಬೇಕು ಮತ್ತು ಈಗ ಅವರ ಸ್ಥಿತಿಯು ಯಾವ ರೀತಿಯಾಗಿದೆಂಬುದು ಸ್ವಲ್ಪವಾದರೂ ಸರಕಾರ, ಅಧಿಕಾರಿಗಳು, ರಾಜಕಾರಣಿಗಳು ಯೋಚಿಸ ಬೇಕಾಗಿದೆ. ಈ ತರಹದ ಹಲವಾರು ತಳಸಮುದಾಯಗಳು ಸಂಕಷ್ಟಕ್ಕೆ ಒಳಪಟ್ಟಿವೆ. ಅದರಲ್ಲಿ ಬೇಡ ಬುಡಕಟ್ಟು ಸಮುದಾಯವು ಒಂದು.

**ಐತಿಹಾಸಿಕ ಸ್ಥಿತಿ**

ನಾಯಕರ ಐತಿಹಾಸಿಕ ಪರಂಪರೆ ಅದ್ಭುತವಾದುದು. ಅವರು ಕೋಟೆಕೊತ್ತಲ, ಕೆರೆ ಕಾಲುವೆ ಕಟ್ಟಿಸಿ ಸ್ವದೇಶ, ಸ್ವಧರ್ಮ ರಕ್ಷಣೆಗಾಗಿ ಹೋರಾಡಿ ರಾಜ್ಯ, ಸಾಮ್ರಾಜ್ಯ ಸ್ಥಾಪಿಸಿ ನಾಡಸೇವೆಗೈದವರು, ಬಲಿದಾನ ಮಾಡಿದವರು, ಸೋತು ಸುಣ್ಣವಾದವರು, ಈ ಪ್ರಜ್ಞೆ ನಾಯಕರಿಗೆ ಇದ್ದರೆ ತಮ್ಮ ಏಳಿಗೆಗೆ ಪಣತೊಡುತ್ತಾರೆ. ನಾಯಕರ ಇಂದಿನ ಹೀನ ಸ್ಥಿತಿಗೆ ಈ ಐತಿಹಾಸಿಕ ಕಾರಣವೂ ಒಂದೆಂದು ಬಗೆದು ಮುಂದುವರಿದ ಸಮಾಜಗಳ ನಾಯಕರು ಹಿತವರ್ಧನೆಗೆ ಕೈಗೂಡಿಸಬೇಕಾಗಿದೆ. ತಮ್ಮ ಇತಿಹಾಸವನ್ನು ಅರಿಯದವರು ಭವಿಷ್ಯವನ್ನು ರೂಪಿಸಲಾರರು ಎಂಡು ಡಾ. ಅಂಬೇಡ್ಕರ್ ಹೇಳಿದ್ದಾರೆ. ಆದರೆ ಇತ್ತೀಚೆಗೆ ನಾಯಕರ ಚರಿತ್ರೆಯನ್ನು ಇತರ ಸ್ವಾರ್ಥಿಗಳು ಕಸಿದುಕೊಳ್ಳುತ್ತಿದ್ದಾರೆ. ಉದಾ. ಹಕ್ಕಬುಕ್ಕ, ಕನಕದಾಸ, ಈಗ ಇತಿಹಾಸ ನಿರ್ಮಿಸಲಾರದ ನಾವು ನಮ್ಮ ಪೂರ್ವಜರ ಇತಿಹಾಸವನ್ನಾದರೂ ಉಳಿಸಿ ಕೊಳ್ಳಬೇಕಲ್ಲ. ಈ ಸವಾಲನ್ನು ಧೀರ ನಾಯಕರು ಸ್ವೀಕರಿಸುವರೆ ನಾಯಕರ ಇತಿಹಾಸ, ರಾಜ್ಯ, ಐತಿಹಾಸಿಕ ಸ್ಥಳಗಳು, ಧಾರ್ಮಿಕ ಕ್ಷೇತ್ರಗಳು, ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದ ವ್ಯಕ್ತಿಗಳ ಚಿಕ್ಕಚಿಕ್ಕ ಪರಿಚಯ ಪುಸ್ತಕಗಳನ್ನು ಯೋಗ್ಯದರದಲ್ಲಿ ಪ್ರಕಟಿಸಿ ಪ್ರಾಸಾರ ಮಾಡಬೇಕು.

**ಶೈಕ್ಷಣಿಕ ಸಮಸ್ಯೆ**

ಈ ಕಾಲದಲ್ಲಿ ಎಸ್.ಎಸ್.ಎಲ್.ಸಿ. ವರೆಗಾದರೂ ಎಲ್ಲ ಮಕ್ಕಳಿಗೆ ಸಾಮಾನ್ಯ ಶಿಕ್ಷಣ ಬೇಕು. ಆದರೆ ನೌಕರಿ ನಿರೀಕ್ಷಿಸದೆ ಸ್ವಂತ ಉದ್ಯೋಗದ ಗುರಿ ಇರಬೇಕು. ಚಿಕ್ಕ ಚಿಕ್ಕ ಸಮಾಜಗಳು ಸಹ ತಮ್ಮ ದೊಡ್ಡ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮವರಿಗೆ ಹೆಚ್ಚು ಅವಕಾಶ ಕೊಡುತ್ತಾರೆ. ಈ ವಿಷಯದಲ್ಲಿ ವಾಲ್ಮೀಕಿ ಸಮಾಜ ಬಹಳ ಹಿಂದಿದೆ. ವೈಜ್ಞಾನಿಕ, ತಾಂತ್ರಿಕ ಶಿಕ್ಷಣ, ವೃತ್ತಿ ಶಿಕ್ಷಣಗಳಿಗೆ ಹೆಚ್ಚು ಗಮನಕೊಡಬೇಕಾಗಿದೆ. ಇದು ಸ್ಪರ್ಧಾಯುಗ. ಕೇವಲ ಬಿಜಾಪುರ, ಗುಲಬರ್ಗಾ ಜಿಲ್ಲೆಗಳಲ್ಲೇ ಬಂಜಾರ ಸಮಾಜ ನಡೆಸುವ ೬೦ ಶಾಲೆಗಳಿವೆ.

**ಆರ್ಥಿಕ ಪರಿಸ್ಥಿತಿ**

ವಾಲ್ಮೀಕಿ ಸಮುದಾಯದ ಶೇ. ೭೦ ಜನರಿಗೆ ಅಲ್ಪಸ್ವಲ್ಪ ಆಸ್ತಿ, ಜಮೀನು ಇರುತ್ತದೆ. ಆದರೆ ಕುಟುಂಬ ನಿರ್ವಹಣೆಗೆ, ಹೆಚ್ಚಿನ ಅಭಿವೃದ್ಧಿಗೆ ಸಾಕಾಗುವಷ್ಟು ಆಸ್ತಿ ಇದ್ದವರು ಬಹಳ ಕಡಿಮೆ. ಬಯಲು ಸೀಮೆಯಲ್ಲಿ ಭೂವಿಯ ಉತ್ಪನ್ನ ನೆಚ್ಚುವಂತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಕೆಲವರು

ನೌಕರಿ ಸೇರಿ ಸುಧಾರಿಸುತ್ತಿದ್ದಾರೆ. ಮಿಕ್ಕವರೆಲ್ಲ ಕೂಲಿ, ಕೆಳದರ್ಜೆ ಸೇವೆ ಮಾಡುತ್ತಾರೆ. ಮುಸಲ್ಮಾನರಂತೆ ಕೈಗಾರಿಕೆ, ವ್ಯಾಪಾರ, ತಾಂತ್ರಿಕ ಕೆಲಸಗಳಿಂದ ವಾಲ್ಮೀಕಿಗಳು ಸ್ವಾವಲಂಬಿಗಳಾಗುವುದನ್ನು ಕಲಿಸಬೇಕಾಗಿದೆ. ಆಲಸ್ಯ ದುಂದುವೆಚ್ಚ, ದುಶ್ಚಟ ಗಳಿಂದಲೂ ಇವರ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಇವರಲ್ಲಿ ಉಳಿತಾಯ, ಪ್ರವೃತ್ತಿಯೂ ಬಹಳ ಕಡಿಮೆ. ಸರಕಾರದಿಂದ ದೊರೆಯುವ ಆರ್ಥಿಕ ಸವಲತ್ತು, ತರಬೇತಿಗಳ ಮಾಹಿತಿ ಇಲ್ಲದಷ್ಟು ಇವರು ಅಜ್ಞಾನಿಗಳಾಗಿದ್ದಾರೆ. ಇವರಿಗೆ ಕಳೆದ ೧೦೦ ವರ್ಷಗಳಿಂದ ಆನುವಂಶಿಕ ಉದ್ಯೋಗವೆಂಬುದಿಲ್ಲ. ಇದಕ್ಕೆ ಐತಿಹಾಸಿಕ ಕಾರಣವಿದೆ. ಆರ್ಥಿಕ ಜಡತ್ವವನ್ನು ಕಿತ್ತುಹಾಕು ವುದೇ ಒಂದು ದೊಡ್ಡ ಸವಾಲು.

**ಸಾಮಾಜಿಕ ಸ್ಥಿತಿ**

ಬಡತನ ನಿರಕ್ಷರತೆಯಿಂದಾಗಿ ಬಹುಪಾಲು ಜನರನ್ನು ಕೀಳರಿಮೆ ಕಾಡುತ್ತಿದೆ. ಮೂಢ ನಂಬಿಕೆಗಳೂ ಸಾಕಷ್ಟಿವೆ. ವೈಚಾರಿಕ ಜಾಗೃತಿ ಇಲ್ಲ. ಹುಂಬತನ, ತಿಳಿಗೇಡಿತನಗಳಿಂದ ಇವರು ಒರಟರೆನಿಸಿಕೊಂಡಿದ್ದಾರೆ. ಆದ್ದರಿಂದ ಅಜ್ಞಾನ ಹೋಗಲಾಡಿಸಿ ಪೂರ್ವಜರ ಸಾಧನೆ ಗಳ ಪರಿಚಯ ಮಾಡಿಕೊಟ್ಟರೆ, ಶಿಕ್ಷಣ ನೀಡಿದರೆ ಬಾಳುವಂತರಾಗಿ ಸಮಾಜದಲ್ಲಿ ಗೌರವ ಯುತವಾಗಿ ಬಾಳಬಲ್ಲರು. ಇವರಲ್ಲಿ ಒಕ್ಕಟ್ಟು ಇಲ್ಲದಿರುವದೂ ಒಂದು ಕೊರತೆ United we stand, divided we fall ಎಂಬುದರ ಮನವರಿಕೆ ಆಗಬೇಕು. ಈ ಮಾತಿಗೆ ಹಲವಾರು ಉದಾಹರಣೆ ಕೊಡಬಹುದು. ಈ ಸಮಾಜದಲ್ಲಿ ಸ್ವಚ್ಛತಾ ಪ್ರಜ್ಞೆಕಡಿಮೆ. ಈ ಮಾತಿಗೆ ಹಲವಾರು ಉದಾಹರಣೆ ಕೊಡಬಹುದು. ಈ ಸಮಾಜದಲ್ಲಿ ಸ್ವಚ್ಛತಾ ಪ್ರಜ್ಞೆ ಕಡಿಮೆ. ವೈಯಕ್ತಿಕ ಹಾಗೂ ಕೌಟುಂಬಿಕ ಮಟ್ಟದಲ್ಲಿ ಮತ್ತು ಓಣಿಕಟ್ಟುಗಳಲ್ಲಿ ಸ್ವಚ್ಛತೆಗೆ ಪ್ರಾಧಾನ್ಯ ನೀಡಿದರೆ, ಸಾಮಾಜಿಕ ಸ್ಥಾನಮಾನವೂ ಹೆಚ್ಚುತ್ತದೆ. ಸ್ವಚ್ಛತೆ ಇಲ್ಲದವರನ್ನು ಸಾಮಾನ್ಯವಾಗಿ ಕೀಳಾಗಿ ಕಾಣಲಾಗುವುದು. ಬಡಲಿಂಗಾಯಿತರು, ಬ್ರಾಹ್ಮಣರು ಕೂಡ ಬೆಳಿಗ್ಗೆ ಸ್ನಾನ ಮಾಡಿ, ನಾಮ ವಿಭೂತಿ ಧರಿಸಿ, ಮಡಿ ಬಟ್ಟೆಧರಿಸಿ, ಹೊರಹೋಗುವ ಪರಂಪರೆ ಹೊಂದಿದ್ದಾರೆ Cleanliness is nest to the godlines ಎನ್ನುವ ಮಾತು ಅರ್ಥಗರ್ಭಿತವಾಗಿದೆ.

**ಧಾರ್ಮಿಕ ಸ್ಥಿತಿ**

ಇತರ ಹಿಂದುಳಿದ ವರ್ಗದವರಲ್ಲಿಯಂತೆ ನಾಯಕರಲ್ಲೂ ಧರ್ಮ, ದೇವರ ಹೆಸರಿನಲ್ಲಿ ಹಲವಾರು ಅರ್ಥಹೀನ ಆಚರಣೆ, ನಂಬಿಕೆಗಳು ಬೆಳೆದಿವೆ. ಕೆಲವು ಸಲ ಹುಚ್ಚಾಟಗಳೇ ಮೆರೆಯುತ್ತವೆ. ಇದಕ್ಕಾಗಿ ಸಮಯ, ಹಣ, ಶ್ರಮ ಪೋಲಾಗುತ್ತವೆ. ಆದರೆ ಪ್ರಗತಿ, ಸರಳ ಪೂಜಾ ವಿಧಾನ ರೂಢಿಸುವದು ಅವಶ್ಯ. ಸದ್ಭಾವನೆ, ಸೌಹಾರ್ಧತೆ, ತಾಳ್ಮೆ, ಪ್ರೀತಿಗಳನ್ನು ಬೆಳೆಸುವ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪರೋಪಕಾರ, ಮಾನವ ಸೇವೆ ನಿಜವಾದ ಪೂಜೆ ಎಂಬ ಪರಿಕಲ್ಪನೆ ಬೆಳೆಸಬೇಕಾಗುತ್ತದೆ. God helps those who help them selves ಎಂಬುದು ಇಂಗ್ಲಿಷಿನಲ್ಲಿಯ ಮಾತು. ಬುದ್ಧ, ಬಸವಣ್ಣನವರ ತತ್ತ್ವಗಳ ಆಚರಣೆಗೆ ಒತ್ತು ಕೊಡಲು ಕಲಿಸಬೇಕು. ಈ ಸಮಾಜಕ್ಕೆ ಮೊದಲು ಪಾರಂಪರಿಕ ಮಠಾಧೀಶರಿರಲಿಲ್ಲ. ಇತ್ತೀಚೆಗೆ ವಾಲ್ಮೀಕಿ ಗುರುಪೀಠ ಸ್ಥಾಪಿತ ವಾಗಿದ್ದು ಅದನ್ನು ಬೆಳೆಸಬೇಕಾಗಿದೆ. ಶಿವ, ವಿಷ್ಣು ಬೇಧವಿಲ್ಲದೆ ಇರುವುದು, ಮದುವೆ ಮತ್ತು ಅಂತ್ಯ ಸಂಸ್ಕಾರಗಳಲ್ಲಿ ಪುರೋಹಿತ, ಜಂಗಮರನ್ನು ಅವಲಂಬಿಸಿದೆ ಅಂಥಕಾರ್ಯ ಗಳಿಗೆ ಸಮಾಜದ ವ್ಯಕ್ತಿಗಳನ್ನು ತಯಾರಿಸುವ ಸಂಪ್ರದಾಯ ಬೆಳೆಯಬೇಕಾಗಿದೆ. ಅರ್ಹರಾದ ಪುರೋಹಿತ, ಜಂಗಮರೂ ಇತ್ತೀಚೆಗೆ ಅಲಭ್ಯರಾಗುತ್ತಿದ್ದಾರೆ.

* * *

**ಹಲಗಲಿ ಬೇಡರು**

ದಂಡ ಬಂತ ನೋಡ ತಯಾರ್ಆಗಿ

ಜಲದ ಮಾಡಿ ಬಂತ ಹಲಗಲಿಗಿ

ಅರ ತಾಸ ರಾತ್ರ್ಯಾಗ ಹೋಗಿ
ಊರಿಗಿ ಹಾಕಿದಾರ ಮುತ್ತಿಗಿ

ಗುಂಡ ಹೊಡದಾರ ವಿಪರೀತ ಸೂರಿ ಆಗಿ
ಅಂಜಿ ವೋಡಾಕ್ ಹತ್ತಿತ ಮುಂದ್ ಆಗಿ

ಬೆನ್ನ ಹತ್ತಿ ನೋಡಿದಾರ ಇವರ್ ಆಗಿ
ಬಿದ್ದಾವ ಹೆಣಗೋಳು ಸೂರಿ ಆಗಿ ||ಯೇರ||

ಮುತ್ತಿಗಿ ಹಾಕಿ ಅವರು ಕತ್ತಿಲಿ ಕಡದರ ಅಂಜಲಿಲ್ಲ ಯಾತ್ ಎತಕ

## ೧೩. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಭಾರತ ಬಹು ಸಂಸ್ಕೃತಿಯ ಬೀಡು. ಇಲ್ಲಿರುವ ನೆಲ ಜಲ ಮತ್ತು ಪರಿಸರ ತನ್ನದೆ ಯಾದ ಅಸ್ತಿತ್ವವನ್ನು ಇಟ್ಟುಕೊಂಡು ಇತರೆ ದೇಶಗಳಿಗೆ ಸಂಪತ್ತಿನ ಕೇಂದ್ರವಾಗಿ ಗೋಚರಿಸುತ್ತಿದೆ. ಈ ಹಿನ್ನೆಲೆಯಿಂದ ವಿದೇಶಿಯರು ಒಂದಲ್ಲಾ ಒಂದು ಕಾರಣದಿಂದ ಭಾರತಕ್ಕೆ ಬಂದು ತಮ್ಮದೆಯಾದ ಪ್ರಭಾವವನ್ನು ಬೀರಿರುವುದು ನಿಜ ಸಂಗತಿಯಾಗಿದೆ.

ಪ್ರಾಚೀನ ಆರ್ಯರ ಕಾಲದಿಂದ ಇಲ್ಲಿಯವರೆಗಿನ ಅಧ್ಯಯನಗಳ ಹಿನ್ನೆಲೆಯಲ್ಲಿ ಅವಲೋಕಿಸಿದರೆ ತಳಸಮುದಾಯಗಳು ಅನೇಕ ಸಮಸ್ಯೆಗಳಿಂದ ಬಳಲುತ್ತಿರುವುದು ತಿಳಿಯುತ್ತದೆ. ಭಾರತ ವಿವಿಧ ಜಾತಿಗಳ ಸಂಗಮವಾಗಿದ್ದು ತನ್ನದೆಯಾದ ಭೌಗೋಳಿಕ ಲಕ್ಷಣಗಳನ್ನು ಹೊಂದಿ ಭಿನ್ನ ಭಿನ್ನವಾದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮೈಗೂಡಿಸಿಕೊಂಡು ಜಾನಪದೀಯ ಸಾಂಸ್ಕೃತಿಕ ತವರೂರು ಭಾರತ ಎನ್ನುವ ಹಿನ್ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಇಟ್ಟುಕೊಂಡು ಮಾನವೀಯ ಮೌಲ್ಯಗಳನ್ನು ಸಾರುತ್ತಿರುವ ದೇಶದಲ್ಲಿ ಆಧುನಿಕತೆ ಮತ್ತು ತಳಸಮುದಾಯ ಗಳನ್ನು ಮುಖಾಮುಖಿ ಮಾಡಿದರೆ ಆಧುನಿಕ ಜಗತ್ತು ಎಷ್ಟರ ಮಟ್ಟಿಗೆ ತಳಸಮುದಾಯಗಳಿಗೆ ಪೂರಕವಾಗಿದೆ ಎಂಬುದು ಇಲ್ಲಿ ಚರ್ಚೆಯ ವಿಷಯವಾಗುತ್ತದೆ.

ಆಧುನೀಕತೆಯೆಂದರೆ ಯಾವುದೇ ಸಮುದಾಯದ ಮನಸ್ಸುಗಳಿಗೆ ತಮ್ಮ ಬದುಕಿಗೆ ಅನುಗುಣವಾಗಿ ನೆರವಿನ ಆಲೋಚನೆಗಳು ಬಂದವು ಎಂದರೆ ಅದು ಆಧುನೀಕತೆಯಾಗುತ್ತದೆ. ಆದರೆ ದೇಶಿಯ ಸಂಸ್ಕೃತಿಯಲ್ಲಿ ಪರಿವರ್ತನೆ, ಸಾಂಪ್ರದಾಯಿಕ ಬದುಕಿನಲ್ಲಿ ಬದಲಾವಣೆ, ಸಮುದಾಯಗಳ ವೃತ್ತಿಯಲ್ಲಿ ಯಂತ್ರಗಳನ್ನು ಬಳಸುವಿಕೆ, ದಿನದ ಬದುಕಿನಲ್ಲಿ ಯಾವುದೇ ಕ್ರಿಯೆಗಳು ನಡೆದರೂ ಅದು ನಿನ್ನೆಯ ಬದುಕಾಗಿರದೆ ಹೊಸದಾದ ಬದುಕಾಗಿರುವುದೇ ಆಧುನಿಕತೆ ಅಥವಾ ಬದಲಾವಣೆಯ ಬದುಕು ಎನ್ನುವಾಗ ಮಾನವನ ಬುದ್ದಿಬೆಳವಣಿಗೆಗೆ ಅನುಗುಣವಾಗಿ ಹೊಸದಾದ ಬದುಕಿಗೆ ಹೊಂದಾಣಿಕೆ ಮಾಡಿಕೊಳ್ಳುವ ಅನಿವಾರ್ಯತೆ ಬರುವುದು ಸಹಜವಾದ ಕ್ರಿಯೆ. ಆದರೆ ಬಂಡವಾಳಶಾಹಿಗಳ ನೇತೃತ್ವದಲ್ಲಿ ಆಧುನಿಕತೆ ಮತ್ತು ಜಾಗತೀಕರಣದಿಂದ ಮುಕ್ತ ಮಾರುಕಟ್ಟೆಗಳು ಭಾರತಕ್ಕೆ ಬಂದು ಇಲ್ಲಿಇರುವ ನೈಸರ್ಗಿಕ ಸಂಪತ್ತನ್ನು ದೋಚಿಕೊಂಡು ಹೋಗಿರುವುದಲ್ಲದೆ ಭಾರತೀಯ ತಳಸಮುದಾಯ ಗಳ ದುಡಿಮೆಗೆ ತಕ್ಕ ಪ್ರತಿಫಲ ದೊರೆಯದೆ ಅನೇಕ ಕೈಗಾರಿಕೆಗಳನ್ನು ಭಾರತದಲ್ಲಿ ಬಂಡವಾಳ ಶಾಹಿಗಳು ಪ್ರಾರಂಭಿಸಿ ಇಲ್ಲಿಯ ಸಂಪತ್ತು ಮತ್ತು ದುಡಿಯುವ ಸಮುದಾಯಗಳ ಶ್ರಮದಿಂದ ಲಾಭವನ್ನು ಮಾಡಿಕೊಂಡು ಪ್ರಭುತ್ವವನ್ನು ಬಲಿಷ್ಟತೆ ಗೊಳಿಸುತ್ತಿರುವುದು ನಿಜ ಸಂಗತಿ ಯಾಗಿದೆ. ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಇಟ್ಟುಕೊಂಡು ಬದುಕುವ ರ್ಗ ಒಂದೆಡೆ ಯಾದರೆ ಇನ್ನೊಂದೆಡೆ ಯಾವುದೇ ಭವಿಷ್ಯವಿರದೇ ತಮ್ಮ ಕುಲಕಸುಬಿನ ಆಧಾರದ

ಮೇಲೆ ಪ್ರಭುತ್ವದ ಶೋಷಣೆಗೆ ಒಳಗಾಗಿ ಜೀವನ ಮಾಡುತ್ತಾ ಬಂದಿರುವ ಇನ್ನೊಂದು ವರ್ಗ ಆಧುನೀಕತೆಯ ಸೆರಗಿಗೆ ಸಿಕ್ಕು ಅತಂತ್ರದ ಬದುಕನ್ನು ಸಾಗಿಸುತ್ತಿರುವುದರಿಂದ ಆಧುನೀಕತೆ ತಳಸಮುದಾಯಗಳ ಬದುಕಿಗೆ ವರವಾಗಿರದೆ ಶಾಪವಾಗಿದೆ ಎಂದರೆ ತಪ್ಪಾಗಲಾರದು.

ತಳಸಮುದಾಯಗಳು ಪ್ರಾಚೀನ ಸಮಯದಿಂದ ಇಲ್ಲಿಯವರೆಗೆ ಕುಂಬಾರಿಕೆ, ಚಮ್ಮಾರಿಕೆ, ನೇಕಾರಿಕೆ, ಬುಟ್ಟಿ ತಯಾರಿಸುವುದು, ಮುಂತಾದ ವೃತ್ತಿಗಳನ್ನು ಪರಂಪರಗತವಾಗಿ ಮೈಗೂಡಿಸಿ ಕೊಂಡು ಸರಳವಾದ ಬದುಕಾದರೂ ನೆಮ್ಮದಿಯ ಬದುಕನ್ನು ಮಾಡಿಕೊಂಡು ಬಂದಿದ್ದರು. ಅಲ್ಲದೆ ಒಂದು ಹಳ್ಳಿಯಲ್ಲಿ ಪರಸ್ಪರ ನಂಬಿಕೆ, ಪ್ರೀತಿ, ಹೊಂದಾಣಿಕೆ, ಸರ್ವರ ಹಿತವಿರು ತ್ತಿತ್ತು. ಆದರೆ ಆಧುನಿಕ ಜಗತ್ತಿನಲ್ಲಿ ತಳಸಮುದಾಯಗಳು ಮಾಡುತ್ತಿದ್ದ ವೃತ್ತಿಗಳೆಲ್ಲವು ಜಾಗತೀಕರಣದ ಸುಳಿಯಲ್ಲಿ ಸಿಕ್ಕು ಆಭದ್ರತೆಯ ಬದುಕನ್ನು ಸೃಷ್ಠಿಮಾಡಿರುವುದು ಕಂಡು ಬರುತ್ತಿದೆ. ಮತ್ತು ಸ್ಪರ್ಧೆಯ ಜೀವನವನ್ನು ಮಾಡುವಂತೆ ಸಮಾಜದ ವ್ಯವಸ್ಥೆಯನ್ನು ಕಲುಸಿತಗೊಳಿಸಿದೆ. ಆದ್ದರಿಂದ ಆಧುನಿಕತೆಯ ಜಗತ್ತು ತಳಸಮುದಾಯಗಳಿಗೆ ಬದುಕನ್ನು ಕೊಡದೆ ಅನೇಕ ರೀತಿಯ ಸಮಸ್ಯೆಗಳಿಗೆ ಕಾರಣವಾಗಿದೆ.

ಆಧುನಿಕ ಜಗತ್ತಿನಲ್ಲಿ ತಳಸಮುದಾಯಗಳು ಕಡಿಮೆಯ ವೇತನಕ್ಕೆ ದಿನದ ೧೪ ಗಂಟೆಗಳ ಕಾಲ ದುಡಿಯಬೇಕಾದ ಸ್ಥಿತಿ ತಲುಪಿರುವುದು ದುರಂತವೇ ಸರಿ. ಕಾರ್ಲ್‌ಮಾರ್ಕ್ಸ್‌ರವರು ಹೇಳಿದ ಸಿದ್ಧಾಂತವು ಇಂದು ಗೋಚರಿಸುತ್ತಿದೆ. ಆಧುನಿಕ ಜಗತ್ತು Haves and Have not ಎಂಬ ವರ್ಗಗಳನ್ನು ಸೃಷ್ಟಿಮಾಡಿರುವುದು ನಿಜ ಸಂಗತಿಯಾಗಿದೆ. ತಳಸಮುದಾಯಗಳು ತಯಾರಿಸಿದ ಮತ್ತು ಉತ್ಪಾದಿಸಿದ ಹಾಗೂ ಸಂಗ್ರಹಿಸಿದ ಸಂಪತ್ತು, ಉತ್ಪನ್ನಗಳು, ಸಿದ್ಧವಸ್ತು ಗಳನ್ನು ಕಡಿಮೆ ಬೆಲೆಗೆ ಕೊಂಡು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾಡುವ ಪರಿಪಾಠ ಒದಗಿರುವುದು ದುರಂತವೇ ಸರಿ. ಆಧುನಿಕತೆಯ ಸಮಾಜ ತಳ ಸಮುದಾಯಗಳನ್ನು ಏಣಿಶ್ರೇಣಿಯಲ್ಲಿ ಕೆಳಸ್ಥಾನದಲ್ಲಿಟ್ಟು ನೋಡುವ ವಾತಾವರಣ ಸೃಷ್ಟಿಯಾಗಿದೆ. ಆಧುನಿಕ ಸಮಾಜದಲ್ಲಿ ಪ್ರಭುತ್ವವನ್ನೆ ವಿರುದ್ಧ ಮಾಡಿಕೊಂಡು ತಳಸಮುದಾಯಗಳು ಬದುಕುವುದು ಅಷ್ಟು ಸುಲಭದ ಕೆಲಸವಲ್ಲವಾಗಿದೆ. ಪ್ರಬಲ ಜಾತಿ ವರ್ಗಗಳು ಹೆಚ್ಚು ಹೆಚ್ಚು ಬಲಿಷ್ಟತೆ ಗೊಳ್ಳುವುದಕ್ಕೆ ಪ್ರೇರಕವಾಗಿ ಜಾಗತೀಕರಣ, ಬಂಡವಾಳಶಾಹಿಗಳು ಸೃಷ್ಟಿಯಾಗಿವೆ ಎಂದರೆ ನಿಜ ಸಂಗತಿಯಾಗುತ್ತದೆ.

ಆಧುನಿಕ ಜಗತ್ತಿನಲ್ಲಿ ತಳಸಮುದಾಯಗಳ ಜಾನಪದೀಯ ನೃತ್ಯ ಮತ್ತು ಸಾಂಬಾರ ಪದಾರ್ಥಗಳು ತಳಸಮುದಾಯದ ಕುಲಕಸುಬುಗಳು ಪೇಟೆಂಟ್ ಆಗಿರುವುದು ಆಧುನಿಕ ಸಾಮಾಜಿಕ ಪ್ರತಿಫಲವೆಂದು ತಿಳಿಯಲಾಗಿದೆ. ಆದ್ದರಿಂದ ನಮ್ಮ ನಾಡು, ಸಂಸ್ಕೃತಿ, ಅರಣ್ಯ, ಸಸ್ಯ, ಗಿಡಮೂಲಿಕೆಗಳೆಲ್ಲವು ನಮ್ಮ ಕಣ್ಣಿನ ಮುಂದೆ ಇನ್ನೊಬ್ಬರಿಗೆ ಮಾರಾಟವಾಗುತ್ತಿದೆ ಯೆಂದರೆ ನಮಗೆ ಆಧುನಿಕ ಸಮಾಜ ಎಷ್ಟರ ಮಟ್ಟಿಗೆ ಪೂರಕವಾಗಿದೆ ಎಂದು ತಳಸಮುದಾಯ ಗಳು ಮನವರಿಕೆ ಮಾಡಿಕೊಳ್ಳಬೇಕಾದ ಸ್ಥಿತಿ ಉಂಟಾಗಿದೆ.

ಭಾರತದಲ್ಲಿ ದಮನಿತ ಧ್ವನಿಗಳ ಕಷ್ಟವನ್ನು ಕಿವಿಕೊಟ್ಟು ಕೇಳುವವರಿಲ್ಲವಾಗಿದೆ ಆದ್ದರಿಂದ ಬಂಡವಾಳಶಾಹಿಗಳು ಆಧುನೀಕತೆಯ ಮುಖವನ್ನು ಹಾಕಿಕೊಂಡು, ಸಮುದಾಯಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ತಳಸಮುದಾಯಗಳನ್ನು ದರ್ಪ, ಮತ್ತು ಅಧಿಕಾರದ ಮನೋಭಾವನೆಯಿಂದ ನೋಡುವ ಸ್ಥಿತಿ ಬಂದಿದೆಯೆಂದರೆ ತಳಸಮುದಾಯಗಳಿಗೆ ಆಧುನೀಕತೆಯ ಜಗತ್ತು ನುಂಗಲಾರದ ತುತ್ತಾಗಿದೆ. ಅಂದರೆ ಯಾವುದು ಸರಿ ಯಾವುದು ತಪ್ಪು ಎಂದು ತೀರ್ಮಾನಿಸಲು ಆಗದೆ ಮನಸ್ಸುಗಳು ಗೊಂದಲದಲ್ಲಿ ಸಿಕ್ಕಿಕೊಂಡಿವೆ.

ಒಟ್ಟಾರೆಯಾಗಿ ಆಧುನಿಕ ಜಗತ್ತಿನಲ್ಲಿ ತಳಸಮುದಾಯಗಳ ಸ್ಥಿತಿ ಶೋಚನೀಯವಾಗಿದೆ ಮತ್ತು ನಾಯಿ ಕೊಡೆಯಂತೆ ಕೈಗಾರಿಕೆಗಳು ಪ್ರಾರಂಭಿಸಲಾಗಿರುವುದರಿಂದ ಭಾರತದಂತಹ ದೇಶಕ್ಕೆ ಹಾಗೂ ತಳಸಮುದಾಯಗಳ ಬದುಕಿಗೆ ಒಂದು ರೀತಿಯ ಅತಂತ್ರ ಸ್ಥಿತಿಗೆ ತಲುಪು ವುದನ್ನು ಯಾವುದೇ ಅಧ್ಯಯನಕಾರರು ಗ್ರಹಿಸಿಕೊಂಡು ಪ್ರಸ್ತುತ ಕಾಲದಲ್ಲಿ ಚರ್ಚೆ ಮಾಡ ಬೇಕಾದ ವಿಷಯವಾಗಿದೆ. ಏಕೆಂದರೆ ಇಂದಿನ ದಿನಮಾನಗಳಲ್ಲಿ ತಳಸಮುದಾಯಗಳನ್ನು ಅಭಿವೃದ್ಧಿಮಾಡುವ ನೆಪವನ್ನು ಸೃಷ್ಟಿಮಾಡಿ ಅರಣ್ಯಗಳಲ್ಲಿ ಡ್ಯಾಮ್ ಮತ್ತು ಚೆಕ್‌ಡ್ಯಾಮ್ ಗಳ ಜೊತೆಗೆ ರಾಷ್ಟ್ರೀಯ ಉದ್ಯಾನವನ ಯೋಜನೆಯನ್ನು ರೂಪಿಸಿ ತಳಸಮುದಾಯಗಳು ವಾಸಮಾಡುವ ಪ್ರದೇಶಗಳನ್ನು ಹಾಗೂ ಅವರ ಪರಂಪರಾಗತವಾಗಿ ಬಂದಿರುವ ಸಾಂಸ್ಕೃತಿಕ ಬದುಕನ್ನು ತಲ್ಲಣಗೊಳಿಸುವುದಲ್ಲದೆ ಆಧುನೀಕತೆಯ ರೂಪರೇಷೆಗಳನ್ನು ಸ್ವೀಕರಿಸಿಕೊಳ್ಳ

ಲಾಗಿದೆ. ಬದುಕಿನ ಸಂಘರ್ಷಕ್ಕೆ ತಳಸಮುದಾಯಗಳಿಗೆ ಭವಿಷ್ಯದ ಬದುಕಿಗೆ ದಾರಿಯಾಗು ತ್ತದೆಯೇ ಅಥವಾ ದೇಶದ ಪ್ರಭುತ್ವಪೂರಿತ ಸಾಮಾಜಿಕ ಬದಲಾವಣೆ ಅವರನ್ನು ನುಂಗು ತ್ತದೆಯೇ ಎಂಬುದು ಇಲ್ಲಿ ಮುಖ್ಯವಾಗುತ್ತದೆ ಆದ್ದರಿಂದಲೇ ಕಾರ್ಲ್‌ಮಾರ್ಕ್ಸ್‌ರ ಸಿದ್ದಾಂತವು ಮಾನವನ ಪ್ರಪಂಚದಲ್ಲಿ ಯಾವತ್ತೂ ಕೂಡ ಜೀವಂತಿಕೆಯನ್ನು ಇಟ್ಟುಕೊಂಡಿ ರುತ್ತದೆ ಎಂದು ಇಲ್ಲಿ ಪ್ರಸ್ತಾಪಿಸಿದರೆ ತಪ್ಪಾಗಲಾರದು.

ಮಾನವ ಪ್ರಾಣಿಯು ನಡೆದು ಬಂದ ಚರಿತ್ರೆಯ ಪುಟಗಳನ್ನು ನಾವು ಅವಲೋಕಿಸುತ್ತ ಹೊರಟರೆ ಇತಿಹಾಸದ ಉದ್ದಕ್ಕೂ ತಳಸಮುದಾಯಗಳು ಪರೋಕ್ಷವಾಗಿ ಶೋಷಣೆಗೆ ಒಳಗಾಗುತ್ತಲೇ ಬಂದಿರುವುದು ಗಮನಾರ್ಹವಾದುದು. ಹಾಗಾಗಿ ನಾವು ಇಂದು ಅನನ್ಯತೆ ಎಂದ ತಕ್ಷಣ ಜಾಗೃತರಾಗಿ ಆಲೋಚಿಸಬೇಕಾಗುತ್ತದೆ. ಏಕೆಂದರೆ ಸರ್ಕಾರದ ಯೋಜನೆ ಗಳೆಲ್ಲವೂ ಮರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿದ್ದರೂ ಅವರನ್ನು ಮುಖ್ಯವಾಹಿನಿಯ ಒಳಗಡೆ ತರಬೇಕು ಎನ್ನುವಂತೆ ಇರುವಾಗ, ಈ ತೆರನಾದ ಯೋಜನೆಗಳು ತಳಸಮುದಾಯಗಳನ್ನು ತಲುಪಿವೆಯೇ ಇಲ್ಲವೆ ಎಂಬುದನ್ನು ಪರೀಕ್ಷಿಸಲು ಹೋಗದೆ ಇರುವಾಗ ಸಮುದಾಯಗಳಿಗೆ ಅಭಿವೃದ್ಧಿ ಎಲ್ಲಿಂದ ಆಗಿರಬೇಕು ಎನ್ನುವಂತಹ ಪ್ರಶ್ನೆಗಳು ಮನಸಿನಲ್ಲಿ ಸೃಷ್ಟಿಯಾಗುವುದು ಅನಿವಾರ್ಯ. ಆದ್ದರಿಂದ ಆಧುನೀಕತೆ ಎಂದು ಹೇಳಿಕೊಳ್ಳು ವಾಗ ಇಡೀ ದೇಶದ ಅಭಿವೃದ್ಧಿಯ ಮಾನದಂಡಗಳಲ್ಲಿ ತಳಸಮುದಾಯಗಳು ಇರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಈ ಹಿನ್ನೆಲೆಯಿಂದ ತಳಸಮುದಾಯಗಳಿಗೆ ಆಧುನೀಕತೆಯ ಮನೋಭಾವನೆಯನ್ನು ಉಂಟುಮಾಡುವುದಕ್ಕಿಂತ ಮೊದಲು ಸಾಮಾಜಿಕ ಸ್ಥಾನಮಾನ ಹಾಗೂ ಆರ್ಥಿಕ ಸ್ಥಾನಮಾನಗಳನ್ನು ಮಾಡಬೇಕಾಗಿರುವ ವ್ಯವಸ್ಥೆ ಸೃಷ್ಠಿಯಾಗಬೇಕಾಗಿದೆ. ಅಲ್ಲದೆ ತಳಸಮುದಾಯಗಳು ಮಾಡುವ ಗುಡಿಕೈಗಾರಿಕೆಗಳಿಗೆ ತಕ್ಕ ಬೆಲೆ ಸ್ಪರ್ಧಾಜಗತ್ತಿಲ್ಲಿ ಸಿಕ್ಕರೆ ಹಾಗೂ ತಳಸಮುದಾಯಗಳು ತಾವಾಗಿಯೇ ಬದಲಾಗುತ್ತಿರುವ ಸಮಯವನ್ನು ಒಪ್ಪಿಕೊಳ್ಳುವುದಲ್ಲದೆ ಆಧುನೀಕತೆಯ ಬದುಕನ್ನೂ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಹಳ್ಳಿಗಳಲ್ಲಿ ಬದುಕನ್ನು ಸಾಗಿಸುತ್ತಿರುವ ಎಷ್ಟೋ ಬಡಕುಟುಂಬಗಳ ಮನೆಗಳಿಗೆ ಪ್ರಾಥಮಿಕ ಸೌಲಭ್ಯಗಳೇ ತಲುಪದೆ ಇರುವಂತಹ ಸಂದರ್ಭದಲ್ಲಿ ಹಾಗೂ ಆನುವಂಶೀಯವಾಗಿ ಬೆಳೆದುಕೊಂಡು ಬಂದ ಬಟ್ಟೆಯ ಕೆಲಸ ಪ್ರಚಲಿತ ದಿನಗಳಲ್ಲಿ ಮುಂದುವರಿಯುತ್ತಿರುವಾಗ ತಳ ಸಮುದಾಯಗಳಿಗೆ ಆಧುನಿಕತೆ ಎಂಬ ವಿದೇಶಿಯ ಸೀರೆಯ ಸೆರಗು ತಲುಪದೆ ಇರುವುದು ಒಂದು ಕಡೆಯಾದರೆ ಇನ್ನೊಂದು ದೃಷ್ಟಿಯಲ್ಲಿ ತಲುಪಿದರೆ ಅದು ದೇಶದ ಪ್ರಭುತ್ವದ ಪರವಾದ ಆಧುನೀಕತೆಯ ಬದುಕಾಗಿರುತ್ತೆ ಎನ್ನುವುದನ್ನು ತಳಸಮುದಾಯಗಳನ್ನು ಕುರಿತು ಅಧ್ಯಯನ ಮಾಡುವವರು ಆಲೋಚಿಸಲೇಬೇಕಾದ ಸಂಗತಿಯಾಗುತ್ತದೆ ಎನ್ನುವುದು ನನ್ನ ನಿಲುವು.

**ಅಡಿಟಿಪ್ಪಣಿ**


೧. ಕಾರ್ಲ್‌ಮಾರ್ಕ್ಸ್ ಬಂಡವಾಳದ ಉದ್ಭವ, ಸಂಗತಿ ಪ್ರಕಾಶನ ಯೂನೆಸ್ಕೊ ೧೯೮೧

೨. ಜೋಗನ್ ಶಂಕರ್, ಗ್ರಾಮ ಸಮಾಜ, ಜೀವ ಪ್ರಕಾಶನ, ಮೈಸೂರು ೧೯೯೫

೩. ಮಂಜುನಾಥ ಬೇವಿನಕಟ್ಟಿ, ಜನಪದ ಸಂಸ್ಕೃತಿ, ತೇಜಸ್ವಿ ಪ್ರಕಾಶನ ಹ್ಯಾರಡ

೪. ರವೀಂದ್ರ ಕುಪ್ಪರ ಭಾರತೀಯ ಸಮಾಜದ ಅಧ್ಯಯನ ೧೯೯೬

೫. ಎ.ಎಸ್. ಪ್ರಭಾಕರ್ ದೊಂಬರು, ಒಂದು ಚಾರಿತ್ರಿಕ ಹಿನ್ನೋಟ ಸಿದ್ದಾರ್ಥ ಪ್ರಕಾಶನ ಹೊಸಪೇಟೆ ೨೦೦೬.


* * *

# ೧೪. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಶತಶತಮಾನಗಳಿಂದಲೂ ಹಂತಹಂತವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ದೌರ್ಜನ್ಯಕ್ಕೆ ಒಳಗಾದಂತಹ ಸಮುದಾಯವೆಂದರೆ ತಳಸಮುದಾಯವೆಂದರೆ ಅತಿಶಯೋಕ್ತಿಯಾಗಲಾರದು. ತಳಸಮುದಾಯದಲ್ಲಿ ಹುಟ್ಟಿ ಬೆಳೆದಂತಹ ಪ್ರತಿಭೆ ಕೌಶಲ್ಯ ಮಾನವನು ಆಧುನೀಕತೆಯತ್ತ ಮುಖ ಮಾಡಿದಂತೆಲ್ಲಾ ಅವುಗಳ ಮೌಲ್ಯ ಕಡಿಮೆಯಾಗುತ್ತಾ ಬಂದಿದೆ. ವಂಶ ಪಾ್ಯರಂಪರಿಕವಾಗಿ ಬಂದಂತಹ ಅವರ ಉದ್ಯೋಗ ಜನಪದೀಯತೆಯು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳೆಂಬ ಭೂತದ ಕಪಿಮುಷ್ಟಿಗೆ ಸಿಲುಕಿ ನಡುಗಿ ಹೋಗಿವೆ.

ತಳಸಮುದಾಯಗಳು ಆಧುನೀಕತೆಯೆ ಸೋಗಿನಲ್ಲಿ ಪ್ರವೇಶ ಮಾಡಿದ ತಾಂತ್ರಿಕ ಜಗತ್ತು ತುತ್ತು ಚೀಲವನ್ನು ತುಂಬಿಸಿಕೊಳ್ಳಲು ಹೆಣಗಾಡತೊಡಗಿವೆ. ಭಾರತ ದೇಶವು ಎದುರಿಸುತ್ತಿ ರುವ ಜನಸಂಖ್ಯಾಸ್ಫೋಟ ಒಂದು ಕಡೆಯಾದರೆ ನಿರುದ್ಯೋಗ ಎಂಬ ಪಿಡುಗು ಇಡೀ ಮನುಕುಲವನ್ನೇ ಕೆಟ್ಟಕೆಲಸಗಳಿಗೆ ಆಹ್ವಾನಿಸಿದಂತಾಗಿದೆ.

ಹಳ್ಳಿಗಳಲ್ಲಿ ಜನರು ಕೆಲಸವಿಲ್ಲದೆ ಪಟ್ಟಣಗಳತ್ತ ವಲಸೆಬರತೊಡಗಿದ್ದಾರೆ. ಕಾರಣ ಆಧುನಿಕ ಯಂತ್ರೋಪಕರಣಗಳು ಕೂಲಿ ಕಾರ್ಮಿಕರ ಅನ್ನದ ತಟ್ಟೆಗೆ ಕೈ ಹಾಕಿವೆ. ಉದಾಹರಣೆ ಯಾಗಿ ಹೇಳಬೇಕೆಂದರೆ ಭತ್ತವನ್ನು ನಾಟಿ ಮಾಡಲು, ಕಟಾವು ಮಾಡಲು ಯಂತ್ರಗಳು ಬಂದು ೧೦೦ ಜನರು ಮಾಡುವಂತಹ ಕೆಲಸವನ್ನು ಕೇವಲ ಒಂದು ಯಂತ್ರ ಕ್ಷಣಾರ್ಧದಲ್ಲೆ ಮಾಡಿ ಮುಗಿಸುತ್ತವೆ. ಹಾಗಾಗಿ ಅನಿವಾರ್ಯವಾಗಿ ಜನರು ಕೆಲಸ ಹುಡಿಕಿಕೊಂಡು ಪಟ್ಟಣ ಗಳತ್ತ ವಲಸೆ ಹೋಗುವ ಪ್ರಕ್ರಿಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತ ಹೋಗುತ್ತಾ ಇದೆ. ವಲಸೆ ಹೋಗುವ ಸಂದರ್ಭದಲ್ಲಿ ತಮ್ಮ ಮಕ್ಕಳನ್ನು ಸಹ ಶಾಲೆ ಬಿಡಿಸಿ ಜೊತೆಗೆ ಕರೆದು ಕೊಂಡು ಹೋಗುವುದರಿಂದ ಶಾಲೆ ಬಿಟ್ಟಂತ ಮಕ್ಕಳು ಬಾಲಕಾರ್ಮಿಕರಾಗಿ ತಮ್ಮ ತಂದೆ ತಾಯಿಗಳ ಜೊತೆಗೆ ಕೆಲಸ ಮಾಡುತ್ತಾರೆ.

ಬಳ್ಳಾರಿಯಲ್ಲಿ ನಡೆಯುತ್ತಿರುವ ಗಣಿಗಳಲ್ಲಿ ಶಾಲೆ ಬಿಟ್ಟ ಮಕ್ಕಳು ಎರಡು ಸಾವಿರ ಕ್ಕಿಂತಲೂ ಹೆಚ್ಚಿನ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವುಗಳ ಜೊತೆ ಧೂಳಿನಿಂದ ಅನೇಕ ಹೃದಯ ಸಂಬಂಧಿ ಕಾಯಿಲೆಗಳು ಕೆಲವು ಮಕ್ಕಳಲ್ಲಿ ಕಾಣಿಸಿಕೊಂಡಿವೆ. ಕರಕುಶಲ ಕೈಗಾರಿಕೆಗಳು ಸಹ ಈ ಆಧುನಿಕತೆಯಿಂದ ಹೊರತಾಗಿಲ್ಲ. ಬಹುರಾಷ್ಟ್ರೀಯ ಕಂಪನಿಗಳು ಈ ನೆಲದ ಕಚ್ಚಾವಸ್ತುಗಳನ್ನು ಉಪಯೋಗಿಸಿಕೊಂಡು ಅಗ್ಗದ ದರದಲ್ಲಿ ಗೃಹ ಉಪಯೋಗಿ ವಸ್ತುಗಳು ಜನಸಾಮಾನ್ಯರ ಕೈಗೆಟುಕುವಂತಾಗಿದ್ದರಿಂದ ಸ್ಥಳೀಯ ಮಾರುಕಟ್ಟೆಗೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಕುಂಬಾರಿಕೆಯ ಜೀವನ ನಡೆಸುವಂತಹ ಕುಟುಂಬಗಳ ಸ್ಥಿತಿ ಗತಿಗಳು ಸಹ ಈ ತಾಂತ್ರಿಕ ಯುಗದಿಂದ ಅವರ ಆರ್ಥಿಕ ಜೀವನದ ಮೇಲೆ ಕೆಟ್ಟ ಪರಿಣಾಮ ಬೀರಿವೆ. ಮಣ್ಣಿನಿಂದ ತಯಾರಾದಂತ ಮಡಿಕೆ ಕುಡಿಕೆಗಳನ್ನು ಯಾರು ಕೊಂಡುಕೊಳ್ಳುತ್ತಿಲ್ಲ ಆದರ ಮಹತ್ವವನ್ನು ಜನರು ಮರೆಯುತ್ತಿದ್ದಾರೆ. ಮಡಿಕೆ ಕುಡಿಕೆಗಳಲ್ಲಿ ತಯಾರಾದ ತಿನುಸುಗಳು ರುಚಿಫಲಿತವಾಗಿರುತ್ತವೆ. ಆದರೆ ಮನಮೋಹಕವಾಗಿ ಕಾಣುವ ಸ್ಟೀಲ್ ಪ್ಲಾಸ್ಟಿಕ್ ಪಾತ್ರೆಗಳಿಗೆ ಮನಸೋತು ಅಂತಹುಗಳತ್ತ ತಮ್ಮ ಚಿತ್ತವನ್ನು ಹರಿಸಿದ್ದಾರೆ. ಇದರಿಂದ ಕುಂಬಾರಿಕೆಯ ಕುಟುಂಬಗಳು ಪರ್ಯಾಯ ಉದ್ಯೋಗವನ್ನು ಹುಡುಕುತ್ತಿದ್ದಾರೆ. ವಿಶ್ವಮಾರುಕಟ್ಟೆಯು ಮುಕ್ತವಾಗಿರುವುದರಿಂದ ವಿದೇಶಿವಸ್ತುಗಳು ಉದಾ. ಯಂತ್ರೋಪಕರಣಗಳು ಹಾಗೂ ಗೃಹೆಪಯೋಗಿ ಸರಕುಗಳು ಅಗ್ಗದರದಲ್ಲಿ ಮಾರಾಟ ವಾಗುವುದರಿಂದ ದೇಶೀಯ ಸರಕುಗಳು ವಿದೇಶಿ ಸರಕುಗಳ ಜೊತೆ ಪೈಪೋಟಿಯನ್ನು ನಡೆಸಲಾರದೆ ಬಹುಪಾಲು ಕಂಪನಿಗಳು ಸಣ್ಣ ಸಣ್ಣ ಗುಡಿ ಕೈಗಾರಿಕೆಗಳು ಕಾರ್ಮಿಕರಿಗೆ ವೇತನವನ್ನು ಬರಿಸಲಾರದೆ ದಿವಾಳಿಯಾಗಿವೆ. ಲಕ್ಷಾಂತರ ಜನರು ನಿರುದ್ಯೋಗಿಗಳಾಗಿದ್ದಾರೆ. ಕೆಲವೊಂದು ಕುಟುಂಬಗಳು ಅವಮಾನ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ೧೯೯೯ರಲ್ಲಿ ಒಂದೇ ವರ್ಷದಲ್ಲಿ ೩೦೦೦ ಸಾವಿರಕ್ಕಿಂತಲೂ ಹೆಚ್ಚು ಕೈ ಮಗ್ಗಗಳು ದಿವಾಳಿ ಯಾಗಿವೆ. ಕೈ ಮಗ್ಗಗಳನ್ನು ನಂಬಿ ಜೀವನ ಸಾಗಿಸುತ್ತಿದ್ದ ಕುಟುಂಬಗಳು ಪರ್ಯಾಯ ಉದ್ಯೋಗದಲ್ಲಿ ನಿರತವಾಗಿವೆ.

ಇಂತಹ ಎಲ್ಲಾ ಸಮಸ್ಯೆಗಳಿಗೆ ಒಂದು ಪರಿಹಾರವನ್ನು ಕಂಡುಕೊಳ್ಳದಿದ್ದರೆ ಎಲ್ಲಾ ಸಣ್ಣ ಸಣ್ಣ ಕಂಪನಿಗಳು ಹಾಗೂ ಗುಡಿ ಕೈಗಾರಿಕೆಗಳು ಇತಿಹಾಸ ಪುಟ ಸೇರಬೇಕಾಗುತ್ತದೆ. ಕೇಂದ್ರ ಸರ್ಕಾರವು ಮುಕ್ತವಾಣಿಜ್ಯ ನೀತಿಯನ್ನು ರದ್ದುಗೊಳಿಸಿ ವಿದೇಶದಿಂದ ಆಮದು ಆಗುವಂತಹ ವಸ್ತುಗಳ ಮೇಲೆ ಅತೀ ಹೆಚ್ಚಿನ ತೆರಿಗೆಗಳನ್ನು ವಿಧಿಸಿ, ದೇಶೀಯವಾಗಿ ತಯಾರಾದಂತಹ ವಸ್ತುಗಳ ಮೇಲೆ ತೆರಿಗೆಯಿಂದ ವಿನಾಯಿತಿಯನ್ನು ನೀಡಬೇಕು ಅಂದಾಗ ಮಾತ್ರ ಗುಡಿ ಕುಶಲ ಕೈಗಾರಿಕೆಗಳು ಹಾಗೂ ಸಣ್ಣ ಸಣ್ಣ ಕಂಪನಿಗಳು ಬದುಕಲು ಸಾಧ್ಯವಾಗುತ್ತವೆ.

* * *

ಏಳನೆಯ ಶತಮಾನದ 'ಗದ್ದೆಮನೆ' ಶಾಸನದಿಂದ ಬೇಡರು ರಾಜ್ಯವಾಳಿದರೆಂದು ಗೊತ್ತಾಗುತ್ತದೆ.
**– ಡಾ. ಎಂ.ಬಿ. ನೇಗಿನಹಾಳ**

## ೧೫. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಸಮಾಜದಲ್ಲಿ ಶೋಷಣೆಗೆ ಒಳಗಾದಂತಹ ಈ ತಳಸಮುದಾಯಗಳನ್ನು ಪ್ರಾಚೀನ ಕಾಲದಿಂದಲೂ ನಾವು ನೋಡುತ್ತಾ ಬಂದಿದ್ದೇವೆ. ಸಾಮ್ರಾಜ್ಯಶಾಹಿಗಳು ಬಂಡವಾಳಶಾಹಿಗಳ ತುಳತಕ್ಕೆ ಒಳಗಾದಂತಹ ಸಮುದಾಯವನ್ನು ನಾವು ತಳಸಮುದಾಯ ಎಂದು ಕರೆಯಬಹುದು. ಈ ತಳ ಸಮುದಾಯ ಎನ್ನುವ ಪದ ಚರಿತ್ರೆಯಲ್ಲಿ ರಾಜ ಪ್ರಭುತ್ವದಲ್ಲಿ ಕಂಡು ಬರುವುದಿಲ್ಲ. ಈ ರಾಜಪ್ರಭುತ್ವದಲ್ಲಿ ಅಲಕ್ಷಿತ ವರ್ಗಕ್ಕೆ ಎಷ್ಟೇ ಸಮುದಾಯಗಳು ಸೇರಿದ್ದರು ಇವರನ್ನು ಬಿಡಿಬಿಡಿಯಾಗಿ ನೋಡುತ್ತಿರಲಿಲ್ಲ. ಆದರೆ ಪ್ರಜಾಪ್ರಭುತ್ವ ಎಂಬುದು ದೇಶದಲ್ಲಿ ಕಾಣಿಸಿಕೊಂಡಾಗ ಈ ತಳಸಮುದಾಯ ಎಂಬ ಪದ ಕಂಡುಬರುತ್ತದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ಸಿಗಬೇಕೆಂಬುದು ಮತ್ತು ಎಲ್ಲರೂ ಸಮಾನರು ಎಂಬ ಪರಿಕಲ್ಪನೆ ಬಂದಿದ್ದರಿಂದ ಅಂತಹ ಸಂದರ್ಭದಲ್ಲಿ ಶೋಷಣೆಗೆ ಒಳಗಾ ದಂತಹ ಸಮುದಾಯಗಳು ಕಂಡುಬರುತ್ತವೆ.

ಆಧುನಿಕ ಜಗತ್ತು ಅಥವಾ ಆಧುನಿಕತೆಯೆಂಬುದು ಕೈಗಾರಿಕೀಕರಣದ ಜೊತೆ ಅನುಷಂಗಿಕ ವಾಗಿ ಬಂದ ಸಂಗತಿಯೇ ಆಗಿದೆ. ಮತ್ತು ಆಧುನೀಕತೆಯಲ್ಲಿ ಈ ದೇಶದ ಶೋಷಿತ ಸಮುದಾಯಗಳ ವಿಮೋಚನೆಗಾಗಿಯೇ ರೂಪುಗೊಂಡ ಯಾವುದೇ ನಿಷ್ಪಕ್ಷಪಾತವಾದ ಹೋರಾಟಗಳು ಇರಲಿಲ್ಲ. ಆಧುನೀಕತೆಯಿಂದ ಮುಕ್ತವಾಗಿ ಆರ್ಥಿಕತೆಯಿಂದ ಪ್ರಯೋಜನ ವಾಗಿದ್ದು ಭಾರತದ ಬಂಡವಾಳಶಾಹಿ ವರ್ಗಕ್ಕೆ ಮಾತ್ರ. ಗೈಕಾರಿಕೀಕರಣದಿಂದ ಪ್ರಚ್ಛನ್ನಗೊಂಡ ಬಂಡವಾಳಶಾಹಿ ವ್ಯವಸ್ಥೆ ದುಡಿಯುವ ವರ್ಗಗಳ ಶ್ರಮವನ್ನು ಉಪಯೋಗಿಸಿಕೊಂಡು ಬಂಡವಾಳವನ್ನು ಹೆಚ್ಚುಮಾಡಿಕೊಂಡಿತು. ಆದರೆ ಆಧುನಿಕ ಜಗತ್ತಿನಲ್ಲಿ ಕೈಗಾರಿಕೀಕರಣವು ಭಾರತದ ಸ್ವದೇಶಿ ಮಾದರಿಯ ಉತ್ಪಾದನೆಗಳನ್ನು ಇಲ್ಲವಾಗಿಸಿತು. ಜೊತೆಗೆ ಇಲ್ಲಿ ಸಾಮಾಜಿಕ ಬದುಕಲ್ಲಿ ಅನೇಕ ಬದಲಾವಣೆಗಳು ಸಹಜವಾಗಿಯೇ ಘಟಿಸಿಹೋದವು. ಈ ಕೈಗಾರಿಕೀಕರಣ ಬೀಸುವ ಹೊಡೆತದಿಂದ ಇಲ್ಲಿನ ಆಳುವ ವರ್ಗವೇ ವಿಚಲಿತವಾದ ಮೇಲೆ ತಳಸಮುದಾಯಗಳು ಸಹಜವಾಗಿಯೇ ತಮ್ಮಲ್ಲಿ ಹಲವಾರು ಬದಲಾವಣೆಗಳನ್ನು ತಂದು ಕೊಳ್ಳಬೇಕಾಯಿತು. ಮೊದಲು ಇಲ್ಲಿ ಅಘಾತಗೊಂಡಿದ್ದು, ಸ್ವದೇಶಿ ತಂತ್ರಜ್ಞಾನ ಮತ್ತು ಅದರ ಮೂಲಕವೇ ಉತ್ಪಾದನೆಯಲ್ಲಿ ತೊಡಗಿದ್ದ ಇಲ್ಲಿನ ಹಲವು ತಳ ಸಮುದಾಯಗಳ ಗುಡಿಕೈಗಾರಿಕೆಗಳು ಅನಿವಾರ್ಯವಾಗಿ ಮೂಲೆಗುಂಪಾಗಲೇಬೇಕಾಯ್ತು. ಆಧುನೀಕತೆಯ ಪ್ರಭಾವದಿಂದ ಹಾಗೂ ಹೊಸ ಹೊಸ ಆವಿಷ್ಕಾರಗಳಿಂದ ತಳಸಮುದಾಯಗಳ ಮೇಲೆ ಪೆಟ್ಟು ಬಿದ್ದಿತು. ಸಾಂಪ್ರದಾಯಿಕವಾಗಿ ರೂಢಿಸಿಕೊಂಡು ಬಂದಂತಹ ವೃತ್ತಿಗಳ ಮೇಲೆ ಆಧುನಿಕತೆಯೆಂಬುದು ಬಲಪ್ರಯೋಗಮಾಡಿತು. ಆಗ ತಮ್ಮ ವೃತ್ತಿಯನ್ನು ಕೈಬಿಡಬೇಕಾ ಯಿತು.

ಇಂದು ಆಧುನಿಕ ಜಗತ್ತಿನಲ್ಲಿ ಇಡೀ ಜಗತ್ತನ್ನು ಹಿಡಿಯಾಗಿ ನೋಡಲಾಗುತ್ತದೆ. ಉದಾ. ಜಾಗತೀಕರಣವನ್ನು ನಾವು ನೋಡಿದಾಗ ತನ್ನ ಬೃಹತ್ತಾದ ಕಂಪನಿಯು ಈ ಜಗತ್ತಿ ನಲ್ಲಿಯೇ ಹೆಸರು ಮಾಡುತ್ತದೆ. ಜಾಗತೀಕರಣ, ಉದಾರೀಕರಣ ಹಾಗೂ ನಗರೀಕರಣ ಇವುಗಳ ಪ್ರಭಾವದಿಂದ ಈಡೀ ಜಗತ್ತು ತನ್ನ ಕಡೆ ನೋಡುವಂತೆ ಮಾಡಿವೆ. ಇಂತಹ ಸಂದರ್ಭದಲ್ಲಿ ಶೋಷಣೆಗೆ ಒಳಗಾದಂತಹ ಅಲಕ್ಷಿತ ಸಮುದಾಯಗಳು ತಯಾರಿಸುವಂತಹ ವಸ್ತುಗಳು ಹಾಗೂ ಗುಡಿ ಕೈಗಾರಿಕೆಗಳು ಇಂದು ಆಧುನಿಕ ಮಾರುಕಟ್ಟೆಯಲ್ಲಿ ತಮ್ಮ ಬೇಡಿಕೆಯನ್ನು ಕಳೆದುಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ತಳಸಮುದಾಯಗಳು ಆರ್ಥಿಕ ವಾಗಿ ದುರ್ಬಲತೆಯನ್ನು ಹೊಂದುತ್ತಾರೆ. ಆದ್ದರಿಂದ ಇಂದು ತಳಸಮುದಾಯಗಳ ಬಗ್ಗೆ ಪ್ರತ್ಯೇಕವಾದ ಅಧ್ಯಯನಗಳು ಕಂಡುಬರುತ್ತವೆ. ಈ ರೀತಿ ಅಧ್ಯಯನ ಮಾಡುವುದರಿಂದ ಅಲಕ್ಷಿತ ಸಮುದಾಯವನ್ನು ಗುರುತಿಸಿ ಅಥವಾ ಸ್ಥಳೀಯ ಚರಿತ್ರೆಗೆ ಹೆಚ್ಚು ಮಹತ್ವವನ್ನು ಕೊಡಲಾಗುತ್ತದೆ. ಕೇವಲ ರಾಜ-ರಾಣಿ, ನಗರ ಪ್ರದೇಶಗಳಿಗೆ ಹೆಚ್ಚು ಮಹತ್ವ ಕೊಡದೆ ಪ್ರಸ್ತುತ ಸಂದರ್ಭದಲ್ಲಿ ತಳಸಮುದಾಯಗಳ ಬಗ್ಗೆ ಸ್ಥಳೀಯವಾಗಿ ಅಧ್ಯಯನ ಮಾಡಲಾ ಗುತ್ತದೆ. ಇಡಿಯಾದ ಅಧ್ಯಯನವನ್ನು ಇಂದು ಬಿಡಿಬಿಡಿಯಾಗಿ ನೋಡಲಾಗುತ್ತದೆ. ಪ್ರತ್ಯೇಕ-ಪ್ರತ್ಯೇಕವಾಗಿ ಸಮುದಾಯಗಳನ್ನು ಕುರಿತು ಅಧ್ಯಯನ ಮಾಡುವುದರಿಂದ ಅವರು ಆರ್ಥಿಕ ವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ನೋಡುವುದರಿಂದ ಯಾವ ಸಮುದಾಯವು ಸಮಾಜದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಇತ್ಯಾದಿಗಳನ್ನು ಕುರಿತು ಅಧ್ಯಯನ ಮಾಡುವುದರಿಂದ ತಳಸಮುದಾಯಗಳ ಚರಿತ್ರೆ ಕಂಡುಬರುತ್ತದೆ. ಇವರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂಬುದು ಕಂಡುಬರುತ್ತದೆ. ಈ ಹಿಂದುಳಿವಿಕೆಗೆ ಕಾರಣಗಳೇನು? ಪರಿಣಾಮಗಳೇನು? ಅದಕ್ಕೆ ಪರಿಹಾರ ಉಪಾಯ ಗಳೇನು? ಎಂಬುದನ್ನು ತಿಳಿಯಬಹುದು. ಈ ರೀತಿ ಅಧ್ಯಯನ ಮಾಡುವುದರಿಂದ ಬಂಡವಾಳ ಶಾಹಿಗಳಿಂದ ಶೋಷಣೆಗೆ ಒಳಗಾಗಿದ್ದ ತಳಸಮುದಾಯವನ್ನು ಗುರುತಿಸಬಹುದು. ತಳ ಸಮುದಾಯಗಳಲ್ಲಿ ಕೃಷಿಯನ್ನೇ ಅವಲಂಬಿಸಿದಂತಹ ಸಮುದಾಯಗಳು ಬೀದಿಗೆ ಇಳಿಯ ವಂತಹ ಪ್ರಸಂಗ ಬಂದಿದೆ. ಏಕೆಂದರೆ ರೈತನು ಬೆಳದಂತಹ ಬೆಳೆಗೆ ಆಧುನಿಕ ಜಗತ್ತಿನ ಮಾರುಕಟ್ಟೆಯಲ್ಲಿ ತನ್ನ ಶ್ರಮಕ್ಕೆ ತಕ್ಕ ಬೆಲೆ ಇಲ್ಲದಂತೆ ಆಗಿದೆ. ಆದ್ದರಿಂದ ಇಂದು ರೈತ ಆತ್ಮಹತ್ಯೆಗೆ ಶರಣಾಗತನಾಗುತ್ತಿದ್ದಾನೆ. ಅನೇಕ ಸ್ತ್ರೀಯರು ಬಡತನದಿಂದ ವೇಶ್ಯಾವೃತ್ತಿಗೆ ಇಳಿದಿದ್ದಾರೆ. ಆರ್ಥಿಕವಾಗಿ ಶೋಷಣೆಗೆ ಈ ತಳಸಮುದಾಯಗಳು ಒಳಗಾಗಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಗೃಹ ಉಪಯೋಗಿ ಕೆಲಸಗಳನ್ನು ತಳಸಮುದಾಯಗಳು ಮಾಡುತ್ತಿದ್ದವು. ಉದಾಹರಣೆಗೆ ಬುಟ್ಟಿ ಹೆಣೆಯುವುದು, ಚರಕದಿಂದ ನೂಲನ್ನು ತೆಗೆಯುವುದು, ಗುಡಿಕೈಗಾರಿಕೆಗಳಾದ ಮಡಿಕೆ ತಯಾರಿಕೆ, ಗಡಿಗೆ ತಯಾರಿಕೆ, ಚಾಪೆ ತಯಾರಿಕೆ ಇನ್ನೂ ಮುಂತಾದವುಗಳನ್ನು ತಳಸಮುದಾಯಗಳು ತಯಾರಿಸುತ್ತಿದ್ದವು. ಅದರೆ ಇಂದು ಆಧುನಿಕ ಜಗತ್ತಿನ ಪ್ರಭಾವದಿಂದ ವಸಾಹತುಶಾಹಿಗಳ ಆಗಮನದಿಂದ ಬೃಹತ್ತಾದ ಕೈಗಾರಿಕೆ ಗಳು ಹುಟ್ಟಿಕೊಂಡವು. ಕೈಗಳಿಂದ ಮಾಡುವ ಕೆಲಸವನ್ನು ಆಧುನಿಕ ಯಂತ್ರಗಳು ಮಾಡಲಾ ರಂಭಿಸಿದವು. ದೇಶೀಯತೆಯನ್ನು ಮರೆಯವಂತೆ ಅಯಿತು. ಏಕೆಂದರೆ ವಿದೇಶಿಯರ ಆಗಮನ ದಿಂದ ದೇಶದಲ್ಲಿ ತಯಾರಿಸಿದ ವಸ್ತುಗಳಿಗೆ ಬೆಲೆ ಇಲ್ಲದಂತೆ ಆಯಿತು. ಆಧುನಿಕ ಜಗತ್ತಿನಲ್ಲಿ ವಿವಿಧ ಬಗೆಯ ತಾಂತ್ರಿಕವಾದ ಯಂತ್ರಗಳನ್ನು ಕಂಡುಹಿಡಿಯಲಾಯಿತು. ಉದಾ. ಕೈಗಳಿಂದ ತಯಾರಿಸಿದಂತಹ ಬಟ್ಟೆಗಳು ದಪ್ಪದಾಗಿರುತ್ತಿತ್ತು ಮತ್ತು ರಫ್ಪಾಗಿರುತ್ತಿತ್ತು. ಆಧುನಿಕ ಯಂತ್ರಗಳಿಂದ ತಯಾರಿಸಿದ ಬಟ್ಟೆಗಳು ಮೃದುವಾಗಿರುತ್ತಿದ್ದವು ಮತ್ತು ಆಕರ್ಷಿಕವಾಗಿರು ತ್ತಿದ್ದವು. ಆದ್ದರಿಂದ ಹೆಚ್ಚು ಜನಗಳು ಇಂತಹ ಬಟ್ಟೆಗಳಿಗೆ ಹೆಚ್ಚು ಮಹತ್ವವನ್ನು ಕೊಡಲಾಯಿತು. ಭಾರತ ದೇಶದಲ್ಲಿ ಕಚ್ಚಾವಸ್ತುಗಳು ಹೆಚ್ಚಾಗಿ ಕಂಡುಬರುತ್ತಿತ್ತು. ಆದರೆ ಅದನ್ನು ಸಿದ್ಧವಸ್ತುಗಳನ್ನಾಗಿ ತಯಾರಿಸಲು ಆಗುತ್ತಿರಲಿಲ್ಲ. ಆದ್ದರಿಂದ ಸಾಹತುಶಾಹಿಗಳ ಆಗಮನವಾದ ನಂತರ ಭಾರತದ ಕೃಷಿ, ಅರ್ಥವ್ಯವಸ್ಥೆಯಲ್ಲಿ ಅತಿ ಮುಖ್ಯವಾದ ಒಂದು ಪರಿವರ್ತನೆಯನ್ನು ಉಂಟುಮಾಡಿದರು. ಅದು ಭಾರತದ ಬೇಸಾಯ ಪದ್ಧತಿಯನ್ನು ಉತ್ತಮಪಡಿಸಿ ಉತ್ಪಾದನೆಯನ್ನು ಹೆಚ್ಚು ಮಾಡಿ ಅದರಲ್ಲಿ ತೊಡಗಿದ್ದ ಕೃಷಿಕರ ಯೋಗಕ್ಷೇಮ ಮತ್ತು ಅಭಿವೃದ್ಧಿಯನ್ನು ಅಧಿಕಗೊಳಿಸುವ ಉದ್ದೇಶದಿಂದಲ್ಲ. ಕೃಷಿಯನ್ನು ವಾಣಿಜ್ಯೀಕರಿಸು ವುದರ ಮೂಲಕ ಲಾಭವನ್ನು ಪಡೆಯುವುದು ವಸಾಹತುಶಾಹಿಗಳ ಉದ್ದೇಶವಾಗಿತ್ತು. ಕೃಷಿಯಲ್ಲಿ ಅಧಿಕವಾಗಿ ಬಂದುದನ್ನೆಲ್ಲ ಭೂಕಂದಾಯ ರೂಪದಲ್ಲಿ ವಸೂಲು ಮಾಡಲಾಗು ತ್ತಿತ್ತು. ತಮಗೆ ಅನುಕೂಲಕರವಾದ ಹೊಸ ಕೃಷಿ ಸಂಬಂಧಗಳನ್ನು ಹುಟ್ಟುಹಾಕಲಾಯಿತು. ವಸಾಹತುಶಾಹಿಗಳ ಸುಲಿಗೆಯ ಹೊಡೆತವನ್ನು ಬಹಳ ಉಗ್ರವಾಗಿ ಅನುಭವಿಸಿದವರು ಈ ತಳಸಮುದಾಯಗಳು. ಕಾಡಿನಲ್ಲಿ

ವಾಸಮಾಡುವಂತಹ ಬುಡಕಟ್ಟುಗಳ ಜನರು ವಸಾಹತು ಶಾಹಿಗಳ ಸಾಮ್ರಾಜ್ಯ ವಿಸ್ತರಣಾ ನೀತಿ ಮತ್ತು ಅನಾವಶ್ಯಕ ಮಧ್ಯ ಪ್ರವೇಶಗಳು ಅವರಿಗೆ ತೀವ್ರ ಅಸಮಧಾನವುಂಟು ಮಾಡಿದವು. ಎಲ್ಲಕಿಂತ ಮುಖ್ಯವಾಗಿ ತಮ್ಮ ಸರಳವೂ, ಸುರಕ್ಷಿತವೂ ಆದ ಬದುಕಿಗೆ ಹಣವನ್ನು ಸಾಲಕೊಡುವ ಶ್ರೀಮಂತರ, ವ್ಯಾಪಾರಿಗಳು ಮತ್ತು ಕಂದಾಯ ವಸೂಲಿಗಾರರು ಪ್ರವೇಶಸಿದ್ದು ಅವರಿಗೆ ಸಹಿಸಲಾಗಲಿಲ್ಲ. ಈ ಆದಿವಾಸಿಗಳನ್ನು ವಸಾಹತುಶಾಹಿ ಅರ್ಥವ್ಯವಸ್ಥೆ ಹಾಗೂ ಸುಲಿಗೆಗಳ ಪ್ರಭಾವಕ್ಕೆ ಒಳಪಡಿಸುವಲ್ಲಿ ಮಧ್ಯವರ್ತಿಗಳು ವಸಾಹತುಶಾಹಿಗಳ ಕೈಯ ಉಪಕರಣಗಳಾಗಿ ವರ್ತಿಸುತ್ತಿದ್ದರು. ಬುಡಕಟ್ಟು ಜನರ ಹೋರಾಟಗಳ ವಿಶಿಷ್ಟ ಲಕ್ಷಣವೆಂದರೆ ತಾವು ಪರಂಪರಾಗತವಾಗಿ ಬಳಸುತ್ತಿದ್ದ ಕೊಡಲಿ, ಬಿಲ್ಲು-ಬಾಣಗಳ ಮೂಲಕವೇ ವ್ಯವಸ್ಥಿತವಾದ ಮತ್ತು ಶಸ್ತ್ರಸಜ್ಜಿತವಾದ ಬ್ರಿಟೀಷ್ ಸೇನೆಯನ್ನು ಎದುರಿಸಿದ್ದುದು. ಬುಡಕಟ್ಟು ಜನರು ತಮ್ಮ ಪರಿಸರದಲ್ಲೇ ನಿರ್ಮಾಣ ಗೊಳ್ಳುತ್ತಿದ್ದ ಆಯುಧಗಳ ಬಗ್ಗೆ ಪವಿತ್ರ ಮತ್ತು ಗೌರವ ಭಾವನೆಯನ್ನು ಹೊಂದಿದ್ದರು. ಅದನ್ನೇ ಬ್ರಿಟೀಷರು ತಮ್ಮ ಲಾಭಕ್ಕೆ ಬಳಸಿಕೊಂಡರು. ಈ ರೀತಿಯಾಗಿ ಬ್ರಿಟೀಷರ ದಬ್ಬಾಳಿಕೆಯ ಆಳ್ವಿಕೆಯನ್ನು ಬುಡಕಟ್ಟು ಜನರು, ರೈತರು ಮತ್ತು ಮಹಿಳೆಯರು ಅನುಭವಿ ಸುತ್ತಲೇ ಜೀವನ ನಡೆಸಬೇಕಾಗಿತ್ತು. ‘‘ದಾದಾಬಾಯಿ ನವರೋಜಿ’’ ಹೀಗೆ ಹೇಳಿದ್ದಾರೆ. ‘‘ಭಾರತೀಯರು ಜೀತಗಾರರಾಗಿದ್ದಾರೆ. ಅವರು ಅಮೇರಿಕನ್ ಗುಲಾಮಗಿರಿಗಿಂತ ಹೀನ ಸ್ಥಿತಿಯಲ್ಲಿದ್ದಾರೆ. ಏಕೆಂದರೆ ಕೊನೆಯ ಪಕ್ಷ ಗುಲಾಮರನ್ನು ಅವರ ಒಡೆಯರು ತಮ್ಮ ಆಸ್ತಿ ಎಂಬುದರಿಂದಾಗಿಯಾದರೂ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಬ್ರಿಟೀಷ್ ಆಡಳಿತವು ಶಾಶ್ವತವಾದ ಹೆಚ್ಚುತ್ತಲಿರುವ ದಿನದಿನವೂ ಅಧಿಕವಾಗುತ್ತಿರುವ ವಿದೇಶಿ ಆಕ್ರಮಣ ಅದು ದೇಶವನ್ನು ನಿಧಾನವಾಗಿದ್ದರೂ ಸಂಪೂರ್ಣವಾಗಿ ನಾಶಮಾಡುತ್ತದೆ.’’

ಸ್ಥಳೀಯ ಶ್ರೀಮಂತ ಜಮೀನ್ದಾರರು ಮತ್ತು ಶ್ರೀಮಂತ ವರ್ತಕರು ದುಡಿಯುವ ವರ್ಗಗಳ ಹಿತಾಸಕ್ತಿಗಳಿಗೆ ಅನೇಕ ಸಂದರ್ಭಗಳಲ್ಲಿ ವಿರುದ್ಧವಾಗಿಯೇ ಇದ್ದರು. ಪ್ರಬಲ ವರ್ಗಗಳು ಸಬಾಲ್ಟರ್ನ್ ವರ್ಗಗಳನ್ನು ಶೋಷಣೆ ಮಾಡುವುದರ ಬಗೆಗಳನ್ನು ಇಟಲಿಯ ಮಾರ್ಕಿಸ್ಟನಾದ ಆ್ಯಂಟೋನಿಗ್ರಾಂಸಿಯು ‘ಹೆಜಮನಿ’ ಎನ್ನುವ ಪರಿಕಲ್ಪನೆಯ ಮೂಲಕ ತಿಳಿಸಿದ್ದಾನೆ. ಅಧಿಕಾರ ಮತ್ತು ಸಂಪತ್ತುಗಳೆರಡರಿಂದಲೂ ದೂರ ತಳ್ಳಲ್ಪಟ್ಟ ಬುಡಕಟ್ಟು, ಆದಿವಾಸಿ, ಕಾರ್ಮಿಕ, ರೈತ ಇತ್ಯಾದಿ ಗುಂಪುಗಳು ಈ ತಳಸಮುದಾಯಗಳಲ್ಲಿ ಕಂಡುರುತ್ತವೆ. ಒಟ್ಟಾರೆಯಾಗಿ ಈ ಆಧುನಿಕ ಜಗತ್ತಿನಲ್ಲಿ ಜಾಗತೀಕರಣ ಪ್ರಭಾವದಿಂದ ತಳ ಸಮುದಾಯಗಳ ಆರ್ಥಿಕ ಸ್ಥಿತಿ ದುರ್ಬಲವಾಗಿದೆ.

* * *

**ಹಲಗಲಿ ಬೇಡರು**

**೧ನೇ ನುಡಿ**

ಬೆನ್ನಹತ್ತಿ ತಿರಿತಿರಿವಿ ಕಡದರೂ ಯೇನು ಉಳಿಯದ್‌ಅಂಗ
ನಡವಿ ಹಾಕಿಕೊಂಡ ಹೊಡದರ ಗುಂಡ ದರಜ ಇಲ್ಲದ್‌ಹಾಂಗ

ಕವಾತ ಫೈರಾ ಸುತ್ತಗಟ್ಟಿ ತಂಬು ನುಡಿಶಾರ ಆವಾಗ
ತೋಪು ತುಬಾಕಿ ಕರುಲಿ ಪಿಸ್ತುಲ ಬಾಕ ನಡವಿನಾಗ

ಶಿಡಿಲಿನ ಹಂತ ಗುಂಡ ಹೊಡವುತ ಕತ್ತಿಲಿ ಕಡದರ ವೊಲತ್ ಆಂಗೆ
ನೆಡುಗಿತು ಬ್ಯಾಡಕಿ ಕೆನ್-ಧೂಳೆ ಹರಿದ್-ಅಂಗ ಕಡದಾಟವು ಹ್ಯಾಂಗ

ಕೇಡ-ಗಾಲ ಬಂದಿತ ನಡವಿ ಶಿಕ್ಕರೊ ಬಿಡಸವರ್-ಯಾರ್-ಈಗ
ಚಟಕಾರರು ಚಾಟಿ ಮಾಡುತ ನಡದರ ಗುಡದಾಗ ||ಇಳವ||

## ೧೬. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಆಧುನಿಕ ಜಗತ್ತಿನಲ್ಲಿ ತಳಸಮುದಾಯಗಳು ಸರ್ಕಾರದಿಂದಾಗಿ ಹೇಗೆ ನಿರ್ಲಕ್ಷ್ಯಕ್ಕೆ ಒಳಪಟ್ಟಿವೆ ಎಂಬುದನ್ನು ಮತ್ತು ಆಧುನೀಕರಣದಿಂದಾಗಿ ಪಾರಂಪರಿಕ ಉದ್ಯೋಗವನ್ನು ನಂಬಿ ಬದುಕುತ್ತಿರುವ ಈಗಿನವರ ಸ್ಥಿತಿಯನ್ನು ಮರಿಯಮ್ಮನಹಳ್ಳಿ ಎಂಬ ಗ್ರಾಮವನ್ನು ಉದಾಹರಣೆಯಾಗಿ ಇಟ್ಟುಕೊಂಡು ಹೇಳುತ್ತೇನೆ.

ಮರಿಯಮ್ಮನಹಳ್ಳಿ ಬಳ್ಳಾರಿ ಜಿಲ್ಲಾ, ಹೊಸಪೇಟೆ ತಾಲ್ಲೂಕಿನ ಒಂದು ಗ್ರಾಮವಾಗಿದೆ. ಇಲ್ಲಿ ನೆಲೆಸಿರುವವರೆಲ್ಲಾ ತಳಸಮುದಾಯದವರು. ತುಂಗಾಭದ್ರ ಜಲಾಶಯದ ಆಣೆಕಟ್ಟಿನಲ್ಲಿ ಮುಳುಗಡೆಯಾದ ಹಳ್ಳಿಗಳಿಂದ ವಲಸೆ ಬಂದವರಾಗಿದ್ದಾರೆ. ೧೯೫೩ರಿಂದ ಇಲ್ಲಿಗೆ ಬಂದು ನೆಲೆಸಿದ ತಳಸಮುದಾಯಗಳಿಗೆಲ್ಲಾ ಈ ಹಳ್ಳಿಯ ಸುತ್ತಮುತ್ತ ಕೃಷಿ ಭೂಮಿಯನ್ನು ನೀಡಿತ್ತು ಮತ್ತು ಸಮೀಪದ ಡಣಾಯಕನ ಕೆರೆಗೆ ತುಂಗಾಭದ್ರಾ ಜಲಾಶಯದಿಂದ ನೀರು ಹಾಯಿಸುವ ಭರವಸೆಯನ್ನು ನೀಡಿತ್ತು. ಆ ಭರವಸೆಯನ್ನು ಇಲ್ಲಿಯವರೆಗೂ ಆದರೂ ಸರ್ಕಾರ ಈಡೇರಿ ಸಲು ಸಾಧ್ಯವಾಗಿಲ್ಲ.

ಅಲ್ಲದೆ ತುಂಗಾಭದ್ರಾ ನದಿಯಿಂದ ಕೇವಲ ನಾಲ್ಕು ಕಿಲೋಮೀಟರ್ ಅಂತರದಲ್ಲಿ ಇರುವ ಮರಿಯಮ್ಮನಹಳ್ಳಿಗೆ ಕುಡಿಯುವ ನೀರಿನ ಭಾಗ್ಯ ಇಲ್ಲದಾಗಿವೆ. ಹೆಚ್ಚಾಗಿ ತಳ ಸಮುದಾಯದವರೆ ನೆಲೆಸಿರುವ ಈ ಊರನ್ನು ಅವರು ಮೊದಲಿನಿಂದ ಮಾಡಿಕೊಂಡು ಬಂದಂತಹ ಪಾರಂಪರಿಕ ಉದ್ಯೋಗವಾದ ಕುಂಕುಮ ತಯಾರಿಸುವುದು, ಕಸಬರಿಕೆ ತಯಾರಿಸುವುದು, ಬಿದಿರಿನ ತಯಾರಿಕೆ, ಸುಣ್ಣ ತಯಾರಿಸುವುದು ಮುಂತಾದ ಗುಡಿಕೈಗಾರಿಕೆ ಆಧುನೀಕತೆಯಿಂದ ತಮ್ಮ ನೆಲೆಯನ್ನು ಕಳೆದುಕೊಂಡು ಮೂಲೆಗುಂಪು ಆಗಿವೆ. ಇಂಥ ಸಂದರ್ಭದಲ್ಲಿ ಮರಿಯಮ್ಮನಹಳ್ಳಿಯಂಥ ಒಂದು ಗ್ರಾಮದಲ್ಲಿ ನಡೆಯುತ್ತಾ ಬಂದಂತ ಪಾರಂಪರಿಕ ಉದ್ಯೋಗಗಳು ಇಂದಿನ ಜಾಗತೀಕರಣ ಹೊತ್ತಲ್ಲಿ ಹೊಸ ಪ್ಯಾಷನ್‌ಗಳಿಗೆ ಬಹುಬೇಗನೆ ಒಳಗಾಗುತ್ತಿರುವ ಯುವ ಜನತೆಯ ಅಭಿರುಚಿಗಳಿಗೆ ತಕ್ಕಂತೆ ನಮ್ಮ ಪಾರಂಪರಿಕ ಉದ್ಯೋಗಗಳು ಸೃಷ್ಟಿಸಿರುವ ವಸ್ತುಗಳ ಸ್ಪರ್ಧಿಸಲು ಹೋಗಿ ಸೋಲು ಕಾಣುತ್ತಿವೆ. ಉದಾಹರಣೆಗೆ ಕುಂಕುಮ ತಯಾರಿಕೆಯಂತಹ ಗುಡಿಕೈಗಾರಿಕೆಯನ್ನು ನೋಡಿದರೆ, ಕುಂಕುಮ ತಯಾರಿಸುವಲ್ಲಿ ಮನೆ ಮಂದಿಯೆಲ್ಲ ಭಾಗವಹಿಸುತ್ತಿದ್ದರು. ಈಗ ಕೈ ಬಿಟ್ಟು ಕಂಪನಿಗಳು ತಯಾರಿಸುವ ಮಾರುಕಟ್ಟೆಯಲ್ಲಿ ಸಿಗುವ ಕುಂಕುಮವನ್ನು ಖರೀದಿಸಿ ತಂದು ಮಾರುವುದನ್ನು ಕಾಣಬಹುದು. ಜೊತೆಗೆ ಇಂದು ಟಿಕಳಿ, ಹೊಸ ಕಲರ್ ತುಂಬಿರುವ ಕುಂಕುಮಗಳು ಫ್ಯಾಷನ್ ಆಗಿ ಬರುವ ಡಿಸೈನ್ ಬಿಂದಿಗಳು ಇವೆಲ್ಲ ಕುಂಕುಮಕ್ಕೆ ಸ್ಪರ್ಧಿಸು ವಂತ ಸಂದರ್ಭದಲ್ಲಿ ಹಳೆಗಿಂತ ಹೊಸ ಫ್ಯಾಷನ್‌ಗೆ ಮಾರು ಹೋಗುವ ಜನತೆ ಹೊಸದನ್ನು ಬಳಸುವ ಗುಂಗಿನಲ್ಲಿರುತ್ತಾರೆಯೇ ಹೊರತು ಹಳೆಯದರ ಕಡೆಗೆ ಗಮನ ನೀಡುವುದಿಲ್ಲ. ಹೀಗಾಗಿ ನಮ್ಮ ಪಾರಂಪರಿಕ ಉದ್ಯೋಗಗಳು ನಾಶ ಹೊಂದುತ್ತಿವೆ. ಇನ್ನು ಕೃಷಿ ಭೂಮಿ ಯನ್ನು ತೆಗೆದುಕೊಂಡಾಗ ಮರಿಯಮ್ಮನಹಳ್ಳಿ ಗ್ರಾಮದ ಭೂಮಿಯು ಸವಳು ಭೂಮಿ. ಕಲ್ಲುಗಳಿಂದ ಕೂಡಿರುವ ಅಷ್ಟೇನು ಫಲವತ್ತಿಲ್ಲದ ಭೂಮಿಯಲ್ಲಿ ಮಳೆಯ ಪ್ರಮಾಣವು ಕಡಿಮೆ ಬೆಳೆಯುವಂತ ಬೆಳೆಯು ಅಷ್ಟೇನು ಲಾಭ ತರದು. ಈ ಸಂದರ್ಭದಲ್ಲಿ ರೈತರು ಹೆಸರಿಗೆ ಮಾತ್ರ ಇಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಒಂದು ಕಡೆ ಪಾರಂಪರಿಕ ಉದ್ಯೋಗಗಳ ಹಿನ್ನಡೆ ಕೃಷಿಯನ್ನು ಕಾಣದ ಭರವಸೆ ಇಂಥ ಸಂದರ್ಭದಲ್ಲಿ ಈ ಗ್ರಾಮದ ತಳಸಮುದಾಯದ ಜನರಿಗೆ ತಮ್ಮ ಬದುಕನ್ನು ಸಾಗಿಸಲು ಉಳಿದಿರುವುದು ಬಳ್ಳಾರಿಯ ಮೈನಿಂಗ್‌ನಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುವುದು. ಈ ಮೈನಿಂಗ್‌ನ್ನು ಗಮನಿಸಿದರೆ ಮರಿಯಮ್ಮನ ಹಳ್ಳಿಯ ಈ ತಳಸಮುದಾಯದವರಿಗೆ ಮೈನಿಂಗ್ ಒಂದು ವರವೇ ಸರಿ. ಅದು ಹಸಿದ ಹೊಟ್ಟೆ ಹೊರೆಯಲು ಹೊರತು ಆರೋಗ್ಯದ ದೃಷ್ಟಿಯಿಂದಲ್ಲ. ಈ ಗ್ರಾಮದ ವಾಲ್ಮೀಕಿ ಸಮುದಾಯದವರ, ಶೇ.

೬೦ರಷ್ಟು ಜನರ ಮುಖ್ಯ ಉದ್ಯೋಗ ಮೈನಿಂಗ್‌ನ್ನು ಕೂಲಿ ಕಾರ್ಮಿಕರಾಗಿ ದುಡಿಯುವುದು ಅದು ೧೮, ೧೦, ೩೦ ವರ್ಷದ ಯುವಕರು ಲಾರಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದಾರೆ. ಯಾಕೆಇವರಿಗೆ ಈ ಮೈನಿಂಗ್ಸ್‌ನಲ್ಲಿ ಲಾರಿ ಓಡಿಸಲು ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಸ್ವಲ್ಪ ಆಲೋಚಿಸಿದರೆ ವಾಲ್ಮೀಕಿಯಂಥದ ತಳಸಮುದಾಯದ ಪ್ರಾಣದ ಹಂಗು ತೊರೆದು ಹಲವಾರು ಟ್ರಿಪ್ಪನ್ನು ಹೊಡೆಯಲು ಯುವ ಸಮೂಹ ಸಜ್ಜಾಗಿ ನಿಂತಿವೆ. ಇವರಿಗೆ ದುಡ್ಡನ್ನು ಜಾಸ್ತಿ ಕೊಟ್ಟರೆ ಸಾಕು ತಮ್ಮ ಪ್ರಾಣವನ್ನು ಲೆಕ್ಕಿಸದೆ ಹಲವು ಟ್ರಿಪ್ ಹೊ಼ಿದು ಬಿಡುತ್ತಾರೆ. ಇನ್ನು ಮಹಿಳೆಯರು ಸದಾ ಮೈನ್ಸ್‌ನಲ್ಲಿ ಕಲ್ಲು ಆರಿಸಲು, ಮಣ್ಣನ್ನು ಜರಡಿ ಮಾಡಲು, ದೂಳಿನಲ್ಲಿ ಕೆಲಸಮಾಡಲು ಸಜ್ಜಾಗಿರುತ್ತಾರೆ. ಇವರಿಗೆ ದಿನ ಗೂಲಿ ಎಂದು ಹಣ ನೀಡುತ್ತಾರೆ ಹೊರತು ಇಲ್ಲಿ ಮೈನಿಂಗ್‌ನಲ್ಲಿ ದುಡಿಯುವ ಈ ಕಾರ್ಮಿಕರಿಗೆ ಯಾವ ಭದ್ರತೆ ಜೀವನದ ಬಗ್ಗೆ ವಿಮೆ ಸೌಲಭ್ಯಗಳು ಏನು ಇರುವುದಿಲ್ಲ. ಹೀಗೆ ಉದ್ಯೋಗದ ಅನಿವಾರ್ಯತೆಯಿಂದಾಗಿ ಈ ಕೆಳವರ್ಗಗಳು ಈ ಮೈನಿಂಗ್ಸ್‌ನಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಇಂದಿನ ಆಧುನಿಕ ಜಗತ್ತಿನಲ್ಲಿ ಕೆಲವೊಂದು ಪಾರಂಪರಿಕ ಗುಡಿಕೈಗಾರಿಕೆಗಳನ್ನು ನಡೆಸುತ್ತಿ ರುವ ತಳಸಮುದಾಯದವರಿಗೆ ನೆಲೆಯೇ ಇಲ್ಲದಾಗಿದೆ.

* * *

## ೧೭. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಇತ್ತೀಚಿನ ದಿನಮಾನಗಳಲ್ಲಿ ಉಪೇಕ್ಷಿತ ಸಮುದಾಯಗಳ ಬಗ್ಗೆ ಗಂಭೀರವಾದ ಚಿಂತನೆಗಳೂ, ಚರ್ಚೆಗಳೂ ನಡೆಯುತ್ತಿವೆ. ಇದೊಂದು ಆರೋಗ್ಯಕರವಾದ ಬೆಳವಣಿಗೆಯಾಗಿದೆ. ಮೊನ್ನೆ ಮೊನ್ನೆಯವರೆವಿಗೂ ತಳಸಮುದಾಯಗಳು ಇತಿಹಾಸ, ಧರ್ಮ, ಪರಂಪರೆ ಗಳ ಬಗೆಗೆ ಅಚಲವಾದ ನಂಬಿಕೆಯನ್ನು ಹೊಂದಿದ್ದವು. ಅಲ್ಲಿನ ವಿಧಿನಿಷೇಧಗಳಿಗೆ ಅನುಗುಣ ವಾಗಿ ಬದುಕುವುದು ತಮ್ಮಧರ್ಮ ಕರ್ತವ್ಯ ಎಂದೇ ತಿಳಿದು, ಆ ವ್ಯವಸ್ಥೆಯನ್ನು ಯಾವತ್ತು ಅನುಮಾನಿಸದೆ, ಅಗೌರವಿಸದೆ ಅತ್ಯಂತ ವಿಧೇಯತೆಯಿಂದ ಪಾಲಿಸಿಕೊಂಡು ಬಂದಿವೆ. ತಳಸಮುದಾಯಗಳ ಈ ವಿರೋಧರಹಿತ ಮನೋಧೋರಣೆ ಅವರನ್ನು ಅತ್ಯಂತ ಆಳಕ್ಕೆ ತಳ್ಳಲ್ಪಟ್ಟಿತು.

ವಸಹಾತೋತ್ತರ ಭಾರತ, ಅಕ್ಷರವಂಚಿತ ಸಮುದಾಯಗಳಿಗೆ ಅಕ್ಷರ ಕಲಿಯುವ ಅವಕಾಶ ಕಲ್ಪಿಸಿಕೊಟ್ಟಿತು. ಪರಿಣಾಮವಾಗಿ ತಳಸಮುದಾಯಗಳ ಒಳಗಿನ ಸೂಕ್ಷ್ಮಪ್ರಜ್ಞೆಗಳು ಎತ್ತರ ಸಂಸ್ಕೃತಿಗಳ ಸೋಗಲಾಡಿತನವನ್ನು, ಜೀವ ವಿರೋಧಿ ಮನಸ್ಥಿತಿಗಳನ್ನು ಅರ್ಥಮಾಡಿ ಕೊಂಡು, ಆ ಹೊತ್ತಿನಿಂದಲೇ ಪರಂಪರೆಯನ್ನು ಅನುಮಾನಿಸುತ್ತ, ಪ್ರಶ್ನಿಸುತ್ತ ಬಂದಿದೆ. ಈ ದಿಸೆಯಲ್ಲಿ ಪ್ರಜ್ಞಮನಸ್ಸುಗಳು ತಳಜನರಲ್ಲಿ ಜಾಗೃತಿ ಮೂಢಿಸಿ ಬದುಕಿನ ಭದ್ರತೆಗೆ ಅಗತ್ಯವಾದ ರೂಪು-ರೇಷೆಗಳನ್ನು ರೂಪಿಸುವುದು ಇಂತಹ ಚರ್ಚೆಗಳ ಮುಖ್ಯ ಕಾಳಜಿಯಾಗ ಬೇಕಾಗಿದೆ. ಪ್ರಸ್ತುತ ಈ ಪ್ರಬಂಧದಲ್ಲಿ ನಾಯಕ ಸಮುದಾಯದ ಬಗ್ಗೆ ಗಮನಹರಿಸಲಾಗಿದೆ.

ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ 'ನಾಯಕ' ಸಮುದಾಯವೂ ಒಂದು. ಶತಮಾನಗಳಷ್ಟು ಹಳೆಯ ಇತಿಹಾಸ ಪರಂಪರೆ ಹೊಂದಿರುವ ಈ ಸಮುದಾಯ ಅನೇಕ ಏಳು-ಬೀಳುಗಳನ್ನು ಕಂಡಿದೆ. ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ನಾಯಕ ಸಮುದಾಯ, ಬೇರೆ ಬೇರೆ ಕಾಲಘಟ್ಟಗಳಲ್ಲಿ ವಿಭಿನ್ನ ಸಂಸ್ಕೃತಿಗಳ ಜತೆ ಮುಖಾಮುಖಿ ಯಾಗುತ್ತ, ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಗಟ್ಟಿಗೊಳಿಸಿಕೊಳ್ಳುತ್ತ ಬಂದಿದೆ.

ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಣೆ ಮಾಡಬೇಕೆಂಬ ಇರಾದೆಯಿಂದ ಸರಕಾರ ಅರಣ್ಯ, ಜಲ ಮೊದಲಾದ ಸಂಪನ್ಮೂಲಗಳನ್ನು ರಾಷ್ಟ್ರೀಕರಣ ಮಾಡಿತು. ಕಾಡು ಆದಿವಾಸಿ ಬುಡಕಟ್ಟು ಜನರ ಬದುಕಾಗಿತ್ತು. ಜೀವಾಳವಾಗಿತ್ತು. ಪ್ರಕೃತಿ ಸಂಪನ್ಮೂಲಗಳನ್ನು

ಎದುರಿಸಬೇಕಾಯಿತು. ಅಭಿವೃದ್ಧಿಯ ಹೆಸರಿನಲ್ಲಿ ರಕ್ಷಿತ ಅರಣ್ಯ ಧಾಮಗಳಲ್ಲಿ ಜನವಸತಿ ಮತ್ತು ಪಶುಪಾಲನೆಗೆ ನಿರ್ಬಂಧಗಳನ್ನು ಹಾಕುವುದರ ಮುಖಾಂತರ ಆ ಜನರ ಬದುಕಿನ ಹಕ್ಕನ್ನು ಕಿತ್ತುಕೊಂಡಿತು. ಆ ಮೂಲಕ ಪಶುಪಾಲನೆ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳು ಸವಾಲುಗಳನ್ನು ತಂದೊಡ್ಡಿದವು. ಇದೇ ವೇಳೆ ಅನೇಕರು ತಮ್ಮ ವೃತ್ತಿ ಬದುಕುಗಳನ್ನು ಬಿಟ್ಟು, ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಸಿಕೊಂಡರು. ಸ್ವಾವಲಂಬಿಗಳಾಗಿ ಬದುಕುತ್ತಿದ್ದ ಇವರು ಮತ್ತೊಬ್ಬರನ್ನು ಆಶ್ರಯಿಸುವಂತಾಯಿತು. ಪಶುಪಾಲನೆ ಮುಂದುವರಿಸಿಕೊಂಡು ಬಂದವರು, ಇಂದು ಹೊಸ ಸಮಸ್ಯೆಗಳನ್ನು ಎದುರಿಸಬೇಕಿದೆ. ಮಾರುಕಟ್ಟೆಗಳಲ್ಲಿ ಸರಿಯಾದ ಬೆಂಬಲ ಬೆಲೆ ಸಿಗದೆ ನಷ್ಟವನ್ನು ಅನುಭವಿಸುತ್ತಿರುವುದು ಇನ್ನೊಂದು ಬಗೆ. ಈ ಯಾವ ಸಮಸ್ಯೆಗಳಿಗೂ ಸರಕಾರವು ನೆರವಾಗದೆ, ಇವರ ಬದುಕನ್ನು ಅತಂತ್ರವಾಗಿಸಿದೆ. ಹೀಗಾಗಿ 'ಪಶುಪಾಲನೆ' ಕ್ರಮೇಣವಾಗಿ ಕಡಿಮೆಯಾಗುತ್ತಿದೆ.

'ಪಶುಪಾಲನೆ' ಕೇವಲ ಆ ಸಮುದಾಯದ ಒಂದು ಭಾಗವಾಗಿರಲಿಲ್ಲ. ಸುತ್ತಲಿನ ಜನರ ಮೇಲೆ ಪರಿಣಾಮವನ್ನುಂಟು ಮಾಡುತ್ತಿತ್ತು. ಸಾವಯವ ಕೃಷಿಯಲ್ಲಿ ಕೊಟ್ಟಿಗೆ ಗೊಬ್ಬರಗಳನ್ನು ಬಳಕೆ ಮಾಡುತ್ತಿದ್ದುದರಿಂದ ಆಹಾರ ಧಾನ್ಯಗಳಲ್ಲಿ ಔಷಧಿಯ ಗುಣವಿದ್ದು, ಮನುಷ್ಯನಿಗೆ ರಕ್ಷಾಕವಚವಾಗಿತ್ತು. ಆಧುನೀಕರಣ, ಜಾಗತೀಕರಣದ ಪ್ರಭಾವದಿಂದ ಸಾವಯವ ಗೊಬ್ಬರಗಳು ಬದಲಾಗಿ, ರಾಸಾಯನಿಕಗೊಬ್ಬರ ಬಳಕೆ ಮಾಡುತ್ತಿದ್ದು, ಅವು ಪ್ರತಿಕೂಲ ಪರಿಣಾಮ ಬೀರುತ್ತವೆ. ಭೂಮಿ ಶಕ್ತಿ ಕಳೆದುಕೊಂಡು ಬಂಜೆಯಾಗುತ್ತಿದ್ದು, ಆಹಾರಕ್ಕಾಗಿ ಪರರನ್ನು ಅವಲಂಬಿಸಬೇಕಾದ ನಾಳಿನ ಅಪಾಯಗಳನ್ನು ಅರ್ಥಮಾಡಿಕೊಳ್ಳ ಬೇಕಿದೆ.

ಆಧುನೀಕರಣ ಮತ್ತು ಜಾಗತೀಕರಣ ತಳಸಮುದಾಯಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಒಂದು ರೀತಿಯ ಸಂಚಲವನ್ನುಂಟು ಮಾಡಿವೆ. ಆಧುನಿಕ ತಂತ್ರಜ್ಞಾನ ಹಟ್ಟಿ-ಹಳ್ಳಿಗಳಿಗೂ ಹತ್ತಿರವಾಗುತ್ತಿದ್ದು, ಆ ನೆಲೆಗಳು ಅನೇಕ ಸ್ಥಿತ್ಯಂತರಗಳಿಗೆ ಒಳಗಾಗಿವೆ. ವಿಶೇಷವಾಗಿ ದೂರದರ್ಶನ, ಸಿನೆಮಾದಂತಹ ಮಾಧ್ಯಮಗಳು ಈ ವರ್ಗಗಳನ್ನು ಬಹುವಾಗಿ ಆಕರ್ಷಿಸಿವೆ. ಆ ಪರದೆಗಳ ಮೇಲೆ ಮೂಡಿಬರುವ ತನ್ನದಲ್ಲದ ಬದುಕನ್ನು, ತನ್ನದಾಗಿಸಿಕೊಳ್ಳಬೇಕೆಂಬ ನಿಟ್ಟಿನಲ್ಲಿ, ವಾಸ್ತವತೆಯನ್ನು ಮರೆತು ಭ್ರಮೆಗೆ ಒಳಗಾಗುತ್ತಿವೆ. ಮುಂದುವರೆದ ನಾಗರೀಕ ಬದುಕನ್ನು ನಾವೂ ಬದುಕಬೇಕೆಂದು ಬಯಸಿ, ತನ್ನ ವಾಸ್ತವದ ಪರಿಸ್ಥಿತಿಗೆ ಒಗ್ಗದ ಮತ್ತು ನಿಲುಕದ ಅನಗತ್ಯ ಪ್ರಯತ್ನಗಳಿಗೆ ಮುಂದಾಗುತ್ತಿವೆ. ಈ ಬಗೆಯ ಹಪಾಹಪಿತನ ಅವರ ಬದುಕನ್ನು ಸಂಕೀರ್ಣಗೊಳಿಸಿದೆ. ಖಿನ್ನತೆಗೂ, ಭ್ರಮೆಗೂ ಒಳಗು ಮೂಡಿದ್ದು, ಯುವಜನತೆಯನ್ನು ನಗರ, ನಾಗರೀಕತೆಯತ್ತ ಸೆಳೆದಿದೆ.

ಹಳ್ಳಿ ಹಟ್ಟಿಗಳು ನಗರಗಳ ಕಡೆ ಮುಖಮಾಡಿವೆ. ನಾಗರೀಕ ಬದುಕನ್ನು ಅನುಕರಣೆ ಮಾಡುತ್ತ ತಮ್ಮ ಜೀವನ ವಿಧಾನದಲ್ಲಿ ಹಲವು ರೀತಿಯ ಬದಲಾವಣೆಗಳನ್ನು ಅಳವಡಿಸಿ ಕೊಂಡಿವೆ. ಲುಂಗಿ ಬದಲು ಪ್ಯಾಂಟು, ಲಂಗದ ಬದಲು ಮಿಡಿ, ಸೀರೆಯ ಬದಲು ಚೂಡಿದಾರ, ರಿಬ್ಬನ್ ಬದಲು ಹೇರ್ ಬೆಂಡು/ಕ್ಲಿಪ್, ಜಡೆಗೆ ಬದಲು ಬಾಬ್‌ಕಟ್ಟು, ಬಳೆಗೆ ಬದಲು ಗಡಿಯಾರ ಗುಡಿಸಲು ಚಪ್ಪರದ ಬದಲು ಮಹಡಿ, ಇದ್ದಿಲು ಬದಲು ಟೂತ್‌ಪೇಸ್ಟ್, ಬೇವಿನಕಡ್ಡಿ ಬದಲು ಬ್ರೆಷ್ ಹೀಗೆ ನಗರದ ಜನಬಳಸುವ ಸರಕುಗಳ ಬಳಕೆಯೇ ಪರಿವರ್ತನೆ, ಅಭಿವೃದ್ಧಿ ಎಂದು ಭಾವಿಸಿದಂತಿವೆ. ಈ ಪರಿವರ್ತನೆಯು ಕೂಡ ಅಕ್ಷರ ಕಲಿಯವವರಿಗಿಂತ ಕಲಿತವರಲ್ಲಿ, ಸ್ತ್ರೀಯರಿಗಿಂತ ಪುರುಷರಲ್ಲಿ ಅಧಿಕವಾಗಿರುವುದು ಗಮನಾರ್ಹ ಸಂಗತಿ.

ಸರಕಾರವು ಹಟ್ಟಿಗಳನ್ನು ಅಭಿವೃದ್ಧಿ ಪಡಿಸಿ ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ ನಿಟ್ಟಿನಲ್ಲಿ ಕ್ರೀಯಾಶೀಲವಾಗಿದೆ. ಈ ದಿಸೆಯಲ್ಲಿ ಹಟ್ಟಿಗಳಿಗೂ ಶಾಲೆ, ಕುಡಿಯುವ ನೀರು, ಸಾರಿಗೆ ಸಂಪರ್ಕ, ಶೌಚಾಲಯ, ಆಸ್ಪತ್ರೆ, ವಿದ್ಯುತ್ತು ಇವೇ ಮೊದಲಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದೆ. ನಾಗರೀಕ ಜೀವನದ ಸವಲತ್ತುಗಳನ್ನು ಹಟ್ಟಿ ಹಳ್ಳಿಗಳಿಗೂ ತಲುಪಿಸುವು ದನ್ನೇ ಅಭಿವೃದ್ಧಿಯೆಂದು ತಿಳಿದಿದೆ. ಸರಕಾರ ಅಭಿವೃದ್ಧಿಗೆ ಬಳಸುವ ಮಾನದಂಡಗಳೂ ಕೂಡ ಇವೇ ಆಗಿವೆ. ಹಾಗಾದರೆ ಈ ಸವಲತ್ತುಗಳು ಕಂಡಿರುವ ಹಳ್ಳಿಗಳು ವಾಸ್ತವವಾಗಿ ಅಭಿವೃದ್ಧಿಯಾಗಿವೆಯೇ? ಅಂತಹ ಹಳ್ಳಿ-ಹಟ್ಟಿಗಳಲ್ಲಿ ಈಗಲೂ ಗುಡಿಸಲುಗಳಿವೆ. ಬೇಟೆ ಸಂಸ್ಕೃತಿಯಿದೆ, ಮೈಗೆ ಕುಪ್ಪಸ ತೊಡದ ಸ್ತ್ರೀಯರೂ

ಇರುವಂತೆ, ಅಂಗಿ ತೊಡದ ಪುರುಷರೂ ಇದ್ದಾರೆ, ಕೋಳಿ ತಿನ್ನದ ಈಚಲು ಚಾಪೆಯ ಮೇಲೆ ಕೂರದ ಜನರೂ, ಜನ ನಂಬಿಕೆಗಳೂ ಇವೆ. ಅಜ್ಞಾನ, ಅಂಧಕಾರ, ರೂಢಿಸಂಪ್ರದಾಯಗಳೂ ಇವೆ.

ಆಧುನೀಕರಣ ಕಾಲಘಟ್ಟದಲ್ಲಿಯೂ ಆಧುನೀಕರಣದ ವರ್ಣರಂಜಿತ ಬದುಕು ಕಣ್ಣಿಗೆ ಕಾಣಿಸುತ್ತಿದ್ದರೂ, ನಾಗರೀಕತೆಯ ಸವಲತ್ತುಗಳನ್ನು ತನ್ನನೆರೆಹೊರೆಯವರು ಅನುಭವಿಸುತ್ತಿ ದ್ದರೂ, ಹಟ್ಟಿಗಳು ಇನ್ನೂ ಇದ್ದಲ್ಲಿಯೇ ಇವೆ. ಹಟ್ಟಿಗಳು ಹಟ್ಟಿಗಳಾಗಿಯೇ ಉಳಿದಿವೆ. ಬುಡಕಟ್ಟಿನ ಸಂಸ್ಕೃತಿಯನ್ನು ಬಿಗಿಯಾಗಿ ಅಪ್ಪಿಕೊಂಡಿರುವ ಹಟ್ಟಿಗಳು, ಬಿಟ್ಟೂ ಬಾರದ ಸ್ಥಿತಿಯಲ್ಲಿ ಸಿಕ್ಕು ಒದ್ದಾಡುತ್ತಿವೆ. ಬುಡಕಟ್ಟಿನ ಸಂಸ್ಕೃತಿಯನ್ನು ಮೀರಬೇಕೆಂದಾಗಲೆಲ್ಲಾ ತಮಗರಿವಿಲ್ಲದೆಯೇ ಯಾವುದೋ ಅನಾಥ ಪ್ರಜ್ಞೆಗೆ ಒಳಗಾಗುತ್ತಿವೆ. ಏನನ್ನೋ ಕಳೆದುಕೊಳ್ಳು ತ್ತೇವೆಂಬ ಆತಂಕವನ್ನು ಅನುಭವಿಸುತ್ತವೆ. ಈ ಅನಾಥಪ್ರಜ್ಞೆಗೆ, ಆತಂಕಕ್ಕೆ ತನ್ನ ಸಂಸ್ಕೃತಿಯ ಮೇಲಿನ ವ್ಯಾಮೋಹವೇ ಕಾರಣವೆಂದೆನಿಸಿದರೂ, ಈ ಮನೋಧರ್ಮಕ್ಕೆ ಇನ್ನೂ ಬಗೆಯ ಕಾರಣಗಳು ಇರುವುದನ್ನು ತಿರಸ್ಕರಲಾಗದು.

ಹಾಗಾಗಿ ಪರಿವರ್ತನೆ ಅಥವಾ ಅಭಿವೃದ್ಧಿ ಎನ್ನುವುದು ಕೇವಲ ವಸ್ತುವಿನ ರೂಪದಲ್ಲಿ ಅಂದರೆ ಭೌತಿಕ ರೂಪದಲ್ಲಿ ಇರುವುದಿಲ್ಲ. ಭೌತಿಕ ಮತ್ತು ಭೌದ್ಧಿಕ ಎರಡೂ ಆಯಾಮ ಗಳಿಗೆ ಸಂಬಂಧಿಸಿದ್ದು. 'ಅಭಿವೃದ್ಧಿ' ಎನ್ನುವುದು ದೇಹ ಮತ್ತು ಆತ್ಮಗಳ ಸಂಗಮವಿದ್ದಂತೆ. ಹೀಗಾಗಿ ಈ ಎರಡರಲ್ಲಿ ಯಾವೊಂದರ ಪ್ರಗತಿಯೂ ಅಭಿವೃದ್ಧಿ ಎನಿಸಲಾರದು. ನಾಗರೀಕ ಸವಲತ್ತುಗಳೂ, ಉಡುಗೆ-ತೊಡುಗೆ, ಆಸಕ್ತಿ-ಅಭಿರುಚಿಗಳ ಪರಿವರ್ತನೆಯೂ ಅಭಿವೃದ್ಧಿಯೇ ಅದು ಅಭಿವೃದ್ಧಿಗೆ ಅವಶ್ಯಕವೂ ಹೌದು. ಆದರೆ ಅದುವೇ ಅಭಿವೃದ್ಧಿಯ ಅಂತಿಮವಲ್ಲ. ಅದು ಅಭಿವೃದ್ಧಿಯ ಒಂದು ಮುಖವಷ್ಟೆ. "ನಿನ್ನ ನೀನರಿತ ಮೇಲೆ ಇನ್ನೇನು ಇನ್ನೇನು" ಎಂಬ ವಚನದಲ್ಲಿ ಅಭಿವೃದ್ಧಿಯ ತಾತ್ವಿಕತೆ ಸ್ವರೂಪವನ್ನು ಗಮನಿಸಬಹುದಾಗಿದೆ.

ಹಟ್ಟಿಗಳ, ಹಟ್ಟಿಜನರ ಏಳಿಗೆಗೆ ಅನೇಕ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿದ್ದರೂ ಯಶಕಾಣದಾಗಿವೆ. ಏಕೆಂದರೆ ಆ ಜನ ಬೌದ್ಧಿಕವಾಗಿ ಬದಲಾಗದಿರುವುದು. ಪರಿವರ್ತನೆ ಯನ್ನು ಒಪ್ಪಿಕೊಳ್ಳುವ ಧಾರಣಾಶಕ್ತಿಯನ್ನು ರೂಪಿಸಿಕೊಳ್ಳದಿರುವುದು. ಹಾಗಾಗಿ ಈ ಸಮುದಾಯವನ್ನು ಭೌತಿಕವಾಗಿ ಬದಲಾಯಿಸಬೇಕಾದರೆ, ಮೊದಲು ಬೌದ್ಧಿಕವಾಗಿ ಬದಲಾಯಿಸಬೇಕಿದೆ. ಹಟ್ಟಿ ಜನರ ಸಂಸ್ಕೃತಿಯನ್ನು, ಮನಸ್ಥಿತಿಯನ್ನು ಸಮೀಪದಿಂದ ಅರಿತು, ಅವರ ಸಾಂಸ್ಕೃತಿಕ ಸೂಕ್ಷ್ಮಗಳಿಗೆ ಅನುಗುಣವಾಗಿ ಸ್ಪಂದಿಸಬೇಕಿದೆ. "ಬುಡಕಟ್ಟು ಗಳನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನವಾಗಿ ಅನಾವಶ್ಯಕವಾಗಿ ಅವರ ಸಾಂಸ್ಕೃತಿಕ ಬದುಕಿನಲ್ಲಿ ಹಸ್ತಕ್ಷೇಪ ಮಾಡಬಾರದು" (ಮ್ಯಾಸ್ಯಮಂಡಲ ಡಾ. ಮೀರಾಸಾಬಿಹಳ್ಳಿ ಶಿವಣ್ಣ: ಪು: ೧೩೭) ಈ ಸಮತೋಲನವನ್ನು ಸಾಧಿಸದ ಹೊರತು ಅಭಿವೃದ್ಧಿ ಆಗದು.

ಇಲ್ಲಿಯೇ ಹೇಳಬೇಕಾದ ಮಹತ್ವದ ಸಂಗತಿ ಏನೆಂದರೆ ಬುಡಕಟ್ಟು ಮತ್ತು ನಾಗರೀಕ ಸಂಸ್ಕೃತಿಗಳ ನಡುವೆ ಕೆಲವು ವೈರುಧ್ಯಗಳಿವೆ. ನಾಗರೀಕ ಸಂಸ್ಕೃತಿಗೆ ಒಪ್ಪಿತ ಮತ್ತು ಅಗತ್ಯ ಅನಿವಾರ್ಯಗಳು, ಹಟ್ಟಿ ಸಂಸ್ಕೃತಿಗೆ ತಿರಸ್ಕೃತವೂ, ಅನಗತ್ಯವೂ ಆಗಬಹುದು. ನಾಗರೀಕ ಮನಸ್ಥಿತಿಗೂ ಬುಡಕಟ್ಟು ಜನರ ಮನಸ್ಥಿತಿಗೂ ನಡುವೆ ಅಜಗಜಾಂತರವಿದೆ. ಈ ಸೂಕ್ಷ್ಮ ಗಳನ್ನು ಅರಿಯದೆ ಯೋಜನೆಗಳನ್ನು ರೂಪಿಸುವ ನಾಗರೀಕ ಜನ, ನಾಗರೀಕ ಸಂಸ್ಕೃತಿಯನ್ನು ಆಧರಿಸಿ ಬುಡಕಟ್ಟು ಜನರ ಅಭಿವೃದ್ಧಿಯೋಜನೆಗಳನ್ನು ರೂಪಿಸುವುದು ಹಾಸ್ಯಾಸ್ಪದವೆನಿ ಸುತ್ತದೆ. ಕುರುಡನು ಕನ್ನಡಿಯ ಮುಂದೆ ನಿಂತು ಶೃಂಗಾರ ಮಾಡಿಕೊಂಡ ಹಾಗೆ. ಹಾಗಾಗಿ ಅಭಿವೃದ್ಧಿ ಕಾರ್ಯಗಳು ಬುಡಕಟ್ಟು ಜನರನ್ನು ಉದ್ದೇಶವಾಗಿಟ್ಟುಕೊಂಡು ಆಗುತ್ತಿಲ್ಲ. ನಾಗರೀಕ ಸಂಸ್ಕೃತಿಯನ್ನು ಅವರ ಮೇಲೆ ಒತ್ತಾಯವಾಗಿ ಹೇರಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ಹಟ್ಟಿ ಜನರ ಅಗತ್ಯ, ಅವಶ್ಯಕತೆಗಳಿಗೆ ಅನುಗುಣವಾಗಿ ಆಗಬೇಕು. ಈ ಬದಲಾವಣೆಗಳು ಎಲ್ಲಿಯವರೆಗೂ ಆಗುವುದಿಲ್ಲವೋ ಅಲ್ಲಿಯವರೆಗೂ ಹಟ್ಟಿಗಳು ಅಭಿವೃದ್ಧಿ ಕಾಣಲಾರವು.

ಬುಡಕಟ್ಟು, ಆದಿವಾಸಿ, ಅಲಕ್ಷಿತ ಸಮುದಾಯಗಳಿಗೆ ಆಧುನೀಕರಣವು ಬಹುವಿಧ ಅವಕಾಶಗಳಿಗೆ ವೇದಿಕೆಯಾಯಿತು. ಅಕ್ಷರ ವಂಚಿತ ನೆಲೆಗಳು ಮೊದಲಬಾರಿಗೆ ಅಕ್ಷರ ಲೋಕಕ್ಕೆ ಪ್ರವೇಶ ಪಡೆದದ್ದು ಇದೇ ಸಂದರ್ಭದಲ್ಲಿ. ಆದರೆ 'ಅಕ್ಷರ' ತಳನೆಲೆಗಳಲ್ಲಿ ಒಂದು ಬಗೆಯ

ಅಹಂಕಾರವನ್ನೂ, ಭ್ರಮೆಯನ್ನು, ಶ್ರೇಷ್ಠತ್ವದ ಮನೋಭಾವನೆಯನ್ನು ತಂದುಕೊಟ್ಟಿತು. ಸಹಜವಾಗಿಯೇ ಮನುಷ್ಯ-ಮನುಷ್ಯರ ನಡುವೆ, ಈ ನೆಲೆಗಳ ಒಳವ್ಯವಸ್ಥೆ ಯಲ್ಲಿಯೇ ಬಿರುಕು ಕಾಣಿಸಿಕೊಂಡಿತು. ಯಾವುದು ಸಮುದಾಯಗಳ ನಡುವಿನ ಅಂತಃಶಕ್ತಿಯನ್ನು ಬೆಸೆದು ಒಡಂಬಡಿಕೆಯನ್ನು ಮೂಡಿಸಬೇಕಾಗಿತ್ತೋ ಅದೇ ಶಕ್ತಿ ಒಡಕಿಗೆ ಕಾರಣವಾದದ್ದು ದುರಂತ. ಹಟ್ಟಿಗಳು ಯಾವತ್ತು ಕಾಪಾಡಿಕೊಂಡು ಬಂದ ಒಕ್ಕಟ್ಟು, ಆಧುನಿಕ ಕಾಲದ ಅಕ್ಷರ ಪ್ರವೇಶದಿಂದ ಒಡೆದುಹೋಳಾಯಿತು. ಅಕ್ಷರ ಪ್ರವೇಶಕ್ಕೂ ಮೊದಲು ಈ ವರ್ಗಗಳು ಅಕ್ಷರ, ಸಂಸ್ಕೃತಿಯ ಬಗ್ಗೆ ಕಟ್ಟಿಕೊಂಡ ಕಲ್ಪನೆಗಳು ಬರೀ ಭ್ರಮೆಗಳೆನಿಸಿದವು. 'ಅಕ್ಷರ ಕಲಿತವರ್ಗ' ನಾಗರೀಕ ಸಂಸ್ಕೃತಿಯಲ್ಲೂ ರೂಪುಗೊಳ್ಳದೆ ಇತ್ತ ಸಮುದಾಯದ ಜತೆಗೂ ಸೇರದೆ ಒಂದು ಬಗೆಯ ಅತಂತ್ರ ಸ್ಥಿತಿಯನ್ನು ತಲುಪಿವೆ.

ಹಟ್ಟಿಗಳು ಅಕ್ಷರವರ್ಗವನ್ನು ಯಾವತ್ತೂ ಪ್ರಧಾನವೆಂದು ಭಾವಿಸಿಕೊಂಡಂತಿಲ್ಲ. ಅಲ್ಲಿನ ಯಾವುದೇ ಕೆಲಸಕಾರ್ಯಗಳಿಗೂ, ಹಬ್ಬ-ಹರಿದಿನದಂತೆ ನ್ಯಾಯಪಂಚಾಯ್ತಿ ಸಮಯ ದಲ್ಲೂ ವಿದ್ಯಾವಂತ ಜನರನ್ನು ಮುಖ್ಯವಾಗಿ ಪರಿಗಣಿಸಿದಂತೆ ಕಾಣಬರುವುದಿಲ್ಲ. ನನ್ನ ಅನುಭವವನ್ನೇ ಹೇಳುವುದಾದರೆ, ನನ್ನ ಹಟ್ಟಿಯಲ್ಲಿ ಉನ್ನತ ಶಿಕ್ಷಣ ಪಡೆದವರು ನಾಲ್ಕೈದು ಜನರಿದ್ದು, ನಮ್ಮಲ್ಲಿ ಯಾರನ್ನೂ ಯಾವತ್ತೂ ಬಳಸಿಕೊಳ್ಳುವುದರ ಬಗ್ಗೆ ಒಲವು ತೋರಿಸಿಲ್ಲ. ಈ ಬಗೆಯ ಮನೋಧರ್ಮಕ್ಕೆ ಅಕ್ಷರಕಲಿತವರ ಬಗ್ಗೆ ಅವರಿಗಿರುವ ಭ್ರಮೆಯೋ, ನಿರ್ಲಕ್ಷ್ಯವೋ ತಿಳಿಯದು. ಈ ನಡವಳಿಕೆಗಳ ಹಿಂದಿನ ಕಾರಣಗಳು ಏನೇ ಇರಲಿ, ಬುಡಕಟ್ಟು ಗಳಲ್ಲಿ ಅಕ್ಷರ ಅರಿವಾಗಿ ಪರಿವರ್ತನೆಯಾಗದೆ, ಅಂಧಕಾರವಾಗಿ ರೂಪುಗೊಂಡದ್ದು ನಿಜಕ್ಕೂ ವಿಪರ್ಯಾಸದ ಸಂಗತಿ.

ಅಕ್ಷರ ವರ್ಗದಲ್ಲಿ ಈ ಮನೋಧರ್ಮ ಬರುವುದಕ್ಕೂ ಕಾರಣವಿದೆ. ಪಾರಂಪರಿಕ ಅಕ್ಷರ ಜಗತ್ತು, ಮೊದಲಿನಿಂದಲೂ 'ಅಕ್ಷರ'ವನ್ನು 'ಅಕ್ಷರಜ್ಞಾನ'ವನ್ನು ಶ್ರೇಷ್ಠವೆಂದು ಪ್ರತಿಪಾದಿಸಿಕೊಂಡು ಬಂದದ್ದನ್ನು ಮರೆಯುವಂತಿಲ್ಲ. ಅಕ್ಷರಜಗತ್ತು ಹೇಳಿಕೊಟ್ಟ ಗಿಳಿಪಾಠ ಗಳನ್ನು ತರ್ಕಮಾಡದೆ ಒಪ್ಪಿಕೊಂಡದ್ದರ ಪರಿಣಾಮವಿದು. ಅಂದರೆ ಬುಡಕಟ್ಟುಗಳು ಅಕ್ಷರವನ್ನು ಅರಿವಾಗಿ ಪರಿವರ್ತಿಸಿಕೊಳ್ಳುವಲ್ಲಿ ಸೋತ ಬಗೆಯಿದೆ. ಬಸವಣ್ಣ ಗಾಂಧೀಜಿ ಯವರಲ್ಲಿ ಈ ಬದಲಾವಣೆಯನ್ನು ಕಾಣಲುಸಾಧ್ಯ. ''ಎನಗಿಂತ ಕಿರಿಯರಿಲ್ಲ ಶಿವಶರಣರಿ ಗಿಂತ ಹಿರಿಯರಿಲ್ಲ'' ಎಂಬ ಬಸವಣ್ಣನವರ ನುಡಿಯಲ್ಲೂ, ಅರೆಬೆತ್ತಲೆಯ ಫಕೀರನಾಗಿ ಸರ್ವರನ್ನು ಸಮಾನವಾಗಿ ಕಂಡ ಗಾಂಧೀಜಿಯವರ ನಡೆಯಲ್ಲೂ ಅಕ್ಷರ ಅರಿವಾದ ಬಗೆಯನ್ನು ಕಾಣಬಹುದು. ಹಾಗಾಗಿ ಬಸವಣ್ಣ ಗಾಂಧೀಜಿಯವರು ಅಕ್ಷರ ಅರಿವಿನ ರೂಪಕಗಳಾಗಿದ್ದರೆ ಕಾರಣ ತಳಸಮುದಾಯಗಳು ಅಕ್ಷರ ಲೋಕಕ್ಕೆ ತೆರಕೊಂಡವೇ ಹೊರತು ಅದರಲ್ಲಿ ಪಡೆದ ಜ್ಞಾನ ಅರಿವಾಗಿ ಅನುಭವವಾಗಿ ಸಾಕಾರಗೊಳ್ಳಲಿಲ್ಲ.

**ಗ್ರಂಥಋಣ**


೧. ದಲಿತರು ಮತ್ತು ಜಾಗತೀಕರಣ ಲೇ: ಡಾ. ಮೊಗಳ್ಳಿ ಗಣೇಶ್ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಬಹುಪಠ್ಯೀಯ ನೆಲೆಗಳು. ಲೇ: ಡಾ. ವೀರೇಶ್ ಬಡಿಗೇರ್ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. 'ಮೌಖಿಕ ಕಥನ' ಲೇ: ಡಾ. ಮೊಗಳ್ಳಿ ಗಣೇಶ್ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ದಲಿತರು ಮತ್ತು ಅಭಿವೃದ್ಧಿ ಸಂ: ಡಾ. ಟಿ.ಆರ್. ಚಂದ್ರಶೇಖರ್ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.


* * *

**ಹಲಗಲಿ ಬೇಡರು**

ಅಗಸಿಗೆ ಬಂದು ನಿಂತಿತು
ಹೆಬಲಕ್-ಸಾಹೇಬಂದು ತಾವು ನಿಂತು

ಹೇಳತಾರ ಬುದ್ದಿಯ ಮಾತು
ಕೊಡತೇವ ಕವಲ ಈ ಹೊತ್ತು
ಹೋಗಬ್ಯಾಡರಿ ವೆರ್ತಾ ನೀವು ಸತ್ತು ||ಯೇರ||
ಯೆಂಬು ಮಾತಿಗೆ ನಂಬಿಗೆ ಸಾಲದ ಹಣಮ ಬಂದ ಮುಂದಕ

**೭ನೇ ನುಡಿ**

ಜಡಗ ಹೇಳತನ ಹೊಡಿ ಇವರನಾ ಈಗ ಘಾತಕರೊ ಯಿವರಾ
ಅಸವಸ-ಘಾತಾ ಮಾಡಿ ನೆಂಬಿಗಿಲೆ ಮಾಡತಾರು ಫೀತುರಾ

ಮಾಸ-ಮಾಡಿ ಬಲ-ದೇಶ ತಗೋತರ ಮುಂದ ನಮಗ ಗೋರಾ
ಅಂದ ಹೊಡದಾರೊ ವೊಂದು ಗುಂಡಿಗೆ ಆದ ಸಾಹೇಬ ಟಾರಾ

ಕಾರ್-ಸಾಹೇಬ ಬೆಂಕಿ-ಚೂರ ಆಗಿ ತಾನು ಲೂಟಿ ಮಾಡ್-ಅಂದ ವೂರ
ಹುರಿಪಿಲಿ ಹೊಡದರ ಮಳಿ ಆದ ಹಾಂಗ ಗುಂಡ ಸುರದವು ಬರಪೂರಾ

ಹಣಮ ಹೇಳತನ ಗುಂಡ ಹೊಡದಕೆರ ಕೆಡವುನ್-ಅಷ್ಟು ಬರಪೂರಾ
ಮುನ್-ನೂರ ಮಂದಿ ಯನ್ನ ಮೇಗೆ ಬಿಟ್ಟ ಆಗ ನೋಡರಿ ಜೋರಾ ||ಚ್ಯಾಲ||

## ೧೮. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಪ್ರಸ್ತುತ ವಿದ್ಯಮಾನಗಳ ಸಂದರ್ಭದಲ್ಲಿ ಆಧುನಿಕ ಜಗತ್ತು ಮತ್ತು ತಳಸಮುದಾಯ ಗಳು ಎನ್ನುವ ವಿಚಾರವನ್ನು ಕುರಿತು ಮಾತನಾಡುವಾಗ ಸ್ವಲ್ಪ ಎಚ್ಚರಿಕೆಯಿಂದಲೇ ಮಾತನಾಡಬೇಕಾಗುತ್ತದೆ. ಏಕೆಂದರೆ "ಆಧುನಿಕ ಜಗತ್ತು" ಮತ್ತು "ತಳಸಮುದಾಯಗಳು" ಎನ್ನುವ ಕಾನ್ಸೆಪ್ಟ್‌ಗಳು ಅಷ್ಟು ಸುಲಭವಾಗಿ ಗ್ರಹಿಕೆಗೆ ಬೇಗನೆ ನಿಲುಕುವಂತ ಕಾನ್ಸೆಪ್ಟ್‌ಗಳಲ್ಲ. ಮೇಲುನೋಟಕ್ಕೆ ಈ ಎರಡು ಕಾನ್ಸೆಪ್ಟ್‌ಗಳು ಸುಲಭವಾಗಿ ಕಂಡರೂ ಆಂತರ್ಯದಲ್ಲಿ ಭಿನ್ನವಾದ ಹಾಗೂ ಬಿಡಿಸಲಾರದಂಥ ಕಗ್ಗಂಟಾದ ವಿಷಯ ವ್ಯಾಪ್ತಿಯನ್ನು ಹೊಂದಿವೆ. ಆ ವಿಚಾರವಾಗಿ ಇಲ್ಲಿ ನಾನು ಗಮನಿಸಿದ ಮತ್ತು ನಾನು ಗ್ರಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಈ ಎರಡು ಕಾನ್ಸೆಪ್ಟ್‌ಗಳ ಕುರಿತು ಕೆಲವೊಂದು ತಾತ್ವಿಕವಾದಂಥ ಮತ್ತು ತಂತ್ರಜ್ಞಾನ ಯುಗದಲ್ಲಿ ಅವು ಹುಟ್ಟು ಹಾಕಿದ ಕೆಲವೊಂದು ತಳಮಳಗಳ ವಿಚಾರವಾಗಿ ಮಾತನಾಡುತ್ತೇನೆ.

'ಆಧುನಿಕ ಜಗತ್ತು' ಮತ್ತು 'ತಳಸಮುದಾಯಗಳು' ಎನ್ನುವ ಕಾನ್ಸೆಪ್ಟ್‌ಗಳನ್ನು ನಾವು ಇಂದು ವಿಶಾಲಾರ್ಥದಲ್ಲಿ ಗ್ರಹಿಸುವುದಕ್ಕಿಂತ ಪೂರ್ವದಲ್ಲಿ ಅವುಗಳನ್ನು ರೂಪಿಸಿಕೊಟ್ಟ ವಿದ್ಯಮಾನಗಳ ಕುರಿತು ಕೊಂಚ ಆಸ್ಥೆವಹಿಸಿಬೇಕಿದೆ. ಎಲ್ಲ ಸಾಮಾಜಿಕ ಚಿಂತಕರು 'ಆಧುನಿಕ ಜಗತ್ತು' ರೂಪಿಸಿಕೊಟ್ಟ ಪ್ರಭುತ್ವದ ಪರವಾದಂಥ ಆಲೋಚನ ಕ್ರಮದಡಿಯಲ್ಲಿಯೇ ತಮ್ಮ ವಿಚಾರಗಳನ್ನು ಬಹುತೇಕ ಚಿಂತಕರು

ನಿರೂಪಿಸುತ್ತ ಬಂದಿರುವುದನ್ನು ಕಾಣುತ್ತೇವೆ. ಆ ಚಿಂತನೆಗಳ ಸ್ವರೂಪವನ್ನು ಹೀಗೆ ಗ್ರಹಿಸಬಹುದು. ಆಧುನಿಕ ಜಗತ್ತು ಬಹುಮುಖ್ಯವಾಗಿ ಶಿಕ್ಷಣರಂಗದಲ್ಲಿ ರಾಜಕೀಯ ರಂಗದಲ್ಲಿ, ಸಾಮಾಜಿಕ ರಂಗದಲ್ಲಿ ಹಾಗೂ ಅಭಿವೃದ್ಧಿ ರಂಗದಲ್ಲಿ ಕೇವಲ ಅಂಕಿ-ಅಂಶಗಳ ಲೆಕ್ಕಚಾರದಲ್ಲಿ ಮುಂದುವರಿದಿದೆ ಎನ್ನುವ ವಿಚಾರಗಳನ್ನು ಹೇಳುತ್ತಾರೆ. ಈ ಮೇಲಿನ ವಿಚಾರಗಳನ್ನು ನಾವು ಪ್ರಾಯೋಗಿಕವಾಗಿ ಗಮನಿಸುವ ಸಂದರ್ಭದಲ್ಲಿ ಉಜ್ಜಿ ನೋಡಿದಾಗ ಅದರ ಸ್ವರೂಪ ಹಾಗಿಲ್ಲ ಎನ್ನುವುದು ಮನದಟ್ಟಾ ಗುತ್ತದೆ. ಅಂದರೆ ಮೇಲಿನ ವಿಚಾರಣೆಗಳೆಲ್ಲವು ಪ್ರಭುತ್ವ ತಾನು ಅಭಿವೃದ್ಧಿ ಮಾಡಿದ್ದೇನೆ ಎನ್ನುವುದನ್ನು ತೋರಿಸಲಿಕ್ಕೆ ಕೇವಲ ನಗರ ಪ್ರದೇಶದಲ್ಲಿ ಯಾವುದೇ ಒಂದು ಮೂಲೆಯಲ್ಲಿ ಕೆಲಸ ಮಾಡಿ; ಅದನ್ನು ಇಡಿಯಾಗಿ, ವಿಸ್ತಾರವಾಗಿ ಹೋಲಿಸಿ ಹೇಳುವ ಕೆಲವನ್ನು ಮಾಡಿವೆ. ಅದು ತಮಗೂ ಗೊತ್ತಿರುವ ವಿಚಾರವೇ ಆಗಿದೆ. ಇಲ್ಲಿ ಆಧುನಿಕ ಜಗತ್ತು ಹೊಸದಾದ ವಿದ್ಯಾಮಾನಗಳನ್ನು ನಮಗೆ ಪರಿಚಯ ಮಾಡಿಕೊಟ್ಟಿದೆಯೇ ವಿನಃ ಅದು ಇನ್ನು ಅಷ್ಟಾಗಿ ಯಾರಿಗೂ ಸಿಗುತ್ತಿಲ್ಲ ಮತ್ತು ಕೇವಲ ಕೆಲವರ ಸ್ವತ್ತಾಗಿಯೋ ಉಳಿದಿದೆ ಎನ್ನುವಂಥದ್ದು ಇದು ಎಲ್ಲ ಕ್ಷೇತ್ರವನ್ನು ಅನುಲಕ್ಷಿಸಿ ಹೇಳಿದ ವಿಚಾರವಾಗಿದೆ.

ಶಿಕ್ಷಣ ರಂಗಕ್ಕೆ ಸಂಬಂಧಿಸಿದಂತೆ ಆಧುನಿಕ ಜಗತ್ತಿನ ಸಂದರ್ಭದಲ್ಲಿ ತಳಸಮುದಾಯ ಗಳನ್ನು ಮುಖಾಮುಖಿ ಮಾಡುವಾಗ ನಾವು ಬಹುಮುಖ್ಯವಾಗಿ ಮನಃಸ್ಥಿತಿಯನ್ನು ಅಂತರಾಳವನ್ನು ಕೆದಕಬೇಕಿದೆ. ಏಕೆಂದರೆ ತಳಸಮುದಾಯದವರು ಸಹ ಎಲ್ಲ ವಿದ್ಯಾಮಾನ ಗಳನ್ನು ಅನುಭವಿಸುತ್ತಿದ್ದಾರೆ. ಅವರು ಸಹ ಮುಂದುವರಿದವರಾಗಿದ್ದಾರೆ ಎಂದು ಹೇಳುವುದು ಕೇವಲ ತೋರಿಕೆಯ ಮಾತಾಗಿದೆ. ಈ ಮಾತನ್ನು ಯಾಕೆ ಹೇಳುತ್ತಿದ್ದೇನೆ ಎಂದರೆ ಅದು ಕೇವಲ ಭೌತಿಕ ಸ್ವರೂಪವನ್ನು ಗಮನಿಸಿ ಹೇಳಿದುದಾಗಿದೆ. ಹೇಗೆಂದರೆ ಈ ಆಧುನಿಕ ಜಗತ್ತು ಕೇವಲ ವಸ್ತುರೂಪದಲ್ಲಿ ತಳಸಮುದಾಯಗಳಲ್ಲಿ ಕಂಡುಬರುತ್ತವೆ. ಅವು ಟೀ.ವಿ. ಫ್ರಿಜ್, ಮೊಬೈಲ್, ಬೈಕ್, ಊಟ, ಉಪಹಾರ, ಉಡುಗೆ, ತೊಡುಗೆ, ಇಂಥ ಭೌತಿಕವಾದ, ಶ್ರೀಮಂತಿಕೆಯ ಸಂಕೇತಗಳು ಎನ್ನುವ ಅರ್ಥದಲ್ಲಿ ಅವರೂ ಉತ್ತಮಸ್ಥಿತಿಯಲ್ಲಿದ್ದಾರೆ ಎನ್ನುವುದನ್ನು ಮಾತ್ರ ಕಟ್ಟಿಕೊಡಲಾಗುತ್ತದೆ. ನಾವು ಇನ್ನೂ ಹಿಂದಕ್ಕೆ ಹೋದಾಗ ತಳಸಮುದಾಯಗಳ ಸ್ಥಿತಿಯನ್ನು ಗಮನಿಸಿದಾಗ ಹಿಂದೆ ಇದ್ದಿದ್ದುಕ್ಕಿಂತಲೂ ಈಗ ಭಿನ್ನವಾಗಿ ಯೇನಿಲ್ಲ. ನಾನು ಮನಃಸ್ಥಿತಿ ಅಂಥ ಹೇಳಿದೆ. ಏನದು ಮನಸ್ಥಿತಿ? ತಳಸಮುದಾಯಗಳು ಬಹುತೇಕವಾಗಿ ಸ್ವ ಉದ್ಯೋಗನಿರತವಾದಂಥವು. ಅಂದಂದಿನ ಕೆಲಸದಿಂದ ಬಂದ ಆದಾಯ ದಿಂದ ಜೀವನ ನಡೆಸುತ್ತ ಬಂದಿರುವುದನ್ನು ನಾವು ಕಾಲದಿಂದಲೂ ಗುರುತಿಸಬಹುದು. ಆದರೆ ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಆರಕ್ಕೇರಲಿಲ್ಲ, ಮೂರಕ್ಕಿಳಿಯಲಿಲ್ಲ ಎನ್ನುವ ಸಂದಿಗ್ಧ ಸ್ಥಿತಿಯೊಳಗೆ ಬಿದ್ದು ಒದ್ದಾಡುವ ಸ್ಥಿತಿಯನ್ನು ನಾವು ಇಂದು ಕಾಣುತ್ತೇವೆ. ಈ ಸಂದಿಗ್ಧಸ್ಥಿತಿ ಅಥವಾ ಮನಸ್ಸಿನ ತೊಳಲಾಟ ಹೇಗಿರುತ್ತದೆಂದರೆ ಮಕ್ಕಳು ಬುದ್ದಿವಂಥರಾಗಲಿ, ಬೇರೆ ಬೇರೆ ವಿದ್ಯಾಮಾನಗಳನ್ನು ಕಲಿತು ಸುಧಾರಣೆ ಹೊಂದಲಿ ಆ ಮೂಲಕ ಜೀವನವನ್ನು ಸುಖವಾಗಿ ನಡೆಸಬಹುದು ಎನ್ನುವ ಕಾರಣಕ್ಕಾಗಿ ಕಳಿಸಲಾಗುತ್ತದೆ. ಆದರೆ ಸ್ಥಿತಿ ಏನಾಗಿದೆ ಯೆಂದರೆ ಹಿಂದೆ ಹೇಳಿದ ಹಾಗೆ 'ಅಭಿವೃದ್ಧಿ' ಎನ್ನುವ ಅರ್ಥದೊಳಗೆ ಈ ಎಲ್ಲವನ್ನು ಪಡೆದಿದ್ದಾರೆ. ಆದರೆ ಜೀವನ ಸಾಗಿಸುವುದಕ್ಕಾಗಿ ಅಲ್ಲ. ಯಾಕೆಂದರೆ ಸಂಪೂರ್ಣವಾದ ಅದರ ಜ್ಞಾನವನ್ನು ಕಲಿಸಲಾಗುವುದಿಲ್ಲ. ಆ ಕಾರಣಕ್ಕಾಗಿ ಯಾಕೋ ಕೆಲವು ಜನರು ಅದರ ಸದುಪಯೋಗವನ್ನು ಪಡೆದುಕೊಂಡಿರಬಹುದು. ಆದರೆ ಬಹುಪಾಲು ಜನರು ಏನಾಗಿದ್ದಾರೆ. ಆಲೋಚಿಸಬೇಕಾದ ವಿಚಾರ ಅದನ್ನು ಗಮನಕ್ಕೆ ಬಿಟ್ಟಿದ್ದೇವೆ. ಮಗ ಕಲಿತಿದ್ದಾನೆ ಎನ್ನುವ ಅವನು ಜಾಣನಾಗಿದ್ದಾನೆ ಎಂದು ಅವನು ಊರಲ್ಲಿ ಅಥವಾ ಅವನ ಕುಟುಂಬದಲ್ಲಿ ಅವನನ್ನು ಟ್ರೀಟ್ ಮಾಡುವ ಸ್ವರೂಪ ಭಿನ್ನವಾಗಿರುತ್ತದೆ. ಆದರೆ ಇತ್ತ ಆಧುನಿಕ ಜಗತ್ತು ದಿನೇ ದಿನೇ ಹೊಸದಾಗಿ ಸೃಷ್ಟಿಸುವ ವಿದ್ಯಾಮಾನಗಳ ಭರಾಟೆಯಲ್ಲಿ ತನ್ನ ತನವನ್ನು ಹುಡುಕಾಡುವ ಸ್ಥಿತಿಗೆ ತಂದು ನಿಲ್ಲಿಸಿವೆ. ಆಗ ಅವನು ಕುಟುಂಬ ಮತ್ತು ಈ ಆಧುನಿಕ ಜಗತ್ತಿನ ನಡುವೆ ಏನೂ ಇಲ್ಲದವನಾಗಿ ಯಾವುದಕ್ಕೂ ಯೋಗ್ಯ person ಆಗಿ ಕಾಣಿಸಿ ಕೊಳ್ಳುವುದಿಲ್ಲ ಇದು ಇರುವ ಸ್ಥಿತಿ.

ವರ್ಗಾಧಾರಿತ ಮತ್ತು ವರ್ಣಾಧಾರಿತ ನೆಲೆಯಲ್ಲಿ ಚರ್ಚಿಸಲಿಕ್ಕೂ ಕೂಡ ಅವಕಾಶವಿದೆ. ಇಲ್ಲಿ ಪ್ರಮುಖವಾಗಿ ವರ್ಗಾಧಾರಿತವಾಗಿ ಮೇಲ್ವರ್ಗ, ಮಧ್ಯಮವರ್ಗ, ಹಾಗೂ ಕೆಳವರ್ಗ ಎಂದು ಗುರುತಿಸುವಲ್ಲಿ ಈ ಕೆಳವರ್ಗವೇ ಹೆಚ್ಚು ಹೀನಾಯಸ್ಥಿತಿಯಲ್ಲಿ ನಲುಗುತ್ತಿರುವುದನ್ನು ನಾವು ಕಾಣುತ್ತೇವೆ. ಶಿಕ್ಷಣ ಕಲಿತ ಇಂಥ ದಿನಮಾನಗಳಲ್ಲಿಯೂ ಸಹ ಈ ತರಹದ ಪರಿಸ್ಥಿತಿಗೆ ಕಾರಣ ಏನು? ಎಂಬ ಪ್ರಶ್ನೆಗೆ ಒಂದು ಸ್ವರೂಪ ಪಡೆಯುವುದೇ ಈ ವಿಚಾರ ಧಾರೆಯ ಮುಖ್ಯ ಕಾಳಜಿಯಾಗಿದೆ.

ಶತ-ಶತಮಾನಗಳಿಂದ ನಾವು ನೋಡುತ್ತ ಬಂದರೆ ಮುಖ್ಯವಾಗಿ 'ಉತ್ಪಾದಕ' ಮತ್ತು 'ಉಪಭೋಗಿ' ಸಂಸ್ಕೃತಿಗಳನ್ನು ಕಾಣುತ್ತೇವೆ. 'ಉತ್ಪಾದಕ' ಸಂಸ್ಕೃತಿಯೊಳಗೆ ತಳಸಮು ದಾಯಗಳು ಬಂದರೆ 'ಉಪಭೋಗಿ' ಸಂಸ್ಕೃತಿಯೊಳಗೆ ಮೇಲ್ವರ್ಗ ಮತ್ತು ಸ್ವಲ್ಪ ಮಧ್ಯಮ ವರ್ಗದವರು ಬರುತ್ತಾರೆ. ಈ ಉತ್ಪಾದಕವರ್ಗ ಮತ್ತು ಉಪಬೋಗಿವರ್ಗಗಳ ನಡುವೆ ಕೊಂಡಿಯಾಗಿ ಕೆಲಸ ಮಾಡುವುದಕ್ಕೆ 'ಮಧ್ಯವರ್ತಿ'ಗಳು ಬರುತ್ತಾರೆ. ಹೀಗೆ ಈ ತ್ರಿಕೋನಾ ಕಾರದಲ್ಲಿ ಕಾಲದಿಂದ ಕಾಲಕ್ಕೆ ನಡೆಯುತ್ತ ಬಂದಿದೆ. ಹೀಗೆ ನಡೆಯುತ್ತ ಬಂದುದರಲ್ಲಿ ಉತ್ಪಾದಕ ವರ್ಗವೇ ಹೆಚ್ಚು ಅನ್ಯಾಯಕ್ಕೆ ಒಳಗಾಗುತ್ತಲೇ ಬಂದಿರುವುದನ್ನು ನಾವು ಕಾಣು ತ್ತೇವೆ. ಜೊತೆಗೆ ಈ ಜಾಗತೀಕರಣದ ಸಂದರ್ಭದಲ್ಲಿ ಇನ್ನೂ ತುಳಿತಕ್ಕೆ ಒಳಗಾಗಿರುವುದ್ನು ಕಾಣುತ್ತೇವೆ.

ಇಲ್ಲಿ ಮುಖ್ಯವಾಗಿ ತಳಸಮುದಾಯಗಳು ಸೃಷ್ಟಿಸಿದ ಕಸುಬನ್ನು ಆಧಾರವಾಗಿಟ್ಟುಕೊಂಡು ಭಿನ್ನ ಭಿನ್ನ ನೆಲೆಗಳಲ್ಲಿ ಈ ಚರ್ಚೆಗಳನ್ನು ಅನೇಕ ಸ್ನೇಹಿತರು ತಮ್ಮದೇ ಆದ ರೀತಿಯಲ್ಲಿ ವಿವರಿಸಿದ್ದಾರೆ. ಅದನ್ನು ನಾವು ಹನ್ನೆರಡನೆ ಶತಮಾನಕ್ಕೆ ಹೋಗಿ ಬಸವಣ್ಣ ಏನು ಹುಟ್ಟು ಹಾಕಿದನೋ ಕಸುಬಾಧಾರಿತವಾದ ಕುಲಕಸುಬು ಅಲ್ಲಿಂದ ಈ ವಿಚಾರವನ್ನು ಮಂಡಿಸ ಬಹುದು. ಅದು ನೇಕಾರಿಕೆ, ಬಡಿಗ, ಕಮ್ಮಾರ, ಹಡಪದ, ಸೂಳೆಗಾರಿಕೆ, ಚಪ್ಪಲಿಕೆಲಸ ಇನ್ನು ಅನೇಕ ಕುಲಕಸುಬುಗಳನ್ನು ನಾವು ಕಾಣುತ್ತೇವೆ. ಅವು ಆಗ ಕಸುಬು ಆಧಾರಿತವಾಗಿ ಬಂದಂಥವುಗಳಾಗಿವೆ. ಆದರೆ ಆಧುನಿಕದ ಮತ್ತು ಜಾಗತೀಕರಣ ಸಂದರ್ಭದಲ್ಲಿ ದೊಡ್ಡ ಬಂಡವಾಳಶಾಹಿಯಾಗಿ ಮಾರ್ಪಟ್ಟು ಒಂದು ಮಾರ್ಕೆಟಿಂಗ್ ಅನ್ನು ಸೃಷ್ಟಿ ಮಾಡುವಲ್ಲಿ ತಳಸಮುದಾಯಗಳ ಪಾತ್ರ ಮುಖ್ಯವಾಗಿದ್ದರೂ ಅದು ಮುಂಚೂಣಿಗೆ ಬರದೆ, ಬಂಡವಾಳ ಹೂಡಿಕೆದಾರರೆ ಮುಖ್ಯವಾಹಿನಿಯಲ್ಲಿ ಬರಲಿಕ್ಕೆ ಅನೇಕ ಕಾರಣಗಳಿವೆ. ಅದಕ್ಕೆ ಪೂರಕವಾದ ಈ ಮಧ್ಯವರ್ತಿಗಳು ಆಧಾರ ಸ್ತಂಭಗಳಾಗಿ ಕಾರ್ಯ ನಿರ್ವಹಿಸಿದ್ದಾರೆ ಎನ್ನಬಹುದು.

ಉತ್ಪಾದಕವರ್ಗದ ಒಂದು ವಸ್ತುವನ್ನು ಉದಾಹರಣೆಗೆ ಒಂದು ಜೊತೆ ಚಪ್ಪಲಿಯನ್ನು ಗಮನಿಸೋಣ. ಉತ್ಪಾಕವರ್ಗ ಒಂದು ಜೊತೆ ಚಪ್ಪಲಿ ತಯಾರುಮಾಡಿದರೆ ಅದನ್ನು ಮಧ್ಯವರ್ತಿ ಉಪಭೋಗಿ ವಲಯಕ್ಕೆ ಮಾರಾಟ ಮಾಡುತ್ತಾನೆ. ಆ ಮಾರಾಟದಲ್ಲಿ ಒಂದು ಜೊತೆ ಚಪ್ಪಲಿಗೆ ೧೦೦ರೂಪಾಯಿ ತೆಗೆದುಕೊಂಡರೆ ಅದರಲ್ಲಿ ೨೦ ರೂಪಾಯಿ ಉತ್ಪಾದಕನಿಗೆ ಸಿಕ್ಕರೆ ಉಳಿದ ೮೦ ರೂಪಾಯಿಯಲ್ಲಿ ೪೦ ರೂಪಾಯಿ ಮಧ್ಯವರ್ತಿಗೆ, ಇನ್ನರ್ಧ ಉಳಿದ ೪೦ ರೂಪಾಯ ಬಂಡವಾಳ ಹೂಡಿಕೆದಾರಿಗೆ ಸಿಗುತ್ತದೆ. ಆಗ ನಾವು ಶ್ರಮಾಧಾರಿತವಾಗಿ ಆಲೋಚನೆ ಮಾಡಿದಾಗ ಶೇಖಡ ೬೦ ರೂಪಾಯಿ ಉತ್ಪಾದಕರಿಗೆ ಸಿಗಬೇಕು. ಉಳಿದ ೪೦ ರೂಪಾಯಿಯಲ್ಲಿ ಮಧ್ಯವರ್ತಿ ಬಂಡವಾಳ ಹೂಡಿಕೆದಾರರಿಗೆ ಸಿಗಬೇಕು. ಆದರೆ ಸ್ಥಿತಿ ಏನಾಗಿದೆ. ೨೦ ಪರಿಸೆಂಟ್ ಉತ್ಪಾದಕರಿಗೆ ಸಿಕ್ಕರೆ ಉಳಿದ ೮೦ ಪರಿಸೆಂಟ್ ಮಧ್ಯವರ್ತಿ, ಬಂಡವಾಳ ಹೂಡಿಕೆದಾರರ ಪಾಲಾಗಿದೆ. ಈ ವಿಚಾರವನ್ನು ಕಾರ್ಯರೂಪಕ್ಕೆ ತರುವಲ್ಲಿ ತಳಸಮುದಾಯಗಳಿಗೆ ಆಗುವ ಅನ್ಯಾಯವನ್ನು ಬಗೆಹರಿಸುವ ಕಡೆಗೆ ಗಮನಹರಿಸಬೇಕಿದೆ.

ಒಟ್ಟಾರೆಯಾಗಿ ತಳಸಮುದಾಯಗಳಿಗೆ ಆಗುವ ಇಂಥ ಅನೇಕ ಉದಾಹರಣೆಗಳನ್ನು ಕೊಡಬಹುದು. ಈಗ ಏನೆಲ್ಲ ವಿದ್ಯಾಮಾನಗಳು ಬಂದರೂ ಕೂಡಾ ಅವರ ಬದುಕು ಅತಂತ್ರಸ್ಥಿತಿಯಲ್ಲೇ ಮುಂದುವರಿದಿರುವುದನ್ನು ಕಾಣುತ್ತೇವೆ. ಕುಲಕಸುಬಾಧಾರಿತವಾಗಿದ್ದಂಥ ಸಮುದಾಯಗಳು ಸಹ ಇಂಥ ಆಧುನಿಕ ಬಣ್ಣದ ಬದುಕಿನಲ್ಲಿ ತಮ್ಮ ಕಲೆಯನ್ನು ಮಾರಾಟ ಕ್ಕಿಡುವ, ಇನ್ನೊಬ್ಬರು ಕೊಡುವ ಬಿಡಿಕಾಸಿಗೂ ಅಲೆದಾಡುವ ಪರಿಸ್ಥಿತಿಯನ್ನು ಕಾಣುತ್ತೇವೆ. ಈ ಮೇಲಿನ ವಿಚಾರಗಳನ್ನು ಗಮನಿಸಿದಾಗ ತಳಸಮುದಾಯಗಳು ಆಧುನಿಕ ಜಗತ್ತಿನ ವಿದ್ಯಾಮಾನಗಳ ಜೊತೆಗೆ ಪೈಪೋಟಿ ಮಾಡಿ ತಮಗೆ ಒದಗುವ ಎಲ್ಲವನ್ನು ನಿರೀಕ್ಷೆಯ ಮಟ್ಟದಲ್ಲಿ ಪಡೆಯುವ ಸ್ಥಿತಿಯನ್ನು ನಿರ್ಮಾಣಮಾಡಿ ಅವರಿಗೆ ನ್ಯಾಯವಾಗಿ ಸಿಗಬೇಕಾದ ಎಲ್ಲ ರೀತಿಯ ವಿದ್ಯಾಮಾನಗಳನ್ನು ಪಡೆದುಕೊಳ್ಳುವ ಹಾಗೆ ಗಮನ ಹರಿಸಿ ಆ ಬಗೆಗೆ ಚಿಂತಿಸಬೇಕಿದೆ, ದಕ್ಕಿಸಿಕೊಡಬೇಕಿದೆ. ಹಾಗಾದಾಗ ಈ ತಳಸಮುದಾಯಗಳಿಗೆ ನ್ಯಾಯ ಒದಗಿಸಿದಂತಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

(ನನ್ನ ವಿಚಾರಗಳನ್ನು ಹಂಚಿಕೊಳ್ಳಲ್ಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟದ್ದಕ್ಕಾಗಿ ಡಾ. ಮಂಜುನಾಥ ಬೇವಿನಕಟ್ಟಿ ಗುರುಗಳಿಗೂ ಡಾ. ವೀರೇಶ ಬಡಿಗೇರ ಗುರುಗಳಿಗೂ ಹಾಗೂ ಸಮಸ್ಥ ನಾಗರಾಳ ಜನರಿಗೂ ವಂದಿಸುತ್ತೇನೆ ನಮಸ್ಕಾರ.)

* * *

ಧೀರರೂ, ಶೂರರೂ, ಉದಾರ ಚೇತನರೂ ಆದ ನಾಯಕ ಜನಾಂಗದವರು ಜನಪ್ರಿಯರಾಗಿ ಜನನಾಯಕರಾಗಿ ಪಾಳೆಯಪಟ್ಟುಗಳನ್ನು ಕಟ್ಟಲು ಶಕ್ತರೆನಿಸಿ ದರು.

**– ಪ್ರೊ. ತ.ಸು. ರಾಮರಾಯರು**

## ೧೯. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

ಭಾರತಕ್ಕೆ ಸಂಬಂಧಿಸಿದಂತೆ ಆಧುನೀಕರಣ ಪರಿಕಲ್ಪನೆಯು ವಿಶಿಷ್ಟವಾದುದಾಗಿದೆ. ಸಾಮಾನ್ಯ ಅರ್ಥದಲ್ಲಿ 'ಆಧುನಿಕತೆ'ಯನ್ನು ಹೀಗೆ ಪರಿಭಾವಿಸಬಹುದು. ಹೊಸದರ ಕ್ಷಿಪ್ರ ಬದಲಾವಣೆ. ಇದು ಭೌತಿಕವಾಗಿ ಹಾಗೂ ಬೌದ್ಧಿಕ ಎರಡು ಮಾದರಿಯ ಸ್ವರೂಪವನ್ನು ಒಳಗೊಂಡಿರುತ್ತದೆ. ಭೌತಿಕವು ಸಾಮಾನ್ಯವಾಗಿ ಆರ್ಥಿಕ, ತಾಂತ್ರಿಕ ಸ್ವರೂಪವನ್ನು ಹೊಂದಿದ್ದರೆ, ಬೌದ್ಧಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ವರೂಪವನ್ನು ಪಡೆದಿರುತ್ತದೆ.

ಈ ಹಿನ್ನೆಲೆಯಲ್ಲಿ ಆಧುನಿಕತೆಯ ಪ್ರವೇಶವನ್ನು ಭಾರತದ ಸಂದರ್ಭಕ್ಕೆ ಅನ್ವಯಿಸಿ ಹೇಳಬಹುದಾದರೆ, ಈ ಮಾದರಿಗಳು ಎರಡು ಬಾರಿ ನಮ್ಮ ದೇಶವನ್ನು ಪ್ರವೇಶಿಸಿರುವುದನ್ನು ಗಮನಿಸಬಹುದು. ಮೊದಲನೆಯದು ವಸಾಹತು ಸಂದರ್ಭದ ಬ್ರಿಟೀಷರ ಆಳ್ವಿಕೆಯ ಮೂಲಕ. ಬ್ರಿಟಿಷರು ತಮ್ಮ ಆರ್ಥಿಕಾಭಿವೃದ್ಧಿಗಾಗಿ ನಮ್ಮನ್ನು ಕೊಳ್ಳೆಹೊಡೆಯಲು ಪ್ರಯೋಗಿಸಿದ ಪ್ರಮುಖಾಸ್ತ್ರಗಳಲ್ಲಿ ಇದು ಒಂದಾಗಿತ್ತು. ನಂತರದಲ್ಲಿ ೧೯೯೨ರಲ್ಲಿ ಅನಿವಾರ್ಯವಾಗಿ ಭಾರತವು ಜಾಗತೀಕರಣವನ್ನು ಒಪ್ಪಿಕೊಳ್ಳಲಾಯಿತು. ಆ ಮೂಲಕ ಸ್ವಾವಲಂಬನೆಗೆ ಎಷ್ಟು ಪ್ರಯತ್ನಿಸಿದರೂ ಜಾಗತೀಕರಣ ಭಾರತವನ್ನು ಆಕ್ರಮಿಸಿಕೊಳ್ಳದೇ ಬಿಡಲಿಲ್ಲ. ಸುಮಾರು ೧೫ನೇ ಶತಮಾನದಿಂದ ಆರಂಭವಾದ ಯುರೋಪಿಯನ್ ದೇಶಗಳ ಪ್ರವೇಶವು ಆಧುನಿಕತೆಯನ್ನು ಹೊತ್ತುಕೊಂಡೇ ಭಾರತವನ್ನು ಪ್ರವೇಶಿಸಿದವು. ನಂತರದಲ್ಲಿ ಈ ಯುರೋಪಿಯನ್ ದೇಶಗಳು ವಸಾಹತು ಪ್ರದೇಶವನ್ನಾಗಿ, ಭಾರತದಲ್ಲಿನ ಕೆಲ ಪ್ರದೇಶ ಗಳನ್ನು ಆಕ್ರಮಿಸಿಕೊಂಡಂತೆಲ್ಲಾ ಆಧುನಿಕತೆಯ ತೀವ್ರತೆಯು ದಟ್ಟವಾಗತೊಡಗಿತು. ನಂತರದಲ್ಲಿ ಬ್ರಿಟೀಷರು ಸಂಪೂರ್ಣ ಭಾರತವನ್ನು ತಮ್ಮ ವಸಾಹತು ಪ್ರದೇಶವನ್ನಾಗಿ ೧೮೫೭ರಲ್ಲಿ ಪರಿವರ್ತಿಸಿಕೊಂಡಾಗ ಬ್ರಿಟೀಷರ ಆಧುನಿಕ ಬೆಳವಣಿಗೆಗೆ ಸರಿಸಮಾನವಾಗಿ ಭಾರತದ ಆರ್ಥಿಕತೆಯು ನಿಲ್ಲದೇ ಆವಸಾನಗೊಳ್ಳಲಾರಂಬಿಸಿತು.

೧೬-೧೭ನೇ ಶತಮಾನದಲ್ಲಿ ಯುರೋಪಿನಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಯು, ಅದರ ಹಿಂದಿನ ದಿನಗಳಲ್ಲಿ ಆದ ವೈಜ್ಞಾನಿಕ ಸಂಶೋಧನೆಯ ಪ್ರತಿಫಲಿತವಾದ ಆಧುನಿಕತೆಯು ಪ್ರಪಂಚಕ್ಕೆ ಹೊಸದೊಂದು ಆಯಾಮವನ್ನು ತಂದುಕೊಟ್ಟವು. ಹೀಗೆ ಆರಂಭವಾದ ಕೈಗಾರಿಕಾ ಕ್ರಾಂತಿಯು ಯಥೇಚ್ಚವಾಗಿ ವಸ್ತುಗಳನ್ನು ಉತ್ಪಾದಿಸಿತೊಡಗಿದವು. ಈ ಉತ್ಪಾದನಾ ವಸ್ತುಗಳಿಗೆ ಮಾರುಕಟ್ಟೆಯ ಅವಶ್ಯಕತೆಯಿತ್ತು, ಹಾಗಾಗಿ ಮಾರುಕಟ್ಟೆಯಾಗಿಯೂ, ಬ್ರಿಟನ್ನಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳ ಉತ್ಪಾದಕ ದೇಶವಾಗಿ ಪರಿವರ್ತಿತವಾಯಿತು. ಹಾಗಾಗಿ ಇಲ್ಲಿನ ಮೂಲ ಕಸುಬುಗಳು ಅಳಿಸಿಹೋಗಿ ಬ್ರಿಟನ್ನಿನ ಕೈಗಾರಿಕಾ ಕಚ್ಚಾವಸ್ತುಗಳಿಗೆ ಮಾತ್ರ ಭಾರತವು ಹೊಂದಿಕೊಳ್ಳಬೇಕಾಯಿತು. ಅಂದರೆ ಆಧುನಿಕತೆಯಿಂದಾಗಿ ಅನಿವಾರ್ಯ ಆರ್ಥಿಕತೆಯನ್ನು ಒಪ್ಪಿಕೊಳ್ಳುವಂತೆ ಮಾಡಲಾಯಿತು. ಉಪಯೋಗಕ್ಕೆ ಬಾರದ ನೀಲಿ ಬೆಳೆಯನ್ನು ಬೆಳೆಯಲು ಬ್ರಿಟೀಷರು ಭಾರತದ ರೈತನ ಮೇಲೆ ಒತ್ತಡ ಹೇರಿದ್ದನ್ನು ಗಮನಿಸ ಬಹುದು. ಅಂತೆಯೇ ಇಲ್ಲಿನ ಜನರ ಕುಲಕಸುಬುಗಳು, ಗುಡಿಕೈಗಾರಿಕೆಗಳು ಪಾಶ್ಚಾತ್ಯರ ಅಗ್ಗದ ಬೆಲೆಯ ಸಿದ್ಧ ಉತ್ಪಾದನಾ ವಸ್ತುಗಳ ಬೆಲೆಗೆ

ಪ್ರತಿಯಾಗಿ ಸ್ಪರ್ಧಿಸದೇ ತತ್ತರಿಸಿ ಹೋದವು. ಒಟ್ಟಿನಲ್ಲಿ ಕುಲಕಸುಬುಗಳ ಮೂಲಕವೇ ಗುರುತಿಸಿಕೊಂಡಿದ್ದ ಭಾರತದ ಸಮಾಜ, ಅದರಲ್ಲಿಯೂ ತಳಸಮುದಾಯಗಳು ಹೇಳ ಹೆಸರಿಲ್ಲದಂತೆ ಹೋದವು.

ಇನ್ನು ಎರಡನೇ ಹಂತದ ಆಧುನಿಕತೆಯ ರೂಪವಾದ 'ಜಾಗತೀಕರಣ'ವಂತೂ ಭಾರತ ದೇಶವನ್ನು ಅದರಲ್ಲೂ ತಳಸಮುದಾಯಗಳಲ್ಲಿ ಬಹು ಅಂತರವನ್ನೇ ಸೃಷ್ಟಿ ಮಾಡಿತು. ತಳಸಮುದಾಯಗಳು ಹಾಗೂ ಹೀಗೋ ಪಾರಂಪರಿಕವಾಗಿ ಉಳಿಸಿಕೊಂಡು ಬಂದಿರುವಂತಹ ಬುಟ್ಟಿಹೆಣೆಯುವಿಕೆ, ಕುಂಬಾರಿಕೆ, ನೇಕಾರಿಕೆ ಇತ್ಯಾದಿ ಉತ್ಪಾದನಾ ವಸ್ತುಗಳಿಗೆ ಪರ್ಯಾಯ ಉತ್ಪಾದನಾ ವಸ್ತುಗಳ (ಪ್ಲಾಸ್ಟಿಕ್)ನ್ನು ತಯಾರಿಸಲಾರಂಭಿಸಿತು. ಈ ಸಮುದಾಯಗಳಿಗೆ ಈ ಸಂದರ್ಭದಲ್ಲಿ ದಿಕ್ಕೇ ತೋಚದಂತಹ ಪರಿಸ್ಥಿತಿಯುಂಟಾಗಿರುವುದಂತೂ ಖಂಡಿತ. ಮೇಲ್ವರ್ಗದ ಸಮುದಾಯಗಳು ಜಾಗತೀಕರಣದ ಉತ್ಪಾದಕ ಘಟಕಗಳ ಕೆಲಸಗಳಲ್ಲಿ ತರಬೇತಿಯನ್ನು ಪಡೆದು ತಮ್ಮ ವೃತ್ತಿ ಜೀವನವನ್ನು ಮತ್ತೊಮ್ಮೆ ಗಟ್ಟಿಗೊಳಿಸಿಕೊಂಡರೆ, ತಳಸಮುದಾಯಗಳು ಮಾತ್ರ, ಅಂತಹ ತರಬೇತಿಯಿಲ್ಲದೇ ಮತ್ತು ಆ ಮಟ್ಟಕ್ಕೆ ಬೆಳೆಯಲೂ ಆಗದೇ ಇರುವಂತಹ ಸ್ಥಿತಿ ಉಂಟಾಗಿರುವುದನ್ನು ಕಾಣಬಹುದು.

ಆದರೆ ಆಧುನಿಕತೆಯಿಂದಾಗಿ ಭಾರತದಲ್ಲಿನ ತಳಸಮುದಾಯಗಳಿಗೆ ಪ್ರಯೋಜನವಾಗಿಲ್ಲ ವೆಂತಲ್ಲ. ಬೌದ್ಧಿಕವಾದ ಅನೇಕ ಪ್ರಯೋಜನಗಳು ಆಗಿವೆ. ಮೊದಲನೆಯದಾಗಿ ಜಾತಿಪದ್ಧತಿ ಯಂತಹ ಕ್ರೂರ ಅಮಾನುಷ ಪದ್ಧತಿಯ ಪರಿಹಾರ ಕ್ರಮಗಳು. ಎರಡನೆಯದಾಗಿ ಬ್ರಿಟೀಷರ ಆಳ್ವಿಕೆಯಿಂದಾಗಿ 'ಶಿಕ್ಷಣ' ಪಡೆಯುವಂತಾದದ್ದು, ಸಾರ್ವಜನಿಕ ಸ್ಥಳಗಳಲ್ಲಿ ಸಮಾನತೆ ಕಾಯ್ದುಕೊಂಡಿರುವುದು ಇತ್ಯಾದಿಗಳು. ಇವು ನಿಜವಾಗಿಯೂ ತಳಸಮುದಾಯಗಳಿಗೆ ಓರ್ವ ಮನುಷ್ಯನನ್ನಾಗಿ ಸಮಾಜದಲ್ಲಿ ಬದುಕಲು ಬಿಟ್ಟಿವೆ. ಆದರೆ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಮತ್ತೊಮ್ಮೆ ಇದೇ ತಳಸಮುದಾಯಗಳ ಕುರಿತು ಚಿಂತಿಸಿದಾಗ ಅವರ ಪರಿಸ್ಥಿತಿ ಶೋಚನೀಯವಾಗುತ್ತದೆ. ಕಾರಣ ಇಂದಿನ ಜಾಗತೀಕರಣವು ಎಲ್ಲೆಲ್ಲೂ 'ಅನಿವಾರ್ಯದ ಆಯ್ಕೆ'ಯನ್ನು ಸ್ಪಷ್ಟಮಾಡುತ್ತಿದೆ. ಯಾವುದೇ ವಸ್ತುವನ್ನು ಕೊಂಡು ಕೊಳ್ಳಲು, ಯಾವುದೇ ಉದ್ಯೋಗವನ್ನು ಪಡೆಯಲು ಆಯ್ಕೆಯು ನಮ್ಮದಾಗಿದ್ದರೂ ಅಲ್ಲ ಇರುವ ಕೆಲವೇ ಕೆಲವನ್ನು ಮಾತ್ರ ನಾವು ಆಯ್ಕೆ ಮಾಡಿಕೊಳ್ಳಬೇಕು. ಹೀಗಾಗಿ ತಳಸಮುದಾಯಗಳು ಯಾವುದೇ ಉದ್ಯೋಗ ಪಡೆಯಲು ಅನಿವಾರ್ಯ ಆಯ್ಕೆ ಸಾಲಿನಲ್ಲಿ ನಿಲ್ಲಲೇ ಬೇಕು. ಆದರೆ ಬ್ರಿಟೀಷರ ಪದ್ಧತಿಯ ಶಿಕ್ಷಣವು, ಇಂದಿನ ತಾಂತ್ರಿಕ ಜಗತ್ತಿನಲ್ಲಿ ಅವರಿಗೆ ಉದ್ಯೋಗವನ್ನು ಕೊಡಿಸುವಷ್ಟರ ಮಟ್ಟಿಗೆ ಸಾಧಿಸಲಾಗಲಿಲ್ಲ. ಕಾರಣ ಅವರು ಬೇರೆಯ ತಾಂತ್ರಿಕ ಶಿಕ್ಷಣವನ್ನು ಪಡೆಯಬೇಕಾಗಿದೆ. ಆದರೆ ಅವರಿಗೆ ಆ ಶಿಕ್ಷಣವು ಎಟುಕು ತ್ತಿಲ್ಲ. ಇಲ್ಲಿ ಮತ್ತೊಮ್ಮೆ ತೊಂದರೆಗೊಳಗಾಗಿ ದಾರಿಯನ್ನು ಕಾಣದಂತಹ ಪರಿಸ್ಥಿತಿಯನ್ನು ಈ ಸಮುದಾಯಗಳು ಅನುಭವಿಸುತ್ತಿವೆ.

ಇನ್ನು ಜಾಗತೀಕರಣದ ಪ್ರತಿಫಲಗಳಾದ ಸಿನಿಮಾ, ಟಿ.ವಿ.ಯಂತಹ ಮಾಧ್ಯಮಗಳಿಗೆ ಪ್ರಚೋದಿತವಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿರುವುದು ತಳಸಮುದಾಯಗಳೆ ಕಾರಣ. ಈಗಾಗಲೇ ಪಾಶ್ಚಾತ್ಯ ಸಂಸ್ಕೃತಿಯನ್ನು ಸಾಮಾನ್ಯವಾಗಿ ಅನುಕರಿಸಿ, ಅದರ ಒಳಿತು ಕೆಡುಗಳನ್ನು ಸಾಧಾರಣವಾಗಿ ಅರ್ಥಮಾಡಿಕೊಂಡಿರುವ ಮೇಲ್ವರ್ಗ ಒಂದು ಅಂತರವನ್ನು ಕಾಯ್ದುಕೊಂಡಿದೆ. ಆದರೆ ತಳಸಮುದಾಯಗಳು ಇಂತಹ ಅತಿಯಾದ Fashion ನಿಂದಾಗಿ ದುಶ್ಚಟ ಮುಂತಾದವುಗಳಿಗೆ ಒಳಗಾಗಿ ಒಂದು ರೀತಿಯಿಂದ ತಮ್ಮನ್ನು ತಾವು ನಿರ್ಧರಿಸಿ ಕೊಳ್ಳಲಾಗದೇ ಹೋಗುತ್ತಿದ್ದಾರೆ. ಒಂದು ರೀತಿಯಿಂದ ತಮ್ಮ ಸಂಸ್ಕೃತಿಯಿಂದ ಅನ್ಯರಾಗುತ್ತಾ ತಮ್ಮ ಸಮಾಜದಿಂದ ಪರಕೀಯರಾಗುತ್ತಾ ಇನ್ನೊಂದು ಕಡೆ ಇನ್ನಿತರೇ ಸಂಸ್ಕೃತಿಯನ್ನು ಸಂಪೂರ್ಣವಾಗಿ ಪಡೆದುಕೊಳ್ಳಲಾಗದೇ ಒಂದು ರೀತಿಯ ದ್ವಂದ್ವಸ್ಥಿತಿಯನ್ನು ಈ ತಳ ಸಮುದಾಯಗಳು ಅನುಭವಿಸುತ್ತಿವೆ.

* * *

**ಹಲಗಲಿ ಬೇಡರು**

ಭೀಮನು ಇದರಿಗೆ ನಿಂತಾ
ಐ-ನೂರ ಮಂದಿಗೆ ಮಲತಾ

ಬಾಲನು ಮಾಡಿದ ಕಸರತ್ತಾ
ಕುದರಿಯ ಕಡದನೊ ಹತ್ತಾ
ರಾಮನ ಕಡತ ವಿಪರೀತಾ
ಕಾವಲಿ ಹರಿತೊ ರಕ್ತಾ

ಸಾವಿರ ಅಳಿಗೆ ವೊಬ್ಬ ಮಲತಾ
ಕೂಗುತಾನೊ ಕಡಿ-ಕಡಿರ್-ಎಂತಾ ||ಯೇರ||

ನಾಲ್ಕು ಮಂದಿ ಹೇಂಗ ಕಡದ ಸತ್ತರೊ ಭಂಟರ್-ಅನಸೆರ ಜನಕ

## ೩೦. ಆಧುನಿಕ ಜಗತ್ತು ಮತ್ತು ತಳಸಮುದಾಯಗಳು

'ತಳಸಮುದಾಯ'ಗಳು ಎಂಬುದರ ಅರ್ಥವ್ಯಾಪ್ತಿಯನ್ನು ಈ ಸಂದರ್ಭದಲ್ಲಿ ಹೇಳಲು ಬಯಸುವುದಿಲ್ಲ. ಏಕೆಂದರೆ ಈಗಾಗಲೇ ಈ ವೇದಿಕೆಯಲ್ಲಿರುವ ಸ್ನೇಹಿತರು ಈ ಕುರಿತಾಗಿ ಯೋಗ್ಯಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಹಾಗಾಗಿ ನಾನು ಮತ್ತೆ ಇದನ್ನೇ ಪ್ರಸ್ತಾಪಿಸುವುದು ಸರಿಯಾಗಲಾರದೆಂಬುದು ನನ್ನ ಭಾವನೆ.

ಇಂದು ತಳಸಮುದಾಯಗಳು ಹಲವು ಬಗೆಯಿಂದ ಬದುಕಿನುದ್ದಕ್ಕೂ ಶೋಷಣೆಗೊಳಗಾಗುತ್ತಾ ಬಂದಿರುವುದು ಚಾರಿತ್ರಿಕ ಸಂಗತಿ. ಅದು ಶ್ರೀಮಂತರ, ಮೇಲ್‌ಜಾತಿಯವರ ಅಷ್ಟೇ ಏಕೆ ನನ್ನದೇ ಸಮುದಾಯದವರ, ತನ್ನದೇ ಕುಟುಂಬದವರ ಶೋಷಣೆಯನ್ನು ಅನುಭವಿಸುತ್ತಿದೆ. ಇಂಥ ಶೋಷಣೆಗೊಳಗಾದ ಸಮುದಾಯಗಳಿಗೆ ತಳಮಳ, ಅನಾಥ ಪ್ರಜ್ಞೆ ಕಾಡಿದೆ. ತಳಮಳದ ತಾಣವಾದ ಶ್ರಮಿಕನ ಮನಸ್ಸು ತಳಮಳಕ್ಕೆ ಕಾರಣವಾದ ಮೂಲವನ್ನು ಹುಡುಕಬೇಕಾದರೆ, ತಾನು ಶೋಷಣೆಗೊಳಗಾಗುತ್ತಿರುವ ಅರಿವು ಅವನಲ್ಲಿ ಮೂಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ತಳಸಮುದಾಯಗಳು ಪಾರಂಪರಿಕ ಹಲವು ಶೋಷಣೆ ಗಳ ನಡುವೆ ಆಧುನಿಕತೆಯೆಂಬುದು ಮನಸ್ಥಿತಿಯನ್ನು ವೈಭವೀಕರಿಸಲು ಮುಂದಾಗಿ ಕೆಳ ಸಮುದಾಯಗಳ ಮನಸ್ಥಿತಿಯನ್ನು ಕೀಳೀಕರಿಸುವಲ್ಲಿ ಮುಂದಾಗಿದೆ. ಅಂದರೆ ಆಧುನಿಕತೆಯ ಆಧುನಿಕ ಉತ್ಪಾದನಾ ವಿಧಾನದ ಬಹುಮುಖ್ಯ ಆಯಾಮಗಳು ಇಂಡಿಯಾದ ಜಾತಿರಚನೆಯ ಸ್ವರೂಪ ಮತ್ತು ಸ್ವಭಾವಗಳಲ್ಲಿ ಗತಿಶೀಲತೆಯನ್ನುಂಟು ಮಾಡಿವೆ.

ಇದರ ಪರಿಣಾಮ ತಳಸಮುದಾಯಗಳು ತಮ್ಮ ಆಚರಣೆ ಮತ್ತು ಜೀವನ ವಿಧಾನಗಳಲ್ಲಿ ತೀವ್ರತರಹದ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಹಂಬಲಿಸುತ್ತಿವೆ. ಸಂಸ್ಕೃತೀಕರಣ ಬಾಗಿಲು ತಟ್ಟುತ್ತಿದೆ. ಇದಕ್ಕೆ ತದ್ವಿರುದ್ಧವಾಗಿ ಶ್ರೀಮಂತ ವರ್ಗಗಳು ಸಾಮ್ರಾಜ್ಯಶಾಹಿಗಳ ನೆರಳಿನಲ್ಲಿ ಆಧುನೀಕರಣದ ಪ್ರಕ್ರಿಯೆಗಳಿಗೆ ಒಳಗಾಗುತ್ತಿವೆ. ಎರಡೂ ಹಂಬಲಿಸುತ್ತಿವೆ. ಆದರೂ ಪ್ರತಿಷ್ಠಿತ ವರ್ಗಗಳು ಈ ಪ್ರಕ್ರಿಯೆಯನ್ನು ಸಾಮಾಜಿಕ ಪ್ರತಿಷ್ಠೆಯನ್ನಾಗಿ ಮಾಡಿ ಕೊಂಡು ಹೆಡೆಯೆತ್ತಿ ನಿಲ್ಲುತ್ತವೆ. ಆದರೆ ಆಧುನೀಕರಣಕ್ಕೆ ಒಳಗಾದ ಕೆಳಸಮುದಾಯಗಳು ಅಥವಾ ಆದಿವಾಸಿ ಕುಟುಂಬಗಳು ಕೀಳರಿಮೆಯಲ್ಲಿ ಬಳಲುತ್ತಾ ತಮ್ಮ ಮೂಲ ಪ್ರವೃತ್ತಿ ಗಳನ್ನು ಹಪಾಹಪಿಯಲ್ಲಿ ನರಳುವಂತೆ ತೋರಿಸಲಾಗುತ್ತದೆ. ಉದ್ದೇಶಪೂರಿತ ವಿಸ್ಮೃತಿ ಯೊಂದನ್ನು ಅವುಗಳ ಮೇಲೆ ಹೇರಲಾಗುತ್ತಿದೆ. ಹೀಗಾಗಿ ಈ ವರ್ಗಗಳು

ಪಡೆದುಕೊಳ್ಳುವ ಮತ್ತು ಕಳೆದುಕೊಳ್ಳುವ ಸಂದಿಗ್ಧತೆಗಳಲ್ಲಿಯೇ ಉಳಿದು ಬಿಡುವಂತಾಗುತ್ತದೆ. ಇದು ಆರ್ಥಿಕ ರಚನೆ ಮತ್ತು ಉತ್ಪಾದನಾ ವಿಧಾನಗಳ ಪ್ರಧಾನ ವೈರುಧ್ಯವೆಂದು ಕಾಣುತ್ತದೆ. ಹಾಗಾಗಿ ಜಾಗತಿಕವಾದ ರಾಜಕೀಯಾರ್ಥಿಕ ಸಂಬಂಧಗಳು ಹೊಸ ರೀತಿಯ ತಲ್ಲಣಗಳನ್ನು ಹುಟ್ಟು ಹಾಕುತ್ತಿವೆ. ಒಂದು ಹಂತದಲ್ಲಿ ಮನುಷ್ಯರಿಂದ ಮನುಷ್ಯರನ್ನು ಬೇರ್ಪರಡಿಸುವ, ಕೀಳೀಕರಿಸುವ ಪ್ರವೃತ್ತಿಗಳು ಸಮಾಜದಲ್ಲಿ ಜೀವಂತವಾಗಿ ಉಳಿದು ಬಂದಿದ್ದವು. ಆದರೆ ಜಾಗತೀಕರಣದ ಫಲಿತಗಳು ಇಂದು ದೇಹ ಮನಸ್ಸುಗಳ ಮಧ್ಯೆಯೇ ವಿಕಾರಗಳನ್ನು, ಭಿನ್ನತೆಗಳನ್ನು ತಂದು ಹಾಕುತ್ತಿವೆ. ನಿಸರ್ಗ ಪ್ರಮುಖ ಸಾಮಾಜಿಕ ಬೆಳವಣಿಗೆಗಳನ್ನು ವಿಶ್ವಾಸರಹಿತ ಮನದ ಪ್ರವೃತ್ತಿಗಳನ್ನು ಕೇಂದ್ರೀಕೃತ ಆಕೃತಿಗಳನ್ನು ಢಾಳಾಗಿ ಬೆಳೆಸುತ್ತಿವೆ. ಆತನ ಭೋಗ ಜೀವನಕ್ಕೆ ಆಡಂಬರದ ಬದುಕಿಗೆ ಪ್ರೇರಣೆ ನೀಡುತ್ತಿವೆ. ಇಂತಹ ಸಂದರ್ಭದಲ್ಲಿ ಶ್ರಮಿಕ ವರ್ಗಗಳ ಅದರಲ್ಲೂ ಲಂಬಾಣಿ ಸಮುದಾಯಗಳ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಪುನಾರಚನಾ ಹಂಬಲಿಕೆಗಳ ಕುರಿತು ಚರ್ಚಿಸುವುದು ಬಹುಮುಖ್ಯವಾಗಿದೆ.

ಆಧುನಿಕತೆಯ ಹೊಸ ಹೊಸ ನೆಲೆಗಳಾದ ಖಾಸಗೀಕರಣ, ಉದಾರೀಕರಣ, ಕಂಪ್ಯೂಟರೀ ಕರಣಗಳಂತಹವುಗಳು ಮನುಷ್ಯನ ಅಸ್ತಿತ್ವವನ್ನೇ, ಆತನ ಸೃಷ್ಟ್ಯಾತ್ಮಕತೆಯನ್ನೇ ಬಲಿತೆಗೆದು ಕೊಳ್ಳುತ್ತಿವೆ. ಒಂದು ಕಾಲದಲ್ಲಿ ಮೈಲಕೂಲಿ (ರಸ್ತೆಕೆಲಸ) ಒಡ್ಡುಕಟ್ಟಿ ಕಡಿದು ಜೀವಿಸುತ್ತಿದ್ದ, ಜಲ್ಲಿ ಒಡೆದು ಸಂಜೆಗಂಜಿಯನ್ನು ಹುಟ್ಟಿಸಿಕೊಳ್ಳುತ್ತಿದ್ದ ಸಮುದಾಯಗಳು, ಉರುವಲು ಕಟ್ಟಿಗೆ ಮಾರಿ ಜೀವನ ಸಾಗಿಸುತ್ತಿದ್ದ ಲಂಬಾಣಿ ಸಮುದಾಯಗಳು ಅತಿಯಾದ ಯಂತ್ರ ನಾಗರೀಕತೆಯ ಫಲವಾಗಿ ಬದುಕನ್ನೇ ಕಳೆದುಕೊಳ್ಳುತ್ತಿವೆ. ದೊಡ್ಡ ದೊಡ್ಡ ಕ್ರೇನ್‌ಗಳು, ಬುಲ್ಡೋಜರ್‌ಗಳು, ಎಲ್.ಪಿ.ಜಿ., ಗ್ಯಾಸ್, ಗ್ರೀಜರ್, ಸೋಲಾರ್‌ಗಳು ಇಂಥ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿವೆ. ಲಂಬಾಣಿ ಸಮುದಾಯದ ಮಹಿಳೆಯರು ತಾವು ಧರಿಸಲು ಬಟ್ಟೆಗಳ ಮೇಲೆ ಕಸೂತಿಕಲೆ ಅರಳಿಸಿ ಅಲಂಕಾರವಾಗಿ ಕಾಣಲು ಹಾಕುತ್ತಿದ್ದರು. ಇದು ಪರಂಪರಾ ಗತವಾಗಿ ಮುಂದುವರೆದಿತ್ತು. ಕಸೂತಿ ಕಲೆಗಳು ಮತ್ತು ಮಹಿಳೆಯ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆಧುನಿಕತೆಯ ಪ್ರಭಾವ ಮತ್ತು ಪರಿಣಾಮಗಳನ್ನು ಬೀರಿರುವುದನ್ನು ಗಮನಿಸಬೇಕು. ಒಂದು ಕಾಲದಲ್ಲಿ ಸೀಮಿತ ಸಮುದಾಯವು ಅಂತಹ ಸಂದರ್ಭದಲ್ಲಿ ಅಂತಹ ಕಸೂತಿ ಕಲೆಗಳಿಗೆ ಆಧುನಿಕ ರೂಪನೀಡಿ ವಿವಿಧ ವಲಯಗಳಲ್ಲಿ ಉಪಯೋಗಿಸಿ ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಿದ್ದು ಆಧುನಿಕತೆಯ ಕೊಡುಗೆ ಸ್ವಾಗತಾರ್ಹವಾದು ದಾಗಿದೆ. ಆದರೆ ಜನಪ್ರಿಯತೆಯ ನೆಪದಲ್ಲಿ ಲಂಬಾಣಿ ಮಹಿಳೆಯರನ್ನು ಶೋಷಣೆ ಮಾಡಲಾ ಗುತ್ತಿದೆ. ಕಸೂತಿ ಕಲೆಗಳು ಹೊಂದಿರುವ ವಸ್ತ್ರಗಳತ್ತ ಜನರ ಅಭಿರುಚಿಗಳು ಹೆಚ್ಚಾದಂತೆ, ಅನೇಕ ಸಿದ್ದ ಉಡುಪು ತಯಾರಿಕ ಕಂಪನಿಗಳು ಇಂತಹದೇ ಉಡುಪುಗಳನ್ನು ಯಂತ್ರಗಳ ಮೂಲಕ ಹೊಸ ಹೊಸ ರೂಪಗಳನ್ನು ನೀಡಿ ಎಂಬ್ರಾಯಿಡರ್, ದರಕ್ಕಿಂಗ್ ಸಾರಿ, ಚೂಡಿ ದಾರ್, ವರಕ್ಕಿಂಗ್‌ಸ್ಟೋನ್ ಸ್ಯಾರಿಗಳೆಂದು ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿದೆ. ಇದೇ ಮಾದರಿಯ ಕಸೂತಿಯ ಕಲೆಗಳು ಮಹಿಳೆಯರು ಧರಿಸುವ ಉಡುಪುಗಳಲ್ಲಿ ಅಷ್ಟೇ ಅಲ್ಲದೇ ವಿವಿಧ ಉಪಯೋಗಗಳ ವಸ್ತುಗಳು ಅಂದರೆ, ವ್ಯಾನಿಟಿ ಬ್ಯಾಗ್, ಲೇಡಿಸ್ ಸ್ಲಿಪ್ಪರ್, ಫೈಲ್ಸ್, ಪಂಕ್ಷನ್ ಡೆಕೋರೇಷನ್, ಹೌಸ್ ಡೆಕೋರೇಷನ್, ಹೂದಾನಿ, ವಾಚ್, ಲೇಡಿಸ್ ಬೆಲ್ಟ್ ಮುಂತಾದವುಗಳಲ್ಲಿಯೂ ವಿಸ್ತರಿಸಿಕೊಂಡಿದೆ. ಮಾರುಕಟ್ಟೆಯಲ್ಲಿ ಇಂಥ ವಸ್ತುಗಳಿಗೆ ಬೇಡಿಕೆ ಹೆಚ್ಚಿದ್ದು ಬೆಲೆಗಳು ಹೆಚ್ಚಿದೆ. ಅಲ್ಲದೆ ವಿವಿಧ ಕಂಪನಿಗಳು ಸ್ವತಃ ಲಂಬಾಣಿ ಮಹಿಳೆಯರ ಮೂಲಕ ಬಟ್ಟೆಗಳ ಮೇಲೆ ಡಿಜೈನ್‌ಗಳನ್ನು, ಕಸೂತಿಗಳನ್ನು ಸಿದ್ದಪಡಿಸಿಕೊಳ್ಳುತ್ತಿವೆ. ಕಸೂತಿಗೆ ಬೇಕಾದ ಸಾಮಗ್ರಿಗಳನ್ನು ತಾನೇ ಕೊಟ್ಟು ಇಂತಿಷ್ಟು ಬಟ್ಟೆಗೆ ಸುಮಾರು ೭೫ ರಿಂದ ೧೫೦ರೂ ಗಳವರೆಗೆ 'ಕೂಲಿ' ಎಂದು ನಿಗದಿಗೊಳಿಸುತ್ತಾರೆ. ಇದನ್ನು ತಯಾರಿಸಲು ಸುಮಾರು ೧೦-೧೫ ದಿನಗಳಾದರೂ ಸಮಯ ಬೇಕು. ಈ ಲೆಕ್ಕಾಚಾರದಲ್ಲಿ ದಿನಕ್ಕೆ ೧೫ ರಿಂದ ೨೦ರೂ ಕೂಲಿ ಬೀಳುತ್ತದೆ. ಇದೇ ಬಟ್ಟೆಯನ್ನು ಮಾರುಕಟ್ಟೆಯಲ್ಲಿ 'ಹ್ಯಾಂಡ್ ವರ್ಕ್ಸ್ ಫ್ಯಾಬ್ರಿಕ್' ಎಂಬ ಹೊಸ ಲೇಬಲ್ ಹಚ್ಚಿ ಸುಮಾರು ೧೫೦೦ ರಿಂದ ೧೦,೦೦೦ ಸಾವಿರಕ್ಕೂ ಅಧಿಕ ಬೆಲೆಗೆ ಮಾರಾಟ ಮಾಡುತ್ತಾರೆ. ಹೀಗೆ ಕಂಪನಿಗಳು ಲಂಬಾಣಿ ಸಮುದಾಯದ ಮತ್ತು ಅಂತಹ ಕಲೆಗಳನ್ನು ಆಧುನಿಕ ಯಂತ್ರಗಳ ಮೂಲಕ ತಾವೇ ಸಿದ್ಧಪಡಿಸಿಕೊಳ್ಳುವುದು ಏಕಕಾಲದಲ್ಲಿ ಮಹಿಳೆಯ ಬದುಕಿನ ಅಸ್ತಿತ್ವವನ್ನು ಕಸಿದುಕೊಂಡು ಶೋಷಣೆಗೊಳಪಡಿಸುತ್ತಿದೆ. ಇದು ಒಂದು ಆಧುನಿಕತೆಯ ಮುಖವಾದರೆ, ಮತ್ತೊಂದು ಈ ಸಮುದಾಯದ ಮಹಿಳೆಯರ ಮನಸ್ಥಿತಿಯನ್ನು ಕುಗ್ಗಿಸುತ್ತಿದೆ. ಪಾರಂಪರಿಕ ವಾಗಿ ತಾವೇ ಕಸೂತಿ ಮಾಡಿದ ಬಟ್ಟೆಗಳನ್ನು ಧರಿಸುವುದೂ ಕೂಡ ಮುಜುಗರಕ್ಕೆ ಎಡೆಮಾಡಿ ಕೊಟ್ಟಿದೆ. ಶ್ರೇಣೀಕೃತ ಸಮಾಜದಲ್ಲಿ ಆರ್ಥಿಕ ಸ್ಥಿತಿವಂತರಿಗೆ ಗೌರವವಿದೆ. ಆದರೆ ಬಡವರಿಗೆ ಈ ಗೌರವ ಸಿಗುತ್ತಿಲ್ಲ. ಸ್ಥಿತಿವಂತ ಮಹಿಳೆಯರು ಇಂಥ ಉಡುಪುಗಳನ್ನು ಧರಿಸುತ್ತಿದ್ದರೆ,

ಅದೊಂದು ಫ್ಯಾಷನ್ ಆಗಿ, ಘನತೆಯಾಗಿ, ಪ್ರತಿಷ್ಠೆಯ ವಿಷಯವಾಗುತ್ತದೆ. ಅದೇ ತಳ ಸಮುದಾಯದ ಮಹಿಳೆಯರು ಧರಿಸಿದರೆ, 'ತಾಂಡ'ಮಹಿಳೆಯಾಗಿ ಗುರ್ತಿಸುತ್ತಾರೆ. ತಾರತಮ್ಯ ಮಾಡುತ್ತಾರೆ. ಹಾಸ್ಯಮಾಡುತ್ತಾರೆ. ಮೇಲು ನೋಟಕ್ಕೆ ಇಂಥ ತಾರತಮ್ಯಗಳು ಕಾಣದಿದ್ದರೂ ಸೂಕ್ಷ್ಮಮತಿಗಳಾದ ಮಹಿಳೆಯರು ಅವಮಾನವೆಂದು ಭಾವಿಸಿ ಮಾನಸಿಕವಾಗಿ ಬಳಲಿ ಹಿಂಸೆಗೊಳಗಾಗುತ್ತಾರೆ. ಇಂಥ ವಾತಾವರಣದ ಬಿಕ್ಕಟ್ಟಿನಿಂದ ಪಾರಾಗಲು ಆಧುನಿಕವಾಗಿ ಸಿದ್ಧಗೊಂಡ ಉಡುಪುಗಳ ಕಡೆ ಮುಖಮಾಡಬೇಕಾಗಿದೆ. ಹೀಗಾಗಿಯೇ ಬಹುತೇಕ ಲಂಬಾಣಿ ತಾಂಡಗಳಲ್ಲಿ ಕಸೂತಿ ಕಲೆಯ ಬಟ್ಟೆಗಳು ಮಾಯವಾಗಿ 'ಆಧುನಿಕ ಲಂಬಾಣಿ ಮಹಿಳೆ' ಯರಾಗಿದ್ದಾರೆ. ಪಾರಂಪರಿಕ ಒಂದು ಸಂಸ್ಕೃತಿಯನ್ನು ಕಳೆದುಕೊಳ್ಳತೊಡಗಿದ್ದಾರೆ. ಇಲ್ಲಿ ವಿಚಿತ್ರವೆಂದರೆ ಆಧುನಿಕವಾಗಿಯೆಂದು ಕರೆಯಲ್ಪಡುವ ಅಧಿಕ ಬೆಲೆಯ ಸೀರೆಗಳನ್ನು ತಾವೇ ಸಿದ್ಧಮಾಡಿಕೊಟ್ಟಿದ್ದನ್ನು ಹೆಚ್ಚು ಬೆಲೆ ಕೊಟ್ಟು ಧರಿಸಿದರೂ ತಾಂಡ ಮಹಿಳೆಯಾಗಿ ಪರಿವರ್ತಿತ ಳಾಗುತ್ತಾಳೆ ಇದು ವಿಪರ್ಯಾಸವೇ ಸರಿ. ಹೀಗೆ ಆಧುನಿಕತೆಯು ಏಕಕಾಲದಲ್ಲಿ ಬದುಕಿನ ಅಭದ್ರತೆಯನ್ನು ಮತ್ತು ಮಾನಸಿಕ ತಳಮಳವನ್ನುಂಟು ಮಾಡುತ್ತಿದೆ. ಹೀಗಾಗಿ ತಳ ಸಮುದಾಯಗಳು ಪಾರಂಪರಿಕ ಉದ್ಯೋಗಗಳನ್ನು ಕಳೆದುಕೊಂಡು ಪರ್ಯಾಯ ಉದ್ಯೋಗ ಗಳತ್ತ ಮುಖಮಾಡಿವೆ.

ಕೆಳವರ್ಗಗಳು ಯಾವದೇ ಒಂದು ಉದ್ಯೋಗಕ್ಕೆ ನೆಚ್ಚಿಕೊಂಡು ತಟಸ್ಥವಾಗಿರುವುದಿಲ್ಲ. ಬದಲಾಗಿ ತನ್ನ ದೈಹಿಕ ಶ್ರಮದ ಮೂಲಕ ಅನ್ಯ ಉದ್ಯೋಗಗಳ ಕಡೆ ಬದಲಾಗುತ್ತಿರುತ್ತದೆ. ತಾನು ತೊಡಗಿಕೊಂಡ ಉದ್ಯೋಗದಿಂದ ಪ್ರತಿಫಲ ಕಾಣದಿದ್ದಾಗ ಮತ್ತೊಂದು ಉದ್ಯೋಗ ದತ್ತ ಕ್ರಿಯಾಶೀಲವಾಗುತ್ತದೆ. 'ತಟಸ್ಥತೆ' ಅಲ್ಲಿ ಕಾಣುವುದಿಲ್ಲ. ತನ್ನ ಸಮಸ್ಯೆಗಳ ಪರಿಹಾರ ಕ್ಕಾಗಿ ದೇವರಲ್ಲಿ ಹರಕೆ ಮಾಡುವ ಹಾಗೆ ಯಾವುದೇ ಒಂದು ದೇವರಿಗೆ ಹರಕೆ ಮಾಡುವುದು. ಹೀಗೆಯೇ ನಿರಂತರವಾಗಿ ಪ್ರತಿಫಲ ನೀಡುವ ದೇವರಿಗೆ ಹರಕೆ ಮಾಡುತ್ತಲೇ ಇರುತ್ತದೆ. ಪ್ರತಿಫಲ ಕೊಡುವ ದೇವರಿಗೆ ತಮ್ಮ ಜೀವಮಾನದವರೆಗೆ ನೆಚ್ಚಿಕೊಂಡು ಪೂಜಿಸುತ್ತವೆ. ಅದರಂತೆ ಉದ್ಯೋಗದಲ್ಲಿಯೂ ಇಂಥ ಗುಣವನ್ನು ಅಳವಡಿಸಿಕೊಂಡಿರುತ್ತದೆ. ಹೀಗೆ ವಲಸೆ ಹೋಗುವಾಗ ಮೂಲ ಸಂಸ್ಕೃತಿಯನ್ನು ಜೀವಂತವಾಗಿಡುವ ದೃಷ್ಟಿಯೂ ಕೆಳವರ್ಗ ಗಳಿಗಿದೆ. ತಳಸಮುದಾಯಗಳು ಆಧುನಿಕತೆಯ ಎಷ್ಟೇ ವಿರಾಟರೂಪ ಪ್ರದರ್ಶಿಸಿದರೂ ಅಂಜದೇ ಬದುಕಿಗಾಗಿ ಹೋರಾಟ ಮಾಡುತ್ತವೆ. ಈ ವರ್ಗಗಳಿಗೆ ತಾಳಿಕೆಯ ಶಕ್ತಿ ಇದೆ. ಕರಿಕೆಯ ಹುಲ್ಲಿನ ಹಾಗೆ, ಕರಿಕೆಯ ಮೇಲೆ ಎಷ್ಟೇ ಕಲ್ಲು, ಮುಳ್ಳುಗಳನ್ನು ಹಾಕಿದರೂ ಆ ಕಲ್ಲು ಮುಳ್ಳುಗಳ ಸಂದುಗಳಲ್ಲಿ ಮತ್ತೆ ಮತ್ತೆ ಚಿಗುರುವಂತೆ ಕೆಳವರ್ಗಗಳು ಇಂದಿಗೂ ಜೀವಂತವಾಗಿವೆ. ಲಂಬಾಣಿ ಸಮುದಾಯದವರ ಮನಸ್ಥಿತಿಯನ್ನು ಬದಲಿಸಿದರೂ ಆಧುನಿಕತೆಯ ಮೂಲಕ ತನ್ನ ಸಂಸ್ಕೃತಿಯ ಕುರುಹುಗಳನ್ನು ಜೀವಂತವಾಗಿರಿಸಿದೆ.

* * *

**ಹಲಗಲಿ ಬೇಡರು**

**ಲನೇ ನುಡಿ**

ಯಾರು ಕೇಳಲಿಲ್ಲ ಆರು ಗುಂಡ ತಾಕಿ ಹಣಮ ಬಿದ್ದ ನೆಲಕ
ಚೀರಿ-ಆಡುತ ಜನ ಸುತ್ತಗಟ್ಟಿತೊ ಅಂಜಿ-ಕೊಂಡ ಜೀವಕ

ಶೂರ ವೊಬ್ಬ ಬಹಳ ಜೋರ ಮಾಡಿದನ ಹತಾರ ತಗೊಳುದಕ
ಯೇರಿ ಬರು ಕುದರಿ ಕಡದನೊ ಸ್ವಾರ ಬಿದ್ದ ನೆಲಕ

ರಾಮಿ ಗುಂಡಿಲಿ ಜೋರ ಮಾಡಿ ಹೊಡದಳೊ ಮೂರ ಮಂದಿ ಶಿರಕ
ಆರ ಕುದರಿಯ ಕಡದ ಸಿಡದಳೊ ಬಾಲನ ಸೂರಾಯಕ ||ಚ್ಯಾಲ||

# ೩೧. ಜಾಗತೀಕರಣ ಮತ್ತು ಬಾಲಕಾರ್ಮಿಕರು

ಭಾರತ ದೇಶವು ಹಳ್ಳಿಗಳಿಂದ ಕೂಡಿದ ರಾಷ್ಟ್ರವಾಗಿದೆ. ಇದು ಒಕ್ಕಲುತನವೇ ಪ್ರಧಾನವಾಗಿರುವ ದೇಶ. ಆದ್ದರಿಂದ ರೈತರನ್ನು ಈ ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ಇದನ್ನು ಎಲ್ಲರೂ ಹೇಳುತ್ತಾರೆ. ಆದರೆ ಆ ಬೆನ್ನೆಲುಬನ್ನೆ ಮುರಿಯುತ್ತಿದ್ದಾರೆ. ಆ ಬೆನ್ನೆಲುಬನ್ನು ಕಣ್ಣಿನಿಂದ ನೋಡಿ ಹೋಗುತ್ತಿದ್ದರೂ, ಎಲ್ಲರೂ ನೋಡಿದರೂ ನೋಡದಂತಿ ದ್ದಾರೆ. ಏಕೆಂದರೆ ರೈತರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಶೋಷಣೆ, ದಬ್ಬಾಳಿಕೆ ಪದಗಳಿಗೆ ನಿಲುಕದಂತಹದ್ದು. ನಕಲಿ ಬೀಜಗಳ ಹಾವಳಿ, ಅಧಿಕ ಬಡ್ಡಿಯ ಹೊರೆ, ಜೊತೆಗೆ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಕಂಗಾಲಾದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇದು ಸಾಲದೆಂಬಂತೆ ಕೂಲಿಕಾರ್ಮಿಕರಿಗೆ ಜಮೀನುದಾರರು ಸರಿಯಾಗಿ ಕೂಲಿ ಕೊಡದೆ, ಅವರ ಹೊಟ್ಟೆಯ ಮೇಲೆ ಹೊಡೆಯುತ್ತಿದ್ದಾರೆ. ಜೀತಪದ್ಧತಿಯಂತ ಅನಿಷ್ಟ ಕೆಲವು ವರ್ಗದ ಜನತೆಯ ಜೀವನಕ್ಕೆ ಮುಳುವಾಗಿದೆ. ಇತ್ತೀಚೆಗೆ ಘನ ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅಧಿಕ ಕೂಲಿಯನ್ನು ನೀಡಿಯೂ ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ಫಲಾನುಭವಿಗಳಿಗೆ ಸಿಗದಂತೆ ಎಚ್ಚರವಹಿಸಿದ್ದಾರೆ. ಇನ್ನೊಂದು ದುರಂತವೆಂದರೆ ಸದ್ಯ ನಮ್ಮ ರಾಜಕಾರಣಿಗಳು, ಅಧಿಕಾರಿಗಳು, ಆರ್ಥಿಕ ಅಭಿವೃದ್ಧಿಗಾಗಿ ಕೃಷಿಗೆ ಒಲವು ಆದ್ಯತೆಕೊಡದೆ ಬೇರೆಯವಕ್ಕೆ ಹೆಚ್ಚಿನ ಆದ್ಯತೆ ವಹಿಸಿದ್ದಾರೆ. ಕೃಷಿಗೆ ಹೆಚ್ಚಿನ ಆದ್ಯತೆ ಕೊಡುವುದುತ್ತಮ. ೊತೆಗೆ ಶಿಕ್ಷಣಕ್ಕೂ ಆದ್ಯತೆ ಕೊಡಬೇಕಾಗಿದೆ.

ಏಕೆಂದರೆ, ನಮ್ಮ ಹಳ್ಳಿಗಳಲ್ಲಿ ಬಾಲಕಾರ್ಮಿಕರ ಪದ್ಧತಿ ತಾಂಡವವಾಡುತ್ತಿದೆ. ಇದಕ್ಕೆ ನಗರ ಪಟ್ಟಣಗಳೂ ಹೊರತಲ್ಲ. ಹಳ್ಳಿಗಳಲ್ಲಿ ಮಕ್ಕಳು ದನಮೇಯಿಸಲು, ಮೇಕೆ, ಕುರಿ ಮೇಯಿಸಲು ಹೋಗುವುದು ಸರ್ವೇಸಾಮಾನ್ಯ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಬೀಜಗಳ ಕಸಿಮಾಡಲು ಮಕ್ಕಳುಗಳನ್ನೇ ಬಳಸಿಕೊಳ್ಳಲಾಗುತ್ತಿದೆ. ಮಂಡಕ್ಕಿ ಬಟ್ಟಿಗಳಲ್ಲಿ ಮಕ್ಕಳ ಕಲರವ ನಲುಗುತ್ತಿದೆ. ಮಂಡಕ್ಕಿ ಭಟ್ಟಿ ದುರಂತ ಇಡೀ ರಾಷ್ಟ್ರವನ್ನೇ ತಲ್ಲಣ ಗೊಳಿಸಿತು. ಪಟಾಕಿಗಳು ಚಿಕ್ಕಚಿಕ್ಕವಾಗಿರುವುದರಿಂದ ಅವುಗಳಿಗೆ ಹಾಳೆಗಳನ್ನು ಸುತ್ತಿಲೇಬಲ್ ಅಂಟಿಸುವ ಕೆಲಸಕ್ಕೆ ತುಂಬಾ ತಾಳ್ಮೆಬೇಕು. ಅದನ್ನು ಮಾಡಲು ದೊಡ್ಡವರು ಹಿಂದೇಟು ಹಾಕುತ್ತಾರೆ. ಜೊತೆಗೆ ಜಾಸ್ತಿ ಕೂಲಿ ಕೇಳುತ್ತಾರೆ. ಆದರೆ ಮಕ್ಕಳು ಆ ಕೆಲಸವನ್ನು ಆಟವಾಡಿ ಕೊಂಡೇ ಮಾಡಿಮುಗಿಸುತ್ತಾರೆ. ಕಡಿಮೆ ಕೂಲಿ ಮತ್ತು ಪ್ರತಿಭಟನೆಗಳ ಕಿರಿಕ್‌ಗಳಿಲ್ಲದೆ, ಜೊತೆಗೆ ಬೇಡಿಕೆಗಳಿಲ್ಲದೇ ಕೆಲಸ ಮುಗಿಸಿಕೊಡುವುದರಿಂದ ಮಕ್ಕಳನ್ನೇ ಬಳಸಿಕೊಳ್ಳ ಲಾಗುತ್ತಿದೆ. ಬೀಡಿ ತಯಾರಿಕಾ ಘಟಕಗಳಲ್ಲಿಯೂ ಕೂಡ ಮಕ್ಕಳು ಬೇಕು. ಬೀಡಿಗಳಿಗೆ ಲೇಬಲ್ ಅಂಟಿಸಲು ಮಕ್ಕಳು ಬೇಕು. ಮುಂದುವರಿದ ರಾಷ್ಟ್ರಗಳು ಕೂಡ ಇದಕ್ಕೆ ಹೊರತಾ ಗಿಲ್ಲ. ಫುಟ್‌ಬಾಲ್‌ಗಳಿಗೆ ಅಂತಿಮ ರೂಪಕೊಡಲು, ಹೊಲಿಗೆ ಹಾಕಲು ದೊಡ್ಡವರಿಂದ ಸಾಧ್ಯವಿಲ್ಲ. ಅದಕ್ಕೆ ಮಕ್ಕಳೇ ಬೇಕು. ಮಕ್ಕಳ ಚಿಕ್ಕ ಬೆರಳುಗಳು ಫುಟ್‌ಬಾಲ್‌ಗಳನ್ನು ತೇಪೆಹಾಕಲು ಸರಿ ಹೊಂದುವಂತಹವುಗಳಾಗಿವೆ. ಆದ್ದರಿಂದ ಇಲ್ಲಿ ಕೂಡ ಬಾಲಕಾರ್ಮಿಕರು ಹೆಚ್ಚಾಗಿ ಕೆಲಸ ಮಾಡುತ್ತಾರೆ.

ಮೈಸೂರು, ಬೆಂಗಳೂರುಗಳಂತಹ ಮಹಾನಗರಗಳಲ್ಲಿಯೂ ಮಕ್ಕಳನ್ನು ಮನೆಕೆಲಸಕ್ಕೆ ಬಳಸಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಗ್ಯಾರೇಜು, ಕಾರ್ಖಾನೆ ಮತ್ತು ಅಪಾಯಕಾರಿ ಕ್ಷೇತ್ರಗಳಲ್ಲಿ ಮಕ್ಕಳು ಕೆಲಸಮಾಡುವುದನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಪ್ರಸ್ತುತ ನಮ್ಮ ದೇಶದಲ್ಲಿ ೧.೨೭ಕೋಟಿ ಬಾಲಕಾರ್ಮಿಕರಿದ್ದಾರೆ. ಕರ್ನಾಟಕದಲ್ಲಿಯೇ ೧೧ ಲಕ್ಷ ಬಾಲಕಾರ್ಮಿಕರು ತಮ್ಮ ಬಾಲ್ಯ ಮರೆತು ದುಡಿಯುತ್ತಿದ್ದಾರೆ, ದುಡಿಸಿಕೊಳ್ಳುವವರು ದುಡಿಸಿ ಕೊಳ್ಳುತ್ತಿದ್ದಾರೆ. ಈಗ ನಾವು ಯಾವ ಹಳ್ಳಿಗೆ ಹೋದರೂ ಶಾಲೆಬಿಟ್ಟ ಮಕ್ಕಳನ್ನು ನೋಡ ಬಹುದಾಗಿದೆ. ಇದಕ್ಕೆ ಮೂಲ ಕಾರಣ ತಂದೆ ತಾಯಂದಿರ ಅನಕ್ಷರತೆ. 'ಎಷ್ಟು ಓದಿದರೂ ಗೌರ್ನಮೆಂಟ್ ಕೆಲಸ ಸಿಗುವುದೂ ಅಷ್ಟಕಷ್ಟೇ ಇದೆ' ಎನ್ನುವ ಪೋಷಕರ ಮನೋಧೋರಣೆ, ಚಿಕ್ಕವರಿದ್ದಾಗಲೇ ಮೈಬಗ್ಗಿಸಿ ಕೆಲಸ ಮಾಡಿದರೆ ಮುಂದೆ ದೊಡ್ಡವರಾದ ಮೇಲೆ ದುಡಿದು ಕೊಂಡು ತಿನ್ನುತ್ತಾರೆ ಎಂದು ಭಾವಿಸಿಕೊಂಡು ಮಕ್ಕಳನ್ನು ಚಿಕ್ಕವರಿದ್ದಾಗಲೇ ಮನೆಕೆಲಸಕ್ಕೆ, ಹೊಲಕೆಲಸಕ್ಕೆ ಕಳಿಸಿಕೊಡುತ್ತಾರೆ. ಇದು ಬಾಲಕಾರ್ಮಿಕರ ಪದ್ಧತಿಗೆ ಮೂಲ ತಳಪಾಯ ವೆನ್ನಬಹುದು. ಜೊತೆಗೆ ಸರ್ಕಾರದ ಉಡಾಫೆತನ, ಬೇಧಭಾವಗಳು ಜನಗಳು ಎಲ್ಲ ವ್ಯವಸ್ಥೆ ಗಳ ಬಗ್ಗೆ ನಿರಾಸಕ್ತಿ ತಾಳುವಂತೆ. ಮಾಡುತ್ತವೆ.

ಜಾಗತೀಕರಣ ಎಂಬ ಪೆಡಂಭೂತ ಆವರಿಸಿಕೊಳ್ಳದಿರುವ ಜಾಗವೇ ಇಲ್ಲವೆನ್ನಬಹುದು. ನಾವು ತಿನ್ನುವ ಆಹಾರದಿಂದ ಹಿಡಿದು ಉಪಯೋಗಿಸುವ ವಸ್ತುಗಳವರೆಗೂ ಜಾಗತೀಕರಣವಾಗಿದೆ. ಅಷ್ಟೇ ಏಕೆ ಆಗ ತಾನೆ ಹುಟ್ಟಿದ ಮಗುವಿಗೂ ನಾವು ಬಳಸುವ ಸಾಬೂನು ಎಣ್ಣೆ ಎಲ್ಲದರಲ್ಲೂ ವಿದೇಶದ ಕೈವಾಡವಿದೆ. ಇದರಿಂದ ನಮ್ಮ ದೇಶ ಆಂತರಿಕವಾಗಿ ಗುಲಾಮಗಿರಿ ಯತ್ತ ಸಾಗುತ್ತಿದೆ.

ಅಭಿವೃದ್ದಿಶೀಲ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮೇಲೆ ತನ್ನೆಲ್ಲಾ ಆಕ್ಟೋಪಸ್ ಕೈಗಳನ್ನು ಬಳಸಿ ಹಿಡಿತದಲ್ಲಿ ಇಟ್ಟುಕೊಳ್ಳುತ್ತಿವೆ. ಅಭಿವೃದ್ಧಿಹೊಂದುತ್ತಿರುವ ದೇಶವು ತನ್ನ ದೇಶದ ದೇಸೀಯತೆಯನ್ನು, ಸಂಸ್ಕೃತಿಯನ್ನು ಮರೆತು ಪರಕೀಯವಾಗುತ್ತಿರು ವುದನ್ನು ಮನಗಂಡ ಆ ದೇಶದ ವಿಚಾರವಾದಿಗಳು ತಮ್ಮ ನೆಲದ ದೇಸೀಯ ತಳಿ, ಬೆಳೆ, ಸಂಸ್ಕೃತಿ, ಭಾಷೆ ಇವುಗಳನ್ನು ಉಳಿಸಿ ಬೆಳೆಸಲು ಪರದಾಡುವಂತಾಗಿದೆ. ತಮ್ಮ ಜನಗಳು ವಿದೇಶದ ಮೋಹಕ್ಕೆ ಬಿದ್ದು ಕನಿಷ್ಠ ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಜಾಗತೀಕರಣಕ್ಕೆ ಬಲಿಯಾಗುತ್ತಿದ್ದಾರೆ.

ಮುಖ್ಯವಾಗಿ ನಾವು ನಮ್ಮ ದೇಶದ ಬಗ್ಗೆ ಯೋಚಿಸಿದರೆ ದಿಗ್ಭ್ರಮೆಯಾಗುತ್ತದೆ. ಏಕೆಂದರೆ ಜಾಗತೀಕರಣವು ಈ ನಮ್ಮ ದೇಶದ ಬೆನ್ನೆಲುಬಾದ ಕೃಷಿ ಮತ್ತು ಕೃಷಿಕಾರ್ಮಿಕರ ಬದುಕಿಗೆ ಬೆಂಕಿ ಹಚ್ಚುತ್ತಿದೆ. ನಮ್ಮ ಸಂಪದ್ಭರಿತ ನೆಲವನ್ನೇ ನುಂಗುತ್ತಿದ್ದಾರೆ.

ಮುಖ್ಯವಾಗಿ ವಿದೇಶಿ ಕಂಪನಿಗಳು ರೈತರ ಬದುಕನ್ನು ಸುಧಾರಿಸುವಂತೆ ರೈತನ ಮನೆಗೆ ಮನಕ್ಕೆ ಗಾಳ ಹಾಕಿದರು. ಅವರ ನೆಲವನ್ನೇ ತಮ್ಮ ಬೀಜಗಳ ತಯಾರಿಕೆಗೆ ಬಳಸುತ್ತಿದ್ದಾರೆ. ಬೀಜಗಳನ್ನು ನಮ್ಮ ನೆಲದಲ್ಲಿಯೇ ಬೆಳೆಸಿ ಅವುಗಳಿಗೆ ೧ಕೆ.ಜಿ.ಗೆ ಇಂತಿಷ್ಟು, ಉದಾಹರಣೆಗೆ ೫೦.ರೂ. ಕೊಟ್ಟು ಖರೀದಿಸಿ, ನಮ್ಮ ರೈತರು ಬೆಳೆದ ಬೀಜಕ್ಕೆ ತಮ್ಮ ಕಂಪನಿಯ ಹೆಸರು, ದೇಶದ ಹೆಸರು ಹಾಕಿ ಮತ್ತೆ ನಮ್ಮ ರೈತರಿಗೆ ೧ ಕೆ.ಜಿ. ಬೀಜಕ್ಕೆ ರೂ.೧೮೦೦ರ ಹಾಗೆ ತಾವು ಲಾಭ ಪಡೆಯುತ್ತಿದ್ದಾರೆ. ಪಾಪ ಮುಗ್ಧರಾದ ನಮ್ಮ ಜನಕ್ಕೆ ಇದ್ಯಾವುದೂ ಅರಿವಿಗೆ ಬರುತ್ತಿಲ್ಲ. ಸದ್ಯಕ್ಕೆ ಅವರಿಗೆ ಒಂದೇ ಲಾಭವೆಂದರೆ ತಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಕ್ಕಿದೆ ಎಂಬ ಸಮಾಧಾನ. ಆದರೆ ಅದೇ ಬೀಜ ಕೊಂಡ ರೈತರಿಗೆ ಇನ್ನೊಂದು ದುರಂತ ಕಾದಿರುತ್ತದೆ. ತಾವು ತೆಗೆದುಕೊಂಡ ಬೀಜ ಕಳಪೆಯಾಗಿರುವುದು ಅವರ ಅರಿವಿಗೇ ಬರದೆ ಅದನ್ನು ಕೊಂಡು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಬಿತ್ತಿರುತ್ತಾರೆ. ಆದರೆ ಅದು ಎಲ್ಲ ಕಳಪೆ ಗುಣಮಟ್ಟದಿಂದಾಗಿ ಬಿತ್ತಿ ಬೆಳೆ ಬೆಳೆಯದೇ ನಾಶವಾಗಿ ಬಿತ್ತಿದ ರೈತರ ಸಾಲ ಶೂಲಕ್ಕೆ ಸಿಲುಕಿ ಇನ್ನೇನೂ ದಾರಿ ಕಾಣದೆ ಆತ್ಮಹತ್ಯೆ ಒಂದೇ ದಾರಿಯಾಗಿರುತ್ತದೆ.

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಈ ಬೀಜ ತಯಾರಿಕೆಗೆ ಬಳಕೆ ಯಾಗುವ ಶ್ರಮ, ವಿದೇಶದ ಶ್ರಮವೇನೂ ಅಲ್ಲ. ಇಲ್ಲಿಯೇ ಇರುವ ನಮ್ಮ ಕೃಷಿ ಕಾರ್ಮಿಕರದು. ಈ ಬೀಜ ಕಸಿ ಮಾಡುವ ಕೆಲಸಕ್ಕೆ ಬಳಕೆಯಾಗುವುದು ಹೆಚ್ಚಾಗಿ ಕೃಷಿ ಕಾರ್ಮಿಕರ ಮಕ್ಕಳು. ಏಕೆಂದರೆ ಈ ಬೀಜದ ಕಸಿ ಕೆಲಸ ಮಾಡಲು ತುಂಬಾ ತಾಳ್ಮೆಬೇಕು. ಮತ್ತೆ ಬೇಗ ಬೇಗ ಕೆಲಸ ಮಾಡುವಂತಿರಬೇಕು. ದೊಡ್ಡವರಿಗೆ ಈ ವ್ಯವಧಾನವಿರುವುದಿಲ್ಲ. ಆದರೆ ಮಕ್ಕಳು ಈ ಕೆಲಸವನ್ನು ಬೇಸರವಿಲ್ಲದೆ ಆಡಿಕೊಳ್ಳುತ್ತಲೇ ಮಾಡಿಮುಗಿಸುತ್ತಿದ್ದಾರೆ. ಇದಕ್ಕೆ ಅವರು ಪಡೆಯುವ ಕೂಲಿ ಅವರ ಊಹೆಗೂ ನಿಲುಕದ್ದಾಗಿರುವುದರಿಂದ ಸಹಜ ವಾಗಿಯೇ ಮಕ್ಕಳನ್ನು ಪೋಷಕರು ಈ ಕೆಲಸಕ್ಕೆ ಕಳಿಸುತ್ತಿದ್ದಾರೆ. ಅವರ ಬಡತನವೊಂದೇ ಮುಖ್ಯ ಕಾರಣವಾಗಿರುವುದರಿಂದ ಅವರಿಗೆ ಯಾವುದರ ಬಗ್ಗೆಯೂ ಯೋಚಿಸುವುದಿಲ್ಲ.

ಮಕ್ಕಳು ಕೂಡ ಕೂಲಿಯ ಆಕರ್ಷಣೆಯಿಂದ ಶಾಲೆ ಬಿಟ್ಟು ಬೀಜ ಕಸಿಮಾಡುವ ಕೆಲಸಕ್ಕೆ ಹೋಗುತ್ತಿದ್ದಾರೆ. ಇದರಿಂದ ಅವರ ವಿದ್ಯಾಭ್ಯಾಸಕ್ಕೆ ಮುಳುವಾಗುತ್ತಿದೆ. ಮಕ್ಕಳ ವಿದ್ಯಾಭ್ಯಾಸ, ಆರೋಗ್ಯದ ಕಡೆ ಗಮನಕೊಡಲು ಅಲ್ಲಿ ಯಾರೂ ಇಲ್ಲ. ಸಹಜವಾಗಿಯೇ ಇಂದಿನ ಪೀಳಿಗೆ ಶಿಕ್ಷಣದಿಂದ ವಂಚಿತವಾಗುತ್ತಿದೆ. ಇನ್ನೊಂದೆಡೆ ಭೂಮಾಲೀಕರು ದೊಡ್ಡ ವರಿಗಿಂತ ಚಿಕ್ಕಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ. ಏಕೆಂದರೆ ಮಕ್ಕಳು ಎಷ್ಟೇ ಕೆಲಸ ಮಾಡಿದರೂ ಅವರಿಗೆ ದಣಿವು ಆಗುವುದಿಲ್ಲ. ಅದೇ ದೊಡ್ಡವರು ಅರ್ಧಗಂಟೆ ಕೆಲಸ ಮಾಡಿದರೆ ೧೦ ನಿಮಿಷ ವಿಶ್ರಾಂತಿ ಪಡೆಯುತ್ತಾರೆ. ಪ್ರತಿಯೊಂದು ಹಳ್ಳಿಗಳಿಗೆ ದಾಳಿಇಟ್ಟ ವಿದೇಶಿ ಬಂಡವಾಳಶಾಹಿ ಕಂಪನಿಗಳು ಇಲ್ಲಿರುವ ಭೂಮಿಯನ್ನು

ತಮ್ಮ ಬೀಜೋತ್ಪನ್ನಕ್ಕೆ ಬಳಸಿಕೊಳ್ಳುತ್ತವೆ. ಈ ರೀತಿ ಭೂಮಿ ಬಳಕೆಯಾಗುವುದರಿಂದ ದೇಸೀ ತಳಿಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಕೆಲವು ವರ್ಷ ಕಳೆದ ನಂತರ ದೇಸೀ ತಳಿಯು ಇತಿಹಾಸದ ಪುಟ ಸೇರುತ್ತದೆ.

ಪ್ರತಿಯೊಂದು ಜಿಲ್ಲೆಗಳಲ್ಲಿ ನಡೆಯುವ ಸೀಡ್ಸ್ ಕ್ರಾಸಿಂಗ್ ನಮ್ಮ ದೇಶದ ಮಕ್ಕಳ ಭವಿಷ್ಯವನ್ನೇ ಬಲಿ ತೆಗೆದುಕೊಳ್ಳುತ್ತದೆ. ಭೂಮಾಲೀಕರಾದವರು ತಮ್ಮ ಮಕ್ಕಳಂತೆ ಈ ಮಕ್ಕಳನ್ನು ಸಮಾನದೃಷ್ಟಿಯಿಂದ ನೋಡಿದ್ದೇ ಆದಲ್ಲಿ ಇಂತಹ ಅವಘಡಗಳನ್ನು ತಪ್ಪಿಸ ಬಹುದು.

ನಮ್ಮ ದೇಶದಲ್ಲಿ ಪ್ರತಿಯೊಂದು ಉತ್ಪನ್ನ ಘಟಕಗಳಲ್ಲಿ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವುಗಳನ್ನು ನಿವಾರಿಸಲು ನಮ್ಮ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದರೂ ಅದು ಪ್ರಯೋಜನವಾಗಿಲ್ಲ.

ದಶಕಗಳಿಂದಲೂ ಸಂಘ ಸಂಸ್ಥೆಗಳು ವಿರೋಧ ವ್ಯಕ್ತಪಡಿಸುತ್ತಲೇ ಬಂದಿವೆ. ಈ ನಿಟ್ಟಿನಲ್ಲಿ ಹೋರಾಟ ನಡೆಸುತ್ತಿವೆ. ಆದರೆ ಗಂಭೀರವಾದ ಯೋಚನೆಗಳು ನಡೆದದ್ದು ಇತ್ತೀಚೆಗಷ್ಟೇ ಎಂದು ಹೇಳಬಹುದು. ಮಕ್ಕಳ ನ್ಯಾಯ ಮಂಡಲಿ (J.J.B.) ಕೂಡ ಮಕ್ಕಳ ನ್ಯಾಯ ಕಾಯಿದೆಯಡಿ ಬರುತ್ತದೆ. ಇದು ಮಕ್ಕಳ ನ್ಯಾಯ ಕಾಯಿದೆಯ ಒಂದು ಪ್ರಮುಖ ಅಂಗ. ಕಾನೂನಿನೊಡನೆ ಸಂಘರ್ಷಕ್ಕೆ ಬಿದ್ದ ಮಕ್ಕಳಿಗೆ ಸಹಾಯ ಮತ್ತು ಆಶ್ರಯ ನೀಡುತ್ತದೆ. ಈ ವ್ಯವಸ್ಥೆಯಲ್ಲಿ ಒಬ್ಬ ನ್ಯಾಯಾಧೀಶರಿಗೆ ನೆರವಾಗಲು ಇಬ್ಬರು ಸಮಾಜ ಸೇವಾ ಕಾರ್ಯ ಕರ್ತರಿರುತ್ತಾರೆ. ರಾಜ್ಯದಲ್ಲಿ ಪ್ರಸ್ತುತ ಇಂತಹ ಐದು ಮಂಡಳಿಗಳು (ಮೈಸೂರು, ಗುಲ್ಬರ್ಗಾ, ಬೆಂಗಳೂರು, ಶಿವಮೊಗ್ಗ, ಧಾರವಾಡ) ಕಾರ್ಯನಿರ್ವಹಿಸುತ್ತವೆ. ಅವುಗಳಲ್ಲಿ ಮಕ್ಕಳ ಕಲ್ಯಾಣ ಸಮಿತಿ(C.W.C), ಮಕ್ಕಳ ನ್ಯಾಯ ಮಂಡಳಿ(J.J.B), ಬಾಲಕಾರ್ಮಿಕರ ಪದ್ಧತಿ ವಿರೋಧಿ ಆಂದೋಲನ, ಕರ್ನಾಟಕ (C.F.C.L.E) ಇವುಗಳೆಲ್ಲವೂ ಬಾಲಕಾರ್ಮಿಕರ ಪದ್ಧತಿಯನ್ನು ತೊಡೆದು ಹಾಕಲು ಅವಿರತವಾಗಿ ದುಡಿಯುತ್ತಿವೆ.

ಬಾಲಕಾರ್ಮಿಕರ ಪದ್ಧತಿ ನಿರ್ಮೂಲನೆ ಮಾಡುವ ಉದ್ದೇಶದಿಂದ ೨೦೦೧ರಲ್ಲಿ ರಾಜ್ಯ ಸರ್ಕಾರ ರೂಪಿಸಿದ್ದ ರಾಜ್ಯ ಬಾಲಕಾರ್ಮಿಕರ ಯೋಜನೆಯು (S.C.L.P) ನಿಗದಿತ ಗುರಿ ಮುಟ್ಟುವ ಯಾವ ಲಕ್ಷಣಗಳೂ ಕಂಡುಬರುತ್ತಿಲ್ಲ. ಮೇ. ೩೧.೨೦೦೧ರಂದು ಆರಂಭಗೊಂಡ S.C.L.P. ಯೋಜನೆಯು ಆರು ವರ್ಷಗಳಲ್ಲಿ ಅಂದರೆ ೨೦೦೭ರ ವೇಳೆಗೆ ತನ್ನ ಉದ್ದೇಶಿತ ಗುರಿಯನ್ನು ಮುಟ್ಟಬೇಕಾಗಿದೆ. ಆದರೆ, ಈ ಯೋಜನೆಯು ತನ್ನ ಗುರಿಮುಟ್ಟುವ ಲಕ್ಷಣಗಳು ತೀರಾ ಕಡಿಮೆ ಎನಿಸುತ್ತದೆ. ಆದರೆ ಒಂದು ಹೆಮ್ಮೆ ಪಡುವ ಸಂಗತಿಯೆಂದರೆ ಈ ರೀತಿಯ ಯೋಜನೆಯನ್ನು ರೂಪಿಸುವಲ್ಲಿ ಕರ್ನಾಟಕವೇ ಪ್ರಥಮ. ಆದರೆ, ಇದು ನಿಯೋಜಿತ ಗುರಿ ಮುಟ್ಟದಿರುವುದೇ ನಿರಾಶದಾಯಕವಾಗಿದೆ.

ರಾಜ್ಯದಲ್ಲಿ ಕೇಂದ್ರ ರಾಷ್ಟ್ರೀಯ ಬಾಲಕಾರ್ಮಿಕರ ಯೋಜನೆಯು (N.C.L.P) ಮತ್ತು S.C.L.P ಎಂಬ ಎರಡು ಯೋಜನೆಗಳು ಜಾರಿಯಲ್ಲಿದ್ದರೂ ಶಿಕ್ಷಣದಿಂದ ವಂಚಿತ ಬಾಲಕಾರ್ಮಿಕರ ಸಂಖ್ಯೆ ನಿರೀಕ್ಷಿತ ಮಟ್ಟದಲ್ಲಿ ಇಳಿಕೆ ಕಂಡಿಲ್ಲ ಎನ್ನುವುದೇ ವಿಷಾದನೀಯ. ೨೦೦೧ರ ಜನಗಣತಿಯಲ್ಲಿ ಕಂಡುಬಂದ ಅಂಶವೇನೆಂದರೆ ೫ ರಿಂದ ೧೪ ವರ್ಷದೊಳಗಿನ ೧೨.೬೬ಕೋಟಿ ಮಕ್ಕಳು ದೇಶದಾದ್ಯಂತ ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ೧೯೮೬ರ ಬಾಲಕಾರ್ಮಿಕ ಪದ್ಧತಿ ನಿಷೇಧವು ಸಂವಿಧಾನದ ೨೪ನೇ ಪರಿಚ್ಛೇದದಲ್ಲಿ ಅಡಕವಾಗಿದೆ. ಇದರ ಪ್ರಕಾರ ವರ್ಷದೊಳಗಿನ ಮಕ್ಕಳು ದುಡಿಮೆ ಮಾಡುವಂತಿಲ್ಲ. ಮತ್ತು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು. ಇದನ್ನು ಉಲ್ಲಂಘಿಸಿದರೆ ದುಡಿಸಿಕೊಳ್ಳುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ೨೦,೦೦೦ ದಂಡ ಮತ್ತು ಜೈಲಾಗಬಹುದು. ಆದರೆ ಸರ್ಕಾರ ಇಂತಹ ಬಿಗಿ ಕಾನೂನು ಜಾರಿಗೆ ತಂದಿದ್ದರೂ ಸಮಾಜದಲ್ಲಿ ಯಾವುದೇ ಬದಲಾವಣೆ ಆಗಿಲ್ಲವೆನ್ನಬಹುದು. ಕಾರಣ ಪೋಷಕರ ಬಡತನ, ಅನಕ್ಷರತೆ.

೧೪ ವರ್ಷ ಮೀರಿದ ಮಕ್ಕಳು ಕನಿಷ್ಠ ವೇತನ ಕಾಯಿದೆಯಡಿ ದುಡಿಯಲು ಅವಕಾಶವಿದೆ. ಆದರೆ ಮಕ್ಕಳನ್ನು ಕೇವಲ ೬ ಗಂಟೆಗಳ ಕಾಲ ಮಾತ್ರ ದುಡಿಸಿಕೊಳ್ಳಲು ಅವಕಾಶವಿದೆ. ನಿಯಮ ಉಲ್ಲಂಘಿಸಿದರೆ ಮಾಲೀಕರಿಗೆ ೧೮೦೦ ದಂಡ ವಿಧಿಸಲಾಗುವುದು ಎಂದು ನ್ಯಾಯ ವಾದಿ ಶ್ರೀಮತಿ ಕವಿತಾ ಅವರು ಹೇಳುತ್ತಾರೆ.

ನಾವು ದುಡಿಯುವ ಕ್ಷೇತ್ರಗಳನ್ನು ಎರಡು ವಿಧವಾಗಿ ವಿಂಗಡಿಸುತ್ತೇವೆ. ಒಂದು ಅಪಾಯ ಕಾರಿ ಅಲ್ಲದ ವಲಯ ಎರಡನೆಯದು ಅಪಾಯಕಾರಿ ವಲಯ ಎಂಬುದಾಗಿ. ಅಪಾಯಕಾರಿ ವಲಯವೆಂದರೆ ಕೆಮಿಕಲ್ ಪ್ಯಾಕ್ಟರಿಗಳು, ಸಿಡಿಮದ್ದು ತಯಾರಿಕಾ ಘಟಕಗಳು, ಮಂಡಕ್ಕಿ ಬಟ್ಟಿಗಳು ಮುಂತಾದವುಗಳು ಅಪಾಯಕಾರಿಯಲ್ಲದ ಕ್ಷೇತ್ರವೆಂದರೆ ಹೊಲಗದ್ದೆಗಳು. ದಿನನಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುವಂತಹ ಅಪಾಯಕಾರಿ ವಲಯಗಳಲ್ಲಿ ಕೆಲಸ ಮಾಡುವ ಮಕ್ಕಳ ದುರ್ಮರಣ ಹಾಗೂ ವಾಸಿಯಾಗದಂತಹ ಕಾಯಿಲೆಗಳಿಗೆ ತುತ್ತಾಗುವುದು ನಮಗೆಲ್ಲ ತಿಳಿದ ಸಂಗತಿಯೆ ಆಗಿದೆ. ಇದಕ್ಕೆಲ್ಲಾ ಮೂಲ ಕಾರಣ ಬಡತನ, ಹಾಗೂ ಅವಿಭಕ್ತ ಕುಟುಂಬಗಳ ಪರಿಣಾಮ, ತಂದೆ ತಾಯಿಗಳು ಅನಕ್ಷರಸ್ಥರಾಗಿದ್ದು ಅವರ ಮಕ್ಕಳು ಶಿಕ್ಷಣದ ಕಡೆಗೆ ಹೆಚ್ಚಿಗೆ ಗಮನ ಹರಿಸುವುದಿಲ್ಲ. ದೇಶದಲ್ಲಿ ಅನಕ್ಷರತೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ಮಕ್ಕಳು ಬಾಲಕಾರ್ಮಿಕತೆಯಿಂದ ಹೊರಬರಲು ಸಾಧ್ಯವಿಲ್ಲ. "ಸಾಕ್ಷರತೆ ಮಾನವೀಕರಣದ ಸಾಧನ. ಅಕ್ಷರ ಜ್ಞಾನದ ಮೂಲಕ ಮಾನವೀಕರಣಗೊಳಿಸಬೇಕು. ಪ್ರಜ್ಞೆಯ ಹೊಸ ಪ್ರಪಂಚಕ್ಕೆ ಪ್ರವೇಶಿಸಬೇಕು" ಎಂದು ಬ್ರೆಜಿಲ್‌ನ ಸಾಹಿತಿ ಫಾಲೊ ಫೆರೇರೆ ಹೇಳಿದ್ದಾರೆ.

ಅತೀ ಹೆಚ್ಚು ಬಾಲಕರು ಸ್ವತಃ ತಮ್ಮ ತಂದೆ ತಾಯಿಗಳಿಂದ ಶೋಷಣೆಗೆ ಒಳಗಾಗಿವೆ. ತಂದೆ ತನ್ನ ದುರಾಭ್ಯಾಸ ಚಟಗಳನ್ನು ಪೂರೈಸಿಕೊಳ್ಳಲು ಮಕ್ಕಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಕಳಿಸುವ ಪ್ರವೃತ್ತಿ ಪ್ರತಿಯೊಂದು ಊರುಗಳಲ್ಲಿ ನಡೆದೇ ಇದೆ. ಅಸಹಾಯಕ ಅಂಗವಿಕಲ ತಂದೆತಾಯಿಗಳು ಅನಿವಾರ್ಯವಾಗಿ ಮಕ್ಕಳನ್ನು ದುಡಿಯಲು ಕಳುಹಿಸುತ್ತಾರೆ.

ಸಮಾಜದಲ್ಲಿ ಬಾಲಕಾರ್ಮಿಕರ ಸ್ಥಿತಿಯು ಒಂದು ಮುಖವಾದರೆ, ಇನ್ನೊಂದು ಮುಖವಾಗಿ ಬಾಲ್ಯವಿವಾಹ, ಮಕ್ಕಳ ಮೇಲೆ ಅತ್ಯಾಚಾರ, ದೇವದಾಸಿ ಪದ್ಧತಿ ಇವು ಸಮಾಜವನ್ನು ಕಾಡುತ್ತಿವೆ. ಉತ್ತರ ಕರ್ನಾಟಕದಲ್ಲಿ ದೇವದಾಸಿ ಪದ್ಧತಿಯು ಅಲ್ಪಪ್ರಮಾಣದಲ್ಲಿ ನಿಗೂಢ ವಾಗಿ ಈಗಲೂ ಮುಂದುವರೆಯುತ್ತಿದೆ.

ಬಾಲಕಾರ್ಮಿಕರು ಸೃಷ್ಟಿಯಾಗಲು ಮೂರು ಕಾರಣಗಳನ್ನು ನಾವು ನೋಡಬಹುದಾಗಿದೆ.

೧. ಪೋಷಕರು ೨. ಸರ್ಕಾರ ೩. ಸಂಘ ಸಂಸ್ಥೆಗಳು.

ಮೊದಲನೆಯ ಕಾರಣವನ್ನು ನಾವು ಪರಿಶೀಲಿಸಿದರೆ ತಂದೆ ತಾಯಿಗಳು ತಮ್ಮ ಬಡತನಕ್ಕೆ ಮತ್ತು ಜೀವನದ ಹೊಣೆಯನ್ನು ಸರಿದೂಗಿಸಲು ಮಕ್ಕಳನ್ನು ಕೆಲಸಕ್ಕೆ, ಜೀತಕ್ಕೆ ಇಡುತ್ತಾರೆ. ಅಲ್ಪ ಕೂಲಿಯು ಸಂಸಾರವನ್ನು ನೀಗಿಸಲು ಸಾಧ್ಯವಾಗುವುದಿಲ್ಲ. ಶಿಕ್ಷಣಕ್ಕಿಂತ ಹಸಿವು ಅಲ್ಲಿ ಪ್ರಧಾನವಾಗುತ್ತದೆ.

ಎರಡನೆಯದಾಗಿ ಸಂಘ ಸಂಸ್ಥೆಗಳು 'ಬೇಲಿಯೇ ಎದ್ದು ಹೊಲ ಮೇದಂತೆ' ಎಂಬ ಗಾದೆಯಂತೆ ನಡೆದುಕೊಳ್ಳುತ್ತವೆ. ಮಕ್ಕಳ ಅಭಿವೃದ್ಧಿಗಾಗಿ ವಿದೇಶದಿಂದ ಸಂಘಸಂಸ್ಥೆಗಳಿಗೆ ಹಣದ ಹೊಳೆಯೇ ಹರಿಯುತ್ತದೆ. ಆದರೆ ಎನ್.ಜಿ.ಓ.ಗಳು ಹಣದ ವ್ಯಾಮೋಹಕ್ಕೆ ಬಿದ್ದು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಟಿ.ಡಿ.ಎಚ್. ಡ್ರೇಡೇಸ್ ಹೋಂ ತುಂಬಾ ಸಹಾಯ ಮಾಡುತ್ತವೆ. ಆದರೆ ಇದು ಸಮರ್ಪಕವಾಗಿ ಬಳಕೆ ಯಾಗುತ್ತಿಲ್ಲ.

**ಗಣಿಗಾರಿಕೆ ಮತ್ತು ಬಾಲಕಾರ್ಮಿಕರು**

ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿಯೇ ನಾಯಕ ಸಮುದಾಯವು ಎಲ್ಲಾ ಕ್ಷೇತ್ರದಲ್ಲಿ ತಮ್ಮ ಪ್ರಾತಿನಿಧ್ಯವನ್ನು ಹೊಂದಿದ್ದಾರೆ. ಒಂದು ರೀತಿಯಲ್ಲಿ ಹೇಳುವುದಾದರೆ ನಾಯಕ ಸಮುದಾಯದಿಂದಲೇ ಪ್ರತಿಯೊಂದು ಕ್ಷೇತ್ರವು ಕಾರ್ಯೋನ್ಮುಖವಾಗಿದೆ. ಕೈಗಾರಿಕಾ ಘಟಕ ದಲ್ಲಾಗಲಿ, ಕೃಷಿ ಕ್ಷೇತ್ರದಲ್ಲಾಗಲಿ, ಮಾರುಕಟ್ಟೆಯಲ್ಲಾಗಲಿ ಬಹುಪಾಲು ನಾಯಕ ಸಮುದಾಯದವರೇ ಇದ್ದಾರೆ. ಹಾಗೆಯೇ

ಸಮಾಜಸೇವೆಯಲ್ಲಿ ಜಾಗೃತ ನಾಯಕ ಬಳಗ ದವರು ಸಕ್ರಿಯವಾಗಿ ಭಾಗವಹಿಸುತ್ತಾರೆ. ಕುಂದುಕೊರತೆಗಳಿಗೆ ಅನ್ಯಾಯಗಳ ವಿರುದ್ಧ ಭ್ರಷ್ಟ ಅಧಿಕಾರಿಗಳ ವಿರುದ್ಧ ನಿಷ್ಠುರವಾಗಿ ಪ್ರತಿಭಟಿಸುತ್ತಾರೆ.

ನಾಯಕ ಸಮುದಾಯವು ಕೃಷಿ ಚಟುವಟಿಕೆಯಲ್ಲಿ ಹೆಚ್ಚು ಸಹಭಾಗಿಗಳಾಗಿದ್ದಾರೆ. ಕೃಷಿಯೇ ಅವರ ಮೂಲ ಆದಾಯವಾಗಿದೆ. ಇಂತಹ ಸಮುದಾಯವು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಅಷ್ಟೇ ಅಲ್ಲದೇ ಇಂದಿನ ಬಹುಪಾಲು ಮಕ್ಕಳು ಶಾಲೆಯ ಮುಖವನ್ನೇ ನೋಡಿಲ್ಲದಂತಹ ಸ್ಥಿತಿ ನಿರ್ಮಾಣವಾಗಿದೆ.

ಇಂದಿನ ಆಧುನಿಕ ಯುಗದಲ್ಲಿಯೂ ಸಹ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾ ರೆಂದರೆ, ಅದು ಮಾನವ ಕುಲಕ್ಕೆ ಅವಮಾನಕರ ಸಂಗತಿಯಾಗಿದೆ. ಸರ್ಕಾರವು ಅಕ್ಷರ ಅಭಿಯಾನದ ಮುಖಾಂತರ ಪ್ರತಿಯೊಂದು ಮಕ್ಕಳು ಕನಿಷ್ಟ ವಿದ್ಯಾರ್ಹತೆಯನ್ನು ಹೊಂದ ಬೇಕು ಎಂದು ಕಾನೂನನ್ನು ಜಾರಿ ಮಾಡಿದ್ದರು ಅದು ಯಶಸ್ವಿಯಾಗಿಲ್ಲ. ಇದಕ್ಕೆ ಮೂಲ ಕಾರಣ ಹೊಸಪೇಟೆ ಮತ್ತು ಸಂಡೂರು ತಾಲ್ಲೂಕಿನಲ್ಲಿ ನಡೆಯುವ ಗಣಿಗಾರಿಕೆ. ಇದು ಬಹಳಷ್ಟು ಮಕ್ಕಳನ್ನು ಶಾರೀರಿಕವಾಗಿ ಮತ್ತು ಶೈಕ್ಷಣಿಕವಾಗಿ ಭೂಗತ ಮಾಡಿದೆ. ಹೊಸಪೇಟೆ ತಾಲ್ಲೂಕು ಮತ್ತು ಸಂಡೂರಿನ ಸುತ್ತಮುತ್ತಲಿನ ಹಳ್ಳಿಗಳಿಂದ ತಾಲ್ಲೂಕುಗಳಿಂದ ಶೇಕಡ ೩೦ಭಾಗ ನಾಯಕ ಸಮುದಾಯದವರು ವಲಸೆ ಬಂದು ಗಣಿಗಾರಿಕೆಯಲ್ಲಿ ಕೆಲಸಮಾಡು ತ್ತಿದ್ದಾರೆ. ಇವರ ಜೊತೆಯಲ್ಲಿ ಮಕ್ಕಳನ್ನೂ ಸಹ ಕರೆತಂದಿದ್ದಾರೆ. ಈ ಎಲ್ಲಾ ಮಕ್ಕಳು ಶಾಲೆಯನ್ನು ಬಿಟ್ಟು ಗಣಿಗಳಲ್ಲಿ ಹ್ಯಾಂಡ್ ಕಟಿಂಗ್, ಡಿಗ್ಗಿಂಗ್, ಜರಡಿ ಹಿಡಿಯುವುದು, ಬಿದ್ದ ಕಲ್ಲುಗಳನ್ನು ಆಯುವುದು ಹೀಗೆ ಅಪಾಯದ ವಲಯಗಳಲ್ಲಿ ಕೆಲಸವನ್ನು ಮಾಡುತ್ತಿ ದ್ದಾರೆ. ಈ ಮಕ್ಕಳು ದಿನಾಲೂ ಉಸಿರಾಡುವುದು ದೂಳನ್ನು, ಉಸಿರುಬಿಡುವುದು ದೂಳನ್ನು. ಹೀಗಾಗಿ ಕೆಲವು ಮಕ್ಕಳಲ್ಲಿ ಭಯಾನಕ ಕಾಯಿಲೆಗಳಾದಂತಹ, ಅಸ್ತಮಾ, ಕಿಡ್ನಿತೊಂದರೆ, ಕಣ್ಣಿನ ತೊಂದರೆ ಮುಂತಾದ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಬಳ್ಳಾರಿಯ ವೈದ್ಯತಜ್ಞರು ಹೇಳುವ ಪ್ರಕಾರ ಶೇಕಡ ೩೦ರಷ್ಟು ಮಕ್ಕಳು ಇಂತಹ ಕಾಯಿಲೆಗಳಿಂದ ಬಳಲುತ್ತಿದ್ದಾರೆಂದು ಹೇಳಿದ್ದಾರೆ.

ಮಕ್ಕಳಿಂದ ಸಿಗುವ ಅಲ್ಪಸ್ವಲ್ಪ ಬಿಡಿಗಾಸು ತಂದೆ ತಾಯಿಗಳಿಗೆ ಸ್ವಲ್ಪಮಟ್ಟಿಗೆ ನೆರವಾಗು ತ್ತದೆ. ಕೆಲವು ಮಕ್ಕಳು ತಮಗೆ ಸಿಗುವ ಹಣದಿಂದ ದುಶ್ಚಟಗಳ ದಾಸರಾಗಿದ್ದಾರೆ. ತಂದೆ ತಾಯಿಗಳು ಧೂಳಿನಿಂದ ಹಾಗೂ ಕೆಲಸದಿಂದ ತುಂಬಾ ದಣಿಯುವುದರಿಂದ ಅವರು ಬೆಳಗಿ ನಿಂದಲೇ ಸಾರಾಯಿ ಕುಡಿಯುತ್ತಾ ಕೆಲಸ ಮಾಡುತ್ತಿರುತ್ತಾರೆ. ಒಬ್ಬ ಮನುಷ್ಯ ಕನಿಷ್ಟವೆಂದರೂ ೪ ರಿಂದ ೫ ಪಾಕೆಟ್ ಸಾರಾಯಿ ಕುಡಿಯುತ್ತಾನೆ. ತಾವು ಕೆಲಸ ಮಾಡುವ ಸ್ಥಳಕ್ಕೆ ಸಾರಾಯಿ ಪಾಕೆಟ್‌ಗಳು ಬಂದು ಸೇರುತ್ತವೆ. ಇವರು ದುಡಿದ ೭೫ ಭಾಗವನ್ನು ಇಲ್ಲೇ ಖರ್ಚುಮಾಡು ತ್ತಾರೆ. ಉಳಿದ ಅಲ್ಪಸ್ವಲ್ಪ ಹಣವನ್ನು ಊರಿಗೆ ಕೊಂಡೊಯ್ಯುತ್ತಾರೆಂದು ಗಣಿ ಮಾಲಿಕರೇ ಹೇಳುತ್ತಾರೆ.

ಮೊದಲು ಮಾನ್ಯತೆ ಪಡೆದು ಗಣಿಗಾರಿಕೆಯನ್ನು ನಡೆಸುತ್ತಿದ್ದ ಸಮಯದಲ್ಲಿ ವಲಸೆ ಬರುವವರ ಪ್ರಮಾಣ ಕಡಿಮೆ ಇತ್ತು. ಆದರೆ ಮೂರುವರ್ಷಗಳ ಹಿಂದೆ ಹೊರರಾಷ್ಟ್ರಗಳ ಜೊತೆ ಮಾಡಿಕೊಂಡ ಅದಿರಿನ ಮಾರಾಟದ ಒಪ್ಪಂದದಿಂದಾಗಿ ಮಾನ್ಯತೆಯನ್ನು ಪಡೆಯದೇ ಗಣಿಗಾರಿಕೆಯನ್ನು ಶುರುಮಾಡಿದ್ದರು. ಇದರ ಪರಿಣಾಮವಾಗಿ ಕಾರ್ಮಿಕರ ಅಭಾವವು ಹೆಚ್ಚಾಯಿತು. ಇದರಿಂದಾಗಿ ಗಣಿಮಾಲೀಕರು ಕೂಲಿಯ ಪ್ರಮಾಣವನ್ನು ಹೆಚ್ಚಿಸಿದರು. ಇದರಿಂದ ಸುತ್ತಮುತ್ತಲಿನ ಜಿಲ್ಲೆಗಳಿಂದ ಭೂರಹಿತ ಕುಟುಂಬಗಳು ಮತ್ತು ಸಣ್ಣ ಹಿಡುವಳಿ ದಾರರು ವಲಸೆ ಬಂದು ಗಣಿಗಾರಿಕೆ ನಡೆಸುವ ಸ್ಥಳದಲ್ಲಿ ಬೀಡುಬಿಟ್ಟರು.

ಮೊದಲೆ ಹೇಳುವಂತೆ ಇವರು ಹೆಚ್ಚಾಗಿ ನಾಯಕ ಸಮುದಾಯದವರೇ ಆಗಿದ್ದಾರೆ. ಈ ಕುಟುಂಬಗಳಲ್ಲಿರುವ ಮಕ್ಕಳು ಶಾಲೆಯಲ್ಲಿ ಅಕ್ಷರ ಕಲಿಯಬೇಕಾದ ಸಮಯದಲ್ಲಿ ಕಲ್ಲುಕುಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. ಆದರೆ ಇವರ ದುಡಿಮೆಯಿಂದ ಬಂಡವಾಳಶಾಹಿ ಗಳು ಇನ್ನೂ ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಆದರೆ ಈ ಕಾರ್ಮಿಕರು ಮಕ್ಕಳ ಕಡೆ ತಿರುಗಿಯೂ ನೋಡುತ್ತಿಲ್ಲ. ಕನ್ನಡ ವಿ.ವಿ.ಯ ಪ್ರಾಧ್ಯಾಪಕರಾದ ಡಾ.ಟಿ.ಆರ್.ಚಂದ್ರ ಶೇಖರ ಅವರು ಹೇಳುವಂತೆ ಈ ಶ್ರೀಮಂತವರ್ಗ ತಿನ್ನವ ಅನ್ನ ಹೇಗೆ ಬಂತು ಎಂದು ಕನಿಷ್ಠ ಯೋಚನೆ ಮಾಡದೆ ಬರೀ ಹಣದ ಕಡೆಗೆ ಹೆಚ್ಚು ಒಲವು ತೋರಿಸುತ್ತಿದ್ದಾರೆ ಎಂದು ಬಂಡವಾಳಶಾಹಿಗಳ ವಿರುದ್ಧ ಧ್ವನಿಎತ್ತಿದ್ದಾರೆ.

ಗಣಿಗಾರಿಕೆ ನಡೆಯುವ ಸ್ಥಳದಲ್ಲಿ ನಾವು ಸರ್ವೆ ಮಾಡಿದಾಗ ನಾಯಕ ಕುಟುಂಬಗಳನ್ನು ಹೊರೆತುಪಡಿಸಿ ಬಹುಪಾಲು ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಯಿಂದ ವಂಚಿತರನ್ನಾಗಿಸಿಲ್ಲ. ಈ ರೀತಿ ಕುಟುಂಬಗಳು ವಲಸೆ ಬರಲು ಮುಖ್ಯ ಕಾರಣಗಳನ್ನು ಹುಡುಕಿದಾಗ ಕೆಲವು ಸತ್ಯಗಳು ನಮಗೆ ಗೋಚರವಾಗುತ್ತವೆ.

೧. ಮೊದಲನೆಯದಾಗಿ ಹೇಳುವುದಾದರೆ ಭೂಮಿ ಇಲ್ಲದೇ ಇರುವುದು.

೨. ಹಳ್ಳಿಗಳಲ್ಲಿ ಕೊಡುವ ಕೂಲಿ ಅಲ್ಪಪ್ರಮಾಣದ್ದಾಗಿರುತ್ತದೆ.

೩. ಬೆಳೆಗೆ ತಕ್ಕ ಬೆಲೆ ಸಿಗದೇ ಇರುವುದು.

೪. ಸಾಲಗಾರರ ಕಾಟ.

೫. ಸಕಾಲಕ್ಕೆ ಮಳೆ ಬಾರದೇ ಇರುವುದು.

ಹೀಗೆ ಅನೇಕ ಕುಟುಂಬಗಳು ವಲಸೆ ಬರಲು ಕಾರಣೀಭೂತವಾಗಿವೆ. ಹೀಗೆ ಬಂದಂತ ಕುಟುಂಬಗಳಿಗೆ ತುರ್ತಾಗಿ ಆಸ್ಪತ್ರೆಗಳಿಲ್ಲ. ಏನಾದರೂ ಅಪಘಾತ ಸಂಭವಿಸಿದರೆ ಕಾಡಿನಿಂದ ನಾಡಿಗೆ ಅವರನ್ನು ತರುವುದರಲ್ಲಿಯೇ ಅವರ ಪ್ರಾಣಪಕ್ಷಿ ಹಾರಿಹೋಗಿರುತ್ತದೆ. ಶುದ್ಧವಾದ ಕುಡಿಯುವ ನೀರಿನ ಸೌಲಭ್ಯವಿಲ್ಲ. ಗಣಿಮಾಲೀಕರಾಗಲಿ ಸರ್ಕಾರದವರಾಗಲಿ ಅದರ ಕಡೆ ಗಮನ ಹರಿಸಿಲ್ಲ. ಈ ಕುಟುಂಬಗಳು ನಾಲ್ಕು ತಿಂಗಳಿಗೊಮ್ಮೆ ಅಥವಾ ಆರುತಿಂಗಳಿಗೊಮ್ಮೆ ತಮ್ಮ ಊರಿಗೆ ಹೋಗಿ ಬರುತ್ತವೆ. ಅಥವಾ ತಿರಿಗಿಬಾರದನೇ ಇರಬಹುದು. ಅಷ್ಟರಲ್ಲಿ ಮಕ್ಕಳು ಕಲಿತ ಅಕ್ಷರ ಜ್ಞಾನವನ್ನು ಮರೆಯುತ್ತಾರೆ. ಈ ರೀತಿ ಶಾಲೆ ಬಿಟ್ಟ ಮಕ್ಕಳು ಪುನಃ ಶಾಲೆಗೆ ಹೋಗಲು ಹಿಂಜರಿಯುತ್ತಾರೆ. ಅಲ್ಲಿಗೆ ವಿದ್ಯಾಭ್ಯಾಸವೆಂಬ ಬದುಕು ಕೊನೆಗೊಂಡಂ ತಾಗುತ್ತದೆ. ಪ್ರತಿಯೊಂದು ಗಣಿಕ್ಷೇತ್ರದಲ್ಲಿ ನಾಯಕ ಸಮುದಾಯವಲ್ಲದೇ ಇನ್ನುಳಿದ ಸಮುದಾಯದವರ ಮಕ್ಕಳ ಕಥೆಯೂ ಇದೇ ಆಗಿದೆ. ಇಲ್ಲಿನ ಲೇಬರ್ ಇನ್ಸ್‌ಪೆಕ್ಟರ್‌ಗಳು, ಸಿ.ಡಿ.ಪಿ.ಓ. ಮುಂತಾದ ಅಧಿಕಾರಿಗಳು ಕಂಡುಕಾಣದಂತೆ ಕುಳಿತಿದ್ದಾರೆ.

ಇತ್ತೀಚೆಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಗಣಿಗಾರಿಕೆಯ ಹಗರಣದ ಪರಿಣಾಮವಾಗಿ ಇಲ್ಲಿನ ಪ್ರತಿಯೊಂದು ಚಟುವಟಿಕೆಯು ರಾಷ್ಟ್ರಮಟ್ಟದಲ್ಲಿ ಪ್ರಚಾರವಾಗಿ ಕೆಲವು ಅಧಿಕಾರಿ ಗಳು ಎಚ್ಚೆತ್ತು ಸ್ವಲ್ಪಮಟ್ಟಿಗೆ ಸುಧಾರಣೆ ಮಾಡಿದರು. ಆದರೂ ಅದು ತಾತ್ಕಾಲಿಕವಾಗಿದೆ. ಕೆಲವು ಕಡೆ ನಡೆಸಿದ ದಾಳಿಗಳಿಂದ ಕ್ರಷರ್‌ಗಳು ಸೀಜ್ ಆಗಿವೆ. ಅವುಗಳ ಅಕ್ಕಪಕ್ಕದಲ್ಲಿ ಮತ್ತೆ ಮುಂದುವರೆದಿವೆ. ಕೆಲವು ಸಾಮಾಜಿಕ ಸೇವಾ ಸಂಸ್ಥೆಗಳಾದ ಡಾನ್‌ಬಾಸ್ಕೋ, ಸೀಡ್ಸ್, ಅಭಿವೃದ್ಧಿ ಸಂಸ್ಥೆಗಳು ಗಣಿಗಾರಿಕೆಯ ಸ್ಥಳಗಳಲ್ಲಿ ಟೆಂಟ್ ಶಾಲೆಗಳನ್ನು ತೆರೆದಿವೆ. ಅಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಇವು ಕೆಲವೇ ಮಕ್ಕಳಿಗೆ ಮಾತ್ರ ಉಪಯೋಗಕರವಾಗಿವೆ. ಶೇ. ೮೦ರಷ್ಟು ಭಾಗ ಮಕ್ಕಳು ಈ ರೀತಿಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸರ್ಕಾರದವರು ಸಹ ಕೆಲವು ಕಡೆಗಳಲ್ಲಿ ಟೆಂಟ್ ಶಾಲೆಗಳನ್ನು ತೆರೆದು, ಸ್ವಲ್ಪಮಟ್ಟಿಗೆ ಮಕ್ಕಳಿಗೆ ಶಿಕ್ಷಣ ಸಿಗುವಂತ ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ಕೇವಲ ಅನೌಪಚಾರಿಕವಾಗಿದೆ.

ಕೆಲವು ವರ್ಷಗಳ ಹಿಂದೆ ಕಾರ್ಮಿಕ ಸಚಿವರಾಗಿದ್ದ ಇಕ್ಬಾಲ್ ಅನ್ಸಾರಿ ಗಣಿಗಾರಿಕೆ ನಡೆಯುವ ಸ್ಥಳಕ್ಕೆ ಭೇಟಿಕೊಟ್ಟು ಅಲ್ಲಿನ ಮಕ್ಕಳ ಕಷ್ಟವನ್ನು ಕಣ್ಣಾರೆ ಕಂಡು ಕೆಲವು ಅಧಿಕಾರಿಗಳನ್ನು ಮತ್ತು ಗಣಿಮಾಲೀಕರನ್ನು ತರಾಟೆಗೆ ತೆಗೆದುಕೊಂಡರು. ಅದು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಯಿತು. ಆದರೆ ಅದನ್ನು ಕಾರ್ಯರೂಪಕ್ಕೆ ತರಲು ವಿಫಲರಾದರು. ಹೀಗೆಯೇ ಇದು ಮುಂದುವರೆದರೆ ಇಲ್ಲಿ ಬಂಡವಾಳಶಾಹಿಗಳು ಹೆಚ್ಚು ಹೆಚ್ಚು ಶ್ರೀಮಂತ ರಾಗುತ್ತಾರೆ. ಕೂಲಿಕಾರ್ಮಿಕರು ಕಾರ್ಮಿಕರಾಗಿಯೆ ಉಳಿಯುತ್ತಾರೆ. ಮಕ್ಕಳು ಅನಕ್ಷರಸ್ಥರಾಗಿ ಮಾರ್ಪಡುವುದರಲ್ಲಿ ಸಂಶಯವಿಲ್ಲ.

ಇವುಗಳಿಗೆ ಮೂಲ ಪರಿಹಾರವನ್ನು ಸ್ವಲ್ಪುಟ್ಟಿಗೆ ಕಂಡುಕೊಳ್ಳಬಹುದಾಗಿದೆ. ಮೊದಲು ಸಮುದಾಯವನ್ನು ಒಂದುಕಡೆ ಸೇರಿಸಿ, ಮಕ್ಕಳ ಹಕ್ಕುಗಳ ಬಗ್ಗೆ ತಿಳುವಳಿಕೆಯನ್ನು ನೀಡು ವುದು. ಕಾನೂನಿನಲ್ಲಿ ಮಕ್ಕಳಿಗೆ ತಮ್ಮದೇ ಆದಂತಹ ಹಕ್ಕುಬಾಧ್ಯತೆಗಳಿವೆ. ಅಮೇರಿಕಾವನ್ನು ಹೊರತುಪಡಿಸಿ ವಿಶ್ವದ ಎಲ್ಲಾ ರಾಷ್ಟ್ರಗಳು ಮಕ್ಕಳ ಹಕ್ಕು ಮತ್ತು ಅಭಿವೃದ್ಧಿಯ ಬಗ್ಗೆ ಒಪ್ಪಂದಕ್ಕೆ ಸಹಿ ಮಾಡಿದ್ದಾರೆ. ಮಕ್ಕಳ ಹಕ್ಕುಗಳನ್ನು ನಾವುಗಳು ಕಿತ್ತುಕೊಂಡು ಅವರನ್ನು ಬೇರೆಯವರ ಮನೆಯಲ್ಲಿ ಜೀತಕ್ಕೆ, ಬೇರೆ ಸ್ಥಳಗಳಿಗೆ ಸಾಗಾಣಿಕೆ ಮಾಡುವುದಾಗಲಿ, ಬಾಲ್ಯ ವಿವಾಹ ಪದ್ಧತಿ...ಹೀಗೆ ಅಮಾನವೀಯ ಕೃತ್ಯಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಘಟನೆಗಳು ಪ್ರತಿಹಳ್ಳಿಗಳಲ್ಲಿ ಮತ್ತು ಪ್ರತಿ ಪಟ್ಟಣಗಳಲ್ಲಿ ನಡೆಯುತ್ತಿರುತ್ತವೆ. ಸರ್ಕಾರವು ಮಕ್ಕಳ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ಎಲ್ಲರಿಗೂ ತಲುಪುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆಯನ್ನು ಜಾರಿಮಾಡಿದ್ದರೂ ಅವುಗಳು ಸ್ವಲ್ಪಮಟ್ಟಿಗೆ ಮಕ್ಕಳಿಗೆ ಅನುಕೂಲವಾಗುತ್ತಿದ್ದವೇನೋ. ಅಷ್ಟೇ ಅಲ್ಲ, ಪ್ರತಿ ಹಳ್ಳಿಗಳಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಬೀದಿನಾಟಕ ಮುಖಾಂತರವಾಗಲಿ, ಭಿತ್ತಿಪತ್ರಗಳ ಮುಖಾಂತರವಾಗಲಿ ಜನರಿಗೆ ಮನಮುಟ್ಟುವಂತೆ ವ್ಯವಸ್ಥೆಯನ್ನು ಮಾಡಬೇಕು. ಮೈನಿಂಗ್ ನಡೆಯುವ ಸ್ಥಳಗಳಲ್ಲಿ ಶಾಶ್ವತವಾದಂತ ಶಾಲೆಗಳನ್ನು ತೆರೆದು ಅವರಿಗೆ ಉಚಿತವಾಗಿ ಶಿಕ್ಷಣದ ಸಾಮಗ್ರಿಗಳು ಹಾಗೂ ಬಟ್ಟೆ, ಊಟದ ವ್ಯವಸ್ಥೆಮಾಡಿ ಅಲ್ಲಿ ನುರಿತ ಶಿಕ್ಷಕರನ್ನು ನೇಮಕಮಾಡಬೇಕು. ಹಾಗೆ ಗಣಿಮಾಲೀಕರು ಸಹ ಮಕ್ಕಳನ್ನು ಶಾಲೆಗೆ ಕಳಿಸಲು ಪ್ರೋನೀಡಬೇಕು. ಮಕ್ಕಳನ್ನು ಗಣಿಮಾಲೀಕರು ಕೆಲಸಕ್ಕೆ ನೇಮಿಸಿಕೊಂಡು ಅವರಿಗೆ ಅಲ್ಪಕೂಲಿಯನ್ನು ಕೊಟ್ಟು ದುಡಿಸಿಕೊಳ್ಳುತ್ತಾರೆ. ಅಂತವರ ವಿರುದ್ಧ ಕ್ರೂರವಾದ ಶಿಕ್ಷೆಯನ್ನು ಜಾರಿಮಾಡಿ ಅಂತಹ ಗಣಿಗಾರಿಕೆಯನ್ನು ಸೀಜ್ ಮಾಡಬೇಕು.

ಪ್ರತಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕಾವಲು ಪಡೆಯನ್ನು ರಚಿಸಬೇಕು. ಈ ಕಾವಲು ಪಡೆಯುವ ಮಕ್ಕಳನ್ನು ಮಾರಾಟಮಾಡುವುದನ್ನು, ಮಕ್ಕಳನ್ನು ಸಾಗಾಣಿಕೆ ಮಾಡುವು ದನ್ನು, ಬಾಲ್ಯವಿವಾಹ ಪದ್ಧತಿಯನ್ನು, ದೇವದಾಸಿ ಪದ್ಧತಿಯನ್ನು ತಡೆಯಬೇಕು. ಈ ಪಡೆಯಲ್ಲಿ ಎ.ಪಿ.ಎಂ.ಸಿ. ಕಮಿಟಿಯ ಸದಸ್ಯರು ಊರಿನ ಮುಖ್ಯಸ್ಥರು, ಗ್ರಾಮಪಂಚಾಯತಿ ಸದಸ್ಯರು, ಅಂಗನವಾಡಿ ಶಿಕ್ಷಕರು, ಯುವಕ ಸಂಘದವರು ಇರಬೇಕು. ಈ ರೀತಿಯ ಕಾವಲು ಪಡೆ ಸಹಾ ಮಕ್ಕಳ ಬಗ್ಗೆ ಜಾಗೃತಿಯನ್ನು ವಹಿಸಬೇಕು. ಹೀಗೆ ಆದರೆ ಮಾತ್ರ ಮಕ್ಕಳ ಹಕ್ಕುಗಳು ಮಕ್ಕಳಿಗೆ ಸಿಗಲು ಸಾಧ್ಯವಾಗುತ್ತದೆ.

* * *

**ಹಲಗಲಿ ಬೇಡರು**

ಯಾರ್-ಯಾರು ಇಲ್ಲದ್-ಆದೀತು
ಊರ್-ಎಲ್ಲಾ ಲೂಟಿ ಆಗಿ ಹೋತು

ಮಂದಿ ಮನಿ ಹೊಕ್ಕ ಹುಡುಕಿತು
ದನ-ಕರಾ ಲಯಾ ಆದೀತು

ಸಣ್ಣ ಕೂಸಗಳು ಹೋದವು ಸತ್ತು
ಬೆಂಕಿ ಹಚ್ಚ್ಯಾರ ವೂರ ಸುಟ್ಟಿತು

ನಷ್ಟ ಆತಿ ನೋಡರಿ ಈವತ್ತು
ನಾ ಹೇಳತೇನ ಈ ಮಾತು ||ಯೇರ||
ಇಷ್ಟ್-ಎಲ್ಲ ಅಳವ್-ಆಗಿ ಹೋದಿತೊ ಮುಟ್ಟಲಿಲ್ಲ-ಯಾತ್-ಎತಕ

# ೩೨. ಬಯಲಾಟ ಮತ್ತು ಕ್ರಾಂತಿಕಾರಿ ನಾಟಕ

ಉತ್ತರ ಕರ್ನಾಟಕದ ತುಂಬ ಸಿಂಧೂರ ಲಕ್ಷ್ಮಣನ ಹೆಸರು ಜನಸಾಮಾನ್ಯರ ನಾಲಿಗೆಯ ಮೇಲೆ ಕುಣಿದಾಡುತ್ತಿದೆ. ಹಾಡು, ಲಾವಣಿ, ಕಥೆ, ನಾಟಕಗಳ ಮುಖಾಂತರ ಲಕ್ಷ್ಮಣ ಜನನಾಯಕನಾಗಿಯೇ ಮೆರೆದಿದ್ದಾನೆ. ಸ್ವಾತಂತ್ರ್ಯ ಪೂರ್ವದಲ್ಲಿ ದೀನದಲಿತರ ಧ್ವನಿಯಾಗಿ, ಬಡವರ ಬಂಧುವಾಗಿ, ಸಾಮಾಜಿಕ ಅಸಮತೋಲನವನ್ನು ಹೋಗಲಾಡಿಸಲು ಹಗಲಿರುಳು ಹೋರಾಟ ಮಾಡಿದ ಒಬ್ಬ ವೀರ ಧೀರನ ಕಥೆ ಇತಿಹಾಸದ ಪುಟಗಳನ್ನು ಸೇರದೆ ಇರುವುದು ಒಂದು ವಿಪರ್ಯಾಸವೇ ಸರಿ.

ಬ್ರಿಟೀಷ್ ಸರಕಾರ ಸಿಂಧೂರ ಲಕ್ಷ್ಮಣನನ್ನು ಒಬ್ಬ ದರೋಡೆ ಕೋರ ಎಂದು ದಾಖಲಿಸಿದ ಹಿನ್ನಲೆಯಿಂದಾಗಿ ಅವನ ಶೌರ್ಯ, ಸಾಹಸ, ಚರಿತ್ರೆಗೆ ಸೂರ್ಯಗ್ರಹಣವೇ ಹಿಡಿದಂತಾಯಿತೋ ಏನು? ಆದರೆ ಇತಿಹಾಸ ತಜ್ಞರು, ಸಂಶೋಧಕರು, ಸಾಹಿತಿಗಳು ಗ್ರಾಮೀಣ ಮಟ್ಟದಲ್ಲಿ ಇದುವರೆಗೂ ದಾಖಲೆಗಳನ್ನು ಸಂಗ್ರಹಿಸಿ ನಾಡಿನ ಐತಿಹಾಸಿಕ ಚರಿತ್ರೆಯನ್ನು ಕಟ್ಟುವ ಸಂದರ್ಭದಲ್ಲಿಯಾದರೂ ಲಕ್ಷ್ಮಣನ ಹೆಸರನ್ನು ಪರಗಣಿಸದೆ ಇರುವುದು ಒಂದು ದುರ್ದೈವದ ಸಂಗತಿಯೇ ಸರಿ. ಈ ಒಂದು ಹಿನ್ನಲೆಯಲ್ಲಿ ಸ್ಥಳೀಯ ಚರಿತ್ರೆಗಳನ್ನು ಪುನಃ ಕಟ್ಟಬೇಕಾದಂತಹ ಅವಶ್ಯಕತೆ ಇದೆ. ಅವುಗಳ ಮುಖಾಂತರ ತಲೆ ತಲಾಂತರದಿಂದ ಬೆಳೆದು ಬಂದ ವರ್ಗ ಸಂಘರ್ಷದ ತಳಹದಿಗೆ ನಮ್ಮವರ ತಲೆಗಳುರಿಳಿ, ಮಡಿದವರ ಮರೆಯಲಾಗದ ಮಹಾನುಭಾವರ ಚರಿತ್ರೆಯನ್ನು ಯುವಸಮುದಾಯಕ್ಕೆ ತೋರ್ಪಡಿಸಬೇಕಾಗಿದೆ.

ವೀರ ಸಿಂಧೂರ ಲಕ್ಷ್ಮಣನ ಕುರಿತು ಹಲವಾರು ನಾಟಕಕಾರರು ಕೃತಿಗಳನ್ನು ರಚಿಸಿದ್ದಾರೆ. ಪ್ರತಿಯೊಬ್ಬ ನಾಟಕಕಾರರು ಕೆಲವು ದೃಶ್ಯಗಳನ್ನು ಕಾಲ್ಪನಿಕವಾಗಿ ಚಿತ್ರಿಸಿದ್ದಾರೆ. ಲಕ್ಷ್ಮಣರಾವ್ ಪುರಿ, ಪಿ.ಬಿ. ದುತ್ತರಗಿ, ಕಂಠಿ ಹನಮಂತರಾಯ, ಕವಟಗಿಯ ಸಂಗಮೇಶ ಆರ್. ಗುರವ, ಮುಂತಾದ ಪ್ರಮುಖ ನಾಟಕಕಾರರು ಕೃತಿಗಳನ್ನು ರಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾಟಕದ ಧ್ವನಿ ಸುರುಳಿಯು ಹೊರಬಂದಿದೆ. ಎನ್. ಬಸವರಾಜ ಮತ್ತು ಟಿ.ಕೆ. ಮಹಮ್ಮದ ಅಲಿಯವರ ಮಧ್ಯ ಸಿಂಧೂರ ಲಕ್ಷ್ಮಣ ಕೃತಿಯ ಕುರಿತು ವಿವಾದದಗಾಳಿ ಎದ್ದು ತಣ್ಣಗಾದದ್ದು ಉಂಟು. ಎನ್. ಬಸವರಾಜರವರು ತಮ್ಮ ವೃತ್ತಿರಂಗಭೂಮಿಯಲ್ಲಿ ಈ ನಾಟಕವನ್ನು ಅದ್ಧೂರಿಯಾಗಿ ಪ್ರಯೋಗಿಸುವುದರೊಂದಿಗೆ ಕನ್ನಡದ ಚಲನಚಿತ್ರ ರಂಗದ ಬೆಳ್ಳಿ ತೆರೆಗೆ ವೀರ ಸಿಂಧೂರ ಲಕ್ಷ್ಮಣನ ಪಾತ್ರವನ್ನು ತಾವೇ ಅಭಿನಯಸಿದ್ದು ಒಂದು ಅಪೂರ್ವ ಸಾಧನೆಯೇ ಸರಿ.

ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ ಸಿಂಧೂರ ಲಕ್ಷ್ಮಣ ಹೆಚ್ಚು ಪ್ರಯೋಗ ಗೊಳ್ಳುವುದರ ಜೊತೆಗೆ ಜನಮಾನಸದಲ್ಲಿ ಇನ್ನೂ ಜೀವಂತವಾಗಿ ಉಳಿಯಲು ಕಾರಣ ವಾಯಿತು. ಈ ಹಿನ್ನೆಲೆಯಲ್ಲಿ ವೃತ್ತಿರಂಗಭೂಮಿಯನ್ನು ಅಭಿನಂದಿಸಲೇಬೇಕು. ಅದರ ಮುಖಾಂತರ ಸುಧೀರ ರಂಗಭೂಮಿ ಮತ್ತು ಚಿತ್ರರಂಗದ ಸೇತುವೆಯಾಗಿಯೇ ಬೆಳೆದು ಬಂದು ಮಿಂಚಿನಂತೆ ಮಿಂಚಿ ಮರೆಯಾಗಿದ್ದಾರೆ.

"ಲಕ್ಷ್ಮಣನ ಕಾಲಕ್ಕೆ ಸಿಂಧೂರು ಜತ್ತ ಸಂಸ್ಥಾನಕ್ಕೆ ಸೇರಿದ ಒಂದು ಹಳ್ಳಿ. ಲಕ್ಷ್ಮಣನ ತಂದೆ ಸಾಬಣ್ಣ, ತಾಯಿ ನರಸವ್ವ ಮಹಾದೇವಪ್ಪ ಗೌಡರು ಸಿಂಧೂರಿನ ಪೋಲಿಸ ಪಾಟೀಲರು, ಲಕ್ಷ್ಮಣ ವಾಲಿಕಾರ, ಲಕ್ಷ್ಮಣನಿಗೆ ತಂಗಿಯೇ ಇಲ್ಲ. ಇದ್ದವರು ಇಬ್ಬರು ಸತ್ಯವ್ವ, ಸಕ್ರವ್ವ ಎಂಬ ಅಕ್ಕಂದಿರು. ಒಬ್ಬಳನ್ನು ರಡ್ಡೇರಹಟ್ಟಿಗೆ ಮದುವೆ ಮಾಡಿಕೊಟ್ಟಿದ್ದರು. ಅವಳ ಮಗನೇ ನರಸಪ್ಪ, ಇನ್ನೊಬ್ಬಾಕೆಯನ್ನು ನೇಸೂರಿಗೆ ಕೊಟ್ಟಿದ್ದರು ಅವಳ ಮಗಳೇ ಚಂದ್ರವ್ವ (ಲಕ್ಷ್ಮಣನ ಹೆಂಡತಿ) ನಾಟಕದ ಕಥಾನಾಯಕನಿಗೆ ನಿಜ ಜೀವನದ ಸಂಗಾತಿಯಾಗಿ ಹೆಂಡತಿ ಇದ್ದರು ಸಹ ಅವಳ ಪಾತ್ರವನ್ನೆ ಬಿಟ್ಟು ಇಲ್ಲದ ಕ್ರೈಸ್ತ ಕನ್ಯೆ ಓರ್ವಳನ್ನು ಸೃಷ್ಟಿಸಿಕೊಂಡು ಲಕ್ಷ್ಮಣನ ಮೇಲೆ ಛೂ ಬಿಡುವುದೆಂದರೆ ಅದೇನು ಇತಿಹಾಸವೋ ಅಭಾಸವೋ ಹೇಳುವುದೇ ಕಷ್ಟ. ಲಕ್ಷ್ಮಣನಿಗೆ ತಂಗಿಯೇ ಇಲ್ಲವೆಂದಾಗ ದುಂಡವ್ವನೆಂದೋ, ಮಾಳವ್ವನೆಂದೋ, ಗಂಗವ್ವಳೆಂದೋ ಇಲ್ಲದ ತಂಗಿಯನ್ನು ಕಲ್ಪಿಸಿಕೊಂಡದ್ದು, ನಾಟಕಕಾರನ ಕಥೆಯಾದೀತೇ ಹೊರತು ಇತಿಹಾಸವೆನಿಸಲಾರದು. ಲಕ್ಷ್ಮಣನು ಅಂತ್ಯಗೊಂಡದ್ದು ೧೯೨೧ರಲ್ಲಿ ಲಕ್ಷ್ಮಣ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದನೆ? ಎಂಬುದನ್ನು ಇತಿಹಾಸದ ಆಧಾರದಿಂದಲೇ ನಿರ್ಧರಿಸಬಹುದಾಗಿದೆ. ಇತಿಹಾಸದ ವಿಷಯವನ್ನು ಎತ್ತಿಕೊಂಡಾಗ ನಾಟಕಕಾರ ಕೇವಲ ಕವಿಯಾದರೆ ಸಾಲದು. ಇತಿಹಾಸಕಾರನು ಆಗಬೇಕಾಗುತ್ತದೆ. ಲಕ್ಷ್ಮಣನ ಬಾಳನದಿಯ ದಿಕ್ಕು ಬದಲಾದದ್ದು ಅವನ ಸೋದರಳಿಯಂದಿರು ತಂದೊಡ್ಡಿದರೆಂದು ಹೇಳಲಾಗುವ ಪರಿಸ್ಥಿತಿಯ ಒತ್ತಡದಿಂದ. ಮಂತರೆಯ

ಪಾತ್ರವು ರಾಮಾಯಣದ ಕಥೆಗೆ ತಿರುವುಕೊಟ್ಟ ಹಾಗೆ ಲಕ್ಷ್ಮಣನ ಜೀವಕ್ಕೆ ತಿರುವು ಕೊಟ್ಟವರು ಅವನ ಸೋದರಳಿಯಂದಿರು" ಎಂದು ನಾಟಕಕಾರ ಕಂಠಿ ಹನಮಂತರಾಯರು ಅಭಿಪ್ರಾಯ ಪಡುತ್ತಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ನಿರಂತರವಾಗಿ ಹೋರಾಡಿದ ಬ್ರಿಟೀಷ್ ಸಂಸ್ಥಾನಕ್ಕೆ ಸಿಂಹ ಸ್ವಪ್ನವಾದ ಹಲಗಲಿಯ ಬೇಡರ ಬಂಟರಾಗಲಿ ಹಾಗೂ ವೀರಸಿಂಧೂರ ಲಕ್ಷ್ಮಣನಾಗಲಿ ಅವರ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಬಂಡಾಯ ಸಾಹಿತಿ ಬರಗೂರ ರಾಮಚಂದ್ರಪ್ಪನವರು ಮಾಡಿರುವುದು ಗಮನಿಸಬೇಕಾದ ಅಂಶ.

**ಬಯಲಾಟ**

ಉತ್ತರ ಕರ್ನಾಟಕದಲ್ಲಿ ಜಾನಪದ ರಂಗಭೂಮಿಯ ಪ್ರಕಾರಗಳಾದ ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣ ಪಾರಿಜಾತದಂತಹ ಬಯಲಾಟಗಳು ದಟ್ಟವಾದ ಪ್ರಭಾವವನ್ನೇ ಬೀರಿವೆ. ಅಂತ ಒಂದು ಸಂದರ್ಭದಲ್ಲಿ ವೃತ್ತಿರಂಗಭೂಮಿಯು ಗ್ರಾಮೀಣ ಕಲಾವಿದರನ್ನು ಆಕರ್ಷಿಸಿತು. ಗ್ರಾಮೀಣ ಭಾಗದ ಪ್ರತಿಭಾವಂತ ಕಲಾವಿದರು, ನಾಟಕಕಾರರು, ವೃತ್ತಿರಂಗ ಭೂಮಿಯನ್ನು ಬೆಳೆಸಿದರು. ಶ್ರೀಮಂತಗೊಳಿಸಿದರು. ಅದೇ ನಾಟಕಕಾರರು ಗ್ರಾಮೀಣ ಕಲಾವಿದರನ್ನು ಒಟ್ಟುಗೂಡಿಸಿ ತಮ್ಮ ವೃತ್ತಿರಂಗಭೂಮಿಯ ನಾಟಕಗಳನ್ನೇ ಜಾತ್ರೆ, ಉತ್ಸವ, ಹಬ್ಬಹರಿದಿನಗಳಲ್ಲಿ ಪ್ರಯೋಗಿಸಿದರು. ಇಂತ ಒಂದು ಪರಂಪರೆ ಆಯಾ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ನಿರಂತರವಾಗಿ ಸಾಗಿ ಬರುತ್ತಿದೆ. ಇದು ಒಂದು ಗ್ರಾಮೀಣ ರಂಗಭೂಮಿ ನಮ್ಮ ಹಳ್ಳಿಯ ಜನರ ದೃಷ್ಟಿಯಲ್ಲಿ ಬಯಲಾಟ.

**ವೀರಸಿಂಧೂರ ಲಕ್ಷ್ಮಣ ಬಯಲಾಟ ಮತ್ತು ಕ್ರಾಂತಿಕಾರಿ ನಾಟಕ**

ಲಕ್ಷ್ಮಣರಾವ್ ಪುರಿಯವರು ರಚಿಸಿದ ವೀರಸಿಂಧೂರ ಲಕ್ಷ್ಮಣ ನಾಟಕ ಗುಳೇದಗುಡ್ಡದ ಹರದೊಳಿಯ ಶ್ರೀರಾಮ ನಾಟ್ಯ ಸಂಘದವರು ಶ್ರೀ ಮಾರುತೇಶ್ವರ ಕಾರ್ತಿಕೋತ್ಸವಕ್ಕೆ ಪ್ರಯೋಗಕ್ಕಾಗಿ ಸಜ್ಜುಗೊಳಿಸುತ್ತಿದ್ದರು. ಖ್ಯಾತ ನಾಟಕಕಾರ ದಿ. ಎಚ್.ಆರ್. ಭಸ್ಮಯ ವರದು ಈ ನಾಟಕದಲ್ಲಿ ಸ್ತ್ರೀ ಪಾತ್ರದ ಅಭಿನಯ, ನಿರ್ದೇಶನವು ಕೂಡಾ ಅವರದೆ. ಈ ನಾಟಕದಲ್ಲಿ ಲಕ್ಷ್ಮಣನಾಗಿ ಕೊಚೆಪ್ಪ ಹಾಲನ್ನವರ, ನರಸ್ಯಾ ಚನ್ನಮಲ್ಲಪ್ಪ ತೋಟದ, ಕಟಕ್ ಇನ್‌ಸ್ಪೆಕ್ಟರ್ ವಾಯ್.ಬಿ. ಗೌಡರ, ಹಾ್ಮೋರನಿಯಂ ಮಾಸ್ತರರಾಗಿ ಎಚ್.ಟಿ. ಪವಾರ ಅವರು ಕಾರ್ಯನಿರ್ವಹಿಸುತ್ತಿದ್ದರು. ಕಾರ್ತಿಕೋತ್ಸವ ಸಮೀಪಿಸುತ್ತಿದ್ದಂತೆ ನಾಟಕದ ರಂಗ ತಾಲಿಮು ಮ್ಯಾಳದ ಮನಿ ಕಿಕ್ಕಿರಿದು ತುಂಬುತ್ತಿತ್ತು.

ವೀರಸಿಂಧೂರ ಲಕ್ಷ್ಮಣ ನಾಟಕದ ರಂಗ ತಾಲಿಮು ನಡೆದಿದೆ ಎಂಬ ಸುದ್ದಿ ಕೇಳಿ ಮೇಲೆತ್ತರದ ಆಳು, ದಿರೋದಾತ್ತ ನಿಲುವು. ವಕ್ರಹುಬ್ಬು, ಮುಖದ ತುಂಬ ಗಡ್ಡ ಮೀಸೆ, ಹೊತ್ತು ಕುಂಟುತ್ತಾ ಬಂದು ಮ್ಯಾಳದ ಮನೆಯಲ್ಲಿ ಕುಳಿತುಕೊಂಡ. ಕಲಾವಿದರು ತಮ್ಮ ತಮ್ಮ ಪಾತ್ರಕ್ಕೆ ತಕ್ಕಂತೆ ಜೀವ ತುಂಬುವ ಪ್ರಯತ್ನ ಮಾಡುತ್ತಿದ್ದರು. ಅವರೆಲ್ಲರ ಅಭಿನಯ ವನ್ನು ತದೇಕಚಿತ್ತದಿಂದ ನೋಡುತ್ತಿದ್ದ ಕೆಲವು ಸನ್ನಿವೇಶಗಳು ಮೈಮನಸ್ಸನ್ನು ಕೆರಳಿಸಿದ್ದವು. ನಾಟಕದ ದೃಶ್ಯದಲ್ಲಿ ಲಕ್ಷ್ಮಣ ಮತ್ತು ಅವನ ಅಳಿಯಂದಿರು ಊಟಕ್ಕೆ ಕುಳಿತುಕೊಳ್ಳುವ ಸಂದರ್ಭ ಆಗ ನಾಟಕದ ರಂಗು ತಾಲಿಮು ನೋಡುತ್ತಿದ್ದ ವ್ಯಕ್ತ ಇದ್ದಕ್ಕಿದ್ದಂತೆ ಕುಳಿತಲ್ಲಿಂ ದಲೇ ಹೊರಕ್ಕೆ ಜಿಗಿದ. ರಂಗ ತಾಲಿಮು ನೋಡುತ್ತಿದ್ದ ರಂಗಾಸಕ್ತರು ಗಾಬರಿಗೊಂಡರು. ನಂತರ ಆ ವ್ಯಕ್ತಿಯ ಸಮೀಪ ಬಂದು ತಬ್ಬಿಬ್ಬಾದರು. "ನಾವು ಮಾಡಿದ್ದೆಲ್ಲ ರಗಡೈತಿ, ಇದರಾಗೆನೈತಿ ಆದರೂ ಕವಿ ತನಗೆಷ್ಟು ತಿಳಿದೈತಿ ಅಷ್ಟ ಬರದಾನ ಆದರ ನನ್ನ ಮಾವ ಸಾಯೂ ದೃಶ್ಯ ಬಂದಾಗ ನನ್ನಿಂದ ನೋಡಾಕ ಆಗಲಿಲ್ಲ. ಅದಕ ಕುಳಿತಲ್ಲಿಂದ ಜಿಂಕಿಯಂಗ ಜಿಗಿದ್ಯಾ" ಎಂದ ಆತ ಬೇರೆ ಯಾರು ಆಗಿರಲಿಲ್ಲ ಲಕ್ಷ್ಮಣನ ಸೋದರಳಿಯ ನರಸ್ಯಾ ಆಗಿದ್ದ. ನಡೆಯುವಾಗ ಕುಂಟುತ್ತಿದ್ದ ಲಕ್ಷ್ಮಣನು ಸತ್ತ ಮೇಲೆ ಬ್ರಿಟೀಷರು ಅವರನ್ನು ಬಂಧಿಸಿ ಅವರ ಕಾಲಲ್ಲಿಯ ಹಿಂಬಡದಲ್ಲಿಯ ನರವನ್ನು ಕತ್ತರಿಸಿದ್ದರು. ಮಿಂಚಿನಂತೆ ಓಡುತ್ತಿದ್ದ ನರಸ್ಯಾ ಮುಲೆಗುಂಪಾಗಿದ್ದ ಅವನನ್ನು ಕಣ್ಣಾರ ಕಂಡ ಜನತೆ ಮಮ್ಮಲ ಮರುಗಿದ್ದರು.

ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ಪಿ.ಬಿ. ದುತ್ತರಗಿಯವರ ವೀರಸಿಂಧೂರ ಲಕ್ಷ್ಮಣ ನಾಟಕ ಹಸ್ತಪ್ರತಿಯಲ್ಲಿಯೇ ಇದ್ದು ವೃತ್ತಿರಂಗಭೂಮಿಯಲ್ಲಿ ಮಾತ್ರ ಪ್ರಯೋಗ ಕಂಡಿದೆ.

ಕರ್ನಾಟಕದ ಪ್ರಮುಖ ಸಂಘ ಸಂಸ್ಥೆಗಳು ರಂಗಭೂಮಿಯ ಹೆಸರಾಂತ ಚಲನಚಿತ್ರ ಕಲಾವಿದರಿಂದ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾದಲ್ಲಿಯೂ ಜಯಭೇರಿ ಭಾರಿಸಿ, ಈವರೆಗೂ ಸುಮಾರು ಎಪ್ಪತ್ತೈದು ಸಾವಿರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡ ಅತ್ಯಂತ ಜನಪ್ರಿಯ ಹಾಗೂ ಕುತೂಹಲಕಾರಿ ಕ್ರಾಂತಿಕಾರಿ ನಾಟಕ ವೀರ ಸಿಂಧೂರ ಲಕ್ಷ್ಮಣ ಎಂದು ಕೌವಟಗಿಯ ಸಂಗಮೇಶ ಆರ್. ಗುರವ ಅಭಿಪ್ರಾಯ ಪಡುತ್ತಾರೆ.

ದೇಶಿಭಾಷೆಯ ಸಹಜ ಸಂಭಾಷಣೆ ನಾಟಕಕ್ಕೆ ಮೆರಗು ತಂದಿದೆ. ನಾಟಕ ರಚನೆಯ ತಂತ್ರಗಾರಿಕೆ ಕೂತುಹಲಕೆರಳಿಸುತ್ತಿದೆ. ಒಂದೊಂದು ದೃಶ್ಯಗಳು ರೋಮಾಂಚನಕಾರಿಯಾಗಿವೆ. ಈ ನಾಟಕವು ಹಲವಾರು ಮರು ಮುದ್ರಣಗಳನ್ನು ಕಂಡಿದೆ. ನಾಡಿನ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಹೆಚ್ಚು ಪ್ರಯೋಗಗಳನ್ನು ಕಂಡ ಕೃತಿಯೂ ಇದಾಗಿದೆ.

**ದೃಶ್ಯ ತುಳಸಿಗೆವಿಯ ಹನಮಪ್ಪನ ಗುಡಿ**

**ಪೂಜಾರಿ :** ನರಸವ್ವ ಇವನ ಹಡದ ನಿನ್ನ ಹೊಟ್ಟೆ ಪುಣ್ಯದ ಒಡಲವ್ವ ಎಂಥಾ ವೀರ ಮಗನನ್ನ ನಾಡಿಗೆ ಅರ್ಪಿಸಿದೆವ್ವ ತಾಯಿ, ನಿನ್ನ ಮಗನ ಭುಜದ ಮ್ಯಾಲ ಇರೋದು ಮಚ್ಚಿ ಅಲ್ಲವ್ವ, ಮಾರುತಿ ಪದ್ಮ ಬಂಡಿಗಲ್ಲ ಬಂದ ಅಪ್ಪಳಿಸಿದ್ರೂ ಕಲ್ಲು ಪುಡಿಪುಡಿಯಾಗುತ್ತ ಹೊರ್ತಾಗಿ ಇವಗೇನೂ ಆಗೋದಿಲ್ಲ. ಇಂಥ ಮಕ್ಕಳನ್ನು ಹಡಿಬೇಕಾದ್ರೂ ಪುಣ್ಯಬೇಕು ನರಸವ್ವ..... ಪುಣ್ಯವಂತೆವ್ವಾ ನೀನು ಪುಣ್ಯವಂತಿ.

**ನರಸವ್ವ :** ಎಪ್ಪಾ......

**ಪೂಜಾರಿ :** ಹೌದು ನರಸವ್ವ ಈ ನಿನ್ನ ಮಗ ರಾಜನಾಗಿ ಹುಟ್ಟದೇ ಇದ್ರೂ ರಾಜರನ ಮೆಟ್ಟಿ ಆಳುವಂತ ಧೀರನಾಗತಾನವ್ವ. ನಿನ್ನ ಹೆಸರು ನಿನ್ನ ಗಂಡನ ಹೆಸರು ತಾನು ಹುಟ್ಟಿ ಬೆಳೆದ ಸಿಂಧೂರ ಹೆಸರು ಸೂರ್ಯ ಚಂದ್ರರಿರುವವರೆಗೂ ಉಳಿಸತಾನವ್ವಾ. ಈ ನಿನ್ನ ಮಗ ಲಕ್ಷ್ಮಣ. ಲಕ್ಷ್ಮಣಾ ಅನ್ನುವ ಹೆಸರು ಕೇಳಿದವರೆಲ್ಲಾ ತಮ್ಮ ಮಕ್ಕಳಿಗೂ ಲಕ್ಷ್ಮಣ ಅಂತನೆ ಕರಿಬೇಕು ಅನ್ನೂ ಹಾಂಗ ಎಲ್ಲರ ಬಾಯಿಯಲ್ಲಿಯೂ ಸವಿಸಕ್ಕರಿಯಾಗಿ ಉಳಿತಾ ನವ್ವಾ ನಿನ್ನ ಮಗ ಲಕ್ಷ್ಮಣಾ, ಲಕ್ಷ್ಮಣಾ ಬಡವರನ ಮರಗಸ ಬ್ಯಾಡಾ, ಅನ್ಯಾಯಕ್ಕೆ ತಲೆ ತಗದುಕೊಡುವ ಪ್ರಸಂಗ ಬಂದ್ರೂ ನೀನು ಹಿಂದಕ ಸರಿಬ್ಯಾಡಾ.

**ನರಸವ್ವ :** ಎಪ್ಪಾ ಇನ್ನೊಂದು ಹೋದ ಶನಿವಾರ ಬಂದಾಗ ನಾನು ಒಂದು ತಾಯಿತಾ ಹೇಳಿದಿನಲ್ರಿ ಮಾಡಿರೇನ್ರಿ?..... ಇದ್ರ ಇವನಿಗೆ ಕಟ್ಟಿಬಿಡ್ರಿ.

**ಪೂಜಾರಿ :** ಹಂ. ಚಲೊ ನೆನಪ ಮಾಡಿದೆವ್ವಾ.... ತಯಾರ ಮಾಡೇನಿ ತಡಿ ತರಲೆನಿ. (ಗರ್ಭದ ಗುಡಿಯೊಳಗಿಟ್ಟ ತಾಯಿತ ತಂದು ಲಕ್ಷ್ಮಣನಿಗೆ ಕಟ್ಟುವನು) ಲಕ್ಷ್ಮಣಾ ನಮ್ಮ ದೇಶ ಸ್ವತಂತ್ರ ಇಲ್ಲಾ. ನಮ್ಮನ್ನು ಪರಂಗಿ ಸರಕಾರದವರು ಆಳಾಕ ಹತ್ಯಾರ, ಅವರ ವಿರುದ್ಧ ನಮ್ಮ ದೇಶದ ಮಂದೆಲ್ಲಾ ಬಂಡ ಎಬ್ಬಿಸ್ಯಾರ. ಅವರ ಕೂಡ ನೀನು ಧೀರನಾಗಿ ನಿಲ್ಲು ಮಾರುತಿಯಂತೆ ಎಲ್ಲಕ್ಕೂ ಎದಿಗೊಟ್ಟುನಿಲ್ಲು ಬಡವರ ಹಿತಕ್ಕಾಗಿ ದೇಶದ ಸ್ವಾತಂತ್ರ್ಯ ಕ್ಕಾಗಿ ನಿನಗೆ ಎಂಥಾ ಕಷ್ಟ ಬಂದ್ರೂ ಅದನ್ನು ನುಂಗಿಕೊಂಡು ಧರ್ಮದ ದಾರ್ಯಾಗ ಸಾಗು. ನೀನು ಉಣ್ಣುವ ಮುಂದೆ ಮೊದಲನೆಯ ತುತ್ತು ಈ ಮಾರುತಿಗೆ ಅರ್ಪಿಸಿ ಊಟಾ ಮಾಡು. ಈ ಮಾರುತಿ ನಿನ್ನ ಕೊಳ್ಳಾಗ ಇರುವವರೆಗೂ ಯಾವ ಶಕ್ತಿಗೂ ನಿನ್ನನ್ನು ಬಗ್ಗಸಾಕೆ ಆಗುವು ದಿಲ್ಲಾ ಭಜರಂಗಬಲಿ ನಿನಗೆ ಒಳ್ಳೆಯದು ಮಾಡಲಿ.

ಬರಗಾಲದಿಂದ ಬಳಲುತ್ತಿದ್ದ ಜನ ಹಪ್ತೆ ತುಂಬಲಾರದೆ ಕಷ್ಟವನ್ನು ಅನುಭವಿಸುವ ಸಂದರ್ಭದಲ್ಲಿ ಗೌಡ ಕುಲಕರ್ಣಿಯವರಂತ ಜಮೀನ್ದಾರ ವಿರುದ್ಧ ಸಿಡಿದು ನಿಲ್ಲುತ್ತಾನೆ.

**ಲಕ್ಷ್ಮಣ :** ಬೇಡರ ಕುಲದಾಗ ಹುಟ್ಟಿದ ಈ ಲಕ್ಷ್ಮಣಗ ಹ್ಯಾ ಅಂತ ಅಂದ ಹೋದ ಕೋಳಿಯಂತ ಈ ನನ್ನ ಮಕ್ಕಳ ಗೋಣ ತಿರುವಿ ಇಡತಿನಿ. ಇನ್ನು ಮೇಲಾದರೂ ಇವರು ಬಡವರ ಬಗ್ಗೆ ದಯಾ ತೋರಿಸಿದ್ದರ ಇವರ ಗಂಟ್ಲಾ ಕಡದು ಬಿಸಿ ರಕ್ತಾ ಕುಡಿತಿನಿ. ಇದಕ ತಪ್ಪಿದರೆ ನಾನು ಸನದಿ ಸಾಬಣ್ಣನ ಮಗ ಲಕ್ಷ್ಮಣ ಅಲ್ಲಾ ಅಂತ ಈ ತುಳಸಿಗೇರಿ ಹನಮಪ್ಪನ ಮುಂದ ನಿನ್ನ ಪಾದಾ ಮುಟ್ಟಿ ಆಣಿ ಮಾಡಿ ಹೇಳ್ತಿನಿ ನಡಿಯವ್ವಾ.

**ಜತ್ತದ ಜೈಲು**

**ಲಕ್ಷ್ಮಣ :** ಈ ನಿಮ್ಮ ಕಟುಕತನದ ಬಲವಾದರೂ ಎಷ್ಟಿದೆ ಕಂಡೇ ಬಿಡ್ತಿನಿ ಅಂದು ಗಲ್ಲಿಗೇರಿದಾ ಅಂದು ಗಂಡುಗಲಿ ಸಂಗೊಳ್ಳಿಯ ಹುಲಿ ಶೂರ ರಾಯಣ್ಣ ನೀವು ಸುರಿಸಿದ ಲಾಠಿ ಏಟಿಗೆ ಬಗ್ಗದೆ, ಕೆಚ್ಚು ಕೆಡದೆ ನಿಂತು ಮುರಿದು ಬಿದ್ದ ಆ ಪಂಜಾಬಿನ ಸಿಂಹ ಲಾಲಾಲಜಪತರಾಯ ತಾಯಿಯಾಗಿ, ತಲೆಕೊಡುವೆ ಎಂದು ತನ್ನ ತಲೆಯನ್ನೆ ಬಲಿಕೊಟ್ಟ ತಾಯಿ ಭಾರತಮಾತೆಯ ಬಂಟಮಗವೀರಭಗತ್‌ಸಿಂಗ್ ನಿಮ್ಮ ದಬ್ಬಾಳಿಕೆ, ಧರ್ಪಕ್ಕೆ ಸರ್ಪದಂತೆ ಹೆಡೆಕೆದರಿ ನಿಂತ ನಾನಾದರೂ ಇಂದು ನೀನು ಹೇಳುವ ಈ ಸಾವಿನ ಹೆದರಿಕೆಯನ್ನು ನನ್ನ ದೋತರದ ಚುಂಗಿನ್ಯಾಗ ಕಟಗೊಂಡ ಬಂದೀನಲೇ ಕಟಗಾ ಪ್ರಾಣದ ಭಯಬಿಟ್ಟು ನಿರ್ಭಯನು ಈ ಬ್ಯಾಡ.

ಬ್ರೀಟಿಷ ಅಧಿಕಾರಗಳ ದರ್ಪ ದೌರ್ಜನ್ಯವನ್ನು ಮೆಟ್ಟಿನಿಂತ ಚಿತ್ರಣ ರೋಮಾಂಚನ ವನ್ನುಂಟು ಮಾಡುತ್ತದೆ.

**ಗಾರ್ಮನ್ ಆಫೀಸ್**

**ಗಾರ್ಮನ್ :** ಓ ಲಚಮನ್ ಲಚಮನ್ ಲಚಮನ್ ಹೀ ಬಿಕೆಮ ಬಿಗ್ ಎನ್‌ಮೀ ಪಾರ್ ಆಸ್. ಜಗತ್ತನ್ನೆ ಆಳುವ ಬ್ರಿಟೀಷ್ ಸರಕಾರಕ್ಕೆ ವಿರೋಧಿಯಾದ ಚಾವಡಿಯನ್ನು ಮುರಿದು ಅಳಿಯಂದಿರನ್ನು ಬಿಡಿಸಿಕೊಂಡು ಹೋದ. ಜೈಲುಮುರಿದು ಪರಾರಿಯಾದ ಈಗ ಗೌಡನನ್ನು ಕೊಲೆ ಮಾಡಿ ನಮ್ಮ ಸರಕಾರಕ್ಕೆ ಸವಾಲು ಹಾಕಿದ. ಓ ಮಾಯ್, ಗಾಡ್ ಬಟ್ ಒಬ್ಬ ವಾಲಿಕಾರ ಇಂತ ಶೂರನಿರಬೇಕಾದರೆ ಈ ಭಾಗದಲ್ಲಿಯ ರಾಜ ಮಹಾರಾಜರು ಕಿಂಗ್ ಆಸ್ ಕಿಂಗ್ಸ್ ಎಂಥಾ ಶೂರರಿರಬೇಕು. ಏನಾದರೇನು ಬಟ್ ಆಯ್‌ಡೊಂಟ್ ಕೇರ್ ಜಗತ್ತನ್ನೆ ಆಳುವ ಬ್ರಿಟೀಷ ಸರಕಾರಕ್ಕೆ ದಿಸ್ ಇಂಡಿಯಾ ಈಸ್ ಓನ್ಲಿ ಎ ಡಸ್ಟ್ ಆಫ್ ಬರ್ನಿಂಗ್ ಸಿಗರೇಟ್.

ಹುಲಿ ಚಿರತೆ ಬೇಟೆಯಾಡುವ ಬೇಡರ ಭಂಟರಿಗೆ ಶೌರ್ಯ ಸಾಹಸಗಳು ಹುಟ್ಟಿನಿಂದಲೇ ಬಂದಂತವುಗಳು ಕೇವಲ ತನ್ನ ಮೂರು ಅಳಿಯಂದಿರನ್ನು ಕಟ್ಟಿಕೊಂಡು ಜಮೀನ್ದಾರರ ವಿರುದ್ಧ ವರ್ಗ ಸಂಘರ್ಷಕ್ಕೆ ಇಳಿದು ಬ್ರಿಟೀಷ್ ಸರಕಾರದ ದಬ್ಬಾಳಿಕೆಗೆ ಎದೆಯೊಡ್ಡಿ ನಿರಂತರ ಹೋರಾಟ ಮಾಡಿ ಬ್ರಿಟೀಷ್ ಸರ್ಕಾರವನ್ನು ಬೆಚ್ಚಿಬೀಳಿಸಿದ ಎಂಟೆದೆಯ ಭಂಟ ವೀರಸಿಂಧೂರ ಲಕ್ಷ್ಮಣ.

ಬ್ರಿಟೀಷರ ಕುತಂತ್ರದಿಂದಾಗಿ ಸಿಂಧೂರ ಲಕ್ಷ್ಮಣ ಮೋಸದ ಬಲೆಯಲ್ಲಿ ಸಿಲುಕಿದ ಕಾಡಡವಿಯಲ್ಲಿ ಊಟಕ್ಕೆ ಕುಳಿತ ಸಂದರ್ಭದಲ್ಲಿ ಗುಂಡಿಗೆ ತನ್ನ ಎದೆಗುಂಡಿಗೆಯನ್ನು ಬಲಿಕೊಟ್ಟ ಬ್ರಿಟೀಷರು ಹೊಡೆದವರು ನಮ್ಮ ನಮ್ಮವರೆಯಾದರು. ಅವರು ಭಾರತೀಯ ಬ್ರಿಟೀಷರಾದರು.

ಸಾಹಿತ್ಯ ಕ್ಷೇತ್ರದಲ್ಲಿ ವೀರ ಸಿಂಧೂರ ಲಕ್ಷ್ಮಣ ಕೃತಿಯನ್ನು ವಿವಿಧ ದೃಷ್ಟಿಕೋನದಲ್ಲಿ ರಚಿಸಿದ್ದರೂ ಅವನ ಅಂತ್ಯ ಮಾತ್ರ ಅತ್ಯಂತ ಕೂತುಹಲಕಾರಿಯಾಗಿ ಚಿತ್ರಿಸಿದ್ದಾರೆ. ಸಿಂಧೂರ ಲಕ್ಷ್ಮಣನೆಂದರೆ ಸಾಕು ಮೈಯಲ್ಲಿ ಸ್ಫೂರ್ತಿ ತುಂಬುವದು. ನಾಟಕ ನೋಡಿದ ಕೇಳಿದ ಸಾರ್ಥಕಗೊಳ್ಳುವುದು.

* * *

ಈಚಿನ ಸಮೀಕ್ಷೆಯ ಪ್ರಕಾರ, ಕರ್ನಾಟಕದ ಮಟ್ಟಿಗೆ ಸುಮಾರು ೧೮೦ ನಾಯಕ ಪಾಳೆಯಗಾರರು ಅಸ್ಥಿತ್ವದಲ್ಲಿದ್ದುದು ಖಚಿತಪಡುತ್ತದೆ. ಇವುಗಳ ಪೈಕಿ ಇಂದಿಗೂ ಜೀವಂತವಿರುವ ಸಂಸ್ಥಾನಗಳು ಸುಮಾರು ಇಪ್ಪತ್ತೈದು ಇಲ್ಲಿ ಉತ್ತರ ಕರ್ನಾಟಕದ ದೇಸಾಯಿ ಮನೆತನಗಳನ್ನು ಲೆಕ್ಕಕ್ಕೆ ಹಿಡಿದಿಲ್ಲ.

**– ಪ್ರೊ. ಲಕ್ಷ್ಮಣ್ ತೆಲಗಾವಿ**

## ೩೩. ಹೋರಾಟಗಾರ

ಹಸಿವು, ಕಣ್ಣೆದುರೆ ನಡೆಯುತ್ತಿರುವ ಅನ್ಯಾಯ, ಬಡಜನತೆಯ ಮೇಲೆ ನಡೆಯು ತ್ತಿರುವ ದಬ್ಬಾಳಿಕೆ, ದುಷ್ಟ ಸರಕಾರದ ಕೆಟ್ಟ ತೆರಿಗೆ ನೀತಿಯನ್ನು ಕಂಡು ಕೂಡಾ ಯಾವ ಸ್ವಾಭಿಮಾನಿ, ಜನಹಿತಚಿಂತಕನಾದ ಯುವಕನು ಕೈಕಟ್ಟಿ ಕುಳಿತುಕೊಳ್ಳಲಾರ. ಅದರ ವಿರುದ್ಧ ಪ್ರತಿಭಟನೆ ಮಾಡುವುದು ಸಹಜ. ಇದರ ಜೊತೆಗೆ ಸದೃಡ ದೇಹ, ಶೂರ ಮನೆತನ ಹೋರಾಟಕ್ಕಿಳಿಸುವ ಪ್ರಸಂಗಗಳು ಬಂದರಂತೂ ಎಂತಹ ಸಭ್ಯ, ಮೃದು ಸ್ವಭಾವದವರನ್ನು ಸಹ ಹೋರಾಟಗಾರರನ್ನಾಗಿ ಪರಿವರ್ತಿಸಬಹುದು. ಆಗ ಆತ ಅನ್ಯಾಯದ ವಿರುದ್ಧ ಹೋರಾಟ ಉಳ್ಳವರಿಂದ ಇಲ್ಲದವರಿಗೆ ಹಂಚಿ ಸರ್ವಸಮಾನತೆ ತರುವ ಪ್ರಯತ್ನ ಮಾಡ ಬಹುದು. ಸಮಾಜದಲ್ಲಿದ್ದಂತಹ ಈ ಅನ್ಯಾಯದ ನೀತಿಗಳು ಮತ್ತು ಪರಿಸ್ಥಿತಿಯ ಕೈಗೂ ಸಾಗುವಿಕೆಯು 'ವಾಲೇಕಾರ'ನಾದ ಲಕ್ಷ್ಮಣನನ್ನು 'ಹೋರಾಟಗಾರ ವೀರ ಸಿಂಧೂರ ಲಕ್ಷ್ಮಣ' ನನ್ನಾಗಿಸಿದವು.

**ಆರಂಭಿಕ ಜೀವನ**

ಲಕ್ಷ್ಮಣ ಹುಟ್ಟಿದ್ದು ಜತ್ತ ಸಂಸ್ಥಾನದ ಸಿಂದೂರ (ಈಗಿನ ಮಹಾರಾಷ್ಟ್ರ ರಾಜ್ಯದ ಸಾಂಗ್ಲಿ ಜಿಲ್ಲೆ ಜತ್ತ ತಾಲೂಕಿನ ಸಿಂದೂರ-ಸಿಂಧೂರ ಅಲ್ಲ)ನಲ್ಲಿ. ತಂದೆ ಬೇಡ ಸಮುದಾಯದ ವಾಲೇಕಾರನಾದ 'ಸಾಬಣ್ಣನಾಯಕ', ತಾಯಿ 'ನರಸವ್ವಾ'. ಈತನಿಗೆ ಸತ್ಯವ್ವ ಮತ್ತು ಸಕ್ರವ್ವ ಎಂಬ ಇಬ್ಬರು ಅಕ್ಕಂದಿರು. ಹಿರಿಯಳಾದ ಸತ್ಯವ್ವನನ್ನು 'ರಡ್ಡೇರಹಟ್ಟಿ'ಗೆ ಮದುವೆ ಮಾಡಿಕೊಟ್ಟಿದ್ದು, ಅವಳ ಮಗನೇ ನರಸಪ್ಪ. ಲಕ್ಷ್ಮಣನನ್ನು ಹೋರಾಟಗಾರನನ್ನಾಗಿ ರೂಪಿಸು ವಲ್ಲಿ ಪ್ರಮುಖ ಪಾತ್ರವಹಿಸುವ ಈತ ಸಾಯುವವರೆಗೂ ಆತನ ಜೊತೆಗಿದ್ದು ಆತನ ಬಲಗೈ ಭಂಟನೆನಿಸಿಕೊಳ್ಳುತ್ತಾನೆ. ಕಿರಿಯಳಾದ ಸಕ್ರವ್ವನನ್ನು ನೇಸೂರಿಗೆ ಕೊಟ್ಟಿದ್ದು ಆಕೆಯ ಮಗಳು ಚಂದ್ರವ್ವಳೇ ಲಕ್ಷ್ಮಣನ ಹೆಂಡತಿ. ಸಾಬು, ಗೋಪಾಲಿಯರು ಸಹ ಈತನ ಸೋದರಳಿ ಯರು. ಭೀಮರಾಯ (ಆಂಜನೇಯ) ಈತನ ಕುಲ ಮತ್ತು ಆರಾಧ್ಯ ದೈವ.

ಮೂಲತಃ ಶೂರರಾದ 'ಬೇಡ' ಸಮುದಾಯಕ್ಕೆ ಸೇರಿದ ಲಕ್ಷಣ ಒಬ್ಬ ಸಭ್ಯ ಸಂಭಾವಿತ ಯುವಕ. ಜತ್ತ ಸಂಸ್ಥಾನದ ಸರಕಾರದಲ್ಲಿ ತಂದೆ ಸಾಬಣ್ಣ ನಾಯಕ ನಡೆಸುತ್ತಿದ್ದ ವಾಲೇಕಾರ ಹುದ್ದೆಯನ್ನು ತಂದೆಯ ಮರಣದ ನಂತರ ಮುಂದುವರೆಸಿಕೊಂಡು ಹೋಗುತ್ತಿದ್ದ. ಜೊತೆಗೆ ಹೊಲದಲ್ಲಿ ಉಳುಮೆ ಮಾಡಿಕೊಂಡು ಬಂದ ಆದಾಯದಲ್ಲಿ ಯಾರ ಮುಂದೆಯು ಕೈಚಾಚದೆ ಜೀವನ ನಡೆಸುತ್ತಿದ್ದ. ಅನ್ಯಾಯ, ಅತ್ಯಾಚಾರ, ದರೋಡೆ ಅಪರಾಧಗಳೆಂದರೆ ಕಿಡಿ ಕಾರುತ್ತಿದ್ದ. ಈತ ಹೆಣ್ಣುಮಕ್ಕಳ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದು, ದುಡಿದು ಉಣ್ಣ ಬೇಕಾದದ್ದು ಗಂಡಸಿನ ಧರ್ಮವೆಂಬ ಮನೋಭಾವವುಳ್ಳವನಾಗಿದ್ದ. 'ಬ್ಯಾಟಿ ಆಡೋದು ಬ್ಯಾಡರ ಕುಲದ ಕಸಬಾದ್ರೂ ಹಸು ಕೊಲ್ಲೋದು ಧರ್ಮ ಅಲ್ಲಾ, ಆದ್ರೆ ಕ್ರೂರಪಶು ಕಂಡ್ರ ಬ್ಯಾಟಿ ಆಡದ ಬಿಡುವಂಗಿಲ್ಲಾ' ಎಂಬುದು ಲಕ್ಷ್ಮಣನ ಕುಲನೀತಿಯಾಗಿತ್ತು.

ನೀತಿವಂತನಾಗಿರುವುದರೊಂದಿಗೆ ಲಕ್ಷಣ ಶೂರ, ರೂಪವಂತನು ಆಗಿದ್ದ ಎಂಬುದನ್ನು ಜನಪದ ಕಾವ್ಯಗಳು ವರ್ಣಿಸುತ್ತವೆ.

ಪಾಂಡವರೊಳಗೆ ಇದ್ದಾಂಗೋ ಭೀಮ
ಚೆಲುವ ಚಂದ್ರಾಮ ಥೇಟ ಹೋಳಿಕಾಮಾ ರೂಪದಲ್ಲಿ ದೌಲಾ
ಎಂಥಾ ತಾಯಿ ಹೊಟ್ಟಿಲಿ ಹುಟ್ಟಿದಾನೋ ಪ್ರಭಲಾ

ಹೀಗೆ ಬೇಡ ಸಮುದಾಯಕ್ಕೆ ತಕ್ಕ ಹಾಗೆ ಶೂರನೂ, ಸಧೃಡ ದೇಹವುಳ್ಳವನು, ರೂಪವಂತನು ಆದ ಲಕ್ಷ್ಮಣನು ಸಂಸ್ಥಾನದಲ್ಲಿ ಏರ್ಪಡಿಸುತ್ತಿದ್ದ ಬೇಟೆಯಾಡುವ ಕವಣೀ ಹೊಡೆದ ಕಲ್ಲು ನಗದ ಕಣ್ಣಂಗಿದ ಪಾರು ಮಾಡುವ ಅನೇಕ ಶರತ್ತುಗಳಲ್ಲಿ ಭಾಗವಹಿಸಿ ಪ್ರತಿಯೊಂದರಲ್ಲಿಯು ಜಯಶಾಲಿಯಾಗುತ್ತಿದ್ದ.

**ಹೋರಾಟಗಾರನನ್ನಾಗಿ ರೂಪಿಸಿದ ಪ್ರಸಂಗ**

ಮುಗ್ಧ ಮನಸ್ಸಿನ ಲಕ್ಷ್ಮಣನನ್ನು ಹೋರಾಟಗಾರನನ್ನಾಗಿ ರೂಪಿಸಿದ್ದು ಭೀಕರ ಬರಗಾಲ. ಆ ಸಂದರ್ಭದಲ್ಲಿ ಬಿದ್ದ ಭೀಕರ ಬರಗಾಲ ನಾಡಿನ ಜನತೆ ಹೊಟ್ಟೆಗಿಲ್ಲದೆ ಹಸಿವಿನಿಂದ ತತ್ತರಿಸುವಂತೆ ಮಾಡಿತು. ನಾಡಿಗೆ ಬಂದ ಬರಗಾಲ ಲಕ್ಷ್ಮಣನ ಮನೆಯನ್ನು ಮುಟ್ಟಿತು. ಮನೆಯಲ್ಲಿ ಹೊಟ್ಟೆಗೆ ಹಿಟ್ಟಿಲ್ಲದ ಪರಿಸ್ಥಿತಿ ಲಕ್ಷ್ಮಣನ ಕುಟುಂಬಕ್ಕೆ ಬಂತು. ಆದರೂ ಲಕ್ಷ್ಮಣ ಧೃತಿಗೆಡದೆ ಯಾರ ಮುಂದೆಯೂ ಕೈಚಾಚದೆ ಮನೆಯಲ್ಲಿದ್ದ ನೀರಿನಿಂದ ಹೊಟ್ಟೆ ತುಂಬಿಸಿಕೊಂಡು ದೇವರ ಹೆಸರು ಹೇಳಿ ಮಲಗುತ್ತಿದ್ದ. ಆದರೆ ಹೊಟ್ಟೆ ಹಸಿವನ್ನು ತಾಳದ ಈತನ ಸೋದರಳಿಯರಾದ ನರಸ್ಯಾ, ಗೋಪಾಲಿ, ಸಾಬು ಅನ್ನಕ್ಕಾಗಿ ಖೇಡ ಖಾನಾಪುರದ ಗೌಡನ ಮನೆಯನ್ನು ದರೋಡೆ ಮಾಡಿದರು. ಈ ವಿಷಯ ಪೋಲೀಸರಿಗೆ ಗೊತ್ತಾಗಿ ಅವರನ್ನು ಹಿಡಿಯಲು ಮುಂದಾದಾಗ ಅಲ್ಲಿಂದ ತಪ್ಪಿಸಿಕೊಂಡು ಅವರು ಆಶ್ರಯ ಕೋರಿ ಬಂದದ್ದು ಲಕ್ಷ್ಮಣನ ಮನೆಗೆ.

ದರೋಡೆ ಮಾಡಿ ಬಂದ ಅಳಿಯಂದಿರಿಗೆ ಲಕ್ಷ್ಮಣ ದುಡಿದು ಉಣ್ಣುವುದನ್ನು ಬಿಟ್ಟು ಕಂಡವರ ಮನೆ ದರೋಡೆ ಮಾಡುವ ನಿಮ್ಮಂಥವರಿಗೆ ನಾನು ಆಶ್ರಯ ನೀಡುವುದಿಲ. ಅನ್ಯಾಯ, ಅತ್ಯಾಚಾರ, ದರೋಡೆ ಮಾಡಿದವರಿಗೆ ನನ್ನ ಬಳಿ ಜಾಗವಿಲ್ಲ'ವೆಂದು ಅವರನ್ನು ನಿರ್ದಾಕ್ಷಿಣ್ಯವಾಗಿ ಹೊರಹಾಕಲು ಯತ್ನಿಸುತ್ತಾನೆ. ಜೊತೆಗೆ ಅವರನ್ನು ಸರಕಾರಕ್ಕೆ ಹಿಡಿದು ಕೊಡಲು ಮುಂದಾಗುತ್ತಾನೆ. ಆಗ ತಾಯಿ ನರಸವ್ವ ಮತ್ತು ಹೆಂಡತಿ ಚಂದ್ರವ್ವ ಲಕ್ಷ್ಮಣನನ್ನು ತಡೆದು ಆಶ್ರಯ ಕೋರಿ ಬಂದವರನ್ನು ಹೊರಹಾಕುವುದು ತರವಲ್ಲ ಎಂದು ಬುದ್ಧಿ ಮಾತು ಹೇಳುತ್ತಾರೆ. "ಭೂಮಿಯ ಮೇಲೆ ಉಂಡು ಬದುಕುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ದೇವರ ಸೃಷ್ಟಿಯಾದ ಭೂಮಿ, ನೀರು, ಗಾಳಿ ಜಗತ್ತಿನ ಪ್ರತಿಯೊಬ್ಬರಿಗೂ ಸೇರಿದ್ದು, ಶ್ರೀಮಂತರು ಇದನ್ನು ತಮ್ಮ ಹತ್ತಿರ ಇಟ್ಟುಕೊಂಡು ಮೆರೆಯುತ್ತಾರೆ. ಹಸಿವಿನಿಂದ ಸಾಯುವ ಬಾಯಿಗೆ ಒಂದು ತುತ್ತು ಅನ್ನ ಹಾಕುವ ಮನಸ್ಸು ಮಾಡುವುದಿಲ್ಲ. ಹಸಿವಿನಿಂದ ಸಾಯುವಾಗ ಶ್ರೀಮಂತರ ಬಳಿಯ ಸಂಪತ್ತನ್ನು ದರೋಡೆ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿ ತಪ್ಪೇನಿದೆ? ಇಂಥ ಕಾಲದಲ್ಲಿ ಬಡವರಿಗೆ ಸಹಾಯ ಮಾಡದ ಸರ್ಕಾರ ಇದ್ದೇನು ಫಲ?" ಎಂದು ಪ್ರಶ್ನಿಸುತ್ತಾರೆ.

ತಾಯಿ ಮತ್ತು ಹೆಂಡತಿಯ ಈ ಪ್ರಶ್ನೆಗಳು ಲಕ್ಷ್ಮಣನ ಜೀವನದ ದಿಕ್ಕನ್ನೇ ಬದಲಿಸಿದವು. 'ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. ಒಬ್ಬರು ಹೊಟ್ಟೆ ಬಿರಿಯುವ ಹಾಗೆ ಉಂಡು ನೂರು ಜನ ಉಪವಾಸದಿಂದ ಸಾಯುವಂತಾಗಬಾರದು. ಶ್ರೀಮಂತರು ತಾವಾಗಿಯೇ ಕೊಡ ದಾಗ ಅದನ್ನು ಕಿತ್ತುಕೊಂಡು ತಿನ್ನುವುದರಲ್ಲಿ ತಪ್ಪೇನಿಲ್ಲ. ಅಂತಹ ಶ್ರೀಮಂತರಿಂದ ಕಿತ್ತು ಹಸಿವಿನಿಂದ ಸಾಯುವ ಬಡಜನರಿಗೆ ಹಂಚಬೇಕು, ಸರ್ವರೂ ಸಮಾನತೆಯಿಂದ ಬಾಳುವಂತಾ ಗಬೇಕು' ಎಂಬ ನಿರ್ಧಾರಕ್ಕೆ ಬಂದ ಲಕ್ಷ್ಮಣನು ಹೋರಾಟಗಾರನಾಗಿ ಬದಲಾವಣೆ ಹೊಂದುವ ಮೂಲಕ ಸರ್ವಸಮಾನತೆ ತರುವ ಪ್ರಯತ್ನಕ್ಕೆ ಮುಂದಾಗುತ್ತಾನೆ.

**ಹೋರಾಟಗಾರ ಲಕ್ಷ್ಮಣ**

ಹೋರಾಟಗಾರನಾಗಿ ಪರಿವರ್ತಿತನಾದ ಲಕ್ಷ್ಮಣ ಮೊದಲು ಮಾಡಿದ್ದು ಬೀಳೂರು ಕುಲಕರ್ಣಿಯ ಕಿರಾಣಿ ಅಂಗಡಿ ದರೋಡೆ. ತನ್ನ ಮೂರು ಜನ ಅಳಿಯಂದಿರು ಮತ್ತು ಸಿಂಧೂರಿನ ಕೆಲವು ಬೇಡ ಸಮುದಾಯದ ಯುವಕರನ್ನು ಕೂಡಿಕೊಂಡು ಅಲ್ಲಿ ದರೋಡೆ ಮಾಡಿ ಅಲ್ಲಿ ದೋಚಿದ ವಸ್ತುಗಳನ್ನು ಬಡವರಿಗೆ ಹಂಚುತ್ತಾನೆ. ಬಡವರು ಅವನ ಹತ್ತಿರ ಅಡವಿಟ್ಟ ಹೊಲ, ಮನೆ ಪತ್ರಗಳನ್ನು ನಾಶಪಡಿಸುತ್ತಾನೆ. ಹೀಗೆ ಮೊದಲ ದರೋಡೆ ಯಲ್ಲಿಯೇ ಲಕ್ಷ್ಮಣ ಬಡವರಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡುತ್ತಾನೆ. ನಂತರ ತನ್ನ ಗೆಳೆಯ ಮಾರುತಿಯ ತಂದೆ ಸಿಂಧೂರಿನ ಶ್ರೀಮಂತ ಸಿದ್ಧಯ್ಯನ ಬಳಿ ಇಟ್ಟ ಬಂಗಾರ ವನ್ನು ಅವನ ತಂಗಿಯ ಮದುವೆಗಾಗಿ ಕೊಡು ಎಂದು ಕೇಳಿಕೊಳ್ಳುತ್ತಾನೆ. ಅವನು ಬಂಗಾರ ವನ್ನು ಕೊಡಲು ಒಪ್ಪದಾಗ ಹಾಡು ಹಗಲೇ ನಿಮ್ಮ ಮನೆಗೆ ನುಗ್ಗಿ ದರೋಡೆ ಮಾಡುವುದಾಗಿ ಧಮಕಿ ಹಾಕುತ್ತಾನೆ. ಇದರಿಂದ ಕೋಪಗೊಂಡ ಸಿದ್ಧಯ್ಯನು ಜತ್ತ ಪೋಲಿಸರಿಗೆ ಲಕ್ಷ್ಮಣನ ವಿರುದ್ಧ ದೂರು ಕೊಡುತ್ತಾರೆ.

ಜತ್ತದಿಂದ ಬಂದ ಪೋಲಿಸರು ಲಕ್ಷ್ಮಣನನ್ನು ಹಿಡಿದು ಬೇಡಿ ಹಾಕುತ್ತಾರೆ. ಆ ವೇಳೆ ಪೋಲಿಸ್ ಇನ್‌ಸ್ಪೆಕ್ಟರ್ ಮೋಹನ ಕಲಾಲನು ಇವನ ಬಗ್ಗೆ ಕೀಳಾಗಿ ಮಾತನಾಡಿದಾಗ ಕ್ರೋಧಗೊಂಡ ಲಕ್ಷ್ಮಣನು ಅವನಿಗೆ ದಿಟ್ಟತನದಿಂದ ಉತ್ತರ ನೀಡುತ್ತಾನೆ. "ನ್ಯಾಯ ನೀತಿಯಿಂದ ನಡೆಯುವ ನಾನು ನಿನಿಗಲ್ಲ ನಿನ್ನ ಮೇಲಿನ ಇಂಗ್ಲೀಷ್ ಸರಕಾರ ಬಂದರೂ ಹೆದರುವುದಿಲ್ಲ. ಸಂಗೊಳ್ಳಿ ರಾಯಣ್ಣ ಕಿತ್ತೂರಿಗಾಗಿ ಹೋರಾಡಿದರೆ ನಾನು ಹಸಿದ ಜನರಿಗಾಗಿ ಹೋರಾಟ ಮಾಡುವೆ ಇಂತಹ ಬರಗಾಲದಲ್ಲಿ ನಿಮ್ಮ ಕಂಪನಿ ಸರಕಾರ ಹಸಿದ ಹೊಟ್ಟೆಗೆ ಊಟ ನೀಡುತ್ತದೆಯೇ? ಕಂದಾಯ ಸೂಟು ಬಿಡುತ್ತದೆಯೇ? ಉದ್ಯೋಗ ಇಲ್ಲದವರಿಗೆ ಉದ್ಯೋಗ ಕೊಡುತ್ತದೆಯೇ ಯಾವ ಸಹಾಯ ಮಾಡದ ಸರಕಾರ ಹಸಿದವರು ದರೋಡೆ ಮಾಡಿದಾಗ ಅವರನ್ನು ಶಿಕ್ಷಿಸಲು ಮಾತ್ರ ಬರುತ್ತದೆ" ಎಂದು ಇಂಗ್ಲೀಷ್ ಸರಕಾರದ ವಿರುದ್ಧ ಆಕ್ರೋಶದಿಂದ ಮಾತನಾಡುತ್ತಾನೆ. ಅವನ ಈ ಮಾತುಗಳು ಆತನಲ್ಲಿರುವ ನ್ಯಾಯದ ಹಂಬಲ ಮತ್ತು ಹೋರಾಟದ ಛಲಗಳನ್ನೇ ಪ್ರತಿಬಿಂಬಿಸುತ್ತವೆ.

ಮಗನ ಬಂಧನದ ವಿಷಯ ತಿಳಿದು ತಾಯಿ ನರಸವ್ವ, ಬುತ್ತಿ ತಂದು ಇನ್‌ಸ್ಪೆಕ್ಟರ್ ಅನುಮತಿ ಪಡೆದು ಊಟ ಮಾಡಿಸುವಾಗ ಲಕ್ಷ್ಮಣ ಅಲ್ಲಿಂದ ಪಲಾಯನ ಗೈದು ತನ್ನ ಗೆಳೆಯರೊಂದಿಗೆ ಬಾಳೀ ಹಳ್ಳದಲ್ಲಿ ಠಿಕಾಣಿ ಹೂಡುತ್ತಾನೆ. ಇದರ ಜಾಡು ಹಿಡಿದಿದ್ದ ಪೋಲಿಸರು ಜತ್ತ ಸಂಸ್ಥಾನದ ದಾದಾಸಾಹೇಬರೊಂದಿಗೆ ಅಲ್ಲಿಗೆ ಹೋದಾಗ ಅವರು ತಪ್ಪಿಸಿಕೊಳ್ಳಲು ಯತ್ನಿಸುತ್ತಾರೆ. ಆಗ ದಾದಾಸಾಹೇಬರು ಹೊಡೆದ ಗುಂಡು ಮಾರುತಿಯನ್ನು ಬಲಿ ತೆಗೆದುಕೊಳ್ಳುತ್ತದೆ. ಆಗ ಲಕ್ಷ್ಮಣ ಶರಣಾಗುತ್ತಾನೆ.

ಶರಣಾದರು ಮೋಹನಲಾಲ ಅವನನ್ನು ಬಿಡವುದಿಲ್ಲ.

ಇನ್‌ಸ್ಪೆಕ್ಟರ್ ಲಕ್ಷ್ಮಣಕ್ಕಿಂತ ಮುಂದ
ಅವಸರ ಮಾಡಿ ಬಂದ ಬರಬೆಲೆ ಒಗೆದ
ಅವನ ತೊಡಿಯಾಗ
ರಾಮ ರಾಮ ಅಂತ ಲಕ್ಷ್ಮಣ ಬಿದ್ದ ಭೂಮಿ ಮ್ಯಾಗ

ಹೀಗೆ ಶರಣು ಬಂದ ಲಕ್ಷ್ಮಣನನ್ನು ಮೋಹನಲಾಲ ಭರ್ಜಿಯಿಂದ ಹೊಡೆದು ಕೆಳಗುರು ಳಿಸುತ್ತಾನೆ. ಇದನ್ನು ಪ್ರಶ್ನಿಸಿದ ತಾಯಿಯನ್ನು ಕಲಾಲ ಬೂಟುಗಾಲಿನಿಂದ ಒದೆಯುತ್ತಾನೆ. ಆಗ ಕ್ರೋಧಗೊಂಡ ಲಕ್ಷ್ಮಣ "ನಿನ್ನ ಒದ್ದವನ ಎದೆ ಸೀಳಿ ಅವನ ರಕ್ತದಿಂದ ನಿನ್ನ ಪಾದ ತೊಳೆಯುವೆ"ನೆಂದು ತಾಯಿ ಪಾದ ಮುಟ್ಟಿ ಪ್ರತಿಜ್ಞೆ ಮಾಡುತ್ತಾನೆ. ಗಾಯಗೊಂಡ ಲಕ್ಷ್ಮಣನನ್ನು ಜತ್ತಿಗೆ ಒಯ್ದು ಅವನ ಗಾಯಕ್ಕೆ ಮುಲಾಮು ಹಾಕಿ ಜೈಲು ಸೇರಿಸುತ್ತಾರೆ. ಆಗ ಅಳಿಯಂದಿರು ತುರಗ ಮುರಿದು ಲಕ್ಷ್ಮಣನನ್ನು ಬಿಡಿಸಿಕೊಂಡು "ಯಾವ ಗಂಡಸ ಮಗಾ ಇದ್ದರ ಹಿಡಿಬೇಕ ನಮಗ" ಎಂದು ಪೇಟೆ ನಡುವೆ ಸಾರುತ್ತಾ ಹೋಗುತ್ತಾರೆ. ಬೆನ್ನುಹತ್ತಿ ಬಂದ ಪೋಲಿಸರ ಕುದುರೆಗಳ ಕಾಲುಗಳನ್ನು ಕಲ್ಲು

ಒಗೆದು ಮುರಿದು ಅವರನ್ನು ಕೆಡವಿ ಅಲ್ಲಿಂದ ಓಡಿ ಹೋಗುವಂತೆ ಮಾಡುತ್ತಾರೆ. ಅಳಿಯಂದಿರು ಉಳಿದ ಪೋಲೀಸರನ್ನು ಸೋಲಿಸಿದರೆ ಲಕ್ಷ್ಮಣ ಇನ್‌ಸ್ಪೆಕ್ಟರ್ ಮೋಹನಲಾಲನ್ನು ಸೋಲಿಸುತ್ತಾನೆ. ಆಗ ಲಕ್ಷ್ಮಣ ಮತ್ತು ಮೋಹನಲಾಲನ ನಡುವೆ ಕೆಳಗಿನಂತೆ ಸವಾಲುಗಳೇರ್ಪಡುತ್ತವೆ.

ಇನ್‌ಸ್ಪೆಕ್ಟ್ರ ಆವಾಗ ಅಂತಾನ
ನಾಳೆಗೆ ಬರತೇನ ಹುಷಾರಾ ಇರನೀನು
ಗುಡ್ಡದ ಒಳಗ
ನಿನ್ನ ಹಿಡಿಯದಿದ್ದರೆ ಹೆಂಗಸಂತ ಕರಿಯೊ ಲಕ್ಷ್ಮಣ ನನಗೆ
ಲಕ್ಷ್ಮಣ ತಿರುಗಿ ಹೇಳುತ್ತಾನೆ.
ರಾತರಿ ಬರತೀನಿ ಹುಷಾರ ಇರೋ ನೀನು
ಚಾವಡಿಯ ಒಳಗ
ಈ ಮಾತು ಸುಳ್ಳಲ್ಲ ಗಂಟ ಹಾಕೊ ಪದರಾಗ

ಹೀಗೆ ನಾಳೆ ನಿನ್ನನು ಹಿಡಿಯಲು ಬರುತ್ತೇನೆಂದ ಮೋಹನಲಾಲನಿಗೆ ನಾನು ಇಂದೇ ಬರುತ್ತೇನೆ ಹುಷಾರಿರು ಎಂದು ಪ್ರತಿ ಸವಾಲು ಹಾಕುತ್ತಾನೆ.

ಹತನಾದ ಗೆಳೆಯ ಮಾರುತಿಯ ತಂದೆ ಇಟ್ಟ ಬಂಗಾರವನ್ನು ಕೊಡು ಎಂದು ಸಿದ್ಧಯ್ಯನ ಹತ್ತಿರ ಗೌರವಿಂದ ಬೇಡಿಕೊಳ್ಳುತ್ತಾನೆ. ಸಿದ್ಧಯ್ಯ ನಿರಾಕರಿಸಿದಾಗ ಅವನ ಮನೆ ದರೋಡೆ ಮಾಡಿ ಬಂಗಾರ ತಂದು ಗೆಳೆಯನ ತಂಗಿ ಮದುವೆ ಮಾಡುತ್ತಾನೆ. ದರೋಡೆ ವೇಳೆ ಅಳಿಯಂ ದಿರು ಸಿದ್ಧಯ್ಯನ ಹೆಂಡತಿಯ ಮೇಲಿನ ಒಡವೆಗಳನ್ನು ಕಿತ್ತುಕೊಳ್ಳಲು ಅವಳನ್ನು ಮುಟ್ಟಿದಾಗ ಅವರ ಕೈ ಕತ್ತರಿಸಲು ಮುಂದಾಗುತ್ತಾನೆ. ಹೀಗೆ ಮೋಸ ಮಾಡುವ ಶ್ರೀಮಂತರನ್ನು ದೋಚಿ ಬಡವರಿಗೆ ಸಹಾಯ ಮಾಡಿ ಬಡವರ ಬಂಧುವಾಗಿ, ಹೆಣ್ಣುಮಕ್ಕಳ ಬಗ್ಗೆ ಗೌರವ ತೋರಿಸಿ ಪರನಾರೀ ಸಹೋದರನಾಗಿ ಲಕ್ಷ್ಮಣ ಜನತೆಯ ಮನದಲ್ಲಿ ಗೌರವದ ಸ್ಥಾನ ಪಡೆಯುತ್ತಾನೆ.

ಬಾವಿಯಲ್ಲಿ ಬಿದ್ದು ಪೊಲೀಸರ ವಶವಾದ ಅಳಿಯನನ್ನು ಬಿಡಿಸಲು ಹೋಗಿ ಲಕ್ಷ್ಮಣ ಮತ್ತೊಮ್ಮೆ ಜೈಲು ಪಾಲಾಗುತ್ತಾನೆ. ಬೆಳಗಾವಿಯ ಜೈಲು ಸೇರಿದ ಆತ ಹತ್ಯಾರದಿಂದ ಜೈಲು ಕಂಬಿ ಕತ್ತರಿಸಿ ಪಾರಾಗಿ ಅಲ್ಲಿಂದ ಬರುವಾಗ ಮತ್ತೆ ಹುಲ್ಯಾಳದಲ್ಲಿ ದರೋಡೆ ಮಾಡಿಕೊಂಡು ಬರುತ್ತಾನೆ. ಆಗ ಇವರನ್ನು ಬೆನ್ನಟ್ಟಿ ಬಂದು ಇವರೊಂದಿಗೆ ಹೋರಾಟಕ್ಕಿಳಿದ ಮೋಹನಲಾಲ್ ಕಲಾಲನ ಪಿಸ್ತೂಲಿನ ಗುಂಡುಗಳು ಖಾಲಿಯಾಗುತ್ತವೆ. ನಿರಾಯುಧನಾ ದವನ ಮೇಲೆ ಕೈ ಮಾಡುವುದು ತಪ್ಪೆಂದು ಲಕ್ಷ್ಮಣ ಹಿಂದೆಗೆದಾಗ ಇದೇ ಅವಕಾಶವೆಂದು ಕಲಾಲ ಲಕ್ಷ್ಮಣನ ಮೇಲೆ ಆಕ್ರಮಣ ಮಾಡುತ್ತಾನೆ. ಇದರಿಂದ ಕ್ರೋದಗೊಂಡ ನರಸ್ಯಾ ಕೊಡಲಿಯಿಂದ ಕಲಾಲನನ್ನು ಕೊಚ್ಚಿ ಅವನ ರಕ್ತದಿಂದ ಲಕ್ಷ್ಮಣನ ಪಾದ ತೊಳೆದು ಮಾವನ ಪ್ರತಿಜ್ಞೆಯನ್ನು ಈಡೇರಿಸುತ್ತಾನೆ. ಯುದ್ಧ ನಿಯಮ ಮೀರಿದ ಕಲಾಲ ನರಸ್ಯಾನ ಕೋಪಕ್ಕೆ ಬಲಿಯಾಗುತ್ತಾನೆ.

**ಲಕ್ಷ್ಮಣನ ಅಂತ್ಯ**

ಮೋಹನಲಾಲನನ್ನು ಕೊಂದ ಲಕ್ಷ್ಮಣ ಅಂಗ್ರೇಜಿ ಸರಕಾರದಿಂದ ತಪ್ಪಿಸಿಕೊಳ್ಳಲು ಬೀಳಗಿ ತಾಲೂಕಿನ ನಾಗರಾಳದ 'ಕಪ್ಪರ ಪಡಿಯವ್ವನ ಗುಡ್ಡವನ್ನು ಸೇರುತ್ತಾನೆ. ಅಲ್ಲಿಗೆ ಹತ್ತಿರದ ಯಡಹಳ್ಳಿ ತಾರಾಚಂದ ಸೇಡಬೆಯ ಮನೆ ದರೋಡೆ ಮಾಡಿ, ಅವನ ಹತ್ತಿರ ಬಡವರು ಅಡವಿಟ್ಟ ಹೊಲ ಮನೆ ಪತ್ರಗಳನ್ನು ಸುಟ್ಟು ನಾಶಗೊಳಿಸಿ ಅವನ ಹಣ ಬಂಗಾರ ವನ್ನು ಬಡವರಿಗೆ ಹಂಚುತ್ತಾನೆ. ಈ ಮೂಲಕ ಬಡವರ ಕಷ್ಟಗಳನ್ನು

ನಿವಾರಿಸುತ್ತಾನೆ. ಇವನನ್ನು ಭೇಟಿಯಾದ ಜಮಖಂಡಿ ಧಣಿಯರು ಇವನ ಸಾಹಸಗಳನ್ನು ಮೆಚ್ಚಿ ಇವನಿಗೆ ಪಿಸ್ತುಲನ್ನು ಬಹುಮಾನವಾಗಿ ನೀಡುತ್ತಾರೆ.

ಬೇಡ ಸಮುದಾಯಕ್ಕೆ ಸೇರಿದ ತೆಗ್ಗಿಯ ವೆಂಕನಗೌಡರು ಲಕ್ಷ್ಮಣನ ಧೈರ್ಯ, ಸಾಹಸ ಗಳನ್ನು ಕೇಳಿ ಅವನನ್ನು ಭೇಟಿಯಾಗಲು ಬರುತ್ತಾರೆ. ಇವನ ಸಹಾಯ ಗುಣ ಮೆಚ್ಚಿ 'ಹಲಗಲಿಯ ಜಡಗಾಬಾಲ'ರ ನಂತರ ನಮ್ಮ ಬ್ಯಾಡರ ಕುಲಕ್ಕೆ ಕೀರ್ತಿ ತಂದವನೆಂದು ಹೇಳಿ ಬಹುಮಾನವಾಗಿ ಆತನಿಗೆ ಕಾಡುತೋಗಿನ ಬೆಲ್ಟ್‌ನ್ನು ನೀಡಿ ಅವನ ತಂಡಕ್ಕೆ ಬುತ್ತಿ ವ್ಯವಸ್ಥೆ ಮಾಡುತ್ತಾರೆ. ವೆಂಕನಗೌಡರು ಕೊಟ್ಟ ಆ ಬೆಲ್ಟು ಲಕ್ಷ್ಮಣನ ಪಾಲಿನ ಮೃತ್ಯುವಾಗಿ ಪರಿಣಮಿಸುತ್ತದೆ. ಒಮ್ಮೆ ನರಸ್ಯಾ ಕಾಡಿನಲ್ಲಿ ಈ ಬೆಲ್ಟನ್ನು ಕಳೆದುಕೊಂಡು, ಅದು ಲಕ್ಷ್ಮಣ ನನ್ನು ಹಿಡಿಯಲು ಬಂದ ಇಂಗ್ಲೀಷ್ ಅಧಿಕಾರಿ ಗಾರ್ಮನ್ ಕೈಗೆ ಸಿಗುತ್ತದೆ. ಇದರ ಮೇಲಿರುವ ಹೆಸರನ್ನು ನೋಡಿ ಗಾರ್ಮನ್ ವೆಂಕನಗೌಡನನ್ನು ಕರೆದು ವಿಚಾರಿಸಿ ನಿಜ ಸಂಗತಿ ತಿಳಿಯುತ್ತಾನೆ. ಗಾರ್ಮನ್ ವೆಂಕನಗೌಡನಿಗೆ ಲಕ್ಷ್ಮಣನನ್ನು ನೀನು ಜೀವಂತವಾಗಿ ಹಿಡಿದು ಕೊಡು ಅಥವಾ ಅವನನ್ನು ಕೊಲ್ಲು, ಇಲ್ಲದಿದ್ದರೆ ನಿನ್ನ ವತನೀ ವೈಭವವನ್ನೆ ಕಸಿದುಕೊಳ್ಳುತ್ತೇನೆಂದು ಬೆದರಿಕೆ ಹಾಕುತ್ತಾನೆ. ಇವನ ಬೆದರಿಕೆ ಮತ್ತು ವತನೀ ವೈಭವದ ಆಸೆಗೆ ಬಿದ್ದ ವೆಂಕನಗೌಡ ಲಕ್ಷ್ಮಣನನ್ನು ಕೊಲ್ಲುವ ನಿರ್ಧಾರಕ್ಕೆ ಬರುತ್ತಾನೆ.

ವೀರನಾದ ಲಕ್ಷ್ಮಣನನ್ನು ಸೆರೆಹಿಡಿಯುವುದು ಅಥವಾ ಹೋರಾಡಿ ಕೊಲ್ಲುವುದು ಅಸಾಧ್ಯವೆಂದರಿತ ವೆಂಕನಗೌಡರು ಮತ್ತು ವಾಲೀಕಾರ ಶಿವಪ್ಪ ಕೂಡಿ ಅವನನ್ನು ಅನ್ಯಾಯ ದಿಂದ ಕೊಲ್ಲುವ ತಂತ್ರ ರೂಪಿಸುತ್ತಾರೆ. ದೇವರ ಹರಕೆಯ ನೆಪ ಹೇಳಿ ವೆಂಕನಗೌಡ ಲಕ್ಷ್ಮಣ ಮತ್ತವನ ಪರಿವಾರವನ್ನು ಕಷ್ಟರಪಡಿಯವ್ವನ ಗುಡ್ಡಕ್ಕೆ ಊಟಕ್ಕೆ ಕರಿಸುತ್ತಾರೆ.

ಮೊದಲೇ ಸಂಚುಮಾಡಿ 'ಪಾಮಲಿ ಸೋಮ'ನನ್ನು ಲಕ್ಷ್ಮಣನಿಗೆ ಗುಂಡು ಹೊಡೆಯಲು ಸಿದ್ದಗೊಳಿಸಿ ಲಕ್ಷ್ಮಣನನ್ನು ಊಟಕ್ಕೆ ಕೂಡಿಸುತ್ತಾರೆ. ಆತ ಊಟಕ್ಕೆ ಕುಳಿತಾಗ ವಾಲೇಕಾರ ಶಿವಪ್ಪ ಸೋಮನಿಗೆ ಸೂಚನೆ ನೀಡುತ್ತಾನೆ. ಆತ ಲಕ್ಷ್ಮಣನಿಗೆ ಗುಂಡು ಹೊಡೆದು ಕೆಳಗುರುಳಿ ಸುತ್ತಾನೆ. ಲಕ್ಷ್ಮಣ ಕೆಳಗೆ ಬೀಳುವ ಸ್ಥಿತಿಯನ್ನು ಲಾವಣಿಯಲ್ಲಿ ಕಾಣಬಹುದು.

ಮೊದಲ ಸೂಚ ಇತ್ತ ವಾಲಿಕಾರ ಸೋಮಾ ಹೊಡೆದಾನು ||
ಪಕಡ್ಯಾಗ ಬಡಿದಿತೋ ಗುಂಡ
ನಾಯಿಕ ಓಡಿದಾ ಆತೋ ಒಳೇ ಕೆಡ
ಲಕ್ಷ್ಮಣ ಬಿದ್ದಾನು ||
ಮೋಸ ಮಾಡಿ ಅಭಿಮನ್ಯು ಹೊಡದಂಗಾತು ಕೌರವರು |

ಸಮಾನತೆಗಾಗಿ ಅನ್ಯಾಯದ ವಿರುದ್ಧ ಹೋರಾಡಿದ ಲಕ್ಷ್ಮಣನನ್ನು ಅನ್ಯಾಯದಿಂದ ಕೊಲ್ಲುತ್ತಾರೆ. ಮೃತನಾದ ಲಕ್ಷ್ಮಣನ ಕಳೆಬರವನ್ನು ಬೀಳಗಿಗೆ ತಂದು ಅಂತ್ಯಕ್ರಿಯೆ ಮಾಡಲಾಗುತ್ತದೆ.

**ಲಕ್ಷ್ಮಣನ ವ್ಯಕ್ತಿತ್ವ**

ಲಕ್ಷ್ಮಣ ಅನ್ಯಾಯಕಾರರಿಗೆ ಎಷ್ಟು ಕಠೋರನೋ, ಒಳ್ಳೆ ಜನರಿಗೆ ಅಷ್ಟೇ ಮೃದು ಸ್ವಭಾವದ ವ್ಯಕ್ತಿಯಾಗಿದ್ದ. ತಾಯಿ, ಹೆಂಡತಿ, ಗೆಳೆಯರನ್ನು ಅತಿಯಾಗಿ ಪ್ರೀತಿಸುತ್ತಾ ಈತ ಹೆಣ್ಣುಮಕ್ಕಳ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದ. ಬಡವರ ನೋವುಗಳಲ್ಲಿ ಭಾಗಿಯಾಗಿ ಅವನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದ. ಗೆಳೆಯ ನರಸ್ಯಾ ಸತ್ತಾನ ಆತ "ಎತ್ತ ಹೋದ್ಯೋ ನರಸ್ಯಾ ಕೋಮಲಾ ದಿನಾ ತಿನ್ನಾವ ಕೊಬ್ಬರಿ ಬೆಲ್ಲಾ

ಇಂದ ಯಾರ ಕುಡಸತಾರ ಹಾಲ" ಎಂದು ಮಗುವನ್ನು ಕಳೆದುಕೊಂಡ ತಾಯಿಯಂತೆ ರೋಧಿಸುವ ಪರಿ ಲಕ್ಷ್ಮಣನ ಪ್ರೀತಿಯ ಮುಖವನ್ನು ನಮಗೆ ತೋರಿಸುತ್ತದೆ.

ಇಂಗ್ಲೀಷ ಸರಕಾರದಲ್ಲಿ ದರೋಡೆಕೋರನೆಂದು ಲಕ್ಷ್ಮಣನ ಹೆಸರು ದಾಖಲಾದರೂ ಜನಮಾನಸದಲ್ಲಿ ಅವನೊಬ್ಬ ಹೋರಾಟಗಾರನಾಗಿಯೇ ಸ್ಥಾನ ಪಡೆದಿದ್ದಾನೆ. ಸಂಪತ್ತು ಸರ್ವರಲ್ಲೂ ಸಮಾನವಾಗಿ ಹಂಚಿಕೆಯಾಗಬೇಕೆಂಬ ಉದ್ದೇಶದಿಂದ ಹೋರಾಡಿದ ಆತ ಸಂಪತ್ತನ್ನು ಕ್ರೋಢೀಕರಿಸಿ ಅನ್ಯಾಯದಿಂದ ಬಡವರ ಹೊಲಮನೆಗಳನ್ನು ಒತ್ತೆಹಾಕಿಸಿ ಕೊಂಡು, ಶ್ರೀಮಂತರ ಮನೆಗೆ ನುಗ್ಗಿ ದಾಖಲೆಪತ್ರಗಳನ್ನು ನಾಶಗೊಳಿಸಿ ಅವರ ಮನೆ ದರೋಡೆ ಮಾಡಿ ಅವರ ಪಾಲಿನ ಸಿಂಹಸ್ವಪ್ನವಾಗಿ, ಬಡವರ ಪಾಲಿನ ದೇವರಾದ. ಇಂತಹ ಲಕ್ಷ್ಮಣ ಗತಿಸಿ ೮೫ ವರ್ಷವಾದರೂ (೨೨ ಜುಲೈ ೧೯೨೨) ಜನರ ಮನದಲ್ಲಿ ಆತ ಇನ್ನು ಬದುಕಿದ್ದಾನೆ. ಅವನ ಶೌರ್ಯ ಸಾಹಸಗಳನ್ನು ಜನ ಇಂದಿಗೂ ಹಾಡಿ ಕೊಂಡಾಡುತ್ತಾರೆ. ಆದರೆ ಇಂತಹ ಲಕ್ಷ್ಮಣನ ಸರ್ವಸಮಾನತೆಯ ಕನಸು ಇಂದಿಗೂ ನನಸಾಗದಿರುವುದು ನಮ್ಮ ದುರ್ದೈವ.

**ಗ್ರಂಥಋಣ**


೧. ಫ್ಲೀಟರು ಸಂಗ್ರಹಿಸಿದ ಐದು ಐತಿಹಾಸಿಕ ಲಾವಣಿಗಳು, ಸಂ. ಕ್ಯಾತನಹಳ್ಳಿ ರಾಮಣ್ಣ.

೨. ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ, ನಿಂಗಣ್ಣ ಸಣ್ಣಕ್ಕಿ.

೩. ಸಿಂದೂರ ಲಕ್ಷ್ಮಣ ರಂಗನಾಟಕ, ಕಂಠಿ ಹನಮಂತರಾಯ.

೪. ಬಾಡ ಹಾಕತೀವಿ ಡಪ್ಪಿನ ಮ್ಯಾಲ ತರಂಗ ೧, ಡಾ. ಸಂಗಮೇಶ ಬಿರಾದಾರ.

೫. ಸಮಾನತೆಗಾಗಿ ಹೋರಾಡಿದ ಹಳಿಯ ಹೈದ (ಲೇಖನ ವೀರೇಂದ್ರ ಶೀಲವಂತ, ಪ್ರಜಾವಾಣಿ, ಉತ್ತರ ಕರ್ನಾಟಕ, ೧೮.೭.೨೦೦೬).


* * *

## ೩೪. ಅವಮಾನ ಹಾಗೂ ಅಭಿಮಾನದ ನೆಲೆ

ಭಾರತವು ಮಾನವ ನಾಗರೀಕತೆಯ ತೊಟ್ಟಿಲುಗಳಲ್ಲೊಂದು. ಸಂಸ್ಕೃತಿಯು ಇತರ ಅನೇಕ ಜನತೆಗಳ ಸಂಸ್ಕೃತಿಗಳೊಂದಿಗೆ ನಿಕಟವಾಗಿ ಸಂಬಂಧಿಸಿದ ಅವುಗಳ ಬೆಳವಣಿಗೆಯ ಮೇಲೆ ಮಹತ್ವ ಹಾಗೂ ಸತ್ವಪೂರ್ಣ ಪ್ರಭಾವ ಬೀರಿದೆ. ಈ ಪರಸ್ಪರ ಸೃಷ್ಟಿಗೊಳಿಸುವ ಪ್ರತಿಕ್ರಿಯೆಯು ಅನೇಕ ಶತಮಾನಗಳಿಂದ ನಡೆದುಕೊಂಡು ಬಂದಿದ್ದರೂ ಭಾರತವು ತನ್ನ ಅನನ್ಯತೆಯನ್ನು ಕಾಯ್ದುಕೊಂಡಿದೆ. ಎಲ್ಲ ರಂಗಗಳಲ್ಲೂ ದೂರದ ದೇಶಗಳ ಸೃಜನಾತ್ಮಕ ಚಿಂತನೆಗೆ ಸ್ಪೂರ್ತಿನೀಡಿದೆ. ಪ್ರಪಂಚದ ಅನೇಕ ಇತರ ಭಾಗಗಳಲ್ಲಿ ಸಾಮಾಜಿಕ ಚಿಂತನೆಯ ಮೇಲೂ ಪ್ರಭಾವ ಬೀರಿದೆ.

ಈ ದೇಶದ ಮೇಲೆ ಅನೇಕ ಧರ್ಮೀಯರ ದಬ್ಬಾಳಿಕೆ, ಯುದ್ಧಗಳು, ಆಘಾತಗಳು ನಡೆದರೂ ಈ ಭಾರತ ಭೂಮಿ ತನ್ನ ತನವನ್ನು ಉಳಿಸಿಕೊಳ್ಳುವುದರೊಂದಿಗೆ ಅನೇಕ ಧರ್ಮೀಯರ ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನು ತನ್ನ ಗರ್ಭದಲ್ಲಿ ಜೀರ್ಣಿಸಿಕೊಂಡು ಮತ್ತೆ ಮತ್ತೆ ತಲೆ ಎತ್ತಿ ಎದ್ದು ನಿಂತಿದೆ. ಇಂತಹ ದೇಶ ಜಗತ್ತಿನ ಯಾವ ಮೂಲೆಯಲ್ಲಿಯೂ ಸಿಕ್ಕುವುದಿಲ್ಲ. ಮನುಕುಲಕ್ಕೆ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯ ಪರಿಕಲ್ಪನೆ ಮಾಡಿಕೊಟ್ಟಿದೆ. ಸುಮಾರು ಇನ್ನೂರು ವರ್ಷಗಳ ವಸಾಹತು ದಬ್ಬಾಳಿಕೆಗೆ ಒಳಗಾಗಿದ್ದರೂ ಭಾರತದ ಜನ ತಮ್ಮ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿದುಕೊಂಡು ಬರುವಲ್ಲಿ ಬಹು ಯಶಸ್ವಿಯಾಗಿದ್ದಾರೆ. ಕಳೆದ ಹಲವು ನೂರು ವರ್ಷಗಳ ಭಾರತದ

ಇತಿಹಾಸವು ವಸಾಹತು ಮತ್ತು ಸಾಮಂತಶಾಹಿ ದಬ್ಬಾಳಿಕೆಯಿಂದ ವಿಮೋಚನೆಗಾಗಿ ಅನೇಕ ಪೀಳಿಗೆಗಳು ನಡೆಸಿದ ಸುದೀರ್ಘ ಹಾಗೂ ವೀರ ಹೋರಾಟದ ಇತಿಹಾಸ ಈ ದೇಶಕ್ಕಿದೆ.

ಭಾರತದಲ್ಲಿ ಕ್ರಿ.ಶ. ೧೬೦೦ರಿಂದ ಪ್ರಾರಂಭವಾದ ತಮ್ಮ ಆಡಳಿತದಲ್ಲಿ ಬ್ರಿಟೀಷರು ಎಂದೂ ಕಾಣದ ಪ್ರತಿಭಟನೆಯನ್ನು ಕಂಡದ್ದು ೧೮೫೭ರ 'ಸಿಪಾಯಿದಂಗೆ'ಯಲ್ಲಿ. ಆ ದಂಗೆಯಿಂದ ಅಪಾರ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿದ್ದರಿಂದ ಬ್ರಿಟೀಷರು ಅದೇ ವರ್ಷ 'ನಿಶ್ಯಸ್ತ್ರೀಕರಣ ಕಾರ್ಯ್‌ದ'ಯನ್ನು ಜಾರಿಗೆ ತಂದ ಪರಿಣಾಮ ಈ ಕಾಯ್ದೆಯ ಪ್ರಕಾರ ಪ್ರಜೆಗಳು ಯಾವುದೇ ಬಗೆಯ ಆಯುಧಗಳನ್ನು ತಮ್ಮಲ್ಲಿ ಇಟ್ಟುಕೊಂಡರೆ ಆಗಿನ ಕಂಪನಿ ಸರ್ಕಾರಕ್ಕೆ ಸಾಕಷ್ಟು ಹಣವನ್ನು ಭರಣಾ ಮಾಡಿ ಲೈಸನ್ಸ ಪಡೆಯಬೇಕಿತ್ತು. ಇಲ್ಲವೆ ಸರ್ಕಾರಕ್ಕೆ ಆಯುಧಗಳನ್ನು ಒಪ್ಪಿಸಿ ರಹದಾರಿ ಪಡೆಯಬೇಕು. ಇದು ಆ ಕಾಯ್ದೆಯ ವ್ಯಾಖ್ಯಾನವಾಗಿತ್ತು.

ಬೇಡ ಸಮುದಾಯ ಹತಾಶಭಾವರಾಗಿ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಕಾರಣ ಯಾವುದೇ ಕಾಯ್ದೆಗಿಂತ ಅವರಿಗೆ ಬದುಕು ಮುಖ್ಯವಾಗಿತ್ತು. ಬ್ರಿಟೀಷರ ಆ ದೊಡ್ಡ ಸಾಮ್ರಾಜ್ಯಶಾಹಿಯ ವಿರುದ್ಧ ಪ್ರತಿಭಟನೆ ಸೂಚಿಸಿದ್ದೇ ದುಡಿದು ಬದುಕುವ ಬೇಡರ ಪ್ರಮುಖ ಸಾಧನೆ. ಹಲಗಲಿಯ ಬೇಡರ ಬಂಡಾಯವೆಂದೇ ಪ್ರಸಿದ್ದಿಪಡೆಯಿತು. ಆದರೆ ಇತಿಹಾಸ ಪುಟದಲ್ಲಿ ಕಾಣಿಸಿಕೊಳ್ಳದೇ ಇದ್ದುದು ಒಂದು ಇತಿಹಾಸದ ಕ್ರೂರ ವ್ಯಂಗ್ಯ.

ಹಲಗಲಿ ಬೇಡರವಾರಸುದಾರನಾಗಿ ಬೆಳೆದು ಬ್ರಿಟೀಷರ ವಿರುದ್ಧ ಎದ್ದು ನಿಂತವರಲ್ಲಿ ಸಿಂಧೂರ ಲಕ್ಷ್ಮಣನು ಪ್ರಮುಖನಾಗಿದ್ದಾನೆ. ಲಕ್ಷ್ಮಣನ ಕುರಿತಾಗಿ ಅವನ ಕುಟುಂಬದಲ್ಲಿ ಇತರರೆಂದರೆ ಹೆಂಡತಿ ಚಂದ್ರಿ ತಾಯಿ ನರಸವ್ವ ಇಬ್ಬರು ಅಕ್ಕಂದಿರಾದ ಸತ್ಯವ್ವ ಮತ್ತು ಸಕ್ರವ್ವ ಮಗ ಸಾಬಣ್ಣ ಹೀಗೆ ಇರುವ ಕುಟುಂಬಕ್ಕೆ ಲಕ್ಷ್ಮಣ ಮನೆ ಒಡೆಯ. ಲಕ್ಷ್ಮಣನ ಕಾಲಕ್ಕೆ ಸಿಂಧೂರ ಜತ್ತ ಸಂಸ್ಥಾನಕ್ಕೆ ಸೇರಿದ ಒಂದು ಗ್ರಾಮ. ಅದು ಮಹಾರಾಷ್ಟ್ರ ರಾಜ್ಯದ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿಗೆ ಒಳಪಟ್ಟಿತ್ತು. ಲಕ್ಷ್ಮಣನ ಕುರಿತಾಗಿ ನಾಲ್ಕಾರು ಜನ ನಾಟಕಕಾರರು ಬರೆದು ನಾಟಕವನ್ನು ಓದಿದಾಗ ಲಕ್ಷ್ಮಣನ ಬದುಕನ್ನು ಕುರಿತು ಯಾರೂ ಆಸಕ್ತಿಯಿಂದ ಅಭ್ಯಾಸ ಮಾಡಿಯಾಗಲಿ ಅಥವಾ ಅವನ ಜೀವನ ವೃತ್ತಾಂತದ ಸುತ್ತ ಸಂಶೋಧನೆಯಾಗದೇ ಇರುವುದು ಒಂದು ಬಹುದೊಡ್ಡ ದುರಂತ. ಯಾರದೇ ಬದುಕಿನ ನೈಜತೆ ತಿಳಿಯದೇ ಅಂತೆ ಕಂತೆಗಳ ಆಧಾರದ ಮೇಲೆ ಸಾಹಿತ್ಯ ಸೃಷ್ಟಿಸುವುದು ಸರಿಯಾದ ಅಭ್ಯಾಸವಾಗದೇ ಹೋಗಬಹುದು. ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ ನಾಗರಾಳದ ಖ್ಯಾತ ನಾಟಕಕಾರರಾದ ಶ್ರೀ ಕಂಠಿ ಹನುಮಂತರಾಯರು ತಮ್ಮ ಸಿಂಧೂರ ಲಕ್ಷ್ಮಣ ನಾಟಕ ಕೃತಿಯಲ್ಲಿ ತಾವು ಸ್ವತಃ ಸಿಂಧೂರಿಗೆ ಹೋಗಿ ಅಲ್ಲಿನ ಅವರ ತಂದೆಯವರಾದ ಮಹಾದೇವಪ್ಪ ಗೌಡರೇ ಲಕ್ಷ್ಮಣನ ಕಾಲಕ್ಕೆ ಸಿಂಧೂರಿನ ಪೊಲೀಸ್ ಪಾಟೀಲ್‌ರಾಗಿದ್ದರೆಂದು ಹಾಗೂ ಲಕ್ಷ್ಮಣನ ಒಡನಾಡಿಯಾದ ಶ್ರೀ ಪರಸಪ್ಪ ಆರೇರ ಇವರನ್ನು ಸಂದರ್ಶಿಸಿ ಅವರಿಂದ ಮಾಹಿತಿ ಸಂಗ್ರಹಿಸಿದ್ದು, ಲಕ್ಷ್ಮಣನಿಗೆ ತಂಗಿಯೇ ಇರಲಿಲ್ಲ. ಅವನಿಗೆ ಇಬ್ಬರು ಸತ್ಯವ್ವ ಮತ್ತು ಸಕ್ರವ್ವವೆಂಬ ಅಕ್ಕಂದಿರು. ಸತ್ಯವ್ವನ ಮಗನೇ ನರಸಪ್ಪ ಇನ್ನೊಬ್ಬಾಕೆಯನ್ನು ನೇಸೂರಿಗೆ ಕೊಟ್ಟಿದ್ದರು ಅವಳ ಮಗಳೇ ಚಂದ್ರವ್ವ ಲಕ್ಷ್ಮಣನ ಹೆಂಡತಿ. ಹೀಗೆ ಹೆಂಡತಿ ಇದ್ದರೂ ಇಲ್ಲದ ಕ್ರೈಸ್ತ ಕನ್ಯೆಯೋರ್ವಳನ್ನು ಸೃಷ್ಟಿಸಿಕೊಂಡು ಲಕ್ಷ್ಮಣನ ಹೆಂಡತಿಯನ್ನು ಕೈಬಿಟ್ಟು ಅವನ ಚರಿತ್ರೆಯ ಬಗೆಗೆ ಸಂಶಯಮೂಡಿಸುವುದು ನೈಜ ಇತಿಹಾಸವಾಗದು.

ಲಕ್ಷ್ಮಣನ ಬದುಕಿನ ಕಾಲವು ಪ್ರಥಮ ಜಾಗತಿಕ ಯುದ್ಧ ನಡೆದಾಗ ಮುಕ್ತಾಯಗೊಂಡ ಕಾಲವೆನ್ನುತ್ತಾರೆ. ಅವನ ಅಂತ್ಯ ಕ್ರಿ.ಶ. ೧೯೨೧ರಲ್ಲಿ ಎಂದಾಗ ಓರ್ವ ಮನುಷ್ಯನ ಜೀವಿತಾ ವಧಿಯು ೬೦ ವರ್ಷ ಎಂದರೆ ೧೯೬೦ರಿಂದ ೧೯೨೧ರ ಅವಧಿಯು ಅವನು ಜೀವಿಸಿದ ಕಾಲವೆನ್ನಬಹುದು. ಆ ಕಾಲದಲ್ಲಿ ಸಿಂಧೂರಿನ ವಾಲೀಕಾರನಾಗಿದ್ದನೆಂದು ತಿಳಿಸುತ್ತಾರೆ. ಲಕ್ಷ್ಮಣನು ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದವನೇ ಅಥವಾ ದರೋಡೆಕೋರನೇ ಎಂದು ತಿಳಿಸುವುದು ಕಷ್ಟದ ಕೆಲಸ. ಹೀಗಾಗಿ ಅವನ ಬದುಕನ್ನು ಕುರಿತು ಆಳವಾದ ಅಧ್ಯಯನದಿಂದ ಸಂಶೋಧನೆಯ ಫಲವಾಗಿ ಲಕ್ಷ್ಮಣನ ಬದುಕನ್ನು ನಿರ್ಧರಿಸಬಹುದೇ ವಿನಃ ಕೇವಲ ಜಾನಪದಗಳ, ಹಾಡುಗಳ ಮುಖಾಂತರ ಸಾಧ್ಯವಾಗದು. ಇಂದಿಗೂ ನಾಗರಾಳ ಗುಡ್ಡದಲ್ಲಿ ಗುಹೆಯಿದ್ದ ಲಕ್ಷ್ಮಣನು ನಾಗರಾಳಗುಡ್ಡದಲ್ಲಿ ನಿರಾಳವಾಗಿ

ಓಡಾಡುತ್ತಿದ್ದನೆಂದು, ತೆಗ್ಗಿ ನಾಯಕ (ವೆಂಕಪ್ಪಗೌಡ) ಹಾಗೂ ವಾಲೀಕಾರ ಶಿವಪ್ಪನ ಕುತಂತ್ರದಿಂದ ಲಕ್ಷ್ಮಣನು ಸಾಯುವುದು ವಾಲೀಕಾರ ಸೋಮನ ಬಂದೂಕಿನ ಗುಂಡಿನಿಂದ ಎಂದು ಕೃತಿಕಾರರು ನಾಟಕ ರಚಿಸಿದ್ದು ಕಂಡುಬರುತ್ತದೆ. ಲಕ್ಷ್ಮಣನ ಗೆಳೆಯನೆಂದು ಹೇಳುವ ಜಾನಮಟ್ಟಿಯ ಚಿಗರಿ ಯಮನಪ್ಪನಿಂದ ವಿಷಯ ಸಂಗ್ರಹಿಸಿದೆ ಎಂದೂ ಹೇಳುತ್ತಾರೆ. ನಾಟಕ ಪೂರ್ವಾರ್ಧಕ್ಕೆ ಬೇಕಾಗುವಷ್ಟು ವಿಷಯವನ್ನು ಸಿಂಧೂರಿನಲ್ಲಿ ಸಂಗ್ರಹಿಸಿದೆ ಇನ್ನು ಲಕ್ಷ್ಮಣನ ಜೀವನದ ಉತ್ತರಾರ್ಧವು ನೆಡೆದದ್ದು ನಾಗರಾಳದ ಸುತ್ತಲಿನ ಪ್ರದೇಶದಲ್ಲಿ ತೆಗ್ಗಿ ವಾಲೀಕಾರ ಶಿವಪ್ಪ ನಿಂದ ಕೇಳಿ ತಿಳಿದುಕೊಂಡೆ ಎಂದಿದ್ದಾರೆ. ಸಿಂಧೂರ ಲಕ್ಷ್ಮಣನ ಕುರಿತಾಗಿ ಲೇಖಕರು ಗ್ರಾಮದ ಸುತ್ತಲಿನ ಪ್ರದೇಶದಲ್ಲಿ ಸುತ್ತಾಡಿದ್ದು ಅಲ್ಲದೇ ಅನೇಕರಿಂದ ವಿಷಯ ಸಂಗ್ರಹಿಸಿದ್ದು ಇದು ಸ್ಪಷ್ಟ ಸಂಶೋಧನಾತ್ಮಕ ಸತ್ಯವಾದ ಸಂಗತಿಯನ್ನೇ ಅವರು ಕೇಳಿ ತಿಳಿದು ಲಕ್ಷ್ಮಣನ ಇತಿಹಾಸದ ವೃತ್ತಾಂತ ಕುರಿತು ನಾಟಕ ರಚಿಸಿದ್ದಾರೆ.

ಪ್ರಕೃತಿಯಲ್ಲಿ ಒಂದು ಕಟ್ಟಿರುವಿ ಮುಟ್ಟಿದರೆ ಅದು ಮನುಷ್ಯನನ್ನು ಕಚ್ಚಿ ಹಿಡಿದು ಬಿಡುತ್ತದೆ. ಆಕಸ್ಮಾತ್ ಇರುವೆ ಹಿಡಿದು ಜಗ್ಗಿದರೆ ಅದರ ದೇಹ ಕಿತ್ತು ಕೈಗೆ ಬಂದರೂ ಅದರ ಚಂಡು ಮಾತ್ರ ಮನುಷ್ಯನನ್ನು ಕಚ್ಚಿ ಹಿಡಿದಿರುತ್ತದೆ. ಅಂಥ ಚಿಕ್ಕ ಇರುವೆಗೂ ತನ್ನ ಅಸ್ತಿತ್ವ ಹಾಗೂ ಜೀವನ ಉಳಿಸಿಕೊಳ್ಳಲು ಹೋರಾಡುತ್ತಿರುವಾಗ ಇನ್ನು ಎಲ್ಲ ಪ್ರಾಣಿಗಳಲ್ಲಿ ಮನುಷ್ಯ ಪ್ರಾಣಿ ಶ್ರೇಷ್ಠವೆನ್ನುವಾಗ ತನ್ನ ಬದುಕಿನ ಅಸ್ತಿತ್ವಕ್ಕೆ ಹೋರಾಡುವದು ಸಹಜ. ಪ್ರಕೃತಿಯ ಗುಣ ಧರ್ಮವೆನ್ನಬಹುದು. ಹಾಗೆಯೇ ಲಕ್ಷ್ಮಣನೊಬ್ಬ ಹಿಂದುಳಿದ ಸಮುದಾಯ ದಲ್ಲಿ ಜನಿಸಿದರೂ ಅವನಲ್ಲಿ ಹರಿಯುತ್ತಿದ್ದ ರಕ್ತ ಸ್ವಾಭಿಮಾನದ್ದು. ಅವನು ಯಾರ ಹಂಗಿ ನಲ್ಲಾಗಲೀ ಯಾರ ಛತ್ರ ಚಾಮರಗಳಲ್ಲಾಗಲಿ ಬದುಕಿದ ವ್ಯಕ್ತಿಯಾಗಿರಲಿಲ್ಲವೆಂಬುದು ಅವನ ದೈನಂದಿನ ಬದುಕನ್ನು ತಿಳಿದಾಗ ನಮಗೆ ಸಹಜವಾಗಿ ಅವನ ಸಂಘರ್ಷದ ಬದುಕು ಯಾವ ಅವಮಾನವನ್ನಾಗಲಿ ಸಹಿಸುತ್ತಿರಲಿಲ್ಲ. ಅವನ ಸೋದರ ಅಳಿಯಂದಿರಾದ ನರಸ್ಯಾ, ಸಾಬು, ಗೋಪಾಲಿ ಹೊಟ್ಟೆಗೆ ಏನೂ ಸಿಗದಾಗ ಹಸಿವು ಸಂಕಟ ತಾಳಲಾರದೇ ದರೋಡೆ ಮಾಡಿದ ಸುದ್ದಿ ಗೊತ್ತಾಗಿ ಲಕ್ಷ್ಮಣ ಬೆಂಕಿಯಾಗಿ ಹೊಟ್ಟೆಗೆ ಹಿಟ್ಟಿಲ್ಲ ಅಂದ್ರ ಉಪವಾಸ ಬಿದ್ದು ಸಾಯಬೇಕು. ಬೇರೆಯವರ ತಲೆ ಒಡೆದು ಹೊಟ್ಟೆ ತುಂಬಿಸಿಕೊಳ್ಳುವ ವಿಚಾರ ಒಳ್ಳೆಯದಲ್ಲ ಎಂದು ಕಿಡಿಕಾರಿ ಹಸಿದೀನಿ ಅಂತ ಇನ್ನೊಬ್ಬರ ಕೈಯ್ಯಾಗಿನ ರೊಟ್ಟಿ ಕಸಗೊಳ್ಳು ವುದು ತಪ್ಪು ಎಂದು ಹೇಳುವಾಗ ಅವನ ಹೆಂಡತಿ ಚಂದ್ರಿ, ಬರಗಾಲದಾಗ ಬಡವರು ಹಸಿದು ವಕವಕ ಬಾಯಿಬಿಡುವಾಗ ಸುಖಾ ಉಂಡು ತಿಂದು ತೇಗುತ್ತಿರುವ ಹಣದ ಮದದಿಂದ ಬೀಗುತ್ತಿರುವ ಸಿರಿವಂತರ ಮನೆ ದರೋಡೆ ಮಾಡಿ ಬಡವರ ಹೊಟ್ಟೆಗೆ ಹಾಕುವುದು ತಪ್ಪಲ್ಲವೆಂದು ವಾದಿಸಿದಾಗ ಲಕ್ಷ್ಮಣನು ಆವೇಶದಿಂದ ಜಿಗಿದು ಗೋಡೆಗೆ ತೂಗು ಹಾಕಿದ ಕೊಡ್ಲಿ ತೆಗೆದುಕೊಂಡು ಭೀಮರಾಯನ ಅಪ್ಪಣ ಆತು ಲಕ್ಷ್ಮಣನ ಜೀವನದ ಹೊಳೆ ಹರಿಯುವ ದಿಕ್ಕು ಬದಲಾತು ಬ್ರರಲೇ ಎಂದು ಭರ್ರ್ನೇ ಮೂವರು ಜೊತೆ ಸೇರಿ ಲಕ್ಷ್ಮಣನ ಕೂಡ ಹೊರಡುತ್ತಾರೆ. ಇಲ್ಲಿ ಬದುಕುವುದಕ್ಕಿಂತ ಸೊಕ್ಕಿನ ಸಿರಿವಂತರನ್ನು ಕಕ್ಕಿಸಿ ಬಡವರ ಒಡಲಿಗೆ ತುತ್ತುಹಾಕಿದರೆ ಯಾವುದೇ ಪಾಪ ಬರಲಾರದು. ಇಲ್ಲಿ ಸ್ವಾಭಿಮಾನ ಕಾಡುತ್ತಿದೆ.

ಊರ ಸಿರಿವಂತ ಸಿದ್ದಯ್ಯನ ಜೊತೆ ಮಾತಿಗೆ ಮಾತು ಬೆಳೆದು ನೀನೊಬ್ಬನು ತಪ್ಪಿ ಹುಟ್ಟೇದಿ ನಮ್ಮೂರಾಗ ಧರ್ಮರಾಯನಂಗೆ ಎನ್ನುವ ಸಿದ್ದಯ್ಯನಿಗೆ, ಅಣಕದ ಮಾತಾಡಿ ನನ್ನ ಕೆಣಕ ಬ್ಯಾಡ್ರೀ ಸಿದ್ದಯ್ಯನಾರ ನಾವು ದರೋಡೆ ಮಾಡಿದರ ತಂದ ಮಾಲನ್ನೆಲ್ಲ ಹಸಿದವರ ಹೊಟ್ಟೆಗೆ ಹಾಕ್ತೀವಿ ಎಂಬ ಲಕ್ಷ್ಮಣನಿಗೆ ಅವಮಾನ ಮಾಡುವ ಉದ್ದೇಶದಿಂದ ಹೇಳುವ ಸಿದ್ದಯ್ಯನವರ ಮಾತಿಗೆ ನಿಮ್ಮನ್ನನಂಬಿ ನಿಮ್ಮಲ್ಲಿ ಬಂಗಾರದ ಒಡವೆ ಇಟ್ಟದ್ದನ್ನು ನುಂಗಲು ನಾನೇನು ಸಿದ್ದಯ್ಯ ಸಾವುಕಾರನೇನು. ಸಮಾಜದಾಗ ದೊಡ್ಡವರೆನ್ನುವ ನಿಮ್ಮಂಥವರು ಮಾಡುವುದನ್ನು ಹಗಲು ದರೋಡೆಯನ್ನುತ್ತಾರೆ. ಲಕ್ಷ್ಮಣ ಪುನಃ ಅವಮಾನಕ್ಕೆ ಒಳಗಾಗದೇ ಸ್ವಾಭಿಮಾನದಿಂದ ಕೊಡುವ ಉತ್ತರ ಇವನೊಬ್ಬ ಉದಾತ್ತವಾದಿಯಾಗಿ ಕಾಣುತ್ತಾನೆ.

ಇನ್ನೊಂದು ಪ್ರಸಂಗದಲ್ಲಿ ಲಕ್ಷ್ಮಣನಿಗೂ ಹಾಗೂ ಪೊಲೀಸ್ ಇನಸ್ಪೆಕ್ಟರ ಮೋಹನಲಾಲ ರೊಂದಿಗೆ ಚಕಮಕಿಯಾಗುವಾಗ ಉಳಕೀ ಸೂಳೇಮಕ್ಕಳು ಎಲ್ಲಿ ಅದರ ಅನ್ನುವಾಗ, ಖಬರದಾರ್ ಸಾಹೇಬರ್, ನಿಮ್ಮನಾಲಿಗಿ ನಿಮ್ಮಕುಲಾ ಹೇಳುತ್ತ ಅದಕ್ಕೆ ಪೊಲೀಸರಿಗೆ ಎಪ್ಪಾ ಅನಬಾರದು ಸೂಳೇರಿಗೆ ಎವ್ವಾ ಅನಬಾರದು. ಅಂದ್ರ ನಿಮಗ ಹ್ಯಾಂಗ ಅನಸತ್ತರಿ ಸಾಹೇಬರ ಅಧಿಕಾರಿಯೆಂದರ ಮುಗಲಮ್ಯಾಗಿಂದ

ಇಳದ ಬಂದಿಲ್ಲ. ನೀವು ಮನುಷ್ಯರ ಆಗಿದ್ದರ ನಮ್ಮನ್ನು ನಿಮ್ಮಂಗ ನೋಡ್ರಿ. ಲಕ್ಷ್ಮಣ ಅಂದಾಗ ಅವನೊಬ್ಬ ದಾರ್ಶನಿಕನಾಗಿ ಕಾಣುತ್ತಾನೆ. ಲಕ್ಷ್ಮಣನಿಗೆ ಹಾಕಿದ ಬೇಡಿ ಬಿಚ್ಚಿ ಊಟಕ್ಕೆ ಅಣಿಮಾಡಿ ಕೊಟ್ಟಾಗ ಅವನ ತಾಯಿ, ಮತ್ತು ಹೆಂಡತಿಯಿಂದ ಉಣಿಸಿದ ಪ್ರೀತಿ ತುತ್ತು ತಿಂದು ನೀರುಕುಡಿದು ಕೈಗೆ ಬೇಡಿ ಹಾಕಲು ಬಂದ ಪೊಲೀಸರನ್ನು ತಳ್ಳಿ ಜೈಬಜರಂಗಬಲಿ ಎಂದು ಘೋಷಿಸಿ ಅಲ್ಲಿಂದ ಜಿಗದು ಓಡಿ ಹೋಗುತ್ತಾನೆ. ಇಲ್ಲಿ ಅವನ ಧೈರ್ಯವನ್ನು ಮೆಚ್ಚಬೇಕು. ಪೊಲೀಸ ಕಷ್ಟಡಿ ಯಿಂದ ಪಾರಾಗಿ ಹೋಗಿ ಬಾಳೀಹಳ್ಳದಲ್ಲಿ ಇರುವಾಗ ಇನ್ನೊಬ್ಬ ಗೆಳೆಯ ಮಾರುತಿ ಬಾಳೀ ಹಳ್ಳದ ಕಡೆ ಓಡಿ ಹೋಗುವಾಗ ಸಿದ್ದಯ್ಯನ ಕಣ್ಣಿಗೆ ಬೀಳುತ್ತಾರೆ. ಮಾರುತಿ ತಂಗಿ ರತ್ನಿಯ ಕೂಡ ಸಿದ್ದಯ್ಯ ವಕ್ರದೃಷ್ಟಿಯಿಂದ ಮಾತನಾಡುವಾಗ ರತ್ನಿ ಸ್ವಾಮೇರ ನಿಮ್ಮ ಕಟಬಾಯಾಗ ಜೊಲ್ಲ ಸುರಿಯಾಕ ಹತ್ತೇತೇನು ಎನ್ನುವಾಗ ಅವಳಿಗಾದ ಅವಮಾನಕ್ಕೆ ಸಿದ್ದಯ್ಯ ನಿನಗ ಎದೀಗೆ ಒದ್ದೇನು ಎನ್ನುವ ಮಾತು ಸ್ವಾಭಿಮಾನದಿಂದ ಬುತ್ತದೆ.

ರತ್ನಿ ಬಂಗಾರನ ಸಿದ್ದಯ್ಯನ ಕಡೆ ಇಟ್ಟಾಗಿನಿಂದ ಎಲ್ಲರೂ ರತ್ನಿ ಬಂಗಾರ ತಿರುಗಿ ಕೊಡಿಸಲಿಕ್ಕೆ ಪ್ರಯತ್ನಿಸುತ್ತಾರೆ. ಅವಳಿಗೊಂದು ವರನೋಡಿ ಲಗ್ನಮಾಡುವ ವಿಚಾರ ಮಾಡುತ್ತಾರೆ. ಅಲ್ಲದೇ ಸಿದ್ದಯ್ಯನ ಕಡೆಯಿಂದ ರತ್ನಿಗೆ ಬಂಗಾರ ಕೊಡಸೂತನಕ ಮತ್ತು ಲಗ್ನ ಮಾಡುತನಕ ಸಿಂಧೂರ ಸೀಮಿ ಬಿಟ್ಟು ಹೋಗೂದು ಹ್ಯಾಂಗ ಅಂತ ಲಕ್ಷ್ಮಣ ಹಾಗೂ ಮೂವರು ಅಳಿಯಂದಿರು ಅನ್ನುತ್ತಾರೆ. ಸಾಬು ಹೇಳುವ ಮಾತು ನಾವು ಇಲ್ಲಿದ್ರೂ ಪೊಲೀಸರ ಕೈಗೆ ಸಿಕ್ಕು ಸಾಯಬೇಕಾದಿತು ಎನ್ನುವಾಗ, ಸತ್ರಾತು ಅದಕ್ಯಾಕ ಅಂಜೂದು. ಒಂದು ಪರದೇಶಿ ಮಗಳ ಕಲ್ಯಾಣ ಮಾಡಕ ಹೋಗಿ ಸತ್ರ ನಮ್ಮಂಥ ಪುಣ್ಯವಂತ್ರ ಯಾರದಾರ ಎಂದು ಲಕ್ಷ್ಮಣ ಹೇಳುತ್ತಾನೆ. ಆಗ ನರಸ್ಯಾ ಹೌದು ಮಾಂವಾ ಗತಿ ಇಲ್ಲದ ಬಡವರ ಗೋಣುಮುರುದು ಅವರ ಗೋರಿ ಮ್ಯಾಲ ಮಹಲ ಕಟ್ಟಿಸಿಕೊಂಡು ಮೆರೀತಾರಲ್ಲ ಈ ಸಿರಿವಂತರು ಇವರ ಸಂಪತ್ತ ಲೂಟಿ ಮಾಡಬೇಕು. ಅವರ ಚರ್ಮ ಸುಲಿದು ಎಕ್ಕಡಾ ಹೋಲಿಸಿಕೋಬೇಕು ಮತ್ತು ಶ್ರೀಮಂತರ ಬೆನ್ನಕಟ್ಟಿ ಬರುವ ಸರಕಾರಕ್ಕೂ ಕೈ ತೋರಿಸಬೇಕು ಎನ್ನುವ ಸಂದರ್ಭ ಲಕ್ಷ್ಮಣ ಹಾಗೂ ಅವನ ಅಳಿಯಂದಿರ ಬಗೆಗೆ ಅಭಿಮಾನ ಮೂಡುತ್ತದೆ.

ಸಿದ್ದಯ್ಯನ ಹೆಂಡತಿ ರಾಚವ್ವ ತನ್ನ ಗಂಡನನ್ನು ಅವನ ಪಟಗಾದಿಂದ ಬಿಗದು ಬಂಗಾರ ಕೇಳುವಾಗ ಮೈತುಂಬ ಬಂಗಾರ ಡಾಗೀಣ ಇಟಗೊಂಡ ರಾಚವ್ವನನ್ನು ನೋಡಿ, ನರಸ್ಯಾ ಅವಳ ಕುತ್ತಿಗೆಗೆ ಕೈಹಾಕಿದಾಗ ಲಕ್ಷ್ಮಣ ಅವನ ಕಪಾಳಕ್ಕೆ ಹೊಡೆದು ಹೆತ್ತವ್ವನಂಥ ಈ ತಾಯಿ ಕೊರಳಿಗೆ ಕೈಹಾಕಕ ನಾಚಿಕೆ ಬರುದಿಲ್ಲಾ. ಸರಕಾರದಾಗ ಲಕ್ಷ್ಮಣನ ಗ್ಯಾಂಗ ದರೋಡೆ ಕೋರರ ಗುಂಪು ದಾಖಲೆಯಾಗಿದ್ದರೂ ಜನರ ಬಾಯಾಗ ಲಕ್ಷ್ಮಣನೊಬ್ಬ ದಯಾಮಯಿ. ಸರಕಾರ, ಎದರ ಹಾಕಿಕೊಂಡ ಸೊಕ್ಕಿನ ಸಿರಿವಂತರ ನಡಾ ಮುರಿತಾನ. ಆದರ ಈ ತಾಯಿ ಮೈ ಕೈಮುಟ್ಟಿ ಮಾನಾ ಕಳೀಬ್ಯಾಡ ಅನ್ನುವಾಗ ಲಕ್ಷ್ಮಣನನ್ನು ಕುರಿತು ಮತ್ತು ಸ್ವಾಭಿಮಾನ ಗರಿಗೆದರುತ್ತದೆ.

ಸಿದ್ದಯ್ಯನ ಹೆಂಡತಿ ರಾಚವ್ವನಿಂದ ಬಂಗಾರ ಪಡೆದು ರತ್ನಿಯ ಲಗ್ನಮಾಡಿ ಗಂಡನ ಮನಿ ನಾಗಾರಾಳಕ್ಕೆ ಹೊರಟು ನಿಂತಾಗ ರತ್ನಿ ಉಡಿಯಾಗ ಬಂಗಾರದ ಡಾಗೀನದ ಗಂಟು ಇಟ್ಟು ಬಾಳೀಹಳ್ಳದಾಗ ನಿಮ್ಮಣ್ಣಗ ಕೊಟ್ಟ ಮಾತು ಮುಟ್ಟಿದಂಗ ಆತು ಎನ್ನುತ್ತಿದ್ದಂತೆ ಪತ್ನಿ ಮಾಂವ ತಂದಿ ಸತ್ತರೂ ತಂದಿಯಾಗಿ, ಅಣ್ಣ ಸತ್ತರೂ ಅಣ್ಣನಾಗಿ, ಪೊಲೀಸರು ಹಿಂಡಗಟ್ಟಿ ನಿನ್ನ ಹಿಡಿಯಾಕ ಪ್ರಯತ್ನ ಮಾಡುವಾಗಲೂ ನೀನು ನನ್ನ ಲಗ್ನ ಮಾಡಿದೆಲ್ಲಾ ಈ ನಿನ್ನ ಉಪಕಾರ ಯಾವ ಜನ್ಮದಲ್ಲಿ ತೀರಸಲಿ ಎನ್ನುತ್ತಿದ್ದಂತೆ ಬೇರೆಯವರೂ ಲಕ್ಷ್ಮಣನ ಕುಟುಂಬದ ಬಗೆಗೆ ಇರಿಸಿಕೊಂಡ ಅಭಿಮಾನ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಇನಸ್ಪೆಕ್ಟರ್ ಮೋಹನಲಾಲ ಹಾಗೂ ಪೊಲೀಸರಿಗೆ ಕಲ್ಲೊಳ್ಳಿ ಗುಡ್ಡದಾಗ ಲಕ್ಷ್ಮಣನ ಹೋಳಿ ಅಡಗೇತಿ ಅವರ ಹಿಡಿಯಾಕ ಹೊರಟಾಗ ಸ್ವತಃ ಇನಸ್ಪೆಕ್ಟರ ಗುಂಡ ಹಾರಿಸಿ ಬ್ಯಾಟಿ ಎಬ್ಬಸ್ತೀನೆಂದು ಗುಂಡುಹಾರಿಸಿದಾಗ ಲಕ್ಷ್ಮಣ ಯಾಕೋ ಇನಸ್ಪೆಕ್ಟರ ಎಂದು ಕೂಗಿದಾಗ ಆ ಕೂಗಿಗೆ ಪೊಲೀಸ ಸಿಬ್ಬಂದಿ ಓಡಿ ಹೋಗುವಾಗ ಜೈ ಬಜರಂಗ ಬಲಿ ಎಂದು ಇನಸ್ಪೆಕ್ಟರನ ಎದುರಿಗೆ ನಿಂತ ನೀನನ್ನ ಹರಕಿ ಕುರಿಯಾಗಾಕ ಬಂದೀಲೇ ಇನಸ್ಪೆಕ್ಟರ ಎದೀ ಮ್ಯಾಲ ಒದ್ದು ಮೋಹಲನಲಾಲನನ್ನು ನೆಲಕ್ಕೆ ಕೆಡವಿ ಅವನ ಎದೀಮ್ಯಾಲ ಕಾಲಿಟ್ಟು ಹೇಳು ಸಾಹೇಬ ಬಾಳೇ ಹಳ್ಳದಾಗ ಅವತ್ತು ಬೂಟಗಾಲೀಲೆ ಒದ್ದ ನಮ್ಮವ್ವನ ಕೆಡವಿದ್ದೆಲ್ಲಾ ಆ ಸಾಲಾ ಇವತ್ತ ಬಡ್ಡಿ ಸಹಿತಮುಟ್ಟಿಸಿ ಬಿಡತೀನಿ. ಸಾಯುಮುಂದ ದೇವರ್ನ ನೆನೆಸಿಕೊ ಅನ್ನುವಾಗ ಮೋಹನಲಾಲ ವಿನಯದಿಂದ ಶಸ್ತ್ರ ಕೈಮ್ಯಾಗ ಇಲ್ಲದಾಗ ಶತ್ರುವನ್ನು ಕೊಲ್ಲುವುದು ವೀರರಿಗೆ ಒಪ್ಪುವ

ಧರ್ಮವಲ್ಲವೆಂದಾಗ ಇನಸ್ಪೆಕ್ಟರ ಸಾಹೇಬ ಈ ಲಕ್ಷ್ಮಣ ಬದುಕಿದ್ದೇ ಧರ್ಮದ ಬಲದಿಂದ. ಅದಕ್ಕೆ ಹೋಗು ಕುನ್ನಿ ನಿನಗ ಜೀವದಾನ ಮಾಡೀನಿ ಎನ್ನುವಾಗ ವೈರಿಯ ಎದುರಿನಲ್ಲೂ ರಣರಂಗವಾಗುತ್ತಿರುವಾಗಲೂ ಇನಸ್ಪೆಕ್ಟರನ ಮೇಲೆ ದಯಾ ತೋರಿಸಿ ಅವನೊಬ್ಬ ಕರುಣಾಮಯಿಯಾಗಿ ಕಾಣುತ್ತಾನೆ. ಇಲ್ಲಿಯೂ ಇಂಥ ಜೀವಕ್ಕೆ ಭಯವಿದ್ದಾ ಗಲೂ ಸ್ವಂತಕ್ಕೆ ಆಪತ್ತ ಕಾದಿದ್ದರೂ ವೈರಿಗೆ ಜೀವದಾನ ಮಾಡುವಾಗ ಅವನ ಕುರಿತು ಸ್ವಾಭಿಮಾನ ಮೂಡುತ್ತದೆ.

ವಾಲೀಕಾರ ಶಿವಪ್ಪ ತೆಗ್ಗಿ ವೆಂಕಪ್ಪ ನಾಯಕರಿಬ್ಬರೂ ಕಪ್ಪರದ ಪಡಿಯವ್ವನ ಗುಡ್ಡಕ್ಕೆ ಹೋಗು ಮುಂದ ನನ್ನ ಕುಲಬಾಂಧವನೊಬ್ಬನಾದ ಲಕ್ಷ್ಮಣನ ಸಾಹಸದ ಸುದ್ದಿ ಮಾತನಾ ಡುತ್ತ ನಡೆಯುವಾಗ ಯಡೆಹಳ್ಯಾಗ ಗುಜ್ಜರ ತಾರಾಚಂದ ಶೇಟಜಿ ಮನೀ ಲೂಟಿ ಮಾಡಿ ಆ ಹಣಾನ ಬಡವರಿಗೆ ಹಂಚಿ ಮತ್ತು ಅವ ಒತ್ತೀ ಇಟ್ಟಗೊಂಡ ಹೊಲಾ, ಮನಿ ಕಾಗದಾನ ಸುಟ್ಟಹಾಕಿ ಎಷ್ಟೊಂದು ಬಡ ಜನಕ್ಕೆ ಅವ ಸಹಾಯ ಮಾಡಿ ದೇವರ ಆಗ್ಯಾನ ಎನ್ನುತ್ತಿದ್ದಂತೆ ತೆಗ್ಗಿ ವೆಂಕಪ್ಪನಾಯಕರ ಮುಂದೆ ನಿಂತು ಲಕ್ಷ್ಮಣ ಮುಜುರೆ ಮಾಡಿದಾಗ ನಾನ್ರಿ ಧಣೇರ ನೀವು ಹುಡುಕುವ ಲಕ್ಷ್ಮಣ ಎನ್ನುವಾಗ ಸಂತೋಷಗೊಂಡ ನಾಯಕ ನೋಡ್ಲಶಿವ್ಯಾ ಹ್ಯಾಂಗ ಬಂದೈತಿ ಸಿಂಧೂರ ಹುಲಿ ಮತ್ತು ಹಲಗಲಿ ಖಡ್ಗಕಲಿಗಳಾದ ಜಡಗಣ್ಣಾ ಬಾಲಣ್ಣ ಸತ್ತ ಮ್ಯಾಲೆ ಬತ್ತಿ ಹೋಗಿದ್ದ ಬ್ಯಾಡರ ಕುಲಕ್ಕ ನಿನ್ನಿಂದ ಬಲಾ ಬಂದಾಂಗಾತು. ಲಕ್ಷ್ಮಣ ನಾನೀಗ ನಿನಗ ಆಪ್ತಬಂಧು ಎಂದು ತಿಳಕೋ ಎನ್ನುತ್ತಾನೆ. ಲಕ್ಷ್ಮಣ ಶಿವಗ ಕಣ್ಣ ಕಿತ್ತಿ ಕೊಟ್ಟೆರೋ ಕಣ್ಣಪ್ಪನ ಕುಲದಾಗ ಹುಟ್ಟೇವಿ ಈ ದೇಶಕ್ಕೆ ಕೊಟ್ಟ ರಾಮಾಯಣ ಕಾವ್ಯದ ಕತೃ ವಾಲ್ಮೀಕಿ ಮಹರ್ಷಿ ಸಂತಾನ ನಮ್ಮದು. ನಿನ್ನ ಮ್ಯಾಲ ವಾರಂಟ ಇದ್ರೂ ಸಹಿತ ಪ್ರಸಂಗ ಬಂದ್ರ ನನ್ನ ಪ್ರಾಣಾ ಕೊಟ್ಟ ನಿನ್ನ ಉಳಿಸಿಕೊಳ್ಳತೀನಿ ಇದಕ ಅರಣ್ಯ ಪಾರ್ವತೀ ತಾಯಿ ಕಪ್ಪರದ ಪಡಿಯವ್ವನೇ ಸಾಕ್ಷಿ ಎನ್ನುವಾಗ ಕುಲಬಾಂಧವರಲ್ಲಿ ಬೆಳೆಯುವ ವಿಶ್ವಾಸ ಕಂಡು ವಾಲ್ಮೀಕಿ ಸಮುದಾಯದ ಬಗೆಗೆ ಅಭಿಮಾ ಮೂಡುತ್ತದೆ. ಹಲಗಲಿ ಕುಲಬಂಧು ಗಳು ಕಟ್ಟಿ ಹೋದ ಸ್ವಾತಂತ್ರ್ಯದ ಗುಡಿಯ ಗೋಪುರಕ್ಕೆ ನೀನು ಕಳಸವಾಗು. ನಿನ್ನ ಧೈರ್ಯ, ಸಾಹಸ ಕಾರ್ಯ ಹಾಡುಗಟ್ಟಿ ನಾವೆಲ್ಲ ಹಾಡುವಂತಾಗಲಿ ಎನ್ನುವಾಗಂತೂ ಬೇಡ ಸಮುದಾಯ ಕುರಿತು ಸ್ವಾಭಿಮಾನ ಹೆಚ್ಚುತ್ತದೆ.

ತುಮ್ಮರಮಟ್ಟಿ ಗುಡ್ಡದಾಗ ಗಾರ್ಮನ್ ಸಾಹೇಬ ಕುದರಿ ಮ್ಯಾಲ ಬರುವಾಗ ಸಿಂಧೂರ ಲಚ್ಚ್ಯಾನ ರೋಳಿ ತುಮ್ಮರಮಟ್ಟಿಗುಡ್ಡದಾಗ ಐತಿ ಅಂತ ಬಂದ ಬಾಲೇ ಮ್ಯಾಗ ಇಲ್ಲಿಗೆ ಬಂದು ನನ್ನ ಆರ್ಡರ ಪ್ರಕಾರ ಆ ದರೋಡೆಕೋರನನ್ನ ಹಿಡದ ಹೆಡಮುರ್ಗಿಬಿಗಿದು ನಮ್ಮ ಮುಂದ ತಂದು ನಿಲ್ಲಿಸಿರಿ ಎನ್ನುತ್ತಾನೆ. ಆ ಗಾರ್ಮನ್ ಸಾಹೇಬ ಮತ್ತೆ ಒಂದು ಸುತ್ತ ಗುಂಡ ಹಾರಿಸುತ್ತಾನೆ. ಆಗ ಗುಡ್ಡದ ಮ್ಯಾಗ ನಿಂತು ಕೆಂಪು ಮುಖದ ಕೋತಿ ನಿಮ್ಮ ಹರಾಮಖೋರ ಇನಸ್ಪೆಕ್ಟರ ಮೋಹನಲಾಲನ ಚಂಡ ಆಡೀನಿ ನಿನ್ನ ರುಂಡಾನೂ ಕತ್ತರಸೋದು ಬಹಳ ಸುಲಭ ಅನ್ನುವಾಗ ಶೂರರಾದ ಇಂಗ್ಲೀಷರನ್ನು ಹೆದರಿಸುವುದು ಅಷ್ಟು ಸುಲಭವಲ್ಲವೆನ್ನುವಾಗ ಎಲ್ಲಾ ಫಿರಂಗಿ ಕೋತಿಗಳು ನೀವೆಷ್ಟು ಶೂರರು ಅಂತಾ ನಮಗೆ ಗೊತ್ತಿಲ್ಲೇನು, ನಮ್ಮದೇಶದ ಸಂಸ್ಥಾನಿಕರು ಮಣ್ಣು ಮುಕ್ಕಿದ್ದು ನಿಮ್ಮ ಶೂರತನ ದಿಂದ ಅಲ್ಲಾ ನಮ್ಮ ದೇಶದಾಗೀನ ಪಾಪಿಸ್ಟ ಪಿತೂರಿಗಳಿಂದ. ಕಿತ್ತೂರ ಸಂಸ್ಥಾನ ಹಾಳಾದದ್ದು ಕನ್ನೂರ ಮಲ್ಲಪ್ಪಶೆಟ್ಟಿಯ ಕುಟಿಲತನದಿಂದ, ನರಗುಂದ ಬಾಬಾ ಸಾಹೇಬರ ಸಂಸ್ಥಾನದ ಬನಿಯಾ, ಬಾಪೂರಂಥ ದೇಶದ್ರೋಹಿಗಳಿಂದ ನಾಶಾತು. ಹುಲಿಯಂಥ ಸಂಗೊಳ್ಳಿರಾಯಣ್ಣ ಸೆರೆ ಸಿಕ್ಕದ್ದು ನೇಗಿನಾಳ ವೆಂಕಪ್ಪ ಗೌಡನ ಪಿತೂರಿಯಿಂದ, ಮುಧೋಳದ ಕಾರಭಾರಿ ಕುಲಕರ್ಣಿ ಕೈವಾಡದಿಂದ ಹಲಗಲಿ ಹುಲಿಗಳಾದ ಜಡಗಣ್ಣ, ಬಾಲಣ್ಣ ನಿಮ್ಮ ಕೈಗೆ ಸಿಕ್ಕರು. ನಿಮ್ಮ ಯಾವ ಶೂರತನದಿಂದ ಅವರನ್ನು ಹಿಡದೀರಿ ಹೇಳಿರಿ. ನಾವ್ಯಾರೂ ಅಂಥ ಸಂಸ್ಥಾನಿ ಕರೂ ಅಲ್ಲ. ಗಾರ್ಮನ್ ಸಾಹೇಬಾ ಎಂಟೆದೆಯ ಬಂಟಾ ಬ್ಯಾಡರ ಜ್ಯಾತ್ಯಾಗ ಹುಟ್ಟಿ ಇಂಗ್ರೇಜ ಅವರಿಗೆ ತಲೀಬಾಗೂದು ಅಂದ್ರ ನಾವು ಹೇಡಿಜಾತಿಯವರು ಅಲ್ಲಾ. ಜೀವಂತ ಹೆಣ ಆಗಿ ನಿಮ್ಮ ಜೇಲಿನ್ಯಾಗ ಇರೂದಕ್ಕಿಂತ ಸತ್ತ ಬದಕಿರೋದು ಸಾವಿರ ಪಾಲಿಗೆ ಮೇಲು, ಲಕ್ಷ್ಮಣನ ವಜ್ರ ದೇಹಕ್ಕೆ ನಿನ್ನ ಪಿಸ್ತೂಲಿನ ಗುಂಡು ಜೋಳದ ದಂಟಿನ ಬೆಂಡು. ಈ ಹುಲಿ ಮೀಸೆಗೆ ಕೈ ಹಾಕಬೇಕಾದರ ತಾಕತ್ ಬೇಕು ಸಖತ್ ತಾಕತ್ ಎನ್ನುವಲ್ಲಿ ಬ್ರಿಟೀಷರ ಒಡೆದಾಳುವ ನೀತಿ ಕುರಿತು ಮಾತನಾಡುವ ಪರಿಲಕ್ಷ್ಮಣನ ಬಗೆಗೆ ದೇಶಾಭಿಮಾನ ಉಕ್ಕುತ್ತದೆ. ಅವಮಾನದ ಬದುಕಿಗಿಂತ ಸ್ವಾಭಿಮಾನದ ಮರಣಕ್ಕೆ ಶರಣಾಗುವುದು ನಮಗೆಲ್ಲ ಪ್ರೀತಿ, ವಿಶ್ವಾಸ ಗೌರವ ಮೂಡಿಸುತ್ತದೆ.

ನರಸ್ಯಾ ಇವತ್ತ ನಸಿಗಿನಾಗ ನನಗೆ ಭಯಂಕರ ಭಯಾನಕ ಕನಸು ಬಿದ್ದಿತ್ತು. ನಾನು ಚಂದ್ರಿ ಮಲಗಿದಂಗ ಆದಾಗ ಯಮಧರ್ಮ ನನ್ನ ಕೊಳ್ಳಿಗೆ ಹಗ್ಗಾ ಹಾಕಿ ಜಗ್ಗಾಕ ಹತ್ತಿದಾ ಆಗ ದಡಗ್ನ ಎಚ್ಚರಾತು. ಬೆಳಗಿನ ಜಾವದಾಗ ಬಿದ್ದ ಕನಸು ಖರೇ ಆಗತಾವಂತ ತುಳಸೀಗೇರಿ ಪೂಜಾರಿ ಶರಣಪ್ಪ ಹೇಳುತ್ತಿದ್ದ. ಮಾಂವಾ ಈ ಹೊತ್ತು ನಾಗರ ಪಂಚಮಿ ಅಮಾಸಿ ಉಣ್ಣಾಕ ಬ್ರಿರಂತ ತೆಗ್ಗಿ ನಾಯಕರು ವಾಲೀಕಾರ ಶಿವಪ್ಪನ ಮುಂದ ಹೇಳಿ ಕಳಸ್ಯಾರ ಎಂದು ನಾಲ್ವರೂ ಹೊರಡುವಾಗ ಮಾಂವಾ ಗೂಗಿ ಒದರಾಕ ಹತ್ತೇತಿ ಮ್ಯಾಲ ಎಡಗಣ್ಣು ಹಾರಾಕ ಹತ್ತೇತಿ ಅದ ಮೂಲ್ಯಾಗ ಚಿಕ್ಕಿ ಬಿತ್ತು ಮಾಂವಾ ವಾರಾ ನೋಡಿ ಹಡದರ ಕುದ್ದಗನ್ನಿನ ಕೂಸ ಹುಟ್ಟಿದಂಗ ಅಂತಾರ ನಡಿ ನಡೀರಿ ಎಂದು ಹೊರಟರು. ಕಪ್ಪರದ ಪಡಿಯವ್ವನ ಗುಡ್ಡದಾಗ ವಾಲೀಕಾರ ಶಿವಪ್ಪ ದಾರೀ ಕಾಯ್ತು ಕುಳಿತ್ತಿದ್ದ ನಾಲ್ಕೂ ಜನ ಸೇರಿ ಹೋಗಿ ಶಿವಪ್ಪನ ಹತ್ತಿರ ಕುಳಿತರು ಊಟಕ್ಕೆ. ಆದರೆ ಮೊದಲೇ ಸಂಚು ಮಾಡಿದ ಗಾರ್ಮಾನ್‌ನ ಪ್ರಕಾರ ಕೊಡಲಿ ಕಾವು ಕುಲಕ್ಕ ಮೂಲ ಅಂದಂಗೆ ತೆಗ್ಗಿ ನಾಯಕನ ಸಂಚು ಕುಲಬಾಂಧವರಿಗೆ ತಿಳಿಯಲಿಲ್ಲ. ನಡುವೆ ಶಿವಪ್ಪ ಕಂದೀಲ ಹಿಡಿದು ಎತ್ತಿ ಲಕ್ಷ್ಮಣನ ಮುಂದ ಹಿಡದ ಇಟ್ಟಾ. ಆಗ ಕಂದೀಲಿನ ಯಾಕ ಹಿಡದೀದಿ ಅಂದಾಗ ಎಣ್ಣಿ ಕಡಿಮೆ ಆಗಾಗ ಹತ್ತೇತೇನು ನೋಡಾಕ ಹಾಂಗ ಮಾಡಿದ್ಯಾ ಅಂತ ಶಿವಪ್ಪ ಸಬೂಬ ಹೇಳಿ ಸುಮ್ಮನಾದ. ಅಷ್ಟರಾಗ ಗುಂಡುಹಾರಿಸಿದ ಗುಂಡು ಲಕ್ಷ್ಮಣನ ಹಿಂಬದಿಗೆ ಬಡೀತು ಘಾತ ಆತಲೇ ನರಸ್ಯಾ ಅಂತ ಲಕ್ಷ್ಮಣ ಚೀರಿದ. ತಾಯಿ ಹೆಂಡತಿ ಬಿಟ್ಟ ಇಷ್ಟು ದೂರ ಬಂದು ಸಾಯೂದ ಐತಿ ಇಂಥ ಪರಸ್ಥಿತಿಯಲ್ಲಿ ಮಾಂವನ ಬಿಟ್ಟು ಹೋಗೂದು ತಪ್ಪು ಆಗತೈತಿ ಏನೇ ಬರಲಿ ಒಟ್ಟಿಗೆ ಸೇರಿವಿ ಒಂದಾಗಿ ಸಾಯಾಣ ಅಂತ ಲಕ್ಷ್ಮಣನ ತಬ್ಬಿ ಎಲ್ಲರೂ ಅಳಾಕ ಹತ್ತಿದಾಗ ಗಾರ್ಮನ್ ಬಂದು ಎಲ್ಲರನ್ನು ಬಂಧಿಸಿ ಜಮಖಂಡಿಗೆ ಒಯ್ಯುತ್ತಾರೆ. ಲಕ್ಷ್ಮಣನ ಹೆಣಾನ ಚಕ್ಕಡಿಯಲ್ಲಿ ಹಾಕಿ ಕೊಂಡು ಬೀಳಗಿಗೆ ಒಯ್ಯುತ್ತಾರೆ. ಕೊನೆಗೆ ಶಿವಪ್ಪ ಲಕ್ಷ್ಮಣನ ಹಣೇಬರಹ ತಪ್ಪಸಾಕ ಯಾರಿಗೂ ಆದೀತು ದಿಕ್ಕಿಲ್ಲದ ಹೆಣ ಆಗಬೇಕು ಅಂತಾ ಅವನ ಹಣೇ ಬರದಾಗ ಬರೆದಿತ್ತೊ ಏನೋ ಎಂದು ಏನೇ ಆದ್ರೂ ನೀನು ಸತ್ತು ಬದುಕಿದಿ! ನಾವು ಬದುಕಿ ಸತ್ವಿ! ಜನರ ಬಾಯಾಗ ನಿನ್ನ ಹೆಸರು ಹಾಡಾಗಿ ಉಳೀತು. ಎನ್ನುವಾಗಲಂತೂ ಲಕ್ಷ್ಮಣ, ನರಸ್ಯಾ ಗೋಪಾಲಿ, ಸಾಬು ಇವರೆಲ್ಲರ ಬಗೆಗೆ ದುಃಖ ಆದರೂ ಕೊನೆಗೆ ಗೌರವ ಆದರ ಅಭಿಮಾನ ಮೂಡುತ್ತದೆ.

**ಗ್ರಂಥಋಣ**


೧. ಭಾರತದ ಇತಿಹಾಸ.

೨. ಸಿಂಧೂರ ಲಕ್ಷ್ಮಣ, ಕಂಠಿಹನುಮಂತರಾಯ.

೩. ವೀರಸಿಂಧೂರ ಲಕ್ಷ್ಮಣ, ಸಂಗಮೇಶ ಗುರುವ.


* * *

## ೩೫. ಪರೋಪಕಾರಿ

ಉಳ್ಳವರಿಗೆ ಸಿಂಹಸ್ವಪ್ನವಾಗಿ, ಇಲ್ಲದವರಿಗೆ ಆತ್ಮೀಯನಾಗಿ, ಅಶಿಕ್ಷಿತನಾದರೂ ಅಸಂಸ್ಕೃತ ವ್ಯಕ್ತಿಯಾಗಿರದ, ಕಾಡುವಾಸಿಯಾಗಿದ್ದರೂ ನಾಡಿನ ಜನರಿಗಿಂತ ಉನ್ನತ ಮಟ್ಟದ ನಡೆ-ನುಡಿಯ ಹೃದಯವಂತ ವ್ಯಕ್ತಿ ಸಿಂಧೂರ ಲಕ್ಷ್ಮಣ.

ಆಗಿನ ಜತ್ತ ಸಂಸ್ಥಾನದ ಸಿಂಧೂರಿನ ಸಾಬಣ್ಣ ಹಾಗೂ ನರಸವ್ವ ಇವರ ಮಗನಾದ ಲಕ್ಷ್ಮಣ ಬಡತನದಲ್ಲಿ ಬೆಳೆದರೂ ಗುಣದಲ್ಲಿ ಸಿರಿವಂತನಾಗಿದ್ದ. ಅಶಿಕ್ಷಿತನಾಗಿದ್ದರೂ ಸುಶಿಕ್ಷಿತರಲ್ಲಿ ಇರಬೇಕಾದ ಅನೇಕ ಒಳ್ಳೆಯ ಗುಣಗಳು ಅವನಲ್ಲಿದ್ದವು ಎಂದು ತಿಳಿದು ಬರುತ್ತದೆ.

ಲಕ್ಷ್ಮಣ ದೇಶಭಕ್ತನಾಗಿದ್ದ, ಬ್ರಿಟೀಷರ ವಿರುದ್ಧ ಹೋರಾಡಿದನು. ಮಾನವನಲ್ಲಿ ಇರಬೇಕಾದ ಅತಿ ಮುಖ್ಯಗುಣ 'ಪರೋಪಕಾರ' ಲಕ್ಷ್ಮಣನಲ್ಲಿ ಹಾಸುಹೊಕ್ಕಾಗಿತ್ತು. ಜೀವನ ದುದ್ದಕ್ಕೂ ಪರೋಪಕಾರ ಮಾಡುತ್ತ ಬಂದ ಲಕ್ಷ್ಮಣ ಎಂದೂ ಅನ್ಯಾಯವನ್ನು ಸಹಿಸಿದ ವನಲ್ಲ. ನಮ್ಮ ವೇದಗಳಲ್ಲಿ ಪರೋಪಕಾರದ ಬಗ್ಗೆ ಹೇಳಿದ 'ಪರೋಪಕಾರಾರ್ಥಾಯ ಇದಂ ಶರೀರಂ' ಎಂಬ ಮಾತಿನಲ್ಲಿ ಮಾನವ ಜನ್ಮದ ಅತಿಮುಖ್ಯವಾದ ಗುಣಗಳಲ್ಲಿ 'ಪರೋಪಕಾರ'ವೂ ಒಂದು ಎಂಬುದನ್ನು ತೋರಿಸುತ್ತದೆ. ಇಂತಹ ಗುಣಲಕ್ಷ್ಮಣನಲ್ಲಿದ್ದ ಕಾರಣ ಅವನು ಒಬ್ಬ ಆದರ್ಶ ವ್ಯಕ್ತಿ ಎಂದು ಹೇಳುವುದರಲ್ಲಿ ತಪ್ಪಿಲ್ಲ. ಲಕ್ಷ್ಮಣನಿಗೆ ತನ್ನದೇ ಆದ ಬಂಧು – ಬಳಗವಿದ್ದಾಗ್ಯೂ ಅದಕ್ಕೆ ಜೋತು ಬೀಳದೆ ಬಡವರಿಗೆ ದೀನ-ದಲಿತರಿಗೆ ದುರ್ಬಲರಿಗೆ ಸಹಾಯ ಮಾಡಿದ್ದನ್ನು ನೋಡಿದರೆ ಅವನು ಎಂತಹ ಪರೋಪಕಾರಿ ಎಂದು ತಿಳಿಯಬಹುದು. ದುರುಳ ಸಿರಿವಂತರಿಂದ ಸುಲಿದ ಹಣವನ್ನು ಎಂದೂ ತನಗಾಗಿ ಇಟ್ಟುಕೊಳ್ಳದ ಲಕ್ಷ್ಮಣ ಅದನ್ನು ನೊಂದ ಜನರಿಗೆ ಹಂಚಿಬಿಡುತ್ತಿದ್ದ ಎಂಬುದನ್ನು ನೋಡಿದರೆ ಆ ದಿನಗಳಲ್ಲಿಯೇ ಸಮಾಜವಾದದ ಕನಸು ಕಂಡ ಮಾನವತಾವಾದಿ ಎಂದು ತಿಳಿದುಬರುತ್ತದೆ. ಲಕ್ಷ್ಮಣನು ನೊಂದ ಜನರಿಗೆ ದುರ್ಬಲರಿಗೆ ಸಹಾಯ ಮಾಡುತ್ತಿದ್ದ ಎನ್ನುವುದರ ಕುರಿತು ಸಾಕಷ್ಟು ಕಥೆಗಳಿವೆ.

ಉಮರಾಣಿಯ ಒಂದು ಹೊಲದಲ್ಲಿ ಬಹಳ ಕರಿಕೆ ಬೆಳೆದಿತ್ತು. ಲಕ್ಷ್ಮಣ ನಿತ್ಯ ಬಂದು ನಟ್ಟು ಕಡಿಯುತ್ತಿದ್ದನಂತೆ. ಒಂದು ತಿಂಗಳಲ್ಲಿ ಅಂದಾಗಿ ನಟ್ಟು ಕಡಿದದ್ದನ್ನು ನೋಡಿ ಜನ ದಂಗಾದರು. ಇದರಿಂದ ಅವನಿಗೆ ದೊಡ್ಡ ಉಡುಗೊರೆ ಹಾಗೂ ಹಣ ದೊರಕಿತು. ಲಕ್ಷ್ಮಣ ವಾಪಸ್ ಊರಿಗೆ ಬರುವಾಗ ದಾರಿಯಲ್ಲಿ ಒಬ್ಬ ಬಡವ ತನ್ನ ಮಡದಿ ಮಕ್ಕಳು ಉಪವಾಸ ವಿದ್ದ ಬಗ್ಗೆ ಹೇಳಿ ಬೇಡಿಕೊಂಡಾಗ ತನ್ನ ಹಣವನ್ನೆಲ್ಲ ಅವನ ಉಡಿಯಲ್ಲಿಟ್ಟು ತನ್ನ ಊರಿಗೆ ಬರುತ್ತಾನೆ. ಮನೆಯಲ್ಲಿ ತಾಯಿ ಹಣ ಎಲ್ಲಿ ಎಂದು ಹೇಳಿದಾಗ ಲಕ್ಷ್ಮಣ ಹಣ ಕಳೆದವು ಎಂದು ಹೇಳುತ್ತಾನೆ.

ಇದೇ ರೀತಿ ಒಮ್ಮೆ ಕೆರೆಯ ಕೆಲಸ ನಡೆದಿತ್ತು. ದಿನನಿತ್ಯ ಮುಂಜಾನೆ ಬೇಗ ಬಂದು ಮೈಮುರಿದು ಕೆರೆಒಡ್ಡ ಹಾಕಿ ನಡೆಯುತ್ತಿದ್ದ. ವಾರಕ್ಕೊಮ್ಮೆ ದೊಡ್ಡ ಮೊತ್ತದ ಹಣ ಪಡೆದು ಊರಿನ ದಾರಿ ಹಿಡಿಯುತ್ತಿದ್ದ. ದಾರಿಯಲ್ಲಿ ಬರುವಾಗ ಬೆಟ್ಟಿಯಾಗುತ್ತಿದ್ದ ಬಡವರಿಗೆ, ಅಸಹಾಯಕರಿಗೆ ನೊಂದವರಿಗೆ ಹಣ ಕೊಟ್ಟು ಮನೆಗೆ ಬರುತ್ತಾನೆ. ವಾರದ ಗಳಿಕೆಯನ್ನು ಮನೆಯಲ್ಲಿ ಕೇಳಿದಾಗ ದಾರ್ಯಾಗ ಕಳೆದವು ಎಂದು ದೊಡ್ಡ ಸುಳ್ಳನ್ನು ಹೇಳುತ್ತಿದ್ದ. ಇಂತಹ ಘಟನೆಗಳನ್ನು ನೋಡಿದರೆ ಲಕ್ಷ್ಮಣ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ ಮತ್ತು ಎಂತಹ ಹೃದಯವಂತ ಎಂಬುವುದು ಹಾಗೂ ಇದ್ದುದರಲ್ಲಿಯೇ ಹಂಚಿ ತಿನ್ನೋಣ ಎಂಬ ಅತ್ಯಂತ ದೊಡ್ಡ ಗುಣವನ್ನು ಬಡವನಾದ ಲಕ್ಷ್ಮಣನಲ್ಲಿ ನಾವು ಕಾಣಬಹುದು.

ಒಮ್ಮೆ ಸಿಂಧೂರಿನಲ್ಲಿ ಡೊಳ್ಳಿ ಮನೆತನದ ಒಬ್ಬ ಮುದುಕಿಯ ಮಕ್ಕಳು ಆಕೆಯನ್ನು ಮುಪ್ಪಿನಲ್ಲಿ ನೋಡದೆ ಕಡೆಗಣಿಸಿ ಆಕೆಯು ಹೊಟ್ಟೆಗೂ ಪರದಾಡುವ ಸ್ಥಿತಿ ತಂದೊಡ್ಡಿದ್ದರು. ಮುದುಕಿ ದೂರನ್ನು ಲಕ್ಷ್ಮಣನಲ್ಲಿಗೆ ಕೊಂಡೊಯ್ದಳು ಲಕ್ಷ್ಮಣ ಆಕೆಯ ಮಕ್ಕಳನ್ನು ಕರೆಯಿಸಿ ಕೇಳಿದಾಗ ಅವರು 'ಕೇಳಲು ನೀನ್ಯಾರು' ಎಂದಾಗ ಅವರನ್ನು ಚೆನ್ನಾಗಿ ಥಳಿಸಿ ಬುದ್ಧಿ ಹೇಳಿದನು. ಅವರು ತಪ್ಪೊಪ್ಪಿಕೊಂಡು ತಾಯಿಯನ್ನು ಜೋಪಾನ ಮಾಡಿದರು. ಈ ಘಟನೆಯನ್ನು ನೋಡಿದಾಗ ಲಕ್ಷ್ಮಣ ದುರ್ಬಲರ, ನೊಂದವರ ತೊಂದರೆಗಳನ್ನು ತೊಲಗಿಸುವಲ್ಲಿ ಶ್ರಮಿಸುತ್ತಿದ್ದ ಹಾಗೂ 'ಉಪಕಾರ' ಮಾಡುತ್ತಿದ್ದ ಎಂಬುದನ್ನು ಕಾಣಬಹುದು.

ಒಮ್ಮೆ ಕೋಟ್ಯಾಳ ದಾರಿಯಲ್ಲಿ ಹೋಗುವಾಗ ಹೊಟ್ಟೆ ಹಸಿದಿತ್ತು. ದಾರಿಯಲ್ಲಿ ಒಬ್ಬ ಹೆಣ್ಣುಮಗಳು ಬುತ್ತಿ ತೆಗೆದುಕೊಂಡು ಬರುತ್ತಿದ್ದಳು. ಲಕ್ಷ್ಮಣ ಹಸಿವಿನಿಂದ ಕಂಗೆಟ್ಟು ಬುತ್ತಿ ಕೇಳಿದಾಗ ಅವಳು ನನ್ನ ಗಂಡ ಸಿಡುಕ ಎಂದು ಹೇಳುತ್ತಾಳೆ. ಆಗ ನಾನು ನಿನ್ನ ಅಣ್ಣ, ನಿನಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆ ಎನ್ನುತ್ತಾನೆ. ಆಗ ಆ ಹೆಣ್ಣು ಮಗಳು ಬುತ್ತಿ ಬಿಚ್ಚಿ ಊಟಕ್ಕೆ ಕೊಡುತ್ತಾಳೆ. ಅಷ್ಟರಲ್ಲಿ ಗಂಡ ಬಂದು ಅವಳನ್ನು ಬಡಿಯ ತೊಡಗುತ್ತಾನೆ. ಇದನ್ನು ಕಂಡ ಲಕ್ಷ್ಮಣ ತನ್ನ ಹೆಸರನ್ನು ಹೇಳಿ 'ತಪ್ಪಾಗಿದೆ' ಎಂದಾಗ ಯುವಕ ದಂಗಾಗುತ್ತಾನೆ. ಊಟದ ನಂತರ ಲಕ್ಷ್ಮಣ ರೊಟ್ಟಿ ತುಣಕೊಂದನ್ನು ಬಿಟ್ಟಿರುತ್ತಾನೆ. ಅದರ ಕೆಳಗೆ ಬಂಗಾರ ಇಟ್ಟು ಹೋಗಿರುತ್ತಾನೆ.

ಇದೇ ರೀತಿ ಲಕ್ಷ್ಮಣನನ್ನು ಪೊಲೀಸರು ಬೆನ್ನು ಹತ್ತಿದಾಗ ಅವನು ಹೊಲದಲ್ಲಿ ಅಡ್ಡ ಬಿದ್ದು ಓಡುತ್ತಿದ್ದ ದಾರಿಯಲ್ಲಿ ಒಬ್ಬ ಅತ್ತೆ ಮನೆ ಸೊಸೆ ಬರುತ್ತಿರುತ್ತಾಳೆ. ಆಗ ಲಕ್ಷ್ಮಣ ತನ್ನನ್ನು ಉಳಿಸಲು ಕೇಳಿಕೊಂಡಾಗ ಅವಳು ಹೊಲದಲ್ಲಿಯೆ ಮೆದೆ ಹೊಚ್ಚಿ ಉಳಿಸಿದಾಗ ಲಕ್ಷ್ಮಣ ಹೊನ್ನು, ಆಭರಣ ಮುಂದಿಟ್ಟ. ಆ ಹೆಣ್ಣು ಮಗಳು "ಹೊನ್ನು ಏಕೆ?" ಹೊನ್ನು ತೆಗೆದುಕೊಂಡರೆ ಅತ್ತೆ ಏನಂದಾಳು ಅನ್ನುವಷ್ಟರಲ್ಲಿ ಅತ್ತೆ ಬಂದಳು. ಅತ್ತೆಗೆ ಲಕ್ಷ್ಮಣ ಎಂದು ಗೊತ್ತಾದಾಗ ಬಹಳ ಸಂತೋಷದಿಂದ ಬುತ್ತಿ ಬಿಚ್ಚಿ ಊಟ ಮಾಡಿಸಿದಳು. ಲಕ್ಷ್ಮಣ ಪ್ರತಿಯಾಗಿ ಹೊನ್ನು ಹಾಕಿ ದಾರಿ ಹಿಡಿಯುತ್ತಾನೆ. ಇದನ್ನು ನೋಡಿದಾಗ ಲಕ್ಷ್ಮಣನ ಬಗ್ಗೆ ಹೆಣ್ಣುಮಕ್ಕಳಿಗೆ ಇದ್ದ ಅಪಾರವಾದ ನಂಬಿಕೆಯನ್ನು ಕಾಣಬಹುದು. ಆ ದಿನಗಳಲ್ಲಿ ಹೆಣ್ಣುಮಕ್ಕಳು ಬೀಸುವಾಗ ಲಕ್ಷ್ಮಣನ ಹೆಸರಿನ ಮೇಲೆ 'ನನ್ನಣ್ಣ ಲಕ್ಷ್ಮಣ' ಎಂದು ಅವನ ಗುಣಗಾನ ಮಾಡುತ್ತಿದ್ದರೆಂದು ಹೇಳುವುದನ್ನು ನೋಡಿದರೆ ಲಕ್ಷ್ಮಣನಿಗೆ ನಿಜವಾಗಿಯೂ 'ಪರನಾರಿ ಸಹೋದರ' ಎಂಬ ಮಾತು ಅನ್ವಯಿಸುತ್ತದೆ ಮತ್ತು ಅವನ ಪರೋಪಕಾರ ಪ್ರವೃತ್ತಿಯ ಬಗ್ಗೆ ಗೊತ್ತಾಗುತ್ತದೆ.

ಮುತ್ತೂರಿನಲ್ಲಿ ಒಬ್ಬ ಮುದುಕ ಉತ್ತಮ ಕವಣೆ ಹೆಣೆದಿದ್ದ. ಅವನ ಬಳಿ ಲಕ್ಷ್ಮಣ ಹಾಗೂ ಸಂಗಡಿಗರು ಬಂದು ವಸತಿಮಾಡಿ ಕೆಲವು ದಿನ ಕಳೆದಿದ್ದರು, ಧನದಾಸೆ ಮಾಡದ ಮುದುಕ ಬಹಳ ಆಸಕ್ತಿಯಿಂದ ಕವಣೆ ಮಾಡಿ ಕೊಟ್ಟು ಕಳಿಸುತ್ತಾನೆ. ಮುದುಕನ ಋಣ ಬಹಳ ಆಯ್ತೆಂದು ಲಕ್ಷ್ಮಣ ಮುದುಕನ ಮನೆಗೆ ಹಣ ತಂದು ಕೊಟ್ಟೆಗ್ಯಾಗ ಹೂಳಿದ್ದನಂತೆ. ಮುಂದೆ ಕೆಲವು ದಿನಗಳ ನಂತರ ಮುದುಕನ ಮರಣದ ಸುದ್ದಿ ತಿಳಿದ ಲಕ್ಷ್ಮಣ ಮುದುಕನ ಮನೆಗೆ ಬಂದು ಹೊನ್ನು ಅಗಿದು ಮುದುಕಿಗೆ ಕೊಟ್ಟು ಬರುತ್ತಾನೆ. ಇದರಿಂದ ಉಪಕಾರ ಮಾಡಿದವರನ್ನು ಮರೆಯದೇ ಅವರಿಗೆ 'ಪ್ರತ್ಯುಪಕಾರ' ಮಾಡುತ್ತಿದ್ದ 'ಕೃತಜ್ಞ' ವ್ಯಕ್ತಿಯಾಗಿದ್ದ ಎಂದು ತಿಳಿದು ಬರುತ್ತದೆ.

ಒಮ್ಮೆ ಅಡವಿಯಲ್ಲಿ ಸುತ್ತಾಡುವಾಗ ಊಟಕ್ಕೆ ಏನೂ ಸಿಗದಾಗ ಲಕ್ಷ್ಮಣನ ಸಂಗಡಿಗರು ಕುರಿ ಹಿಂಡಿನಲ್ಲಿಯ ಹೋತವನ್ನು ತಿನ್ನಲು ತಂದಿದ್ದರು. ಲಕ್ಷ್ಮಣ ಅವರಿಗೆ ಬದ್ದಿ ಹೇಳಿ ಈ ರೀತಿ ಬದುಕುವ ದಾರಿ ಸರಿಯಲ್ಲ ಎಂದು ಹೇಳಿ ಬಂದ ಕುರುಬನಿಗೆ ಹೋತು ಕೊಟ್ಟ. ಕುರುಬನಿಗೆ ಸಂತೋಷವಾಗಿ ಅವಸರದಿಂದ ಕುರಿಹಿಂಡಿ ಅವರಿಗೆ ಹಾಲು ಕೊಟ್ಟಾಗ ಅವನಿಗೆ ಬೆರಳುಂಗುರ ಕೊಟ್ಟು ಹೋಗುತ್ತಾನೆ.

ಹರನಾಳದ ಒಂದು ಮನೆಯಲ್ಲಿ ದರೋಡೆ ನಡೆದಾಗ ಆ ಮನೆಯಲ್ಲಿ ಹೆಣ್ಣು ಮಕ್ಕಳು ಧರಿಸುವ ಬಂಗಾರದ ಆಭರಣಗಳನ್ನು ಬಿಟ್ಟು ಮನೆಯಲ್ಲಿನ ಹೆಚ್ಚಿನ ಬಂಗಾರ ಮಾತ್ರ ಕೊಡಲು ಹೇಳುತ್ತಾನೆ ಮತ್ತು ತಂದಂತಹ ಬಂಗಾರವನ್ನು ಬಡವರಿಗೆ ಹಂಚುತ್ತಾನೆ. ಇದರಿಂದ ಹೆಣ್ಣು ಮಕ್ಕಳ ಬಗ್ಗೆ ಇದ್ದ ಗೌರವಭಾವನೆ ಹಾಗೂ ಅವನ ಉಚ್ಚವಿಚಾರಧಾರೆ ಕಂಡು ಬರುತ್ತದೆ.

ಒಂದು ಸಲ ಹೆಬ್ಬಾಳ ದಾರಿಯಲ್ಲಿ ಮಬ್ಬು ಕವಿದಿತ್ತು. ನಿಬ್ಬಣದ ಗಾಡಿಗಳನ್ನು ಕಳ್ಳರು ತಡೆದು ಸುಲಿಗೆ ಮಾಡುತ್ತಾರೆ. ದಾರೀಲಿ ಲಕ್ಷ್ಮಣ ಕಳ್ಳರನ್ನು ಬಡಿದು ಎಲ್ಲ ಒಡವೆಗಳನ್ನು ನಿಬ್ಬಣದ ಜನರಿಗೆ ಹಂಚಿ ಕಳ್ಳರಿಗೆ 'ದುರುಳ ಸಿರಿವಂತರನ್ನು ಸುಲಿದು ನಮ್ಮಂತೆ ಬಡವರಿಗೆ ಹಂಚಬೇಕು' ಎಂದು ಬುದ್ದಿ ಹೇಳಿ ಕಳಿಸುತ್ತಾನೆ.

ಕೆಲವು ಸಿರಿವಂತರು ಬಡವರಿಗೆ ಹಣ ಕೊಟ್ಟ ಬಗ್ಗೆ ಖೊಟ್ಟಿ ಕಾಗದ ಬರೆಯಿಸಿಕೊಂಡಾಗ ಲಕ್ಷ್ಮಣ ಅವುಗಳನ್ನು ಸುಟ್ಟು ಹಾಕಿದ ಮತ್ತು ಬರಗಾಲ ಬಿದ್ದಾಗ ಊರ ಗೌಡ ಬಿರಾಡ ಒಪ್ಪಿಸಲು ರೈತರಿಗೆ ತಿಳಿಸಿದಾಗ ಲಕ್ಷ್ಮಣ ಅರೆಹೊಟ್ಟೆ, ಅರೆಬಟ್ಟೆ ಇರುವಾಗ ರೈತ ಬಿರಾಡ ಹ್ಯಾಂಗ ಕೊಟ್ಟಾನು ಎಂದು ಹೇಳುವುದನ್ನು ನೋಡಿದರೆ ಬಡವರ ಬಗ್ಗೆ ಇದ್ದ ಕಳಕಳಿ ಹಾಗೂ ಅವರಿಗೆ ಉಪಕಾರ ಮಾಡುವ ಗುಣ ತಿಳಿದು ಬರುತ್ತದೆ.

ಇದನ್ನು ನೋಡಿದರೆ ಲಕ್ಷ್ಮಣ ತಂದಂತಹ ಹಣ ಒಂದು ಕಡೆ ಇಡಲಿಲ್ಲ ಬಂಧುಬಳಗಕ್ಕೆ ಹಂಚಲಿಲ್ಲ ಆದರೆ ದೀನದಲಿತರ, ನೊಂದವರ ಕೈಬಿಡಲಿಲ್ಲ, ಅವರ ಕಣ್ಣೀರನ್ನು ಒರೆಸಿದನು, ಅವರಿಗೆ ಉಪಕಾರ ಮಾಡಿದ ಎಂಬುದು ಗೋಚರವಾಗುತ್ತದೆ. ಲಕ್ಷ್ಮಣನಲ್ಲಿ ಸ್ವಾರ್ಥ ವಿರಲಿಲ್ಲ ಎಂಬುವುದು ಅವನು ತನ್ನ ಮನೆ ಬಿಟ್ಟು ಬಂದ ಮೇಲೆ ಮನೆಯ ಚಿಂತೆಯಾಗಲಿ, ಮನೆಗೆ ಹೊನ್ನು, ಹಣ ಕಳಿಸುವ ಬಗ್ಗೆಯಾಗಲಿ ಯಾವತ್ತು

ಯೋಚನೆ ಮಾಡದೇ ಇರುವುದು ಕಂಡುಬರುತ್ತದೆ. ನಮ್ಮ ಸಮಾಜದ ಮೂಲ ತತ್ವಗಳಾದ ಹಂಚಿ ತಿನ್ನುವುದು, ಹೆಣ್ಣು ಮಕ್ಕಳ ಬಗ್ಗೆ ಗೌರವ ಭಾವನೆ, ಅಸಹಾಯಕರಿಗೆ ಸಹಾಯ ಮಾಡುವುದು, ಪರೋಪಕಾರ ಮುಂತಾದ ಒಳ್ಳೆಯ ಗುಣಗಳು ಲಕ್ಷ್ಮಣನಲ್ಲಿ ಕಂಡುಬರುತ್ತವೆ.

* * *

## ೩೬. ದಾರ್ಶನಿಕ ನೆಲೆ

ಊರು ಚಿಕ್ಕದು, ಹೆಸರು ದೊಡ್ಡದು. ಹೆಸರು ಅರ್ಥಪೂರ್ಣವಾದದು ಸಾರ್ಥಕ್ಯ ವಾದದು ಒಬ್ಬ ವೀರ ಜನ್ಮತಾಳಿದಾಗ. ಅದುವೇ ಸಿಂಧೂರ ಅವನೇ ವೀರಲಕ್ಷ್ಮಣ. ಈ ಸಂಗಮವೇ ವೀರಸಿಂಧೂರ ಲಕ್ಷ್ಮಣ. ಆ ಲಕ್ಷ್ಮಣ ಜಗತ್ತನ್ನೆ ರಾಮನಲ್ಲಿ ಕಂಡ, ಈ ಲಕ್ಷ್ಮಣ ಜಗತ್ತಿನಲ್ಲಿಯೇ ರಾಮನನ್ನು ಕಂಡ ಅದಕ್ಕಾಗಿಯೇ ಈ ವೀರ, ದೇಶಕ್ಕಾಗಿ ತನ್ನ ಪ್ರಾಣವನ್ನೆ ಪಣಕ್ಕಿಟ್ಟ. ರಾಷ್ಟ್ರ, ಸಮಾಜದ ಮುಂದೆ ತನ್ನ ಪ್ರಾಣ ತೃಣಸಮಾನವೆಂದು ಬಗೆದ. ಊರು ಒಂದು ವ್ಯಕ್ತಿಯಿಂದ ಪ್ರಸಿದ್ಧಿ ಪಡೆಯಬೇಕಾದರೆ ಆ ವ್ಯಕ್ತಿಯ ವ್ಯಕ್ತಿತ್ವ ಅದೆಷ್ಟು ಅತ್ಯದ್ಭುತ! ಅಬಾಲ ವೃದ್ಧರಿಗೆಲ್ಲ ಇವನ ಹೆಸರೇ ಸ್ಫೂರ್ತಿದಾಯಕ. ಆ ಲಕ್ಷ್ಮಣನ ರೇಖೆ ದಾಟಿ ಬಂದ ರಾವಣ ರಾಮನ ಬಾಣ ತಾಕಿ ಪ್ರಾಣಬಿಟ್ಟ. ಈ ಲಕ್ಷ್ಮಣನ ರೇಖೆದಾಟಿ ಬಂದ ಆಂಗ್ಲ ರಾವಣರು ದೇಶಬಿಟ್ಟು ಪಲಾಯನಗೈದರು.

ಜಗದ ಹುಟ್ಟು ಸಾವಿನ ನಿರಂತರ ಪ್ರಕ್ರಿಯೆಯಲ್ಲಿ ಅದೆಷ್ಟೋ ಜನ ಬಂದು ಹೋಗು ತ್ತಾರೆ. ಲೋಕ ತೊರೆದು ಜನಮಾನಸದಿಂದ ಜಾರಿ ಬಹುದೂರ ಹೋಗಿ ಶಾಶ್ವತವಾಗಿ ಮರೆಯಾದವರೆ ಬಹಳ. ಜನ ಮಾನಸದಲ್ಲಿ ನಿತ್ಯಹಸಿರಾಗಿ ಉಳಿದವರು ತೀರ ವಿರಳ. ವಿರಳರಲ್ಲಿ ಲೆಕ್ಕಕ್ಕೆ ಸಿಕ್ಕವನೇ ವೀರ ಸಿಂಧೂರ ಲಕ್ಷ್ಮಣ. ಊರು ಇವನಿಗೆ ಆಧಾರವಾಗಲಿಲ್ಲ. ಇವನ ಕೀರ್ತಿ, ಶೌರ್ಯದ ಪ್ರಭೆಯಲ್ಲಿ ಊರು (ಸಿಂಧೂರು) ಬೆಳೆಯಿತು, ಬೆಳಗಿತು.

ಮಹಾರಾಷ್ಟ್ರದ ಜತ್ತ ತಾಲೂಕಿನ ಒಂದು ಚಿಕ್ಕ ಹಳ್ಳಿ ಸಿಂಧೂರ. ಓಲೆಕಾರ ಮನೆತನದ ಬಡ ಕುಟುಂಬದಲ್ಲಿ ಇವನು ಜನ್ಮತಾಳಿದ. ಬಡತನದಲ್ಲಿಯೇ ಬೆಳೆದ. ಬಡತನದ ಕಹಿ ಯಿಂದ ಬೆಳೆದವನ ಹೃದಯ ಶ್ರೀಮಂತವಾಗಿತ್ತು, ಚಿಗುರೊಡೆದ ಸಿಹಿಸಿರಿಯ ತಾಣವಾಗಿತ್ತು. ಅಗಣಿತ ಗುಣಗಳ ಸಿಂಧು ಈ ಸಿಂಧೂರ ಲಕ್ಷ್ಮಣ. ಸ್ವಾಸಾಮರ್ಥ್ಯದಿಂದ ತನ್ನ ಊರಿನ ಹೆಸರನ್ನು ಭಾರತದ ಭೂಪಟದ ಮೇಲೆ ಅನವರತವೂ ರಾರಾಜಿಸುವಂತೆ ಮಾಡಿದ. ಹೇಡಿಯದಾರಿಯನ್ನು ತೊರೆದು, ವೀರರ ಹಾದಿ ಹಿಡಿದು ಶೌರ್ಯದ ಕಿಡಿ ಹಾರಿಸಿದ ಈ ವೀರ ಇಂದಿಗೂ ಜನಮಾನಸದ ಸರೋವರದಲ್ಲಿಯ ಸೌರಭ ಸೂಸುವ ಸುಮವಾಗಿ ಅರಳಿ ನಿಂತಿದ್ದಾನೆ. ಬಡವರ ಬವಣೆ ಬಲ್ಲಿದವನಾಗಿ ಅವರ ಧ್ವನಿಯಾಗಿ, ಸೊಕ್ಕಿನ ಸಿರಿವಂತರ ದುಷ್ಟ ಅಧಿಕಾರಿಗಳೆಂಬ ಮದ್ದಾನೆಗಳಿಗೆ ಮಾವುತನಾಗಿ ಅಂಕುಶ ಹಿಡಿದ, ಏಕೈಕ ವೀರ ಸಿಂಧೂರ ಲಕ್ಷ್ಮಣ.

ಕಿತ್ತು ತಿನ್ನುವ ಬಡತನದಲ್ಲಿಯೂ ಅವನಿಗೆ ಅನೀತಿ, ಅನ್ಯಾಯ ಅಸಹನೀಯ, ಸ್ವಾರ್ಥ ಆತನ ಸುತ್ತ ಎಂದೂ ಸುಳಿಯಲೇ ಇಲ್ಲ. ಸರಿಯಾದುದನ್ನು ಸಮರ್ಥಿಸುವ ಸಾಮರ್ಥ್ಯ, ಪರೋಪಕಾರದಲ್ಲಿಯೇ ಪರಮಾನಂದ. ಇಂಥ ವ್ಯಕ್ತಿಗೆ ಕಾರ್ಯವ್ಯಾಪ್ತಿಯ ಮಿತಿ ಎಲ್ಲಿದೆ? ಅದು ಎಲ್ಲೆಡೆ ಎಲ್ಲೆಯನ್ನು ಮೀರಿ ಮೆರೆದಾಗ ಮಹಾತ್ಮನಾಗುತ್ತಾನೆ. ಹುಡುಗಾಟದ ವಯಸ್ಸಿನಲ್ಲಿಯೇ ನ್ಯಾಯ ನೀತಿಯ ಹುಡುಕಾಟ, ನಕಲಿ ಬಂದೂಕನ್ನು ಹಿಡಿದು ಆಡುವ ವಯಸ್ಸಿನಲ್ಲಿ ಅಸಲಿ ಬಂದೂಕನ್ನು ಬ್ರಿಟೀಷರನ್ನು ಬೆದರಿಸಿ ಬೆಚ್ಚಿಸಿದ.

ಹದಿನೆಂಟರ ಹರೆಯದ ಬಂಟ ಪಾರತಂತ್ರದ ಪರದೆಯನ್ನು ಹರಿದು ಹಾಕುವುದಕ್ಕಾಗಿ ಪಣತೊಟ್ಟು ಊರು, ಮನೆಯನ್ನು ಬಿಟ್ಟು ಬ್ರಿಟೀಷರ ಭೇಟೆಯಾಡಲು ಪ್ರಾರಂಭಿಸಿದ. ಹೋಗುವಾಗ ತನ್ನ ಪತ್ನಿ ಚಂದ್ರವ್ವಳಿಗೂ ಸುಳಿವು ನೀಡಲಿಲ್ಲ. ಊರು ಬಿಟ್ಟು ಹೋದವ ಊರಿಗೆ ತಿರುಗಿ ಬರಲೇ ಇಲ್ಲ. ಅವನ ಹೆಂಡತಿ ಆಗ ತುಂಬು ಗರ್ಭಿಣಿ. ಮುಂದೆ ಗಂಡು ಹುಟ್ಟಿದ ಸುದ್ದಿ ಅವನಿಗೆ ತಲುಪಿತು. ಮಗನನ್ನು ನೋಡಲು

ಬರುವುದಾಗಿ ತಿಳಿಸಿದ್ದ. ಆದರೆ ವಿಧಿಯಾಟವೇ ಬೇರೆಯಾಗಿತ್ತು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಅವನು ಬೀಳಗಿ ತಾಲೂಕನ್ನು ತನ್ನ ಕಾರ್ಯಕ್ಷೇತ್ರವಾಗಿ ಆಯ್ದುಕೊಂಡಿದ್ದ. ಇಲ್ಲಿಯೇ ಅವನು ಬ್ರಿಟೀಷರಿಗೆ ದಿಕ್ಕು ತಪ್ಪಿಸಿದ. ಅವರಿಗೊಂದು ಸವಾಲಾದ. ಇವನ ತಂತ್ರಕ್ಕೆ ಅವರ ಕುತಂತ್ರ ತತ್ತರಿಸಿತು ನಿಷ್ಕ್ರಿಯವಾಯಿತು. ಬ್ರಿಟೀಷರ ಮುಖದಲ್ಲಿ ಬೆವರೊಡೆಯಿತು. ಹೇಗಾದರೂ ಮಾಡಿ ಅವನನ್ನು ಸೆರೆಹಿಡಿಯಬೇಕೆಂಬ ಅವರ ಸರ್ವ ಪ್ರಯತ್ನಗಳು ವಿಫಲವಾದವು. ಭಾರತದ ಬಾನಂಗಳದಲ್ಲಿ ದಟ್ಟವಾಗಿ ಹರಡಿಕೊಂಡಿದ್ದ ಕಾರ್ಮೋಡಗಳಿಗೆ ಭಾಸ್ಕರನಾಗಿ ಬಂದು ಚದುರಿಸಿದ. ಜೀವಿತ ಸಮಯದಲ್ಲಿ ಇವನ ಮುಖ ನೋಡುವುದು ಬ್ರಿಟೀಷರಿಗೆ ಆಗಲೇ ಇಲ್ಲ. ಅವರಿಗೆ ಸಿಂಹಸ್ವಪ್ನನಾಗಿದ್ದ.

ಧನ ಸಂಪತ್ತುಗಳನ್ನು ಲೂಟಿಮಾಡಿ ಸ್ವಹಿತಕ್ಕಾಗಿ ಬಳಸದೆ ಬಡವರಿಗೆ ಆಶ್ರಯದಾತ ನಾದ. ಸಿರಿವಂತರನ್ನು ಸುಲಿದು ಹಸಿದವರಿಗೆ ಹಂಚುತ್ತಿದ್ದ.

ತಂದ ಹೊನ್ನರಾಣಿ
ಎಂದೂ ತನಗಿರಲಿಲ್ಲ
ಇಂದು ನಾಳೆಂದು ಅನಲಿಲ್ಲ
ಲಕ್ಷ್ಮಣ ನಂಬಿದವರ ಕೈ ಬಿಡಲಿಲ್ಲ

ಇಂದಿಗೂ ಹಳ್ಳಿಯ ಮಹಿಳೆಯರ ಬಾಯಿಯಿಂದ ಹೊರಹೊಮ್ಮುವ ಈ ಬೀಸುಕಲ್ಲಿನ ಹಾಡು ಅವನ ಚಿತ್ರಣವನ್ನು ಕಣ್ಣೆದುರು ನಿಲ್ಲಿಸುತ್ತದೆ. ತಂದ ಹಣವನ್ನು ತನಗಾಗಿ ಇಂದು ನಾಳೆಂದು ಎಂದೂ ಅನಲಿಲ್ಲ. ಬಂದು ಬೇಡಿದವರಿಗೆ ಇಲ್ಲೆನಲಿಲ್ಲ. ಯಾರಿಗಾಗಿಯೋ ಲೂಟಿ, ಯಾರಿಗಾಗಿಯೋ ನೋವು ಅನುಭವಿಸುವುದು ಇದು ಮಹಾತ್ಮರ ನಿರ್ಧಾರ. ಗಲಗಲಿಗೆ ಸಮೀಪವಿರುವ ಯಡಹಳ್ಳಿಯ ಶೇಠನ ಮನೆಯನ್ನು ಹಾಗೂ ಬಿಸನಾಳ ಶೇಠನ ಮನೆಯನ್ನು ಲೂಟಿಮಾಡಿ ಬಡವರಿಗೆ ಹಂಚಿಹೋದ. ಹೊಲಕ್ಕೆ ಬುತ್ತಿ ಒಯ್ಯುತ್ತಿದ್ದ ಮಹಿಳೆಯರನ್ನು ತಡೆದು ಹಸಿದ ಹೊಟ್ಟೆಗೆ ಅನ್ನ ಕೊಡು ಎಂದು ವಿನಯದಿಂದ ಕೇಳಿ ಪಡೆದು ಅವರಿಗೆ ಹೊನ್ನು ನೀಡುತ್ತಿದ್ದ. ಅವರನ್ನು ತಾಯಿಯ ಸ್ವರೂಪದಲ್ಲಿ ಕಾಣುತ್ತಿದ್ದ. ಪರೋಪಕಾರ ಅವನ ವೃತ್ತಿಯಾಗಿತ್ತು.

ಪರೋಪಕಾರಾಯ ಫಲಂತಿ ವೃಕ್ಷಃ
ಪರೋಪಕಾರಾಯ ವಹಂತಿ ಸದ್ಯಃ
ಪರೋಪಕಾರಾಯ ದುಹಂತಿ ಧೇನವಃ
ಪರೋಪಕಾರಾರ್ಥ ಮಿದಂ ಶರೀರಂ|

ವೃಕ್ಷಗಳು ಬಿಸಿಲಿನ ಬೇಗೆಯನ್ನು ಸಹಿಸಿಕೊಂಡು ದಾರಿಹೋಕರಿಗೆ ನೆರಳನ್ನು, ಹಣ್ಣನ್ನು ನೀಡುತ್ತವೆ. ನದಿಗಳು ಪರೋಪಕಾರವನ್ನು ಸಾಧಿಸಲೆಂದೆ ಹರಿದು ಜೀವನಸಂಕುಲಕ್ಕೆ ನೀರಿನ ದಾಹವನ್ನು ತೀರಿಸುತ್ತವೆ. ಹಸುಗಳು ಹುಲ್ಲನ್ನು ತಿಂದು ಹಾಲನ್ನು ಕೊಡುತ್ತವೆ. ಇವು ಗಳಂತೆಯೆ ಈ ಶರೀರ ಪರರ ಹಿತಕ್ಕಾಗಿ ಎಂಬ ಭಾವನೆ ನಮ್ಮಲ್ಲಿ ಇರಬೇಕು. ಈತ ವೃಕ್ಷ, ನದಿ, ಹಸುಗಳ ಸಾಲಿಗೆ ಸೇರಿದ ವ್ಯಕ್ತಿ.

ಇವನು ಹುಟ್ಟಿದ ಊರು ಮಹಾರಾಷ್ಟ್ರಕ್ಕೆ ಸೇರಿದೆ ಎಂಬ ಕಾರಣದಿಂದ ಕರ್ನಾಟಕ ಸರಕಾರದಿಂದ ತಿರಸ್ಕಾರ. ಇವನ ಮಾತೃ ಭಾಷೆ ಕನ್ನಡವೆಂಬ ಕಾರಣಕ್ಕೆ ಮಹಾರಾಷ್ಟ್ರ ಸರಕಾರ ದಿಂದ ನಿರ್ಲಕ್ಷ. ಹೀಗಾಗಿ ಈಗಿದ್ದವರ ಜೀವನ ಅತಂತ್ರ, ತಿರಸ್ಕಾರ ಅಳಿದು ಪುರಸ್ಕಾರ ಸಿಗುವುದಾದರು ಎಂದು? ಪುರಸ್ಕಾರಕ್ಕೆ ಭಾಷೆ ನೆಲ ಅಡ್ಡವಾಗಬಾರದು. ಕಾರ್ಯವೈಖರಿ, ಬದುಕಿನ ಬಗೆ ಇದನ್ನು ಅವಲಂಬಿಸಿರಬೇಕು. ಬಡವರ ಬದುಕಿಗೆ ಭರವಸೆ ನೀಡಿದ ಈ ವೀರನ ಮುಂದಿನ ಪೀಳಿಗೆಯೂ ಬಡತನ ಬವಣೆಯಲ್ಲಿಯೇ ಬದುಕನ್ನು ಸವಿಸಬೇಕೆ? ಸರಕಾರ ಸಮಾಜ ಇವರತ್ತ ಗಮನ ಹರಿಸದಿದ್ದರೆ ಘೋರ ಅನ್ಯಾಯವಾದೀತು! ಕನ್ನಡಾಂ ಬೆಯ ಹಿಡಿಶಾಪಕ್ಕೆ ಗುರಿಯಾಗಬೇಕಾದೀತು! ಸಿಂಧೂರಲ್ಲಿ

ವಾಲ್ಮೀಕಿ ಸಮಾಜಕ್ಕೆ ಸೇರಿದ ಕುಟುಂಬ ಇದೊಂದೆ. ಈಗ ಈ ಕುಟುಂಬಕ್ಕೆ ಸೇರಿದ ಆಸ್ತಿ ಒಂದುವರೆ ಎಕರೆ ಜಮೀನು ಮಾತ್ರ ಅದೂ ಮಹಾರಾಷ್ಟ್ರ ಸರಕಾರ ಸ್ವಾಧೀನಪಡಿಸಿಕೊಂಡಿದೆ. ಸಿಂಧೂರದಿಂದ ಲಕ್ಷ್ಮಣ ನಿಗೆ ಹೆಸರುಬರಲಿಲ್ಲ. ಆದರೆ ಲಕ್ಷ್ಮಣನಿಂದ ಸಿಂಧೂರಕ್ಕೆ ಕೀರ್ತಿ ಬಂದದ್ದು. ಇದಾದರೂ ಸರಕಾರದ ಗಮನದಲ್ಲಿರಬೇಕು.

ಬೀಳಗಿ ತಾಲೂಕಿನ ತೆಗ್ಗಿಯ ಗ್ರಾಮದ ಹತ್ತಿರ ಒಂದು ಗುಡ್ಡ ಅಲ್ಲಿ ಕಪ್ಪರದ ಪಡಿಯವ್ವನ ಗುಡಿ. ಅದು ಪವಿತ್ರಸ್ಥಾನ. ಆದರೆ ಇವನಿಗೆ ಅದು ಮೃತ್ಯು ತಾಣವಾಯಿತು. ಸ್ವಜನರ ಮೋಸದಿಂದಲೆ ಪೊಲೀಸರ ಗುಂಡಿಗೆ ಇಲ್ಲಿಯೇ ಬಲಿಯಾದ. ೧೧ ಜುಲೈ ೧೯೨೨ರಂದು ವೀರಸ್ವರ್ಗ ಸೇರಿದ. ಆಗ ಅವನಿಗೆ ಕೇವಲ ೨೪ವಯಸ್ಸು. ಯಾರಿಗೂ ಮೋಸ, ಅನ್ಯಾಯ ಮಾಡಲಿಲ್ಲ. ಆದರೆ ಅವನಿಗೆ ಅದು ತಪ್ಪಲಿಲ್ಲ. "ಸರ್ವೆ ಜನಾಃ ಸುಖಿನೋಭವಂತು" ಎಂಬ ಮಂತ್ರವನ್ನು ಪರಿಸುತ್ತ ಮಹಾತ್ಮರ ದಾರಿಯಲ್ಲಿ ನಡೆದು, ಪ್ರಾಮಾಣಿಕ ಪ್ರಯತ್ನದಿಂದ ದೇಶದ ಸಮಾಜದ ಸೇವೆ ಮಾಡುವುದೆ, ಸ್ವಾತಂತ್ರಕ್ಕಾಗಿ ಹೋರಾಡಿದ ವೀರ ಸಿಂಧೂರ ಲಕ್ಷ್ಮಣನಿಗೆ ಸಲ್ಲಿಸುವ ನಿಜವಾದ ಗೌರವ.

ಧರ್ಮಾಧರ್ಮದ ಬಗ್ಗೆ ಪ್ರಜ್ಞೆಯುಳ್ಳವ. ಅಧರ್ಮದ ಶೌರ್ಯ ಅಧಃಪತನಕ್ಕೆ ಕಾರಣ. ಆದರೆ ಇವನ ಶೌರ್ಯ ಧರ್ಮದ ಸಹಭಾಗಿತ್ವದಲ್ಲಿ ಸಾಗಿ ಸಾರ್ಥಕ ಬಾಳಿಗೆ ಬೆಳಕು ನೀಡಿದೆ. ಆ ಭವ್ಯದಿವ್ಯಬೆಳಕಲ್ಲಿ ಕೀರ್ತಿ ಬಾವುಟದ ಆರೋಹಣ. ಇವನು ಬುದ್ಧಿ, ಬಲ, ಧೈರ್ಯ ದಾಯಕನಾದ ತುಳಸಿಗಿರಿ ಆಂಜನೇಯನ ಪರಮಭಕ್ತ. ಕೊರಳಲ್ಲಿ ಸದಾ ಮಾರುತಿಯ ತಾಯಿತ. ಇವನ ತಾಯಿ ತಾಯಿಯ ತವರೂರು ಶೂರ್ಪಾಲಿ (ಮರನೂರು).. ಇದು ಕೃಷ್ಣೆಯ ತಟದಲ್ಲಿದೆ. ಇಲ್ಲಿ ಗಂಗೆಯೇ ಪ್ರತ್ಯಕ್ಷಳಾಗಿ ಮರದ ಬಾಗಿಣಕೊಟ್ಟಳೆಂಬ ಪ್ರತೀತಿ ಇದೆ. ಆದ್ದರಿಂದ ಇದಕ್ಕೆ ಮರನೂರು ಎಂಬ ಹೆಸರು ಬಂದದ್ದು. ಶೂರ್ಪಾಲಿ ಎಂತಲೂ ಕರೆಯುತ್ತಾರೆ. ಅದು ಇದೇ ಅರ್ಥವನ್ನು ನೀಡುತ್ತದೆ. ಅಲ್ಲಿ ಶ್ರೀಲಕ್ಷ್ಮೀ ನರಸಿಂಹನು ಕ್ಷೇತ್ರದೇವ. ಅದಕ್ಕಾಗಿಯೇ ಇವನ ತಾಯಿಯ ಹೆಸರು ನರಸಮ್ಮ. ಅವಳು ಮದುವೆಯಾಗಿ ಸಿಂಧೂರ ಸೇರಿದ್ದರಿಂದ ಇವನಿಗೆ ನರಸಿಂಹನೆಂಬ ಹೆಸರು ತಪ್ಪಿತು. ಅವನ ಹೆಸರು ಇಡಲಿಲ್ಲ, ಆದರೆ ಅವನ ಅವತಾರದ ಉದ್ದೇಶ ಇವನನ್ನು ಬಿಡಲಿಲ್ಲ. ಪಡೆದದ್ದನ್ನು ಪಿಡಿದುಕೊಂಡೇ ಪ್ರಗತಿಯ ಪಥವನ್ನು ಸುಗಮಗೊಳಿಸಿದ. ಅನ್ಯರಿಗೆ ಆದರ್ಶನಾದ. ಕೀರ್ತಿ ಶಿಖರದ ತುತ್ತ ತುದಿಯನ್ನು ತುಲುಪಿದ. ಸಾಧಿಸಬೇಕಾದದ್ದನ್ನೆಲ್ಲ ಚಿಕ್ಕ ವಯಸ್ಸಿನಲ್ಲಿಯೇ ಸಾಧಿಸಿ ಇಹಲೋಕ ಯಾತ್ರೆ ಮುಗಿಸಿದ. ಇವನ ಸದ್ಭಾವನೆ, ಶೌರ್ಯ, ಕೀರ್ತಿ, ಹೃದಯ ವಂತಿಕೆಯನ್ನು ಕಂಡ ಭಗವಂತ ಇವನನ್ನು ತನ್ನೊಂದಿಗೆ ಕರೆದೊಯ್ದು ತನ್ನ ಲೋಕದ ಅವಶ್ಯಕತೆಯನ್ನು ತೀರಿಸಿಕೊಂಡಿರಬಹುದು. ವೀರಸಿಂಧೂರ ಲಕ್ಷ್ಮಣ ಎಲ್ಲರ ಕಣ್ಣಿಂದ ದೂರಾದ. ಆದರೆ ಹೃದಯದಿಂದಲ್ಲ. ಅವನು ಎಂದೆಂದಿಗೂ ಅಮರ.

* * *

ಕರ್ನಾಟಕದಲ್ಲಿ ಮೊದಲಿನಿಂದಲೂ ನಡೆಯುತ್ತ ಬಂದ ಎಲ್ಲ ಯುದ್ಧಗಳಲ್ಲಿ ನಾಯಕ ಜನಾಂಗದವರೇ ಹೆಚ್ಚಾಗಿ ಸೈನಿಕರಾಗಿ ದುಡಿದದ್ದು ಐತಿಹಾಸಿಕ ಸತ್ಯ. ಕೆಲವರು ಪಾಳೆಯಗಾರರೂ ದೊರೆಗಳೂ ಆಗಿದ್ದರು. ಈಗಲೂ ಈ ಜನಾಂಗದ ಜನರಲ್ಲಿ ಹರಿಯುತ್ತಿರುವುದು ವೀರರಕ್ತ. ಇವರು ತುಂಬಾ ಸ್ವಾಭಿಮಾನಿಗಳು. ಅಭಿಮಾನ ಧನರು. ಮಾನ ಮರ್ಯಾದೆಗಳ ಪ್ರಶ್ನೆ ಬಂದಾಗ ಪ್ರಾಣವನ್ನು ಅರ್ಪಿಸಬಲ್ಲ ಕೆಚ್ಚೆದೆಯವರು. ಆದುದರಿಂದಲೇ ಇವರನ್ನು ಜನರು ನಾಯಕ ರೆಂದು ಗೌರವಿಸಿದ್ದಾರೆ.

**– ಬಸವರಾಜ ಕಟ್ಟೀಮನಿ**

## ೩೭. ಧೈರ್ಯ ಸಾಹಸ

ರಾಮಾಯಣ ಮಹಾಕಾವ್ಯ ರಚಿಸಿದ ವಾಲ್ಮೀಕಿಯನ್ನು ಮರೆಯುವಹಾಗಿಲ್ಲ. ಈ ಮಹಾತಪಸ್ವಿಯನ್ನೇ ಮೂಲವಾಗಿಟ್ಟುಕೊಂಡು ಧೈರ್ಯ ಸಾಹಸದ ಶ್ರಮ ಸಂಸ್ಕೃತಿಯ ಸಮುದಾಯವಂದು ಆಗ ಬೆಳೆದುಬಂದಿತು. ಹೀಗೆ ಬೆಳೆದುಬಂದ ಸಮುದಾಯವೇ ಬಡ, ನಾಯಕ ಸಮುದಾಯ. ತನ್ನದೆಯಾದ ಪರಂಪರೆ ಹಾಗೂ ಸಂಸ್ಕೃತಿಯೊಂದಿಗೆ ಇಂದಿಗೂ ಈ ಸಮುದಾಯ ಬದುಕಿನ ಎಲ್ಲ ಸ್ಥರದಲ್ಲೂ ಬೆಳೆದು

ನಿಂತಿದೆ. ಅನ್ಯ ಸಮುದಾಯ ಗಳೊಂದಿಗೆ ಅನನ್ಯತೆಯಿಂದ ಈ ಜಲನೆಲದ ಜಗದಲ್ಲಿ ಗಟ್ಟಿಹೆಜ್ಜೆಯೂರಿ ಅನೇಕ ಬಗೆಯ ಸಾಧನೆಗೈದಿದೆ. ಈ ಸಮುದಾಯವು ಮೂಲತಃ ಬೇಟೆಯಾಡುವ ವೃತ್ತಿಯಿಂದ ವಿಕಾಸ ಗೊಂಡು ಕ್ರಮೇಣ ಪಶುಪಾಲನೆ ಕೃಷಿ, ರಾಜಕೀಯ ಹೀಗೆ ತನ್ನದೆಯಾದ ಶಕ್ತಿ ಸಾಮರ್ಥ್ಯ ವನ್ನು ತೋರುತ್ತ ಸಾಗಿದೆ. ತನ್ನ ನಂಬಿಕೆ ಆಚರಣೆಗಳ ಮೂಲಕ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ. ಇಂತಹ ಪರಿಶ್ರಮದ ಸಮುದಾಯದಲ್ಲಿ ಗುರುಭಕ್ತಿಗೆ ತನ್ನನ್ನೇ ಅರ್ಪಿಸಿಕೊಂಡ ಏಕಲವ್ಯ, ಕಣ್ಣನ್ನೇ ದಾನಮಾಡಿದ ಕಣ್ಣಪ್ಪ, ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡ ಹಲಗಲಿಯ ಬೇಡರು, ಮುಧೋಳದ ಜಡಗಾಬಾಲಾ ಎಚ್ಚಮನಾಯಕ, ಮದಕರಿಯನಾಯಕ ಮುಂತಾದ ವೀರಪುರುಷರಿಗೆ ಜನ್ಮನೀಡಿದ್ದು ಈ ಸಮುದಾಯ. ಇವರಂತೆ ದೀನದಲಿತರಿಗಾಗಿ, ಶೋಷಿತರ ಏಳ್ಗೆಗಾಗಿ ತನ್ನ ಸಂಸಾರಸುಖ ತ್ಯಾಗ ಮಾಡಿದ ಬ್ರಿಟೀಷರ ವಿರುದ್ಧ ಹೋರಾಡಿದ ಧೈರ್ಯಶಾಲಿ, ಸಾಹಸಿ ಪುರುಷನೇ ವೀರ ಸಿಂದೂರ ಲಕ್ಷ್ಮಣ. ಬಡತನದಲ್ಲಿ ಬೆವರು ಸುರಿಸಿ ಸಾಮಾಜಿಕ ಶೋಷಣೆಗೆ ಒಳಪಡುವವರ ರಕ್ಷಕ. ಆರ್ಥಿಕವಾಗಿ ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವಲ್ಲಿ ಪ್ರಯತ್ನಿಸಿದ ಲಕ್ಷ್ಮಣನ ಬದುಕಿನ ಕಥೆ ರೋಮಾಂಚನಕಾರಿ ಯಾದುದು. ಬ್ರಿಟೀಷರ ವಿರುದ್ಧ ಬಂಡಾಯಗಾರನಾಗಿ ತಂಡವೊಂದನ್ನು ಕಟ್ಟಿಕೊಂಡು ಗುಡ್ಡಬೆಟ್ಟಗಳಲ್ಲೆಲ್ಲ ಅಲೆದು ಸಾಮಾಜಿಕ ಅಸಮಾನತೆ ವಿರುದ್ಧ ಹೋರಾಡಿದ ಲಕ್ಷ್ಮಣನ ಸಾಹಸಗಾಥೆ ಇಂದಿಗೂ ಚಿರಸ್ಥಾಯಿಯಾಗಿ ಉಳಿದಿದೆ. ಈ ವೀರಪುರುಷನ ಧೈರ್ಯ ಸಾಹಸಗಳನ್ನು ಅನೇಕರು ಅನೇಕ ರೀತಿಯಲ್ಲಿ ಚಿತ್ರಿಸಿದ ಚಿತ್ರಣ ಇಲ್ಲಿದೆ.

ಸಿಂಧೂರಿನ ಈ ಯುವಕ ಬಡತನ ಬೆಂಕಿಯಲ್ಲಿ ಅರಳಿದವ, ಶ್ರೀಮಂತಿಕೆಯನ್ನು ತನ್ನ ಜೀವನದಗುರಿಯಾಗಿಸಿಕೊಂಡ ಪರಿಶ್ರಮಿ. ತಂದೆ ಸಾಬಣ್ಣನ ನಂತರ ಸಿಂಧೂರಿನ ವಾಲಿಕಾರಿಕೆ ಯನ್ನು ಸಮರ್ಥವಾಗಿ ನಿರ್ವಹಿಸಿದ ಬಲಶಾಲಿಯುವಕ. ಬೆನ್ನಿಗೆ ಬಿದ್ದವರನ್ನು ಬದುಕಿಸಿದವ. ಬಡವರ ಬಂಧುವಾಗಿ ಅವರ ಕಷ್ಟಗಳಿಗೆ ಬದುಕಿನ ಉಸಿರನ್ನು ನೀಡಿದ ಮಾನವತೆಯ ಶ್ರೀಮಂತನೆಂದು ಈತನ ಧೈರ್ಯಸಾಹಸವನ್ನು ಜನರು ಹಾಡಿ ಹೊಗಳಿದ್ದಾರೆ.

“ಗಂಡಸಿದ್ದರೆ ಇರಬೇಕು ಎಂಥಾವಾ
ನಮ್ಮ ಸಿಂಧೂರ ಲಕ್ಷ್ಮಣನಂಥಾವ
ಮಲ್ಲಿನ ಅಂಗಿ ಮೈಮ್ಯಾಲ
ಚಾಕ್ರಿಕೋಲು ಕೈಯಾಗ
ಶಮನಬಿಟ್ಟು ಪಟಗಾ ಸುತ್ತಿ
ಚಾವಡಿಗೆ ಹೊಂಟಾನ”

ಎನ್ನುವ ಈ ಜನಪದ ಹಾಡಿನಲ್ಲಿ ಲಕ್ಷ್ಮಣನ ಧೈರ್ಯ, ಮನೋಸ್ಥೈರ್ಯ, ಆತನ ಮೈಕಟ್ಟು, ದೇಹ ದಾರ್ಢ್ಯತೆ, ಆತನ ಗಂಭೀರತೆಯ ಚಿತ್ರಚಿತ್ರಿತವಾಗಿದೆ. ಹೀಗೆ ಲಕ್ಷ್ಮಣನೊಬ್ಬ ಅಜಾನುಬಾಹು ವ್ಯಕ್ತಿ. ಹದಿನಾರು ಗುಂಡಿಗಳಿರುವ ಶಕ್ತಿಯು ಆತನಿಗಿತ್ತೆಂದರೆ ಅವನೆಂಥ ಶಕ್ತಿಯ ಶರೀರವೆಂಬುದು ತಿಳಿಯುತ್ತದೆ.

ತಮ್ಮೂರಿನ ಶೆಟ್ಟರ ಮಗಳ ಮದುವೆಗೆ ತುಂಗಳಕ್ಕೆ ಬಂದಾಗ ಮದುವೆ ಊಟದ ಸಮಯದಲ್ಲಿ ಪರಪಂತಿ ಮಾಡಿ ದೂರಕೂಡಿಸಿ ಊಟ ಹಾಕಿದಾಗ ಲಕ್ಷ್ಮಣನ ಹದಿಹರೆಯದ ಮನಸ್ಸಿಗೆ ಎಷ್ಟು ನೋವಾಗಬೇಡ? ಆಗಲೇ ಆತ “ನಮ್ಮದು ಮನುಷ್ಯಜಾತಿ, ನಾಯಿಗಿಂತ ಕೀಳಲ್ಲವೆಂದು” ಊಟಮಾಡದೆ ಹೊರನಡೆದ. ಆ ಕ್ಷಣದಲ್ಲೆ ಜಾತಿವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಧೈರ್ಯ ಆಗಲೇ ಬೇರೂರಿದ್ದು ಮುಂದೆ ಅದು ಅಂಕುರಿಸುತ್ತ ತಾರತಮ್ಯತೆಯ ವಿರುದ್ಧ ಸೆಡ್ಡು ಹೊಡೆಯಲಾರಂಭಿಸಿದ. ಹೀಗೆ ನಿಧಾನವಾಗಿ ಲಕ್ಷ್ಮಣ ಈ ವ್ಯವಸ್ಥೆಯ ವಿರುದ್ಧ ಹೋರಾಡಲು ಸಿದ್ಧವಾದ ಕೆಲವು ಪ್ರಸಂಗಗಳನ್ನು ಸಿಂಧೂರ ಲಕ್ಷ್ಮಣನನ್ನು ಕುರಿತು ನಾಗರಾಳದ ಕಂಠಿ ಹನುಮಂತರಾಯ ಬರೆದ ನಾಟಕಗಳಿಂದ ಕೆಲವು ಸಂಭಾಷಣೆಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ.

ಭೀಕರ ಬರಗಾಲ, ದನಕರುಗಳಿಗೂ ಆಹಾರ ಇಲ್ಲವಾಯ್ತು, ಅಳಿಯ ಸರಸು, ಸಾಬು, ಗೋಪಾಲಿ, ಹೊಟ್ಟೆಹಿಟ್ಟಿಗಾಗಿ ದರೋಡೆ ಮಾಡಿ ಪೊಲೀಸರಿಂದ ತಪ್ಪಿಸಿಕೊಂಡು ಆಸರೆಗಾಗಿ ಲಕ್ಷ್ಮಣನ ಮನೆಗೆ ಬಂದರು. ಆಗ ಲಕ್ಷ್ಮಣನ ಹೆಂಡತಿ ಚಂದ್ರಿಗೆ ಈ ರೀತಿ ಹೇಳುತ್ತಾನೆ. "ಮನಿ ದೀಪ ಅಂತ ಮುದ್ದುಕೊಡಬಾರದು, ಇಂಥವರನ್ನು ಒದ್ದು ಸರಕಾರಕ್ಕೆ ಒಪ್ಪಿಸಬೇಕು" ಎನ್ನುವ ಮಾತಿನಲ್ಲಿ ನಿಷ್ಠೆ, ಪ್ರಾಮಾಣಿಕತನ, ಲಕ್ಷ್ಮಣನ ಸಾಚಾತನ ವ್ಯಕ್ತವಾಗುತ್ತದೆ. "ಉಣ್ಣಾಕ ಸಿಗದವು ಉಪವಾಸ ಸಾಯಬೇಕು, ಅದು ಮನುಷ್ಯಧರ್ಮ, ಹಸದೀನಿ ಅಂತ ಹೋಗಿ ಇನ್ನೊಬ್ಬರ ಅನ್ನ ಕಸಕೊಂಡ ಉಣ್ಣೋದು ಮಹಾಪಾಪ" ಎನ್ನುವ ಲಕ್ಷ್ಮಣನ ಮಾತಿಗೆ ಹೆಂಡತಿ ಚಂದ್ರಿ "ಸುಖಾ ಉಂಡು ಸೊಕ್ಕ್ಯಾದಲ್ಲಿ ಶ್ರೀಮಂತರು ಬಂದಿರೋ ಬರಗಾಲ ದಾಗ ಬಿಕ್ಕಿ ಬಿಕ್ಕಿ ಬಾಯಿಬಿಡೋ ಬಡುವ್ರ ಹೊಟ್ಟೀಗೆ ತುತ್ತು ಅನ್ನ ಹಾಕಿದ್ರ ಅವ್ರ ಶ್ರೀಮಂತಕೇನ ಸವೆದುಹೋಗುತ್ತಿತ್ತೆ. ಬಡವ್ರ ಮ್ಯಾಲ ದಯಾಮಯ ಇಲ್ಲದ ಶ್ರೀಮಂತರ ಮನಿಯಾಕ ದರೋಡೆ ಮಾಡಬಾ್‌ದುರ? ಎಂದಾಗ ಲಕ್ಷ್ಮಣನ ಎದೆ ಝಲ್ ಎನ್ನದಿರಲಿಲ್ಲ ಆಗಲೇ ಅಸಮಾನತೆವಿರುದ್ಧ ಹೋರಾಡಬೇಕೆಂಬ ಬೆಳಕು ಮಿಂಚಿಹೋಯ್ತು. ಆಗ ಲಕ್ಷ್ಮಣ "ಪರೋಪಕಾರದ ಕೆಲಸಕ್ಕೆ ಲೈಸೆನ್ಸ್ ಯಾಕ ಬೇಕ್ರಿ ಧರ್ಮದಿಂದ ನಡೀತೀನಿ ಅನ್ನವ್ಗ ದೇವರ ಅಂಜಕೀನೂ ಇಲ್ಲವೆನ್ನುತ್ತ", "ಧೈರ್ಯಂ ಸರ್ವತ್ರ ಸಾಧನಂ" ಮಂತ್ರಕ್ಕೆ ಶರಣಾದ. ಆಗಿಂದಲೇ ಮನೆಮಠಬಿಟ್ಟು ಈ ವ್ಯವಸ್ಥೆಯ ವಿರುದ್ಧ ಹೋರಾಡಲು ತಂಡವೊಂದನ್ನು ಕಟ್ಟಿ ಕೊಂಡು ಸೊಂಟಕಟ್ಟಿದ.

ಹೀಗೆ ಸಿಂಧೂರ ಲಕ್ಷ್ಮಣ ಸ್ವಂತಸುಖವನ್ನು ಲೆಕ್ಕಿಸದೆ ಸತ್ಯವನ್ನು ಕರ್ತವ್ಯವನ್ನು ಬಿಡದೆ ಎಂತಹ ಪ್ರಸಂಗಗಳಲ್ಲೂ ಅಂಜದೆ ಅಳುಕದೆ ಎಲ್ಲ ತರಹದ ಆಪತ್ತು ವಿಪತ್ತುಗಳನ್ನು ಸಹಿಸಿಕೊಳ್ಳಲು ಸಿದ್ಧನಾದ. ತಂದೆ ಅಡವಿಟ್ಟ ಬಂಗಾರದ ಸಾಮಾನು ಇಲ್ಲವೆಂದ ಶ್ರೀಮಂತನ ವಿರುದ್ಧ ಬಂಡೆದ್ದ. ಈ ಧರ್ಮಯುದ್ಧದಲ್ಲಿ ಕಾಮ, ಕ್ರೋಧ, ಮದ, ಮತ್ಸರ, ಲೋಬ, ಮೋಹಗಳಲ್ಲೆವನ್ನು ದಾಟಿದ ಧೈರ್ಯವಂತ. ಈ ಆತ್ಮ ಸಂಯಮತೆಯಿಂದ ಬಲಿಷ್ಠನಾಗಿ ಪ್ರೀತಿಯ ಹೆಂಡತಿಯನ್ನು ಭಕ್ತಿಶಕ್ತಿಯಾದ ತಾಯಿ ನರಸಮ್ಮಳನ್ನು ಬಿಟ್ಟು ಹಗಲಿರುಳು ಅಡವಿ ಸೇರಿ ಅಲೆದಾಡುವುದು ಅಷ್ಟು ಸುಲಭದ ಕೆಲಸವಲ್ಲ. ಇದಕ್ಕೆ ಧೈರ್ಯಬೇಕು, ಆತ್ಮಸ್ಥೈರ್ಯ ತಾಕತ್ತುಬೇಕು. ಸಿಂಧೂರ ಲಕ್ಷ್ಮಣ ಇವೆಲ್ಲವನ್ನು ಗೆದ್ದ ವೀರಶೂರನಾಗಿ ದ್ದಾನೆ.

ತನ್ನ ತಂದೆಯೊಂದಿಗೆ ಕಷ್ಟನಷ್ಟಗಳೆಲ್ಲವನ್ನು ಮೆಟ್ಟಿನಿಂತ ಹೊತ್ತಿಗೆ ಸರಿಯಾಗಿ ತುತ್ತಿನ ಚೀಲ ತುಂಬಿಸುವ ಚಿಂತೆ, ನೀರು, ಬಟ್ಟೆ, ಬರೆಯ ಬದುಕು ಎಷ್ಟು ಕಷ್ಟ? ಅದು ಅನುಭವಿಸು ವವರಿಗೇ ಗೊತ್ತು. ಆ ನೋವುನಲಿವುಗಳನ್ನು ತನ್ನ ವನವಾಸದ ಕಾಲದಲ್ಲಿ ಆತ್ಮಶಕ್ತಿಯನ್ನು ಕಳೆದುಕೊಳ್ಳದೆ ಹೋರಾಟದಲ್ಲಿ ತೊಡಗುವುದು ಬಲಿಷ್ಠ ಹೃದಯಕ್ಕೆ ಮಾತ್ರ ಸಾಧ್ಯ. ಅಂತೆಯೇ ಈತನನ್ನು 'ಎಂಟೆದೆಯ ಬಂಟ' ಎಂದು ಕರೆದಿರುವುದೂ ಉಂಟು. 'ಶಾಂತತೆಯ ಕಾಲದಲ್ಲಿ ಎಲ್ಲರೂ ಧೈರ್ಯಶಾಲಿಗಳೇ, ಮೇಮೇಲೆ ಸಮಸ್ಯೆಗಳು ಕಠಿಣ ಪ್ರಸಂಗಗಳು ಬಂದೆರಗಿದಾಗ ತಮ್ಮ ಜೀವವನ್ನು, ಜೀವನವನ್ನು ಲೆಕ್ಕಿಸದೆ ಪರರಿಗೆ ಪರೋಪಕಾರ ಮಾಡುವ ವರ ಶಕ್ತಿಯೇ ಧೈರ್ಯ". ಹೀಗೆ ಲಕ್ಷ್ಮಣ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆಯ ಮಿದ್ಧ ಗುಡುಗು ಸಿಡಿಲಿನಂತೆ ಆರ್ಭಟಿಸಿದ. ಹಾಡುಹಗಲೇ ಶ್ರೀಮಂತರ ಮನೆಗಳನ್ನು ಹೇಳಿಕೇಳಿ ಕೊಳ್ಳೆಹೊಡೆದ. ಕೊಳ್ಳೆಹೊಡೆದುದನ್ನು ತನಗಾಗಿ, ತನ್ನವರಿಗಾರಿಗೊ ಕೊಡಲಿಲ್ಲ. ಎದುರಿಗೆ ಬಂದವರಿಗೆಲ್ಲ ಹಂಚುತ್ತಾ ನಡೆದ. ಹಸಿದ ಹೊಟ್ಟೆಗೆ ತುತ್ತು ರೊಟ್ಟಿಕೊಟ್ಟವರಿಗೂ ಚಿನ್ನಾ ಭರಣಗಳನ್ನು ನೀಡಿ ನಡೆದ. ಹೀಗೆ ಜನಹಿತಕ್ಕಾಗಿ ದೃಢನಿಶ್ಚಯದಿಂದಲೂ ವಿವೇಕದಿಂದಲೂ ನಡೆದು ವೀರನೆನಿಸಿಕೊಂಡ. "ಛಳಿ ಹತ್ತಿದವರು ನಡುಗುತಿರಬೇಕು. ಆದ್ರ ಎದೀ ಗುಂಡಿಗ್ಯಾಗ ಬೆಂಕಿಕೆಂಡದಂತಾ ಬಿಸನೆತ್ತರಾ ತುಂಬಿಕೊಂಡಿರೋ ನಾ ಯಾಕ ನಡುಗಲಿ" ಎನ್ನೋ ಲಕ್ಷ್ಮಣನ ಮಾತಿನಲ್ಲಿ ಎಂತಹ ಗಂಡೆದೆಯ ಗುಂಡಿಗೆ ಇರಬೇಕು. "ಬ್ಯಾಡರ ಕುಲದ ಬಂಟ ಹುಲಿಕೂಡ ಗುದ್ಯಾಡ್ದ ಇಲಿಕೂಡ ಆಡಬೇಕನವಾ ಯವ್ವಾ! ನಿನ್ನ ಮಗ ಮಲದ ಬ್ಯಾಟಿ ಆಡೋನಲ್ಲ, ಹುಲಿಬ್ಯಾಟಿ ಆಡಿ ಹೆಸರಾಗೋ ಕಲಿ" ಎನ್ನುವಲ್ಲಿ ಆತನ ಧೈರ್ಯದ ತಾಕತ್ತಿನ ಆಳ ಊಹಿಸಲೂ ಕಷ್ಟಸಾಧ್ಯ. ಹೀಗೆ ತನ್ನ ಲೆಕ್ಕಿಸದೆ ಪರರ ಹಸಿವನ್ನು ಹಿಂಗಿಸಲು ಹೋರಾಡಿದ ಮಾನವತೆ ಸರದಾರ ಪಡೆದುದನ್ನು ಬಡಬಗ್ಗರಿಗೆ ಹಂಚುವ ವಿಶಾಲ ಹೃದಯ.

ಬ್ರಿಟೀಷ್ ಸರಕಾರದ ವಿರುದ್ಧ ಬಂಡಾಯ ಕಹಳೆಯನ್ನು ಊದಿದ ಶೂರ. ಶೋಷಿತರನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ, ದುಡಿಸಿಕೊಳ್ಳುವ ಅವರನ್ನು ಕೀಳಾಗಿ ನಡೆಸಿಕೊಳ್ಳುವುದು ಯಾವ ಕಾನೂನಿನಲ್ಲಿಯೂ ಇಂದಿಗೂ ಎಂದಿಗೂ ಇಲ್ಲವೆಂಬುದನ್ನು ಮನಗಂಡ ಧೀಮಂತ.

(೧೯೨೦ ರಿಂದ ೧೯೪೭ರ ದೇಶದ ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ಈತ ಕಾರ್ಯೋನ್ಮುಖಿ ನಾದ. ಈತನ ಸಾಮರ್ಥ್ಯ ಪರಿಸರಕ್ಕಿಂತಲೂ ಪರಿಸ್ಥಿತಿಯನ್ನೇ ಅವಲಂಬಿಸಿ ಇಮ್ಮಡಿ ಗೊಂಡಿತು. ನೈತಿಕ ಬಲ ಲಕ್ಷ್ಮಣನ ಕಾರ್ಯಕ್ಕೆ ಮತ್ತಷ್ಟು ಬೆಳಕು ನೀಡಿತು. ಅಂತೆಯೇ ಲಕ್ಷ್ಮಣ ಭಯಭೀತಿಯನ್ನು ಅಲ್ಲೆಗಳೆದು ಈ ಕಾರ್ಯದಲ್ಲಿ ನಿರತನಾದ. ಶೂರವೀರ ಎಂಬ ನಂಬಿಕೆಗೆ ಪಾತ್ರನಾದ).

ಕೌಲೆಟ್ ಕಾಯಿದೆ ಜಾರಿಗೆ ಬಂದಕಾಲ. ಭಾರತದ ಯುವಕರನ್ನು ಬಲಾತ್ಕಾರವಾಗಿ ಸೇನೆಗೆ ಸೇರಿಸಿಕೊಳ್ಳುವ ಸಮಯ ಈ ಕಾಯಿದೆಯನ್ವಯ ಭಾರತೀಯರನ್ನು ಸಕಾರಣವೂ ಇಲ್ಲದೆ ರಾಜದ್ರೋಹಿ ಎಂದು ಶಿಕ್ಷಿಸುವ ಕಾಲ. ಬರಗಾಲದಲ್ಲೂ ಕಂದಾಯವನ್ನು ಕೊಡಲೇ ಬೇಕು. ಅಂತಹ ಕಂದಾಯ ವಸೂಲಿ ಮಾಡುವ ವಾಲೀಕಾರ ಸಿಂಧೂರ ಲಕ್ಷ್ಮಣ. ಕಂದಾಯ ವಸೂಲಿ ಮಾಡುವ ಬದಲು ಸರಕಾರಕ್ಕೆ ಕಂದಾಯವನ್ನು ಯಾರೂ ಕೊಡಬಾರದೆಂದು ಬ್ರಿಟೀಷರ ವಿರುದ್ಧ ಮೊದಲ ಕಹಳೆಯನ್ನು ಊದಿದ ಮನೋಬಲದ ಛಲಗಾರ. ಅಂದಿನಿಂದ ವಾಲಿಕಾರಿಕೆಗೆ ಶರಣೆಂದು ಶ್ರಮದ ಬದುಕನ್ನು ಆರಿಸಿಕೊಂಡಾತ. ಬ್ರಿಟೀಷರ ಕಾಸಿಗೆ, ಉಂಬಳಿಗೆ ಬೆಲೆಗೊಡದೆ ಸಾರ್ವಜನಿಕ ವ್ಯಕ್ತಿಯಾಗಿ ಸಮಾಜದ ಮಗನಾಗಿ ಜನಮನ ಸೂರೆಗೊಂಡ.

“ಸಿಂಧೂರ ಲಕ್ಷ್ಮಣ ಹುಟ್ಟ್ಯಾನ ಬಂಟ ಅನಿಸ್ಯಾನ
ಕೊಟ್ಟ ವಚನವ ಮೆಟ್ಟಿದ ಮ್ಯಾಲ ಎಂದೂ ತಪ್ಪಲಿಲ್ಲ
ಘಟಾ ದೋಗೋತನಕ ಹಿಡ್ಡ ಹಟಾ ಬಿಡಲಿಲ್ಲ”

ಎನ್ನುವಲ್ಲಿ ಎದೆಗಾರಿಕೆ, ಛಲಗಾರಿಕೆಯನ್ನು ನೋಡಬಹುದು.

ಕ್ಯಾತನಹಳ್ಳಿಯ ರಾಮಣ್ಣ ಅವರು ಸಂಪಾದಿಸಿರುವ ವಿಜಾಪುರ ಜಿಲ್ಲೆಯ ಲಾವಣಿಗಳು, ೧೯೭೯ ಗ್ರಂಥದ “ಸಿಂಧೂರಾಗ ಹುಟ್ಟ್ಯಾನ ಲಚ್ಯಾ” ಲಾವಣಿಯಲ್ಲಿ ಲಕ್ಷ್ಮಣ್ಣನ ಧೈರ್ಯ ಸಾಹಸದ ಗೀತೆ ತುಣುಕುಗಳ ಚಿತ್ರಣ ಇಲ್ಲಿದೆ. ಸಿಂಧೂರಿಗೆ ಬಂದ ಫೌಜುದಾರ ಲಕ್ಷ್ಮಣನನ್ನು ಹಿಡಿದು ಬೇಡಿಹಾಕಲು ಹೋದಾಗ.

ಲಕ್ಷ್ಮಣ ಹೇಳತಾನ
ಬಾಳ ಹುಷಾರಲಿಂದ ಬಾ ಎದ್ದು
ಏನು ಆಗೂದು ಆಗಲಿ ಎಂದ
ಇಷ್ಟ ಹೇಳಿ ಕಟ್ಟಿ ಜಿಗಿದಾನು
ಹಂಗೆ ನಡೆದಾನು ಊರಬಿಟ್ಟ ಊರು

ಎನ್ನುವುದು ಸರಳ ಸಹಜ ಮಾತಲ್ಲ ಎಂಬುದನ್ನು ಎದುರಿಸ್ತೆನೆನ್ನುವ ಧೈರ್ಯವಿದ್ದವನಿಗೆ ಮಾತ್ರ ಈ ಮಾತುಗಳನ್ನಾಡುವ ತಾಕತ್ತು ಬರಲು ಸಾಧ್ಯ.

ಜತ್ತ ಜೇಲಿನ ತುರಂಗ ಮುರದ ಹೊರಗೆ ಬಂದಮ್ಯಾಲ ತಪ್ಪಿಸಿಕೊಳ್ಳುವ ಸನ್ನಿವೇಶದಲ್ಲಿ

“ಸಾರಿ ಹೊಂಟಾರ ನಡುವೆ ಪ್ಯಾಟ್ಯಾಗ
ಗಂಡಸಿದ್ದವ ಮಗ ಹಿಡಿಯಬೇಕು”
ಇನಸ್ಪೆಕ್ಟರ್ ಹತ್ತೆಂಟು ಮಂದಿ ಸ್ಟಾಪ್
ಹತ್ತಿದರ ಬೆನ್ನ ಗುಡ್ಡದ ಒಳಗ

ಅವರ ಮಾರಿ ತಪ್ಪಿಸಿ ಹೋಗಿ
ಕುಂತ್ರು ಗುಡ್ಡದ ಮರ್ಯಾಗ"

ಇಲ್ಲಿ ಸಿಂಧೂರ ಲಕ್ಷ್ಮಣನ ಮನೋಸ್ಥೈರ್ಯದ ಧೈರ್ಯವನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ ಸರಿ.

"ಅವ್ರ ಮ್ಯಾಲಿಂದ ಕುದರಿ ಹೊಡದಾರ
ಎದ್ದು ನಿಂತ ಗಾಬ ಆಗ್ಯಾರ, ಚಿಗರಿ ಬೆದರಿದಂಗ
ಸರದು ನಿಂತು ತಗೊಂಡ್ರು ಕೈಗೆ ಮನಸ್ಯಾಗೊಂದಕಲ್ಲ
ಕುದರೀಗಿ ವಗದಾರ ಕಲ್ಲ, ವಗದು ಮುರದಾರಕಾಲ
ಜೀವಕ ಹೆದರಲಿಲ್ಲ ಹ್ವಾದ್ರು ಸಾಗಲ್ದಾಂಗ"

ಹೀಗೆ ತಮ್ಮ ಜೀವದ ಹಂಗು ಇಲ್ಲದೆ ಎದುರು ನಿಲ್ಲುವ, ಪ್ರತಿಭಟಿಸುವ ಬಂದ ಪ್ರಸಂಗವನ್ನು ಧೈರ್ಯದಿಂದಲೇ ಎದುರಿಸಿ ಸಾಗುವ ಲಕ್ಷ್ಮಣನ ಸಾಮಾರ್ಥ್ಯವನ್ನು ಮೆಚ್ಚಲೇ ಬೇಕು.

"ಇನಸ್ಪೆಕ್ಟರ್ ರಾವಗಂತಾರ ನಾಳೆ ಬರತೀನಿ
ಹುಷಾರ ಇರು ನೀ ಗುಡ್ಡ ಒಳಗ
ನಿನಗ ಹಿಡಿಲಿಲ್ಲಂದ್ರ ಹೆಂಗಸಂತ ಕರಿಲಕ್ಷ್ಯಾ ನನಗ" ಎಂದಾಗ ಲಕ್ಷ್ಮಣ
"ಮಾತು ಇಲ್ಲೇ ಅಲ್ಲ, ನಾಳೆ ನಾ ಊರಾಗ ಬರ್ತೀನಿ ನಿನ್ನತ್ರ
ಆ ತಾಕತ್ತಿದ್ರ ಹಿಡ್ದು ತೋರ್ಸು
ನಾಳೆ ಬರತೀನಿ, ಹುಷಾರ ಇರು ಚಾವಡಿ ಒಳಗ

ಈ ಮಾತು ಸುಳ್ಳಲ್ಲ ಗಂಟುದಾಗೊ ಪದರಾಗ" ಎನ್ನುವ ಪ್ರತಿಯಾಗಿ ನೀಡುವ ಉತ್ತರ ದೊಳಗ ನಾನು ಹೇಡಿಯಲ್ಲ ಹೇಳಿದ ವ್ಯಾಳೇದಾಗ ನಾ ಬಂದ ಬರ್ತೀನಿ ನೀ ಹುಷಾರಿರು ಎನ್ನುವಲ್ಲಿ ಚಾಲೇಂಜಾಗಿ ಮಾತನಾಡುವ ದಿಟ್ಟತನಕ್ಕೆ ಲಾವಣಿ ಸಾಕ್ಷಿಯಾಗಿದೆ.

'ಸಾಬ್ಯಾ ಗೋಪ್ಯಾ ಸರಸ್ಯಾ
ಲಕ್ಷ್ಮಣ ಸೈತ ಚಾವಡಿಗೆ ಬಂದಾರ
ಜಗ್ಗಿನಿಸ್ಪೆಟರಿಗೆ ಬೀಸಾದರ
ಒಬ್ಬ ನೆಪ್ಪಮೀಸೆ ಬೋಳಿಸಿದರ
ಕುದರಿಯ ಬಾಲ ಕೋಯ್ದರ
ಗುದ್ದಿ ವಾಲಿಕಾರ್ನ ಹಲ್ಲ ಮುರದಾರ
ಕತ್ತಿ ಬಂದೂಕ ಎಲ್ಲ ತಗೊಂಡಾರ'

ಎನ್ನುವ ಸನ್ನಿವೇಶ ಹಾಡುಹಗಲೇ ಸರಕಾರದ ವಿರುದ್ಧ ಜನರ ಸಮ್ಮುಖದೊಳಗೆ ಈ ರೀತಿ ಹೋರಾಟ ನಡೆಸುವುದು ಸುಲಭವಲ್ಲ. ಅವರನ್ನೇ ಶಿಕ್ಷಿಸಿ ಅವರ ಬಂದೂಕುಗಳನ್ನು ಕಸಿದೊಯ್ಯುವುದು ಶೂರತನವನ್ನು ಮೀರಿದ್ದಾಗಿದೆ. ಹೀಗೆ ಅಲ್ಲಿಂದ ಅಕ್ಕಲಕೋಟದಿಂದ ಅಲೆದಾಡುತ್ತ ಜಮಖಂಡಿಯ ಕುಲ್ಲಳ್ಳಿಗುಡ್ಡಕ್ಕೆ ಬಂದ ಸಂಗತಿ ತಿಳಿದ ಪೌಜುದಾರ.

"ಲಕ್ಷ್ಮಣ ಸಿಕ್ಕಾರ ಕುಡುವುತೀನಿ ನೆತ್ರ
ನಿಂತ ಕರಾಕರಾ ಹಲ್ಲ ತಿಂದಾನ
ಇಷ್ಟ ಅನುದರಾಗ ಲಕ್ಷ್ಮಣ ಬಂದ ನಿಂತಾನ"

ಹೀಗೆ ಎದುರಿಗೆ ಬಂದು ನಿಲ್ಲುವ ಲಕ್ಷ್ಮಣನ ಎದೆಯ ಛಾತಿಯ ಧೈರ್ಯವನ್ನು ಈ ಸನ್ನಿವೇಶ ವನ್ನು ಏನು ಹೇಗೆಂದು ವರ್ಣಿಸಬೇಕು. ಆಗ ಲಕ್ಷ್ಮಣನಿಗೂ ಫೌಜುದಾರನಿಗೂ ತೆಕ್ಕಿಮುಕ್ಕಿ ಬಿದ್ದಾಗ ಫೌಜುದಾರನ

"ತಲಿ ತಗೊಂಡು ಹ್ವಾಗ ಕಲ್ಲೋಳ್ಯಾಗ
ಇಟಗೊಂಡು ಕುಂತ್ರು ಚಾವಡ್ಯಾಗ
ಯಾರ್ಯಾರ ಬಂದಿಲ್ಲ ಸನಿದಾಗ
ಧಿಂಗ್ ಹೊಡ್ದು ಹೊಂಟ್ರು ಊರಾಗ
ಜತ್ತೀಗಿ ಹೋಗ್ಯಾರ ಬೆಳಗಾಗುದರೊಳ
ತಲಿಕಟ್ಟಿ ನಡದಾರ ಅಗಸ್ಯಾಗ"

ಈ ಸನ್ನಿವೇಶ ಇವರ ಧೈರ್ಯಶಕ್ತಿಯನ್ನು ಹೇಗೆ ವಿವರಿಸಬಹುದೋ ತಿಳಿಯದು ಅಷ್ಟೊಂದು ಆಕ್ರೋಶದ ಲಕ್ಷ್ಮಣ ಆಂಗ್ರೇಜಿಯವರ ಮೇಲಿನ ಸೇಡನ್ನು ಮುಯ್ಯಿಗೆ ಮುಯ್ಯಿ ತೀರಿಸಿಕೊಂಡು ಚಾವಡಿಗೆ ತಲೆ ಕಟ್ಟುವದೆಂಥಾ ಸಾಹಸದ ಕೆಲಸ.

ತ್ವಾಳಮಟ್ಟಿ ಮುಮ್ಮರಮಟ್ಟಿ ಬಂದು ಬಿದ್ದರ ಗುಡ್ಡದಾಗ
ಸುದ್ದಿ ಕೇಳಿ ಇನಸ್ಪೆಕ್ಟರ್ ಅಲ್ಲಿಗೆ ಬಂದ ಮೋಟರ ತಂದ
ಗುಡ್ಡವಳೆದೊಡದ ಬಿಗಲ್ ಮ್ಯಾಗ ಮ್ಯಾಗ
ಗಾಬಾಗಿ ಲಕ್ಷ್ಮಣ ನಿಂತಾನ ಗುಡ್ಡದ ಮ್ಯಾಗ
ಜಮಖಂಡಿ ಸರಕಾರಕ ಬಂದೂಕ
ಲಕ್ಷ್ಮ್ಯಾನ ಹಂತ್ಯಾಕ ಅನುಮಾನ ಇವ್ಯಾಕ
ತಗೊಂಡು ಕಯ್ಯಾಗ ಹತ್ತಿಲಿತ ಲಡಾಯಿ
ಗಾರ್ಮನ್ ಸಾಯ್ಬಗ ಲಕ್ಷ್ಮಣಗ
ಸಾಯ್ಬ ಕುಂತೀದ ಮೋಟರ ಮ್ಯಾಲ
ಲಕ್ಷ್ಮಣ ಒಗದ ರೈಫಾಲ
ಟೊಪಗೀಗೆ ಗುಂಡ ಬಡದೀತಲ್ಲ
ಟೊಪಗಿ ಶಿಡದು ಬಿತ್ತ ಭೂಮಿ ಮ್ಯಾಲ
ಸಾಹೇಬ ತಿಂತಾನ ಕರಿಕರಿ ಹಲ್ಲ
ತೆಗ್ಗಿ ನಾಯ್ಕಗ ಹಾಕ್ಯಾನ ಜಾಲ"

ಹೀಗೆ ಲಕ್ಷ್ಮಣ ಕೇವಲ ಧೀರ ಶೂರನಷ್ಟೇ ಅಲ್ಲ ಗುರಿಯಲ್ಲೂ ನಿಸ್ಸೀಮ ಎನ್ನುವುದಕ್ಕೆ ಈ ಘಟನೆಯೇ ಸಾಕ್ಷಿ. ಹೀಗೆ ಲಕ್ಷ್ಮಣ ಸಿಂಧೂರಿನ ಹುಗಿದ ನೊಗದ ರಂದ್ರದೊಳಗಿಂದ ಹಾಯ್ದು ಹೋಗುವ ಹಾಗೆ ಕವಣೆಕಲ್ಲು ಬೀಸಿ, ಗುರಿಯಲ್ಲೂ ಜನರಿಂದ ಸೈ ಎನಿಸಿಕೊಂಡ ಪರಾಕ್ರಮಶಾಲಿ.

“ವಾಲಿಕಾರ ಗುಂಡ ವಗದಾನು
ಫಕಡ್ಯಾಗ ಗುಂಡ ಬಡದಿತ್ತಲ್ಲ
ನಾಯ್ಕು ಓಡಿಹ್ವಾದ ಲಕ್ಷ್ಮಣ ಬಿದ್ದಾನ
ಮೋಸ ಮಾಡಿ ಅಭಿಮನ್ಯಾಗ ಹೊಡದಾಂಗೈತಿ ಕೌರವರ”

ಎನ್ನುವ ಲಾವಣಿಯಲ್ಲಿ ಸಿಂಧೂರ ಲಕ್ಷ್ಮಣನ ಪರಾಕ್ರಮವನ್ನು ವೀರಅಭಿಮನ್ಯುವಿಗೆ ಹೋಲಿಸಿದ ಸಂದರ್ಭ ಇದಾಗಿದೆ.

ಹುಟ್ಟಬೇಕ ಲಕ್ಷ್ಮಣನಂತವರು
ಶ್ರೇಷ್ಟ ಅನಿಸಿಕೊಂಡ ಹ್ವಾದಬಗರು”

ಈ ಮಾತು ಅವನ ಹೆಸರು ಶಾಶ್ವತವಾಗುಳಿದಿದೆ ಎನ್ನುವುದಕ್ಕೆ ನಿದರ್ಶನವಾಗಿದೆ. ಅಂದು ಲಕ್ಷ್ಮಣನಂತವರ ಅವಶ್ಯಕತೆ ಇತ್ತೆಂಬುದನ್ನು ಲಾವಣಿಕಾರ ಸ್ಪಷ್ಟಪಡಿಸಿದ್ದಾರೆ. ಇಂತಹ ಹೋರಾಟದ ಪ್ರಸಂಗದಲ್ಲಿ ಧೈರ್ಯದ ಹೊರತು ಗತಿ ಇಲ್ಲ. ಬೇಕಾದಷ್ಟು ಶೌರ್ಯವಿರಲಿ, ಶಸ್ತ್ರಾಸ್ತ್ರಗಳಿರಲಿ ಧೈರ್ಯವಿಲ್ಲದಿದ್ದರೆ ಅವೆಲ್ಲ ವ್ಯರ್ಥ. ಅಧೈರ್ಯದಿಂದ ಯಾವಕಾರ್ಯವೂ ಯಶಸ್ವಿಯಾಗಲಾರದು. ಆದ್ದರಿಂದ ಲಕ್ಷ್ಮಣನ ಈ ಹೋರಾಟಕ್ಕೆ ವ್ಯಕ್ತಿತ್ವಕ್ಕೆ ಆತನ ಶರೀರ ಧಾರ್ಢ್ಯತೆ, ಬೆಲೆತಂದದ್ದು ಮಲ್ಲನಿಗೆ ಧೈರ್ಯ ತನ್ನಿಂದ ತಾನೆ ನಿರ್ಮಾಣವಾಗುತ್ತಾ ಹೋಗುತ್ತದೆಂಬುದಕ್ಕೆ ಸಿಂಧೂರ ಲಕ್ಷ್ಮಣ ಇಂದಿಗೂ ನಿದರ್ಶನ ನಾಗಿದ್ದಾನೆ. “ಗಂಡಾಂತರಗಳಿಂದ ಪಾರಾಗುವವನೇ ಗಂಡಗಬರು” ಎಂಬಂತೆ ಲಕ್ಷ್ಮಣನ ಬದುಕು, ಬವಣೆ ನಮಗೆಲ್ಲ ಮಾದರಿ.

ಹೀಗೆಯೇ ಸಿಂಧೂರ ಲಕ್ಷ್ಮಣನ ಧೈರ್ಯ ಸಾಹಸವನ್ನು ಶಕ್ತಿಯನ್ನು ಡಾ.ಆರ್.ಸಿ. ಮುದ್ದೇಬಿಹಾಳರವರ “ಸಿಂಧೂರ ಲಕ್ಷ್ಮಣ ಮಹಾಕಾವ್ಯ”ದಲ್ಲಿ ತ್ರಿಪದಿಗಳಲ್ಲಿ ಚಿತ್ರಿಸಿದ ಚಿತ್ರಣವನ್ನು ಈ ಮುಂದೆ ನೋಡಬಹುದಾಗಿದೆ.

“ಎಂಟು ಆಳಿನ ನಟ್ಟ ಒಂಟಿಗನು ತಾನಾಗಿ
ಬಂಟ ಲಕ್ಷ್ಮಣ ಕಡಿದಾನ/ವಾರಕ್ಕ
ಎಂಟಾನೆ ಕೂಲಿ ಪಡದಾನ”

ತ್ರಿಪದಿಯಲ್ಲಿ ಆತನ ಶಕ್ತಿ ವೈಶಿಷ್ಟ್ಯತೆ ಇದೆ.

“ದುಂಡ ಹಲುಬುದು ಕಂಡು ಪುಂಡ ಲಕ್ಷ್ಮಣ ಜಿಗಿದು”
ಕುಂಡರ ತಿರುವಿ ಬಡಗರ| ಆತಂಡ
ಕಂಡಂಗ ಚದುರಿ ಓಡಿತ್ತ”

ಹೊಲೇರ ದುಂಡಪ್ಪ ಕುಸ್ತಿಯಲ್ಲಿ ಮೇಲ್ಜಾತಿಯವನನ್ನು ವಗದಾಗ ಅವರೆಲ್ಲ ಸೇರಿ ದುಂಡನ ಕಾಲು ಎದುರಾಳಿಗೆ ಬಡಿಯಿತೆಂದು ನೆಪಮಾಡಿ ಆತನನ್ನು ಎಲ್ಲರೂ ಸೇರಿ ಬಡಿಯುತ್ತಿರುವುದನ್ನು ಸಹಿಸದ ಲಕ್ಷ್ಮಣ ಪುಂಡರ ತಿರುವ ಬಡವರ ಕಂಡಂಗ ಚದುರಿ ಓಡಿದರೆಂಬುದು ಲಕ್ಷ್ಮಣನ ಬಲಿಷ್ಠತೆಗೆ ಮೆರುಗು ತಂದಿದೆ ಈ ಪ್ರಸಂಗ.

"ಪುಂಡರ ತಂಡವು ಕಂಡಂಗ ಮುತ್ತಿರಲು
ಬಂಡೆದ್ದು ತಂಡ ಹೊಕ್ಕಾನ/ಆನೆಗಳ
ಹಿಂಡಿನಲಿ ಸಿಂಹ ಹೊಕ್ಕಾಂಗ"

ಹೀಗೆ ಸಿಂಹದ ಎದೆಗಾರಿಕೆ ಈತನದು.

"ಮಾವಿನ ಗಿಡತುದಿಗೆ ಜೋತಾಡುಹಣ್ಣೀಗೆ
ಕಾಲೀಲೆ ಕಲ್ಲ ಒಗೆದಿದ್ದ/ಗಿಡದಿಂದ
ಮಾವಿನ ಹಣ್ಣ ಕೆಡವಿದ್ದ"

ನೆನ್ನುವಲ್ಲಿ ಆತನ ಗುರಿಯ ಪರಾಕಾಷ್ಠತೆಯನ್ನು ಇಲ್ಲಿ ನಾವು ಕಾಣಬಹುದು.

ಏಕಲವ್ಯನ ತೆರದಿ ಪಾಂಡುತನಯನ ತೆರದಿ
ಜೋಕೀಲೆ ಗುರಿಯ ಇಡುತಿದ್ದ| ತಪ್ಪದೆ
ಬೇಕಾದ ಸ್ಥಳಕೆ ಹೊಡುತ್ತಿದ್ದ

ಎನ್ನುವಲ್ಲಿ ಗುರಿಯಲ್ಲಿ ಲಕ್ಷ್ಮಣನ ಪ್ರಾವೀಣ್ಯತೆಯ ಶಕ್ತಿ ಕಂಡುಬರುತ್ತದೆ.

'ತುಳಿದವರ ಹಿಡಿದೆಳೆದು ತುಳಿದಂಥ ಜನಬೇಕೆ
ಲಕ್ಷ್ಮಣನಂಥ ಮಗ ಬೇಕ| ನಾಡೋಳು
ಬೇಡರ ಜಾತಿಯ ಜನಬೇಕ'

ತ್ರಿಪದಿಯಲ್ಲಿ ಬೇಡರ ಜಾತಿಗೊಂದು ವೀರ, ಶೂರತೆಯ ಸ್ಥಾನಮಾನವನ್ನು ತಂದು ಕೊಡುವಲ್ಲಿ ಸಿಂಧೂರ ಲಕ್ಷ್ಮಣ ಜಯವಾದನೆನ್ನಬಹುದು.

"ತಿಳಿಗೇಡಿ ಉಳ್ಳವರು ತುಳಿದಿರಲು ನನ್ನನ್ನು
ತಳಮಳಗೊಂಡು ನನ ರಕ್ತ ಕುದ್ದಿರಲು
ಬಲಹೀನನನಾಗಿ ನಾ ನಿಂತೆ"

ಸಮಾಜದ ಭೇದ ಭಾವದ ವ್ಯವಸ್ಥೆಗೆ ರೋಸಿಹೋದ ಮನಸ್ಸು ಈ ರೀತಿ ಮರುಗಿರಲು ಸಾಕು.

'ಗಪ್ಪನ ಲಕ್ಷ್ಮಣ ಕುಪ್ಪಳಿಸಿ ಮ್ಯಾಲಿಂದ
ತಪ್ಪದೇ ಗೌಡನ ಹಿಡಿದಾನ| ಎಳೆದಾಡಿ
ರೊಚ್ಚೀಲೆ ಕಾಲ ಮುಂದಾಗ!

ಅಂದು ಗೌಡನೆಂಬ ರಾಜನ ಮುಂದೆ ಹಾಯುವುದು ಕಣ್ಣಿಗೆ ಬೀಳುವುದು ಒಂದು ಅಪರಾಧವಾಗಿರುವ ಆ ಕಾಲದಲ್ಲಿ ಈ ಸನ್ನಿವೇಶ ಜರುಗಿಸುವುದು ಪ್ರಾಣ ತೆತ್ತಲು ಸಿದ್ಧರಾದ ವರಿಗೆ ಮಾತ್ರ ಸಾಧ್ಯ.

ಇಂದಾದ ಅಪಮಾನ ಎಂದಿಗೂ ಸಹಿಸದೆ
ಮುಂದೆ ಮರೆಯದೆ ಬಂದೇನು| ಮುಯ್ಯಕ್ಕೆ
ಒಂದಿನ ಮುಯ್ಯ ಮಾಡೇನು'

ತ್ರಿಪದಿಯಲ್ಲಿ ಅಂಗ್ರೇಜ್ ಸರ್ಕಾರಕ್ಕೆ ಸವಾಲನ್ನು ಹಾಕಿದ ಸಾಹಸ ಸಿಂಧೂರ ಲಕ್ಷ್ಮಣನದು.

ಇಂಥವರ ಕಾಲಾಗ ನಾವೆಂತು ಬದುಕೇವ
ಇಂಥ ಜನಕಾಗಿ ನಾನಿರುವೆ| ಅವರನ್ನ
ಕೂತಲ್ಲಿ ನಿಂತಲ್ಲಿ ನಾ ಸುಡುವೆನೆನ್ನುವಲ್ಲಿ

ಬಡಜನರಕಷ್ಟ ನಷ್ಠ ಅವರ ಬದುಕಿನ ಪರಿಯನ್ನು ಕಂಡು ಬಂಡೆದ್ದ ಲಕ್ಷ್ಮಣನ ಮನಸ್ಸು ಈ ರೀತಿ ತುಡಿದಿದೆನ್ನಬಹುದು.

ರಂಜನಿ ಮುಗಿಲೀಗೆ ರಂಜಕ ತುಂಬಿರಲಿ
ಮುಂಜಾನೆ ಕರೆಯಲು ಬಂದಿರಲು| ಲಕ್ಷ್ಮಣನು
ಅಂಜದೆ ವಾಡೇಕ ಬಂದಾನ.

ಧೈರ್ಯತೆಯ ಸಂಕೇತಕ್ಕೆ ಈ ಸನ್ನಿವೇಶವು ಸಾಕ್ಷಿಯಾಗಿದೆ.

"ಬೂಟೀಲೆ ಒದೆಯಲು ಇಷ್ಟಾಕ ಬಡಿದಾರ
ಬೂಟು ನನಗಿಲ್ಲ ಈ ದಿನ| ಎಚ್ಚರಿಕೆ
ಬೂಟೊಮ್ಮೆ ತಂದ ಒದ್ದೇನೋ

ಎನ್ನುವ ಕಲಾಲ ಫೌಜುದಾರನಿಗೆ ಉತ್ತರಕ್ಕೆ ಪ್ರತ್ಯುತ್ತರ ನೀಡುವ ಲಕ್ಷ್ಮಣನ ಧೀರತೆಯ ಎದೆ ಆದೆಷ್ಟು ಬಲಿಷ್ಟ. ಆಗ

'ಅಬ್ಬರಿಸಿ ಕಲಾಲ ಎದ್ದಾನ ಹೊಡೆಯುದಕ
ಉಬ್ಬಿ ಪಿಸ್ತೂಲ ಹಿಡಿದಿರಲು| ಲಕ್ಷ್ಮಣ
ಒದ್ದು ಪಿಸ್ತೂಲ ಕೆಡಿವ್ಯಾನ'

ಈ ಧೈರ್ಯ ಅಧಿಕಾರ ಹಾಗೂ ಸರಕಾರ ಇರೋ ಆ ಕಲಾಲ ಫೌಜುದಾರನಿಗೂ ಇರದು.

'ಇಂಥ ಶೂರನು ಒಬ್ಬ ಇಂಥ ರಾಜ್ಯದೊಳಗ
ಕುಂತೀಯ ಮಗ ಭೀಮ ಇದ್ದಂಗ| ಇರಬೇಕ
ಸಂತ್ಯಾಗ ಗೂಳಿ ಮೆರದಾಂಗ'

ಜತ್ತಿ ಫೌಜುದಾರ ಲಕ್ಷ್ಮಣನನ್ನು ಬಂಧಿಸಿದಾಗ ಲಕ್ಷ್ಮಣನ ಆ ಚಿತ್ರಣವನ್ನು ಈ ತ್ರಿಪದಿ ಬಿಂಬಿಸುತ್ತದೆ.

ಸುತ್ತೆಲ್ಲ ಫೌಜವು ಮುತ್ತೀಗೆ ಹಾಕಿರಲು
ಇತ್ತ ಲಕ್ಷ್ಮಣ ನಿಂತಾನ| ಗಟ್ಟ್ಯಾಗಿ
ಸುತ್ತ ಕಲ್ಲನ್ನು ತೂರ್ಯಾದ

ಇದು ಲಕ್ಷ್ಮಣನಿಗೆ ಎಂಥಪ್ರಸಂಗ ಸನ್ನಿವೇಶಗಳು ಬಂದರೂ ಹೋರಾಡುವುದನ್ನು ಬಿಡದ ಕಲಿ ಲಕ್ಷ್ಮಣ ಎಂಬ ಮಾತನ್ನು ಪುಷ್ಠೀಕರಿಸಲಾಗುತ್ತದೆ. ಜೇಲಲ್ಲಿ ಖೈದಿಗಳ ತಂಡ ವನ್ನು ಗುಟ್ಟೆ ಎಳೆಸು ಕಂಡು ಲಕ್ಷ್ಮಣ

ಕುದಿ ಕುದಿದು ಬಲು ಮುನಿದು
ತದಕಿ ಪೋಲಿಸರ ಕೆಡಿವ್ಯಾನ| ತಿರುವ್ಯಾಡಿ
ಸದೆ ಬಡಿದು ಅವನ ಎಳೆದಾನ

ಹೀಗೆ ಲಕ್ಷ್ಮಣ ಎಲ್ಲಸ್ಥಳಗಳಲ್ಲೂ ನಡೆದ ಶೋಷಣೆ ವಿರುದ್ಧ ಕಿಡಿಕಾರಿದ ನಿಜ ಪುರುಷ ಹೃದಯಿ. ಆಗ ಪೋಲೀಸರ ದಂಡು ಆವರಿಸಿದಾಕ್ಷಣ

“ಪುಂಡ ಲಕ್ಷ್ಮಣನಾಗ ಗುಂಡೀಗೆ ಸಿಲುಕದೆ
ಚೆಂಗನೆ ಗೋಡೆ ಏರುತ್ತ| ಅಲ್ಲಿಂದ
ಮಂಗನಾಂಗ ಲಾಗಾ ಹೊಡೆದಾನ

ತ್ರಿಪದಿಯಲ್ಲಿ ಸಮಯ ಪ್ರಜ್ಞೆಯೊಂದಿಗೆ ಆತನ ತಾಕತ್ತಿನ ಚಾಕ ಚಕ್ಯತೆಯು ಬಲುವಿಶಿಷ್ಠ ವಾದುದು.

ಗಂಡಸ ಇದ್ದರ ಬಂಧಿಸಬಾ ಎಂದು
ಗಂಡುಗಲಿ ಲಕ್ಷ್ಮಣನಂದಾನ| ಅವನೀಗೆ
ಕಂಡಂಗೆ ಬೈದು ನಿಂದಾನ.

ಇದು ಜೈಲಿನಿಂದ ಪಾರಾಗಿ ಬಂದನಂತರ ಈ ರೀತಿ ಫೌಜುದಾರನಿಗೆ ಸವಾಲೊಡ್ಡುವ ಸನ್ನಿವೇಶ ಆತನ ಧೈರ್ಯ ಸಾಹಸದ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

ಊರೂರು ಅಲೆದಾಡಿ ಕೇರ್ಯಾಗ ಸುಳಿದಾಡಿ
ಊರ ದುಷ್ಟರಿಗೆ ಹುಲಿಯಾಗಿ| ಮೆರೆದಾನ
ನಾರೇರ ಕಾಲೀಗೆ ಶಿರ ಬಾಗಿ

ಈ ನುಡಿಯಲ್ಲಿ ಆತನಲ್ಲಿ ಹುಲಿಯ ಹಾಗೆ ಹೋರಾಟ ಮಾಡುವ ಧೀಮಂತಿಕೆಯ ಶಕ್ತಿ ಬೆಳೆದು ಬಂದಿತ್ತೆಂಬುದಂತೂ ಸತ್ಯ. ಆದರೆ ಅಷ್ಟೇ ಸಹೃದಯಿಯೂ ದಯಾಮ ಯಿಯೂ ಆಗಿದ್ದನೆಂಬುದನ್ನು ಕಂಡುಕೊಳ್ಳಬಹುದು.

‘ಬಂದೂಕ ಹಿಡಕೊಂಡು ಸಿಂಧೂರ ಲಕ್ಷ್ಮಣ
ಚೆಂಗನೆ ಜಿಗಿದು ನಿಂದಾನ| ಅವರನ್ನ
ಬಂಧಿಸಿ ನೆಲಕ ಒಗದಾನ’

ಈ ಸನ್ನಿವೇಶವೊಂದು ಆತನ ಶಕ್ತಿ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆನ್ನಬಹುದು.

‘ಸಿಂಧೂರ ಲಕ್ಷ್ಮಣ ಹೊಂಚಾಕಿ ಬಲು ಬೇಗ
ಸಿಂಹ ಜಿಗಿದಾಂಗ ಜಿಗಿದಾನ| ಅರಸನ
ಬಂದೂಕ ಪಡದ ನಿಂದಾನ’

ಇದು ಆತನ ದೈಹಿಕ ಚಾಕಚಕ್ಯತೆಯನ್ನು ಎತ್ತಿ ತೋರುತ್ತದೆ.

‘ಮೊಸಳೆಯು ಬೆನ್ನಟ್ಟಿ ಘಾಸಿಗೊಳಿಸಲು ಬರಲು
ಕಸುವಿನಲಿ ಲಕ್ಷ್ಮಣ ಈಜುತ್ತ | ಈ ದಡಕೆ
ಬಸವಳಿದು ಬಂದು ಕುಂತಾನ’

ಮೊಸಳೆಯಿಂದ ಲಕ್ಷ್ಮಣ ಪಾರಾಗಲು ಜೀವದ್ದಂಗ ತೊರೆದು ಈಜಿ ಬಂದ ಆತನ ಧೈರ್ಯವೇ ಆತನನ್ನು ಉಳಿಸಿತೆನ್ನುವಲ್ಲಿ ಸಂಶಯವಿಲ್ಲ.

‘ಟೊಂಕಕ್ಕೆ ಕೈಯಿಟ್ಟು ಡೊಂಕ ಮುಖದ ಹನುಮ
ಲಂಕಕ್ಕ ಹಾರಿ ಜಿಗಿದಂಗ| ಕ್ಷಣದಾಂಗ
ಬಂಟ ಲಕ್ಷ್ಮಣ ಜಿಗಿದಾನ’

ಈ ರೀತಿಯ ಚಟುವಟಿಕೆಗಳಿಗೆ ಲಕ್ಷ್ಮಣ ತನ್ನನೇ ತಾನು ತರಬೇತಿಗೊಳಿಸಿಕೊಂಡ ಶ್ರೇಯಸ್ಸೆಂದು ಹೇಳಬಹುದು.

‘ಸಿಂಧೂರ  ವೀರರು ಇವರೆಂದು ಜನವೆಲ್ಲ
ದಂಗಾಗಿ ನಿಂತ ನೋಡುತ್ತ| ದೂರದಿ
ಬಂದರ್ಹಾಂಗಿಯವರು ಅಂದಿತ್ತಽಽ’

ಇಷ್ಟೊಂದು ಚುರುಕು ಹಾಗೂ ದಿಟ್ಟತೆಯಿಂದ ಲಕ್ಷ್ಮಣನ ತಂಡವಿತ್ತು ಎಂಬುದನ್ನು ಈ ತ್ರಿಪದಿ ಸಾರಿ ಹೇಳುತ್ತದೆ.

‘ಹಿಗ್ಗೀಲೆ ಲಕ್ಷ್ಮಣ ಸಾಬುನ ಬಳಿಕರೆದು
ಹಗ್ಗೀಲೆ ಇವನ ಬಿಗಿ ಎಂದ | ಹೇಳುತ್ತ
ಮಗ್ಗಲ ಎಲುವ ಮುರಿಯಂದ |

ಜಮಖಂಡಿಯ ಜೇಲಲ್ಲಿ ಬಾಳಪ್ಪನೆಂಬುವನನ್ನು ಕುರಿತು ಸಿಂಧೂರ ಲಕ್ಷ್ಮಣ ಜೈಲಲ್ಲಿ ಏನನ್ನೂ ಯಾರನ್ನೂ ಲಕ್ಷಿಸದೆ ತನ್ನ ಅಳಿಯಂಗೆ ಈ ಮಾತು ಹೇಳಬೇಕಾದರೆ ಆತನ ಮನೋಬಲಿಷ್ಠತೆಯನ್ನು ಅಳತೆಗೈಯಲು ಸಾಧ್ಯವೆ.

‘ಹಿಂಗೋಳಿ ಕಲಾಲ ಮುಂಗಡೆ ಬಂದಿರಲು
ಚಂಗನೆ ಜಿಗಿದು ಬಂದಾನ | ಲಕ್ಷ್ಮಣ
ಅಂಗಾತ ಅವನ ಕೆಡವ್ಯಾನ’

ಹೀಗೆ ಲಕ್ಷ್ಮಣನ ಬರುವಿಕೆ ಹಾಗೂ ಮಿಂಚಿ ಮಾಯವಾಗುವಿಕೆಯೊಂದು ಅಂಗ್ರೇಜಿಗರಿಗೆ ನಿಲುಕಲಾರದ ಮಾತಾಗಿತ್ತು. ನುಂಗಲಾರದ ತುತ್ತಾಗಿತ್ತು.

'ಹಾವನ್ನು ಗರುಡವು ಆವನ್ನ ಸಿಂಹವು
ಬಾವುಲಿ ಗಿಡಗ ಹಿಡಿದಂಗ | ಲಕ್ಷ್ಮಣ
ಧಾವಿಸಾಕಟುಕನ ಹಿಡಿದಾನ'

ಹೀಗೆ ಶಿಕ್ಷೆ ಕೊಡಬೇಕೆನ್ನುವವರಿಗೆ ಶಿಕ್ಷೆಕೊಟ್ಟ ಸನ್ನಿವೇಶಗಳೂ ಇಲ್ಲಿವೆ.

'ಗುಂಡಿನ ಸರಪಟ್ಟಿ ಅಂದಾದ ಬಂದೂಕ
ಗಂಡುಗಲಿಯಾಗಿ ಲಕ್ಷ್ಮಣನ | ಕೈಗಿರಿಸಿ
ಪುಂಡನ ತೆರದಿ ಬಾಳೆಂದ''

ತೆಗ್ಗಿ ವೆಂಕಟಪ್ಪ ನಾಯಕನ ಆಶೀರ್ವಾದ. ಬಲದಲ್ಲಿ ಆತನ ಆತ್ಮವಿಶ್ವಾಸ ಹಾಗೂ ಧೈರ್ಯ ಸ್ಥೈರ್ಯತೆಗೆ ಒಲವು ಬಂದಿತ್ತು.

"ಬಂಡ ಆಂಗ್ಲರ ಜೋಡಿ ಬಂಡಾಯ ಇರಬೇಕ
ಕಂಡಲ್ಲಿ ಅವರ ತುಳಿಬೇಕ | ಲಕ್ಷ್ಮಣ
ಗಂಡುಗಲಿಯಾಗಿ ಮೆರಿಬೇಕ''

ಎಂಬುದು ತೆಗ್ಗಿವೆಂಕಟಪ್ಪನಾಯಕರ ಸದಾಶಯವಾಗಿತ್ತು. ಅಂತಃಶಕ್ತಿ ಲಕ್ಷ್ಮಣನಲ್ಲಿದೆ ಎಂದು ಅವರು ಕಂಡುಕೊಂಡಿದ್ದರಿಂದಲೇ ಲಕ್ಷ್ಮಣನಿಗೆ ಹೀಗೆ ಹಾರೈಸಿರುವ ಸಂಗತಿ ತಿಳಿದುಬರುತ್ತದೆ.

"ಮುದುಕೀಯ ವೇಷದಲಿ ಹೆದರದೆ ಲಕ್ಷ್ಮಣ
ಹದುಳಿದಿ ಊರ ಹೊಕ್ಕಿದ್ದು | ಲಕ್ಷ್ಮಣ
ಹೋಳಾಗಿ ಬೇಗ ಪಾರಾದ''

ಕೊಟ್ಟ ಮಾತಿಗೆ ತಪ್ಪದೆ ನಡೆದುಕೊಳ್ಳವ ಸ್ವಭಾವದ ದಿಟ್ಟತನವನ್ನು ಈ ತ್ರಿಪದಿ ತಿಳಿಯ ಪಡಿಸುತ್ತದೆ. ಆಗ ಬೆನ್ನಟ್ಟಿದ ಅಂಗ್ರೇಜಿಯವರಿಂದ ತಪ್ಪಿಸಿಕೊಳ್ಳಲು ಉಪಾಯದಿಂದ ಪಾರಾದ ಪ್ರಸಂಗ ಇಲ್ಲಿದೆ.

'ಸಿಂಧೂರ ಬಂಟರು ಸಂತ್ಯಾಗ ತಿರುಗಿದರ'
ನಿಂತು ಜನರೆಲ್ಲ ನೋಡ್ಯಾರ | ಬೆರಗಾಗಿ
ಇಂಥವರ ಕಾಣೇವು ಎಂದಾರ''

ಹೀಗೆ ಯಾವ ಭಯ ಭೀತಿ ಇಲ್ಲದೆ ಸಂತೆಯಲ್ಲಿ ನೆರೆದ ಜನರ ಮಧ್ಯದಲ್ಲಿ ಇವರ ತಿರುಗಾಟದ ಧೈರ್ಯತೆ ಬೆಚ್ಚಿಬೀಳಿಸುವಂತಹದು.

“ಹುಡುಕುತ್ತ ಫೌಜವು ಗಡಿಬಿಡ್ಲೆ ಬಂದಾಗ
ಅಡಕಿತ್ತಿ ಲಕ್ಷ್ಮಣ ಜಿಗಿದಾನ | ಅಲ್ಲಿಂದ
ಪಡೆವ್ವನ ಗುಡ್ಡಕ ಸೇರ್ಯಾನ”

ತೆಗ್ಗಿನ ಗೌಡರ ಮನೆಯಲ್ಲಿರುವ ತನ್ನನ್ನು ಹಿಡಿಯಲು ಮುತ್ತಿಗೆ ಹಾಕಿದ ಅಂಗ್ರೇಜಿಯವರಿಂದ ಲಕ್ಷ್ಮಣ ತನ್ನ ಚಾಕಚಕ್ಯತೆಯಿಂದ ತಪ್ಪಿಸಿಕೊಂಡು ಪಡಿಯವ್ವನ ಗುಡ್ಡ ಸೇರಿದ ಪರಿಯನ್ನು ಚಿತ್ರಿಸಲಾಗಿದೆ.

“ಗಾರ್ಮನ ಸಾಬನು ಜೋಕೀಲೆ ಹೇಳ್ಯಾನ
ಶೂರ ಲಕ್ಷ್ಮಣ ತರಬೇತಿ | ನಾಡೋಳು
ಭಾರಿ ಸೌಖ್ಯದಿ ಇರಬೇಕು”

ಈತನ ಈ ಶೂರತನ ಹಾಗೂ ಧೀರತನವನ್ನು ತಮ್ಮನ್ನು ಚಳ್ಳೆಹಣ್ಣು ತಿನ್ನಿಸುತ್ತಿರುವ ಲಕ್ಷ್ಮಣನ ಶೌರ್ಯವನ್ನು ಸ್ವತಃ ಗಾರ್ಮನ್ ಸಾಹೇಬನು ವರ್ಣಿಸಿದ ಮನಸಾರೆ ಹೊಗಳಿದ ಪರಿ ಇಲ್ಲಿ ವ್ಯಕ್ತವಾಗುತ್ತದೆ.

“ಶೂರ ಲಕ್ಷ್ಮಣನಿಗಿಂದು ವೀರಮರಣವು ಬರಲಿ
ಧೀರನಾಯಕನು ಬದುಕಲಿ| ನಾಡೋಳು
ಈರ್ವರ ಕೀರ್ತಿ ಹಬ್ಬಿರಲಿ”

ಸಮಾಜಮುಖಿ ವ್ಯಕ್ತಿಯಾಗಿ ಸಾರ್ವಜನರ ಮಗನಾಗಿ ಇಷ್ಟೊಂದು ಕಷ್ಟನಷ್ಟ ಅನುಭವಿಸಿದ ಲಕ್ಷ್ಮಣನ ಪರಾಕ್ರಮತೆಯ ಎತ್ತರವನ್ನು ಈ ತ್ರಿಪದಿಯಲ್ಲಿ ಸೂಚಿಸಲಾಗಿದೆ.

“ಮುಂಡರಗಿ ಭೀಮಣ್ಣ ಸಂಗೊಳ್ಳಿ ರಾಮಣ್ಣ
ಕಟ್ಟಿ ಚೆನ್ನಪ್ಪ ಇವರಂಗ | ಲಕ್ಷ್ಮಣ
ದಿಟ್ಟದಿಕಾದಿ ಮೆರೆದಿದ್ದ

ಈಗಾಗಲೆ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಜೀವವನ್ನೇ ತೇಯ್ದ ಮುಂಡರಗಿ ಭೀಮಣ್ಣ, ಸಂಗೊಳ್ಳಿ ರಾಮಣ್ಣರಂತೆ ಸಮಾನತೆಗಾಗಿ ಹೋರಾಡಿದ ಸಿಂಧೂರ ಲಕ್ಷ್ಮಣನೂ ಇವರ ಸರಿಸಾಟಿ ಎನ್ನುವ ಮಾತು ಈ ತ್ರಿಪದಿಯಲ್ಲಿದೆ. ಹೀಗೆ ಡಾ.ಆರ್.ಸಿ. ಮುದ್ದೇಬಿ ಹಾಳರವರು ಕ್ಷೇತ್ರಕಾರ್ಯದೊಂದಿಗೆ ತಿಳಿದುಬಂದ ಲಕ್ಷ್ಮಣನ ಸಾಹಸದ ಸಂಗತಿಗಳನ್ನು ತಮ್ಮ ತ್ರಿಪದಿಯಲ್ಲಿ ತುಂಬಾ ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾನೆ. ರತ್ನವ್ವ ಯಲ್ಲಪ್ಪ ಮಾದರ ಅವರು ಹಾಡಿರುವ ಕೋಲಾಟದ ಪದದಲ್ಲಿ,

“ಕಾಜಿನ ಕಂಬ ನೆಲಗಚ್ಚಿದ ಲಾವ್ಯಾಗ
ಅಣ್ಣ ಬಸವಣ್ಣ ಬೆಳಕಾದ ಕೋಲ
ಅಣ್ಣ ಬಸವಣ್ಣ ಬೆಳಕಾವ ಮಾಡ್ಕೊಂಡು
ಬಾರಿನ ಬಂದೂಕ ಬಗಲೀಗೆ ಹಾಕ್ಕೊಂಡು
ಬೆಳಗಾಂವಿ ಜೈಲ ಜಿಗಿದಾನ”

ಎನ್ನುವಲ್ಲಿ ಬಸವಣ್ಣನಂತೆ ಲಕ್ಷ್ಮಣನೂ ಸಮಾನತೆಗಾಗಿ, ಶೋಷಣೆರಹಿತ ಸಮಾಜಕ್ಕಾಗಿ ಶ್ರಮಿಸಿದ ಶ್ರಮವಂತನೆಂಬ ಆತನ ಶಕ್ತಿಯ ಸ್ವರೂಪವನ್ನಿಲ್ಲಿ ಚಿತ್ರಿಸಲಾಗಿದೆ.

"ಬಂದೂಕ ತುಂಬ್ಯಾರ ಭರಪೂರ
ಬಸವಣ್ಣ ಗುರಿಯಿಟ್ಟು ಗುಂಡ ಹೊಡದಾರ
ಬಸವಣ್ಣನ ರುದ್ರ ಜೋಡಂಗಿ ರಗತಾಗಿ ಕೋಲ
ಬಸವಣ್ಣ ಬಿದ್ದಾನ ಬೀಳಗಿ ಬಯಲಾಗೆ ಕೋಲ"

ಆತನ ರೌದ್ರಾವತಾರದ ಅಂತ್ಯದ ಕ್ಷಣದ ಚಿತ್ರಣ ಇಲ್ಲಿದೆ.

"ತುಪ್ಪದ ಕೊಡಕ ಕಟ್ಟಿರುವೆಗೊಯ್ದಂಗ
ಸುತ್ತ ಗಟ್ಟ್ಯಾರ ಸರಕಾರ"

ಲಕ್ಷ್ಮಣನ ಅಂತ್ಯವಾದ ಕ್ಷಣದ ಚಿತ್ರಣವನ್ನಿಲ್ಲಿ ನೋಡಬಹುದಾಗಿದೆ.

ಹೀಗೆ ಸಿಂಧೂರ ಲಕ್ಷ್ಮಣ ಕರ್ನಾಟಕದ ನೆಲ ವಸಾಹತುಗಳ ಹಿಡಿತಕ್ಕೆ ತುಳಿತಕ್ಕೆ ಆಕ್ರಮಣಕ್ಕೆ ತುತ್ತಾದ ಕಾಲ. ಸಾಮಾಜಿಕ ಅಸಮಾನತೆ ಜಿಡ್ಡುಗಟ್ಟುತ್ತಾ ಒಳಗೊಳಗೆ ಸ್ವಾತಂತ್ರ್ಯದ ಕಹಳೆಯು ಹೊಗೆಯಾಡುತ್ತಿತ್ತು. ಆರ್ಥಿಕ ಹಾಗೂ ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಇಬ್ಬಗೆಯ ನೀತಿ ತುಂಬಿ ತುಳುಕುತ್ತಿತ್ತು. ಉಳ್ಳವರಿಗಷ್ಟೇ ಪ್ರಮುಖ ಸ್ಥಾನ ಮಾನ. ಇನ್ನುಳಿದವರಿಗೆ ಇಲ್ಲ ಮಾನವೆನ್ನುವ ಕಾಲವದು. ಇವನ್ನೆಲ್ಲವನ್ನು ಕಣ್ಣಾರೆ ಕಂಡ ಸಿಂಧೂರಿನ ಲಕ್ಷ್ಮಣ ಬ್ರಿಟೀಷರ ವಸಾಹತುಶಾಹಿ ವಿರುದ್ಧ, ಶ್ರೀಮಂತರ ಸೊಕ್ಕಡಗಿಸುವ ದಿಸೆಯಲ್ಲಿ ಬಂಡೆದ್ದ ಈತನ ಹರಸಾಹಸವನ್ನು ಎಷ್ಟು ಬಣ್ಣಿಸಿದರೂ ಸಾಲದು. ಅಂತೆಯೇ ಈತನನ್ನು ಎಂಟೆದೆಯ ಬಂಟನೆಂದು ಕರೆದವಾಡಿಕೆ. ಕಂದಾಯದ ನೆಪದಲ್ಲಿ ಸರಕಾರಕ್ಕೆ ಬಡ ಜನರ ಆಸ್ತಿಪಾಸ್ತಿ ಸೇರಿಸುವ ವ್ಯವಸ್ಥೆ ವಿರುದ್ಧ ಸಿಡಿದೆದ್ದ ಸಿಡಿಲ ಮರಿ. ಬಡವರ ಜಮೀನುಗಳನ್ನ ಕಸಿದುಕೊಳ್ಳುವವರ ವಿರುದ್ಧ ಹೋರಾಡಿದ ಬಲಶಾಲಿ. ತನ್ನ ತೋಳ್ಬಲವನ್ನು ನಂಬಿಕೊಂಡು ಬ್ರಿಟೀಷರೊಂದಿಗೆ ಸೆಣಸಾಡಿದ ಆತನ ಧೈರ್ಯ ಸ್ಥೈರ್ಯದ ಸನ್ನಿವೇಶಗಳು ಬಹುರೋಮಾಂಚನಕಾರಿಯಾದವುಗಳೆಂದು ಹೇಳಬಹುದು. ಬಡವರ ಬೆಳಕಾಗಿ, ಆಸರೆ ಯಾಗಿ ಮೆರೆದ ಮನೋಸ್ಥೈರ್ಯದ ಧೀಮಂತ ಸಿಂಧೂರ ಲಕ್ಷ್ಮಣ ಅಂತೆಯೇ ಇಂದಿಗೂ ಇತಿಹಾಸದಲ್ಲಿ ಚಿರಸ್ಥಾಯಿ.

**ಆಕರಗಳು**


೧. ಸಿಂಧೂರ ಲಕ್ಷ್ಮಣ ನಾಟಕ, ಕಂಠಿಹನುಮಂತರಾಯ.

೨. ವಿಜಾಪುರ ಜಿಲ್ಲೆಯ ಲಾವಣಿಗಳು, ೧೯೭೯, ಸಂ. ಕ್ಯಾತನಹಳ್ಳಿ ರಾಮಣ್ಣ

೩. ಸಿಂಧೂರ ಲಕ್ಷ್ಮಣ, ಮಹಾಕಾವ್ಯ, ಡಾ.ಆರ್.ಸಿ.ಮುದ್ದೇಬಿಹಾಳ

೪. ಕೋಲಾಟ ಪದ ಸಂಗ್ರಹ, ಜಿ.ಕೆ.ತಳವಾರ


* * *

# ೩೮. ಜನಪದ ಸಾಹಿತ್ಯ

ಬ್ರಿಟೀಷ್ ಆಡಳಿತಗಾರರ ಹಾಗೂ ಮಿಶನರಿಗಳ ಪ್ರಭಾವ ಕಾರಣವಾಗಿ ವಸಾಹತು ಶಾಹಿಯ ಭದ್ರಬಾಹುಗಳು ಒಟ್ಟು ಸ್ಥಳೀಯತೆಯನ್ನು ಬಾಚಿತಬ್ಬಿಕೊಳ್ಳಲು ಹೂಡಿದ ತಂತ್ರಗಳು ಭಾರತೀಯ ಗ್ರಾಮ ಸಮುದಾಯವನ್ನು ಹೋರಾಟಕ್ಕೆ ಅಣಿಯಾಗುವಂತೆ ಮಾಡುವಂತಾಯಿತು. ಈ ಕಾರಣವಾಗಿ ದೇಸೀ ಹೋರಾಟಗಾರರು ಅಂದು ತೋರಿದ ಪ್ರತಿರೋಧವು ಒಳಬಂಡಾಯವೆನ್ನಿಸಿಕೊಂಡಿತೆ ಹೊರತು ಅದು ರಾಷ್ಟ್ರೀಯ ಚಳವಳಿಯ ಮುಖ್ಯಧಾರೆಯಾಗಿ ಗುರುತಿಸಿಕೊಳ್ಳದೆ ಹೋಯಿತು. ಆದರಿಂದು ನಡೆಯುತ್ತಿರುವ ಸಂಘರ್ಷದ ಸಂಕಥನದ ಸಂದರ್ಭದ ಚರ್ಚೆ ಇಂಥ ದೇಸೀ ಬಂಡಾಯಗಾರರ ಹೋರಾಟದ ಮೇಲೆ ಬೆಳಕುಚೆಲ್ಲುವ ಮತ್ತು ಅದನ್ನು ವ್ಯಾಪಕವಾಗಿ ಪ್ರಚುರಪಡಿಸುವ ಪ್ರಯತ್ನಗಳು ನಡೆಯುತ್ತಿರುವುದು ನಗಣ್ಯವೆನ್ನಿಸಿದ ಸ್ಥಳೀಯ ಚರಿತ್ರೆ ಮತ್ತು ಚರಿತ್ರೆಯ ನಾಯಕರು ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳುವಂತಾಗಿದೆ.

ಜಾಗತೀಕರಣದ ಈ ಸಂದರ್ಭದಲ್ಲಿ ನವವಸಾಹತುಶಾಹಿ ತಲೆ ಎತ್ತುತ್ತಿರುವ ಅಪಾಯದ ಸೂಚನೆಗಳು ಗೋಚರಿಸುತ್ತಿರುವ ಹೊತ್ತಿನಲ್ಲಿ ವಸಾಹತುಶಾಹಿಯು ಜಗತ್ತಿನಾದ್ಯಂತ ಎಸಗಿರುವ ಆಕ್ರಮ ಶೀಲ ನೆಲೆಗಳ ಪುನರಾವಲೋಕನ ನಡೆಯುತ್ತಿರುವುದು, ಅದೂ ದೇಸೀ ಸಂಸ್ಕೃತಿಯ ಮೇಲೆ ಮಾಡಿದ ಆಘಾತಗಳನ್ನು ಹಾಗೂ ಅದರ ಬಗೆಗೆ ಸ್ಥಳೀಯ ಬಂಡಾಯ ಗಾರರು ತೋರಿದ ಪ್ರತಿಭಟನೆಗಳ ಕುರಿತ ಸಾಂಸ್ಕೃತಿಕ ದಾಖಲೆಗಳ ಅಧ್ಯಯನಕ್ಕೆ ಮುಂದಾಗಿ ರುವುದು ಭಾರತೀಯ ಗ್ರಾಮ ಸಮುದಾಯವನ್ನು ಎಚ್ಚರಿಸುವಂತಿದೆ.

ಭಾರತೀಯ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನದ ಚರಿತ್ರೆಯಲ್ಲಿ ತಳಮಟ್ಟದ ಒಳ ಬಂಡಾಯಗಳ ತೀವ್ರತೆಯನ್ನು ಕಟ್ಟಿಕೊಡದೇ ಹೋದ ಕಾರಣವಾಗಿ ಅನೇಕ ದೇಸೀ ನಾಯಕರು ಪ್ರಧಾನ ಭಿತ್ತಿಗೆ ಬರದೇ ಆಳರಸರ ದೃಷ್ಟಿಯಲ್ಲಿ ಕಂಡುಬಂದಂತೆ 'ದರೋಡೆ ಕೋರ'ರಾಗಿ ಮಾತ್ರ ಉಳಿಯುವಂತಾಯಿತು. ಇಂಥ ದೇಸೀ ನಾಯಕರ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಜಾನಪದ ಮೊದಲಾಯಿತು. ಜನಪದ ಗೀತೆಗಳು ಇಂದು ದೇಸಿ ಚಳವಳಿಯ ದಾಖಲೆಗೆ ಸಿಕ್ಕುವ ಅಮೂಲ್ಯ ಸಾಮಗ್ರಿಗಳೆನಿಸಿವೆ.

ಸಮಕಾಲೀನ ಹಾಗೂ ಚಾರಿತ್ರಿಕ ಅಂಶಗಳನ್ನು ಒಳಗೊಂಡ ಜನಪದ ಸಾಹಿತ್ಯವು ಹೋರಾಟದ ಚರಿತ್ರೆಯನ್ನು ಬಿಚ್ಚಿಡುವ ಮೂಲಕ ಮಹದುಪಕಾರಮಾಡಿತು. ಜನಪದ ಸಾಹಿತ್ಯದ ಗೀತಪ್ರಕಾರದ ತ್ರಿಪದಿ, ಲಾವಣಿ, ತತ್ವಪದ, ದುಂದುಮೆ ಪದ, ಬೀಸುವ ಕಲ್ಲಿನಪದ, ಹಂತಿಪದ, ರಿವಾಯತಪದ ಮೊದಲಾದವು ವೀರರ ಚರಿತ್ರೆಯನ್ನು ಸಾರುವ ಮೂಲಕ ದೇಶಿ ಚರಿತ್ರೆಯ ಶ್ರೀಮಂತ ದಾಖಲೆಗಳೆನಿಸಿವೆ.

ಕನ್ನಡ ಜನಪದ ಕಥೆ ಮತ್ತು ನೀತಿ ಸಾಹಿತ್ಯದಲ್ಲಿ ವಸಾಹತುಶಾಹಿ ದೌರ್ಜನ್ಯದ ಚಿತ್ರಣ ದೊಂದಿಗೆ ಹೋರಾಟದ ಸಂಗತಿಗಳು ದಾಖಲಾಗಿವೆ. ಬ್ರಿಟೀಷರ ಹಾಗೂ ಅವರ ಅಜ್ಞಾಪಾಲಕ ರಂತಿದ್ದ ಜಮೀನ್ದಾರರ ವಿರುದ್ಧ ದೇಸೀಯರು ತೋರಿದ ಪ್ರತಿಕ್ರಿಯೆಯ ಸಂದರ್ಭದ ಅಧಿಕೃತ ದಾಖಲೆ ಸಿಕ್ಕುವುದು ಜನಪದರ ಲಾವಣಿಗಳಲ್ಲಿ. ಸಂಗೊಳ್ಳಿ ರಾಯಣ್ಣ, ಹಲಗಲಿ ಬೇಡರು, ಕಿತ್ತೂರ ಚೆನ್ನಮ್ಮನ ಸೊಸೆ, ಬಾದಾಮಿ ಕಿಲ್ಲೆ ಕೆಡವಿದ ಪದಾ, ಸಿಂಧೂರ ಲಕ್ಷ್ಮಣನ ಪದಾ ಮೊದಲಾದವು ನಿಶ್ಯಸ್ತ್ರೀಕರಣ ಕಾಯಿದೆ, ದತ್ತು ಮಕ್ಕಳಿಗೆ ಹಕ್ಕಿಲ್ಲ ಕಾಯಿದೆ, ಹಣವಂತರ ವಿರುದ್ಧ ನಡೆದ ಬಂಡಾಯವನ್ನು ಚಿತ್ರಿಸುತ್ತಿವೆ. ಇಲ್ಲಿ ಕನ್ನಡ ದೇಸೀ ಚಳುವಳಿಗಾರರ ದಿಟ್ಟತನ, ಪರಕೀಯರ ಕುತಂತ್ರ, ಸ್ಥಳೀಯರ ರೋಷ ಎಲ್ಲವನ್ನು ಪದಕಟ್ಟಿ ಹಾಡುವಲ್ಲಿ ಲಾವಣಿಕಾರರು ಆಗ ಇದ್ದ ಅಧಿಕಾರಶಾಹಿ ವಿರುದ್ಧವೇ ಬಂಡೆದ್ದು ಹಾಡಿದ್ದೂ ದಾಖಲಾರ್ಹ ಸಂಗತಿಯಾಗಿದೆ.

ಏನ ಹೇಳಲಿ ಜನ್ಮದ ಗೋಳು
ಇಂಗ್ರೇಜಿ ಉಪದರ್ ಆದೀತ ಬಾಳಾ
ಬಡವರ ಅಳತಾದೊ ಗಳಗಳಾ
ಮಾಡತಾರ ಚಿಂತಿ
........................

ಬಾಳು ಕೆಟ್ಟದ ಅಣ್ಣಾ ಸರಕಾರಾ
ಬಡವರ ತಂದಾರ ಕಣ್ಣೀರಾ
ಹೆಂತಾ ಯಾಳೇ ತಂದೀ ಈಶ್ವರಾ
ನಮಗ್ಯಾರದಿಲ್ಲ ಆಧಾರಾ.

ಬ್ರಿಟೀಷ್ ಆಳರಸರು ಜಾರಿಗೊಳಿಸಿದ ಈ ನೆಲಕ್ಕೆ ಹೊಂದದ ಕಾಯಿದೆಗಳು, ನ್ಯಾಯ ಪದ್ಧತಿ, ಹೇರಿದ ತೆರಿಗೆ ಮೊದಲಾದವು ಸ್ಥಳೀಯರನ್ನು ದುರ್ಬಲಗೊಳಿಸಿದವು. ರೈತರು, ಬಡವರು, ಕೂಲಿಕಾರರಾದ ಸ್ಥಳೀಯರಿಂದ ದುಡ್ಡು ವಸೂಲಿ ಮಾಡಿಕೊಡುವ ದಾಸ್ಯಕ್ಕೆ ಸ್ಥಳೀಯ ಅರಸರು ಶರಣಾಗುವಂತಾಯಿತು. ಇಂಥ ಧೋರಣೆ ನೀತಿಗಳು ಸ್ಥಳೀಯ ನಾಯಕ ರನ್ನು ರೊಚ್ಚಿಗೆಬ್ಬಿಸಿದವು. ಈ ಅವಧಿಯಲ್ಲಿ ಕರ್ನಾಟಕದಲ್ಲಿ ನಡೆದ ಅನೇಕ ಬಂಡಾಯ ಗಳಲ್ಲಿ ವೀರ ಸಿಂಧೂರ ಲಕ್ಷ್ಮಣನ ಮತ್ತವರ ಸಹಚರರ ಬಂಡಾಯ ಉತ್ತರ ಕರ್ನಾಟಕದ ಭಾಗದಲ್ಲಿ ಜನಜನಿತವಾಗಿದೆ.

ಉತ್ತರ ಕರ್ನಾಟಕ ಅದರಲ್ಲೂ ಮುಂಬೈ ಕರ್ನಾಟಕದ ಪ್ರದೇಶಗಳಲ್ಲಿ ಸಿಂಧೂರ ಲಕ್ಷ್ಮಣನ ಹೆಸರು ನೆನಪಿಸಿದರೆ ಮೈ ರೋಮಾಂಚನಗೊಳ್ಳುತ್ತದೆ. ಬ್ರಿಟೀಷ್ ಅಧಿಕಾರಶಾಹಿ ಹಾಗೂ ಅವರ ಪೋಷಕರಾಗಿದ್ದ ಜಮೀನ್ದಾರರ ವಿರುದ್ಧ ತನ್ನ ಸಣ್ಣ ಗುಂಪನ್ನು ಜೊತೆಯಲ್ಲಿ ಟ್ಟುಕೊಂಡು ದೊಡ್ಡ ಹೋರಾಟ ಮಾಡಿದ ಸಿಂಧೂರ ಲಕ್ಷ್ಮಣ ಚರಿತ್ರೆ ಅಜರಾಮರ ವಾದುದು.

**ಬಸವ ಪ್ರಭು ಲಾವಣಿ**

ಬಿದರಿಗ್ರಾಮದ ಬಸವಪ್ರಭು ಹಾಡಿದ ಲಾವಣಿ(ಡಾ.ಆರ್.ಸಿ.ಮುದ್ದೇಬಿಹಾಳರು ಸಂಗ್ರಹಿಸಿದ್ದು)ಯಲ್ಲಿ ಸಿಂಧೂರ ಲಕ್ಷ್ಮಣನ ಸಮಗ್ರ ಜೀವನಗಾಥೆ ಸಿಕ್ಕುತ್ತದೆ. ಸರಕಾರಿ ಸೇವೆಯಲ್ಲಿದ್ದ ಲಕ್ಷ್ಮಣ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ತನ್ನ ಬಂಡಾಯದ ಮೂಲಕ ಮೇಲ್ವರ್ಗದ ಬಂಡವಾಳಶಾಹಿಗಳ ನಿದ್ದೆಗೆಡಿಸಿ ಬಡವರ, ದೀನದಲಿತರ ಹಾಗೂ ಅಸಹಾಯಕ ಜನರ ನೆರವಿಗೆ ನಿಂತ ಪರಿಸರವಾಗಿ ನಿರೂಪಿತವಾಗಿದೆ. ಲಾವಣಿ ಆರಂಭದಲ್ಲಿ 'ಘಟ ಹೋಗುವುತನಕ ಹಟ ಬಿಡದ' ಲಕ್ಷ್ಮಣನ ಧೈರ್ರ, ಸಾಹಸ ಹಾಗೂ ಸ್ವಾಭಿಮಾನದ ಚಿತ್ರ ಬರುತ್ತದೆ.

ಸಿಂಧೂರಾಗ ಲಕ್ಷ್ಮಣ ಹುಟ್ಯಾನ ಭಂಟ ಅನಿಸ್ಯಾನ
ಕೊಟ್ಟ ವಚನ ಹುಟ್ಟ ತಪ್ಪಲಿಲ್ಲ
ಘಟಹೋಗುತನಕ ಹಿಡಿದ ಹಟ ಬಿಡಲಿಲ್ಲ.

ಪಾಂಡವರೊಳಗ ಇದ್ದಾಂಗ ಭೀಮ ಚೆಲುವ ಚಂದ್ರಾಮ
ಥೇಟ ಹೋಳಿಕಾಮ ರೂಪದಲಿ ಡೌಲ
ಹೆತ್ತತಾಯಿ ಹೊಟ್ಟೀಲಿ ಹುಟ್ಯಾನ ಪ್ರಬಲ.

ಹೀಗೆ ಸಿಂಧೂರ ಬಂಟನ ವರ್ಣನೆಯನ್ನು ಜನಪದರು ಕಂಡರಿಸಿದ್ದಾರೆ.

ಕಂಪನಿ ಸರಕಾರದ ಇನಿಸ್ಪೆಕ್ಟರ್‌ಗಳಿಗೆ ಸಿಂಹಸ್ವಪ್ನವಾಗಿದ್ದ ಸಿಂಧೂರ ಲಕ್ಷ್ಮಣ ವಾಯದೆ ಕೊಟ್ಟು ಅದರಂತೆ ನಡೆದುತೋರಿಸಿದ ಧೀರ. ಒಂದು ಸಂದರ್ಭದಲ್ಲಿ ಲಕ್ಷ್ಮಣ ಇನಿಸ್ಪೆಕ್ಟರ್‌ಗೆ ಹೇಳುತ್ತಾನೆ.

ಲಕ್ಷುಮಣ ತಿರುಗಿ ಹೇಳತಾನ ನಾಳೆ ಬರತೀನಿ
ಹುಷಾರಿ ಇರು ನೀ ಚಾವಡಿ ಒಳಗ
ಈ ಮಾತು ಸುಳ್ಳ ಅಲ್ಲ ಗಂಟು ಹಾಕು ಪದರಾಗ

ಅನೇಕ ಊರುಗಳಲ್ಲಿ ಗುಡ್ಡ ಗವ್ವರಗಳಲ್ಲಿ ಹುಲಿಯಂತೆ ಮೆರೆದು ಆಳರಸರ ಮತ್ತು ಶ್ರೀಮಂತರ ನಿದ್ದೆಗೆಡಿಸಿದ ಸಿಂಧೂರ ಲಕ್ಷ್ಮಣ ಇಂಗ್ಲೀಷರ ದರ್ಬಾರಕ್ಕೆ ಸವಾಲು ಆಗಿದ್ದ. ಜನಪದ ಗೀತೆಯಲ್ಲಿ ಲಕ್ಷ್ಮಣನ ಕಾಲಕ್ಕೆ ಹಾಗೂ ಮುಂಚೆ ಹೋರಾಟದ ಮುಂಚೂಣಿ ಯಲ್ಲಿದ್ದ ವೀರನನ್ನು ನೆನೆಯುತ್ತಾ ಆ ವೀರರಿಗಿಂತ ಲಕ್ಷ್ಮಣ ಬಹದ್ದೂರನಾಗಿದ್ದ ಎಂದು ಸಾರುತ್ತಾರೆ.

ಸಂಗೋಳಿ ಸಂಪಗಾಂದಿ ರಾಯಣ್ಣ
ಮುಂಡರಗಿ ಭೀಮರಾಯಣ್ಣ
ಶೂರರಾದಾರಣ್ಣ ಆಗೀನ ಕಾಲಕ
ಕಟ್ಟಿಚೆನ್ನ ಸತ್ತಹ್ವಾದ
ದೇಶದಾಗ ಮಾಡಿಕೊಂಡ
ಶಿವಾಜಿ ಟೀಪುಸುಲ್ತಾನ ಗಾಯಕವಾಡ ನಾನು
ಪೇಶ್ವೆ ನಾರಾಯಣ ಹೆಸರ ದೂರತನಕ
ಅವ್ರ ಪ್ರಬಲರಾದರು ಪೇಶ್ವೆ ಆಳುವ ಕಾಲಕೆ||
ಈ ಇಂಗ್ರೇಜಿ ದರಬಾರದಾಗ
ಲಕ್ಷ್ಮಣನ್ಹಾಂಗ ಆಗಿಲ್ಲ ಯಾರು ತಿಳಿರಿ ನಿಮ್ಮನಕ
ಅಂತ ಈ ಶೂರನಿಗೆ ಬಹದ್ದೂರ ಅನ್ನಬಾರದ್ಯಾಕ

ಹೀಗೆ ವೀರಭಂಟ ಲಕ್ಷ್ಮಣ ಬಡವರ ಪಾಲಿಗೆ ಆಪತ್‌ಬಾಂಧವನಾಗಿ ಸ್ವಾಭಿಮಾನಿಯಾಗಿ ನಿಜವಾದ ಅರ್ಥದಲ್ಲಿ ಬಹದ್ದೂರನಾಗಿ ಗುರುತಿಸಿಕೊಳ್ಳುತ್ತಾನೆ. ಲಕ್ಷ್ಮಣ ತೀರಿಕೊಂಡಾಗ 'ಮೋಸಮಾಡಿ ಅಭಿಮಾನ್ಯಗ ಹೊಡದಂಗಾತು ಕೌರವರು' ಎಂದು ಹೋಲಿಸುತ್ತಾರೆ. ಕೊನೆಗೆ, ''ಹುಟ್ಟಬೇಕು ಲಕ್ಷ್ಮಣನಂತವರು ಶ್ರೇಷ್ಠ ಅನಿಸಿಕೊಂಡು ಹ್ವಾದ ಗಬರು'' ಎಂದು ಹಾಡು ಮುಗಿಸುತ್ತಾರೆ.

ಕಲಿತನಕೆ ಹೆಸರಾದ ಸಿಂಧೂರ ಲಕ್ಷ್ಮಣ ಮೋಸದಿಂದ ಬಲಿಯಾದ ಸಂಗತಿ ಕಾಳ್ಗಿಚ್ಚಿನಂತೆ ಹಬ್ಬಿ ಸಿಂಧೂರಿನ ಅವನ ಕುಟುಂಬವರ್ಗವನ್ನು ತಲುಪಿತು. ಅವರ ರೋದನ ಹೇಳತೀರದು. ಜನಪದದ ಹಾಡಿನಲ್ಲಿ ಆ ಸಂದರ್ಭ ಹೀಗೆ ಚಿತ್ರಿತವಾಗಿದೆ.

ತೊಟ್ಟಿಲ ತೂಗತಿದ್ದೆ ಬಟ್ಟಲು ಬೆಳಗತಿದ್ದೆ
ಕೇಳಿಲ್ಲ ನಾನು ಹೊಸಸುದ್ದಿ! ಲಕ್ಷ್ಮಣನ
ಮಡದಿ ತಾ ಕೇಳಿ ಹೊರಳ್ಯಾಳ

ಅಂಗಳ ಹುಡುಗತಿದ್ದೆ ಗಂಗಾಳ ಬೆಳಗತಿದ್ದೆ
ಕೇಳಿಲ್ಲ ನಾನು ಹೊಸಸುದ್ದಿ! ಲಕ್ಷ್ಮಣನ
ತಾಯವ್ವ ಕೇಳಿ ಅಳತಾಳ

ಒಲಿಯ ಮ್ಯಾಲಿನ ಅಕ್ಕಿ ಉಕ್ಕುಕ್ಕಿ ಕುದಿವಾಗ
ಅವನಕ್ಕ ಅತ್ತಾಳ ಬೋರಾಡಿ! ಲಕ್ಷ್ಮಣಗ
ಹೊಡೆದವರ ವಂಶ ಅಳಿಯಲಿ.

ಜನೋಪಯೋಗಿ ಕೆಲಸ ಮಾಡಿ ಎಲ್ಲರ ನಾಲಿಗೆಯ ಮೇಲಿರುವ ವ್ಯಕ್ತಿಗೆ ಸಮಯ ಬಂದಾಗ ಜೊತೆಯಲ್ಲಿ ಯಾರೂ ಇರುವುದಿಲ್ಲ ಎಂಬುದು ಜನಪದ ನಂಬಿಕೆ. ಇಲ್ಲೂ ಹಾಗೆಯೇ ಆಯಿತು. ಜನಪದರು ಹೇಳುವ ಹಾಗೆ,

ಮ್ಯಾಳಿಗೆ ಮ್ಯಾಲಿನ ಹುಲ್ಲು ಗಾಳಿಗೆ ಹೋಗಾಗ
ಗಾಳಿನ ತರಬಾಕ ಸಗತಿಲ್ಲ- ಲಕ್ಷ್ಮಣಗ
ವ್ಯಾಳ್ಯಾ ಬಂದಾಗ ಯಾರಿಲ್ಲ.

ತಿಪ್ಪಿ ಮ್ಯಾಲಿನ ಹುಲ್ಲ ತೆಪ್ಪಾಗಿ ತೇಲಾಗ
ಎತ್ತಿ ತರುವ ಜಾಣ ಒಬ್ಬಿಲ್ಲ-ಲಕ್ಷ್ಮಣಗ
ಹೊತ್ತ ಬಂದಾಗ ಯಾರಿಲ್ಲ.

ಎಂಬಲ್ಲಿ ಲಕ್ಷ್ಮಣನ ಮೋಸದ ಸಾವು ಜನಪದರ ರೋಷಕ್ಕೆ ಕಾರಣವಾಗಿದೆ. ನಂಬಿದವರೆ ವಿಶ್ವಾಸದ್ರೋಹ ಮಾಡಿದ ಸಂಗತಿಯನ್ನು ಜನಪದರು,

ಜಾಣ ಜಾಣರು ಕೂಡಿ ಜಾಲಿಯ ಗಿಡದಾಗ
ಜಾಲ್ಯಾಗ ಕತ್ತಿ ಮಸ್ತಾರ-ಲಕ್ಷ್ಮಣನ
ಕುತ್ತಿಗಿ ಮ್ಯಾಲ ಎಳೆದಾರ

ಬಂಟ ಬಂಟರು ಕೂಡಿ ಕಂಟ್ಯಾಗ ಕೂತಾರ
ಕಂಟ್ಯಾಗ ಕತ್ತಿ ಮಸ್ತಾರ-ಲಕ್ಷ್ಮಣನ
ಟೊಂಕದ ಮ್ಯಾಲ ಎಳೆದಾರ.

ಹೀಗೆ ಮೋಸಕ್ಕೆ ಬಲಿಯಾದ ವೀರನ ಸಾವನ್ನು ಜನಪದರು ತುಂಬಾ ನೋವಿನಿಂದಲೇ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಸಿಂಧೂರ ಲಕ್ಷ್ಮಣನ ಅವಸಾನದ ನಂತರ ರಚಿತವಾದ ಜನಪದ ಕೋಲಾಟವೊಂದರಲ್ಲಿ ಜನಸಾಮಾನ್ಯರ ರೋದನ ಹೆಪ್ಪುಗಟ್ಟಿದೆ. ಮೋಸದಿಂದ ಆದ ಅವಸಾನವನ್ನು ಈ ಕೋಲಾಟ ಪದ ಚಿತ್ರಿಸುತ್ತದೆ.

ವಿಶ್ವಾಸ ಹಳಬರು ಊಟಕ ಹೇಳ್ಯಾರ
ಬಂಧೂಕ ಭಾರ ಬರಿಮಾಡಿ ಕೋಲ|
ಬಂದೂಕ ಭಾರಬರಿ ಲಕ್ಷ್ಮಣನ
ಊಟಕ್ಕೆ ಕೊತ್ತವಗ ಒಗದಾದ ಕೋಲ.

ವಿಶ್ವಾಸದ್ರೋಹ ಬಗೆದ ಸಂದರ್ಭದಲ್ಲಿ ವೀರನ ಅಂತ್ಯವನ್ನು ಚಿತ್ರಿಸಿದ ಈ ಪದದಲ್ಲಿ.

ಬಿದ್ದಾನ ಬಿದ್ದಾನ ಬಿಳಿಯಂಗಿ ಮೇಲಾಗಿ
ರುದ್ದರ ಜೋಡಂಗಿ ರಗತಾಗಿ ಕೋಲ
ರುದ್ದರ ಜೋಡಂಗಿ ರಗತಾಗಿ ಲಕ್ಷ್ಮಣ್ಣ
ಬಿದ್ದಾನ ಬೀಳಗಿ ಬಯಲಾಗ| ಕೋಲ"

ಜನಸಾಮಾನ್ಯರ ಆಪತ್‌ಬಾಂಧವ, ಅನಾಥರ ಪಾಲಿನ ರಕ್ಷಕನಾಗಿದ್ದ ಸಿಂಧೂರ ಲಕ್ಷ್ಮಣ ಬೀಳಗಿಯ ಬಯಲಲ್ಲಿ ಶವವಾಗಿ ಬಿದ್ದಕೊಂಡ ಸಂದರ್ಭವನ್ನು ಹೆಣ್ಣು ಮಕ್ಕಳು ಹೀಗೆ ಹಾಡಿದ್ದಾರೆ.

ಮಠಬಿಟ್ಟ ಮನೆಬಿಟ್ಟ ಮಠದ ಗೊಡವಿಯ ಬಿಟ್ಟ
ತನ್ನವರ, ಬಂಧುಗಳ ಕೈಬಿಟ್ಟು ಕೋಲ|
ತನ್ನವರ ಬಂಧುಗಳ ಕೈಬಿಟ್ಟು ಮಲಗ್ಯಾನ
ಕಪ್ಪರ ಪಡೆವ್ವಗ ತಲಿಕೊಟ್ಟು ಕೋಲ.

ಜನಪದರ ಬದುಕು ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುತ್ತದೆ. ಅಗಲಿ ಹೋದ ಲಕ್ಷ್ಮಣನನ್ನು ಕುರಿತು ಕಾವ್ಯ ಕಟ್ಟಿದ ಜನಪದರು ಲಕ್ಷ್ಮಣನನಿಲ್ಲದ ಸಂದರ್ಭಕ್ಕೆ ಅರಳಿದ ಹೂಗಳಿಗೆ ಏನು ಅರ್ಥವೆಂದು ಮಾರ್ಮಿಕವಾಗಿ ಕೇಳಿಕೊಳ್ಳುತ್ತಾರೆ.

ಸಿಂಧೂರ ತೋಟದಾಗ ಚೆಂದಕ ಮಲ್ಲಿಗಿ ಹೂವ
ಬಂದು ಲಕ್ಷ್ಮಣ್ಣ ಮುಡಿಲಿಲ್ಲ ಕೋಲ|
ಬಂದು ಲಕ್ಷ್ಮಣ್ಣ ಮುಡಿಲಲ್ಲಿ ಆ ಹೂವ
ಅಕ್ಕ ತಂಗೇರು ನೋಡಿ ಅಳತಾರ ಕೋಲ.

ಸಿಂಧೂರ ತೋಟದಾಗ ಚೆಂದಕ ಸಂಪಿಗಿ ಹೂವ
ಬಂದು ಲಕ್ಷ್ಮಣ್ಣ ಮುಡಿಲಿಲ್ಲ ಕೋಲ
ಬಂದು ಲಕ್ಷ್ಮಣ್ಣ ಮುಡಿಲಿಲ್ಲ ಆ ಹೂವ
ಗೆಳತೆರು ನೋಡಿ ಅಳತಾರ ಕೋಲ.

ಸಿಂಧೂರ ತೋಟದಾಗ ಚಂದಕ ಚಂಡು ಹೂವ
ಬಂದು ಲಕ್ಷ್ಮಣ್ಣ ಮುಡಿಲಿಲ್ಲ ಕೋಲ|
ಬಂದು ಲಕ್ಷ್ಮಣ್ಣ ಮುಡಿಲಿಲ್ಲ ಆ ಹೂವ
ತಾಯಿ ತಂದಿ ನೋಡಿ ಅಳತಾರ ಕೋಲ

'ಎಣ್ಣೆಯ ಬಿಂದಿಗಿಗಿ ಸಣ್ಣರವಿ ಕವಿದಂಗ' ಎಂದು ಮಾರ್ಮಿಕವಾಗಿ ನಾಣ್ಣುಡಿಯನ್ನು ಬಳಸಿ ಹೇಳಿಕೊಟ್ಟ ಈ ಮುಂದಿನ ಸಾಲುಗಳು ಲಕ್ಷ್ಮಣ್ಣನಿಲ್ಲದ ಶೂನ್ಯದಲ್ಲಿ ಆತನ ಬಳಗ ಹರಿಸಿದ ಕಣ್ಣೀರಿನ ಸಂದರ್ಭವನ್ನು ದೃವ್ಯವಾಗಿ ಬಿಚ್ಚಿಡಲಾಗಿದೆ.

ಎಣ್ಣೆಯ ಬಿಂದಿಗಿಗಿ ಸಣ್ಣಿರವಿ ಕವಿದಂಗ
ಅವನಮ್ಮ ಲಕ್ಷ್ಮಣನ ಬಳಗದ ಕೋಲ
ಅವನಮ್ಮ ಲಕ್ಷ್ಮಣನ ಬಳಗದ ಕಣ್ಣೀರ
ಸಣ್ಣ ಮಳಿಯಾಗಿ ಸುರಿದಾವ ಕೋಲ.

ತುಪ್ಪದ ಬಿಂದಿಗಿಗಿ ಕಟ್ಟಿರವಿ ಕವಿದಂಗ
ಅವನಮ್ಮ ಲಕ್ಷ್ಮಣನ ಬಳಗದ ಕೋಲ
ಅವನಮ್ಮ ಲಕ್ಷ್ಮಣನ ಬಳಗದ ಕಣ್ಣೀರು
ಉತ್ತರಿಯ ಮಳಿಯಾಗಿ ಸುರಿದಾವ ಕೋಲ.

ಸಿಂಧೂರ ಲಕ್ಷ್ಮಣ ತೀರಿಕೊಂಡಾಗ ಹೆಂಡತಿ ಚಂದ್ರವ್ವಳ ರೋದನವನ್ನು ಜನಪದರು ತಮ್ಮ ಗೀತೆಯಲ್ಲಿ ಕಂಡರಿಸಿದ್ದಾರೆ.

ಆ ಬಳಿಯ ಈ ಬಳಿಯ ಜಂಬ ನೀರಲು ಬಳಿಯ
ಮಡದಿ ಚಂದ್ರವ್ವನ ಕೈಬಳಿಯ ಕೋಲ
ಮಡದಿ ಚಂದ್ರವ್ವನ ಕೈ ಬಳಿಯ ತಗೆವಾದ
ತಾಯಿ-ತಂದಿ ನೋಡಿ ಅಳತಾರ ಕೋಲ.

ಅ ಮಣಿಯ ಈ ಮಣಿಯ ಜಂಬನೀಲದ ಮಣಿಯ
ಮಡದಿ ಚೆಂದ್ರವ್ವನ ಗುಳದಾಳಿ ಕೋಲ|
ಮಡದಿ ಚಂದ್ರವ್ವನ ಗುಳದಾಳಿ ತೆಗೆವಾಗ
ಗೆಳತಿಯರು ನೋಡಿ ಅಳತಾರ ಕೋಲ

ಹೀಗೆ ವೀರ ಸಿಂಧೂರ ಲಕ್ಷ್ಮಣನ ಸಾವಿನ ನಂತರ ತಂದೆ ತಾಯಿ ಹೆಂಡತಿ ಅಪಾರ ಬಳಗ ರೋಧಿಸುವ ಪರಿಯನ್ನು ಈ ಜನಪದಗೀತೆ ಕಟ್ಟಿಕೊಡುತ್ತದೆ. ಬಾಗಲಕೋಟೆ ತಾಲೂಕು ತುಳಸಿಗೇರಿಯ ಹರಿಜನ ಕೇರಿಯಲ್ಲಿ ಹೆಣ್ಣುಮಕ್ಕಳು ಹಾಡುತ್ತಿದ್ದ ಈ ಕೋಲಾಟದ ಪದವನ್ನು ಡಾ.ಆರ್.ಸಿ.ಮುದ್ದೇಬಿಹಾಳ ಅವರು ಸಂಗ್ರಹಿಸಿಕೊಟ್ಟಿದ್ದಾರೆ.

ಜನಪದ ಗೀತೆಗಳಲ್ಲಿ ವೀರರ ಚಿತ್ರಣ ಹೆಚ್ಚಾಗಿ ಲಾವಣಿಗಳಲ್ಲಿ ಕಂಡುಬರುತ್ತವೆ. ಕೆಲ ತ್ರಿಪದಿಗಳಲ್ಲಿ ಉಲ್ಲೇಖಿತವಾಗಿವೆ. ಕನ್ನಡ ಜನಪದ ಗೀತೆಗಳಲ್ಲಿ ವೀರರನ್ನು ಕುರಿತ ಗೀತೆಗಳ ಸಮಗ್ರ ಸಂಪಾದನೆ ಮತ್ತು ಪ್ರಕಟಣೆಯಾಗಬೇಕಿದೆ. ಸಂಗ್ರಹಿತ ಕೆಲವೇ ಕೆಲವು ಸಾಹಿತ್ಯದಿಂದ ಹೋರಾಟಗಾರರ ಒಟ್ಟು ಚರಿತ್ರೆಯನ್ನು ಸಮಗ್ರವಾಗಿ ಕಟ್ಟಿಕೊಡುವುದು ತೊಡಕಾಗುತ್ತದೆ. ಪ್ರತಿಷ್ಠಿತ ವಲಯದಿಂದ ಬಂದ ಹೋರಾಟಗಾರರಿಗಿಂತಲೂ ಅಪ್ರತಿಷ್ಠಿತ ವಲಯದಿಂದ ರೂಪುಗೊಂಡು ಬಂದ ಹೋರಾಟಗಾರರ ಚರಿತ್ರೆಯನ್ನು ಶಿಷ್ಟಸಾಹಿತಿಗಳು ಕಟ್ಟಿಕೊಡುವಲ್ಲಿ ಮಡಿವಂತಿಕೆ ತೋರಿರುವುದು ಕಂಡುಬರುತ್ತದೆ.

ಭಾರತೀಯ ಪರಂಪರೆಯಲ್ಲಿ ವೀರರಿಗಿದ್ದ ಸ್ಥಾನಮಾನ ಗೌರವಗಳು ದೊಡ್ಡವು. ನಮ್ಮ ಪ್ರಮುಖ ಕಾವ್ಯಗಳೆಲ್ಲ ಹೆಚ್ಚಾಗಿ ಯುದ್ಧ ವಿವರಗಳಿಂದಲೇ ತುಂಬಿಕೊಂಡಿವೆ. ಮಹಾಭಾರತ, ರಾಮಾಯಣಗಳೂ ಯುದ್ಧ ವಿವರಣೆಯಿಂದ ತುಂಬಿಕೊಂಡಿವೆ. ಉದ್ದಕ್ಕೂ ರಚನೆಯಾದ ಈ ಮಹಾಕಾವ್ಯಗಳು ರಾಜಮಹಾರಾಜರ ಚರಿತ್ರೆ ಸಾರಿದರೆ, ಕೆಳವರ್ಗದಿಂದ ಬಂದ ಹೋರಾಟಗಾರರ ಚರಿತ್ರೆಯನ್ನು

ಜನಪದರು ಸಾರಿ ಹೇಳಬೇಕಾಯಿತು. ನಮ್ಮ ಗೀಗಿ, ಲಾವಣಿಕಾರರು ಕಟ್ಟಿ ಹಾಡಿದ ವೀರರ ಗೀತೆಗಳ ವಾಸ್ತವಿಕ ನೆಲೆಯ ಅಧ್ಯಯನದ ಮೂಲಕ ಹೊಸ ಇತಿಹಾಸ ಬರೆವ ತುರ್ತು ಇಂದು ಅಗತ್ಯವಾಗಿದೆ.

* * *

# ೩೯. ರೈತನ ಮಗ

ಬೇಸಾಯ ಬಿಟ್ಟರೆ ಸುಖವಿಲ್ಲಾ
ಧರ್ಮದಿಂದ ನಡೆದುಕೊಂಡಲ್ಲಿ
ಬೇಸಾಯ ಮಾಡುವವನಿಗೆ
ಎಂದೂ ಅನ್ನ, ಬಟ್ಟೆಗೆ ಕೊರತೆ ಇರುವುದಿಲ್ಲ

ಎಂಬ ವಾಣಿಯನ್ನು ತಿಳಿದುಕೊಂಡು ನಡೆದವರು ನಮ್ಮ ಗ್ರಾಮೀಣರು. ತಾವು ಬದುಕುವು ದರೊಂದಿಗೆ ಇತರರನ್ನು ಬದುಕಿಸುವ ಕಲೆ ನಮ್ಮ ಕೃಷಿ ಕುಟುಂಬಗಳಿಗೆ ಸಲ್ಲುತ್ತದೆ. ಅದಕ್ಕಾಗಿ "ಕೋಟಿವಿದ್ಯೆಗಳಲ್ಲಿ ಮೇಟಿವಿದ್ಯೆ ಮೇಲು" ಎಂದರು ನಮ್ಮ ಹಿರಿಯರು. ಇಂತಹ ಸರ್ವಶ್ರೇಷ್ಠ ಕಾಯಕವನ್ನು ಮಾಡಿದವರು ನಾಡಿನಲ್ಲಿ ಕೋಟಿ ಕೋಟಿ ಜನ ಭೂಮಿಯ ಮೇಲೆ ಹುಟ್ಟಿದ್ದಾರೆ. ಅಂತಹ ಕೃಷಿಕರಲ್ಲಿ ಇತಿಹಾಸ ನಿರ್ಮಿರಸಿದವರು ಕೆಲವರು ಅಂತವರಲ್ಲಿ ಸಿಂಧೂರ ಲಕ್ಷ್ಮಣರು ಒಬ್ಬರು.

ಬೆಳಗಾಗ ಎದ್ದು ಯಾರನ್ನು ನೆನೆಯಲಿ
ಎಳ್ಳು ಜೀರಿಗಿ ಬೆಳೆಯೋಳು| ಭೂತಾಯಿ
ಎದ್ದೊಂದು ಗಳಿಗೆ ನೆನೆದೇನು"

ಎಂಬ ಹಾಡನ್ನು ಹಾಡಿ ತಮ್ಮ ಕಾಯಕವನ್ನು ಪ್ರಾರಂಭಿಸುತ್ತಿದ್ದರು ನಮ್ಮ ರೈತಾಪಿ ಬಂಧುಗಳು. ಅಂತಹ ಕಾಯಕದಲ್ಲಿ ದೇವರನ್ನು ಕಂಡ ಸಾಬಣ್ಣ ಮತ್ತು ನರಸಪ್ಪ ಎಂಬ ದಂಪತಿಗಳ ಏಕೈಕಮಗನಾಗಿ ಸಿಂಧೂರಿನಲ್ಲಿ ಜನಿಸಿದವರು ಲಕ್ಷ್ಮಣ. ಚಿಕ್ಕಂದಿನಿಂದಲೆ ಅನ್ಯಾಯ, ಅತ್ಯಾಚಾರದಂತ ವಿಷಯಗಳು ಕೇಳಿಬಂದಾಗ ಸಿಡಿದೇಳುವ ಗುಣವನ್ನು ಮೈಗೂಡಿಸಿಕೊಂಡು ಬೆಳೆದವನು. ಲಕ್ಷ್ಮಣನ ತಂದೆ ಸಿಂಧೂರ ಓಲೆಕಾರ. ಓಲೆಕಾರರಿಗೆ ಸರ್ಕಾರ ಉಂಬಳಿಯಾಗಿ ಕೊಟ್ಟ ಜಮೀನಿನಲ್ಲಿ ಒಕ್ಕಲುತನಮಾಡುತ್ತಿದ್ದ ಸಾಬಣ್ಣ. ಊರಿನ ಚಾಕ್ರಿ ಕೆಲಸ ಹಾಗೂ ಒಕ್ಕಲುತನವನ್ನು ಸಮರ್ಥವಾಗಿ ನೆರವೇರಿಸಿಕೊಂಡು, ಊರಿನ ಕೆಲಸ ಗಳು ಬಂದಾಗ ಹೊಲದ ಕೆಲಸಗಳನ್ನು ಬಾಲಕನಾದ ಲಕ್ಷ್ಮಣಮಾಡುತ್ತಿದ್ದನು. ಹೊಲದ ಕೆಲಸದಲ್ಲಿ ತಾಯಿ ನರಸವ್ವ ಲಕ್ಷ್ಮಣನಿಗೆ ಸಹಾಯಮಾಡುತ್ತಿದ್ದಳು. ಹಲವಾರು ವರ್ಷಗಳು ಕಳೆದ ನಂತರ ಸಾಬಣ್ಣ ಮರಣ ಹೊಂದಿದ ನಂತರ ಊರಿನ ಓಲೆಕಾರಿಕೆ ಕೆಲಸ ಲಕ್ಷ್ಮಣನಿಗೆ ದೊರೆಯಿತು.

ಚಿಕ್ಕವಯಸ್ಸಿನಿಂದ ಶಿಸ್ತಿನ ಸಿಪಾಯಿ ಆಗಿ ಬಾಳಿದ ಲಕ್ಷ್ಮಣ ಈ ಚಾಕ್ರಿ ಕೆಲಸದ ಜೊತೆಗೆ ಒಕ್ಕಲುತನವನ್ನು ಅಚ್ಚುಕಟ್ಟಾಗಿ ನೆರವೇರಿಸಿವುದರ ಜೊತೆಗೆ ಗುಂಡುಎತ್ತುವುದು, ಕವಣಿಕಲ್ಲು ಬೀಸುವುದು, ಕುಸ್ತಿ ಆಡುವುದು, ಬಂಡಿ ಎಳೆಯುವುದು ಹೀಗೆ ಹಲವಾರು ದೇಶಿಕ್ರೀಡೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಬೆಳೆದು ಉತ್ತಮ ಸಾಹಸಿಗ ಎಂದು ಹೆಸರು ಗಳಿಸಿದನು. ಎಷ್ಟೋ ಸಲ ಅವರ ತಾಯಿ ತಾಲಿಮ ಮನೆಗೆ ಬಂದು ಹೊಲದಾಗ ಬಂದ ಬೆಳೆ "ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಆಗೈತಿ" ಎಂದು ಹೇಳಿ ಹೊಲಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಭೂಮಿ ತಾಯಿಯ ಬಗ್ಗೆ ಅಪಾರ ಗೌರವ ಹೊಂದಿದ ಲಕ್ಷ್ಮಣ ಹೊಸದಾಗಿ ಮದುವೆಯಾದ ಸಂದರ್ಭದಲ್ಲಿ ಹೆಂಡತಿಯೊಂದಿಗೆ ರಸನಿಮಿಷ

ಕಳೆಯುವುದನ್ನು ಬಿಟ್ಟು ಹೊಲದಲ್ಲಿ ನಟ್ಟು ಕಡಿಯುವುದು, ಕೃಷಿ ಸ್ಪರ್ಧೆಯಲ್ಲಿ ಬಹುಮಾನ ಪಡೆಯುವಂತ ಪ್ರಕ್ರಿಯೆಯಲ್ಲಿ ತನ್ನನ್ನು ತೊಡಗಿಸಿಕೊಂಡು, ಗೌಡರ ಹೊಲದ 3 ಅಕ್ಕಡಿ ಜೋಳದ ಕನಕಿ ಕೂಡಿಹಾಕಿ 80 ಚೀಲ ಜೋಳದ ರಾಶಿ ಮಾಡಿದ್ದು ಇತಿಹಾಸವೇ ಸರಿ.

**ಹೆಮ್ಮಾರಿಯಾಗಿ ಬಂದ ಬರ**

ಊರಿನಚಾಕ್ರಿ ಜೊತೆಗೆ ಒಕ್ಕಲುತನವನ್ನು ಉತ್ತಮವಾಗಿ ನಡೆಸಿಕೊಂಡು ಹೋಗುವ ಸಂದರ್ಭದಲ್ಲಿ ಜತ್ತಭಾಗಕ್ಕೆ ಬಂದೆರಗಿದ್ದು ಬರಗಾಲ, ನಮ್ಮ ಕೃಷಿಕರಿಗೆ ಮಳೆ ದೇವತೆ ಯಾದರೆ ಬರ ಹೆಮ್ಮಾರಿಯಾಗುತ್ತದೆ. ಹೊಟ್ಟೆಗೆ ಹಿಟ್ಟಿಲ್ಲದೆ ತೊಂದರೆಯಲ್ಲಿ ಸಿಕ್ಕಿಕೊಂಡ ರೈತ ಕುಟುಂಬಗಳು ಜೀವನವನ್ನು ಸಾಗಿಸುವುದು ಬಹಳ ದುಸ್ತರವಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಬ್ರಿಟೀಷ್ ಸರ್ಕಾರ ಕಂದಾಯ ವಸೂಲಾತಿಗೆ ಕ್ರಮಕೈಗೊಂಡಾಗ ಅದರ ವಿರುದ್ಧ ಪ್ರಥಮವಾಗಿ ಬಂಡೆದ್ದವನು ಸಿಂಧೂರಿನ ಲಕ್ಷ್ಮಣ. ಸರ್ಕಾರಿ ನೌಕರಿಯಲ್ಲಿದ್ದು ತಮ್ಮ ನೌಕರಿ ಹಂಗನ್ನು ಬಿಟ್ಟು ಅಧಿಕಾರಿಗಳು ತೆಗೆದುಕೊಂಡ ನಿರ್ಧಾರವನ್ನು ದಿಕ್ಕರಿಸುವದು ಸಾಮಾನ್ಯ ಮಾತಲ್ಲ, ಸಾಮಾನ್ಯರಿಗೂ ಬರುವಂತ ಗುಣವು ಅಲ್ಲಾ. ಸಾಮಾನ್ಯಜನರು ಪಡುವ ತೊಂದರೆಯನ್ನು ಅನುಲಕ್ಷಿಸಿ ಸರ್ಕಾರಕ್ಕೆ ಸವಾಲು ಹಾಕಿ "ಮಳೆ ಇಲ್ಲದೆ ಘೋರ ಬರಗಾಲ ಬಂದೈತಿ ಈ ವರ್ಷದ ಬರಾಡ (ಕಂದಾಯ) ಸೂಟಮಾಡಿ" ಎಂದು ಅಧಿಕಾರಿಗಳನ್ನು ವಿನಂತಿಸಿಕೊಂಡನು. ಈ ಭಾಗದ ಬಡವರಿಗಾಗಿ ನನ್ನ ನೌಕರಿ ಹೋದರು ಚಿಂತೆಯಿಲ್ಲಾ ಜನಸುಖದಿಂದ ಇರಬೇಕೆಂಬುದು ಲಕ್ಷ್ಮಣನ ಆಸೆಯಾಗಿತ್ತು.

ಬರಗಾಲದ ಉಪಯೋಗವನ್ನು ಪಡೆದುಕೊಂಡ ಶ್ರೀಮಂತರು, ವ್ಯಾಪಾರಸ್ಥರು ಹೊಲ ಮನೆ ಬರೆಯಿಸಿಕೊಂಡು ದುಬಾರಿಬಡ್ಡಿಯಂತೆ ದುಡ್ಡು, ಆಹಾರ ಸಾಮಗ್ರಿಗಳನ್ನು ಕೊಡುತ್ತಿ ದ್ದರು. ಬಂಡವಾಳಶಾಹಿಗಳು ಬಡಕುಟುಂಬಗಳಿಗೆ ಮಾನಸಿಕ ತೊಂದರೆಕೊಡುತ್ತಿದ್ದರು. ಇಂತಹ ಪ್ರಸಂಗಗಳನ್ನು ಕಂಡುಕೆಂಡಮಂಡಲನಾದ ಲಕ್ಷ್ಮಣ ಬಂಡವಾಳಶಾಹಿಗಳ ವಿರುದ್ಧ ಬಂಡಾಯವೆದ್ದು ಸಾಮಾನ್ಯ ಜನರಿಗೆ ನ್ಯಾಯದೊರಕಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಡಿದನು. ಅದೇ ರೀತಿ ಬ್ರಿಟೀಷ್ ಅಧಿಕಾರಿಗಳ ವಿರುದ್ಧ ಹೋರಾಡಿ ತನ್ನ ನೌಕರಿಯನ್ನು ಕಳೆದುಕೊಂಡು "ಸೂರಿಲ್ಲದವರ ಬಾಳಿಗೆ ಆಸರೆ" ನೀಡಿದ್ದಾನೆ. ದಬ್ಬಾಳಿಕೆ ಮಾಡಿದ ಶ್ರೀಮಂತರಿಗೆ "ಯುಗಾದಿತನಕಾ ಬರಕೋ ಉಗಾದಿ ಆದ ಮ್ಯಾಲ ಹರಕೊ" ಎಂಬ ಮಾತುಗಳನ್ನಾಡಿ ಶ್ರೀಮಂತರಿಗೆ ಎಚ್ಚರಿಕೆ ನೀಡಿದ್ದಾನೆ.

ಇತಿಹಾಸಬಲ್ಲವರು, ಇತಿಹಾಸ ಓದಿದವರು ಇತಿಹಾಸ ನಿರ್ಮಿರಸಲು ತೊಂದರೆಯಾಗು ವುದಿಲ್ಲ. ಓದುಬರಹಬಾರದ ಕೃಷಿ ಕುಟುಂಬದಲ್ಲಿ ಬೆಳೆದ ಲಕ್ಷ್ಮಣನಂತಹ ವೀರರು ನಾಡಿಗೆ ನೀಡಿದ ಕೊಡುಗೆ ಅಪಾರ. ಇಂತವರು ಇತಿಹಾಸ ಸೃಷ್ಟಿಮಾಡಲು ಎಷ್ಟು ತೊಂದರೆ ಪಡಬೇಕಾ ಗುತ್ತದೆ, ಮತ್ತು ಅದರ ಹಿಂದಿನ ಶ್ರಮವನ್ನು ನಾವು ಲಕ್ಷ್ಮಣನ ಚರಿತ್ರೆ ಓದಿಯೇ ತಿಳಿಯ ಬೇಕು. ಲಕ್ಷ್ಮಣ ಇಂದು ನಮ್ಮ ಮುಂದೆ ಇಲ್ಲ ಆದರೆ ಅವರು ತೋರಿಸಿದ ಅನುಕಂಪ, ದಯೆ, ಕರ್ತವ್ಯನಿಷ್ಠೆ, ಅನ್ಯಾಯದ ವಿರುದ್ಧ ಬಂಡೇಳುವ ಮಾತುಗಳು ಇನ್ನೂ ಹಸಿಹಸಿ ಯಾಗಿವೆ. ಅಂತಹ ವ್ಯಕ್ತಿಗಳು ಶಕ್ತಿಯಾಗಿ ಬೆಳೆದು ಮುಂಬರುವ ಯುವ ಪೀಳಿಗೆಗೆ ಮಾದರಿ ಯಾಗಿದ್ದಾರೆ. ಅವರಂತಹ ಆದರ್ಶಗಳನ್ನು ನಾವೆಲ್ಲ ಬೆಳೆಸಿಕೊಂಡು ಬಾಳುವುದು ಇಂದಿನ ಜರೂರತೆಯಾಗಿದೆ.

**ಸಿಂಧೂರ ಲಕ್ಷ್ಮಣನ ಕುಟುಂಬದವರ ಪರಿಚಯ**

| | | |
|---|---|---|
| **ಲಕ್ಷ್ಮಣನ ತಂದೆ** | : | ಸಾಬು ಲಕ್ಷ್ಮಣ ನಾಯಿಕ |
| **ತಾಯಿ** | : | ನರಸವ್ವ, ನರಸವ್ವನ ತವರೂರ:ರಡ್ಡೇರಹಟ್ಟಿ, ತಾಲೂಕ : ಅಥಣಿ ಲಕ್ಷ್ಮಣನ ಹೆಂಡತಿ: ಚಂದ್ರವ್ವ (ಅಕ್ಕನ ಮಗಳು) |
| **ಲಕ್ಷ್ಮಣನ ಮಗನು** | : | ಸಾಬು, ಮೊಮ್ಮಗ : ಭೀಮು. ಲಕ್ಷ್ಮಣನ ಕಕ್ಕನು: ಭೀಮಣ್ಣ (ಈತನ ಹೆಸರನ್ನು ಲಕ್ಷ್ಮಣನ |

| | | |
|---|---|---|
| | | ಮೊಮ್ಮಗನಿಗೆ ಇಡಲಾಗಿದೆ.) |
| **ಲಕ್ಷ್ಮಣನ ಅಕ್ಕಂದಿರು** | : | ನರಸು, ಸಕ್ರವ್ವ, ಸತ್ಯವಳನ್ನು ರಡ್ಡೇರಹಟ್ಟಿಗೆ ಕೊಟ್ಟಿತ್ತು. ಸಕ್ರವಳನ್ನು ನೇಸೂರಿಗೆ ಕೊಟ್ಟಿತ್ತು. |
| **ಲಕ್ಷ್ಮಣನ** | : | ನರಸು, (ಸತ್ಯವ್ವನ ಮಗನು). ರಾಯಪ್ಪ (ಸಕ್ರವ್ವನ ಮಗ). |
| **ಅಳಿಯಂದಿರು** | | ನರಸಪ್ಪನ ಕಕ್ಕನ ಮಕ್ಕಳು:ಸಾಬ, ಗೋಪಾಲ, ಧರ್ಮ. |
| **ಲಕ್ಷ್ಮಣನ ಸೋದರ** | : | ಚಂದ್ರವ್ವ (ಸಕ್ರವ್ವನ ಮಗಳು, ಲಕ್ಷ್ಮಣನ ಹೆಂಡತಿ) ಸತ್ಯವ್ವ |
| **ಸೊಸಿಯಂದಿರರು** | : | (ಸತ್ಯವ್ವನ ಮಗಳು ನರಸಪ್ಪನ ತಂಗಿ) ಸಗರವ್ವ (ನರಸಪ್ಪ ದ್ವಿತೀಯ ತಂಗಿ, ಇವಳನ್ನು ದೇವರಿಗೆ ಬಿಟ್ಟಿತ್ತು) |
| **ಲಕ್ಷ್ಮಣ ಸಹೋದರ** | : | ಇಲ್ಲ, ಭೀಮಣ್ಣನು ಸಹೋದರನಂತೆ ಇದ್ದನು. |
| **ಲಕ್ಷ್ಮಣನ ಊರು** | : | ಸಿಂಧೂರ ತಾ.ಜತ್ತಿ (ಆಗ ಸಂಸ್ಥಾನ). |

* * *

## ೪೦. ಊರ ತಳವಾರ

ಅನ್ಯಾಯ, ಅಸತ್ಯ, ಅಧರ್ಮಗಳ ವಿರುದ್ಧ ಸಿಡಿದೇಳುವ ಗುಣವನ್ನು ಹುಟ್ಟಿನಿಂದಲೇ ಮೈಗೂಡಿಸಿಕೊಂಡು, ಅಂತಹ ಸಂದರ್ಭಗಳು ಎದುರಾದಾಗ ಜೀವದ ಹಂಗು ತೊರೆದು, ಸೆಟೆದುನಿಂತು ಬ್ರಿಟೀಷ್ ಸರ್ಕಾರಕ್ಕೆ ಕಬ್ಬಿಣದ ಕಡಲೆಯಾಗಿ ಹೊರಹೊಮ್ಮಿದ ಒಬ್ಬ ಸಾಮಾನ್ಯ ಊರ ತಳವಾರನೆಂದು ಚಾಕರಿ ಮಾಡಿದ ಸಿಂಧೂರ ಲಕ್ಷ್ಮಣನ ಕುರಿತು ಮಾತನಾಡು ವುದಾಗಲಿ, ಬರೆಯುವುದಾಗಲಿ ಕಷ್ಟಸಾಧ್ಯ. ಸಿಂಧೂರ ಲಕ್ಷ್ಮಣ ಹುತಾತ್ಮನಾದದ್ದು ೧೫.೦೭. ೧೯೨೨ರಲ್ಲಿ. ಆತ ಬದುಕಿದ್ದು ಕೇವಲ ೨೪ ವರ್ಷಮಾತ್ರ. ಅಂದರೆ ಈತನ ಜನನವು ೧೮೯೮ರಲ್ಲಿ ಆಗಿರಬಹುದೆಂದು ಅಂದಾಜಿಸಬಹುದಾಗಿದೆ.

ಲಕ್ಷ್ಮಣನ ಕಾಲಾವಧಿಯನ್ನು ಪೂರ್ವಾರ್ಧ ಮತ್ತು ಉತ್ತರಾರ್ಧವೆಂದು ಎರಡು ಘಟ್ಟ ಗಳಾಗಿ ವಿಂಗಡಿಸಿದಾಗ ಕಂಡು ಬರುವುದೇನೆಂದರೆ, ಆತನ ಬಾಲ್ಯ ಹಾಗೂ ಊರ ತಳವಾರ ನಾಗಿರುವ ಜೀವನವನ್ನು ಪೂರ್ವಾರ್ಧ ಘಟ್ಟವೆಂದೂ ಬಂಡಾಯಗಾರನಾಗಿ ಹೊರಹೊಮ್ಮಿ ಸಂಘರ್ಷದ ಹಾದಿ ಹಿಡಿದ ಘಟ್ಟವನ್ನು ಉತ್ತರಾರ್ಧವೆಂದು ತಿಳಿಯಬಹುದಾಗಿದೆ. ಲಕ್ಷ್ಮಣನ ಉತ್ತರಾರ್ಧ ಕಾಲಾವಧಿಯ ಬದುಕಿನ ಬಗ್ಗೆ ಸಾಕಷ್ಟು ಮಾಹಿತಿಗಳು ಅಲ್ಲಲ್ಲಿ ದೊರೆಯುತ್ತಿವೆಯಾದರೂ ಪೂರ್ವಾರ್ಧದ ಬಗ್ಗೆ ಅಷ್ಟೊಂದು ಯಥಾವತ್ತಾದ ಮಾಹಿತಿಗಳು ಅಲಭ್ಯ. ಏಕೆಂದರೆ ಸಿಂಧೂರ ಲಕ್ಷ್ಮಣ ಕಾಲವಾಗಿ ೮೫ವರ್ಷಗಳು ಗತಿಸಿಹೋಗಿವೆ. ಆತನ ಸಮಕಾಲೀನ ಬಂಧುಗಳಾಗಲಿ, ಸ್ನೇಹಿತರಾಗಲಿ ಯಾರೂ ಬದುಕಿ ಉಳಿದಿಲ್ಲ. ಸಿಂಧೂರಿನಲ್ಲಿ ಸಧ್ಯ ಬದುಕಿ ಉಳಿದಿರುವವರು ಮೂರನೇ ತಲೆಮಾರಿನ ಸಂತತಿ ಅಂದರೆ ಲಕ್ಷ್ಮಣನ ಮೊಮ್ಮಗನಾದ ಭೀಮಣ್ಣನ ಹೆಂಡತಿ ದುಂಡವ್ವ ಮತ್ತು ಮರಿಮಕ್ಕಳಾದ ಮೀನಾಕ್ಷಿ, ಚಂದ್ರವ್ವ, ಲಕ್ಷ್ಮಣ ಹಾಗೂ ರಾಮ ಮಾತ್ರ. ಇವರೆಲ್ಲರಿಗೂ ತಮ್ಮ ಮುತ್ತಜ್ಜನ ಬಗ್ಗೆ ಸಂಪೂರ್ಣ ವಿಷಯ ಗೊತ್ತಿರುವುದಿಲ್ಲ.

ಕೆಲವಾರು ಪ್ರದೇಶಗಳಲ್ಲಿ ಈ ಸಿಂಧೂರ ಲಕ್ಷ್ಮಣನ ಕುರಿತು ರೋಚಕ ಸಂಗತಿಗಳನ್ನು ತಾವು ಕೇಳಿ ತಿಳಿದಿರುವಂತೆ ಹೇಳುವ ಜನರಿದ್ದಾರೆ. ಉಮರಾಣಿ, ಬಸರಗಿ, ಗೋಗಾಡ, ಬೀಳೂರ, ಬೇಡರಹಟ್ಟಿ, ಚಮಕೇರಿ, ರಡ್ಡೇರಹಟ್ಟಿ, ಸಿಂಧೂರ ಮುಂತಾದೆಡೆಗಳಲ್ಲಿ ಅಲೆದಾಡಿದಾಗ ಸ್ವಲ್ಪಮಟ್ಟಿಗೆ ಲಕ್ಷ್ಮಣನ ಪೂರ್ವಾರ್ಧದ ಬಗ್ಗೆ ತಿಳಿದು ಬರುತ್ತದೆ.

ಆಂಗ್ಲರ ಆಳ್ವಿಕೆಯ ಕಾಲಾವಧಿಯಲ್ಲಿ ಸಿಂಧೂರು ಜತ್ತ ಸಂಸ್ಥಾನಕ್ಕೆ ಸೇರಿದ ಒಂದು ಸಣ್ಣ ಹಳ್ಳಿ. ಆ ಹಳ್ಳಿಯಲ್ಲಿ ತಂದೆ ಸಾಬಣ್ಣನಿಂದ ಬಳುವಳಿ ರೂಪದಲ್ಲಿ ಬಂದಿರುವ ತಳವಾರಿಕೆಯನ್ನು ಲಕ್ಷ್ಮಣ ಪ್ರಾಮಾಣಿಕತೆಯಿಂದ ಮುಂದುವರಿಸಿಕೊಂಡು ಹೋಗುತ್ತಿದ್ದ. ಸಿಂಧೂರಿನ ಗೌಡರಾಗಿ ಮಾದುರಾಯ ಭೀಮನಗೌಡ ಪಾಟೀಲರೆಂಬುವರಿದ್ದರು. ಗೌಡರಿಗೆ ಬಲಗೈ ಭಂಟನಾಗಿ, ಊರಿಗೆ ಉಪಕಾರಿಯಾಗಿ, ಸುತ್ತಮುತ್ತಲಿನ

ಹಳ್ಳಿಗಳ ಮನೆಮಾತಾಗಿ, ಪ್ರಾಮಾಣಿಕ ಹಾಗೂ ನಿಷ್ಠೆಯ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದನು. ಜತ್ತ ಸಂಸ್ಥಾನದ ದಾದಾಸಾಹೇಬ ಡಪಳೆ ಸರ್ಕಾರ ಅವರು ಈತನನ್ನು ತನ್ನ ಸ್ವಂತ ಮಗನೇ ಎನ್ನುವಷ್ಟರ ಮಟ್ಟಿಗೆ ಮೆಚ್ಚಿಕೊಂಡಿದ್ದರು ಎಂಬ ಅಂಶಗಳು ತಿಳಿದುಬರುತ್ತವೆ.

ಹೊಲ ಮನೆಗಳ ವ್ಯಾಜ್ಯ, ಕೌಟುಂಬಿಕ ಕಲಹಗಳು ಮತ್ತಿತರ ತಕರಾರುಗಳಿಗೆ ಸಂಬಂಧಿಸಿ ದಂತೆ ತಪ್ಪಿತಸ್ಥರಿಗೆ ಊರ ಚಾವಡಿಗೆ ಕರೆತರುವುದು, ಸಂಸ್ಥಾನಿಕರು, ಅಧಿಕಾರಿಗಳು, ಪೊಲೀಸರು ಸಿಂಧೂರಿಗೆ ಬಂದಾಗ ಅವರನ್ನು ಉಪಚರಿಸುವುದು, ಕಂದಾಯ ವಸೂಲಿ ಮಾಡುವುದು, ಸರಕಾರಿ ಆದೇಶಗಳನ್ನು ಜನರಿಗೆ ಸಾರುವುದು ಮುಂತಾದ ಕೆಲಸಕಾರ್ಯ ಗಳನ್ನು ಮಾಡುತ್ತಿದ್ದನು. ತನ್ನ ಚಾಕರಿಯ ಜೊತೆಜೊತೆಗೆ ಹಬ್ಬ ಹರಿದಿನಗಳು, ಜಾತ್ರೆಗಳಲ್ಲಿ ಹಮ್ಮಿಕೊಳ್ಳುವ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಯದ ಸರಮಾಲೆಯನ್ನು ಧರಿಸುತ್ತಿದ್ದನು. ಗುಂಡು ಎತ್ತುವುದು, ಕವಣಿಕಲ್ಲು ಬೀಸುವುದು, ಕುಸ್ತಿ ಆಡುವುದು, ತುಂಬಿದ ಚೀಲಗಳ ಬಂಡಿ ಎಳೆಯುವುದು, ಹಿಂಬರಕಿ ಗೋಡೆ ಹತ್ತುವುದು, ವೇಗವಾಗಿ ಹಿಂದೆ ಓಡುವುದು ಹೀಗೆ ಹತ್ತು ಹಲವಾರು ಶಕ್ತಿ ಸಾಹಸ ಪ್ರದರ್ಶನಗಳಲ್ಲಿ ಲೀಲಾಜಾಲವಾಗಿ ಭಾಗವಹಿಸಿ ನೆರೆದವರ ಹುಬ್ಬೇರಿಸುವಂತೆ ಮಾಡುತ್ತಿದ್ದನು. ಕವಣಿಕಲ್ಲು ಬೀಸುವುದರಲ್ಲಿ ಲಕ್ಷ್ಮಣನಿಗೆ ಲಕ್ಷ್ಮಣನೇ ಸಾಟಿ ಎನ್ನುವಷ್ಟರಮಟ್ಟಿಗೆ ಆತನು ಪ್ರಸಿದ್ಧಿಯಾಗಿದ್ದನು. ಎತ್ತಿನ ನೊಗವನ್ನು ಗೋಟು ನಿಲ್ಲಿಸಿ ದೂರದಿಂದ ಅದರ ಕಣ್ಣೊ(ತೂತು)ಳಗಿನಿಂದ ಕಲ್ಲು ತೂರಿ ಹೋಗುವಂತೆ ಕವಣಿ ಬೀಸುತ್ತಿದ್ದನು ಎಂಬುದನ್ನು ಕೇಳಿದಾಗ ಅಚ್ಚರಿಯಾಗುತ್ತದೆ. ಹಿಂಬರಕೆ ಗೋಡೆ ಹತ್ತುವುದಾಗಲಿ, ಆರು ಅಕಡಿ ಕಡಿದ ಸಂಗತಿಯಾಗಲಿ, ಮೊಲವನ್ನು ತುಳಿದು ಓಡಿದ ಘಟನೆಯಾಗಲಿ ಕೇಳಿ ತಿಳಿದಾಗ ರೋಚಕತೆಯ ಅನುಭವವಾಗುತ್ತದೆ.

ಲಕ್ಷ್ಮಣನು ಸಾಹಸ ಪ್ರವೃತ್ತಿಗೆ ಹೆಸರುವಾಸಿಯಾದಂತೆ ಕರುಣೆ, ಅನುಕಂಪ, ದಯಾ ಶೀಲತೆ ಹಾಗೂ ಸ್ತ್ರೀಯರ ಬಗ್ಗೆ ಗೌರವ ಭಾವನೆ, ಈ ಎಲ್ಲಾ ಗುಣಗಳಿಂದ ಸಿಂಧೂರಿನ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ ಉತ್ತಮ ವ್ಯಕ್ತಿಯಾಗಿ ಹೊರಹಮ್ಮಿದ್ದು ತಿಳಿದು ಬರುತ್ತದೆ. ಸ್ತ್ರೀಪರ ಕಾಳಜಿಯುಳ್ಳ ಲಕ್ಷ್ಮಣನು ಪರನಾರಿ ಸಹೋದರನೆಂಬ ಕೀರ್ತಿಗೆ ಪಾತ್ರನಾಗಿದ್ದನು. ಗ್ರಾಮದಲ್ಲಿರುವ ಎಲ್ಲ ಹೆಣ್ಣು ಮಕ್ಕಳನ್ನು ಅಕ್ಕ-ತಂಗಿಯರಂತೆ ಭಾವಿಸಿ ಆದರಿಸುತ್ತಿದ್ದನು. ಹಾಗೆಯೇ ದೀನದಲಿತರು, ಬಡವರು ಕಂಡರೆ ಈತನಿಗೆ ಅಕ್ಕರತೆ ಉಕ್ಕಿ ಬರುತ್ತಿತ್ತು. ಅಂಥವರ ಪರಿಸ್ಥಿತಿಯನ್ನು ನೋಡಲಾಗದೆ ಸಾಧ್ಯವಾದಷ್ಟು ಅವರಿಗೆ ಸಹಾಯ, ಸಹಕಾರ ಒದಗಿಸುತ್ತಿದ್ದನು.

ಕಂದಾಯ ವಸೂಲಿ ಸಂದರ್ಭದಲ್ಲಿ ಅಧಿಕಾರಿಗಳಿಗೆ ನಿಷ್ಠನಾಗಿ, ಜನರಿಗೆ ದಯಾಮಯಿ ಯಾಗಿ ಪ್ರಾಮಾಣಿಕತನದಿಂದ ಕಾರ್ಯ ನಿರ್ವಹಿಸುತ್ತಿದ್ದನು. ಕೆಲವೊಂದು ಕಾರಣಗಳಿಂದ ಬಡವರು ಕರ ಸಂದಾಯ ಮಾಡದೇ ಇರುವಾಗ, ಅವರ ಪರವಾಗಿ ಎಷ್ಟು ಸಲ ಸ್ವತಃ ತಾನೇ ಸರ್ಕಾರಕ್ಕೆ ಕಂದಾಯ ಕಟ್ಟುತ್ತಿದ್ದನು. ಅಥವಾ ಕಂದಾಯ ವಸೂಲಿಗೆಂದು ಲಕ್ಷ್ಮಣನಿಗೆ ಕುಲಕರ್ಣಿಯವರು ಕಳುಹಿಸಿದಾಗ ಉಳ್ಳವರಿಂದ ಕರ ವಸೂಲಿ ಮಾಡಿ, ಇಲ್ಲದವರ ಬಗ್ಗೆ ಕಾಳಜಿವಹಿಸಿ ಮತ್ತೊಮ್ಮೆ ತುಂಬುತ್ತಾರೆ ಎಂದು ಹೇಳಿ ಸಾಗಹಾಕುತ್ತಿದ್ದನು. ಕರವಸೂಲಿ ಸಂದರ್ಭದಲ್ಲಿ ಲಕ್ಷ್ಮಣನಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಲಾಗಿತ್ತು, ಹೀಗಾಗಿ ಈತನ ಮಾತಿಗೆ ಕುಲಕರ್ಣಿ ಸಹಿತವಾಗಿ ಯಾರೂ ಚಕಾರ ಎತ್ತುತ್ತಿರಲಿಲ್ಲವೆಂದೇ ಹೇಳಬಹುದು.

ಲಕ್ಷ್ಮಣನ ವ್ಯಕ್ತಿತ್ವದ ಬಗ್ಗೆ ಜತ್ತ ಸಂಸ್ಥಾನದ ಪ್ರತಿಯೊಂದು ಹಳ್ಳಿಹಳ್ಳಿಗಳಲ್ಲಿ ಪಸರಿಸಿ ಹೆಸರುವಾಸಿಯಾಗುತ್ತಿರುವ ಸಮಯದಲ್ಲಿಯೇ ಪ್ರಕೃತಿಯ ಮುನಿಸು ಶುರುವಾಗುತ್ತದೆ. ಸಕಾಲದಲ್ಲಿ ಮಳೆಯಾಗದೆ ಜನ ಕಂಗಾಲಾಗುತ್ತಾರೆ. ಹೊಲದಲ್ಲಿಯ ಉತ್ತುವ ಬಿತ್ತುವ ಕೆಲಸ ಸ್ಥಗಿತವಾಗುತ್ತದೆ. ಆಗಸದಲ್ಲಿ ಮೋಡಗಳ ಸುಳಿವು ಇಲ್ಲದೆ ರೈತರು ಮುಗಿಲನ್ನು ದಿಟ್ಟಿಸುತ್ತ ಹಣೆಗೆ ಕೈಹೊತ್ತು ಹಪಹಪಿಸುತ್ತಾರೆ. ಇಡೀ ಭೂಮಿ ರಣಗುಡತ್ತ ಭೀಕರ ಬರಗಾಲಕ್ಕೆ ತುತ್ತಾಗಿ ಹಸುರೆಲ್ಲ ಒಣಗಿ ಬಕಬಕಬಾಡಿ ನೆಲಕ್ಕುರುಳುತ್ತವೆ. ತಿನ್ನಲು ಮೇವಿ ಲ್ಲದೆ ದನಕರುಗಳು ರೋದನೆಗೈಯುತ್ತವೆ. ದುಡಿಯುವವರಿಗೆ ಕೆಲಸವಿಲ್ಲದೆ ಕೈಕಟ್ಟಿ ಕುಳಿತು ಕೊಳ್ಳುವಂತಹ ಸ್ಥಿತಿ ಬಂದು ಹೊಟ್ಟೆಗೆ ಹಿಟ್ಟಿಲ್ಲದಂತಾಗುತ್ತದೆ. ಈ ಭಯಾನಕ ಪರಿಸ್ಥಿತಿ ಯನ್ನು ಕಂಡು ಲಕ್ಷ್ಮಣನ ಕರುಳು ಚುರುಗುಟ್ಟುತ್ತದೆ. ಎಲ್ಲರ ಮನೆಯ ಸ್ಥಿತಿ ಈತನ ಮನೆತನಕ್ಕೂ ಬಂದೊದಗುತ್ತದೆ. ತಾಯಿ ನರಸವ್ವ ಪತ್ನಿ ಚಂದ್ರವ್ವ ಸಾಂತ್ವಾನ ಹೇಳುತ್ತಾರೆ.

ಮನೆಮನೆಗಳಲ್ಲಿ ತಿನ್ನಲು ಅನ್ನವಿಲ್ಲದ ಸ್ಥಿತಿ ಬಂದೊದಗಿದಾಗ ಸರ್ಕಾರಕ್ಕೆ ಕಂದಾಯ ತುಂಬುವುದಾದರೂ ಹೇಗೆ? ಭಯಂಕರ ಬರಗಾಲದ ಪರಿಸ್ಥಿತಿಯಲ್ಲೂ ಬ್ರಿಟೀಷ್ ಸರ್ಕಾರ ಯಾವುದೇ ಪರಿಹಾರ ನೀಡದೆ ಕಂದಾಯ ವಸೂಲಿಗಾಗಿ ಫರ್ಮಾನು ಹೊರಡಿಸುತ್ತದೆ. ಗೌಡರು ಕುಲಕರ್ಣಿಯವರು ಕಂದಾಯ ವಸೂಲಿ ಮಾಡಿಕೊಡುವಂತೆ ಲಕ್ಷ್ಮಣನಿಗೆ ಒತ್ತಾಯ ಪಡಿಸುತ್ತಾರೆ. ಸರ್ಕಾರದ ಹಂಗಿನಲ್ಲಿರುವ ಲಕ್ಷ್ಮಣ ಸಿಂಧೂರಿನಲ್ಲಿ ಕರ ವಸೂಲಿ ಮಾಡಲು ಹೋದಾಗ ಅವಮಾನಿತನಾಗುತ್ತಾನೆ. ಕೆಲವೊಬ್ಬರಿಗೆ ಕುಲಕರ್ಣಿ ಇರುವ ಕಂದಾಯದರ ಕ್ಕಿಂತಲೂ ಹೆಚ್ಚಿಗೆ ಬರೆದಿದ್ದನ್ನು ನೋಡಿ ತಿಳಿದು ಮನದಲ್ಲಿ ಕುದಿಯುತ್ತಾನೆ. ಊರ ಜನತೆ ಸಿಟ್ಟಿಗೇಳುವುದರಲ್ಲಿ ಸತ್ಯವಿದೆ ಎಂಬುದು ಅರಿವಾಗುತ್ತದೆ. ಹೊಟ್ಟೆಗೆ ಗತಿಇಲ್ಲದೆ ಕೊರಗುವ ಈ ಸ್ಥಿತಿಯಲ್ಲಿ ಕಂದಾಯ ಎಲ್ಲಿಂದ ಸಂದಾಯ ಮಾಡಿಯಾರು? ಎಂಬ ತೀರ್ಮಾನಕ್ಕೆ ಬರುತ್ತಾನೆ. ಮನಸ್ಸು ಬೂದಿ ಮುಚ್ಚಿದ ಕೆಂಡವಾಗುತ್ತದೆ.

ಬರಿಗೈಯಿಂದ ಲಕ್ಷ್ಮಣ ಚಾವಡಿಗೆ ಬಂದಾಗ ಗೌಡರು ಕುಲಕರ್ಣಿಯವರು ಕಾರಣ ಕೇಳುತ್ತಾರೆ. ತನಗೊದಗಿದ ಪರಿಸ್ಥಿತಿಯನ್ನು ಅವರ ಮುಂದೆ ವಿವರಿಸುತ್ತಾನೆ. ಕುಲಕರ್ಣಿ ಲಕ್ಷ್ಮಣನ ಮಾತನ್ನು ಕಿವಿಗೆ ಹಾಕಿಕೊಳ್ಳದೆ, "ಇದು ಕಂಪನಿ ಸರ್ಕಾರದ ಹುಕುಂ ಆಗಿದೆ ಅದರಂತೆ ನಾವು ನಡೆದುಕೊಳ್ಳಲೇಬೇಕು. ಪ್ರತಿಯೊಬ್ಬರೂ ಬಿರಾಡ ತುಂಬಲೇಬೇಕು ತುಂಬದಿದ್ದರೆ ಪರಿಣಾಮ ಅನುಭವಿಸಬೇಕಾಗುತ್ತದೆ" ಎನ್ನುತ್ತಿದ್ದಂತೆ ಲಕ್ಷ್ಮಣನ ಎದೆಯೊಳ ಗಿನ ಕೋಪ ಉಕ್ಕಿಬರುತ್ತದೆ. ಕುಲಕರ್ಣಿ ಮಾಡಿರುವ ಮೋಸದ ಕುರಿತು ಗೌಡರಿಗೆ ತೋರಿಸಿ, ಸಿಂಧೂರಿನ ಪರಿಸ್ಥಿತಿಯನ್ನು ಸರ್ಕಾರಕ್ಕೆ ತಿಳಿಸುವಂತೆ ಮನವಿ ಮಾಡಿಕೊಂಡು, ಕರ ಸಂದಾಯಕ್ಕೆ ಸಂಬಂಧಿಸಿದಂತೆ ಕಾಲಾವಕಾಶ ನೀಡಲು ಕೇಳಿಕೊಳ್ಳುತ್ತಾನೆ. ಈ ರೀತಿಯಾಗಿ ಮನವಿ ಮಾಡಿಕೊಳ್ಳುತ್ತಿದ್ದರೂ ಕುಲಕರ್ಣಿ ಸರ್ಕಾರದ ಪರವಾಗಿಯೇ ಕಿರುಚಾಡುತ್ತಿರುವಾಗ ರೊಚ್ಚಿಗೆದ್ದ ಲಕ್ಷ್ಮಣ ಅವನ ಮೇಲೆ ಹರಿಹಾಯುತ್ತಾನೆ. ಗೌಡರು ಮೂಕ ಪ್ರೇಕ್ಷಕರಾಗು ತ್ತಾರೆ. ಈ "ಕುಲಕರ್ಣಿ ಮಾಡಿರುವ ಮೋಸ ಅಷ್ಟಿಷ್ಟಲ್ಲ ಬಡವರಿಗೆ ಹೆಚ್ಚಿನ ಬಡ್ಡಿಹೇರಿ ಹಣಕೊಟ್ಟು ಹೊಲ ಮನೆ ಬರೆಯಿಸಿಕೊಂಡಿದ್ದಾನೆ. ಅವರಿಗೆ ಹಣಕೊಡದಾಗದಿದ್ದಾಗ ಹೊಲ ಬರೆದು ದುಪ್ಪಟ್ಟು ಮಾಡಿದ್ದಾನೆ. ಈತನದು ಅತಿಯಾಗಿದೆ" ಎಂದು ಅವನ ಮೇಲೇರಿ ಹೋಗಿ ಬಡಿಯುತ್ತಾನೆ. ಇದೆಲ್ಲವನ್ನು ಸರಪಡಿಸುವಂತೆ ಗೌಡರಿಗೆ ಕೇಳುತ್ತಾನೆ. "ಎಲ್ಲದಕ್ಕೂ ನೀನೇ ಮುಂದೆ ಇರುವಿ ನಿನಗೆ ಹೇಗೆ ಅನಿಸುತ್ತೋ ಹಾಗೆ ಮಾಡು ಎಂದು ಗೌಡರು ಘಟನೆಗೆ ತೆರೆ ಎಳೆಯುತ್ತಾರೆ." ಗುಂಗಿನಲ್ಲಿ ಲಕ್ಷ್ಮಣ ಮನೆಗೆ ಬರುತ್ತಾನೆ. ಮನೆಯಲ್ಲಿ ತಾಯಿ, ಹೆಂಡತಿ ಗಂಜಿಗೂ ಗತಿಯಿಲ್ಲದೆ ಉಪವಾಸವಿರುವುದನ್ನು ಕಂಡು ಮರುಗಿ ತಾನೂ ನೀರು ಕುಡಿದು ಹಾಗೆಯೇ ಮಲಗುತ್ತಾನೆ. ಅದೇ ರಾತ್ರಿ ಲಕ್ಷ್ಮಣನ ಸೋದರ ಅಳಿಯಂದಿರಾದ ನರಸ್ಯಾ, ಸಾಬು, ಗೋಪಾಲಿ ದರೋಡೆ ಪ್ರಕರಣದಲ್ಲಿ ಪೊಲೀಸರಿಂದ ತಪ್ಪಿಸಿಕೊಂಡು ಬಂದು ಈತನ ಮನೆಯಲ್ಲಿ ಆಶ್ರಯ ಪಡೆಯುತ್ತಾರೆ. ಅವರು ದರೋಡೆಗೆ ಮುಂದಾಗುವ ಸತ್ಯಾಸತ್ಯತೆಯನ್ನು ಅರಿತುಕೊಂಡು ಅವರೊಂದಿಗೆ ತಾನೂ ಕೈಜೋಡಿಸಿ ರಾತ್ರೋರಾತ್ರಿ ಕುಲಕರ್ಣಿಯ ಮನೆಗೆ ಕನ್ನ ಹಾಕಿ ಹಣ ಒಡವೆ, ಕಾಗದ ಪತ್ರಗಳನ್ನು ಲೂಟಿ ಮಾಡಿ ಊರ ಚಾವಡಿಯಲ್ಲಿ ತಂದು ಪ್ರಮುಖ ಕಾಗದ ಪತ್ರಗಳನ್ನು ಸುಡುತ್ತಾನೆ. ಉಳಿದ ಹಣ ಒಡವೆಗಳನ್ನು ಸಿಂಧೂರಿನ ಭಾವಿಯಲ್ಲಿ ಬಿಸಾಕಿ ಅದೇ ದಿನ ಊರನ್ನು ತೊರೆದು ತನ್ನ ಚಾಕರಿಗೆ ತಿಲಾಂಜಲಿ ಇಟ್ಟು, ಸಿರಿವಂತರ ಅಕ್ರಮ ಸಂಪತ್ತನ್ನು ಲೂಟಿಮಾಡಿ ಬಡವರಿಗೆ, ಹಸಿದವರಿಗೆ, ನಿರ್ಗತಿಕರಿಗೆ, ಹಂಚಲು ವ್ಯವಸ್ಥಿತಿ ತಂಡ ಕಟ್ಟಿಕೊಂಡು ಊರಿಂದೂರಿಗೆ ತಮಲೆಮರೆಸಿಕೊಂಡು ಅಲೆಯುತ್ತಾ, ಉಳ್ಳವರ ಸಂಪತ್ತನ್ನು ಕೊಳ್ಳೆಹೊಡೆಯಲು ತೊಡಗು ತ್ತಾನೆ. ತನ್ನ ಹದಿನೆಂಟನೇ ವಯಸ್ಸಿಗೆ ಸಿಂಧೂರನ್ನು ತೊರೆದು ಹೋದ ಲಕ್ಷ್ಮಣ; ಅಲ್ಪ ಸಮಯದಲ್ಲೇ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿ, ಹೆಜ್ಜೆಹೆಜ್ಜೆಗೂ ಕಾಡಿ ಇತಿಹಾಸ ಪುರುಷ ನಾದದ್ದು ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

* * *

## ೪೧. ದುರಂತ ನಾಯಕ

ಈ ನಮ್ಮ ಕನ್ನಡ ನಾಡು ರಾಜ ಮಹಾರಾಜರಿಂದಲೂ, ವೀರರು, ಶೂರರು, ಧೈರ್ಯ ಶಾಲಿಗಳು, ಸಾಹಸಿಗಳು, ಗಟ್ಟಿಗರನಾಡು ಎನಿಸಿಕೊಂಡಿದೆ. ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಮೊದಲಾದ ರಾಜಮನೆತನಗಳು ಎತ್ತಿತೋರಿಸಿ ಕೊಂಡಿವೆ.

ಎಷ್ಟೆಷ್ಟೋ ಜನ ನಮ್ಮ ನಾಡಿನ ವೀರಪುರುಷರು, ವೀರಸ್ತ್ರೀಯರು ನಮ್ಮ ನಾಡಿಗಾಗಿ ನಮ್ಮ ದೇಶಕ್ಕಾಗಿ ಪ್ರಾಣವನ್ನೇ ಕೊಟ್ಟಿರುವರು. ಕಲಿಗಳು, ಸಾಹಸಿಗರು, ಜಟ್ಟಿಗಳು ಮುಂತಾದವರು ಇನ್ನೂ ಅನೇಕ ಜನವೀರರು, ಧೀರರು ಆಳಿದ ಮತ್ತು ಮೆರೆಸಿಕೊಂಡಿರು ವಂತಹ ನಮ್ಮ ನಾಡಿನಲ್ಲಿ ಹಲವಾರು ಜನರು ಬ್ರಿಟೀಷರ ವಿರುದ್ಧ ಹೋರಾಡಿ ತಮ್ಮ ಪ್ರಾಣವನ್ನು ತೆತ್ತಿರುವರು. ಅಂಥವರಲ್ಲಿ ಸಿಂಧೂರ ಲಕ್ಷ್ಮಣ, ಹಲಗಲಿಬೇಡರು, ಮದಕರಿ ನಾಯಕ, ಕಿತ್ತೂರು ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ನರಗುಂದ ಬಾಬಾ ಸಾಹೇಬ, ಮುಂಡರಗಿ ಬೀಮರಾಯ, ಮೈಲಾರಮಹಾದೇವ, ಸಂಗೊಳ್ಳಿ ರಾಯಣ್ಣ, ರಾಜವೆಂಕಟಪ್ಪ ನಾಯಕ ಮುಂತಾದವರು ಬಹುಸಂಖ್ಯೆಯಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ತಮ್ಮದೇ ಆದ ವೀರತನವನ್ನು ತೋರಿ ಉದಾತ್ತನಾಯಕ ನಾಯಕಿಯರಾಗಿ ಮರಣ ಹೊಂದಿದ್ದಾರೆ.

ದುರಂತ ಅಂದರೇನು? ದುರಂತ ಏಕೆ ಸಂಭವಿಸುತ್ತದೆ? ಹೇಗೆ ಸಂಭವಿಸುತ್ತದೆ? ಹೇಗೆ ಇರುತ್ತದೆ? ಅನ್ನುವುದರ ಬಗ್ಗೆ ಎರಡು ಮಾತಿನಲ್ಲಿ ಚರ್ಚಿಸುವುದಾದರೆ, ದುರಂತ ನಾಯಕನು ಉದಾತ್ತವಾದ ಗುಣಸ್ವಭಾವಗಳನ್ನು ಹೊಂದಿದವನಾಗಿದ್ದು, ಸಮಾಜದಲ್ಲಿ ಉನ್ನತ ಪದವಿ ಯಲ್ಲಿದ್ದು, ಇತರರಿಂದ ಅತಿಶಯವಾದ ಪ್ರೀತಿ ಗೌರವಗಳನ್ನು ಪಡೆಯುತ್ತಿದ್ದರೂ ಅವನದೇ ಆದ ಯಾವುದೋ ಕರ್ಮದ ಫಲವಾಗಿ ಅವನಿಗೆ ವಿಪತ್ತು ಬರುತ್ತದೆ. 'ಭಗವದ್ಗೀತೆಯಲ್ಲಿ ಕೃಷ್ಣ ಹೇಳುವುದು ಇದನ್ನೇ 'ಕರ್ಮಣ್ಯೇ ವಾಧಿಕಾರಸ್ತೆ ಮಾ ಫಲೇಷು ಕದಾಚನಂ' ಪೂರ್ವ ಜನ್ಮ ಹಾಗೂ ಪುನರ್ ಜನ್ಮದ ಕಲ್ಪನೆ ನಮ್ಮ ಸಂಸ್ಕೃತಿಯಲ್ಲಿರುವಂತೆ ಗ್ರೀಕ್‌ನಾಟಕಗಳಲ್ಲಿ ಮೂರು ತಲೆಮಾರುಗಳ ಪಾಪಪುಣ್ಯ ಲೆಕ್ಕಾಚಾರಕ್ಕೆ ಬಂದು ನಾಯಕ ಅವನತಿಯನ್ನು ಕಾಣುತ್ತಾನೆ.

ದುರಂತವು ಅತಿಧಾರುಣವಾದ ವಿಪತ್ತು, ದುಃಖ, ಸಂತಾಪಗಳನ್ನು ವರ್ಣಿಸಿ ಮರಣದಲ್ಲಿ ಮುಕ್ತಾಯವಾಗುತ್ತದೆ. ಗ್ರೀಕ್ ನಾಟಕಗಳಲ್ಲಿ ನಾಯಕನ ಮರಣವೇ ಸಂಭವಿಸಬೇಕೆಂದೇನಿಲ್ಲ ನಾಯಕ ಅತ್ಯಂತ ಹೀನ ಸ್ಥಿತಿಯನ್ನು ತಲುಪಿದರೂ ಅದು ದುರಂತವೇ. ಅದು ಹದ್ದುಗಳು ಅವನೆದೆಯನ್ನು ಬಗೆಯುತ್ತಿದ್ದರೂ ಅವುಗಳನ್ನು ಓಡಿಸಲಾಗದಷ್ಟು ದುಸ್ಥಿತಿ ನಾಯಕನಿಗೆ ಬಂದಿರಬಹುದು.

ಸಿಂಧೂರ ಲಕ್ಷ್ಮಣನು ಪ್ರಾಮಾಣಿಕತೆಯಿಂದ ಸರಕಾರದ ಸೇವೆ ಸಲ್ಲಿಸುತ್ತಿರುವ ಓಲೇಕಾರ ನಾಗಿದ್ದನು. ಲಕ್ಷ್ಮಣನ ಅಳಿಯಂದಿರಾದ ನರಸ್ಯಾ, ಸಾಬ, ಗೋಪಾಲರವರು, ಬಡವರ ಬಂಡಾಟ, ಶ್ರೀಮಂತರ ಉಂಡಾಟ ಕಂಡು ರೊಚ್ಚಿಗೆದ್ದು, ಬಡಮಂದಿಯನ್ನೆಲ್ಲ ಒಟ್ಟು ಗೂಡಿಸಿಕೊಂಡು ಹೋಗಿ, ಖೇಡ, ಖಾನಾಪುರದಲ್ಲಿ ದರೋಡೆ ಮಾಡಿ, ಪೊಲೀಸರಿಂದ ತಪ್ಪಿಸಿಕೊಳ್ಳಲು ಸಿಂಧೂರಿಗೆ ಬಂದ ತರುವಾಯ ನಿಜಸ್ಥಿತಿಯನ್ನು ಅರಿತ ಲಕ್ಷ್ಮಣನು ಅಳಿಯಂದಿರಿಗೆ ಬುದ್ದಿವಾದವನ್ನು ಹೇಳುತ್ತಾನೆ. ಆದರೂ ಕ್ರಿಯೆ ಮುಗಿದಿರುವುದರಿಂದ ಪ್ರಯೋಜನವಾಗಲಿಲ್ಲ. ಸಮಯ ಸಂದರ್ಭಕ್ಕೆ ಸಿಲುಕಿ ತನ್ನ ಅಳಿಯಂದರಿಗೆ ಆಶ್ರಯ ನೀಡಿದ್ದು ಲಕ್ಷ್ಮಣನ ಬದುಕಿನ ಚಿತ್ರಣವನ್ನು ಸಂಪೂರ್ಣ ದುರಂತದ ಕಡೆಗೆ ಕೊಂಡೊಯ್ಯು ತ್ತದೆ. ಎಲ್ಲಾ ಅಂಶಗಳಿಗೂ ಸಿಂಧೂರ ಲಕ್ಷ್ಮಣನೇ ಮೂಲ ಕಾರಣಕರ್ತನೆಂದು ಪೊಲೀಸರು ಅವನನ್ನು ಬಂಧಿಸಿದಾಗ ಅಳಿಯಂದಿರ ಜೊತೆ ಕೂಡಿಕೊಂಡು ಜತ್ತ ಸಂಸ್ಥಾನದ ಜೈಲು ಮುರಿದು ಪರಾರಿಯಾದರು. ಜೈಲು ಮುರಿದು ಪರಾರಿಯಾದ ಲಕ್ಷ್ಮಣ ಮತ್ತು ತಂಡದವರನ್ನು ಆಗಿನ ಬ್ರಿಟೀಷ್ ಸರಕಾರವು ಹುಡುಕುವ ಕಾರ್ಯ ಆರಂಭಿಸಿದರು. ಆಗ ನೇರವಾಗಿ ಹೋರಾಟ ಆರಂಭವಾದದ್ದು ಬ್ರಿಟೀಷ್ ಸರಕಾರದ ಪೊಲೀಸರು ಸಿಂಧೂರಲಕ್ಷ್ಮಣ ಮತ್ತು ತಂಡದವರಿಗೆ ಹಿಡಿಯುವ ಛಲತೊಟ್ಟರು. ಅವರು ಸಿಗಲೇಬಾರದು ಎಂದು ಸುತ್ತಾಡಿದ್ದು, ಅಲ್ಲಿನ ಪರಿಸರದಲ್ಲಿರುವ ಅಡವಿಯೆ ಸಮ್ತ ಸಾಮ್ರಾಜ್ಯವಾಗಿತ್ತು.

ಸಿಂಧೂರ ಲಕ್ಷ್ಮಣನು ತನ್ನನ್ನು ನಂಬಿದ ಜನತೆಗೆ ನ್ಯಾಯವನ್ನು ದೊರಕಿಸಿಕೊಡುವಲ್ಲಿ ಒಬ್ಬ ಪ್ರಾಮಾಣಿಕ ವೀರ ಶೂರನಾಗಿದ್ದನು. ಪ್ರಾಮಾಣಿಕ ಸೇವಕನಾಗಿ ಸಮಾಜಮುಖೀ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದನು. ಸೊಕ್ಕಿದ ಶ್ರೀಮಂತರು ಅನ್ಯಾಯದಿಂದ, ಮೋಸದಿಂದ ಗಳಿಸಿದ ಸಂಪತ್ತನ್ನು ಹಾಡುಹಗಲೇ ದೋಚಿಕೊಂಡು ಸಾಮಾನ್ಯಜನರಿಗೆ ದಾನಮಾಡು ತ್ತಿದ್ದನು. ಅನ್ಯಾಯದ ವಿರುದ್ಧ ಪ್ರತಿಭಟನೆಯನ್ನು ಮಾಡುವುದರಲ್ಲಿ ಶೂರನಾಗಿದ್ದನು. ಮಾನವಕ್ರಿಯೆಯ ಕರ್ಮಮಹತ್ವ, ಘನತೆ, ಪರಿಪೂರ್ಣತೆಯ ಜೊತೆಗೆ ಶುದ್ಧವಾದ ಭಾವನೆಗಳನ್ನು ಮೈಗೂಡಿಸಿಕೊಂಡಿದ್ದನು.

ಸಿಂಧೂರ ಲಕ್ಷ್ಮಣನ ಬಗ್ಗೆ ಕೇಳಿದಾಗ ರೋಮಾಂಚನವಾಗುತ್ತದೆ. ಆತನಿಟ್ಟ ಗುರಿ ಎಂದೂ ತಪ್ಪಿರಲಿಲ್ಲ. ಓಡುವ ಚಿಗರೆಯನ್ನು ಆಡುವ ಮೊಲವನ್ನು ಚಂಗೆಂದು ಹಿಡಿಯುವ ಕೌಶಲ್ಯ ಅವನಲ್ಲಿ ಕರಗತವಾಗಿತ್ತು. ತನ್ನ ಬೆನ್ನಟ್ಟುವವರಿಗೆ ಆತನೆಂದೂ ಬೆನ್ನನ್ನು ತೋರಿಸುತ್ತಿರಲಿಲ್ಲ. ಅವನು ಶೂರರ ಬಂಧು. ಮಿತ್ರರ ತಂಡಕಟ್ಟಿಕೊಂಡು, ಅಮಾನವೀಯ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಯುದ್ಧಸಾರಿದ ಧೀಮಂತನಾಗಿದ್ದನು.

ಹೀಗೆ ತಳಸಮುದಾಯದಲ್ಲಿ ಪ್ರತಿಭಟನೆ ಹೇಗೆ ರೂಪಪಡೆದುಕೊಂಡಿರುತ್ತದೆ ಸ್ವಾಭಿ ಮಾನ ಸ್ಫೋಟಗೊಂಡಾಗ ಯಾವ ಹಂತವನ್ನು ಕೂಡ ತಲುಪಬಹುದು. ಒಬ್ಬ ಸಾಮಾನ್ಯ ವ್ಯಕ್ತಿಯು ಅಸಮಾನ್ಯ ವ್ಯಕ್ತಿಯಾಗಿ ರೂಪತಾಳುವುದು, ಆತನಲ್ಲಿರುವಂತಹ ಒಳ್ಳೆಯ ಗುಣ ಗಳಿಂದ ಆತನ ಶುದ್ಧನಡತೆಯಿಂದ ಎನ್ನುವುದು ಸತ್ಯವಾದ ಮಾತು. ಲಕ್ಷ್ಮಣನು ಸಾಮಾಜಿಕ ಸೇವೆಗಳಲ್ಲಿ ತನ್ನನ್ನು ಅರ್ಪಿಸಿಕೊಂಡಿದ್ದನು. ಮಹಿಳೆಯರಿಗೆ ಸಹಾಯಮಾಡುವುದು ಒಂದು ಸಮುದಾಯದ ಏಳಿಗೆಗೆ ಎಂದೂ ಅಂಟಿಕೊಂಡಿರಲಿಲ್ಲ. ಎಲ್ಲಾ ಸಮುದಾಯಗಳಲ್ಲಿ ಬರುವ ಬಡ ಜನರ ಏಳಿಗೆಗಾಗಿ ದುಡಿದ ಒಬ್ಬ ಮಹಾನ್ ಮಾನವತಾವಾದಿ ಎನಿಸಿಕೊಂಡಿದ್ದಾನೆ. ಅಧಿಕಾರ ಮತ್ತು ಅದರ ಸುತ್ತಲು ಬರುವ ಅಸಂಗತ ತತ್ವವನ್ನು ಅನುಸರಿಸುತ್ತಿರಲಿಲ್ಲ. ವರ್ಗ ಮತ್ತು ವರ್ಣ ತಾರತಮ್ಯ ಎಂದೂ ಅನುಸರಿಸದೆ ಲಕ್ಷ್ಮಣನು ಅವುಗಳ ಜೊತೆ ಅನ್ಯೋನ್ಯತೆಯ ಸಂಬಂಧ ಹೊಂದಿದ್ದನು.

ಯಾವ ವ್ಯವಸ್ಥೆ ತನ್ನ ಕುಟುಂಬದ ಸರ್ವನಾಶಕ್ಕೆ ಕಾರಣೀಭೂತವಾಯಿತೋ, ನೋವು ಕೊಟ್ಟಿತೋ ಆ ವ್ಯವಸ್ಥೆಯ ವಿರುದ್ಧ ಹೋರಾಟ ಆರಂಭಿಸಿದನು. ಮೊದಲು ವ್ಯಕ್ತಿಗತ ಹೋರಾಟ ನಂತರ ಬ್ರಿಟೀಷರ ಆಯಕಟ್ಟಿನ ಜಾಗಗಳ ಮೇಲೆ ದಾಳಿಯನ್ನು ಮಾಡಿದನು.

ನಮ್ಮಲ್ಲಿನ ಭಾವುಕತೆಯನ್ನು ಬಳಸಿಕೊಂಡು ನಮ್ಮನ್ನಾಳುವ ಶ್ರೀಮಂತವರ್ಗಗಳು ನಮ್ಮ ಇಚ್ಛಾಸಕ್ತಿಗಳು ಕುಂದಲಿಕ್ಕೆ ಕಾರಣವಾಗಿವೆ. ಪ್ರತಿಭಟನೆಯನ್ನು ಹತ್ತಿಕ್ಕಲು ಭಾವನಾ ತ್ಮಕ ಸಂಬಂಧಗಳ ಮೇಲೆ ಮೊದಲು ಕೈಹಾಕುತ್ತಾ ಹೋಗುತ್ತಾರೆ. ಒಂದು ಸಂಸ್ಕೃತಿಯ ಒಳಗಡೆ ಸಂದರ್ಭ ಬಂದಾಗ ಬಹುಪ್ರಮುಖ ಪಾತ್ರವಹಿಸಿರುವವರನ್ನು ಬಲಿಕೊಡಲು ಮುಂದಾಗುತ್ತವೆ. ಇಂಥ ಸಮಯದಲ್ಲಿ ಸಬಲೀಕರಣ ಎಂದು ಯಾವುದನ್ನು ಕರಿಯು ತ್ತೇವೆಯೋ ಅಲ್ಲಿಯೇ ವ್ಯಕ್ತಿಯು ದುರಂತನಾಗಲಿಕ್ಕೆ ಕಾರಣವಾಗುತ್ತದೆ.

ಮನುಷ್ಯ ದಿನನಿತ್ಯ ಮಾಡುವ ಕೆಲಸಕಾರ್ಯಗಳಲ್ಲಿ ಅಲ್ಪವಾದದ್ದು. ಇತರರಿಗೆ ತೋರಿಸ ಲಾಗದಂಥದ್ದು, ಯಾವುದೇ ವಿಶೇಷವಿಲ್ಲದ ಘಟನೆಗಳು, ಸಂದರ್ಭಗಳು ದುರಂತಕ್ಕೆ ವಸ್ತು ವಾಗುವುದಿಲ್ಲ. ಅನ್ಯರ ಅನುಭಾವಕ್ಕಿಂತಲೂ ಬೇರೆಯಾದ ಗಂಭೀರ, ಗಹನ, ಉದಾತ್ತ ಹಾಗೂ ಅಪೂರ್ವವಾದ ಸಂದರ್ಭ ವಿಶೇಷಗಳು ಮನುಷ್ಯನ ಬಾಳಿನಲ್ಲಿ ಸಂಭವಿಸುತ್ತವೆ. ಹೀಗೆ ಉತ್ಕೃಷ್ಟವಾದ ಉದ್ದೇಶ ಹಾಗೂ ಗಹನತೆಯನ್ನು ಮಾತ್ರನಾವು ಮಹಾಪುರುಷರಲ್ಲಿ ಕಾಣುತ್ತೇವೆ. ಇಂಥ ಬಹುಪಾಲು ಅಂಶಗಳನ್ನು ಸಿಂಧೂರ ಲಕ್ಷ್ಮಣನಲ್ಲಿ ಕಾಣುತ್ತೇವೆ.

ಸಿಂಧೂರ ಲಕ್ಷ್ಮಣನು ಬ್ರಿಟೀಷರ ವಿರುದ್ಧ ಹೋರಾಡಿದ ಒಬ್ಬ ವೀರ ಉಳ್ಳವರಿಗೆ ಸಿಂಹಸ್ವಪ್ನವಾಗಿ ಇಲ್ಲದವರಿಗೆ ಆತ್ಮೀಯನಾಗಿದ್ದ. ಒಬ್ಬ ಹೃದಯವಂಥ ಪರಕೀಯ ಹಾಗೂ ದುಷ್ಟಶಕ್ತಿಗಳ ವಿರುದ್ಧ ಹೋರಾಡುತ್ತಲೇ ಸಮಾಜವಾದದ ಕನಸು ಕಂಡ ಮಾನವತಾವಾದಿ. ಆದರೆ ಬ್ರಿಟೀಷ್ ಸರಕಾರವು ಲಕ್ಷ್ಮಣನನ್ನು ದ್ರೋಹಿಯನ್ನಾಗಿ, ಕಳ್ಳನನ್ನಾಗಿ, ಕೊಲೆಗಡುಕ ನನ್ನಾಗಿ ಚಿತ್ರಿಸುತ್ತಾ ತನ್ನ ಎಂದಿನ ಕುತಂತ್ರದ ಬಲೆಯನ್ನು ಸಿಂಧೂರ ಲಕ್ಷ್ಮಣನ ಮೇಲೆ ಬೀಸಿತು. ಸಿಂಧೂರ ಲಕ್ಷ್ಮಣ ತನ್ನ ಅದ್ಭುತ ಸಾಹಸದ ಚಟುವಟಿಕೆಗಳನ್ನು ನಡೆಸುತ್ತ ದುರ್ಜನ ರನ್ನು ಕಾಡುತ್ತ, ಆಂಗ್ಲ ಅಧಿಕಾರಶಾಹಿಯ ಬಗ್ಗೆ ರೋಷಕಾರುತ್ತಾ ಅವರ ಹಲ್ಲಣಹಾರಿಸುತ್ತ ಬಾಳಿ ಕೊನೆಗೂ ನಿಶಸ್ತ್ರಧಾರಿಯಾಗಿ ಮೈಮರೆತು ಊಟಮಾಡುವ ಸಂದರ್ಭದಲ್ಲಿ ಸ್ವಜನರ ಗುಂಡಿಗೆ ಬಲಿಯಾಗುತ್ತಾನೆ.

ಸಿಂಧೂರ ಲಕ್ಷ್ಮಣನ ದುರಂತವನ್ನು ಅಧ್ಯಯನಿಸಿದಾಗ ನನಗೆ ನಾಗಚಂದ್ರನ ಪಂಪ ರಾಮಾಯಣದಲ್ಲಿಯ ಒಂದು ಸಂದರ್ಭ ನೆನಪಾಗುತ್ತದೆ. ''ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂದಾಂಟದೆ' ಅಂದರೆ ಸಮುದ್ರಕ್ಕೂ ಒಂದು ಎಲ್ಲೆ ಇರುತ್ತದೆ. ಸಮಯ

ಬಂದಾಗ ಅದು ಕೂಡ ತನ್ನ ಎಲ್ಲೆಯನ್ನು ಮೀರುತ್ತದೆ. ಉದಾಹರಣೆಗೆ ಸುನಾಮಿಯಂತ ಘಟನೆ. ಹಾಗೆ ರಾವಣನು ಪಂಪರಾಮಾಯಣದಲ್ಲಿ ತುಂಬಾ ಉತ್ತಮ ಚಾರಿತ್ರ್ಯ ಹೊಂದಿದ ವ್ಯಕ್ತಿಯಾಗಿದ್ದು ಸಮಯ ಸಂದರ್ಭಕ್ಕೆ ಸಿಲುಕಿ ಸೀತೆಯನ್ನು ಕದ್ದೊಯ್ದು ದುರಂತ ವ್ಯಕ್ತಿ ಯಾಗುತ್ತಾನೆ. ಇಂಥ ಅನೇಕ ಘಟನೆಗಳು ನಮಗೆ ದೊರೆಯುತ್ತವೆ. ಇಲ್ಲಿ ಸಿಂಧೂರ ಲಕ್ಷ್ಮಣನು ಕೂಡ ಪರಿಸ್ಥಿತಿಗೆ ಸಿಲುಕಿ ದುರಂತ ವ್ಯಕ್ತಿಯಾಗುತ್ತಾನೆ. ಸಿಂಧೂರ ಲಕ್ಷ್ಮಣನನ್ನು ಕುರಿತು ಜಾನಪದ ತ್ರಿಪದಿಯೊಂದು ಸೊಗಸಾಗಿ ಮೂಡಿ ಬಂದಿದೆ.

"ಲಕ್ಷ್ಮಣನ ಹೋತವರು ಲಕ್ಷಕೊಬ್ಬರೂ ಇಲ್ಲ
ರಕ್ಷಣೆಗೆ ಯಾರೂ ಬರಲಿಲ್ಲ| ವಿಧಿಯಿಟ್ಟ
ಶಿಕ್ಷೆಗೆ ಅವನು ಮಣಿಯಲಿಲ್ಲ"
(ಸಿಂಧೂರ ಲಕ್ಷ್ಮಣ ಮಹಾಕಾವ್ಯ ಪು.೦೧)

ಅಂದರೆ ಸಿಂಧೂರ ಲಕ್ಷ್ಮಣನಂಥವರು ಇದುವರೆಗೂ ದೊರೆಯಲಿಲ್ಲ. ಆದರೆ ಎಂಥ ಸಂದರ್ಭದಲ್ಲೂ ಬಲಿಯಾದ ಅಂದರೆ ಕಪ್ಪರ ಪಡಿಯವ್ವ ಎಂಬ ದೈವೀಶಕ್ತಿಯ ಸಾನಿಧ್ಯ ದಲ್ಲೂ ಭೂದೇವತೆಯ ಮೇಲೆ ಕೂತು ಊಟಮಾಡುವ ಸಂದರ್ಭದಲ್ಲಿ ದುರಂತವ್ಯಕ್ತಿಯಾಗಿ ಸಾವಿಗೀಡಾಗುತ್ತಾನೆ. ತಾನು ನಂಬಿದ ಮೂವರ ತಾಯಂದಿರು ಅಂದರೆ ಕಪ್ಪರಪಡಿಯವ್ವ ದೇವಿ, ಭೂದೇವತೆ, ಅನ್ನದಾತೆ. ಇಲ್ಲಿ ಅನ್ನ ಅಂದ್ರೆನೇ ಸಮೃದ್ದಿಯ ಸಂಕೇತ. ಇಂಥ ಸನ್ನಿವೇಶದಲ್ಲಿ ರಕ್ಷಣೆಗೆ ಯಾರು ಬರಲಿಲ್ಲ. ಕಾರಣ ಸಿಂದೂರ ಲಕ್ಷ್ಮಣನನ್ನು ಮೂವರು ತಾಯಂದಿರು ನಮ್ಮ ನಾಡಿನ ಗಡಿಯಾಚೆ ಸಾಯುವುದಕ್ಕಿಂತ ನಮ್ಮ ಮಡಿಲಲ್ಲಿ ಸಾಯುವುದು ಸೂಕ್ತವೆಂದು ಬಾವಿಸಿರಬಹುದು. ನಿಶ್ಯಸ್ತ್ರದಾರಿಯಾದ ಲಕ್ಷ್ಮಣನನ್ನು ಮೂವರು ತಾಯಂ ದಿರು ತಾಯಿಯ ಆದರ್ಶ ಪರಿಕಲ್ಪನೆಯನ್ನು ಪ್ರತಿಬಿಂಬಿಸುವಂತ ಸಂದರ್ಭದಲ್ಲಿ ತಾಯಿಯ ಸಂಬಂಧಗಳು ಸಹ ನಿಶ್ಕ್ರಿಯತೆ ಪಡೆದುಕೊಂಡವು. ವೀರ, ಧೀರ, ಶೂರ ಹಾಗೂ ದಾನವಂತ ಲಕ್ಷ್ಮಣನು ದುರಂತನಾಯಕನಾಗಿ ಸಾವನ್ನಪ್ಪುತ್ತಾನೆ. ಹೀಗೆ ಲಕ್ಷ್ಮಣನು ದುರಂತ ಮರಣ ಹೊಂದುವ ಮೂಲಕ ದೇಶಪ್ರೇಮಿಗಳಿಗೊಂದು ಸ್ಪೂರ್ತಿಯಾದ, ಸಮಾನತೆಯ ಹಂಬಲ ಗಳಿಗೆ ಆದರ್ಶವಾದ. ಉತ್ತರ ಕರ್ನಾಟಕದಲ್ಲಿ ಇನ್ನೂ ಬದುಕಿರುವ ಹಲವು ಹಿರಿಯರ ಸ್ಮೃತಿಗಳಲ್ಲಿ ಒಂದು ವೀರಗಾಥೆಯಾಗಿ ಹಸಿಹಸಿಯಾಗಿದ್ದಾನೆ.

**ಗ್ರಂಥಗಳು**


೧. ಸೈದಾಪುರ ವಾಯ್.ಎಫ್. ಉತ್ತರಕರ್ನಾಟಕದ ಜನಪದ ವೀರಗೀತೆಗಳು, ಸೃಜನಶೀಲ ಪ್ರಕಾಶನ, ಹಾಸನ, ೨೦೦೩.

೨. ನದಾಫ್ ಎಫ್.ಟಿ. ಶೂರ ಸಿಂಧೂರ ಲಕ್ಷ್ಮಣ, ಎ.ಎಮ್.ಕರಡಿ, ಅಂಡ್ ಸನ್ಸ್, ಹುಬ್ಬಳ್ಳಿ, ೧೯೮೮.

೩. ಮುದ್ದೇಬಿಹಾಳ ಆರ್.ಸಿ. ಸಿಂಧೂರಲಕ್ಷ್ಮಣ ಮಹಾಕಾವ್ಯ, ರಸಬಳ್ಳಿ ಪ್ರಕಾಶನ, ಶರಣನಗರ, ಬಿಜಾಪುರ, ೧೯೯೩.

೪. ಪ್ರೇಮ ಕುಮಾರ ಕೆ.ಷೇಕ್ಸ್‌ಪಿಯರ್‌ನ ದುರಂತ ನಾಟಕಗಳು ಕನ್ನಡಾನುವಾದಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಮಹಾಪ್ರಬಂಧ ಅಪ್ರಕಟಿತ, ೨೦೦೩.

೫. ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ.


* * *

**ಹಲಗಲಿ ಬೇಡರು**

**೯ನೇ ನುಡಿ**

ಕತ್ತಿ ಕುದರಿ ಮುತ್ತು ಮಾಣಿಕಾ ಯಾವದು ಬಿಡಲಿಲ್ಲಾ
ಬೆಳ್ಳಿ ಬಂಗಾರಾ ಹರಳಿನ್-ಉಂಗರಾ ಹೊನ್ನ್-ಉಂಗರ ಗೋಲಾ

ಸರಗಿ ಸರ್ದಳಿ ಬುಗುಡಿ ಬಾವಲಿ ಬಿಡಲಿಲ್ಲಾ
ಕಡಗ ಕಂಕಣಾ ನಡುವಿನ-ಡಾಬಾ ನಡಕಟ್ಟು ರುಮಾಲಾ

ಕುಬಶಾ ಶೀರಿ ಹಪ್ಪೊ ಶಾಂಡಿಗಿ ಕುರ್ಚಿಗಿ ಕುಡಗೋಲಾ
ಕೊಡಲಿ ಕೋಟಿ ಕುಡ-ಕಬ್ಬಿಣಾ ಮಸರು ಬೆಣ್ಣೆ ಹಾಲಾ

ಉಪ್ಪ ಯೆಣ್ಣಿ ಅರಿಶಿಣ ಜೀರಿಗಿ ಅಕ್ಕಿ ಸಕ್ಕರಿ ಬೆಲ್ಲಾ
ಗಂಗಳ ಚರಗಿ ಮಂಗಳ-ಸೂತ್ರಾ ತಕೊಂಡ ಹೋದರ ಬಿಸು-ಕಲ್ಲಾ ||ಇಳವರ||

## ೪೨. ಕಪ್ಪರ ಪಡಿಯವ್ವ

ಕಪ್ಪರ ಪಡಿಯವ್ವ ಪ್ರಧಾನವಾಗಿ ಒಂದು ಜಾನಪದ ದೇವತೆ. ಇದು ಸಾಂಸ್ಕೃತಿಕ ವಾಗಿಯೂ ತನ್ನದೇ ಆದ ಅನನ್ಯತೆಯನ್ನು ಪಡೆದಿದೆ. ದುರ್ಬಲರ ಪರವಾದ ಸಿಂಧೂರ ಲಕ್ಷ್ಮಣ ತನ್ನ ಸಂಘರ್ಷದ ಕೊನೆಯ ದಿನಗಳ ಬಹುಪಾಲನ್ನು ಕಳೆದದ್ದು ಕಪ್ಪರ ಪಡಿಯವ್ವನ ಸುತ್ತಮುತ್ತಲು. ಪಡಿಯವ್ವ ಇತಿಹಾಸದಲ್ಲಿ ದಾಖಲಾಗುವದೂ ಸಿಂಧೂರ ಲಕ್ಷ್ಮಣನ ಕಾರಣವಾಗಿಯೇ.

ಪಡಿಯವ್ವನ ಸುತ್ತಲಿನ ಭೌಗೋಳಿಕ ಪರಿಸರ ಲಕ್ಷ್ಮಣನಿಗೆ ರಕ್ಷಣೆಯನ್ನೊದಗಿಸಿದರೆ, ಪಡಿಯವ್ವ ಅವನಿಗೆ ಮಾನಸಿಕ ಸ್ಥೈರ್ಯ ತುಂಬಿದ ಶಕ್ತಿದೇವತೆ. ಕಪ್ಪರ ಪಡಿಯವ್ವನಿಗೆ ಬರುವುದು ಭಕ್ತ ಸಮೂಹವಾದರೂ ಐತಿಹಾಸಿಕ ವ್ಯಕ್ತಿಯಾದ ಸಿಂಧೂರ ಲಕ್ಷ್ಮಣನನ್ನು ಅಲ್ಲಿಗೆ ಬಂದವರಾರೂ ನೆನಿಸದೇ ಹೋಗಲಾಗುವುದಿಲ್ಲ. ಅಂಥ ಒಂದು ಅವಿನಾಭಾವ ಸಂಬಂಧ ಕಪ್ಪರ ಪಡಿಯವ್ವ ಮತ್ತು ಲಕ್ಷ್ಮಣನಿಗೆ.

ಕಪ್ಪರ ಪಡಿಯವ್ವ ನಾಗರಾಳ ಮತ್ತು ಸಿದ್ದಾಪುರ ನಡುವಿನ ಸೀಮೆಗೆ ಸೇರಿದ ಅರಣ್ಯ ಪ್ರದೇಶದಲ್ಲಿರುವ ದೇವತೆ. ದೇವಿಯ ಹೆಸರು ಪಡಿಯವ್ವ, ಕಪ್ಪರ ಎನ್ನುವದು ವಿಶೇಷಣ. ಪಡಿಯವ್ವನಿಗಿಂತ ಮುಂಚೆ ಈ ಪ್ರದೇಶವನ್ನು ಲಕ್ಷ್ಯದಲ್ಲಿರಿಸಿಕೊಂಡು 'ಕಪ್ಪರ' ಎನ್ನುವ ಪದವನ್ನಿಟ್ಟುಕೊಂಡು ಹೊರಟಾಗ 'ಕಪ್ಪುರ' ಎನ್ನುವ ಪದಕ್ಕೆ ಒಂದು ಜಾತಿಯ ಗಿಡ ಎಂಬರ್ಥ ನಿಘಂಟುವಿನಲ್ಲಿದೆ. ಇದನ್ನಾಧರಿಸಿ ನೋಡಿದಾಗ 'ಕಪ್ಪುರ' ಎನ್ನುವದು 'Larency' ಎಂಬ ಜಾತಿಯ, Cinnamum campher ಎಂಬವೈಜ್ಞಾನಿಕ ಹೆಸರುಳ್ಳ ಗಿಡ, ಇದೊಂದು ಔಷಧೀಯ ಗುಣವುಳ್ಳ ವೃಕ್ಷ ಎಂಬ ಮಾಹಿತಿ ದೊರೆಯುತ್ತದೆ. ಇದನ್ನನುಲಕ್ಷಿಸಿ ನೋಡಿದಾಗ ಒಂದು ಕಾಲಕ್ಕೆ ಅರಣ್ಯ ದಟ್ಟವಾಗಿದ್ದ ಕಾಲದಲ್ಲಿ ಪಡಿಯಮ್ಮನ ಆಸುಪಾಸಿ ನಲ್ಲಿ ಈ ಕಪ್ಪುರ ಗಿಡಗಳು ಹೇರಳವಾಗಿರಬಹುದು ಅಥವಾ ಆ ಪ್ರದೇಶದಲ್ಲಿ ವಿಶಿಷ್ಟವಾಗಿ ಒಂದೇ ಒಂದು ಕಪ್ಪುರ ಗಿಡ ಇದ್ದಿರಲೂಬಹುದು. ಹೀಗಾಗಿ ಅರಣ್ಯದಲ್ಲಿ ಪಡಿಯವ್ವನಿರುವ ಸ್ಥಾನವನ್ನು Signify ಮಾಡಿಕೊಳ್ಳುವುದಕ್ಕೋಸ್ಕರ ಈ ಪಡಿಯವ್ವನನ್ನು 'ಕಪ್ಪುರ ಪಡಿಯವ್ವ' ಎಂದು ಗುರುತಿಸಿಕೊಂಡಿದ್ದು, ಕಾಲಾನಂತರದಲ್ಲಿ ಅರಣ್ಯವು ನಾಶವಾಗಿ ಕಪ್ಪುರ ಗಿಡಗಳೂ ಕಾಣದಂತಾದರೂ ರೂಢಿ ಬಲದಿಂದ ಕಪ್ಪುರ < ಕಪ್ಪರವಾಗಿದೆ. ಇನ್ನು ಪಡಿಯವ್ವ ಳಾಗಲು ಕಾರಣ ಇಲ್ಲಿಯ ದೇವಿಗೆ ಅರಣ್ಯ ಪ್ರದೇಶದಲ್ಲಿನ ಹಾಸು 'ಪಡಿ'ಯಲ್ಲಿಯೇ ಮೂರ್ತರೂಪ ಕೊಟ್ಟಿದ್ದರಿಂದ ಪಡಿಯವ್ವಳಾಗಿದ್ದಾಳೆ. ಹೀಗೆ ವಿಶೇಷಣ, ನಾಮಪದ ಗಳೆರಡೂ ಸೇರಿ ಜನ ಮಾನಸದಲ್ಲಿ ಒಂದು ಶಕ್ತಿ ಸ್ವರೂಪವನ್ನು ಪಡೆದಿದೆ.

ಸ್ಥಳೀಯರು ಹೇಳುವ ಐತಿಹ್ಯದ ಪ್ರಕಾರ; ಇಲ್ಲಿರುವ ಈ ಪಡಿಯವ್ವ ಮೂಲತಃ ನಾಗರಾಳದವಳಲ್ಲ; ಗೋಕಾಕ ಹತ್ತಿರದ ಗೂಗಿಕೊಳ್ಳದಿಂದ ಬಂದ ಲಕ್ಷ್ಮಿದೇವಿ.

ಗೂಗಿ ಕೊಳ್ಳದಲ್ಲಿದ್ದ ಯತಿವರೇಣ್ಯರಾದ ದಿಗಂಬರೇಶ್ವರ ಸ್ವಾಮಿಗಳು ದೇಶ ಸಂಚಾರ ಕ್ಕಾಗಿ ಹೊರಟಾಗಿ ಗೂಗಿಕೊಳ್ಳದ ದಿಗಂಬರೇಶ್ವರ ಮಠದ ಹತ್ತಿರದಲ್ಲಿಯೇ ಇದ್ದ ಲಕ್ಷ್ಮಿ ದೇವಿಯೂ ಇವರೊಂದಿಗೆ ಹೊರಡಲು ಹಟ ಹಿಡಿಯುತ್ತಾಳೆ. ''ನೀ ಎಲ್ಲಿ ಕೂಡಸ್ತಿಯೋ ಅಲ್ಲಿ ಕೂಡ್ತಿನಿ'' ಎಂದು ಕಾಡಿ, ಬೇಡಿ ಸ್ವಾಮಿಗಳೊಂದಿಗೆ ಅವಳೂ ಹೊರಡುತ್ತಾಳೆ. ಹೀಗೆ ಅವರು ಸಂಚಾರ ಕೈಗೊಂಡು ನೆಲೆನಿಂತ ಕಡೆಗಳಲೆಲ್ಲ ದಿಗಂಬರ ಮಠಗಳಿವೆ. ಉದಾ. ಕುಚನೂರು, ಮರೇಗುದ್ದಿ, ಸಿದ್ದಾಪುರ ಇಲ್ಲೆಲ್ಲ ಲಕ್ಷ್ಮೀದೇವಿಯ ಗುಡಿಗಳೂ ಇವೆ. ಹೀಗೆ ದಿಗಂಬರ ಸ್ವಾಮಿಗಳು ಸಂಚಾರ ಕೈಗೊಂಡು ನಾಗರಾಳಕ್ಕೆ ಬಂದ ಸ್ವಾಮಿಗಳು ಗುಡ್ಡದ ಮೇಲೆ ದಿನವೂ ತಪಸ್ಸಿಗೆ ಹೋಗುತ್ತಿರುತ್ತಾರೆ. ಹಾಗೆ ಒಂದು ದಿನ ಈಗ ಕಪ್ಪರ ಪಡಿಯವ್ವನಿರುವ ಜಾಗದಲ್ಲಿ ತಪಸ್ಸಿಗೆ ಕುಳಿತಾಗ ಅವರಿಗೆ ತಮ್ಮೊಂದಿಗೆ ಬಂದ ಲಕ್ಷ್ಮಿಗೆ ಇದೇ ಸರಿಯಾದ ಸ್ಥಾನವೆಂದು, ಗುಡ್ಡದ ಪಡಿಯಲ್ಲೇ ಇರುವುದರಿಂದ ಇವಳು ಪಡಿಯಮ್ಮ ಳಾಗಿ ಪ್ರಸಿದ್ದಿಯಾಗಲಿ ಎಂದರಂತೆ. ಇಷ್ಟು ಸ್ಥಳೀಯ ಜನಪದರು ಗೂಗಿಕೊಳ್ಳದಿಂದ ಬಂದ ಲಕ್ಷ್ಮಿ ನಾಗರಾಳಕ್ಕೆ ಬಂದು ಪಡಿಯಮ್ಮನಾಗಿ ನೆಲೆಗೊಂಡ ಬಗೆಯನ್ನು ಸ್ವಾರಸ್ಯಕರವಾಗಿ ಹೇಳುತ್ತಾರೆ.

ಜನಪದರು ಹೇಳುವ ಇದೇ ಕಥೆಯನ್ನು ಇನ್ನೊಂದು ನಿಟ್ಟಿನಿಂದಲೂ ನೋಡಬಹು ದೆಂದು ತೋರುತ್ತದೆ. ಸರ್ವಸಂಗ ಪರಿತ್ಯಾಗಿಯಾದ ಯೋಗಿಯೊಂದಿಗೆ ಅದೂ ಸಕಲ ಐಹಿಕ ಸಂಪತ್ತಿಗೂ ಸಂಕೇತ ರೂಪಿಯಾದ ಲಕ್ಷ್ಮಿ ಹೊರಡುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ದೇಶ ಸಂಚಾರಕ್ಕಾಗಿ ಬಂದ ದಿಗಂಬರೇಶ್ವರ ಸ್ವಾಮಿಗಳು ಭವ ಬಂಧನದಿಂದ ಪೂರ್ತಿಯಾಗಿ ಇನ್ನೂ ಮುಕ್ತರಾಗಿರಲಿಲ್ಲ ಎಂಬುದನ್ನು ಜನಪದರು ಒಪ್ಪಿಕೊಂಡ ಪರಿಯನ್ನು ಕೂಡ ಈ ಕಥೆ ಹೇಳುತ್ತಿದೆ ಎನ್ನಿಸುತ್ತದೆ.

ನಾಗರಾಳಕ್ಕೆ ಬಂದ ನಂತರದಲ್ಲಿಯೇ ಅವರಿಗೆ ನಿಜವಾದ ರೂಪದಲ್ಲಿ ಯೋಗಿತ್ವದ ಸಿದ್ದಿಯಾಗಿರಬೇಕು. ಅದಕ್ಕಾಗಿಯೇ ಮನಸ್ಸಿನ ವ್ಯಾಮೋಹಗಳಿಗೆಲ್ಲ ಒಂದು ಸಾಕಾರ ರೂಪ ಕೊಟ್ಟು, ಅದನ್ನು ತಮ್ಮಿಂದ ಸಾಧ್ಯವಾದಷ್ಟು ದೂರ ಗುಡ್ಡದಲ್ಲಿ ಸ್ಥಾನೀಕರಿಸಿರಬಹುದು ಎಂತಲೂ ಯೋಚಿಸಲು ಅನುವು ಮಾಡಿಕೊಡುತ್ತದೆ.

ಈ ಕಪ್ಪರ ಪಡಿಯವ್ವನಿಗೆ ಕೃಷ್ಣೆಯಿಂದ ಭೀಮೆಯವರೆಗೂ ಭಕ್ತರಿದ್ದಾರೆ. ಸಿಂಧೂರ ಲಕ್ಷ್ಮಣನಿಗೆ ಮುಂಚಿನಿಂದಲೂ ಪಡಿಯವ್ವನ ಕುರಿತಾಗಿ ಭಕ್ತಿ ಇತ್ತಾದರೂ ಈ ಎಲ್ಲ ಭಕ್ತರಂತೆ ಅವನು ಬರೀ ಭಕ್ತನಾಗಿ ಬಂದವನಲ್ಲ, ಆಳುವ ವರ್ಗದ ವಿರುದ್ಧ ಬಂಡೆದ್ದ ಸ್ವಾಭಿಮಾನಿ ವ್ಯಕ್ತಿಯಾಗಿ ಬಂದ.

ಸಿಂಧೂರ ಲಕ್ಷ್ಮಣ ಎಲ್ಲೂ ಬಹಳದಿನಗಳ ಕಾಲ ನೆಲೆಯೂರುವುದಿಲ್ಲವಾದರೂ ಕಪ್ಪರ ಪಡಿಯವ್ವನಿಗೆ ಮೇಲಿಂದ ಮೇಲೆ ಬರುತ್ತಿದ್ದನು. ಹೀಗೆ ಕಪ್ಪರ ಪಡಿಯವ್ವನೊಂದಿಗೆ ಒಂದು ಕಳ್ಳು ಬಳ್ಳಿಯ ಸಂಬಂಧ ಬೆಳೆಸಿಕೊಳ್ಳಲು ಕಾರಣ ಹಲವಾರು ೧. ಅವನಿಗೆ ಅದೊಂದು ಭಕ್ತಿಯ ನೆಲೆ. ೨. ಅಲ್ಲಿ ಅವನಿಗೊಂದು ತೆರನಾದ Secured Feeling ಇತ್ತು. ಕಾರಣ ಪಡಿಯವ್ವ ನಾಗರಾಳ ಸಿದ್ದಾಪುರಗಳಿಂದ ದೂರ ಗುಡ್ಡದಲ್ಲಿರುವ ದೇವತೆ, ಅದು ಅರಣ್ಯ ಪ್ರದೇಶವಾದ್ದರಿಂದ ನಿತ್ಯ ಜನಬಳಕೆ ಅಪರೂಪ. ನಾಗರಾಳ, ಸಿದ್ದಾಪುರ, ತೆಗ್ಗಿ, ಅರಕೇರಿ ಭಾಗದಲ್ಲಿ ಬೇಡ ಸಮುದಾಯದವರು ಹೆಚ್ಚಾಗಿರುವರು. ಹಾಗಾಗಿ ಆ ಪ್ರದೇಶದಲ್ಲಿ ಬೇಟೆಯಾಡುವವರ ಬಳಕೆಯೇ ಹೆಚ್ಚಾಗಿದ್ದು, ಲಕ್ಷ್ಮಣನಿರುವ ಸ್ಥಳಕ್ಕೆ ಬಂದರೂ, ತಮಗಾಗಿಯೇ ಹೋರಾಡುತ್ತಿರುವ ತಮ್ಮೊಬ್ಬ ಹುಡುಗನಿಗೆ ಸಹಕಾರಕೊಡುತ್ತಿದ್ದಿರಲೂ ಬಹುದು. ಈ ಪ್ರದೇಶದಲ್ಲಿ ಅವರಿಗೆ ಆಹಾರದ ಪೂರೈಕೆಗೆ ಸಮಸ್ಯೆ ಇರಲಿಲ್ಲ. ಬೇಕೆಂದಾಗ ಲೆಲ್ಲ ಬುತ್ತಿಯನ್ನು ತಂದುಕೊಡುತ್ತಿದ್ದ ರತ್ನವ್ವ, ತೆಗ್ಗಿಯ ವೆಂಕಪ್ಪ ಗೌಡರಂಥವರ ಆತ್ಮೀಯತೆ ಲಕ್ಷ್ಮಣನನ್ನು ಈ ಪ್ರದೇಶದ ಸುತ್ತಮುತ್ತ ಕಟ್ಟಿಹಾಕುತ್ತಿದ್ದವು.

ಸಿಂಧೂರ ಲಕ್ಷ್ಮಣನಿಗೆ ಅಧಿಕಾರ ಶಾಹಿಯ ವಿರುದ್ಧದ ಅವನ ಹೋರಾಟಕ್ಕೆ ಪೂರಕವಾದ ಅನೇಕ ಸಹಕಾರಗಳಿಗೆ ಕಪ್ಪರ ಪಡಿಯವ್ವ ಕೇಂದ್ರ ನೆಲೆಯಾಗಿದ್ದಳು.

ಹೀಗೆ ತನ್ನದಲ್ಲದ ಊರಿನಲ್ಲಿ ತನ್ನ ಹೋರಾಟಕ್ಕೆ ಸಿಕ್ಕುತ್ತಿರುವ ಸ್ಪಂದನೆಗೆ ಮೂಲ ರಕ್ಷಣಾ ಶಕ್ತಿ ಪಡಿಯವ್ವಳೇ ಎಂದು ನಂಬಿದವ ಲಕ್ಷ್ಮಣ. ಏಕೆಂದರೆ ಮನುಷ್ಯ ಯಾವತ್ತೂ ತೊಂದರೆಯಲ್ಲಿದ್ದಾಗ, ತನ್ನ ದಾರಿಗಳು ಸ್ಪಷ್ಟವಾಗಿರದಿದ್ದಾಗ ಮೊರೆ ಹೋಗುವದು ಕಾಣದ ಶಕ್ತಿಯೊಂದರ ಆಶ್ರಯಕ್ಕೆ. ಅವನಿಗೆ ಅಂಥ ಒಂದು ಅಭಯಾತ್ಮಕ ರಕ್ಷಣೆಯನ್ನು ನೀಡಿ ದವಳು ಕಪ್ಪರ ಪಡಿಯವ್ವಳಾದ್ದರಿಂದ ಸಿಂಧೂರ ಲಕ್ಷ್ಮಣನಿಗೆ ಅವಳೇ ಅಧಿದೈವ. ಕಾಯುವ ವಳೂ ಅವಳೇ ಕೊಲ್ಲುವವಳೂ ಅವಳೇ ಎಂದು ನಂಬಿದಂತೆ ಅವನು ಅತ್ಯಂತ ನಂಬಿದ ಕಪ್ಪರ ಪಡಿಯವ್ವನೆದುರಲ್ಲೇ ಅವನ ಹತ್ಯೆಯಾಗುತ್ತದೆ.

ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಕಂಠಿ ಹನುಮಂತರಾಯ, ಸಿದ್ಧಮಲ್ಲಪ್ಪ ಬಾಳಿಗಿಡದ, ಬಸವ್ವ ಎಣ್ಣಿ, ಪಡಿಯವ್ವ, ವಿರೂಪಾಕ್ಷ ಜತ್ತಿ, ಸರ್ವಮಂಗಳಾ ಕೆರೂರ ಇವರಿಗೆಲ್ಲ ಕೃತಜ್ಞತೆಗಳು.

* * *

ಬೇಡರು ಕರ್ನಾಟಕದಲ್ಲಿ ಹಿಂದೆ ರಾಜಕೀಯವಾಗಿ ಪ್ರತಿಷ್ಠೆ ಪಡೆದ ಶೂರ ಸಮಾಜ. ಇವರು ಸ್ವತಂತ್ರರಾಗಿ ಆಳಿದ ದಾಖಲೆಗಳಿವೆ.
ಸುರಪುರದ ಬೇಡರ ದೊರೆ ಪಿಡ್ಡನಾಯಕ ಔರಂಗಜೇಬನನ್ನು ಯಶಸ್ವಿಯಾಗಿ ಎದುರಿಸಿದ ಧೀರ.
**– ಡಾ. ಸೂರ್ಯನಾಥ ಕಾಮತ**

## ೪೪. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

ಭಾರತೀಯ ಸಮಾಜವು ವೈವಿಧ್ಯತೆಯಿಂದ ಕೂಡಿದ ಸಾಂಸ್ಕೃತಿಕ ಪರಂಪರೆಯ ಮೂಲಕ ಜಾಗತಿಕಮಟ್ಟದಲ್ಲಿ ತನ್ನದೇಯಾದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಇಂತಹ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ ನಮ್ಮ ಸಮಾಜದಲ್ಲಿ ಅನಾದಿಕಾಲದಿಂದಲೂ ರೂಢಿ ಯಲ್ಲಿರುವ ವರ್ಣವ್ಯವಸ್ಥೆಯಲ್ಲಿ ಸಿಲುಕಿಕೊಂಡು ಬಂದ ತಳಸಮುದಾಯಗಳು ಶೋಷಣೆಗೆ ಒಳಗಾಗಿದ್ದರೂ ಸಹ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಜೀವಂತ ಉಳಿಸಿಕೊಂಡು ಬಂದಿವೆ. ಜೊತೆಗೆ ತಮ್ಮ ಸ್ವಾಭಿಮಾನಕ್ಕಾಗಿ ದೇಶಾಭಿಮಾನಕ್ಕಾಗಿ ಹೋರಾಟ ಮಾಡಿವೆ. ಇಂತಹ ಹೋರಾಟವನ್ನು ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಇತಿಹಾಸದಲ್ಲಿ ಗುರುತಿಸದೇ ಹೋದದ್ದು ಇತಿಹಾಸದ ಕ್ರೂರ ವ್ಯಂಗ್ಯ ಎಂದು ಹೇಳಬಹುದು. ಆದರೆ ಇತ್ತೀಚಿನ ಕಾಲಘಟ್ಟದಲ್ಲಾದರೂ ಅಂತಹ ಕೊರತೆಯನ್ನು ಸರಿದೂಗಿಸುವ ಕೆಲಸ ನಡೆಯುತ್ತಿರುವುದು ಸಂತೋಷದ ಸಂಗತಿ. ಆ ದೆಸೆಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠವು ಬಾಗಲಕೋಟೆ ಜಿಲ್ಲೆ ನಾಗರಾಳ ಗ್ರಾಮದಲ್ಲಿ ನಡೆಸಿದ ವಿಚಾರ ಸಂಕಿರಣವನ್ನು ನಾನು ಕಂಡಂತೆ ನನ್ನ ಪ್ರತಿಕ್ರಿಯೆಯ ರೂಪದಲ್ಲಿ ಸಾದರಪಡಿಸುತ್ತೇನೆ. ವಿಚಾರಸಂಕಿರಣ ದಲ್ಲಿಯ ಗೋಷ್ಠಿಗಳ ವಿಷಯಾಂಶವನ್ನು ಚರ್ಚಿಸುವ ದುಸ್ಸಾಹಸಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ಅದು ಸೂಕ್ತವೂ ಅಲ್ಲ. ಆದ್ದರಿಂದ ವಿಚಾರಸಂಕಿರಣ ಸಾಗಿಬಂದ ಬಗೆ ಹಾಗೂ ಆ ಒಂದು ವಾಸ್ತವ ಂದರ್ಭದಲ್ಲಿ ಫಲಿತಗೊಂಡ ಕೆಲ ಅಂಶಗಳನ್ನು ನನಗೆ ತಿಳಿದಂತೆ ನನ್ನ ಇತಿಮಿತಿಗಳ ನಡುವೆ ಗುರುತಿಸಲು ಪ್ರಯತ್ನಿಸುತ್ತೇನೆ.

ಉದ್ಘಾಟನಾ ಸಮಾರಂಭದಲ್ಲಿಯ ಶಾಲಾಮಕ್ಕಳ ಪ್ರಾರ್ಥನೆ ಕಾರ್ಯಕ್ರಮ ನಿರೂಪಕರ ಚಾಕಚಕ್ಯತೆಗಳು ಆಕರ್ಷಣೀಯವಾಗಿದ್ದವು. ಅಧ್ಯಯನಪೀಠದ ಸಂಚಾಕರಾದ ಡಾ. ಮಂಜು ನಾಥ ಬೇವಿನಕಟ್ಟಿ ಅವರು ಪ್ರಾಸ್ತಾವಿಕ ಮಾತನಾಡಿ ಸಭಿಕರಿಗೆ ವಿಚಾರಸಂಕಿರಣದ ಉದ್ದೇಶ ಮತ್ತು ಅಗತ್ಯತೆ ಮನವರಿಕೆಯಾಗುವಂತಿತ್ತು. ಜ್ಯೋತಿ ಬೆಳಗಿಸುವ ಮೂಲಕ ವಿಚಾರ ಸಂಕಿರಣಕ್ಕೆ ಚಾಲನೆನೀಡಿದ ಮಾನ್ಯ

ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರು ವಿಶ್ವ ವಿದ್ಯಾಲಯದ ವಿಶಿಷ್ಟತೆ ಹಾಗೂ ವಿಚಾರಸಂಕಿರಣದ ಆಶಯಗಳನ್ನು ಕುರಿತು ಮಾಡನಾಡಿದ್ದು ವಿಶ್ವವಿದ್ಯಾಲಯವೇ ನಾಗರಾಳ ಗ್ರಾಮಕ್ಕೆ ಬಂದಿದೆ ಎಂಬುದನ್ನು ಸಭಿಕರಿಗೆ ಸ್ಪಷ್ಟಮಾಡು ವಂತಿತ್ತು. ಹೀಗೆ ಉದ್ಘಾಟನಾ ಸಮಾರಂಭವು ದಿಗಂಬರೇಶ್ವರ ಶ್ರೀಗಳ ಸಾನಿಧ್ಯದಲ್ಲಿ ಮಾಜಿ ಸಚಿವರ ಶಾಸಕರ ವಿವಿಧ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ ಪ್ರಾರಂಭಿಕ ಯಶಸ್ಸು ಕಂಡಿತು.

ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ ಕುರಿತು ನಡೆದ ಮೊದಲ ಗೋಷ್ಠಿ ಯಲ್ಲಿ ನಿಶ್ಯಸ್ತ್ರೀಕರಣ ಮತ್ತು ಭಾರತ ರಾಜಕೀಯ ಸ್ವಾತಂತ್ರ್ಯ ಕುರಿತು ಪ್ರಬಂಧ ಮಂಡನೆ ಯಾದವು. ಮಂಡನೆಕಾರರು ಪ್ರಾರಂಭದಲ್ಲಿ ಇಡೀ ಭಾರತದ ರಾಜಕೀಯ ಸ್ವಾತಂತ್ರ ಪರಿಚಯಿಸುವ ಪ್ರಯತ್ನ ಮಾಡಿದರು. ಕೊನೆಯಲ್ಲಿಯಾದರೂ ಹಲಗಲಿ ಬಂಡಾಯಕ್ಕೆ ಕೇಂದ್ರೀಕರಿಸಿದ್ದು ಯಥೋಚಿತವಾಗಿತ್ತು.

ಆಚರಣಾತ್ಮಕ ನೆಲೆಗಳ ಕುರಿತು ನಡೆದ ೩ನೇ ಗೋಷ್ಠಿಯಲ್ಲಿ ನಂಬಿಕೆ, ವಿಧಿ-ನಿಷೇಧ ಗಳು, ದೈವಗಳ ಲೋಕ, ಜಾತ್ರೆ, ಉತ್ಸವಗಳು, ಸಾಂಸ್ಕೃತಿಕ ವೀರರ ಕುರಿತು ಮಂಡನೆಯಾದ ಪ್ರಬಂಧಗಳು ನಮ್ಮ ಭವ್ಯಪರಂಪರೆಯ ವಿಶಿಷ್ಟತೆಯನ್ನು ಪುನರಾವಲೋಕನಗೊಳಿಸಿದವು. ಸಂಶೋಧನ ವಿದ್ಯಾರ್ಥಿಗಳ ಮತ್ತು ಸಭಿಕರ ಚರ್ಚೆಗಳು ಗೋಷ್ಠಿಗೆ ಮೆರಗು ನೀಡುತ್ತಿದ್ದವು.

ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳ ಕುರಿತು ನಡೆದ ೨ನೇ ಗೋಷ್ಠಿಯಲ್ಲಿ ಚಾರಿತ್ರಿಕನೆಲೆ, ಸಾಮಾಜಿಕ ಜೀವನ, ಜಾನಪದ ಸಾಹಿತ್ಯ ಹಾಗೂ ಕಲೆಗಳು ಮಹಿಳಾ ಸಂವೇದನೆ, ಲೋಕೋಪಯೋಗಿ ಕೊಡುಗೆಗಳು ಕುರಿತು ಪ್ರಬಂಧ ಮಂಡನೆಯಾಗಿದ್ದು ಜಿಲ್ಲೆಯ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳನ್ನು ಅನಾವರಣ ಗೊಳಿಸುವಂತಿದ್ದವು. ಅದರಲ್ಲಿಯ ಕೆಲ ಪ್ರಬಂಧಗಳು ಹಲಗಲಿ ಬಂಡಾಯ ಪ್ರಸ್ಥಾಪಿಸದೇ ಇರುವದು ಅದನ್ನು ಪ್ರತಿಕ್ರಿಯೆದಾರರು ಮತ್ತು ಸಭಿಕರು ಚರ್ಚೆಯಲ್ಲಿ ಗಮನಕ್ಕೆ ತಂದಿದ್ದು ಯಥೋಚಿತವಾಗಿತ್ತು. ಅಧ್ಯಕ್ಷತೆವಹಿಸಿದ ಕಂಠಿ ಹನುಮಂತರಾಯರ ಅನುಭವದ ನುಡಿಗಳು ಅರ್ಥಸದೃಶವಾಗಿದ್ದವು. ಆಧುನಿಕ ಜಗತ್ತು ಹಾಗೂ ತಳಸಮುದಾಯಗಳ ಕುರಿತು ನಡೆದ ೪ನೇ ವಿಶೇಷಗೋಷ್ಠಿಯಲ್ಲಿ ೧೪ ಪ್ರಬಂಧಗಳು ಮಂಡನೆಯಾದವು. ಪ್ರತಿಯೊಂದು ಪ್ರಬಂಧವು ಒಂದೊಂದು ಕವಲೊಡೆದು, ಜಾಗತೀಕರಣದಿಂದ ತಳಸಮುದಾಯಗಳ ಮೇಲೆ ಆದ ಪರಿಣಾಮವನ್ನು ಎಳೆಎಳೆಯಾಗಿ ಬಿಚ್ಚಿಟ್ಟವು. ಜೊತೆಗೆ ಗೋಷ್ಠಿ ಕೇವಲ ವಾಲ್ಮೀಕಿ ಸಮುದಾಯಕ್ಕೆ ಸೀಮಿತಗೊಳ್ಳದೆ ಸಮಾಜದ ಎಲ್ಲಾ ಸಮುದಾಯಗಳ ಕುರಿತು ಚಿಂತನೆ ಮಾಡಿದ್ದು ಸಮಯ ಪ್ರಜ್ಞೆಯನ್ನು ಸಾಕಾರಗೊಳಿಸಿದ್ದು ವಿಶೇಷವಾಗಿವೆ. ಬಹುತೇಕ ಎಲ್ಲ ಪ್ರಬಂಧಕಾರರು ಜಾಗತೀಕರಣವನ್ನು ವಿರೋಧಿಸಿದ್ದು ಎದ್ದು ಕಾಣುತ್ತಿತ್ತು. ಇದನ್ನು ಗಮನಿಸಿದ ಭಿಕರು ಪ್ರಶ್ನೆಗಳ ಸುರಿಮಳೆಗೈದು ಜಾಗತೀಕರಣ ಅಭಿವೃದ್ದಿಗೆ ಪೂರಕ ಎಂದು ಸಮರ್ಥಿಸಿದ್ದು ಚರ್ಚೆಯ ವಸ್ತು. ಕೊನೆಯಲ್ಲಿ ಪತ್ರಕರ್ತರಾದ ವೀರೇಂದ್ರಶೀಲವಂತರ ಅವರು ಚರ್ಚೆಯನ್ನು ಸಮನ್ವಯಗೊಳಿಸಿದ್ದು ಅರ್ಥಪೂರ್ಣವಾಗಿದೆ.

ಸಿಂಧೂರ ಲಕ್ಷ್ಮಣ ಹಾಗೂ ಸಂಘರ್ಷದ ಸಂಕಥನದ ೫ನೇಗೋಷ್ಠಿ ಪ್ರಾರಂಭವಾಗುವ ಮೊದಲು ಸಿಂಧೂರ ಲಕ್ಷ್ಮಣನ ಕೊಲೆಯಾದ ಸ್ಥಳ ಕಪ್ಪರಪಡಿಗೆ ಹೋಗುವ ಮೂಲಕ ಲಕ್ಷ್ಮಣನ ಕಾರ್ಯಕ್ಷೇತ್ರ, ಜೀವನವಿಧಾನ, ಕೊಲೆಯ ಸಂಚು ಕುರಿತು ಪೀಠದ ಸಂಚಾಲಕ ರಾದ ಡಾ. ಮಂಜುನಾಥ ಬೇವಿನಕಟ್ಟಿಯವರು, ಡಾ.ವೀರೇಶ ಬಡಿಗೇರ ಅವರು ಸಂಶೋಧನಾ ವಿದ್ಯಾರ್ಥಿಗಳಿಗೆ ವಿವರಿಸಿದ್ದು ಅವರನ್ನು ಗೋಷ್ಠಿಗೆ ಹುರಿದುಂಬಿಸಿವು. ಅದಕ್ಕೆ ಪೂರಕವಾಗಿ ಗೋಷ್ಠಿಯಲ್ಲಿ ತಳವಾರನಾಗಿ, ರೈತನಾಗಿ, ಹೋರಾಟಗಾರನಾಗಿ, ಸಾಹಸಿಯಾಗಿ ಸ್ವಾಭಿಮಾನಿಯಾಗಿ, ದುರಂತನಾಯಕನಾಗಿ, ವಿವಿಧಮುಖಗಳಲ್ಲಿ ಲಕ್ಷ್ಮಣನೇ ಅವತರಿಸಿ ಬಂದಿದ್ದಾನೆ ಎನ್ನುವ ರೀತಿಯಲ್ಲಿ ಮಂಡನೆಯಾದ ಪ್ರಬಂಧಗಳು ಸಭಿಕರನ್ನು ರೋಮಾಂಚನ ಗೊಳಿಸುವಂತಿದ್ದವು. ಸಿಂಧೂರಲಕ್ಷ್ಮಣ ಮಹಾಕಾವ್ಯದ ಸಂಪಾದಕರಾದ ಡಾ. ಆರ್.ಸಿ. ಮುದ್ದೇಬಿಹಾಳರ ಅದ್ಯಕ್ಷೀಯಭಾಷಣಗೋಷ್ಠಿಗೆ ವಿಶೇಷಕಳೆ.

ಕೊನೆಯಲ್ಲಿ ಶ್ರೀಗಳ ಸಾನಿಧ್ಯದಲ್ಲಿ ನಡೆದ ಸಭೆಯಲ್ಲಿ ಸಮಾರೋಪಭಾಷಣ ಮಾಡಿದ್ದು ಡಾ.ವೀರೇಶ ಬಡಿಗೇರ ಅವರು ಅಧ್ಯಕ್ಷೀಯ ಭಾಷಣ ಮಾಡಿದ ಡಾ.ಶ್ರೀರಾಮ ಇಟ್ಟಣ್ಣ ಅವರು ೩ ದಿನಗಳ ಗೋಷ್ಠಿಯಲ್ಲಿ ಫಲಿತಗೊಂಡ ಅಂಶಗಳ ಮೇಲೆ ಬೆಳಕು ಚೆಲ್ಲಿದರು. ವಿಚಾರಸಂಕಿರಣದ ಯಶಸ್ಸಿಗೆ ಸಹಾಯ ಸಹಕಾರ ನೀಡಿದ ಸರ್ವರನ್ನು ಸನ್ಮಾನಿಸಿ ಅವರ ಮನ ಗೆದ್ದಿರುವುದು ಸುವ್ಯವಸ್ಥಿತ ಸಂಘಟನೆಯ ಸಂಕೇತವಾಗಿತ್ತು.

ಹೀಗೆ ಪ್ರತಿದಿನವೂ ಗೋಷ್ಠಿ ಮುಗಿಯುತ್ತಿದ್ದಂತೆ ಶ್ರೀದಿಗಂಬರೇಶ್ವರ ಸ್ವಾಮೀಜಿಯ ಮಹಾಪ್ರಸಾದ ನಮ್ಮ ಉದರರಾಜನ ಹಸಿವನ್ನು ತಣಿಸದರೆ, ಜನಪದ ಕಲೆಗಳ ಪ್ರದರ್ಶನ ನಮ್ಮ ಮನತಣಿಸಲು ಸಜ್ಜಾಗಿದ್ದವು. ಕರಡಿಮಜಲು, ಲಾವಣಿ, ಜನಪದಗೀತೆ, ಸೋಬಾನ ಪದ ವೀರಗೀತೆ ಮುಂತಾದ ಕಲಾಕಾರರು ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದು ೩ ದಿನಗಳವರೆಗೆ ನಡೆದ ಈ ವಿಚಾರಸಂಕಿರಣದಲ್ಲಿ ಜಾತಿಮತ ಪಂಥವೆಂಬ ಭಿನ್ನತೆಯಿಲ್ಲದೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪಾಲ್ಗೊಂಡು ಜನರು ಕಾರ್ಯಕ್ರಮ ಯಶಸ್ವಿಗೊಳಿಸಿದ್ದನ್ನು ನೋಡಿದರೆ ವಿಚಾರಸಂಕಿರಣ ಕೇವಲ ವಿಶ್ವವಿದ್ಯಾಲಯಕ್ಕೆ ಅಥವಾ ವಾಲ್ಮೀಕಿ ಸಮುದಾಯಕ್ಕೆ ಸೀಮಿತವಲ್ಲ. ಅದು ಸಮಷ್ಠಿಸ್ವತ್ತು ಎಂಬುದನ್ನು ಸಾದರಪಡಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಹನಿಹನಿಕೂಡಿದರೆ ಹಳ್ಳ ತೆನಿತೆನಿ ಕೂಡಿದರೆ ರಾಶಿ ಎನ್ನುವಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಬಳಗ ಹಾಗೂ ನಾಗರಾಳ ದಿಬಂಗರೇಶ್ವರಮಠ ಬಾಗಲಕೋಟ ಜಿಲ್ಲೆಯ ಜನರ ಅರ್ಥಪೂರ್ಣ ಪಾಲ್ಗೊಳ್ಳುವಿಕೆಯು ತೆನಿತೆನಿಯ ರೀತಿಯಲ್ಲಿ ಸಂಗ್ರಹಗೊಂಡು ವಿಚಾರಸಂಕಿರಣದಲ್ಲಿ ಜ್ಞಾನರಾಶಿಯನ್ನು ಮಾಡಿ ಅದನ್ನು ಸಂಶೋಧಕರ ಸಭಿಕರ ಪಾಲ್ಗೊಂಡ ಸಮಸ್ತ ಜನರ ಮನದಲ್ಲಿ ಬಿತ್ತುವ ಮೂಲಕ ಸಾಂಸ್ಕೃತಿಕ ಬೆಳೆಯನ್ನು ಬೆಳೆಯುವಲ್ಲಿ ವಿಚಾರಸಂಕಿರಣ ಯಶಸ್ವಿಯಾಗಿದೆ ಎಂದು ಹೇಳಬಹುದು.

* * *

## ೪೫. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

ಹದಿನೆಂಟನೇ ಶತಮಾನದ ಉತ್ತರಾರ್ಧ ಮತ್ತು ಹತ್ತೊಂಬತ್ತನೇ ಶತಮಾನದ ಆರಂಭದ ಕಾಲಘಟ್ಟದಲ್ಲಿ ಉಂಟಾದ ಬ್ರಿಟೀಷರ ವಸಾಹತುಶಾಹಿಯ ವಿರುದ್ಧದ ಪ್ರತಿಭಟನೆ ಗಳ ಹಿನ್ನೆಲೆಯಲ್ಲಿ ದೇಶಾದ್ಯಂತ ಬದಲಾವಣೆಯ ಗಾಳಿ ಬೀಸತೊಡಗಿತು. ಅವರು ಜಾರಿಗೆ ತಂದ ಅನೇಕ ನಿಷೇಧಗಳ ಮಧ್ಯ ಸಿಲುಕಿಕೊಂಡಿದ್ದು ಆಯುಧಗಳ ನಿಷೇಧವು ಒಂದು. ಇದರಿಂದ ಸ್ವಾತಂತ್ರ್ಯ ಕಿಚ್ಚು ದೇಶಾದ್ಯಂತ ಹಬ್ಬಲು ಕಾರಣವಾಯಿತು. ಹಾಗೆಯೇ ಒಂದು ಸಮುದಾಯಕ್ಕೆ ನಾಯಕತ್ವದ ಅಸ್ತಿತ್ವವು ದೊರಕಿತೆಂದೇ ಹೇಳಬಹುದು. ಈ ವಿಷಯದ ಹಿನ್ನಲೆಯಲ್ಲಿ ನಾವು ಒಂದು ನಾಡಿನ ಸಮುದಾಯದ ಅಧ್ಯಯನವನ್ನು ನೋಡುವಾಗ ಆ ಸಮುದಾಯದಲ್ಲಿನ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ನೋಡುವುದು ಸೂಕ್ತ ಮತ್ತು ಸಮಂಜಸವಾದದ್ದು ಕೂಡ.

ಈ ದೃಷ್ಟಿಯಲ್ಲಿ 'ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ' ಕುರಿತಾದ ವಿಷಯವನ್ನು ಇಟ್ಟುಕೊಂಡು ಸಾಂದರ್ಭಿಕ ನೆಲೆಯಲ್ಲಿ ನಿಂತು ನೋಡುವುದಿದೆಯಲ್ಲ, ಅದು ಹಲಗಲಿಯ ಸುತ್ತಲಿನ ಪ್ರದೇಶ ಮತ್ತು ಆ ಬಂಡಾಯದಲ್ಲಿ ತೊಡಗಿದ ಹಲಗಲಿಯ ಬೇಡರ ವಾಸ್ತವ ಸ್ಥಿತಿ ಮತ್ತು ಅವರ ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು ಸಾಧ್ಯವಾಗಿದೆ. ಇದರ ವಿಷಯವಾಗಿ ನಾಡಿನ ಹೆಮ್ಮೆಯಾಗಿರುವ ನಮ್ಮ 'ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠ ಹಮ್ಮಿಕೊಂಡ ವಿಚಾರ ಸಂಕಿರಣ ಮಹತ್ವದ ಅಂಶವಾಗಿದೆ.

'ನಾಗರಾಳ' ಎಂಬುದು 'ಬೇಡ'ಸಮುದಾಯವು ತಮ್ಮ ಕಾರ್ಯಸ್ಥಾನವನ್ನಾಗಿ ಸ್ವಾತಂತ್ರ್ಯ ಪೂರ್ವದಿಂದಲೇ ಹೊಂದಿಕೊಂಡಿದ್ದು ಇತಿಹಾಸ ಪ್ರಸಿದ್ಧ ಕಾರಣ ಆ ಗ್ರಾಮದ ದಕ್ಷಿಣದಲ್ಲಿನ ಕಾಡು ಅವರ ಕಾರ್ಯಸ್ಥಾನವಾಗಿತ್ತು. ಅಲ್ಲಿ ಸಿಂಧೂರ ಲಕ್ಷ್ಮಣ ಪ್ರಮುಖುವಾಗಿ ಆ ಸಮು ದಾಯದ ಸಾಂಸ್ಕೃತಿಕ ನಾಯಕನಾಗಿ ಗೋಚರಿಸುತ್ತಾನೆ. ಬ್ರಿಟೀಷರು ಹೇರಿದ ನಿಷೇಧದಲ್ಲಿ 'ನಿಶ್ಯಸ್ತ್ರೀಕರಣ'ವು ಪ್ರಮುಖವಾದದ್ದು. "ಬೇಡ

ಸಮುದಾಯದವರಿಗೆ ಶಸ್ತ್ರಗಳೇ ಆಧಾರ ಅದರಿಂದಲೇ ಅವರ ಜೀವನ, ಹೀಗಾಗಿ ಆ ನಿಶ್ಯಸ್ತ್ರೀಕರಣವು ಬೇಡ ಜನಾಂಗದ ಚರಿತ್ರೆಯನ್ನೇ ಬದಲಾಯಿಸಿತು ಎಂದು ಹೇಳಬಹುದು. ಸಮುದಾಯದ ಚರಿತ್ರೆಯಲ್ಲಿ 'ಸಿಂಧೂರ ಲಕ್ಷ್ಮಣ' ಸಾಂಸ್ಕೃತಿಕ ನಾಯಕನಾಗಿ ಗೋಚರಿಸುತ್ತಾನೆ. ಬ್ರಿಟೀಷರು ಹೇರಿದ ನಿಷೇಧದಲ್ಲಿ ನಿಶ್ಯಸ್ತ್ರೀ ಕರಣ'ವು ಪ್ರಮುಖವಾದದ್ದು. "ಬೇಡ ಸಮುದಾಯದವರಿಗೆ ಶಸ್ತ್ರಗಳೇ ಆಧಾರ. ಅದರಿಂದಲೇ ಅವರ ಜೀವನ, ಹೀಗಾಗಿ ಆ ನಿಶ್ಯಸ್ತ್ರೀಕರಣವು ಬೇಡ ಸಮುದಾಯದ ಚರಿತ್ರೆಯನ್ನೇ ಬದಲಾಯಿಸಿತು ಎಂದು ಹೇಳಬಹುದು. ನಾಡಿನ ಚರಿತ್ರೆಯಲ್ಲಿ "ಸಿಂಧೂರು ಲಕ್ಷ್ಮಣ" ಸಾಂಸ್ಕೃತಿಕ ನಾಯಕನಾಗಿ ಒಂದು ಸಮುದಾಯವನ್ನು ಕಟ್ಟಲು ಸಾಧ್ಯವಾಯಿತು ಮತ್ತು ಅದು ಚರಿತ್ರೆಯ ಪುಟಗಳಲ್ಲಿ ಅಜರಾಮರವಾಯಿತು.

ಮೊದಲ ಗೋಷ್ಠಿಯಲ್ಲಿ "ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ" ಎಂಬ ಪ್ರಮುಖ ಅಂಶವನ್ನು ಎತ್ತಿಕೊಂಡು ಆ ಬಂಡಾಯಕ್ಕೆ ಕಾರಣವಾದ ಅಂಶಗಳು ನಂತರದ ದಿನಗಳಲ್ಲಿ ಜಾತಿ ಮತ್ತು ವರ್ಗದ ನೆಲೆಗಳನ್ನು ಗಮನದಲ್ಲಿರಿಸಿಕೊಂಡು ಗೋಷ್ಠಿಯಲ್ಲಿ "ನಿಶ್ಯಸ್ತ್ರೀಕರಣ ಕಾಯಿದೆ"ಯಿಂದ ವಾಲ್ಮೀಕಿ ಸಮುದಾಯದ ಮೇಲೆ ಉಂಟಾದ ಪರಿಣಾಮ ಗಳನ್ನು ಮತ್ತು ಸ್ಥಿತ್ಯಂತರಗಳನ್ನು ಗಮನಿಸುತ್ತಾ ಆ ಸಮುದಾಯದ ಮೇಲೆ ಸಾಮ್ರಾಜ್ಯಶಾಹಿ ಗಳು ಉಂಟು ಮಾಡಿದ ಪರಿಣಾಮಗಳನ್ನು ಹಾಗೂ ಅಂದಿನ ಸಂದರ್ಭದಲ್ಲಿ ಸ್ಥಳೀಯ ಯುದ್ಧಾಸ್ತ್ರಗಳ ಆಳ್ವಿಕೆಯೇನು ಎಂಬುದನ್ನು ತಿಳಿಯದೆ ಮಾಡಿದ ಕಾಯಿದೆಯಿಂದ ಹಲಗಲಿಯ ಬಂಡಾಯ ಉಂಟಾಯಿತು ಎಂಬ ಅಭಿಪ್ರಾಯ ವ್ಯಕ್ತಗೊಂಡವು.

ನಾವು ಗಮನಿಸುವ ಅಂಶವೇನೆಂದರೆ, ಒಬ್ಬ ಮನುಷ್ಯನನ್ನು ನಿಶ್ಯಕ್ತಗೊಳಿಸಿ ಅವನ ಮೇ ದಾಳಿ ಮಾಡುವುದರಿಂದ ಎಂಥ ಷಂಡನು ಬಡಿದಾಡುತ್ತಾನೆ. ಅಂತಹದರಲ್ಲಿ ಗಂಡು ಮೆಟ್ಟಿನ ನಾಡಾದ ಈ ಭಾಗದ ಜನ, ಮತ್ತು ಅದೆಷ್ಟೋ ಕ್ರೂರ ಪ್ರಾಣಿಗಳನ್ನು ಬೇಟೆಯಾಡು ವುದಕ್ಕೆ ತಮ್ಮ ಜೀವನದ ಕಾಯಕ ಮಾಡಿಕೊಂಡಂತವರನ್ನೇ ಹಿಡಿದು ಕಟ್ಟಿಹಾಕುವ ತಂತ್ರವಿದೆಯಲ್ಲ ಅದು ಸರಿಯಾದುದಲ್ಲ ಎಂಬುದಕ್ಕೆ ಈ ಹಲಗಲಿಯ ಬಂಡಾಯ ಸಾಕ್ಷಿ ಯಾಗಿ ನಿಲ್ಲುತ್ತದೆ.

ಎರಡನೇ ಗೋಷ್ಠಿಯಲ್ಲಿ "ಬಾಗಲಕೋಟೆ ಪರಿಸರದ "ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳು" ಪ್ರಬಂಧ ಮಂಡನೆಯಲ್ಲಿ ಪ್ರಮುಖ ಅಂಶಗಳ ವಿಚಾರ ಮಂಡನೆಗಳಾದವು. ನಾವು ವಾಸಿಸುವ ಸುತ್ತಲಿನ ಪ್ರದೇಶದ ಚಾರಿತ್ರಿಕ ನೆಲೆಯನ್ನು ತಿಳಿಯಲು ಹಾಗೂ ಆರ್ಥಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಆ ಪ್ರದೇಶದ ಒಂದು ಸಮುದಾಯ ಸಾಧಿಸಿದ ಅಭಿವೃದ್ಧಿಯನ್ನರಿಯಲು ಸೂಕ್ತ ವೇದಿಕೆಯಾಗಿದ್ದು ಇದು ಅಂದು ಮಂಡನೆಯಾದ ಎಲ್ಲ ವಿಷಯಗಳು ಹಿಂದೆ ಕೇವಲ ಕಾಡೇ ತಮ್ಮ ಮನೆ ಮತ್ತು ಜೀವನದ ವಾಸ್ತವ ನೆಲೆ ಎಂದು ತಿಳಿದಿದ್ದ ಸಮುದಾಯ ಇವತ್ತು ಬೆಳೆದು ನಿಂತ ಪರಿಯನ್ನು ವಿವರಿಸ ಲಾಯಿತು.

"ಬೇಡ ಸಮುದಾಯದ ಆಚರಣಾತ್ಮಕ ನೆಲೆಗಳು" ಎಂಬ ೩ನೇ ಗೋಷ್ಠಿಯಲ್ಲಿ ವ್ಯಕ್ತ ವಾದ ಅವರ ನಂಬಿಕೆ, ವಿಧಿ-ವಿಧಾನಗಳನ್ನು ಪುರೋಹಿತಶಾಹಿ ವರ್ಗ ತನ್ನ ಅಡಿಯಲ್ಲಿಟ್ಟು ಕೊಳ್ಳುವ ಮೂಲಕ ಕೆಳಸಮುದಾಯಗಳನ್ನು ಹತ್ತಿಕ್ಕುವ ಪ್ರಯತ್ನ ಯಾವಾಗಿನಿಂದಲೂ ನಡೆದುಬರುತ್ತಿದೆ ಎಂಬ ವಿಚಾರಗಳು ಸಂಕಿರಣದ ವೇದಿಕೆಯಲ್ಲಿ ವ್ಯಕ್ತವಾದವು.

"ಆಧುನಿಕ ಜಗತ್ತು ಹಾಗೂ ತಳಸಮುದಾಯಗಳು" ಎಂಬ ೪ನೇ ಗೋಷ್ಠಿಯಲ್ಲಿ ನಮ್ಮ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳು ಮಂಡಿಸಿದ ಪ್ರಬಂಧಗಳು ವೇದಿಕೆಗೆ ಸೂಕ್ತವಾಗಿದ್ದವು. ಜಾಗತೀಕರಣವೆಂಬುದು ಪ್ರಾರಂಭದಿಂದಲೂ ತನ್ನ ಹಿಡಿತವನ್ನು ಸಾಧಿಸುತ್ತಾ ಬಂದದ್ದು. ಅದು ಯಾವುದೇ ಸಮುದಾಯವನ್ನು ಬಿಟ್ಟಿಲ್ಲವೆಂಬುದು ಈ ವಿಷಯವಾಗಿ ಮಂಡಿಸುವ ಪ್ರಬಂಧಗಳು ವಾಸ್ತವ ನೆಲೆಯಲ್ಲಿ ಅವರ ತಳಸಮುದಾಯವನ್ನು ಜಾಗತೀಕರಣ ಹಿಡಿದಿಟ್ಟುಕೊಂಡು, ಸಮುದಾಯದಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು, ಅದರ ಭೀಕರ ಪರಿಣಾಮಗಳ ಬಗೆಗೆ ನಡೆದ ಚರ್ಚೆಯಿಂದ, ಬಹುಶಃ ಹಳ್ಳಿಗಾಡಿನ ಜನತೆಯು ಇವತ್ತಿನ ದಿನಗಳಲ್ಲಿ ಈ ಜಾಗತೀಕರಣವನ್ನು ಅರಿತು ಅದರಿಂದಾದ ಪರಿಣಾಮಗಳನ್ನು ತಿಳಿಯಲು ಉತ್ಸುಕರಾಗಿದ್ದಾರೆ ಎಂಬುದು, ಮತ್ತು ಇದು ಒಳ್ಳೆಯ ಬೆಳವಣಿಗೆಯು ಕೂಡ ಆಗಿದೆ ಎನ್ನುವಂತಹದ್ದು.

"ಸಿಂಧೂರ ಲಕ್ಷ್ಮಣ ಹಾಗೂ ಸಂಘರ್ಷದ ಸಂಕಥನ" ಎಂಬ ಐದನೆ ಮತ್ತು ಕೊನೆಯ ಗೋಷ್ಠಿಯಲ್ಲಿ ವ್ಯಕ್ತವಾದ ವಾಲ್ಮೀಕಿ ಸಮುದಾಯದ ಸಾಂಸ್ಕೃತಿಕ ನಾಯಕನಾದ ಸಿಂಧೂರ ಲಕ್ಷ್ಮಣನನ್ನು ಲಾವಣಿ, ಬಯಲಾಟ, ಸಾಮಾಜಿಕ ನಾಟಕಗಳಲ್ಲಿ ಮತ್ತು ಜಾನಪದ ಸಾಹಿತ್ಯ ಹಾಗೂ ಶಿಷ್ಟ ಸಾಹಿತ್ಯದಲ್ಲಿ ಕಟ್ಟಿಕೊಟ್ಟ ವಿಚಾರಗಳು, ಅಲ್ಲದೆ ಲಕ್ಷ್ಮಣನಿಗೆ ಉಂಟಾದ ಅವಮಾನ ಹಾಗೂ ಅಭಿಮಾನದ ನೆಲೆಯಲ್ಲಿ ಅಳಿಯಗಳ ಹಿನ್ನೆಲೆಯಲ್ಲಿ ಲಕ್ಷ್ಮಣ ಮಹಿಳಾ ಸಂವೇದನೆ, ಪರೋಪಕಾರಿ ಧೈರ್ಯಸಾಹಸಿಯಾಗಿ ಅಂದಿನ ಮತ್ತು ಇಂದಿನ ಪರಿಸ್ಥಿತಿಯ ಚಿತ್ರಣ ವೇದಿಕೆಯಲ್ಲಿ ಪ್ರಸ್ತುತಗೊಂಡವು. ನಾಗರಾಳದ ದಕ್ಷಿಣದ ಕಾಡಿನ ಕುರುಹು ಇರು ವಲ್ಲಿ ಸಾಲಾಗಿ ಬೆಳೆದು ನಿಂತ ಕಲ್ಲಿನ ಬೆಟ್ಟದಡಿಯಲ್ಲಿರುವ "ಕಪ್ಪರ ಪಡಿಯವ್ವ" ಎಂಬ ದೇವತೆ ಲಕ್ಷ್ಮಣನ ಆರಾಧ್ಯದೈವ ಮತ್ತು ಒಂದು ಸಮುದಾಯದ ಮೇಲೆ ಉಂಟುಮಾಡುವ ದೈವಿಕ ಪರಿಣಾಮಗಳ ಜೊತೆಗೆ ಸಿಂಧೂರ ಲಕ್ಷ್ಮಣ ಇಂದಿನ ಕಾಲಘಟ್ಟಕ್ಕೆ ಎಷ್ಟು ಪ್ರಸ್ತುತ ಎಂಬುದು ಗೊತ್ತಾಗುತ್ತದೆ.

ಈ ವಿಚಾರ ಸಂಕಿರಣವನ್ನು ಕನ್ನಡ ವಿಶ್ವವಿದ್ಯಾಲಯ ವಾಲ್ಮೀಕಿ ಅಧ್ಯಯನ ಪೀಠ ದೊಂದಿಗೆ ಕೈಜೋಡಿಸಿ ವೈಶಿಷ್ಟ್ಯಪೂರ್ಣವಾಗಿ ನಡೆಸಿಕೊಟ್ಟ ಕೀರ್ತಿ ನಾಗರಾಳದ ದಿಗಂಬರೇಶ್ವರ ಮಠಕ್ಕೆ ಮತ್ತು ಗ್ರಾಮದ ಯುವಕ ಮಂಡಳದ ಸದಸ್ಯರಿಗೆ ಹಾಗೂ ಗ್ರಾಮಸ್ಥ ರಿಗೆ ಸಲ್ಲಬೇಕು. ಗ್ರಾಮಕ್ಕೆ ಹೋದ ಎಲ್ಲರಿಗೂ ಉತ್ತರ ಕರ್ನಾಟಕದ ಊಟ ಬಡಿಸುವುದರ ಮೂಲಕ ಅತಿಥಿಗಳ ಮನಸ್ಸನ್ನು ಗೆದ್ದವರು ಅವರು. ಅಲ್ಲದೆ ಆ ಗ್ರಾಮದ ಜನತೆ ತಮ್ಮ ಮನೆಯ ಕಾರ್ಯಕ್ರಮದಂತೆ ಉತ್ಸಾಹದಿಂದ ಕೂಡಿಕೊಂಡು ಪಾಲ್ಗೊಳ್ಳುವ ರೀತಿ ಮೆಚ್ಚು ವಂತದ್ದು.

* * *

## ೪೯. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

ತಳಸಮುದಾಯದಗಳ ಅಭಿವೃದ್ಧಿ ಅಂದರೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಭಿವೃದ್ಧಿ ಸಾಧಿಸುವುದಾಗಿದೆ ಮತ್ತು ಜನತೆಯಲ್ಲಿ ತಿಳುವಳಿಕೆಯ ಜ್ಞಾನ ಬೆಳೆಸಬೇಕೆಂದರೆ ವಿಚಾರವಂತರು ವಿಚಾರ ಸಂಕಿರಣಗಳನ್ನು ಏರ್ಪಡಿಸಿ ತಳ ಸಮುದಾಯಗಳ ಬಗೆಗೆ ತಿಳಿಸುವುದರ ಮೂಲಕ ಆ ಸಮುದಾಯಗಳನ್ನು ಬೆಳಕಿಗೆ ತರುವುದಾಗಿದೆ.

ಇಂತಹ ವಿಚಾರ ಸಂಕಿರಣ ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠ ಹಾಗೂ ನಾಗರಾಳದ ದಿಗಂಬರೇಶ್ವರ ಮಠದ ಸಹಯೋಗದೊಂದಿಗೆ ಮೂರು ದಿನಗಳವರೆಗೆ ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕು ನಾಗರಾಳ ಗ್ರಾಮದಲ್ಲಿ ಜರುಗಿತು. "ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ" ವಿಷಯಕ್ಕೆ ಸಂಬಂಧಿಸಿದಂತೆ ೩ ದಿನಗಳ ಕಾಲ ೫ ಗೋಷ್ಠಿಯಲ್ಲಿ ಹಲವಾರು ವಿದ್ವಾಂಸರು ವಿಚಾರಗಳನ್ನು ಮಂಡಿಸಿದರು. ವಿಚಾರ ಸಂಕಿರಣ ದಲ್ಲಿ ಸಾಂಸ್ಕೃತಿಕ ಹಿನ್ನೆಲೆಯನ್ನು ಇಟ್ಟುಕೊಂಡು ಹಲಗಲಿ ಬಂಡಾಯದ ಬಗೆಗೆ ಹಾಗೂ ಬೇಡಸಮುದಾಯದ ಸಾಂಸ್ಕೃತಿಕ ನಾಯಕನಾದ ಸಿಂಧೂರ ಲಕ್ಷ್ಮಣನ ವಿಚಾರವನ್ನು ವ್ಯಕ್ತಪಡಿಸುವುದಾಗಿತ್ತು.

ಭಾರತ ಸುಮಾರು ಮೂರು ಭಾರಿ ವಿದೇಶೀಯರ ಆಕ್ರಮಣಕ್ಕೆ ಒಳಗಾಗಿ ಪ್ರಾಚೀನ ಕಾಲದಲ್ಲಿ ಆರ್ಯರು ಮಧ್ಯಯುಗದಲ್ಲಿ ಮುಸ್ಲಿಂರು ಮತ್ತು ಆಧುನಿಕ ಯುಗದಲ್ಲಿ ಬ್ರಿಟೀಷರ ಆಕ್ರಮಣಕ್ಕೆ ತುತ್ತಾಗಿ ತತ್ತರಿಸಿ ಹೋಗಿದೆ. ಆರ್ಯರು ಭಾರತಕ್ಕೆ ಬಂದ ನಂತರ ಭಾರತದ ಮೂಲನಿವಾಸಿಗಳಾದ ದ್ರಾವಿಡರು ಮೂಲೆಗುಂಪಾದರು. ದ್ರಾವಿಡರು ರಾಕ್ಷಸ ಕುಲಕ್ಕೆ ಸೇರಿದವರು ಅವರನ್ನು ನಾಗರೀಕರಂತೆ ನೋಡದೆ ಅಸ್ಪೃಶ್ಯರ ಗುಂಪಿಗೆ ಸೇರಿಸಿದರು. ಅದೇರೀತಿ ಮಧ್ಯಯುಗದಲ್ಲಿ ಮುಸ್ಲಿಂರ ದಾಳಿಗೆ ಒಳಗಾದಾಗ ಅವರು ಇಡೀ ಭಾರತೀಯ ಸಂಸ್ಕೃತಿಗೆ ದಕ್ಕೆ ತಂದರು. ನಂತರ ಬ್ರಿಟೀಷರ ಆಕ್ರಮಣದಿಂದ ಇಡೀ ಭಾರತ ಅವರ ಕಪಿಮುಷ್ಠಿಯಲ್ಲಿ ಶತಶತಮಾನಗಳವರೆಗೆ ನರಳಿತು.

ಬೇಡ ಸಮುದಾಯ ಅನಾದಿ ಕಾಲದಿಂದಲೂ ತನ್ನದೇ ಆದಂತ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ವಾಲ್ಮೀಕಿ ಮಹರ್ಷಿ ಬರೆದ ರಾಮಾಯಣದ ಮೂಲಕ ಜಾಗತಿಕ ಮಟ್ಟದಲ್ಲಿ ಹಿಂದೂ ಪರಿಕಲ್ಪನೆಗೆ ಮುನ್ನುಡಿಯಾದರು. ಈ ಬೇಡ ಸಮುದಾಯ ಬೇಟೆಯಾಡುವುದನ್ನೇ

ತನ್ನ ಮೂಲ ಕಸುಬನ್ನಾಗಿಸಿಕೊಂಡು ಗುಡ್ಡಗಾಡುಗಳಲ್ಲಿ ನೆಲೆಸಿದ್ದರು. ಅದೇ ರೀತಿ ಯುದ್ಧ ಮಾಡುವುದರಲ್ಲಿಯೂ ಅಷ್ಟೇ ನಿಪುಣರಾಗಿದ್ದರು. ಭಾರತದ ರಾಜವಂಶಗಳಾದ ಮೌರ್ಯ, ಕದಂಬ, ಗಂಗ, ರಾಷ್ಟ್ರಕೂಟ, ಚಾಲುಕ್ಯ ಮತ್ತು ವಿಜಯನಗರ ಅರಸರ ಕಾಲದಲ್ಲಿ ಬೇಡ ಸಮುದಾಯವನ್ನು ಮೀಸಲು ಪಡೆಯಾಗಿ ಇಟ್ಟುಕೊಳ್ಳುತ್ತಿದ್ದರು. ನಂತರ ಈ ಬೇಡಸಮು ದಾಯದ ನಾಯಕರು ಕೆಲವೊಂದು ಪಾಳೆಪಟ್ಟುಗಳನ್ನು ಕಟ್ಟಿಕೊಂಡು ಪಾಳೆಯಗಾರರಾಗಿ ಅಧಿಕಾರ ನಡೆಸಿದ್ದಾರೆ. ಭಾರತಕ್ಕೆ ಬ್ರಿಟೀಷರ ಆಗಮನ ಆದ ಮೇಲೆ ಅವರ ಕುತಂತ್ರ ನೀತಿ ಯಿಂದ ಇಡೀ ಭಾರತವನ್ನೇ ತಮ್ಮದಾಗಿಸಿಕೊಂಡು ಸಂಪೂರ್ಣವಾಗಿ ಭಾರತವನ್ನು ಆಳತೊಡ ಗಿದ ಸಂದರ್ಭದಲ್ಲಿ ಬ್ರಿಟೀಷರ ವಿರುದ್ಧ ಹೋರಾಟದ ಕಿಚ್ಚನ್ನು ಮೂಡಿಸಿದವರೆಂದರೆ ಹಲಗಲಿ ಬೇಡರು. ಬ್ರಿಟೀಷರು ತಮ್ಮ ಉದ್ದೇಶ ಸಾಧನೆಗೋಸ್ಕರ ಶಸ್ತ್ರಾಸ್ತ್ರನಿಷೇಧ ಕಾಯ್ದೆ ಯನ್ನು ಜಾರಿಗೆ ತಂದು ಅವರ ಆಯುಧಗಳೆನ್ನೆಲ್ಲಾ ಕಿತ್ತುಕೊಂಡರು. ಆಗ ಹಲಗಲಿ ಬೇಡರ ಮುಖಂಡರಾದ ಜಡಗ, ಬಾಲ ಇವರ ನೇತೃತ್ವದಲ್ಲಿ ಹೋರಾಟ ಪ್ರಾರಂಭಿಸಿದರು. ಈ ಹೋರಾಟದ ಕಿಚ್ಚು ಹೆಚ್ಚು ವಿಸ್ತೃತವಾಗುತ್ತಾ ಹೋಯಿತು. ಇಂತಹ ಹಲವಾರು ವಿಷಯಗಳ ಬಗ್ಗೆ ನಾಗರಾಳ ವಿಚಾರ ಸಂಕಿರಣದಲ್ಲಿ ಚರ್ಚಿಸಲಾಯಿತು.

"ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ" ಎಂಬ ವಿಷಯ ಕುರಿತು ಮೊದಲ ಗೋಷ್ಠಿಯಲ್ಲಿ ಹಲವಾರು ಪ್ರಬಂಧಕಾರರು ವಿಚಾರವನ್ನು ವ್ಯಕ್ತಪಡಿಸಿದರು. ನಿಶ್ಯಸ್ತ್ರೀಕರಣ ಕಾಯಿದೆಯಿಂದ ಹಲಗಲಿಯ ಬೇಡ ಸಮುದಾಯದಲ್ಲಿ ಉಂಟಾದ ಭಾವನಾತ್ಮಕ ವಿಚಾರಗಳ ಬಗ್ಗೆ ಹಲಗಲಿ ಬಂಡಾಯ ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ ಹೇಗೆ ಪೂರಕವಾಯಿತು. ಇಂತಹ ಬಂಡಾಯ ಜಾತಿ ಮತ್ತು ವರ್ಗದ ನೆಲೆಯನ್ನು ಹೇಗೆ ಕಂಡುಕೊಂಡಿತು, ಸಾಮ್ರಾಜ್ಯ ಶಾಹಿಗಳು ತಮ್ಮ ದಿನ ನಿತ್ಯದ ಬದುಕಿನ ಅಸ್ತ್ರಗಳನ್ನು ಕಸಿದುಕೊಂಡು ಸ್ಥಳೀಯರನ್ನು ಕಷ್ಟಕ್ಕೆ ಸಿಲುಕಿಸಿ ಅವರ ಬದುಕನ್ನೇ ಬದಲಾವಣೆಯ ಅಂಚಿಗೆ ತಂದು ನಿಲ್ಲಿಸಿದರು. ಇಂತಹ ವಿಚಾರಗಳನ್ನು ಈ ಗೋಷ್ಠಿಯಲ್ಲಿ ಚರ್ಚಿಸಲಾಯಿತು. ಒಟ್ಟಾರೆಯಾಗಿ ನೋಡುವುದಾದರೆ ಸಾಮ್ರಾಜ್ಯಶಾಹಿವರ್ಗ ಯಾವ ರೀತಿ ತನ್ನ ಹಿತ ಸಾಧಿಸಿಕೊಳ್ಳುತ್ತದೆ, ಇದರಿಂದ ಸಾಮಾನ್ಯ ಜನತೆಗೆ ಅನ್ಯಾಯವಾಗುವುದು ಕಂಡುಬರುತ್ತದೆ.

ಸಂಕಿರಣದ ಎರಡನೆಯ ಗೋಷ್ಠಿಯಲ್ಲಿ "ಬಾಗಲಕೋಟೆ ಪರಿಸರದ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳು" ಎಂಬ ವಿಷಯ ಕುರಿತು ಹಲವಾರು ಪ್ರಬಂಧಕಾರರು ಪ್ರಬಂಧ ಮಂಡಿಸಿದರು. ಈ ಬೇಡಸಮುದಾಯದವರು ಸಾಕಷ್ಟು ಸಾಮರ್ಥ್ಯಉಳ್ಳವರಾಗಿದ್ದಾರೆ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಉಳಿಸಿಕೊಳ್ಳುತ್ತಿಲ್ಲ ಹಾಗಾಗಿ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ. ಇದಕ್ಕೆ ಅತಿಮುಖ್ಯ ಕಾರಣ ಇವರು ಪೂರ್ವಾಗ್ರಹಕ್ಕೆ ಒಳಗಾಗಿರುವುದು. ತಮ್ಮ ಪೂರ್ವಿಕರ ಆಚರಣೆಗಳನ್ನು ಇನ್ನೂ ಕೂಡ ಆಚರಿಸುತ್ತಿದ್ದಾರೆ ಹಾಗೂ ರಾಜಕೀಯತೆ ಮತ್ತು ಉದ್ಯೋಗದಲ್ಲಿ ಅಸಮಾನತೆಗಳು ಹೆಚ್ಚಿನ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿರುವುದು ಖೇದದ ಸಂಗತಿ. ಆದಾಗ್ಯೂ ಇತ್ತಿತ್ತಲಾಗಿ ಸಮಾಜದ ಎಲ್ಲಾ ಕ್ಷೇತ್ರದಲ್ಲೂ ಪ್ರಗತಿಯತ್ತ ದಾಪುಗಾಲು ಇಡುತ್ತಿದೆ ಎಂಬ ಅಭಿಪ್ರಾಯಗಳು ಗೋಷ್ಠಿಯಲ್ಲಿ ಕೇಳಿಬಂದವು.

"ಆಚರಣಾತ್ಮಕ ನೆಲೆಗಳು" ಎಂಬ ವಿಷಯ ಕುರಿತ ಚರ್ಚೆ ೩ನೇ ಗೋಷಿಯಲ್ಲಿ ವೇದಿಕೆ ಸಿದ್ಧವಾಗಿತ್ತು. ಬೇಡ ಸಮುದಾಯ ಈ ದೈವಿ ಕಲ್ಪನೆಯಿಂದ ಯಾವ ರೀತಿ ದಿನನಿತ್ಯದ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ ಮತ್ತು ದೈವಿ ಕಲ್ಪನೆ ಸಮುದಾಯದಲ್ಲಿ ಯಾವ ರೀತಿ ಬೇರೂರಿದೆ ಎಂದರೆ ತಮ್ಮ ಪೂರ್ವಿಕರು ಆಚರಿಸಿಕೊಂಡು ಬರುತ್ತಿದ್ದ ಜಾತ್ರೆಗಳು, ಉತ್ಸವಗಳು, ಹಬ್ಬಗಳು ಮುಂತಾದ ಆಚರಣೆಗಳನ್ನು ಬಿಡದೆ ಆಚರಿಸಿಕೊಂಡು ಬರುತ್ತಿರುವುದು ಅಂದರೆ ತನ್ನ ಬಳಿ ಹಣ ಇಲ್ಲದಿದ್ದರೂ ಕೂಡ ಬಂಡವಾಳಗಾರರಿಗೆ ತಮ್ಮ ಮಕ್ಕಳನ್ನು ಒತ್ತೆ ಇಟ್ಟು ಅವರಿಂದ ಹಣಪಡೆದು ಈ ಮೇಲ್ಕಂಡವುಗಳನ್ನು ಆಚರಿಸುವುದು ಇಂದಿಗೂ ಬೆಳೆದು ಬರುತ್ತಿರುವುದು ವಿಸ್ಮಯವಾಗಿದೆ. ಅಂದರೆ ನಂಬಿಕೆ ಸಂಪ್ರದಾಯಕ್ಕೆ ಅಂಟಿಕೊಂಡು ಪಾರಂಪರಿಕ ನೆಲೆಯಲ್ಲಿ ಬದುಕು ನಡೆಸುವುದು ಕಂಡು ಬರುತ್ತದೆ. ಈ ಕಾರಣದಿಂದ ಈ ಸಮುದಾಯ ಅಭಿವೃದ್ಧಿಯ ಮಟ್ಟವನ್ನು ಸಾಧಿಸುವಲ್ಲಿ ನಂಬಿಕೆ, ನಿಷ್ಠೆ ಪದ್ಧತಿಗಳನ್ನು ಕೈಬಿಟ್ಟಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಬಹುದು.

ಸಂಕಿರಣದ ನಾಲ್ಕನೇ ಗೋಷ್ಠಿ "ಆಧುನಿಕ ಜಗತ್ತು ಮತ್ತು ತಳಸಮುದಾಯಗಳು" ಎಂಬ ವಿಷಯದ ಮೇಲೆ ಹಲವಾರು ಪ್ರಬಂಧಗಳು ಮಂಡನೆಯಾದವು. ಆಧುನೀಕರಣ ಅಥವಾ ಜಾಗತೀಕರಣದ ಹಾವಳಿಯಿಂದ ಇಂದು ತಳಸಮುದಾಯಗಳು ತಮ್ಮ ಮೂಲ ಕಸುಬನ್ನೆ ದೂರತಳ್ಳಲ್ಪಟ್ಟಿವೆ. ಇಂದರಿಂದ ಅವರ ಜೀವನ ಶೋಚನೀಯಸ್ಥಿತಿಗೆ ಬಂದು ನಿಂತಿದೆ. ಇಂದು ಈ ತಳಸಮುದಾಯಗಳು ತಮ್ಮ ಮೂಲ ಕಸುಬುಗಳನ್ನು ಮರೆತಿರುವುದ ರಿಂದ ವರ್ಗಸಮಾಜದಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳಲು ಆಗುತ್ತಿಲ್ಲ. ಜಾಗತೀಕರಣ ಪ್ರಭಾವದಿಂದ ಗುಡಿ ಕೈಗಾರಿಕೆಗಳು ಮೂಲೆಗುಂಪಾಗಿವೆ ಹಾಗೂ ಯಾಂತ್ರೀಕರಣದಿಂದ ಕೆಲವೇ ಕೆಲವು ವರ್ಗಕ್ಕೆ ಮಾತ್ರ ಅವಕಾಶ ಸಿಗುವುದರಿಂದ ಈ ವರ್ಗಗಳು ಇದರಿಂದ ವಂಚಿತವಾಗುತ್ತಿವೆ. ಹಾಗಾಗಿ ಬಂಡವಾಳದಲ್ಲಿ ಸಾಕಷ್ಟು ರೀತಿ ಅಸಮಾನತೆ ಕಾಣಬಹು ದಾಗಿದೆ.

ಸಂಕಿರಣದ ಕೊನೆ ಅಥವ ಐದನೆಯ ಗೋಷ್ಠಿಯಲ್ಲಿ "ಸಿಂಧೂರ ಲಕ್ಷ್ಮಣ ಹಾಗೂ ಸಂಘರ್ಷದ ಸಂಕಥನ" ಎಂಬ ವಿಷಯದ ಬಗ್ಗೆ ಚರ್ಚಿಸಲಾಯಿತು. ಸಿಂಧೂರ ಲಕ್ಷ್ಮಣ ಬೇಡ ಸಮುದಾಯದ ಸಾಂಸ್ಕೃತಿಕ ವೀರನಾಗಿದ್ದು ಅಳಿಯಗಳ ಹಿನ್ನೆಲೆಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡದ್ದು ಮತ್ತು ಇವನು ಸಮಾಜಸೇವಕನಾಗಿದ್ದು ತಮ್ಮ ಬದುಕನ್ನು ಬಂಡವಾಳಶಾಹಿಗಳ ವಿರುದ್ಧ ಹೋರಾಡಿ ತಳಸಮುದಾಯಗಳ ಬದುಕಿನಲ್ಲಿ ಹೆಸರನ್ನು ಉಳಿಸಿಕೊಂಡಂತ ವೀರನಾಯಕ ಎಂದು ಹೇಳಬಹುದು.

ಸಾಮ್ರಾಜ್ಯಶಾಹಿ ಚರಿತ್ರೆಕಾರರು ಸಿಂಧೂರ ಲಕ್ಷ್ಮಣನನ್ನು ಕಳ್ಳ, ದರೋಡೆಕೋರ ಎಂದೆಲ್ಲಾ ಕರೆದಿದ್ದಾರೆ. ನಿಜವಾಗಿಯೂ ಅವನು ದರೋಡೆಕೋರನೇ ಆಗಿದ್ದರೆ ಸುಖದ ಸುಪ್ಪತ್ತಿಗೆಯಲ್ಲಿ ಜೀವಿಸುತ್ತಿದ್ದ. ಆದರೆ ಲಕ್ಷ್ಮಣ ತಮ್ಮ ಸಮುದಾಯದ ಜನ ಆಹಾರ ವಿಲ್ಲದೆ ನರಳುತ್ತಿದ್ದಂತ ಸಂದರ್ಭದಲ್ಲಿ ತನ್ನ ಜನತೆಯನ್ನು ಸಾಕುವುದಕ್ಕೋಸ್ಕರ ಹಣವಂತ ರಲ್ಲಿ ಹಣಕೇಳುತ್ತಿದ್ದ. ಅವರು ಕೊಡದೇ ಇದ್ದಂತಹ ಸಂದರ್ಭದಲ್ಲಿ ಅವರಿಗೆ ತಿಳಿಸಿ ಅವರ ಮನೆಗೆ ನುಗ್ಗಿ ಹಣತಂದು ತಮ್ಮ ಬಡ ಕುಟುಂಬಗಳಿಗೆ ಹಂಚುತ್ತಿದ್ದ. ಸಿಂಧೂರ ಲಕ್ಷ್ಮಣ ತಳವಾರನಾಗಿ, ರೈತನ ಮಗನಾಗಿ, ಪರೋಪಕಾರಿಯಾಗಿ ನಂಬಿಕೆಗಳ ಹಿನ್ನೆಲೆಯಲ್ಲಿ ಬದುಕಿದಂತವನು ಹಾಗೂ ತಮ್ಮ ಆರಾಧ್ಯ ದೇವತೆ "ಕಪ್ಪರ ಪಡಿಯವ್ವ"ನ ಮಡಿಲಲ್ಲಿ ತನ್ನ ಪ್ರಾಣಕೊಟ್ಟಂತ ವೀರ ಯೋಧ ಎಂದು ಹೇಳಬಹುದು. ಇಂತಹ ಹಲವಾರು ವಿಚಾರಗಳು ಈಗೋಷ್ಠಿಯಲ್ಲಿ ಚರ್ಚೆಗೆ ಒಳಪಟ್ಟವು.

ಒಟ್ಟಿನಲ್ಲಿ ಈ ಮೂರು ದಿನಗಳ ವಿಚಾರಸಂಕಿರಣ ಬಹಳ ಉತ್ತಮವಾಗಿ ನಡೆದು ಯಶಸ್ವಿಯಾಯಿತು. ಸಂಕಿರಣದ ಗೋಷ್ಠಿಗಳ ಬಿಡುವಿನ ವೇಳೆ ಮತ್ತು ದಿನದ ಸಾಯಂಕಾಲದ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಅಂದರೆ ಜನಪದ ಸಾಹಿತ್ಯ, ಸೋಬಾನೆ ಪದ, ಭಜನೆ, ಲಾವಣಿ, ಡೊಳ್ಳು ಕುಣಿತ, ವಾದ್ಯ ಭಾರಿಸುವುದು, ಈ ರೀತಿಯ ಜನಪದ ಕಲೆಗಳನ್ನು ನಾಗರಾಳ ಹಾಗೂ ಸುತ್ತಮುತ್ತಲ ಜನತೆ ಪ್ರದರ್ಶಿಸಿದರು. ಇದರಿಂದ ಆ ಭಾಗದಲ್ಲಿ ಇನ್ನೂ ಕೂಡ ಜನಪದ ಕಲೆಗಳು ಜೀವಂತವಾಗಿರುವುದು ಕಂಡುಬರುತ್ತದೆ.

ಈ ಸಂಕಿರಣ ಯಶಸ್ವಿಯಾಗಲು ಮೂಲ ಪ್ರೇರಕರು ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಾಗರಾಳದ ದಿಗಂಬರೇಶ್ವರ ಮಠದ ಸ್ವಾಮಿಗಳು, ಸಂಘಟನಾಕಾರರು ನಾಗರಾಳ ಮತ್ತು ಸುತ್ತಮುತ್ತಲ ಗ್ರಾಮಸ್ಥರು ಉತ್ತಮ ಪ್ರೋತ್ಸಾಹ ನೀಡಿದರು. ವಿಚಾರ ಸಂಕಿರಣಕ್ಕೆ ಬಂದ ಎಲ್ಲಾ ಅತಿಥಿಗಳಿಗೆ ಸ್ಥಳೀಯ ಸಂಪ್ರದಾಯಬದ್ಧ ಊಟೋಪಚಾರ ನೀಡುವುದರ ಮೂಲಕ ತಮ್ಮ ಸಾಮಾಜಿಕ ಸ್ವಂತಿಕೆಯನ್ನು ಇನ್ನೂ ಉಳಿಸಿ ಬೆಳೆಸಿ ಕೊಂಡು ಬರುತ್ತಿರುವುದು ಗಮನಾರ್ಹವಾಗಿದೆ.

* * *

ಮೂರು ನೂರು ವರುಷಗಳ ಕಾಲ ದಕ್ಷಿಣ ಭಾರತದಲ್ಲಿ ಸೈನಿಕ-ಪ್ರಭುಗಳಾಗಿ ಅಖಂಡವಾಗಿ ವಿಜೃಂಭಿಸಿದ ನಾಯಕ ಪಾಳೆಯಗಾರರನ್ನು ನಿರ್ಲಕ್ಷಿಸುವುದು ಸರಿಯಲ್ಲ.

**– ಪ್ರೊ. ಲಕ್ಷ್ಮಣ್ ತೆಲಗಾವಿ**

# ೪೭. ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ

ಕರ್ನಾಟಕದ ಕ್ರಿಯಾತ್ಮಕ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಶ್ವವಿದ್ಯಾಲಯವು ಪ್ರಮುಖವಾದದ್ದು. ಕನ್ನಡ ಸಂಸ್ಕೃತಿಯನ್ನು ವಿವಿಧ ನೆಲೆಗಳಲ್ಲಿ ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾರ್ಯದಲ್ಲಿ ನಿರತವಾಗಿದೆ. ಕನ್ನಡದ ನೆಲ, ಜಲ ಸಂಸ್ಕೃತಿಯ ಜೊತೆಗೆ ಸಮಾಜಮುಖಿ ಕಾರ್ಯಗಳಿಂದ, ಸಮುದಾಯಗಳನ್ನು ಸಮಾಜವನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯೋನ್ಮುಖವಾಗಿದೆ. ಕನ್ನಡವನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸಿ ಮತ್ತೆ ಕಟ್ಟುವ ಕೆಲಸ, ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಅನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಕನ್ನಡ ವಿಶ್ವವಿದ್ಯಾಲಯ ಸದಾ ಬಯಸುತ್ತದೆ.

ಇಂತಹ ಸನ್ನಿವೇಶದಲ್ಲಿ "ಬೇಟೆಗಾರಿಕೆಯನ್ನು ಉಳಿಸಿಕೊಂಡು ಕಾಡಿನಲ್ಲಿ ನೆಲೆಯನ್ನು ಸ್ಥಾಪಿಸಿಕೊಂಡು ನಂತರ ನಾಡಿನೊಂದಿಗೆ ಸ್ಪಂದಿಸುತ್ತಾ ಕಾಡು ನಾಡುಗಳ ಸಾಮರಸ್ಯ, ಸಂಘರ್ಷಗಳೊಂದಿಗೆ ಸಂಸ್ಕೃತಿಯನ್ನು ರೂಪಿಸಿಕೊಂಡ ಸಮುದಾಯಗಳಲ್ಲಿ, ಪ್ರಾಚೀನಕಾಲ ದಿಂದಲೂ ಸಾಮಾಜಿಕ ಉತ್ಥಾನ ಹಾಗೂ ಸಾಂಸ್ಕೃತಿಕ ಬೆಸುಗೆಯನ್ನು ಚರಿತ್ರೆಯುದ್ದಕ್ಕೂ ಎತ್ತಿ ಹಿಡಿಯುವ ಬೇಡ ಸಮುದಾಯದ ಕುರಿತು ಚಿಂತನೆ, ಸಂಶೋಧನೆ ಮಾಡುವ, ವಿಚಾರ ಸಂಕಿರಣಗಳನ್ನು ನಡೆಸುವುದರ ಜೊತೆಗೆ ಹೊಸ ಬಗೆಯ ಚಿಂತನೆಗಳನ್ನು ನಡೆಸುತ್ತಿರುವ "ವಾಲ್ಮೀಕಿ ಅಧ್ಯಯನ ಪೀಠ" ಮತ್ತು ಸಂಚಾಲಕರಾದ ಡಾ.ಮಂಜುನಾಥ ಬೇವಿನಕಟ್ಟಿಯವರು ಅಭಿನಂದನೆಗೆ ಅರ್ಹರು ಎಂದು ಹೇಳಲು ಅತಿಶಯೋಕ್ತಿ ಎನಿಸದು.

ವಾಲ್ಮೀಕಿ ಅಧ್ಯಯನಪೀಠ ಸದಾ ಒಂದಲ್ಲ ಒಂದು ರೀತಿಯ ಕಾರ್ಯಗಳಲ್ಲಿ ತೊಡಗಿರುತ್ತದೆ. ದಿನಾಂಕ ೧೬, ೧೭, ೧೮ನೇ ಫೆಬ್ರವರಿ ತಿಂಗಳಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ (ನಾಗರಾಳ)ಯಲ್ಲಿ "ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ" ಎನ್ನುವ ವಿಷಯದ ಕುರಿತು ವಿಚಾರ ಸಂಕಿರಣವನ್ನು ಅಧ್ಯಯನ ಪೀಠದಿಂದ ಹಮ್ಮಿಕೊಳ್ಳಲಾಗಿತ್ತು.

ಒಂದು ಸಮುದಾಯದ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವಂತ ಕಾರ್ಯ ಇದಾಗಿದೆ. -'ನಾಯಕ' ಸಮುದಾಯದ ವೀರ ಸಂಸ್ಕೃತಿಯ ಮೇಲೆ ಪ್ರಾದೇಶಿಕವಾದ ಇಂತಹ ಸಮಾರಂಭಗಳು, ವಿಚಾರ ಸಂಕಿರಣಗಳು, ಚರ್ಚೆಗಳು ನಡೆಯುತ್ತಿರುವುದು ವಾಲ್ಮೀಕಿ ಅಧ್ಯಯನ ಪೀಠದ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. "ಒಂದು ಸಮುದಾಯದ ಸಂಸ್ಕೃತಿಯನ್ನು ಲಿಖಿತ ರೂಪದಲ್ಲಿ ಬರೆದಿಟ್ಟರೆ ಅದು ಅಕ್ಷರಸ್ಥ ಲೋಕಕ್ಕೆ ಮಾತ್ರ ಕಾಣಬಹುದು. ವಿಶಾಲವಾದ ಅನಕ್ಷರಸ್ಥ ಹಳ್ಳಿಗರನ್ನು, ದುಡಿಯುವ ಸಮುದಾಯವನ್ನು ತಲುಪುವುದು ಬಹಳ ಮುಖ್ಯ. ಆ ಕಾರಣಕ್ಕಾಗಿ ಇಂತಹ ಗಮನಾರ್ಹ ಕೆಲಸವನ್ನು ವಾಲ್ಮೀಕಿ ಅಧ್ಯಯನಪೀಠದ ಸಂಚಾಲಕರು ಮಾಡುತ್ತಿದ್ದಾರೆ. ಅದರ ಜೊತೆಗೆ ಸಮುದಾಯದ ನಾಯಕರು, ಸಂಘ ಸಂಸ್ಥೆಗಳು ಪಾಲ್ಗೊಳ್ಳುತ್ತಿರುವುದು ಸಂಚಾಲಕರ ಕಾರ್ಯಕ್ಷಮತೆಗೆ ಹಿಡಿದ ಕೈಗನ್ನಡಿಯಂತೆ. "ತಳ ಸಂಸ್ಕೃತಿಯನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಬೇಕು" ಎನ್ನುವ ಮಾತು ಕೇಳಿಬರುತ್ತದೆ. ಈ ಹಿನ್ನಲೆಯಲ್ಲಿ ಅಧ್ಯಯನಪೀಠ ನಿರತವಾಗಿದೆ.

ಸಮುದಾಯಗಳು ಸಾಂಸ್ಕೃತಿಕವಾಗಿ, ಬೌದ್ಧಿಕವಾಗಿ ಮುಂದುವರಿಯಬೇಕಾದರೆ ಇಂತಹ ಕೆಲಸ ಕಾರ್ಯಗಳು ತುಂಬಾ ಅವಶ್ಯ ಮತ್ತು ಅನಿವಾರ್ಯವು ಕೂಡ. ಕರ್ನಾಟಕ ಇತಿಹಾಸ ದಲ್ಲಿ "ಹಲಗಲಿ ಬಂಡಾಯ" ಒಂದು ಚಾರಿತ್ರಿಕ ಘಟ್ಟ ಎಂದು ಹೇಳಿದರೆ ತಪ್ಪಾಗದು. ದೇಶವನ್ನು ಕಟ್ಟುವಲ್ಲಿ ತಮ್ಮ ಕೆಚ್ಚನ್ನು, ಜೀವದ ಹಂಗುತೊರೆದು ಹೋರಾಡಿದರು. "ತಾಯಿ ಮತ್ತು ತಾಯ್ನಡು ಸ್ವರ್ಗಕ್ಕಿಂತ ಮಿಗಿಲು" ಎನ್ನುವ ಭಾವನೆಯಿಂದ ಭಯ, ಭಕ್ತಿಯಿಂದ ಹೋರಾಡಿದ ಒಂದು ಸಮುದಾಯದ ಸಂಸ್ಕೃತಿಯ ಮೇಲೆ ಬೆಳಕನ್ನು ಚೆಲ್ಲುವಕಾರ್ಯ ಈ ವಿಚಾರ ಸಂಕಿರಣ ಮಾಡಿದೆ. ಒಂದು ಸಮುದಾಯದ ಉನ್ನತವಾದ ಸಂಸ್ಕೃತಿಯನ್ನು ಮತ್ತು ವಿವಿಧ ನೆಲೆಯಿಂದ ವಿಷಯವನ್ನು ಸಂಗ್ರಹಿಸಿಕೊಂಡು ಪ್ರಬಂಧವನ್ನು ವಿಚಾರ ಸಂಕಿರಣದಲ್ಲಿ ಪ್ರಸ್ತುತ ಪಡಿಸಲಾಯಿತು.

ಬಾಗಲಕೋಟೆ ಜಿಲ್ಲೆಯ ವಾಲ್ಮೀಕಿ ಸಮುದಾಯದ ಸ್ಥಿತಿಗತಿಗಳ ಕುರಿತು ನಡೆದ ಗೋಷ್ಠಿಯಲ್ಲಿ ಒಂದು ಸಮುದಾಯವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಮಹಿಳಾ ಸಂವೇದನೆ ನೆಲೆಯಿಂದ ಆ ಸಮುದಾಯದ ಸಾಮಾಜಿಕ ಕೊಡುಗೆಗಳು ಕುರಿತು ಅತ್ಯುತ್ತಮವಾದ ವಿಷಯಗಳನ್ನು ಪ್ರಬಂಧಕಾರರು ಪ್ರಸ್ತುತಪಡಿಸಿದರು. “ಬೇಡ ಸಮುದಾಯದ ಸಾಂಸ್ಕೃತಿಕ ವೀರರು ಕುರಿತು ಉತ್ತಮ ಉಪನ್ಯಾಸ ನಡೆಯಿತು ಮತ್ತು ಸಮುದಾಯದ ನಂಬಿಕೆಗಳು, ವಿಧಿ-ವಿಧಾನಗಳು, ದೈವಗಳು, ಜಾತ್ರೆಗಳು, ಉತ್ಸವಗಳ ಕುರಿತು ಗಮನಾರ್ಹವಾದ ವಿಷಯಗಳನ್ನು ಮಂಡಿಸಲಾಯಿತು.

“ಆಧುನಿಕ ಜಗತ್ತು ಮತ್ತು ತಳಸಮುದಾಯಗಳು” ಎನ್ನುವ ವಿಷಯದಡಿಯಲ್ಲಿ ಅನೇಕ ಪ್ರಬಂಧಕಾರರು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ತಳಸಮುದಾಯದ ಸ್ಥಿತಿಗತಿ ಕುರಿತು ಬಹಳ ಗಂಭೀರವಾದ ಚರ್ಚೆಗಳು ನಡೆದವು. ಇಡೀ ವಿಚಾರ ಗೋಷ್ಠಿಗಳಲ್ಲಿಯೇ ಇದು ಅತ್ಯಂತ ಗಮನಾರ್ಹವಾದ ವಿಷಯಗಳ ಮೇಲಿನ ಚರ್ಚೆ ಸಭೆಯನ್ನು ರಂಗೇರಿಸುವಂತಿತ್ತು. ಸಿಂಧೂರ ಲಕ್ಷ್ಮಣನ ಜೀವನ ಮತ್ತು ಹೋರಾಟದ ಕುರಿತು ಆತನ ವ್ಯಕ್ತಿತ್ವದ ವಿವಿಧ ನೆಲೆಗಳಿಂದ ವಿಷಯವನ್ನು ಮಂಡಿಸಲಾಯಿತು. ಎಲ್ಲಾಗೋಷ್ಠಿಗಳಲ್ಲಿ ಚರ್ಚೆಗೆ ಅವಕಾಶವಿರುತ್ತಿತ್ತು. ಸತತ ೩ ದಿನಗಳವರೆಗೂ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳ ತಂಡ ಪ್ರಬಂಧಮಂಡನೆ, ಚರ್ಚೆ, ಅಭಿಪ್ರಾಯ ಮಂಡನೆಯ ವಿಭಿನ್ನ ಕಾರ್ಯಗಳಲ್ಲಿ ತೊಡಗಿದ್ದರು. ವಿಚಾರ ಸಂಕಿರಣದುದ್ದಕ್ಕೂ ಜನಪದ ಕಲೆಗಾರರನ್ನು ವೇದಿಕೆಯ ಮೇಲೆ ಅವರ ಕಲೆಯೊಂದಿಗೆ ಪರಿಚಯಿಸಲಾಯಿತು.
ದಿಗಂಬರೇಶ್ವರ ಮಠದಲ್ಲಿ ಉತ್ತಮವಾದ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗಿತ್ತು. ದಿನನಿತ್ಯ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಪದ ಕಲಾ ತಂಡಗಳಿಂದ ಪ್ರದರ್ಶಿಸಲ್ಪಡುತ್ತಿದ್ದವು. ಜನರು ಉತ್ಸಾಹದಿಂದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ವಿಶ್ವವಿದ್ಯಾಲಯದ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳನ್ನು ನಾಗರಾಳದ ದಕ್ಷಿಣಭಾಗದ ಗುಡ್ಡದಲ್ಲಿರುವ ‘ಕಪ್ಪರಪಡಿಯವ್ವ’ ದೇವಿಯ ಆವರಣದಲ್ಲಿನ ಸಿಂಧೂರ ಲಕ್ಷ್ಮಣನನ್ನು ಬ್ರಿಟೀಷರು ಮೋಸದಿಂದ ಕೊಂದು ಸ್ಥಳವನ್ನು ತೋರಿಸಿದರು.

ಇಂತಹ ವಿಚಾರ ಸಂಕಿರಣಗಳು ಕೇವಲ ಆ ಸಮುದಾಯವಿರುವ ಪ್ರದೇಶಗಳಲ್ಲಿ ನಡೆಯದೆ, ಸಮುದಾಯಗಳ ಬೌದ್ಧಿಕ, ಸಾಂಸ್ಕೃತಿಕ ಸಂಘಟಿತರಾಗಲೂ ಎಲ್ಲಾ ಕಡೆಗಳಲ್ಲೂ ಕಾರ್ಯಕ್ರಮಗಳನ್ನು ನಡೆಸಲು ವಿಶ್ವವಿದ್ಯಾಲಯ ಶ್ರಮಿಸಬೇಕು. ಇಂತಹ ಕಾರ್ಯಕ್ರಮದ ಮೂಲಕ ವಾಲ್ಮೀಕಿ ಅಧ್ಯಯನ ಪೀಠ ಒಂದು ಸಮಾಜಮುಖಿ ಸಂಸ್ಕೃತಿಯನ್ನು ಚರಿತ್ರೆಯನ್ನು ಸಮುದಾಯದ ಅಂಗಳಕ್ಕೆ ಕೊಂಡೊಯ್ಯುವ ಕೆಲಸ ಮಾಡಬೇಕಾಗಿದೆ.

* * *

**ಹಲಗಲಿ ಬೇಡರು**

ಹಾಳ್-ಆಗಿ ಹೋದಿತೊ ಇಷ್ಟು
ವರ್ಣಿಸಿ ಹೇಳಲು ಎಷ್ಟು
ಯೆಲ್ಲ ತಗೊಂಡರೊ ಶಿಕ್ಕ್-ಅಷ್ಟು
ಸರ್ದ ಮಾಡೆರ ಹಲಗಲಿ ಸುಟ್ಟು
ಬೂದಿ ಮಾಡೆರ ಹಲಗಲಿ ಸುಟ್ಟು
ಹಲಗಲಿ ಗುರ್ತ ಎಳ್ಳಷ್ಟು
ಕಾಣಸ್ತ ಹೋದಿತೊ ಕೆಟ್ಟು
ವರ್ಣಿಸಿ ಹೇಳಿದೆನು ಇಷ್ಟು ||ಯೇರ||

ಕುರ್ತಕೋಟಿ-ಕಲ್ಮೇಸನ ದಯದಿಂದ ಹೇಳುದ-ಕೇಳುದಕ

***